ಜಂಟಿ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿಯ ಪರಿಕಲ್ಪನೆ

ಒಂದು ವಿಮರ್ಶಾತ್ಮಕ ಅಧ್ಯಯನ

ಪಿಎಚ್.ಡಿ.ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಮಹಾಪ್ರಬಂಧ

ಸಂಶೋಧಕರು
ಎಚ್.ಆರ್.ಕೃಷ್ಣಮೂರ್ತಿ

ಮಾರ್ಗದರ್ಶಕರು
ಡಾ. ಎಂ.ಚಂದ್ರಪೂಜಾರಿ

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276

ಏಪ್ರಿಲ್ 2004

58

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿಯ ಪರಿಕಲ್ಪನೆ

ಒಂದು ವಿಮರ್ಶಾತ್ಮಕ ಅಧ್ಯಯನ

ಪಿಎಚ್.ಡಿ.ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಮಹಾಪ್ರಬಂಧ

ಸಂಶೋಧಕರು
ಎಚ್.ಆರ್.ಕೃಷ್ಣಮೂರ್ತಿ

ಮಾರ್ಗದರ್ಶಕರು
ಡಾ. ಎಂ.ಚಂದ್ರಪೂಜಾರಿ

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276

ಏಪ್ರಿಲ್ 2004

ಪ್ರಮಾಣ ಪತ್ರ

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿಯ ಪರಿಕಲ್ಪನೆ (ಒಂದು ವಿಮರ್ಶಾತ್ಮಕ ಅಧ್ಯಯನ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಎಂ. ಚಂದ್ರಪೂಜಾರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಎಚ್.ಆರ್. ಕೃಷ್ಣಮೂರ್ತಿ.

ದಿನಾಂಕ : 2/4/2004

ಸ್ಥಳ : ವಿದ್ಯಾರಣ್ಯ

(ಎಚ್.ಆರ್.ಕೃಷ್ಣಮೂರ್ತಿ)
ಸಂಶೋಧಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

58

ಮಾರ್ಗದರ್ಶಕರ ಪತ್ರ

ಶ್ರೀ ಎಚ್.ಆರ್. ಕೃಷ್ಣಮೂರ್ತಿ ಇವರು **ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿಯ ಪರಿಕಲ್ಪನೆ (ಒಂದು ವಿಮರ್ಶಾತ್ಮಕ ಅಧ್ಯಯನ)** ಎಂಬ ಶೀರ್ಷಿಕೆಯ ಈ ಪಿಎಚ್.ಡಿ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

(ಡಾ. ಎಂ.ಚಂದ್ರಪೂಜಾರಿ)
ಪ್ರವಾಚಕರು ಹಾಗೂ ಮುಖ್ಯಸ್ಥರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಪ್ರಸ್ತಾವನೆ

ಪ್ರಸ್ತಾವನೆ

'ಸಹಭಾಗಿತ್ವ ಅಭಿವೃದ್ಧಿ' (ಪಾರ್ಟಿಸಿಪೇಟರಿ ಡೆವಲಪ್‌ಮೆಂಟ್)ಜನರ ಸಕ್ರಿಯ ಭಾಗವಹಿಸುವಿಕೆಗೆ ಅವಕಾಶ ಮಾಡಿಕೊಡುವ ಅಭಿವೃದ್ಧಿಯ ಮತ್ತೊಂದು ಮಾದರಿ. ಯೋಜನೆಯೊಂದರ ರೂಪು-ರೇಷೆಗಳ ತಯಾರಿ, ಅದಕ್ಕೆ ಸಂಬಂಧಿಸಿದ ನೀತಿ ನಿಲುವುಗಳ ನಿಷ್ಕರ್ಷೆ, ಯೋಜನೆಯ ಅನುಷ್ಠಾನ, ಮೌಲ್ಯಮಾಪನ ಮುಂತಾದ ವಿವಿಧ ಹಂತಗಳಲ್ಲಿ ಭಾಗವಹಿಸುವ ಮತ್ತು ನಿರ್ಧಾರ ಕೈಗೊಳ್ಳುವ ಮುಕ್ತ ಅವಕಾಶಗಳನ್ನು ಜನಸಮುದಾಯಕ್ಕೆ ಒದಗಿಸಿ, ಆ ಮೂಲಕವಾಗಿ ಸಾಧಿಸುವ ಅಭಿವೃದ್ಧಿಯನ್ನು ಸಹಭಾಗಿತ್ವ ಅಭಿವೃದ್ಧಿ ಎನ್ನಬಹುದು.[1] ಟಾಪ್-ಡೌನ್ ಮಾದರಿಯ ದೌರ್ಬಲ್ಯ, ವೈಫಲ್ಯಗಳನ್ನು ಸರಿಪಡಿಸಬಲ್ಲದೆಂಬ ನಿರೀಕ್ಷೆಯಿಂದ, ಆರೋಗ್ಯ, ನೀರಾವರಿ, ಉಳಿತಾಯ, ಹೈನುಗಾರಿಕೆ, ಅರಣ್ಯ ಸಂರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ಸಮುದಾಯದ ಸಹಭಾಗಿತ್ವವಿರುವ ಈ ಅಭಿವೃದ್ಧಿ ಮಾದರಿ ಬಳಕೆಯಾಗುತ್ತಿದೆ. ಆದರೆ ಈ ಮಾದರಿ ತರುವ ಪರಿಣಾಮಗಳ ಬಗ್ಗೆ ಸಂಶೋಧಕರಲ್ಲಿ ಒಮ್ಮತವಿಲ್ಲ. ಭರವಸೆ, ನಿರೀಕ್ಷೆಗಳಷ್ಟೇ ಅನುಮಾನ, ನಿರಾಸೆಗಳೂ ಇವೆ. ಅಭಿವೃದ್ಧಿಯ ಕಾರ್ಯೋಪಾಯಗಳಲ್ಲಿ, ಸಹಭಾಗಿತ್ವ ಅಭಿವೃದ್ಧಿ, ಸ್ಪಷ್ಟವಾಗಿ ಅರ್ಥವಾಗಿರದ ಆದರೆ ಅಧಿಕ ಪ್ರಮಾಣದಲ್ಲಿ ಮಾರಾಟವಾಗುತ್ತಿರುವ ಪರಿಕಲ್ಪನೆಯೆಂಬ ಕಟುಟೀಕೆಯೂ ಇದೆ.[2] ಜಂಟೀ ಅರಣ್ಯ ಯೋಜನೆಯಲ್ಲಿರುವ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಯನ್ನು ಈ ಮಹಾಪ್ರಬಂಧ ಪರೀಕ್ಷಿಸಲಿದೆ.

ಅರಣ್ಯ ಸಂರಕ್ಷಣೆ, ಪುನರುಜ್ಜೀವನ ಕ್ಷೇತ್ರಗಳಲ್ಲೂ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆ ಬಳಕೆಯಾಗುತ್ತಿದೆ. ಇದರ ಬೇರುಗಳನ್ನು ಪತ್ತೆ ಮಾಡಲು, ಭಾರತ ಅನುಸರಿಸಿಕೊಂಡು ಬಂದ ಅರಣ್ಯ ನೀತಿಯನ್ನು ಪರಿಶೀಲಿಸಬೇಕಾಗುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ನಾವು ಅನುಸರಿಸಿದ ಅರಣ್ಯನೀತಿಯಲ್ಲಿ (1952) ಅರಣ್ಯಾಭಿವೃದ್ಧಿಯಲ್ಲಿ ವೈಜ್ಞಾನಿಕ ವಿಧಾನಗಳಿಗೆ ಬದ್ಧತೆ, ಕೈಗಾರಿಕಾ ಪ್ರೇರಿತ ಆರ್ಥಿಕ ಪ್ರಗತಿಗೆ ಅತಿ ಹೆಚ್ಚಿನ ಆದ್ಯತೆ, ಅರಣ್ಯಾಭಿವೃದ್ಧಿಯಲ್ಲಿ ವೈವಿಧ್ಯದಿಂದ ಏಕ ಪ್ರಭೇದದ ನೆಡುತೋಪುಗಳತ್ತ ಬದಲಾದ ಒತ್ತು, ಅರಣ್ಯಾಧಾರಿತ ಸಮುದಾಯಕ್ಕಿಂತ ನಗರದ ಜನರ ಬೇಡಿಕೆಗಳಿಗೆ ಪ್ರಾಮುಖ್ಯತೆ, ಅರಣ್ಯಗಳಿರುವುದು ಸ್ಥಳೀಯ ಸಮುದಾಯಕ್ಕಿಂತ

ದೇಶದ ಆರ್ಥಿಕ ಅಭಿವೃದ್ಧಿಗೆ ಎಂಬ ನಿಲುವು, ಅರಣ್ಯ ನಿರ್ವಹಣೆಯನ್ನು ವೈಜ್ಞಾನಿಕ ತಿಳಿವಳಿಕೆಯಿಲ್ಲದ ಸ್ಥಳೀಯ ಜನರಿಗೆ ನೀಡುವುದು ಅಪಾಯಕಾರಿಯೆಂಬ ಧೋರಣೆ ಮುಂತಾದವುಗಳನ್ನು ಕಾಣಬಹುದು. "ನಾವು ಅನುಸರಿಸಿದ ಇಂತಹ ನೀತಿಯ ಫಲವಾಗಿ ಅರಣ್ಯಗಳು ದೊಡ್ಡ ಪ್ರಮಾಣದಲ್ಲಿ ಹೇಳ ಹೆಸರಿಲ್ಲದಂತೆ ನಾಶವಾದವು. ಅವುಗಳ ಜಾಗದಲ್ಲಿ ನೆಡುತೋಪುಗಳು ತಲೆಯೆತ್ತಿದವು. ಅರಣ್ಯ ಸಂಪನ್ಮೂಲ ತ್ವರಿತಗತಿಯಲ್ಲಿ ಕ್ಷೀಣಿಸಿದವು. ಅರಣ್ಯಾಧಾರಿತ ಸ್ಥಳೀಯ ಜನ ತಮ್ಮ ನೆಲ ಮತ್ತು ಜೀವನೋಪಾಯವನ್ನು ಕಳೆದುಕೊಂಡರು".[3] ಇಂಥಹ ವಿಷಮ ಪರಿಸ್ಥಿತಿಯಲ್ಲಿ ಪರ್ಯಾಯ ಮಾರ್ಗಗಳಿಗಾಗಿ ನಡೆದ ಹುಡುಕಾಟದಲ್ಲಿ ಸಾಮಾಜಿಕ ಅರಣ್ಯ, ಜಂಟಿ ಅರಣ್ಯ ಯೋಜನೆಗಳಂತಹ ಜನರ ಭಾಗವಹಿಸುವಿಕೆಗೆ ಅವಕಾಶವಿರುವ ಯೋಜನೆಗಳು ರೂಪಗೊಂಡವು.

1988ರ ಜನಪರವಾದ ಹೊಸ ರಾಷ್ಟ್ರೀಯ ಅರಣ್ಯ ನೀತಿ ಹಾಗೂ ಅವನತಿ ಹೊಂದಿದ ಅರಣ್ಯಗಳ ಪುನರುಜ್ಜೀವನ ಕೆಲಸದಲ್ಲಿ, ಅರಣ್ಯಕ್ಕೆ ಸಮೀಪವಾಗಿ ವಾಸಿಸುವ ಜನಸಮುದಾಯದ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸುವ ಭಾರತ ಸರ್ಕಾರದ 1990ರ ಮಾರ್ಗದರ್ಶಿ ಸೂತ್ರಗಳ ಫಲವಾಗಿ 'ಜಂಟಿ ಅರಣ್ಯ ನಿರ್ವಹಣಾ ಯೋಜನೆ' ಕಾರ್ಯರೂಪಕ್ಕೆ ಬಂದಿತು. 'ಅಧಿಕಾರದಲ್ಲಿ ಸಮಪಾಲು, ಜವಾಬ್ದಾರಿಯಲ್ಲಿ ಸಮಪಾಲು, ಲಾಭಾಂಶಲ್ಲೂ ಸಮಪಾಲು' ಎಂಬ ತತ್ವವನ್ನಾಧರಿಸಿದ ಈ ಸಹಭಾಗಿತ್ವ ಅರಣ್ಯ ಯೋಜನೆ ಇಂದು ನಮ್ಮ ದೇಶದ 27 ರಾಜ್ಯಗಳಲ್ಲಿ ಅನುಷ್ಠಾನಗೊಂಡು, 63,618 ಗ್ರಾಮ ಅರಣ್ಯ ಸಮಿತಿಗಳು 1,40,953.6 ಚ.ಕಿ.ಮೀಗಳಷ್ಟು ಅರಣ್ಯ ಪ್ರದೇಶವನ್ನು ಇಲಾಖೆಯ ಜೊತೆಗೂಡಿ ರಕ್ಷಿಸುವ, ಪುನರುಜ್ಜೀವನಗೊಳಿಸುವ ಕೆಲಸದಲ್ಲಿ ನಿರತವಾಗಿವೆ.[4]

ಕರ್ನಾಟಕದಲ್ಲಿ 1.4.92ರಿಂದ 31.3.2000ದ ವರೆಗೆ ನಡೆದ ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ (ವೆಸ್ಟರ್ನ್ ಘಾಟ್ಸ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್) ಮೊದಲ ಬಾರಿಗೆ ಜಂಟೀ ಅರಣ್ಯ ಯೋಜನೆಯ ತತ್ವವನ್ನು ಅಳವಡಿಸಲಾಯಿತು. ಅನಂತರ 1996ರಿಂದ 2001ರವರೆಗಿನ 'ಪೂರ್ವ ಮೈದಾನದ ಅರಣ್ಯ ಮತ್ತು ಪರಿಸರ ಯೋಜನೆ'ಯಲ್ಲೂ (ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಫಾರ್ ಈಸ್ಟ್ರನ್ ಪ್ಲೇನ್ಸ್ ಆಫ್ ಕರ್ನಾಟಕ) ಇದೇ ತತ್ತ್ವವನ್ನು ಮುಂದುವರೆಸಲಾಯಿತು. ಪಶ್ಚಿಮ ಘಟ್ಟ ಅರಣ್ಯ ಯೋಜನೆಗೆ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ (ಓವರ್‌ಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಶನ್ ಈಗ ಡಿಪಾರ್ಟ್‌ಮೆಂಟ್ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್) ಹಣಕಾಸು ಸಹಾಯ ನೀಡಿದರೆ, ಪೂರ್ವ ಮೈದಾನದ ಯೋಜನೆಗೆ 'ಜಪಾನ್ ಬ್ಯಾಂಕ್ ಫಾರ್ ಇಂಟರ್ ನ್ಯಾಷನಲ್ ಕೋ-ಆಪರೇಶನ್' ನೆರವು ನೀಡಿತು.

ಜಂಟೀ ಅರಣ್ಯ ಯೋಜನೆ ಪ್ರಾರಂಭವಾಗಿ ಎಂಟು-ಹತ್ತು ವರ್ಷಗಳಾಗಿವೆ. ಈ ಅವಧಿಯಲ್ಲಿ ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ ಅನೇಕ ಮೌಲ್ಯಮಾಪನಗಳು, ಅಧ್ಯಯನಗಳು ನಡೆದಿವೆ. ಹಲವಾರು ಅಧ್ಯಯನಗಳು ಯೋಜನೆಗೆ ಆರ್ಥಿಕ ನೆರವು ನೀಡಿದ ಅಂತಾರಾಷ್ಟ್ರೀಯ ಸಂಸ್ಥೆಗಳು ನಿಯೋಜಿಸಿದ ಸಂಶೋಧಕರ ಕಡೆಯಿಂದ ನಡೆದಿದ್ದರೆ, ಅನೇಕ ಅಧ್ಯಯನಗಳನ್ನು ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳು, ಸರ್ಕಾರೇತರ ಸಂಸ್ಥೆಗಳ ಪರಿಣಿತರು, ವಿಶ್ವವಿದ್ಯಾಲಯದ ಸಂಶೋಧಕರು ನಡೆಸಿದ್ದಾರೆ. ಸಂಶೋಧನೆಯ ವಸ್ತುವಿನಲ್ಲೂ ವೈವಿಧ್ಯವಿದೆ. ಜಂಟೀ ಅರಣ್ಯ ಯೋಜನೆಯಲ್ಲಿ ಸಂರಕ್ಷಣೆ ಮತ್ತು ನಿರ್ವಹಣೆ ಯಲ್ಲಿನ ವಿವಿಧ ಪದ್ಧತಿಗಳು, ಪುನರುಜ್ಜೀವನ, ಜೀವದ್ರವ್ಯಗಳ (ಬಯೋಮಾಸ್) ಉತ್ಪಾದನೆ ಮತ್ತು ಜೀವ ವೈವಿಧ್ಯ, ಲಘು ಅರಣ್ಯ ಉತ್ಪನ್ನಗಳ ಮೇಲೆ ಯೋಜನೆಯ ಪರಿಣಾಮ, ಯೋಜನೆ ವಿಸ್ತರಿಸುತ್ತಿರುವ ರೀತಿ, ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಅರಣ್ಯ ಕೃಷಿ ಕೆಲಸಗಳು, ಜಂಟೀ ಅರಣ್ಯ ಯೋಜನೆಯ ವೆಚ್ಚ-ಪ್ರಯೋಜನ ವಿಶ್ಲೇಷಣೆ, ದುರ್ಬಲ ವರ್ಗದವರಿಗೆ ಆಗಿರುವ ಪ್ರಯೋಜನಗಳು, ಸಸ್ಯ ಪ್ರಭೇದಗಳ ಪುನರುಜ್ಜೀವನದ ಮೇಲೆ ಸಂರಕ್ಷಣೆ ಮತ್ತು ನಿರ್ವಹಣಾ ವ್ಯವಸ್ಥೆಗಳ ಪರಿಣಾಮ ಮುಂತಾದ ವಿಷಯಗಳ ಮೇಲೆ ಸಂಶೋಧನೆಗಳು ನಡೆದಿವೆ. ಈ ಸಂಶೋಧನೆಗಳು, ಅಧ್ಯಯನಗಳು ದೇಶದ ವಿವಿಧ ಭಾಗಗಳಲ್ಲಿ, ವಿವಿಧ ಭೌಗೋಳಿಕ ಪರಿಸ್ಥಿತಿಗಳಲ್ಲಿ, ವಿವಿಧ ಸಾಮಾಜಿಕ, ಸಾಂಸ್ಕೃತಿಕ ಪರಿಸರಗಳಲ್ಲಿ ನಡೆದಿರುವುದರಿಂದ, ದೊರೆತಿರುವ ಮಾಹಿತಿ, ಫಲಿತಾಂಶಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಅಧ್ಯಯನಗಳಿಂದ ತಿಳಿದುಬಂದಿರುವ ಮುಖ್ಯ ಸಂಗತಿಗಳು ಹೀಗಿವೆ.

- ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಯೋಜನೆ ತ್ವರಿತಗತಿಯಲ್ಲಿ ವಿಸ್ತರಿಸುತ್ತಿದೆ.
- ಅಧಿಕಾರದಲ್ಲಿ ಸಮಪಾಲು, ಜವಾಬ್ದಾರಿಯಲ್ಲಿ ಸಮಪಾಲು, ಲಾಭಾಂಶದಲ್ಲಿ ಸಮಪಾಲು ತತ್ತ್ವ ಆಚರಣೆಗೆ ಬಂದಿಲ್ಲ. ಅರಣ್ಯ ಇಲಾಖೆ ಮತ್ತು ಸ್ಥಳೀಯ ಸಮುದಾಯಗಳ ನಡುವೆ ಸರಿಸಮಾನವಾದ ಸಂಬಂಧವಿಲ್ಲ.
- ಸಂರಕ್ಷಣೆಯ ಜವಾಬ್ದಾರಿಯನ್ನು ಸ್ಥಳೀಯರಿಗೆ ನೀಡಲು ಅರಣ್ಯ ಇಲಾಖೆ ಸಿದ್ಧವಿದೆ ಯಾದರೂ, ಸ್ಥಳೀಯ ಅರಣ್ಯಗಳ ಮೇಲೆ ನಿಯಂತ್ರಣ, ನಿರ್ವಹಣೆಯ ಜವಾಬ್ದಾರಿಯನ್ನು ಅವರಿಗೆ ನೀಡಲು ಸಿದ್ಧವಿಲ್ಲ.
- ಸರ್ಕಾರೀ ನಿರ್ಣಯಗಳು ನೀಡುವ ನಿರ್ದೇಶನಗಳಿಗೆ ಅನುಸಾರವಾಗಿ ಜಂಟೀ ಅರಣ್ಯ ಯೋಜನೆ ನಡೆಯುತ್ತಿದೆಯೇ ಹೊರತಾಗಿ ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಯೋಜನೆಯನ್ನು ಮಾರ್ಪಾಟು ಮಾಡಿಕೊಳ್ಳುವ ಫ್ಲೆಕ್ಸಿಬಿಲಿಟಿ ಇಲ್ಲ.

- ಜಂಟೀ ಅರಣ್ಯ ಯೋಜನೆಯು ಕಾನೂನಿನ ಹಾಗೂ ಸಾಂಸ್ಥಿಕ ಬುನಾದಿ ದುರ್ಬಲವಾಗಿರುವುದರೊಡನೆ ವಿವಾದಾತ್ಮಕವೂ ಆಗಿದೆ. ಬಹುತೇಕ ಎಲ್ಲ ಅಧಿಕಾರವೂ ಅರಣ್ಯ ಇಲಾಖೆಯ ಕೈಯಲ್ಲಿದ್ದು ಸ್ಥಳೀಯ ಸಮುದಾಯ ಶಕ್ತಿಹೀನವಾಗಿದೆ.
- ಮಹಿಳೆಯರ ಅಗತ್ಯಗಳನ್ನು ಹಾಗೂ ಹಕ್ಕುಗಳನ್ನು ಆಚರಣೆಯ ಮಟ್ಟದಲ್ಲಿ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಇದೇ ರೀತಿ ಬಡವರು, ಭೂರಹಿತರು, ದುರ್ಬಲ ವರ್ಗದವರು ಮುಂತಾದ ಅರಣ್ಯದ ಮೇಲೆ ಅವಲಂಬಿತರಾದವರಿಗೆ ಜಂಟೀ ಅರಣ್ಯ ಯೋಜನೆಯಲ್ಲಿ ನ್ಯಾಯೋಚಿತವಾದ ಸ್ಥಾನ-ಮಾನ ದೊರೆತಿಲ್ಲ.
- ಮಾರುಕಟ್ಟೆಯ ಸೌಲಭ್ಯಗಳು ಸರಿಯಾದ ರೀತಿಯಲ್ಲಿ ಅಭಿವೃದ್ಧಿಯಾಗಿಲ್ಲದಿರುವುದರಿಂದ ಅರಣ್ಯಗಳಿಂದ ಸಂಗ್ರಹಿಸುವ ಕಿರು ಉತ್ಪನ್ನಗಳ ಮೌಲ್ಯ ಹೆಚ್ಚಾಗಿಲ್ಲ.
- ಸಾಮಾಜಿಕ ಅರಣ್ಯ ಯೋಜನೆಗೆ ಹೋಲಿಸಿದರೆ ಜಂಟಿ ಅರಣ್ಯ ಯೋಜನೆ ಲಾಭದಾಯಕವಲ್ಲ. ಬೆಳೆಸಿರುವ ಪ್ರಭೇದಗಳು, ಸಂರಕ್ಷಣೆಯ ವಿಧಾನಗಳು ಮುಂತಾದವುಗಳನ್ನು ಪರಿಶೀಲಿಸಿದಾಗ ಜಂಟೀ ಅರಣ್ಯ ಯೋಜನೆ, ಸಾಮಾಜಿಕ ಅರಣ್ಯಯೋಜನೆಯ ವಿಸ್ತರಣೆ ಎನ್ನಿಸುತ್ತದೆ.

ಸಂಶೋಧನೆ, ಅಧ್ಯಯನಗಳಿಂದ ತಿಳಿದುಬಂದಿರುವ ಮೇಲಿನ ವಿಷಯಗಳು ನಮ್ಮ ದೇಶದಲ್ಲಿ ಜಂಟೀ ಅರಣ್ಯ ಯೋಜನೆಯ ಒಟ್ಟಾರೆ ಪರಿಸ್ಥಿತಿಯನ್ನು ಸೂಚಿಸುತ್ತವೆ. ಆದರೆ ದೇಶದ ವಿವಿಧ ಭಾಗಗಳಲ್ಲಿ, ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ವಿವಿಧ ಅನುಭವಗಳನ್ನು ದಾಖಲಿಸುವ ಈ ಅಧ್ಯಯನಗಳು ಈ ವಾಸ್ತವ ಪರಿಸ್ಥಿತಿಗೆ ಕಾರಣಗಳನ್ನು ಹುಡುಕುವುದರಲ್ಲಿ ಆಳವಾದ ಪ್ರಯತ್ನವನ್ನು ಮಾಡುವುದಿಲ್ಲ. ಉದಾಹರಣೆಗೆ ಕಳೆದ ಹತ್ತು ವರ್ಷಗಳಲ್ಲಿ ಜಂಟೀ ಅರಣ್ಯ ಯೋಜನೆ ದೇಶದಾದ್ಯಂತ ತ್ವರಿತಗತಿಯಲ್ಲಿ ವಿಸ್ತರಿಸಿದೆಯನ್ನುವುದರಲ್ಲಿ ಸಂದೇಹವಿಲ್ಲ. ಅಂಕಿ-ಅಂಶಗಳು ಇದನ್ನು ಸ್ಪಷ್ಟಪಡಿಸುತ್ತವೆ. ಆದರೆ ವಿಸ್ತರಣೆಗೆ ಮುಖ್ಯ ಕಾರಣಗಳೇನು ಎಂಬುದನ್ನು ಆಳವಾಗಿ ವಿಶ್ಲೇಷಿಸುವ ಪ್ರಯತ್ನಗಳು ಕಂಡುಬರುವುದಿಲ್ಲ. ಯೋಜನೆಯಲ್ಲಿರುವ ಉತ್ತಮ ಅಂಶಗಳಿಂದಾಗಿ ಅದಕ್ಕೆ ಸಮುದಾಯದ ಪ್ರೋತ್ಸಾಹವಿದೆ; ಸಮುದಾಯದ ಪ್ರೋತ್ಸಾಹ, ಉತ್ಸಾಹಗಳಿಂದ ಸರ್ಕಾರ ಇದನ್ನು ವಿಸ್ತರಿಸುತ್ತಿದೆ ಎಂಬ ಅಭಿಪ್ರಾಯ ಹಲವಾರು ಅಧ್ಯಯನಗಳಲ್ಲಿ ಕಂಡುಬರುತ್ತದೆ. ಇದು ನಿಜವಾಗಿದ್ದಲ್ಲಿ, ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಗೆ ವಿದೇಶಿ ಧನಸಹಾಯ ನಿಂತ ನಂತರವೂ ಸಮುದಾಯದ ಆಸಕ್ತಿ ಮುಂದುವರಿಯಬೇಕಿತ್ತು. ಆದರೆ ಹಾಗಾಗಲಿಲ್ಲ. ವಿಶ್ವಬ್ಯಾಂಕ್, ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಹಾಗೂ ಜಪಾನ್ ದೇಶಗಳಿಂದ ಹರಿದು ಬರುತ್ತಿದ್ದ ಧನ ಸಹಾಯವೇ ಈ ಅಪಾರ ವೇಗದ ವಿಸ್ತರಣೆಗೆ ಕಾರಣವೆನ್ನುವ ಮಾತಿನಲ್ಲಿ

ಹೆಚ್ಚಿನ ತಥ್ಯವಿದೆ. ಕರ್ನಾಟಕದಲ್ಲಿ ಜಪಾನ್ ದೇಶದ ನೆರವಿನಿಂದ 1996-2001ರ ಅವಧಿಯಲ್ಲಿ ನಡೆದ ಪೂರ್ವಮೈದಾನ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ ಜಂಟೀ ಅರಣ್ಯ ಯೋಜನೆಯ ತತ್ವಗಳಿಗೇ ಒತ್ತು ನೀಡಲಾಗಿತ್ತು. ಈ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ 1278 ಗ್ರಾಮ ಅರಣ್ಯ ಸಮಿತಿಗಳನ್ನು ಸ್ಥಾಪಿಸಲಾಯಿತು. ಆದರೆ 2001ರಲ್ಲಿ ಯೋಜನೆ ಮುಗಿಯುವ ಮುನ್ನ ಸಂಪೂರ್ಣ ಹಣವನ್ನು ಪಡೆಯಲು ಕಡೆಯ ಒಂದೇ ವರ್ಷ 840 ಗ್ರಾಮ ಅರಣ್ಯ ಸಮಿತಿಗಳು ಅಸ್ತಿತ್ವಕ್ಕೆ ಬಂದವು. ಇಂತಹ ಕ್ರಮವನ್ನು ಟಾರ್ಗೆಟ್ ಮುಟ್ಟುವ ಆತುರವೆನ್ನಬಹುದೇ ಹೊರತಾಗಿ ಸಮುದಾಯದ ಉತ್ಸಾಹವೆನ್ನಲಾಗುವುದಿಲ್ಲ.

ಅರಣ್ಯದ ಮೇಲೆ ಅವಲಂಬಿತರಾದ ಭೂರಹಿತರು, ದುರ್ಬಲವರ್ಗದವರು ಮುಂತಾದವರಿಗೆ ಜಂಟೀ ಅರಣ್ಯ ಯೋಜನೆಯಲ್ಲಿ ನ್ಯಾಯೋಚಿತವಾದ ಸ್ಥಾನಮಾನ ದೊರೆತಿಲ್ಲ, ಸಮಾಜದ ಅಂಚಿನಲ್ಲಿರುವವರ ಅಗತ್ಯಗಳಿಗೆ ಯೋಜನೆ ಯಾವುದೇ ರೀತಿಯಲ್ಲೂ ಸ್ಪಂದಿಸುವುದಿಲ್ಲ ಎಂಬುದು ಮೇಲಿನ ಅಧ್ಯಯನಗಳಲ್ಲಿ ಕಂಡುಬರುವ ಅಂಶ.[4] ಆದರೆ ಈ ಪರಿಸ್ಥಿತಿಗೆ ನಿಜವಾದ ಕಾರಣಗಳೇನು, ಸಮಸ್ಯೆಯ ಮೂಲ ಯೋಜನೆಯಲ್ಲಿದೆಯೇ, ಯೋಜನೆಯನ್ನು ಅನುಷ್ಠಾನ ಗೊಳಿಸಬೇಕಾದ ಅರಣ್ಯ ಇಲಾಖೆಯಲ್ಲಿದೆಯೇ ಅಥವಾ ಸಮುದಾಯದ ಸಹಭಾಗಿತ್ವಕ್ಕಾಗಿ ರೂಪುಗೊಂಡ ಗ್ರಾಮ ಅರಣ್ಯ ಸಮಿತಿಯ ಸಾಂಸ್ಥಿಕ ಏರ್ಪಾಟಿನಲ್ಲಿದೆಯೇ ಎಂಬ ವಿಶ್ಲೇಷಣೆ ದೊರೆಯುವುದಿಲ್ಲ. ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯ ಸಮಿತಿಗಳ ನಡುವೆ ಅಧಿಕಾರಕ್ಕೆ ಸಂಬಂಧಿಸಿದ ಸಮಾನತೆಯಲ್ಲೂ ಇದೇ ಅಂಶ ಗೋಚರಿಸುತ್ತದೆ. ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಬೆಳೆಸಬೇಕಾದ ಸಸ್ಯ ಪ್ರಭೇದಗಳ ಆಯ್ಕೆಯನ್ನು ನೋಡೋಣ. ಇದು ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿ ಗಳೆರಡೂ ಸೇರಿ, ಸಮಾಲೋಚಿಸಿ ಮಾಡಬೇಕಾದ ನಿರ್ಧಾರ. ಆದರೆ ಇದನ್ನು ಅರಣ್ಯ ಇಲಾಖೆಯೇ ನಿರ್ಧರಿಸುತ್ತದೆಂಬ ದೂರು ಸಾಮಾನ್ಯವಾಗಿದೆ. ಈ ಪರಿಸ್ಥಿತಿಗೆ ಹಲವಾರು ಕಾರಣಗಳಿರಬಹುದು. ಅರಣ್ಯ ಇಲಾಖೆ, ಬೇಕೆಂದೇ ಗ್ರಾಮ ಅರಣ್ಯ ಸಮಿತಿಯನ್ನು ಅಲಕ್ಷಿಸಿ ನಿರ್ಧಾರ ಕೈಗೊಂಡಿರಬಹುದು. ಅಂತಿಮವಾಗಿ ಬರುವ ಆದಾಯವೇ ಮುಖ್ಯವಾದ ಸಂದರ್ಭಗಳಲ್ಲಿ, ಅಂತಹ ಗರಿಷ್ಠ ಆದಾಯ ತರುವ ಪ್ರಭೇದದ ನೆಡುತೋಪನ್ನು ಬೆಳೆಯುವ ಸೂಚನೆಯನ್ನು ಗ್ರಾಮ ಅರಣ್ಯ ಸಮಿತಿಯೇ ನೀಡಿರಬಹುದು. ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಯಾವ ಸಸಿಗಳಿವೆ, ಸಸಿಗಳನ್ನು ಬೆಳೆಸಲು ಎಷ್ಟು ಹಣವಿದೆ ಎನ್ನುವುದೂ ಸಸ್ಯ ಪ್ರಭೇದಗಳನ್ನು ನಿರ್ಧರಿಸಬಹುದು. ಜೀವದ್ರವ್ಯ ವಸ್ತುಗಳ ಅಗತ್ಯವನ್ನು ಬೇರೆಡೆಯಿಂದ ಹಣಕೊಟ್ಟು ಪೂರೈಸಿಕೊಳ್ಳಬಲ್ಲ ಸಾಮರ್ಥ್ಯವಿರುವ ನಿರ್ವಹಣಾ ಸಮಿತಿಯಲ್ಲಿನ ಬಲಿಷ್ಠ ಸದಸ್ಯರು ಹಣತರುವ ಪ್ರಭೇದಗಳನ್ನು ಆಯ್ಕೆ ಮಾಡಿರಬಹುದು. ಈ ಪ್ರತಿಯೊಂದು ನಿರ್ಧಾರವೂ ಭಾಗವಹಿಸುವಿಕೆಯ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತದೆ. ಈ ಅಂಶಗಳ ಮೇಲೆ ನಡೆದಿರುವ ಅಧ್ಯಯನಗಳು ಬೆಳಕು ಚೆಲ್ಲುವುದಿಲ್ಲ.

ಸರ್ಕಾರೀ ನಿರ್ಣಯಗಳು ನೀಡುವ ನಿರ್ದೇಶನಗಳಿಗೆ ಅನುಸಾರವಾಗಿ ಜಂಟೀ ಅರಣ್ಯ ಯೋಜನೆ ನಡೆಯುತ್ತದೆಯೇ ಹೊರತಾಗಿ ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಯೋಜನೆಯನ್ನು ಮಾರ್ಪಾಟು ಮಾಡಿಕೊಳ್ಳುವ ಫ್ಲೆಕ್ಸಿಬಿಲಿಟಿ ಇಲ್ಲವೆಂಬುದು ಈ ಸಂಶೋಧನೆಗಳಿಂದ ತಿಳಿದುಬರುವ ಮತ್ತೊಂದು ಅಂಶ. ಯೋಜನೆಯ ದಾಖಲೆಗಳಲ್ಲಾಗಲೀ, ಅರಣ್ಯ ಇಲಾಖೆಯ ನೀತಿ ನಿಯಮಗಳಲ್ಲಾಗಲೀ, ಈ ರೀತಿಯ ಸ್ವಾತಂತ್ರ್ಯವಿಲ್ಲವೆನ್ನುವುದು ನಿಜ. ಅತ್ಯಂತ ಕಟ್ಟುನಿಟ್ಟಾದ ಶ್ರೇಣಿ ವ್ಯವಸ್ಥೆಯಿರುವ ಅರಣ್ಯ ಇಲಾಖೆಯಲ್ಲಿ ಈ ರೀತಿಯ ಸ್ವಾತಂತ್ರ್ಯ ನಿರೀಕ್ಷಿಸುವುದೂ ಕಷ್ಟ. ಆದರೆ ಕ್ಷೇತ್ರದ ಹಂತದಲ್ಲಿ ಸ್ಥಳೀಯ ಅರಣ್ಯ ಸಿಬ್ಬಂದಿ ಹಾಗೂ ಸ್ಥಳೀಯ ಸಮುದಾಯಗಳ ನಡುವಿನ ಪ್ರತಿವರ್ತನೆಯಲ್ಲಿ ಅನೌಪಚಾರಿಕವಾದ ಫ್ಲೆಕ್ಸಿಬಿಲಿಟಿಗಳಿರುವುದೂ ನಿಜ. ಈ ಫ್ಲೆಕ್ಸಿಬಿಲಿಟಿಗಳೇ ಸಮುದಾಯದ ಸಹಭಾಗಿತ್ವಕ್ಕೆ ಪ್ರೇರಣೆಯಾಗಿರುವ ನಿದರ್ಶನಗಳೂ ಇವೆ. ಆದರೆ ಮೇಲಿನ ಸಂಶೋಧನೆಗಳು ಇಂತಹ ಉದಾಹರಣೆಗಳನ್ನು ದಾಖಲಿಸಿಲ್ಲ.

1980ರ ನಂತರ ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ನೆರವು ಪಡೆದ ಅಭಿವೃದ್ಧಿ ಯೋಜನೆಗಳು ತಮ್ಮ ಎಲ್ಲ ಗಮನವನ್ನು ಕೈಗಾರಿಕೆ ಅಥವಾ ಕೃಷಿ ಉತ್ಪಾದನೆಯಲ್ಲಿ ಮಾತ್ರ ಕೇಂದ್ರೀಕರಿಸದೆ ವಿಕೇಂದ್ರೀಕರಣ, ಸಶಕ್ತೀಕರಣ, ಸಮಾನತೆ ಮುಂತಾದ 'ಸಾಫ್ಟ್ ಕಾನ್ಸೆಪ್ಟ್'ಗಳಿಗೂ ವಿಸ್ತರಿಸಲು ಪ್ರಾರಂಭಿಸಿದವು. "ಜಂಟೀ ಅರಣ್ಯ ಯೋಜನೆಯಲ್ಲಿ ಜನರ ಭಾಗವಹಿಸುವಿಕೆ ಇಂತಹ ಒಂದು ಸಾಫ್ಟ್ ಕಾನ್ಸೆಪ್ಟ್" ಎನ್ನುತ್ತಾರೆ ಮೇರಿಟಿ ಕೋರಿಯಾ.[5]

ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳಲ್ಲಿ ಈ ಸಾಫ್ಟ್ ಕಾನ್ಸೆಪ್ಟ್‌ಗಳು ಪ್ರಾಸಂಗಿಕವಾಗಿ ಮಾತ್ರ ಕಾಣಿಸಿಕೊಂಡು ಉಳಿದಂತೆ ಕಣ್ಮರೆಯಾಗಿವೆ. ಬಹುಶಃ ಇದೇ ಕಾರಣದಿಂದಾಗಿ ಮೇಲೆ ನೋಡಿರುವ ಅನೇಕ ಪ್ರಶ್ನೆಗಳಿಗೆ ಅಧ್ಯಯನದಲ್ಲಿ ಉತ್ತರಗಳು ದೊರೆಯುವುದಿಲ್ಲ. ಜಂಟೀ ಅರಣ್ಯ ಯೋಜನೆಯ ಯಶಸ್ಸನ್ನು ಅಳೆಯುವಾಗ ಯೋಜನೆ ವಿಸ್ತರಿಸುತ್ತಿರುವ ವೇಗ ಯೋಜನೆಯಡಿಯಲ್ಲಿ ತರಲಾದ ಅರಣ್ಯ ಪ್ರದೇಶದ ವಿಸ್ತೀರ್ಣ, ಸಂರಕ್ಷಣೆ ನೀಡಿದ ಪ್ರದೇಶಗಳಲ್ಲಿ ಜೀವ ವೈವಿಧ್ಯ, ಯೋಜನೆಯಿಂದ ಆದಾಯದ ಹೆಚ್ಚಳ ಮುಂತಾದವುಗಳತ್ತ ಗಮನಹರಿಸಲಾಗಿದೆಯೇ ಹೊರತಾಗಿ ಸಹಭಾಗಿತ್ವವನ್ನು ಅರ್ಥೈಸುವ, ಅದರ ರೂಪು-ರೇಷೆಗಳನ್ನು ನಿಷ್ಕರ್ಷೆ ಮಾಡುವ ಪ್ರಯತ್ನಗಳಾಗಿಲ್ಲ. ಜನ ಯಾವ ಉದ್ದೇಶಕ್ಕಾಗಿ ಯೋಜನೆಯಲ್ಲಿ ಹೇಗೆ ಭಾಗವಹಿಸಬೇಕು, ಭಾಗವಹಿಸಲು ಇರುವ ಪ್ರಾಮಾಣಿಕ ಅವಕಾಶ ಗಳಾವುವು. ಈ ಅವಕಾಶಗಳ ಹಿಂದಿನ ಉದ್ದೇಶಗಳೇನು ಮುಂತಾದ ಪ್ರಶ್ನೆಗಳಿಗೆ ಮೇಲಿನ ಸಂಶೋಧನೆಗಳಿಂದ ಉತ್ತರ ದೊರೆಯುವುದಿಲ್ಲ. ಜಂಟೀ ಅರಣ್ಯ ಯೋಜನೆಯನ್ನು ಸ್ಥಳೀಯ ಸಮುದಾಯದ ಸಹಭಾಗಿತ್ವದ ಉತ್ತಮ ಪ್ರಯತ್ನವೆಂದು ಸ್ವಾಗತಿಸುವ ಸಂಶೋಧನಾ ಪ್ರಬಂಧಗಳು, ವಿದ್ವತ್‌ಪೂರ್ಣ ಲೇಖನಗಳು

ಈ ಯೋಜನೆಯನ್ನು ರೂಪಿಸುವ ಹಂತದಲ್ಲಿಯೇ ಜನರ ಭಾಗವಹಿಸುವಿಕೆಗೆ ಅವಕಾಶವಿಲ್ಲವೇಕೆ ಎಂಬ ಪ್ರಶ್ನೆಯನ್ನು ಉತ್ತರಿಸುವುದಿಲ್ಲ. ಕರ್ನಾಟಕದ ಸಂದರ್ಭದಲ್ಲಿ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ನಡೆದಿರುವ ಸಂಶೋಧನೆಗಳ ಬಗ್ಗೆ ಮತ್ತೊಂದು ಮಾತನ್ನೂ ಇಲ್ಲಿ ಹೇಳಬೇಕು. ಯೋಜನೆಯ ದೌರ್ಬಲ್ಯ, ವೈಫಲ್ಯಗಳಿಗೆ ಕಾರಣಗಳನ್ನು ಹುಡುಕುವಾಗ ಯಾವ ಅಧ್ಯಯನವೂ, ಕಾಲಾವಧಿಯಲ್ಲಿ ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಗಿಂತ ಹಿಂದೆ ಹೋಗುವುದಿಲ್ಲ. ಪಶ್ಚಿಮಘಟ್ಟ ಯೋಜನೆಯ ಪ್ರಸ್ತಾಪ ಬಂದದ್ದು 1988ರಲ್ಲಿ. ಯೋಜನೆ ಪ್ರಾರಂಭವಾದುದು 1992ರಲ್ಲಿ. ಈ ಎರಡರ ನಡುವಿನ ಅವಧಿ ಅತ್ಯಂತ ಮುಖ್ಯ ಕಾಲಘಟ್ಟ. ಸಹಭಾಗಿತ್ವ ಅಭಿವೃದ್ಧಿಯ ತತ್ವಗಳು ಸೂತ್ರೀಕರಣಗೊಂಡು ಪಶ್ಚಿಮಘಟ್ಟ ಅರಣ್ಯ ಯೋಜನೆಯಲ್ಲಿ ಅಳವಡಿಕೆಯಾಗಿದ್ದು ಈ ಅವಧಿಯಲ್ಲಿ. ಇದನ್ನು ರೂಪಿಸಿ ಅಳವಡಿಸಿದವರು ಯಾರು, ಅವರ ಉದ್ದೇಶವೇನಿತ್ತು, ನಾಲ್ಕು ವರ್ಷಗಳ ಕಾಲ ನಡೆದದ್ದೇನು, ಜಂಟೀ ಅರಣ್ಯ ಯೋಜನೆಯ ದೌರ್ಬಲ್ಯಗಳಿಗೆ, ವೈಫಲ್ಯಗಳಿಗೆ ಕಾರಣಗಳು ಸಹಭಾಗಿತ್ವ ನೀತಿ ರೂಪುಗೊಳ್ಳುತ್ತಿದ್ದ ಈ ಕಾಲಾವಧಿಯಲ್ಲಿಯೇ ಇರಬಾರದೇಕೆ ಎಂಬ ಅನುಮಾನವನ್ನಾಗಲೀ, ಪ್ರಶ್ನೆಯನ್ನಾಗಲೀ ಈ ಯಾವ ಅಧ್ಯಯನಗಳೂ ಎತ್ತುವುದಿಲ್ಲ.

ಒಟ್ಟಾರೆಯಾಗಿ ಎರಡು ಅಂಶಗಳನ್ನು ನಾವಿಲ್ಲಿ ಗಮನದಲ್ಲಿಡುವುದು ಅಗತ್ಯ. ಮೊದಲನೆಯದಾಗಿ ಜಂಟೀ ಅರಣ್ಯ ಯೋಜನೆಯ ಯಶಸ್ಸು-ವೈಫಲ್ಯಗಳು, ಸಾಮರ್ಥ್ಯ- ದೌರ್ಬಲ್ಯಗಳನ್ನು ಪರಿಶೀಲಿಸುವ ಈ ವಿವಿಧ ಸಂಶೋಧನೆಗಳು, ಯೋಜನೆಯಲ್ಲಿ ಅಡಕವಾಗಿರುವ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆ, ಅದು ತರಬಹುದಾದ ಪರಿವರ್ತನೆಗಳು, ವಿಕೇಂದ್ರೀಕರಣ, ಪಾರದರ್ಶಕತೆ, ಸಶಕ್ತೀಕರಣ ಮುಂತಾದವುಗಳತ್ತ ಗಮನಹರಿಸುವುದಿಲ್ಲ. ಎರಡನೆಯದಾಗಿ ಯೋಜನೆಯ ರೂಪು-ರೇಷೆಗಳು, ಅದು ಅನುಷ್ಠಾನಗೊಳ್ಳುತ್ತಿರುವ ರೀತಿ, ಕ್ರಮಗಳನ್ನು ಮಾತ್ರ ಅಧ್ಯಯನ ಮಾಡಿ ನ್ಯೂನತೆಗಳನ್ನು ಎತ್ತಿ ತೋರುವ ಈ ಸಂಶೋಧನೆಗಳು ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿಯ ತತ್ವಗಳನ್ನು ಪರಿಭಾವಿಸಿ, ಸೇರಿಸುವ ಹಂತದಲ್ಲಿಯೇ ದೌರ್ಬಲ್ಯಗಳಿರಬರದೇಕೆ ಎಂದು ಅನುಮಾನಪಡುವುದಿಲ್ಲ. ಈ ಎರಡು ದೃಷ್ಟಿಗಳಿಂದ ಪ್ರಸ್ತುತದ ಅಧ್ಯಯನ ತೀರಾ ಅಗತ್ಯವಾಗುತ್ತದೆ, ಅಧ್ಯಯನಕ್ಕೆ ಮಹತ್ವ ಬರುತ್ತದೆ.

ಸಂಶೋಧನೆಯ ಉದ್ದೇಶ

ಈ ಅಧ್ಯಯನದ ಮುಖ್ಯ ಉದ್ದೇಶಗಳು ಹೀಗಿವೆ :

1. ಜಂಟೀ ಅರಣ್ಯ ಯೋಜನೆಯ ಮಾದರಿಯನ್ನು ಅಳವಡಿಸಿಕೊಂಡಿದ್ದ, 'ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ'ಯಲ್ಲಿ, ಸಹಭಾಗಿತ್ವ ಅಭಿವೃದ್ಧಿ ನೀತಿಯನ್ನು ಸೂತ್ರೀಕರಿಸಿರುವ

ರೀತಿ, ಈ ನೀತಿಯ ಉಗಮ, ವಿಕಾಸ, ಅನುಷ್ಠಾನಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು.

2. ಅಭಿವೃದ್ಧಿ ಸಾಹಿತ್ಯದಲ್ಲಿ 'ಸಹಭಾಗಿತ್ವ' ಅಥವಾ 'ಭಾಗವಹಿಸುವಿಕೆ' ವಿಕಾಸಗೊಂಡು ಬಳಕೆಯಾಗಿರುವ ರೀತಿಯನ್ನು ಅಧ್ಯಯನ ಮಾಡಿ, ಜಂಟೀ ಅರಣ್ಯ ಯೋಜನೆಯ ಸಂದರ್ಭದಲ್ಲಿ ಸಹಭಾಗಿತ್ವದ ಪರಿಕಲ್ಪನೆಗೆ ಸ್ಪಷ್ಟವಾದ, ನಿಖರವಾದ ಅರ್ಥವಿವರಣೆ ನೀಡುವುದು.

3. ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯ ಸಮುದಾಯದ ಭಾಗವಿಸುವಿಕೆಗೆ ಕಲ್ಪಿಸಿರುವ ಅವಕಾಶಗಳು, ಅವುಗಳ ಸ್ವರೂಪ, ಉದ್ದೇಶ, ಕಾರ್ಯರೂಪಕ್ಕೆ ಬರುವ ಸಾಧ್ಯತೆ ಮತ್ತು ಇತಿ-ಮಿತಿಗಳನ್ನು ವಿಷದವಾಗಿ ಪರಿಶೀಲಿಸುವುದು.

4. ಜಂಟೀ ಅರಣ್ಯ ಯೋಜನೆಯ ಅತಿ ಮುಖ್ಯ ಕಾರ್ಯಘಟಕವಾದ ಗ್ರಾಮ ಅರಣ್ಯ ಸಮಿತಿ ಮತ್ತು ನಿರ್ವಹಣಾ ಸಮಿತಿಗಳ ಕಾರ್ಯ ವಿಧಾನವನ್ನು ಕೂಲಂಕುಶವಾಗಿ ಪರಿಶೀಲಿಸಿ, ಭಾಗವಹಿಸುವಿಕೆಗೆ ನೀಡಲಾಗಿರುವ ಅವಕಾಶಗಳನ್ನು ಬಳಸಿಕೊಳ್ಳುತ್ತಿರುವ ರೀತಿ, ಅದರ ಇತಿ-ಮಿತಿಗಳನ್ನು ನಿರ್ಧರಿಸಿ ಭಾಗವಹಿಸುವಿಕೆಯ ಮೌಲ್ಯಮಾಪನ ಮಾಡುವುದು.

5. ಸಹಭಾಗಿತ್ವ ಅಭಿವೃದ್ಧಿಯ ಎಲ್ಲಾ ಆಯಾಮುಗಳನ್ನೂ- ಯೋಜನೆಯ ತಯಾರಿ, ನೀತಿ-ನಿಲುವುಗಳ ನಿಷ್ಕರ್ಷೆ, ಅನುಷ್ಠಾನಕ್ಕೆ ಸಂಬಂಧಿಸಿದ ನಿರ್ಧಾರಗಳು, ಇತ್ಯಾದಿ- ಪ್ರಾತಿನಿಧಿಕ ಸ್ವರೂಪದಲ್ಲಿ ಒಳಗೊಂಡ 'ಕಿರುಯೋಜನೆ' ಯನ್ನು(ಮೈಕ್ರೋಪ್ಲಾನ್) ಸಿದ್ಧಗೊಳಿಸುವ ಹಾಗೂ ಕಾರ್ಯಗತಗೊಳಿಸುವ ಪ್ರಕ್ರಿಯೆಯ ಎಲ್ಲ ಹಂತಗಳನ್ನು ಪರಿಶೀಲಿಸಿ, ಜಂಟೀ ಅರಣ್ಯ ಯೋಜನೆಯಲ್ಲಿರುವ ಒಟ್ಟಾರೆ 'ಸಹಭಾಗಿತ್ವ ಅಭಿವೃದ್ಧಿ'ಯ ಸ್ವರೂಪವನ್ನು ನಿರ್ಧರಿಸುವುದು.

6. ಸಹಭಾಗಿತ್ವ ತತ್ವಗಳನ್ನೊಳಗೊಂಡ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗಲು ಕಾರ್ಯೋಪಾಯಗಳನ್ನು ಸೂಚಿಸುವುದು.

ಸಂಶೋಧನಾ ವಿಧಾನ

ಈ ಸಂಶೋಧನೆಯಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ.ಮೊದಲನೆಯದಾಗಿ ಕರ್ನಾಟಕದಲ್ಲಿ, ಜಂಟೀ ಅರಣ್ಯ ಯೋಜನೆಯ ಸಂದರ್ಭದಲ್ಲಿ ಸಹಭಾಗಿತ್ವ ನೀತಿ ರೂಪುಗೊಂಡ ರೀತಿಯ ಅಧ್ಯಯನ. ಎರಡನೆಯದಾಗಿ ಈ ನೀತಿ ಅನುಷ್ಠಾನಗೊಂಡು ಆ ಮೂಲಕವಾಗಿ ಸಾಧ್ಯವಾಗಿರುವ ಸಹಭಾಗಿತ್ವ ಅಬಿವೃದ್ಧಿಯ ಫಲಶ್ರುತಿಗಳ ಅಧ್ಯಯನ. ಈ ಎರಡಕ್ಕೂ ಪ್ರತ್ಯೇಕ ಸಂಶೋಧನಾ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

ಸಹಭಾಗಿತ್ವ ನೀತಿಯ ಉಗಮ, ವಿಕಾಸ, ಅನ್ವಯಗಳ ಅಧ್ಯಯನಕ್ಕೆ ಮುಖ್ಯವಾಗಿ 'ವಸ್ತು ವಿಶ್ಲೇಷಣೆ' ಯ (ಕಂಟೆಂಟ್ ಅನಾಲಿಸಿಸ್) ವಿಧಾನವನ್ನು ಬಳಸಿಕೊಳ್ಳಲಾಗಿದೆ. ಕರ್ನಾಟಕ ಅರಣ್ಯ ಇಲಾಖೆ, ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಹಾಗೂ ಸರ್ಕಾರೇತರ ಸಂಸ್ಥೆಗಳ ನಡುವೆ 1988-92ರ ಅವಧಿಯಲ್ಲಿ ನಡೆದ ಮಾತುಕತೆ, ಸಮಾಲೋಚನೆ, ಸಂಧಾನಗಳು, 'ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ'ಯಲ್ಲಿ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಯನ್ನು ಅಳವಡಿಸಲು ಕಾರಣವಾದವು. ಈ ನಾಲ್ಕು ವರ್ಷಗಳ ಅವಧಿಯ ಎಲ್ಲ ಸಂಬಂಧಿತ ಅಧಿಕೃತ ದಾಖಲೆಗಳನ್ನೂ -ಕರ್ನಾಟಕ ಸರ್ಕಾರ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗೆ ಸಲ್ಲಿಸಿದ ಯೋಜನೆಯ ಪ್ರಸ್ತಾಪ, ಪುನರ್ವಿಮರ್ಶಿತ ಪ್ರಸ್ತಾಪಗಳು, ಸಮಾಲೋಚನೆಯ ವರದಿಗಳು, ಸರ್ಕಾರೇತರ ಸಂಸ್ಥೆಗಳು ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಸಲ್ಲಿಸಿದ ಅಧಿಕೃತ ನಿವೇದನೆಗಳು, ಸರ್ಕಾರದ ಸಹಭಾಗಿತ್ವ ನೀತಿಗೆ ಪ್ರತಿಕ್ರಿಯಿಸುವ ಉದ್ದೇಶದಿಂದ ನಡೆದ ಕಾರ್ಯಗಾರದ ವರದಿ ಮುಂತಾದವುಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ವಿಮರ್ಶಿಸಿ, ವಿಶ್ಲೇಷಿಸಲಾಗಿದೆ. ಯೋಜನೆಗೆ ಸಂಬಂಧಿಸಿದ ಅಧಿಕೃತ ದಾಖಲೆಗಳಲ್ಲಿ ಸಾಮಾನ್ಯವಾಗಿ ಹೊರ ನೋಟಕ್ಕೆ ಕಾಣದಂತೆ ಅಂತರ್ಗತವಾಗಿರುವ ದೌರ್ಬಲ್ಯ ವಿರೋಧಾಭಾಸಗಳನ್ನು ಅರ್ಥ ಮಾಡಿಕೊಳ್ಳಲು ನೀತಿ ನಿರೂಪಕರು, ಸಲಹಾಕಾರರು, ಸಂಶೋಧಕರು, ಪರಿಸರ ಚಳವಳಿಯ ಕಾರ್ಯಕರ್ತರು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳೊಡನೆ ವ್ಯಾಪಕ ಚರ್ಚೆ, ಸಂದರ್ಶನ ಗಳನ್ನು ನಡೆಸಲಾಗಿದೆ. 1988-92ರ ಅವಧಿಯಲ್ಲಿ, ಸಹಭಾಗಿತ್ವ ನೀತಿ ನಿರೂಪಣೆಯ ಸಂದರ್ಭದಲ್ಲಿ, ಆಯಕಟ್ಟಿನ ಸ್ಥಳಗಳಲ್ಲಿದ್ದು, ಆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಹಿರಿಯ ಅರಣ್ಯಾಧಿಕಾರಿಗಳೊಡನೆ ಅನೌಪಚಾರಿಕ ಚರ್ಚೆಗಳನ್ನು ನಡೆಸಿ ಮಾಹಿತಿ ಪಡೆಯಲಾಗಿದೆ.

ಸಹಭಾಗಿತ್ವ ನೀತಿಯ ಅನುಷ್ಠಾನ, ಸಮುದಾಯದ ಪ್ರತಿಕ್ರಿಯೆ ಮತ್ತು ಫಲಶ್ರುತಿಗಳ ಅಧ್ಯಯನಕ್ಕೆ 'ವಿಷಯಾಧ್ಯಯನ' (ಕೇಸ್ ಸ್ಟಡಿ) ವಿಧಾನವನ್ನು ಬಳಸಲಾಗಿದೆ. ಇದರಲ್ಲಿ ಎರಡು ಹಂತಗಳಿವೆ. ಮೊದಲನೆಯದು ಪರಿಶೋಧನೆಯ ಹಂತ. ಈ ಹಂತದಲ್ಲಿ ಕರ್ನಾಟಕ ಸರ್ಕಾರದ ಅರಣ್ಯಾಧಿಕಾರಿಗಳು, ಸಂಶೋಧಕರು, ಸರ್ಕಾರೇತರ ಸಂಸ್ಥೆಗಳ ಕಾರ್ಯಕರ್ತರು, ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ಸಲಹಾಕಾರರು, ಪರಿಣತರು, ವಿದ್ವಾಂಸರುಗಳನ್ನು ಭೇಟಿ ಮಾಡಿ ಚರ್ಚಿಸಿ ಕರ್ನಾಟಕದಲ್ಲಿ ಜಂಟೀ ಅರಣ್ಯ ಯೋಜನೆಯ ಒಂದು ಸ್ಥೂಲ ಚಿತ್ರವನ್ನು ಪಡೆಯಲಾಗಿದೆ. ಈ ಹಂತದಲ್ಲಿ ಪಡೆದ ಮಾಹಿತಿಯನ್ನು ಕ್ಷೇತ್ರ ಕಾರ್ಯದಲ್ಲಿನ ಸಂದರ್ಶನಗಳಿಗೆ ಅಗತ್ಯವಾದ ಸಂದರ್ಶನ ಅನುಬಂಧವನ್ನು ಸಿದ್ಧಪಡಿಸಲು ಬಳಸಿಕೊಳ್ಳಲಾಗಿದೆ. ಈ ಪ್ರಶ್ನಾವಳಿಯನ್ನು ಜಮಖಂಡಿ ತಾಲ್ಲೂಕಿನ ಕಲ್ಹಳ್ಳಿಯ ಗ್ರಾಮ ಅರಣ್ಯ ಸಮಿತಿಯಲ್ಲಿ (ಕರ್ನಾಟಕ ರಾಜ್ಯ ಸರ್ಕಾರದ ಜಂಟೀ

ಅರಣ್ಯ ಯೋಜನೆಯ ಪ್ರಶಸ್ತಿ ಪಡೆದ ಸಮಿತಿ) ಪರೀಕ್ಷಿಸಿ, ಅಗತ್ಯ ಬದಲಾವಣೆಗಳನ್ನು ಮಾಡಲಾಗಿದೆ.

ಕ್ಷೇತ್ರ ಕಾರ್ಯಕ್ಕಾಗಿ ಜಂಟೀ ಅರಣ್ಯ ಯೋಜನೆಯನ್ನು ಕಾರ್ಯಗತ ಮಾಡಿರುವ ಹಳ್ಳಿಗಳನ್ನು ಆಯ್ಕೆ ಮಾಡಲು, ಉತ್ತಮವಾಗಿ ಕೆಲಸ ಮಾಡುತ್ತಿರುವ 30 ಗ್ರಾಮ ಅರಣ್ಯ ಸಮಿತಿಗಳ ಪಟ್ಟಿಯೊಂದನ್ನು ಅರಣ್ಯ ಇಲಾಖೆಯಿಂದಲೇ ಪಡೆಯಲಾಯಿತು. ಈ ಗ್ರಾಮ ಅರಣ್ಯ ಸಮಿತಿಗಳ ಕೆಲಸ ಕಾರ್ಯಗಳಿಗೆ ಸಂಬಂಧಿಸಿದ ಮೂಲಭೂತ ಮಾಹಿತಿಯನ್ನು ಸಂಗ್ರಹಿಸಿದ ನಂತರ, ಎಂಟು ಅಂಶಗಳ ಮಾನದಂಡವನ್ನು (ಕೋಷ್ಟಕ 1) ಅವುಗಳಿಗೆ ಅನ್ವಯಿಸಿ 23 ಹಳ್ಳಿಗಳನ್ನು ಆಯ್ಕೆ ಮಾಡಲಾಯಿತು. ಈ ಹಳ್ಳಿಗಳು ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮೈಸೂರು, ದಾವಣಗೆರೆ, ತುಮಕೂರು, ಕೋಲಾರ ಜಿಲ್ಲೆಗಳಿಗೆ ಸೇರಿದ್ದವು. ಅಧ್ಯಯನಕ್ಕಾಗಿ ಆಯ್ಕೆಮಾಡುವ ಹಳ್ಳಿಗಳಲ್ಲೂ ಪ್ರದೇಶ ನಿರ್ದಿಷ್ಟತೆ ಕಾಣಬೇಕೆಂಬ ಉದ್ದೇಶದಿಂದ ಶಿವಮೊಗ್ಗ, ಹಾಸನ ಮತ್ತು ದಾವಣಗೆರೆ ಜಿಲ್ಲೆಗಳನ್ನು ಪ್ರತ್ಯೇಕಿಸಿ, ತೀವ್ರ ಅಧ್ಯಯನಕ್ಕಾಗಿ ಈ ಮೂರು ಜಿಲ್ಲೆಗಳ ಐದು ಹಳ್ಳಿಗಳನ್ನು ರ್‍ಯಾಂಡಮ್ ಸ್ಯಾಂಪಲ್ ವಿಧಾನದಿಂದ ಆಯ್ಕೆ ಮಾಡಲಾಯಿತು. ಅಧ್ಯಯನಕ್ಕಾಗಿ ಆರಿಸಿಕೊಂಡ ಈ ಹಳ್ಳಿಗಳೆಂದರೆ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕುಮಾರನಹಳ್ಳಿ, ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಉದ್ದೂರು ಮತ್ತು ಹಾಸನ ಜಿಲ್ಲೆಯ ಅದೇ ತಾಲ್ಲೂಕಿನ ಮುಕುಂದೂರು, ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಮರಡವಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಹನಿಯಾ.

ಕ್ಷೇತ್ರ ಕಾರ್ಯಕ್ಕಾಗಿ ಆಯ್ಕೆಯಾದ ಹಳ್ಳಿಗಳ ರೂಪಚಿತ್ರವನ್ನು (ಪ್ರೊಫೈಲ್), ಪ್ರೊಫಾರ್ಮ ವೊಂದನ್ನು ಬಳಸಿ, ಅಗತ್ಯವಾದ ಮಾಹಿತಿಗಳನ್ನು ವ್ಯವಸ್ಥಿತ ರೀತಿಯಿಂದ ಸಂಗ್ರಹಿಸುವುದರ ಮೂಲಕ ಸಿದ್ಧಪಡಿಸಲಾಗಿದೆ. ಈ ನಮೂನೆ ಪತ್ರದಲ್ಲಿ ಮೂರು ಭಾಗಗಳಿದ್ದು, ಮೊದಲನೆಯದರಲ್ಲಿ ಹಳ್ಳಿಯ ಜನಸಂಖ್ಯೆಯ ವಿವರಗಳು, ಜಾತಿ ಪಂಗಡಗಳು, ಕುಟುಂಬದ ವೃತ್ತಿ, ಭೂ ಒಡೆತನ, ಬೆಳೆಗಳು ಮುಂತಾದ ವಿವರಗಳಿವೆ. ಎರಡನೆ ಭಾಗದಲ್ಲಿ ಸ್ಥಳೀಯ ಸಮುದಾಯದ ಅರಣ್ಯ ಸಂಪನ್ಮೂಲಗಳ ಬಳಕೆ, ಅವಲಂಬನೆಗಳಿಗೆ ಸಂಬಂಧಿಸಿದ ಮಾಹಿತಿಗಳಿವೆ. ಮೂರನೆಯ ಭಾಗದಲ್ಲಿ ಜಂಟೀ ಅರಣ್ಯ ಯೋಜನೆಯಲ್ಲಿ ಜನರ ಸಹಭಾಗಿತ್ವಕ್ಕೆ ಸಂಬಂಧಪಟ್ಟ ವಿಷದವಾದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿದ ಹಳ್ಳಿಗಳಿಗೆ ಸಂಬಂಧಿಸಿದಂತೆ ಅರಣ್ಯದ ವ್ಯಾಪ್ತಿ, ನಮೂನೆ, ವಿಸ್ತೀರ್ಣಗಳು, ಕೃಷಿ ಹಾಗೂ ಇನ್ನಿತರ ಭೂಮಿಯ ವಿವರಗಳು, ಸ್ಥಳೀಯ ಹವಾಗುಣ, ಮಣ್ಣಿನ ನಮೂನೆ, ಪರಿಸರದ ಸಮಸ್ಯೆಗಳು ಮುಂತಾದ ಪೂರಕ ಮಾಹಿತಿಗಳನ್ನು ಪ್ರತ್ಯೇಕವಾಗಿ ಪಡೆಯಲಾಗಿದೆ.

ಹಳ್ಳಿಯ ರೂಪಚಿತ್ರವನ್ನು ಸಿದ್ಧಪಡಿಸಲು ಅಗತ್ಯವಾದ ಬಹುತೇಕ ಮಾಹಿತಿಗಳನ್ನು ಗ್ರಾಮ ಪಂಚಾಯಿತಿಯಲ್ಲಿನ ಹಾಗೂ ವಲಯ ಅರಣ್ಯಾಧಿಕಾರಿಗಳ ಕಛೇರಿಯಿಂದ ಪಡೆಯಲಾಗಿದೆ. ಇಲ್ಲಿ ದೊರೆಯದ ಕೆಲವು ಮಾಹಿತಿಗಳನ್ನು ಮಾತ್ರ ತಾಲ್ಲೂಕು ಹಾಗೂ ಜಿಲ್ಲಾ ಕಛೇರಿಗಳಲ್ಲಿನ ಅಧಿಕೃತ ದಾಖಲೆಗಳಿಂದ ಪಡೆಯಲಾಗಿದೆ. ಕ್ಷೇತ್ರ ಕಾರ್ಯದ ಹಳ್ಳಿಗಳಲ್ಲಿನ ಕೆಲವು ಪ್ರಮುಖ ವ್ಯಕ್ತಿಗಳೂ ಅಗತ್ಯ ಮಾಹಿತಿಗಳನ್ನು ಒದಗಿಸಿದ್ದಾರೆ. ಇದೇ ವಿಧಾನವನ್ನು ಅನುಸರಿಸಿ ಗ್ರಾಮ ಅರಣ್ಯ ಸಮಿತಿ ಹಾಗೂ ನಿರ್ವಹಣಾ ಸಮಿತಿಯ ರೂಪಚಿತ್ರಗಳನ್ನು ಪಡೆಯಲಾಗಿದೆ.

ಹಳ್ಳಿಯ ರೂಪಚಿತ್ರವನ್ನು ಸಿದ್ಧಪಡಿಸುವಾಗ, ಅಲ್ಲಿನ ಎಲ್ಲ ಕುಟುಂಬಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಿದ ಮಾಹಿತಿಯನ್ನು ಬಳಸಿ, ಭೂ ಹಿಡುವಳಿಯ ಪ್ರಮಾಣವನ್ನು ಆಧರಿಸಿ, ಕುಟುಂಬಗಳನ್ನು ಭೂರಹಿತರು, ಅತಿ ಸಣ್ಣ ರೈತರು (0-2.5 ಎಕರೆ), ಸಣ್ಣ ರೈತರು (2.6-6 ಎಕರೆ), ಹಾಗೂ ದೊಡ್ಡ ರೈತರೆಂದು (6 ಎಕರೆಗಿಂತ ಜಾಸ್ತಿ) ವಿಂಗಡಿಸಲಾಯಿತು. ಈ ರೀತಿ ವಿಂಗಡಿಸಿದ ನಂತರ, ಪ್ರತಿಯೊಂದು ಗುಂಪಿನಲ್ಲೂ ಶೇಕಡಾ 25 ಕುಟುಂಬಗಳನ್ನು ಯಾದೃಚ್ಛಿಕ ಮಾದರಿ (ರ್‍ಯಾಂಡಮ್ ಸ್ಯಾಂಪಲ್) ಕ್ರಮದಿಂದ ಆಯ್ಕೆ ಮಾಡಲಾಯಿತು. 5 ಹಳ್ಳಿಗಳಿಂದ ಒಟ್ಟಾರೆಯಾಗಿ ದೊರೆತ ಈ 198 ಕುಟುಂಬಗಳೇ ಕ್ಷೇತ್ರ ಕಾರ್ಯದ ಸಂದರ್ಶನದ ಮಾದರಿ.

ವಿಷಯಾಧ್ಯಯನ ವಿಧಾನದ ಮೊದಲ ಹಂತದಲ್ಲಿ ಪಡೆದ ಮಾಹಿತಿಯನ್ನಾಧರಿಸಿ ಸಿದ್ಧ ಪಡಿಸಿದ ಅರೆ ಸಂರಚಿತ ಅನುಬಂಧವನ್ನು (ಸೆಮಿಸ್ಟ್ರಕ್ಚರ್ಡ್ ಶೆಡ್ಯೂಲ್) ಬಳಸಿ ಸಂದರ್ಶನಗಳನ್ನು ನಡೆಸಲಾಯಿತು. ಈ ಸಂದರ್ಶನಗಳಲ್ಲಿ ಮಾದರಿಯಲ್ಲಿನ ಕುಟುಂಬಗಳ ಆದಾಯ, ಅರಣ್ಯ ಸಂಪನ್ಮೂಲಗಳ ಬಳಕೆ, ಜಂಟೀ ಅರಣ್ಯ ಯೋಜನೆಯ ಬಗೆಗಿನ ಅರಿವು, ಅರಣ್ಯ ಸಮಿತಿಯ ಚಟುವಟಿಕೆ ಮುಂತಾದವುಗಳ ಬಗ್ಗೆ ಪ್ರಶ್ನಿಸಲಾಯಿತು. ಇದೇ ರೀತಿ ನಡೆಸಿದ ನಿರ್ವಹಣಾ ಸಮಿತಿಯ ಸದಸ್ಯರ ಪ್ರತ್ಯೇಕ ಸಂದರ್ಶನಗಳಿಂದ ಭಾಗವಹಿಸುವಿಕೆಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಲಾಗಿದೆ.

ಸಂದರ್ಶನಗಳನ್ನು ಸೆಮಿಸ್ಟ್ರಕ್ಚರ್ಡ್ ಪ್ರಶ್ನಾವಳಿಗಳ ನೆರವಿನಿಂದ ನಡೆಸಲಾಯಿತು. ಉತ್ತರಗಳನ್ನು ಅಲ್ಲೇ ದಾಖಲಿಸಲಾಗುತಿತ್ತು. ಬಹುತೇಕ ಸಂದರ್ಭಗಳಲ್ಲಿ ಇಡೀ ಕುಟುಂಬವೇ ಇದ್ದು ಎಲ್ಲರೂ ಉತ್ತರ ನೀಡುತ್ತಿದ್ದುದರಿಂದ (ಮುಖ್ಯವಾಗಿ ಜಂಟೀ ಅರಣ್ಯ ಯೋಜನೆಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ) ಉತ್ತರಗಳನ್ನು ದಾಖಲಿಸುವುದು ಕಷ್ಟವಾಗುತ್ತಿದ್ದರೂ, ಇಂತಹ ಸಂದರ್ಭಗಳಲ್ಲಿ ಮಾತ್ರ ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಿದ್ದವು. ಇಂತಹ ಭಿನ್ನಾಭಿಪ್ರಾಯಗಳನ್ನು ಪ್ರತೇಕವಾಗಿ ದಾಖಲಿಸಲಾಗಿದೆ. ಮಹಿಳೆಯರಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಮಹಿಳೆಯರಿಂದಲೇ ಉತ್ತರ ಪಡೆಯುವ ವಿಶೇಷ ಪ್ರಯತ್ನ ಮಾಡಲಾಗಿದೆ.

ಕ್ಷೇತ್ರಕಾರ್ಯದ ಈ ಸಂದರ್ಶನಗಳೇ ಅಲ್ಲದೆ ಗ್ರಾಮ ಅರಣ್ಯ ಸಮಿತಿಗಳ ಒಟ್ಟು 11 ಸಭೆಗಳಲ್ಲಿ ವೀಕ್ಷಕನಾಗಿ ಭಾಗವಹಿಸುವುದರ ಜೊತೆಗೆ ಸಭೆಯ ನಡಾವಳಿಗಳು, ಸೌಹಾರ್ದ ಒಡಂಬಡಿಕೆ, ಕಿರು ಯೋಜನೆ ಮುಂತಾದವುಗಳಿಗೆ ಸಂಬಂಧಿಸಿದ ಗ್ರಾಮ ಅರಣ್ಯ ಸಮಿತಿಯ ದಾಖಲೆಗಳನ್ನು ವಿಶದವಾಗಿ ಪರಿಶೀಲಿಸಲಾಗಿದೆ.

ಈ ಸಂಶೋಧನೆಯಲ್ಲಿ ವಿಷಯಾಧ್ಯಯನ ವಿಧಾನ ಹಾಗೂ ಕ್ಷೇತ್ರ ಕಾರ್ಯದ ಸಂದರ್ಶನಗಳಲ್ಲಿ ಸೆಮಿಸ್ಟ್ರಕ್ಚರ್ಡ್ ಪ್ರಶ್ನಾವಳಿಯನ್ನು ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಿ ಕೊಳ್ಳಲಾಗಿದೆ. ಈ ಸಂಶೋಧನೆಯಲ್ಲಿ, ಯೋಜನೆ ಜಾರಿಯಾಗಿರುವ ಪರಿಸರದ ಸಂಕೀರ್ಣತೆಯನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದು ಸಾಧ್ಯವಾಗುವುದು ವಿಷಯಾಧ್ಯಯನ ವಿಧಾನದಿಂದ ಮಾತ್ರ. ಎರಡನೆಯದಾಗಿ ಜಂಟೀ ಅರಣ್ಯ ಯೋಜನೆಯ ಆಚರಣೆಯಲ್ಲಿ ಸಾರ್ವತ್ರೀಕರಣಕ್ಕಿಂತ ಸ್ಥಳೀಯ ವ್ಯತ್ಯಾಸಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಹೆಚ್ಚಿನ ಸವಾಲಿದೆ, ಹೆಚ್ಚಿನ ಉಪಯುಕ್ತತೆಯಿದೆ. ಇದು ಕೂಡ ವಿಷಯಾಧ್ಯಯನ ವಿಧಾನದಲ್ಲಿ ಹೆಚ್ಚಿನ ಮಟ್ಟಗೆ ಸಾಧ್ಯವಾಗುತ್ತದೆ. ಇದೇ ರೀತಿ ಸ್ಟ್ರಕ್ಚರ್ಡ್ ಪ್ರಶ್ನಾವಳಿಯಲ್ಲಿ, ಸಂದರ್ಶನದಲ್ಲಿ ನಿರೀಕ್ಷಿತ, 'ಸ್ಟಾಂಡರ್ಡ್' ಉತ್ತರಗಳು ಬರುವ ಸಂಭವವೇ ಹೆಚ್ಚು. ಆದರೆ ಸಮಿಸ್ಟ್ರಕ್ಚರ್ಡ್ ಸಂದರ್ಶನದಲ್ಲಿ ಅನಿರೀಕ್ಷಿತ ಉತ್ತರಗಳಿಗೆ, ಉಪಪ್ರಶ್ನೆಗಳಿಗೆ, ಉತ್ತರಗಳ ಪರಿಶೋಧನೆಗೆ ಹೆಚ್ಚಿನ ಅವಕಾಶಗಳಿವೆ. ಮಾಹಿತಿಯ ಬೆನ್ನು ಹತ್ತಿ ಹೊರಟ ಸಂಶೋಧಕನಿಗೆ ಇದು ಹೆಚ್ಚು ಉಪಯುಕ್ತ.

ಅಧ್ಯಯನದಲ್ಲಿನ ಇತಿ ಮಿತಿಗಳು

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಪರಿಕಲ್ಪನೆಗೆ ಸಂಬಂಧಿಸಿದ ಈ ಅಧ್ಯಯನದಲ್ಲಿ ಕೆಲವು ಇತಿಮಿತಿಗಳಿವೆ.

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ನೀತಿಯನ್ನು ಅಳವಡಿಸುವ ಪ್ರಯತ್ನಗಳು ಪ್ರಾರಂಭವಾದದ್ದು 15ವರ್ಷಗಳ ಹಿಂದೆ. ಅಲ್ಲಿಂದ ನಾಲ್ಕು ವರ್ಷಗಳ ಅವಧಿಯಲ್ಲಿನ ಬಹುತೇಕ ದಾಖಲೆಗಳು ದೊರೆತಿದ್ದರೂ ಅರಣ್ಯ ಇಲಾಖೆ ಮತ್ತು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ಪ್ರತಿನಿಧಿಗಳ ನಡುವೆ ನಡೆದ ಮೂರು ಸಭೆಗಳ ನಡಾವಳಿಗಳು ದೊರೆಯಲಿಲ್ಲ. ಯಾವ ಮಾಹಿತಿಯ ಹಕ್ಕೂ ಅದನ್ನು ದೊರಕಿಸಿಕೊಡಲಿಲ್ಲ. ಈ ಕೊರತೆಯನ್ನು ತುಂಬಿಕೊಳ್ಳಲು ಅ ಸಭೆಗಳಲ್ಲಿ ಭಾಗವಹಿಸಿದ್ದು ಈಗ ನಿವೃತ್ತರಾಗಿರುವ ಮೂರು ಹಿರಿಯ ಅರಣ್ಯಾಧಿಕಾರಿಗಳನ್ನು ಅನೌಪಚಾರಿಕವಾಗಿ ಸಂದರ್ಶಿಸಲಾಯಿತು. ಈ ಅಧಿಕಾರಿಗಳು ಹತ್ತು-ಹನ್ನೆರಡು ವರ್ಷಗಳ ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯದ ವಿವರಗಳನ್ನು ತಮ್ಮ 'ನೆನಪಿನ' ಆಧಾರದಿಂದ ಒದಗಿಸಿದ್ದಾರೆ. ಈ ಮೂವರು

ಅಧಿಕಾರಿಗಳೊಡನೆ ಪ್ರತ್ಯೇಕವಾಗಿ ಸಂದರ್ಶನವನ್ನು ನಡೆಸಿ, ಮಾಹಿತಿಯನ್ನು ತಾಳೆ ನೋಡಿ, ಸರಿಹೊಂದಿದ ಮಾಹಿತಿಯನ್ನು ಮಾತ್ರ ಬಳಸಿಕೊಳ್ಳಲಾಗಿದೆ.

ಕ್ಷೇತ್ರಾಧ್ಯಯನಕ್ಕಾಗಿ ಹಳ್ಳಿಗಳನ್ನು ಆಯ್ಕೆ ಮಾಡುವ ಮೊದಲು ಉತ್ತಮವಾಗಿ ಕೆಲಸ ಮಾಡುತ್ತಿರುವ ಗ್ರಾಮ ಅರಣ್ಯ ಸಮಿತಿಗಳಿರುವ ಹಳ್ಳಿಗಳ ಹೆಸರುಗಳನ್ನು ಸೂಚಿಸುವಂತೆ ಅರಣ್ಯ ಇಲಾಖೆ ಹಾಗೂ ಉತ್ತರ ಕನ್ನಡದಲ್ಲಿ ಸಕ್ರಿಯವಾಗಿರುವ ಎರಡು ಸರ್ಕಾರೇತರ ಸಂಸ್ಥೆಗಳನ್ನು ಕೇಳಲಾಗಿತ್ತು. ಆದರೆ 'ಸರ್ಚ್' ಮತ್ತು 'ಆಕ್ಸ್‌ಫಾಮ್'ಗಳಿಂದ ಯಾವುದೇ ಉತ್ತರ ಬರಲಿಲ್ಲ. ಈ ಸಂಶೋಧನೆ ಪ್ರಾರಂಭವಾಗುವ ಸಮಯಕ್ಕೆ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಯೋಜನೆಯಿಂದ ದೂರ ಸರಿದು ಆರ್ಥಿಕ ನೆರವು ನಿಂತಿತ್ತು. ಉತ್ತರ ಕನ್ನಡದ ಬಹುತೇಕ ಗ್ರಾಮ ಅರಣ್ಯ ಸಮಿತಿಗಳು ನಿಷ್ಕ್ರಿಯವಾಗಿದ್ದವು. ಈ ಯೋಜನೆಗೆ ವೆಚ್ಚವಾದ ಹಣದ ಬಗ್ಗೆ ನಿಯಂತ್ರಕರು ಮತ್ತು ಮಹಾಲೇಖಾಪಾಲಕರ ವರದಿ ತೀವ್ರ ಟೀಕೆ ಮಾಡಿತ್ತು. ಈ ಬಗ್ಗೆ ಪ್ರತ್ಯೇಕ ವಿಚಾರಣೆ ನಡೆಸುವಂತೆ ಉತ್ತರ ಕನ್ನಡದ ಹಲವಾರು ಸಂಘ ಸಂಸ್ಥೆಗಳು ಒತ್ತಾಯಿಸುತ್ತಿದ್ದವು. ಬಹುಶಃ ಇಂತಹ ಪರಿಸ್ಥಿತಿಯಲ್ಲಿ ಜಂಟೀ ಅರಣ್ಯ ಯೋಜನೆಯ ಯಾವುದೇ ಅಧ್ಯಯನದಿಂದ ಈ ಸಂಸ್ಥೆಗಳು ದೂರ ಉಳಿಯಲು ನಿರ್ಧರಿಸಿದ್ದರೆ ಆಶ್ಚರ್ಯವೇನಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಅರಣ್ಯ ಇಲಾಖೆ ಒದಗಿಸಿದ ಮೂವತ್ತು ಹಳ್ಳಿಗಳ ಪಟ್ಟಿಯಲ್ಲಿ ಇದ್ದಿರ ಬಹುದಾದ ಯಾವುದೇ ಪೂರ್ವಗ್ರಹವನ್ನು ನಿವಾರಿಸುವ ಉದ್ದೇಶದಿಂದ, 30 ಹಳ್ಳಿಗಳಿಗೆ ಎಂಟು ಅಂಶಗಳ ಮಾನದಂಡವೊಂದನ್ನು ಅನ್ವಯಿಸಿ 23 ಹಳ್ಳಿಗಳನ್ನು ಆಯ್ಕೆ ಮಾಡಲಾಯಿತು.

ಕ್ಷೇತ್ರಕಾರ್ಯದ ಸಂದರ್ಶನಗಳಲ್ಲಿ ಕುಟುಂಬವನ್ನು ಒಂದು ಘಟಕವಾಗಿ ಪರಿಗಣಿಸಲಾಗಿದೆ. ಇದರಿಂದ, ಜಂಟೀ ಅರಣ್ಯ ಯೋಜನೆಗೆ ಸಂಬಂಧಪಟ್ಟಂತೆ ಕುಟುಂಬದೊಳಗೆ ಇರಬಹುದಾದ ಅಭಿಪ್ರಾಯ ಭೇದಗಳು ವ್ಯಕ್ತವಾಗುವ ಸಂದರ್ಭಗಳು ಕಡಿಮೆ. ಆದರೆ ಸಾಮಾನ್ಯವಾಗಿ ಸಂದರ್ಶನದ ಸಮಯದಲ್ಲಿ ಇಡೀ ಕುಟುಂಬವೇ ಇರುತ್ತಿದ್ದುದರಿಂದ, ಅಲ್ಲಿ ಕಂಡುಬಂದ ಅಭಿಪ್ರಾಯ ಭೇದಗಳನ್ನು ಪ್ರತ್ಯೇಕವಾಗಿ ದಾಖಲಿಸಲಾಗಿದೆ. ಇದರೊಡನೆ, ಎಲ್ಲೆಲ್ಲಿ, ಗ್ರಾಮ ಅರಣ್ಯ ಸಮಿತಿಯ ಸಭೆಗೆ ಮುಂಚಿತವಾಗಿ ಮಹಿಳೆಯರು ಪ್ರತ್ಯೇಕವಾಗಿ ಸೇರುತ್ತಿದ್ದರೋ ಅಂತಹ ಕಡೆಗಳಲ್ಲಿ ಅವರೊಡನೆ ಪ್ರತ್ಯೇಕವಾಗಿ ಸಂದರ್ಶನಗಳನ್ನು ನಡೆಸಲಾಗಿದೆ.

ಮಹಾಪ್ರಬಂಧದ ಸಂಘಟನೆ

ಪ್ರಸಾವನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿ ಹಾಗೂ ಜಂಟೀ ಅರಣ್ಯ ಯೋಜನೆಗಳ ಪ್ರಾರಂಭಿಕ ಪರಿಚಯ, ಸಂಶೋಧನೆಯ ಹಿನ್ನಲೆ, ಉದ್ದೇಶ, ಸಂದರ್ಭ ಹಾಗೂ ವಿಧಾನಗಳ ನಿರೂಪಣೆಗಳಿವೆ.

ಎಪ್ಪತ್ತರ ದಶಕದಲ್ಲಿ ಚಾಲನೆಗೆ ಬಂದ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಯ ಉಗಮ, ವಿಕಾಸ, ಸೈದ್ಧಾಂತಿಕ ಹಿನ್ನಲೆಗಳ ವಿಮರ್ಶಾತ್ಮಕ ಅವಲೋಕನೆ ಮೊದಲನೆಯ ಅಧ್ಯಾಯದಲ್ಲಿದೆ. ಸಹಭಾಗಿತ್ವ ಅಭಿವೃದ್ಧಿಯ ವಿವಿಧ ಅರ್ಥ ವಿವರಣೆಗಳನ್ನು ಪರಿಶೀಲಿಸುವುದರ ಜೊತೆಗೆ ಅಭಿವೃದ್ಧಿ ಸಾಹಿತ್ಯದಲ್ಲಿ ಭಾಗವಹಿಸುವಿಕೆ ಬಳಕೆಯಾಗಿರುವ ರೀತಿಯನ್ನು ಅಧ್ಯಯನ ಮಾಡಿ, ಸಹಭಾಗಿತ್ವದ ಪರಿಕಲ್ಪನೆಗೆ ಸ್ಪಷ್ಟವಾದ, ನಿಖರವಾದ ಅರ್ಥವಿವರಣೆ ನೀಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಎರಡನೆಯ ಅಧ್ಯಾಯ, ಕಳೆದೊಂದು ಶತಮಾನದ ಅವಧಿಯಲ್ಲಿ ಅರಣ್ಯ ನೀತಿಯಲ್ಲಾಗಿರುವ ಮಹತ್ವದ ಪರಿವರ್ತನೆಗಳನ್ನು ಗುರುತಿಸಿ, ವಾಖ್ಯಾನಿಸಿ, ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ನಮ್ಮ ದೇಶದಲ್ಲಿ, ಅದರಲ್ಲೂ ಮುಖ್ಯವಾಗಿ ಕರ್ನಾಟಕದಲ್ಲಿ ನಡೆದಿರುವ ಸಮಕಾಲೀನ ಅಧ್ಯಯನ ಗಳ ಸಮೀಕ್ಷೆಯನ್ನು ಒದಗಿಸುತ್ತದೆ.

ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಉದ್ದೇಶಗಳನ್ನು ಸಾಧಿಸಲು "ಜಂಟೀ ಅರಣ್ಯ ಯೋಜನೆ" ಅತಿ ಮುಖ್ಯ ಕಾರ್ಯ ತಂತ್ರವಾಗಿ ರೂಪುಗೊಂಡಿತು. ಈ ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿಯ ತತ್ವಗಳು ಸೂತ್ರೀಕರಣಗೊಂಡು, ಅಳವಡಿಕೆಗೊಂಡ ಪ್ರಕ್ರಿಯೆಗಳ ವಿವರಣೆ ಹಾಗೂ ವಿವರ ವಿಶ್ಲೇಷಣೆಗಳು ಮೂರನೆಯ ಅಧ್ಯಾಯದಲ್ಲಿವೆ. ಕರ್ನಾಟಕದ ಸಂದರ್ಭದಲ್ಲಿ ಜಂಟೀ ಅರಣ್ಯ ಯೋಜನೆಯ ವಿನ್ಯಾಸದ ದೌರ್ಬಲ್ಯಕ್ಕೆ ಕಾರಣಗಳು ಸಹಭಾಗಿತ್ವ ತತ್ವಗಳು ರೂಪುಗೊಂಡ ಈ ಹಂತದಲ್ಲಿಯೇ ಇರಬಾರದೇಕೆ ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನವೂ ಈ ಅಧ್ಯಾಯದಲ್ಲಿದೆ.

ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಪರೀಕ್ಷಿಸಲು ನಡೆಸಿದ ಕ್ಷೇತ್ರಕಾರ್ಯ, ಅದರಿಂದ ದೊರೆತ ಮಾಹಿತಿಗಳ ವಿವರಣೆ, ವಿಶ್ಲೇಷಣೆ ಹಾಗೂ ವಿಮರ್ಶೆಯನ್ನು ನಾಲ್ಕನೆಯ ಅಧ್ಯಾಯದಲ್ಲಿ ಮಾಡಲಾಗಿದೆ. ಸಮುದಾಯದ ಸಹಭಾಗಿತ್ವದ ಮೌಲ್ಯ ನಿರ್ಧರಣೆ ಯನ್ನು ಮಾಡಲು ಪ್ರಮಾಣಾತ್ಮಕ ಹಾಗೂ ಗುಣಾತ್ಮಕ ಸೂಚ್ಯಂಕಗಳನ್ನು ಬಳಸಿಕೊಳ್ಳಲಾಗಿದ್ದು ನಾಲ್ಕನೆಯ ಅಧ್ಯಾಯದಲ್ಲಿ ಪ್ರಮಾಣಾತ್ಮಕ ಸೂಚ್ಯಂಕಗಳು ನೀಡುವ ಭಾಗವಹಿಸುವಿಕೆಯ ವ್ಯಾಪ್ತಿ ಮತ್ತು ಪ್ರಮಾಣಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ.

ಮಹಾಪ್ರಬಂಧದ ಐದನೆಯ ಅಧ್ಯಾಯದಲ್ಲಿ ಸಮುದಾಯದ ಸಹಭಾಗಿತ್ವದ ಗುಣಮಟ್ಟವನ್ನು ಅಳೆಯುವ ಪ್ರಯತ್ನದ ವಿವರಗಳಿವೆ. ಈ ಉದ್ದೇಶಕ್ಕಾಗಿ ಗುಣಾತ್ಮಕ ಸೂಚ್ಯಂಕಗಳನ್ನು ಬಳಸಿ ಕೊಳ್ಳಲಾಗಿದೆ. ಭಾಗವಹಿಸುವಿಕೆಯ ಎಲ್ಲ ಆಯಾಮಗಳಿಗೂ ಅವಕಾಶವಿರುವ ಕಿರು ಯೋಜನೆ

ಯನ್ನು ಸಿದ್ಧಗೊಳಿಸುವ ಪ್ರಕ್ರಿಯೆಯನ್ನು ಪರಿಶೀಲಿಸಿದ ನಂತರ, ಭಾಗವಹಿಸುವಿಕೆಯನ್ನು ಪ್ರೇರೇಪಿಸುವ ಆರು ಅಂಶಗಳ ಮೇಲೆ ಆಧರಿತವಾದ ಮಾನದಂಡದ ಅನ್ವಯದಿಂದ ಭಾಗವಹಿಸು ವಿಕೆಯ ಗುಣಲಕ್ಷಣಗಳನ್ನು ವಿಶ್ಲೇಷಿಸಲಾಗಿದೆ. ಸಮುದಾಯದ ಸಹಭಾಗಿತ್ವ ಉತ್ತಮವಾಗಿರುವ ಯೋಜನೆಗಳು ಹೆಚ್ಚು ಯಶಸ್ವಿಯಾಗುತ್ತವೆ ಎಂಬ ಸಾಮಾನ್ಯವಾದ ಗ್ರಹಿಕೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸಲಾಗಿದೆ. ಈ ಅಧ್ಯಾಯದ ಕಡೆಯ ಭಾಗದಲ್ಲಿ ಕ್ಷೇತ್ರ ಕಾರ್ಯದ ಐದು ಹಳ್ಳಿಗಳಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಕಂಡುಬರುವ ಸಾಮ್ಯ ವ್ಯತ್ಯಾಸ, ಅನನ್ಯತೆಗಳನ್ನು ಸೈದ್ಧಾಂತಿಕವಾಗಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಈ ಸಂಶೋಧನೆಯಿಂದ ದೊರೆತ ಅರಿವಿನ ಬೆಳಕಿನಲ್ಲಿ, ಸಮುದಾಯದ ಸಹಭಾಗಿತ್ವಕ್ಕೆ ಅವಕಾಶವಿರುವ ಜಂಟೀ ಅರಣ್ಯ ಯೋಜನೆಯಂತಹ ಅಭಿವೃದ್ಧಿ ಯೋಜನೆಗಳನ್ನು ಮತ್ತಷ್ಟು ಪರಿಣಾಮಕಾರಿಯನ್ನಾಗಿ ಮಾಡಲು ಸಲಹೆ, ಸೂಚನೆಗಳನ್ನು ಆರನೆಯ ಹಾಗೂ ಅಂತಿಮ ಅಧ್ಯಾಯದಲ್ಲಿ ನೀಡಲಾಗಿದೆ.

ಕೋಷ್ಟಕ 1

ಗ್ರಾಮ ಅರಣ್ಯ ಸಮಿತಿಗಳ ಆಯ್ಕೆಗಾಗಿ ಬಳಸಿರುವ ಎಂಟು ಅಂಶಗಳ ಮಾನದಂಡ

1. 1.4.2001 ರಂತೆ ಗ್ರಾಮ ಅರಣ್ಯ ಸಮಿತಿ ಕನಿಷ್ಟ ಎರಡು ವರ್ಷಗಳಿಂದ ಕೆಲಸ ಮಾಡುತ್ತಿರಬೇಕು.
2. ಸಮಿತಿಯ ನೋಂದಣಿ ಆಗಿರಬೇಕು.
3. ಗ್ರಾಮ ಅರಣ್ಯ ಸಮಿತಿಯ ಸಭೆಗಳು ನಿಯಮಿತವಾಗಿ ನಡೆಯುತ್ತಿದ್ದು ದಾಖಲೆಗಳು ಲಭ್ಯವಿರಬೇಕು.
4. ಅರಣ್ಯ ಪ್ರದೇಶ, ನೆಡುತೋಪನ್ನು ರಕ್ಷಿಸುತ್ತಿರಬೇಕು.
5. ಸಾಮಾನ್ಯ ಸದಸ್ಯರಲ್ಲಿ ಕನಿಷ್ಟ ಶೇಕಡಾ 10 ರಷ್ಟು ಮಹಿಳೆಯರಿರಬೇಕು.
6. ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ ನಡೆದಿರಬೇಕು.
7. ಕಿರು ಯೋಜನೆ ಸಿದ್ಧವಾಗಿರಬೇಕು.
8. ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ಸೌಹಾರ್ದ ಒಡಂಬಡಿಕೆ ಸಹಿಯಾಗಿರಬೇಕು.

ಟಿಪ್ಪಣಿಗಳು

1. ಯುಎನ್‌ಡಿಪಿ, ಯುಎನ್‌ಡಿಪಿ ಗೈಡ್ ಬುಕ್ ಆನ್ ಪಾರ್ಟಿಸಿಪೇಶನ್, ನೈರೋಬಿ : ಯುನೈಟೆಡ್ ನೇಶನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್, 1992
2. ಬ್ಯಾಂಬರ್ಗರ್ ಎಂ., "ದಿ ರೋಲ್ ಆಫ್ ಕಮ್ಯುನಿಟಿ ಪಾರ್ಟಿಸಿಪೇಶನ್ ಇನ್ ಡೆವಲಪ್‌ಮೆಂಟ್

ಪ್ಲಾನಿಂಗ್ ಅಂಡ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್'' *ಸೆಮಿನಾರ್ ರಿಪೋರ್ಟ್ 13*, ವಾಷಿಂಗ್‌ಟನ್: ಇಕನಾಮಿಕ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್‌ಬ್ಯಾಂಕ್, 1988

3. ಮಾಧವ ಗಾಡ್ಗೀಳ್ ಮತ್ತು ರಾಮಚಂದ್ರ ಗುಹಾ, ದಿ ಫೀಶೂರ್ಡ್ ಲ್ಯಾಂಡ್ : ಆನ್ ಎಕಲಾಜಿಕಲ್ ಹಿಸ್ಟರಿ ಆಫ್ ಇಂಡಿಯಾ, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1992.

4. ಸಕ್ಸೇನಾ ಎಸ್.ಸಿ. ಮತ್ತು ಮಧು ಸರೀನ್, ''ದಿ ವೆಸ್ಟರ್ನ್ ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಇನ್ ಕರ್ನಾಟಕ: ಎ ಪ್ರಿಲಿಮನರಿ ಅಸೆಸ್‌ಮೆಂಟ್'', ಎ ನ್ಯೂ ಮಾರಲ್ ಇಕಾನಾಮಿ ಫಾರ್ ಇಂಡಿಯಾಸ್ ಫಾರೆಸ್ಟ್ಸ್*?* ರೋಜರ್ ಜೆಫ್ರಿ ಮತ್ತು ನಂದಿನಿ ಸುಂದರ(ಸಂ), ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1999

5. ಮೇರಿಟಿ ಕೋರಿಯ, ''ದಿ ನೀಡ್‌ಫಾರ್ ಎಮಾನ್ಸಿಪೇಟರಿ ರಿಸರ್ಚ್ : ಎಕ್ಸ್‌ಪೀರಿಯನ್ಸಸ್ ಫ್ರಮ್ ಜೆಎಫ್‌ಪಿಎಮ್ ಇನ್ ಉತ್ತರ ಕನ್ನಡ'', ಎ ನ್ಯೂ ಮಾರಲ್ ಇಕಾನಮಿ ಫಾರ್ ಇಂಡಿಯಾಸ್ ಫಾರೆಸ್ಟ್ಸ್*?* ರೋಜರ್ ಜೆಫ್ರಿ ಮತ್ತು ನಂದಿನಿ ಸುಂದರ್ (ಸಂ), ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್ 1999.

ಅಧ್ಯಾಯ 1

ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆ : ಉಗಮ ಮತ್ತು ವಿಕಾಸ

ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆ : ಉಗಮ ಮತ್ತು ವಿಕಾಸ

1950ರ ಮತ್ತು 60ರ ದಶಕಗಳಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಪ್ರೇರಕ ಶಕ್ತಿಯಾದದ್ದು ಆಧುನೀಕರಣ ಸಿದ್ಧಾಂತದ ಮುಖ್ಯ ಚಿಂತನೆಗಳು. ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಮೂಲ ಸೌಲಭ್ಯಗಳನ್ನು ಸಾಂಪ್ರದಾಯಿಕ ಸ್ಥಿತಿಯಿಂದ ಆಧುನಿಕತೆಯತ್ತ ಕೊಂಡೊಯ್ಯುವುದರಿಂದ ಮಾತ್ರ ಅಭಿವೃದ್ಧಿ ಸಾಧ್ಯ; ಇಂತಹ ಪರಿವರ್ತನೆಯಿಂದ ತೃತೀಯ ಜಗತ್ತಿನ ದೇಶಗಳು ಜಾಗತಿಕ ಅರ್ಥ ವ್ಯವಸ್ಥೆಯ ಮುಖ್ಯವಾಹಿನಿಗೆ ಸೇರಿ, ತ್ವರಿತಗತಿಯಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸಬಹುದು ಎಂಬ ನಿಲುವನ್ನು ಈ ಚಿಂತನೆಗಳು ಪ್ರತಿಪಾದಿಸಿದವು. ಆದರೆ ಈ ತತ್ವಗಳಿಗನುಸಾರವಾಗಿ ಕೈಗೊಂಡ ಅನೇಕ ಅಭಿವೃದ್ಧಿ ಯೋಜನೆಗಳು ನಿರೀಕ್ಷಿತ ಫಲ ನೀಡದೇ ವಿಫಲವಾದಾಗ ಆಧುನೀಕರಣ ಸಿದ್ಧಾಂತ ತೀವ್ರ ಪರಾಮರ್ಶೆ ಗೊಳಗಾಯಿತು. ಇದರ ಫಲವಾಗಿ ಆಧುನೀಕರಣ ಸಿದ್ಧಾಂತದ ಚೌಕಟ್ಟಿನಲ್ಲಿ ನಡೆಯುತ್ತಿದ್ದ ಅಭಿವೃದ್ಧಿ ಯೋಜನೆಗಳ ವೈಫಲ್ಯಕ್ಕೆ ಉತ್ತರವಾಗಿ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆ ವಿಕಾಸಗೊಂಡಿತು. ಅಭಿವೃದ್ಧಿಯ ಚಿಂತನೆಯಲ್ಲಿನ ಈ ಬೆಳವಣಿಗೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದರ ಜೊತೆಗೆ ಸಹಭಾಗಿತ್ವ ಅಥವಾ ಭಾಗವಹಿಸುವಿಕೆಯ ಪರಿಕಲ್ಪನೆಗೆ ಸ್ಪಷ್ಟವಾದ, ನಿಖರವಾದ ಅರ್ಥ ವಿವರಣೆ ನೀಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಭಿವೃದ್ಧಿ ಪರಿಕಲ್ಪನೆಯಲ್ಲಿನ ಬದಲಾವಣೆಗಳು

ಅಭಿವೃದ್ಧಿಯ ಇತಿಹಾಸವನ್ನು ಅವಲೋಕಿಸಿದಾಗ ಸಮಕಾಲೀನ ಚಿಂತನೆಗಳು, ಧೋರಣೆಗಳಿಗನು ಸಾರವಾಗಿ 'ಅಭಿವೃದ್ಧಿಯ' ಪರಿಭಾಷೆ, ಅರ್ಥ, ವ್ಯಾಖ್ಯಾನಗಳು ಬದಲಾಗಿರುವುದು ಕಂಡುಬರುತ್ತದೆ. "ವರಮಾನದ ಏರಿಕೆ ಮತ್ತು ಬಂಡವಾಳದ ವೃದ್ಧಿಯೇ ಅಭಿವೃದ್ಧಿ" ಎಂಬಲ್ಲಿಂದ ಹಿಡಿದು "ವ್ಯಕ್ತಿ ಮತ್ತು ಸಮುದಾಯದ ಭೌತಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯೇ ನಿಜವಾದ ಅಭಿವೃದ್ಧಿ" ಎನ್ನುವವರೆಗೆ ಈ ವ್ಯಾಖ್ಯಾನಗಳು ವಿಸ್ತರಿಸಿವೆ. ಒಂದು ಶತಮಾನದಷ್ಟು ಹಿಂದೆ "ಅಭಿವೃದ್ಧಿಯೆಂದರೆ ನಿಸರ್ಗ ಸಂಪನ್ಮೂಲಗಳ ಬೆಳವಣಿಗೆಯಿಂದ ದೊರೆಯುವ ಆರ್ಥಿಕ ಲಾಭ" ವೆಂಬ ಅರ್ಥವಿತ್ತು. ಎರಡನೇ ಮಹಾಯುದ್ಧದ ನಂತರ ಅಭಿವೃದ್ಧಿ ಹೊಸ ಅರ್ಥ

ಪಡೆಯಲಾರಂಭಿಸಿತು. "ನಿಸರ್ಗ ಸಂಪನ್ಮೂಲಗಳ ವ್ಯಾಪಕ ಶೋಷಣೆಯ ಫಲವಾಗಿ ಅಂತಿಮವಾಗಿ ದೊರೆಯುವ ಪ್ರಾಪಂಚಿಕ ಆಸ್ತಿ ಹಾಗೂ ಐಹಿಕ ಸುಖ ಸಂಪತ್ತುಗಳೇ" ಅಭಿವೃದ್ಧಿಯಾಯಿತು.[1] "ಅಭಿವೃದ್ಧಿಯ ಪರಿಕಲ್ಪನೆಯಲ್ಲಿನ ಈ ಮಹತ್ವದ ಬದಲಾವಣೆ, ಅಮೇರಿಕದ ಸಂಯುಕ್ತ ಸಂಸ್ಥಾನದ ಅಂದಿನ ಅಧ್ಯಕ್ಷ ಹ್ಯಾರಿ ಟ್ರೂಮನ್ 1949ರ ಜನವರಿ 20 ರಂದು, ತಮ್ಮ ಅಧಿಕಾರ ಗ್ರಹಣದ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ಮೊಟ್ಟಮೊದಲಿಗೆ ವ್ಯಕ್ತವಾಯಿತೆಂದು ಬಹುತೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ".[2] ಹ್ಯಾರಿ ಟ್ರೂಮನ್ ತಮ್ಮ ಭಾಷಣದಲ್ಲಿ ಸಗಟು ರಾಷ್ಟ್ರೋತ್ಪನ್ನವನ್ನು ಆಧರಿಸಿ ಪ್ರಪಂಚದ ದೇಶಗಳನ್ನು 'ಅಭಿವೃದ್ಧಿ ಹೊಂದಿದ' (ಡೆವಲಪ್ಡ್), ಮತ್ತು 'ಕಡಿಮೆ ಅಭಿವೃದ್ಧಿ ಹೊಂದಿದ'(ಅಂಡರ್ ಡೆವಲಪ್ಡ್) ದೇಶಗಳೆಂದು ವರ್ಗೀಕರಿಸಿದರು. "ಹೆಚ್ಚಿನ ಉತ್ಪಾದನೆಯೇ ಶಾಂತಿ ಮತ್ತು ಶ್ರೀಮಂತಿಕೆಗಳ ಕೀಲಿಕೈ. ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳ ಜನರ ಬಡತನದ ಬವಣೆಗಳ ನಿವಾರಣೆಗೆ ಕೈಗಾರಿಕೀಕರಣವೇ ಏಕಮಾತ್ರ ದಾರಿ. ಅಮೆರಿಕ ಈ ದಿಕ್ಕಿನಲ್ಲಿ ಈ ದೇಶಗಳಿಗೆ ನೆರವಾಗಲು ಸಿದ್ಧವಿದೆ" ಎಂದು ಘೋಷಿಸಿದರು.[3]

ಹೆಚ್ಚಿನ ಸಗಟು ರಾಷ್ಟ್ರೋತ್ಪನ್ನವನ್ನು ಹೊಂದಿರುವ ದೇಶಗಳು 'ಅಭಿವೃದ್ಧಿ' ಹೊಂದಿದ ದೇಶಗಳಾದರೆ ಬಡದೇಶಗಳಿಗೆ ಬೇಕಿರುವುದು ಅಭಿವೃದ್ಧಿ. ಕಡಿಮೆಯ ಆದಾಯ ಸಮಸ್ಯೆಯಾದರೆ ಅದಕ್ಕಿರುವ ಏಕೈಕ ಪರಿಹಾರ ಆರ್ಥಿಕ ಅಭಿವೃದ್ಧಿ. ಈ ಚಿಂತನೆ ಕಡಿಮೆಯ ಆದಾಯ ಹಾಗೂ ಅದರಿಂದ ಕಂಡುಬರುವ ಬಡತನ, ದಾಸ್ಯ, ಶೋಷಣೆಗಳಿಂದಲೂ ಆಗಿರಬಹುದು ಅಥವಾ ಸಮುದಾಯವೊಂದು ಲಭ್ಯವಿರುವ ಸಂಪನ್ಮೂಲಗಳನ್ನು ದೀರ್ಘಾವಧಿಯ ಭವಿಷ್ಯದ ದೃಷ್ಟಿಯಿಂದ ಬೇಕೆಂದೇ ಹಿತಮಿತವಾಗಿ ಬಳಸುತ್ತಿರುವುದರಿಂದ ಆಗಿರಬಹುದು ಅಥವಾ ಆರ್ಥಿಕ ವಲಯವನ್ನು ಬಿಟ್ಟು ಬೇರೊಂದು ಕ್ಷೇತ್ರದಲ್ಲಿನ ಸಾಧನೆಗಾಗಿ ತಮ್ಮೆಲ್ಲ ಗಮನವನ್ನು ಕೇಂದ್ರೀಕರಿಸಿರುವುದರಿಂದಲೂ ಆಗಿರಬಹುದು ಎಂಬ ಅಂಶಗಳನ್ನು ಪರಿಗಣಿಸಲೇ ಇಲ್ಲ.[4]

ಕೈಗಾರಿಕೀಕರಣವನ್ನಾಧರಿಸಿದ ಆರ್ಥಿಕ ಪ್ರಗತಿಯ ನೆಲೆಯಿಂದ ಹ್ಯಾರಿ ಟ್ರೂಮನ್ ಮಾಡಿದ ಈ ವಿಂಗಡನೆ, ಪ್ರಪಂಚದ ವಿವಿಧ ಭಾಗಗಳಲ್ಲಿ ಬಡಜನರು ಬದುಕಿನ ಹೋರಾಟದಲ್ಲಿ ರೂಪಿಸಿಕೊಂಡಿರುವ ಸಂಪನ್ಮೂಲಗಳ ಬಳಕೆಯಲ್ಲಿನ ವೈವಿಧ್ಯವನ್ನಾಗಲೀ, ಈ ದಿಕ್ಕಿನಲ್ಲಿ ಸ್ಥಳೀಯ ಸಮುದಾಯಗಳು ಎದುರಿಸುತ್ತಿರುವ ಸವಾಲುಗಳ ಬಗೆಗಾಗಲೀ ಒಂದಿಷ್ಟೂ ಚಿಂತಿಸದೇ ಅಮೆರಿಕಾ ಹಾಗೂ ಇನ್ನಿತರ ಶ್ರೀಮಂತ ರಾಷ್ಟ್ರಗಳ ಐಹಿಕ ಸಂಪತ್ತಿನ ಮಟ್ಟವೇ ಉಳಿದೆಲ್ಲ ಬಡದೇಶಗಳು ಪ್ರಜ್ಞಾಪೂರ್ವಕವಾಗಿ ತಲುಪಲು ಬಯಸುವ ಗುರಿ ಎಂಬ ಧೋರಣೆಯನ್ನು ಪ್ರಚುರಪಡಿಸಿತು. ಅದುವರೆವಿಗೂ ಕೇವಲ ವಿವರಣಾತ್ಮಕವಾಗಿ ಉಳಿದಿದ್ದ 'ಅಭಿವೃದ್ಧಿ ಹೊಂದಿದ', 'ಕಡಿಮೆ ಅಭಿವೃದ್ಧಿಯ', 'ಅಭಿವೃದ್ಧಿ ಹೊಂದುತ್ತಿರುವ' ಮುಂತಾದ ಪದಗಳು ವಿಶೇಷ ಅರ್ಥವನ್ನು ಪಡೆದುಕೊಂಡವು. 'ಕಡಿಮೆ ಅಭಿವೃದ್ಧಿ ಹೊಂದಿದ' ಎಂಬಪದ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ

ಜೀವನ ಮಟ್ಟ, ಸೇವಾ ಸೌಕರ್ಯಗಳನ್ನು ಮುಟ್ಟುವುದರಲ್ಲಿ ತೃತೀಯ ದೇಶಗಳ ವೈಫಲ್ಯವನ್ನು ಸೂಚಿಸಿತು. ಕಡಿಮೆ ಅಭಿವೃದ್ಧಿ ಹೊಂದಿದ ಸ್ಥಿತಿಯನ್ನು ಅಭಿವೃದ್ಧಿ ಹೊಂದಿದ ದೇಶಗಳೊಡನೆ ಹೋಲಿಕೆಯಿಂದ ಮಾತ್ರ ಗುರುತಿಸಲು ಸಾಧ್ಯವಾದ್ದರಿಂದ ಕಡಿಮೆ ಅಭಿವೃದ್ಧಿ ಹೊಂದಿದ ದೇಶ ಕಡಿಮೆ ಅಂತಸ್ತನ್ನು ಪಡೆಯಿತು. ಇದರಿಂದ ಅಭಿವೃದ್ಧಿಯನ್ನು ಅರ್ಥೈಸುವ ಪ್ರಕ್ರಿಯೆಯನ್ನೇ ಉತ್ತರದ ಶ್ರೀಮಂತ ರಾಷ್ಟ್ರಗಳ ಯಜಮಾನಿಕೆ ಪ್ರಭಾವಿಸಿತು. ಭಾರತವೂ ಸೇರಿದಂತೆ ಆಗತಾನೇ ಸ್ವಾತಂತ್ರ್ಯ ಪಡೆದು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯಲು ಹಾತೊರೆಯುತ್ತಿದ್ದ ದಕ್ಷಿಣದ ಬಹುತೇಕ ದೇಶಗಳಲ್ಲಿ ಅಧಿಕಾರ ಹಿಡಿದಿದ್ದ ನಾಯಕರು ಉತ್ತರದ ಈ ನಿಲುವನ್ನೇ ಒಪ್ಪಿಕೊಂಡರು. "ಕಡಿಮೆಯ ಅಭಿವೃದ್ಧಿಯೇ ಸಮಸ್ಯೆ. ಬೆಳವಣಿಗೆಯೇ ಅದಕ್ಕಿರುವ ಪರಿಹಾರ. ಈ ಪರಿಹಾರವನ್ನು ಅನ್ವಯಿಸುವ ಪ್ರಕ್ರಿಯೆಯಲ್ಲಿ ರಾಚನಿಕ ಹೊಂದಾಣಿಕೆಗಳು, ಸಾಂಘಿಕ ಮತ್ತು ಸಾಂಸ್ಥಿಕ ರಚನೆಗಳಲ್ಲಿ ಬದಲಾವಣೆ ಮುಂತಾದವು ಅಗತ್ಯ. ಇದನ್ನು ಮಾಡುವಾಗ ಆಯಾ ದೇಶಗಳ ವಿಶಿಷ್ಟ ಸಂಪ್ರದಾಯಗಳು, ಆಚರಣೆಗಳು, ಸಂಪನ್ಮೂಲಗಳ ಬಳಕೆಯಲ್ಲಿನ ವೈವಿಧ್ಯಗಳು, ಸಮಾಜದ ತಲರಚನೆಯ ವಿನ್ಯಾಸ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಅಭಿವೃದ್ಧಿಯ ಯಾಂತ್ರಿಕ ಮಾದರಿಗಳಲ್ಲಿ ವಿಲೀನವಾಗಿ ಹೋಗುವುದನ್ನು ದಕ್ಷಿಣದ ನಾಯಕರು ಒಪ್ಪಿಕೊಂಡರು".[5]

ಅಧ್ಯಕ್ಷ ಹ್ಯಾರಿ ಟ್ರೂಮನ್ ಬಳಸಿದ "ಕಡಿಮೆ ಅಭಿವೃದ್ಧಿ ಹೊಂದಿದ" (ಅಂಡರ್ ಡೆವಲಪ್ಡ್) ಎಂಬ ವಾಕ್ಸರಣಿ ಬಹುಬೇಗ ಜನಪ್ರಿಯವಾಯಿತು. ಕಡಿಮೆ ಅಭಿವೃದ್ಧಿ ಹೊಂದಿದ ದೇಶವನ್ನು ಉತ್ತರದ ಅಭಿವೃದ್ಧಿ ಹೊಂದಿದ ದೇಶಗಳೊಡನೆ ಹೋಲಿಸಿ, ಪರಿಶೀಲಿಸುವ ಪ್ರಕ್ರಿಯೆಯೂ ಪ್ರಾರಂಭವಾಯಿತು. ಇದರಲ್ಲಿ ದಕ್ಷಿಣದ ದೇಶಗಳು ಸಮಸ್ಯೆಯ ಚೌಕಟ್ಟನ್ನೊದಗಿಸಿದರೆ ಉತ್ತರದ ದೇಶಗಳು ಪರಿಹಾರದ ಚೌಕಟ್ಟು. ಯೂರೋಪ್ ಮತ್ತು ಅಮೆರಿಕಾ ಅನುಸರಿಸಿದ ಪ್ರಗತಿಯ ದಾರಿ ಸ್ಪಷ್ಟವಾಗಿರುವುದರಿಂದ ಪರಿಹಾರವೂ ಬಹು ಸ್ಪಷ್ಟ. ದಕ್ಷಿಣದ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಉತ್ತರದ ದೇಶಗಳು ಅಭಿವೃದ್ಧಿಯನ್ನು ಸಾಧಿಸಿದ ರೀತಿಯನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಂಡು ಅದೇ ಮಾರ್ಗದಲ್ಲಿ ನಡೆದರೆ ಸಾಕು. ಇದರಿಂದ ಉತ್ತರದ ದೇಶಗಳ ಪ್ರಗತಿಯನ್ನೇ ನಕಲು ಮಾಡಿ ಅದೇ ಮಟ್ಟವನ್ನು ಮುಟ್ಟಬಹುದು! ದಕ್ಷಿಣದ ಬಹುತೇಕ ದೇಶಗಳು ಹಿಡಿದದ್ದು ಈ ಮಾರ್ಗವನ್ನೇ! ಆಧುನೀಕರಣ ಸಿದ್ಧಾಂತ ಈ ಮಾದರಿಯ ಬೆಳವಣಿಗೆಗೆ ಪುಷ್ಟಿ ನೀಡಿ ಪ್ರೋತ್ಸಾಹಿಸಿತು.

1950 ಮತ್ತು 60ರ ದಶಕಗಳ ಮಹತ್ವಪೂರ್ಣ ಚಿಂತನೆಗಳಲ್ಲಿ ಆಧುನೀಕರಣ ಸಿದ್ಧಾಂತವೂ ಒಂದು. ಈ ಸಿದ್ಧಾಂತ 'ಅಭಿವೃದ್ಧಿಯನ್ನು ಅನುಕ್ರಮವಾದ ಐದು ಹಂತಗಳ ಮೂಲಕವಾಗಿ ಆಧುನಿಕತೆಯತ್ತ ಸಾಗುವ ಪ್ರಯಾಣವಾಗಿ ಪರಿಗಣಿಸುತ್ತದೆ'. ಅಭಿವೃದ್ಧಿಯನ್ನು ಸಾಧಿಸಲು ಎಲ್ಲ ಸಮಾಜ/ದೇಶಗಳೂ ಈ ಹಂತಗಳ ಮೂಲಕವಾಗಿಯೇ ಸಾಗಬೇಕು. ಈಗಾಗಲೇ ಪ್ರಗತಿಯನ್ನು

ಸಾಧಿಸಿರುವ ಆಧುನಿಕ ಪಾಶ್ಚಾತ್ಯ ರಾಷ್ಟ್ರಗಳೇ ಈ ಹಾದಿಯಲ್ಲಿನ ಅಂತಿಮ ಘಟ್ಟ. ಅದನ್ನು ತಲುಪುವುದೇ ಉಳಿದೆಲ್ಲ ರಾಷ್ಟ್ರಗಳ ಗುರಿ. ಆದರೆ "ಆಧುನಿಕ ಪಾಶ್ಚಾತ್ಯ ಪ್ರಪಂಚದತ್ತ ನಡೆಯುವ ದಾರಿಯಲ್ಲಿನ ಬಹುದೊಡ್ಡ ಅಡಚಣೆಯೆಂದರೆ ಸಾಂಪ್ರದಾಯಿಕವಾದ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳು. ಹೀಗಾಗಿ ಅಭಿವೃದ್ಧಿಯನ್ನು ಸಾಧಿಸಲು ಅವುಗಳ ಜಾಗದಲ್ಲಿ ಆಧುನಿಕವಾದ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳನ್ನು ತರಬೇಕು'.[6] ಯಾವುದು ಈ ಆಧುನಿಕ ಸಂಬಂಧಗಳು? ಸಂಬಂಧ ಆಧರಿತ ವ್ಯವಹಾರದ ಬದಲು ಒಪ್ಪಂದ ಆಧರಿತ ವ್ಯವಹಾರ, ವ್ಯವಹಾರದಲ್ಲಿ ಹಣದ ಬಳಕೆ, ಅವಿಭಕ್ತ ಕುಟುಂಬಗಳ ಬದಲಿಗೆ ವಿಭಕ್ತ ಕುಟುಂಬಗಳು, ಸಹಬಾಳ್ವೆಗಿಂತ ಸ್ಪರ್ಧಾತ್ಮಕ ಬದುಕಿಗೆ ಒತ್ತು, ಸಮುದಾಯಕ್ಕಿಂತ ವ್ಯಕ್ತಿ ಪ್ರಧಾನ ವ್ಯವಸ್ಥೆಗೆ ಪ್ರಾಧಾನ್ಯತೆ ಇತ್ಯಾದಿ. ಈ ಪರಿವರ್ತನೆಗಳು ಬಂದಾಗ ಸಮಾಜ ಆಧುನೀಕರಣಗೊಳ್ಳುತ್ತದೆ. ತಾಂತ್ರಿಕ ಆಧುನೀಕರಣವನ್ನು ಆಧರಿಸಿದ ಆಧುನಿಕರಣ ಸಿದ್ಧಾಂತದಂತೆ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯನ್ನು ಅಳವಡಿಸುವುದರಿಂದ ಯಾವುದೇ ಸಮಾಜದಲ್ಲಿ ಈ ಪರಿವರ್ತನೆಗಳನ್ನು ತಂದು ಅದನ್ನು ಆಧುನೀಕರಣಗೊಳಿಸಬಹುದು.

60ರ ದಶಕದಲ್ಲಿ, ಆಧುನೀಕರಣ ತತ್ತ್ವಗಳಿಂದ ಪ್ರೇರಣೆ ಪಡೆದು, ತೃತೀಯ ಜಗತ್ತಿನ ನವೋದಿತ ರಾಷ್ಟ್ರಗಳು ಹಿಡಿದ ಅಭಿವೃದ್ಧಿಯ ಮಾರ್ಗವನ್ನು ಗಮನಿಸಿದ ಡಾ|| ಕ್ಲಾರ್ಕ್‌ಕೆರ್ (1960) ಹೀಗೆನ್ನುತ್ತಾರೆ. "ಇತಿಹಾಸದ ಉದ್ದಕ್ಕೂ ಮನುಷ್ಯ ಒಂದು ನಿರ್ದಿಷ್ಟ ಜೀವನ ಶೈಲಿಗೆ ಬದ್ಧನಾಗಿ ಬದುಕುತ್ತಾ ಬಂದಿದ್ದಾನೆ. ಆದರೆ ಶಾಶ್ವತವೆಂದುಕೊಂಡಿದ್ದ, ಪುರಾತನವಾದ ಅಂಥವೆಲ್ಲ ಬದ್ಧತೆಗಳನ್ನು ಬದಿಗೊತ್ತಿ, ನಾಶಪಡಿಸುವ ಪ್ರಬಲ ಪ್ರಕ್ರಿಯೆ ಇದೀಗ ಪ್ರಾರಂಭವಾಗಿದೆ. ತೃತೀಯ ಜಗತ್ತಿನಾದ್ಯಂತ ಸ್ಥಳೀಯ ವೈವಿಧ್ಯಗಳನ್ನು ಗಮನಿಸದ ಈ ಪ್ರಕ್ರಿಯೆ ಮನುಷ್ಯನ ಇತಿಹಾಸದ ಈ ಅವಧಿಯನ್ನು ಉಳಿದವುಗಳಿಂದ ಪ್ರತ್ಯೇಕಿಸಿದೆ. ಪ್ರಪಂಚದಾದ್ಯಂತ ಜನರು ತಮ್ಮ ಜೀವನ ವಿಧಾನಗಳನ್ನು ಸಂಪೂರ್ಣವಾಗಿ ಕೈಗಾರಿಕೀಕರಣದಿಂದ ರೂಪುಗೊಂಡ ಜೀವನ ಶೈಲಿಗೆ ಪರಿವರ್ತಿಸಿಕೊಳ್ಳುತ್ತಿದ್ದಾರೆ. ಈ ಪರಿವರ್ತನೆಯಿಂದ ಅಂತಿಮವಾಗಿ ತೃತೀಯ ಜಗತ್ತಿಗೆ ಆಗುವ ಪ್ರಯೋಜನಗಳನ್ನು ಗಮನಿಸಿದರೆ ಸ್ಥಳೀಯ ಭಿನ್ನಾಭಿಪ್ರಾಯಗಳು, ಚಳವಳಿಗಳು, ಘರ್ಷಣೆಗಳು ಸಂಪೂರ್ಣವಾಗಿ ಅಪ್ರಾಮುಖ್ಯವಾಗುತ್ತದೆ".[7]

ಆಧುನೀಕರಣ ಸಿದ್ಧಾಂತ ತೃತೀಯ ಜಗತ್ತಿನ ನವೋದಿತ ರಾಷ್ಟ್ರಗಳ ಸಾಮಾಜಿಕ ವಸ್ತುಸ್ಥಿತಿ ಮತ್ತು ಅಭಿವೃದ್ಧಿಯ ಪ್ರಯತ್ನಗಳನ್ನು ಸೈದ್ಧಾಂತಿಕವಾಗಿ ವಿವರಿಸಲು ಪ್ರಥಮ ಜಗತ್ತಿನ ವಿದ್ವಾಂಸರು ಮಾಡಿದ ಒಂದು ಪ್ರಯತ್ನ. ಯೂರೋಪ್ ಮತ್ತು ಅಮೆರಿಕಾಗಳ ಅನುಭವವನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡ ವಾಲ್ಟ್ ರೋಸ್ಟೋವನ 'ಯೂನಿ ಲೀನಿಯರ್' ಮಾದರಿ, ಒಂದು ದೇಶದ ಆರ್ಥಿಕ ಅಭಿವೃದ್ಧಿ ವಿವಿಧ ಹಂತಗಳ ಮೂಲಕ ಹೇಗೆ ಸಾಗುತ್ತದೆ ಎಂಬುದನ್ನು

ಪ್ರತಿಪಾದಿಸಿತು. 'ದಿ ಸ್ಟೇಜಸ್ ಆಫ್ ಇಕನಾಮಿಕ್ ಗ್ರೋತ್ : ಎ ನಾನ್ ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ' ಎಂಬ ಶೀರ್ಷಿಕೆಯ ತಮ್ಮ ಗ್ರಂಥದಲ್ಲಿ ಈ ಐದು ಹಂತಗಳನ್ನು 'ದಿ ಟ್ರಡಿಷನಲ್ ಸೊಸೈಟಿ', 'ದಿ ಪ್ರಿಕಂಡಿಷನ್ಸ್ ಫಾರ್ ಟೇಕ್ ಆಫ್','ಟೇಕ್ ಆಫ್', 'ದಿ ಡ್ರೈವ್ ಟು ಮೆಚೂರಿಟಿ' ಮತ್ತು 'ದಿ ಏಜ್ ಆಫ್ ಹೈಮಾಸ್ ಕನ್ಸಂಪ್ಷನ್' ಎಂದು ಗುರುತಿಸಿದರು. ತೃತೀಯ ವಿಶ್ವದ ರಾಷ್ಟ್ರಗಳು ಸಾಂಪ್ರದಾಯಿಕ ಹಂತದಲ್ಲಿದ್ದು ಅವು ಎರಡನೆಯ ಹಂತಕ್ಕೆ ಹೋಗಲು ಕೆಲವು ಪೂರ್ವಷರತ್ತುಗಳನ್ನು ಪೂರೈಸಬೇಕು". "ಈ ಪೂರ್ವಷರತ್ತುಗಳೆಂದರೆ ವ್ಯಾಪಾರೋದ್ಯಮದ ಬೆಳವಣಿಗೆ, ವೈಜ್ಞಾನಿಕ ಮತ್ತು ವೈಚಾರಿಕ ಆಲೋಚನೆಗಳಿಗೆ ಪ್ರಾಶಸ್ತ್ಯ, ಸಂಪತ್ತನ್ನು ಮನಸೋ ಇಚ್ಛೆಯಂತೆ ಪೋಲು ಮಾಡದೆ ಅದರ ಮರು ಹೂಡಿಕೆ ಮಾಡುವ ಗಣ್ಯರ ಗುಂಪುಗಳ ಉದಯ".[8] "ಈ ಇಡೀ ಪ್ರಕ್ರಿಯೆಯ ವೇಗವನ್ನು ಪಾಶ್ಚಿಮಾತ್ಯ ಆಲೋಚನೆ, ವಿಚಾರಧಾರೆ ಹಾಗೂ ಬಂಡವಾಳಗಳು ಹೆಚ್ಚಿಸುತ್ತವೆ" ಎಂಬ ವಾದವೂ ಮಂಡಿತವಾಯಿತು.[9] ಆಧುನೀಕರಣ ಸಿದ್ಧಾಂತವನ್ನು ಬೆಂಬಲಿಸಿದ ವಿದ್ವಾಂಸರು "ಕೈಗಾರಿಕೀಕರಣ, ಪಾಶ್ಚಿಮಾತ್ಯ ವಿಚಾರಗಳಾದ ವ್ಯಕ್ತಿ ಸ್ವಾತಂತ್ರ್ಯ, ಸಮಾನಾವಕಾಶ, ಸಮಾನ ಮೌಲ್ಯಗಳು ಕಾನೂನಿನ ನಿಯಮಗಳಿಗನುಸಾರವಾಗಿ ನಡೆಯುವ ವ್ಯವಸ್ಥೆ ಮುಂತಾದವುಗಳನ್ನು ಬೆಳೆಸಿ ಆ ಮೂಲಕವಾಗಿ ಸಾಮಾಜಿಕ ಅಶಾಂತಿ ಮತ್ತು ವರ್ಗ ಸಂಘರ್ಷಗಳನ್ನು ಕಡಿಮೆ ಮಾಡುತ್ತದೆಂದು ವಾದಿಸಿದರು."[10]

ವಾಲ್ಟ್ ರೋಸ್ಟೋವ್ ತನ್ನ ' ಆರ್ಥಿಕ ಬೆಳವಣಿಗೆಯ ಹಂತ'ಗಳಿಗೆ ಸಂಬಂಧಿಸಿದ ಚಿಂತನೆಯನ್ನು ಮಂಡಿಸಿದ್ದು ಯೂರೋಪಿನ ಹದಿನೈದು ದೇಶಗಳಲ್ಲಿನ ಅಭಿವೃದ್ಧಿ ಪ್ರಕ್ರಿಯೆಯ ಅಧ್ಯಯನ, ವಿಶ್ಲೇಷಣೆಗಳ ನಂತರ. 'ಸ್ವಯಂ ಪೋಷಕ ಆರ್ಥಿಕ ಅಭಿವೃದ್ಧಿಯ'ಹಂತಕ್ಕೆ (ಸೆಲ್ಫ್ ಸಸ್ಟೈನಿಂಗ್ ಇಕಾನಾಮಿಕ್ ಡೆವಲಪ್‌ಮೆಂಟ್) 'ಟೇಕ್ ಆಫ್' ಮಾಡಲು ಅಗತ್ಯವಾದ ಪೂರ್ವ ಷರತ್ತುಗಳನ್ನು ಪೂರೈಸಿಕೊಳ್ಳುವ ಮಾರ್ಗವನ್ನು ಈ ಮಾದರಿ ತೋರಿಸಿತು. "ರೋಸ್ಟೋವನ ಅಧ್ಯಯನ ಹಣಕಾಸಿನ ಪರಿಸ್ಥಿತಿಯ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದರೆ ಹಲವಾರು ಸಮಾಜ ವಿಜ್ಞಾನಿಗಳು ಆಧುನೀಕರಣಕ್ಕೆ ಅಗತ್ಯವಾದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನಸಿಕ ಪರಿಸ್ಥಿತಿಗಳತ್ತ ತಮ್ಮ ಗಮನಹರಿಸಿದರು. ಅಭಿವೃದ್ಧಿಕರ್ತರ (ಡೆವಲಪರ್) ಪಾತ್ರ ನಿರ್ವಹಿಸುತ್ತಿದ್ದವರಿಗೆ ಎದುರಾದ ದೊಡ್ಡ ಅಡಚಣೆಯೆಂದರೆ ಅಭಿವೃದ್ಧಿ ಪ್ರಕ್ರಿಯೆಗೆ ಒಳಪಡುತ್ತಿದ್ದ ಜನರ ನಂಬಿಕೆ ಹಾಗೂ, ಮನೋಭಾವಗಳು."[11] ತೃತೀಯ ಜಗತ್ತಿನ ಜನ ಸಾಮಾನ್ಯರು ಕೈಗಾರಿಕೀಕರಣವನ್ನು ಒಪ್ಪಿಕೊಂಡು ಅದರಲ್ಲಿ ಭಾಗವಹಿಸಬೇಕಿದ್ದರೆ ಅವರಲ್ಲಿ ಆಧುನಿಕ ವಿಚಾರಗಳನ್ನು ಬಿತ್ತಿ ಬೆಳೆಸಬೇಕಿತ್ತು.

ಆಧುನೀಕರಣ ಸಿದ್ಧಾಂತದ ಮುಖ್ಯ ಪರಿಣಾಮಗಳಲ್ಲಿ ಒಂದೆಂದರೆ 'ಅಭಿವೃದ್ಧಿ ಪರಿಣಿತ' (ಡೆವಲಪ್‌ಮೆಂಟ್ ಎಕ್ಸ್‌ಪರ್ಟ್) ಮತ್ತು ಅಭಿವೃದ್ಧಿಯ ಅಗತ್ಯವಿರುವ ಜನ ಸಮುದಾಯದ ನಡುವೆ ಸೃಷ್ಟಿಯಾದ ಅಭಿಪ್ರಾಯ ಭೇದ. ಅಭಿವೃದ್ಧಿ ಪರಿಣಿತನೆಂದು ಕರೆಸಿಕೊಳ್ಳುವ ವ್ಯಕ್ತಿ ತನ್ನ

ಆಧುನಿಕ ಶಿಕ್ಷಣ ಮತ್ತು ವೈಚಾರಿಕತೆಯಿಂದ ಜನಸಾಮಾನ್ಯರಿಗೇನು ಬೇಕು ಎಂಬುದನ್ನು ಸ್ಪಷ್ಟವಾಗಿ ಕಾಣಬಲ್ಲ ಸಾಮರ್ಥ್ಯ ಹೊಂದಿದ್ದ. ಆದರೆ ತೃತೀಯ ಜಗತ್ತಿನ ದೇಶಗಳ ಪ್ರಜೆಗಳಿಗೆ ಈ ಆಧುನೀಕರಣವನ್ನು ಒಪ್ಪಿಕೊಂಡು, ಅಳವಡಿಸಿಕೊಳ್ಳಲು ಅವರ ಸಾಂಪ್ರದಾಯಿಕ ದೃಷ್ಟಿಕೋನ ಅಡ್ಡ ಬರುತಿತ್ತು. ಸಾಂಪ್ರದಾಯಿಕ ನೆಲೆಯಲ್ಲಿ ನಿಂತ ಜನರಿಗೆ ಈ ಆಧುನೀಕರಣ ಪ್ರಕ್ರಿಯೆ ಅರ್ಥವಾಲಿಲ್ಲ; ಅರ್ಥಮಾಡಿಕೊಳ್ಳುವ ಸಾಮರ್ಥ್ಯವೂ ಅವರಲ್ಲಿ ಇರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಮಾಜದ ಆರ್ಥಿಕ ಸಂಬಂಧಗಳಲ್ಲಿ ಪರಿವರ್ತನೆಯನ್ನು ತರುವ ಮುನ್ನ, ಶಿಕ್ಷಣ ಹಾಗೂ ಸಂವಹನಗಳ ಮೂಲಕ ಜನರನ್ನು ಈ ಬದಲಾವಣೆಗಳಿಗೆ ತೆರೆದುಕೊಳ್ಳುವಂತೆ ಮಾಡುವುದು ಅಗತ್ಯವಾಗಿತ್ತು. "ಆಧುನೀಕರಣ ಸಿದ್ಧಾಂತ ಪ್ರೇರಿತ ಪ್ರಗತಿಯ ಫಲಗಳನ್ನು ಅನುಭವಿಸಲು ಜನಸಾಮಾನ್ಯರು ಹೊರ ಜಗತ್ತಿನತ್ತ ದೃಷ್ಟಿ ಹರಿಸಬೇಕು, ಜಾತ್ಯತೀತ ಆಡಳಿತವನ್ನು ಒಪ್ಪಬೇಕು, ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳಲ್ಲಿ ರಕ್ತ ಸಂಬಂಧೀ ಗುಂಪುಗಳಿಗಿಂತ ರಾಜಕೀಯ ಘಟಕಗಳಿಗೆ ಪ್ರಾಶಸ್ತ್ಯ ದೊರೆಯಬೇಕು, ಸ್ಥಳೀಯ ಜ್ಞಾನಕ್ಕಿಂತ ಹೆಚ್ಚಾಗಿ ವೈಜ್ಞಾನಿಕ ತಿಳುವಳಿಕೆಗೆ ಮಹತ್ವ ನೀಡಬೇಕು"[12] ಒಟ್ಟಾರೆಯಾಗಿ ಆಧುನೀಕರಣ ಸಿದ್ಧಾಂತವನ್ನು ಒಪ್ಪಿಕೊಂಡು ಅದನ್ನು ಅಳವಡಿಸಲು ಪ್ರಯತ್ನಿಸುತ್ತಿದ್ದ ಅಭಿವೃದ್ಧಿಕರ್ತರು ತಳೆದ ನಿಲುವೆಂದರೆ "ಜನರಿಗೇನು ಬೇಕು, ಅವರಿಗೆ ಉತ್ತಮವಾದುದು ಯಾವುದು ಎಂಬ ವಿಷಯ ಅಭಿವೃದ್ಧಿ ಪರಿಣಿತರಿಗೆ ತಿಳಿದಿದೆ. ಇದು ಜನಸಾಮಾನ್ಯರ ಆಲೋಚನೆಯೊಂದಿಗೆ ಹೊಂದದಿದ್ದರೆ ಅದಕ್ಕೆ ಕಾರಣ ತಮಗೆ ಯಾವುದು ಅಗತ್ಯ, ಯಾವುದು ಉತ್ತಮ ಎಂಬುದನ್ನು ತಿಳಿಯಲು ಬೇಕಾದ ಬುದ್ಧಿಮತ್ತೆ, ಜಾಣ್ಮೆ ಜನಸಾಮಾನ್ಯರಲ್ಲಿ ಇಲ್ಲದಿರವುದು". ಮೇಲೆಲ್ಲೊ ರೂಪುಗೊಂಡು ಕೆಳಮುಖಿಯಾಗಿ ಹರಿವ ಯೋಜನೆಯ ಮಾದರಿಗೆ (ಟಾಪ್ ಡೌನ್ ಪ್ಲಾನಿಂಗ್) ಈ ನಿಲುವೇ ಕಾರಣ.

ಆಧುನೀಕರಣ ಸಿದ್ಧಾಂತಕ್ಕೆ ವಿಮರ್ಶಾತ್ಮಕ ವ್ಯಾಖ್ಯಾನ ಬರೆದ ಸಮಾಜ ವಿಜ್ಞಾನಿಗಳು ಮುಖ್ಯವಾಗಿ ಮೂರು ವಿಷಯಗಳತ್ತ ವಿಶೇಷ ಗಮನಹರಿಸಿದ್ದಾರೆ. ಅವುಗಳೆಂದರೆ ಅಭಿವೃದ್ಧಿ ಯೋಜನೆಗಳ ಹೆಚ್ಚುತ್ತಿರುವ ವೈಫಲ್ಯ, ಶ್ರೀಮಂತರು ಮತ್ತು ಬಡವರ ನಡುವೆ ಹೆಚ್ಚುತ್ತಿರುವ ಅಂತರ ಹಾಗೂ ಕೈಗಾರಿಕೀಕರಣದ ಪಾರಿಸರಿಕ ಪರಿಣಾಮಗಳು. "ಪರಿಣಿತರು ಎನ್ನಿಸಿಕೊಂಡವರಿಗೆ ಅಭಿವೃದ್ಧಿ ಯೋಜನೆಯ ಫಲಾನುಭವಿಗಳ ಬದುಕು, ಸಂಸ್ಕೃತಿ, ಜೀವನೋಪಾಯದ ವಿಧಿ-ವಿಧಾನಗಳ ಪರಿಚಯವೇ ಇಲ್ಲದ್ದರಿಂದ ಯೋಜನೆಗಳು ವಿಫಲವಾದವು"[13] "ಹೊರಗಿನಿಂದ ಬಂದ ಯೋಜನೆಗಳನ್ನು ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾರ್ಪಡಿಸಿ ಅಳವಡಿಸಿಕೊಳ್ಳದ ಕಾರಣ ಯೋಜನೆಗಳು ವಿಫಲವಾದವು".[14] ತೃತೀಯ ಜಗತ್ತಿನ ನವೋದಿತ ರಾಷ್ಟ್ರಗಳನ್ನು, ಸಂಪೂರ್ಣವಾಗಿ ಸ್ವತಂತ್ರವಾದ, ಪ್ರತ್ಯೇಕವಾದ, ಪರಸ್ಪರ ಅವಲಂಬನೆಯೇ ಇಲ್ಲದ ದೇಶಗಳೆಂದು ಪರಿಗಣಿಸಿರುವುದೇ ಆಧುನೀಕರಣ ಸಿದ್ಧಾಂತದ ಮೂಲಭೂತ ದೌರ್ಬಲ್ಯವೆಂದು ಆಂಡ್ರೆಗಂಡರ್ ಫ್ರಾಂಕ್ (1980) ಅಭಿಪ್ರಾಯ ಪಡುತ್ತಾರೆ.[15] "ಅಭಿವೃದ್ಧಿ ಹೊಂದಲು ಎಲ್ಲ ದೇಶಗಳಿಗೂ

ಸಮಾನವಾದ ಅವಕಾಶವಿದೆ" ಎಂಬ ಆಧುನೀಕರಣ ಸಿದ್ಧಾಂತದ ಮುಖ್ಯ ಪರಿಭಾವನೆಯೇ ಪ್ರಶ್ನಾರ್ಹ ಎನ್ನುತ್ತಾರೆ ಹಾಪ್‌ಕಿನ್ಸ್ ಮತ್ತು ವ್ಯಾಲರ್‌ಸ್ಟೀನ್ ಈ ಸಮಾನ ಅವಕಾಶದ ಪರಿಭಾವನೆಯ ದೌರ್ಬಲ್ಯವನ್ನು ಎತ್ತಿ ತೋರಿರುವ ವ್ಯಾಲರ್‌ಸ್ಟೀನ್ 'ದೇಶಗಳ ನಡುವೆ ರಾಜನಿಕ ಸಂಬಂಧಗಳೇ ಜಾಗತಿಕ ಅರ್ಥ ವ್ಯವಸ್ಥೆ ರೂಪುಗೊಳ್ಳುವಂತೆ ಮಾಡಿತು. ಈ ವ್ಯವಸ್ಥೆಯಲ್ಲಿ ಹೊರ ಅಂಚಿನಲ್ಲಿರುವ ಗ್ರಾಮೀಣ ಜನತೆ, ಬಡಜನರು ಅಭಿವೃದ್ಧಿ ಯೋಜನೆಗಳ ಫಲದಿಂದ ವಂಚಿತರಾಗುವುದರ ಜೊತೆಗೆ ಕೇಂದ್ರಭಾಗದಲ್ಲಿರುವ ಉತ್ತರದ ರಾಷ್ಟ್ರಗಳಿಂದ ತಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಕಳೆದುಕೊಳ್ಳುತ್ತಿದ್ದಾರೆ'[16] ಎಂದಿದ್ದಾರೆ. ಬ್ರ್ಯಾಂಟ್ ಅವರು "ಜಾಗತಿಕ ಅರ್ಥವ್ಯವಸ್ಥೆ ದಕ್ಷಿಣಕ್ಕಿಂತ ಉತ್ತರದ ದೇಶಗಳ ಹಿತಾಸಕ್ತಿಯನ್ನೇ ಗಮನದಲ್ಲಿಟ್ಟು ಕೊಂಡಂತೆ ವರ್ತಿಸುತ್ತಿದೆ"[17]ಎನ್ನುತ್ತಾರೆ. ಆಧುನೀಕರಣ ಸಿದ್ಧಾಂತ ಆಧುನಿಕತೆ ಮತ್ತು ಪ್ರಪಂಚದ ವ್ಯವಸ್ಥೆಗಳ ನಡುವಿನ ಸಂಬಂಧವನ್ನು ತೀರಾ ಸರಳವಾಗಿ ಕಲ್ಪಿಸಿಕೊಳ್ಳುತ್ತದೆ. ಪ್ರಪಂಚದ ವಿವಿಧ ಭಾಗಗಳ ನಡುವಿನ ಸಂಬಂಧವನ್ನು ಪರಿಶೀಲಿಸುವಾಗ, ಆಧುನೀಕರಣದ ಸಿದ್ಧಾಂತ, ಅಂತಹ ಸಂಬಂಧ, ಸಂಘರ್ಷ ಮತ್ತು ಅಸಮಾನತೆಗಳ ಬದಲಾಗಿ ಒಮ್ಮತ ಮತ್ತು ಉಭಯ ಸಾಮಾನ್ಯ ಮೌಲ್ಯಗಳ ಮೇಲೆ ಅವಲಂಬಿತವಾಗಿದೆಯೆಂದು ಪರಿಭಾವಿಸಿಕೊಳ್ಳುತ್ತದೆ. ಸಾಂಪ್ರದಾಯಿಕ ದೇಶಗಳು ಹಾಗೂ ಆಧುನಿಕ ಜಾಗತಿಕ ವ್ಯವಸ್ಥೆಗಳ ನಡುವೆ ಪರಸ್ಪರವಾದ ಯಾವುದೇ ಸಂಬಂಧವಿಲ್ಲವೆಂದು ಭಾವಿಸುತ್ತದೆ. "ಆದರೆ ಆಧುನೀಕರಣ ಸಿದ್ಧಾಂತದ ಈ ನಿಲುವು ಐತಿಹಾಸಿಕ ಹಾಗೂ ಸಮಕಾಲೀನ ಪರಿಸ್ಥಿತಿಗಳಿಗೆ ವಿರೋಧವಾಗಿದೆ. ಅಭಿವೃದ್ಧಿಶೀಲ ದೇಶಗಳ ಸಾಮಾಜಿಕ ವಿನ್ಯಾಸ ಈಗ ಪ್ರತ್ಯೇಕವಾಗಿ ಉಳಿದಿಲ್ಲ; ಉಳಿಯುವುದು ಸಾಧ್ಯವೂ ಇಲ್ಲ. ಒಂದು ದೇಶ ಅಥವಾ ಸಮಾಜ ಎಷ್ಟೇ ಸಾಂಪ್ರದಾಯಿಕವಾಗಿದ್ದರೂ ಜಾಗತಿಕ ಶಕ್ತಿಗಳು ಅಂತಹ ಸಮಾಜವನ್ನು ಪ್ರಭಾವಿಸಿ, ಪರಿವರ್ತಿಸಿ ಪ್ರಪಂಚದ ವ್ಯವಸ್ಥೆಗಳ ಒಂದು ಅವಿಭಾಜ್ಯ ಅಂಗವನ್ನಾಗಿ ಮಾಡುತ್ತವೆ."[18]

ಭಾರತದ ಸಂದರ್ಭದಲ್ಲಿ, ನಮಗೆ ಸ್ವಾತಂತ್ರ್ಯ ಬಂದ ನಂತರ ಆಧುನೀಕರಣ ಸಿದ್ಧಾಂತದ ಚೌಕಟ್ಟಿನಲ್ಲೇ ನಡೆದ ಅಭಿವೃದ್ಧಿಯ ಪ್ರಯತ್ನಗಳನ್ನು ಈ ಹಂತದಲ್ಲಿ ಗಮನಿಸುವುದು ಅವಶ್ಯಕ. ಸ್ವಾತಂತ್ರ್ಯ ಬಂದ ಸಮಯದಲ್ಲಿ ನಮ್ಮ ದೇಶದ ಅರ್ಥ ವ್ಯವಸ್ಥೆ ಮತ್ತು ಸಮಾಜದ ಪುನಃರಚನೆಗೆ ಮಹಾತ್ಮ ಗಾಂಧಿಯವರು 'ಗ್ರಾಮಸ್ವರಾಜ್ಯ'ದ ಮಾದರಿಯನ್ನು ಮುಂದಿಟ್ಟರು. 1909ರಷ್ಟು ಹಿಂದೆಯೇ 'ಹಿಂದ್ ಸ್ವರಾಜ್'ನಲ್ಲಿ ಗಾಂಧೀಜಿ ತಮ್ಮ ಕಲ್ಪನೆಯನ್ನು ವಿವರಿಸಿದ್ದರು. ಆಧುನಿಕ ಪಾಶ್ಚಿಮಾತ್ಯ ನಾಗರೀಕತೆಯನ್ನು ತೀವ್ರವಾಗಿ ಟೀಕಿಸಿ, ಆಧುನಿಕ ಕೈಗಾರಿಕೆಗಳನ್ನು ಸಾರಾಸಗಟಾಗಿ ತಿರಸ್ಕರಿಸಿ, ವಸಾಹತು ಪೂರ್ವ ಮತ್ತು ಕೈಗಾರಿಕಾ ಪೂರ್ವದ ಸಾವಯವ ಗ್ರಾಮೀಣ ಸಮುದಾಯಗಳನ್ನು ಮತ್ತೊಮ್ಮೆ ಪುನಃಶ್ಚೇತನಗೊಳಿಸಬೇಕೆಂದು ಗಾಂಧೀಜಿ ಪ್ರತಿಪಾದಿಸಿದ್ದರು. ಗಾಂಧೀಜಿ ಅವರ ಈ ನಿಲುವಿನಲ್ಲಿ ತಮ್ಮ ಒಳಿತನ್ನು ಕಂಡುಕೊಂಡು ರೈತಾಪಿ ವರ್ಗ ಸಹಜವಾಗಿಯೇ ಅವರಿಗೆ ಬೆಂಬಲ ನೀಡಿತು. ಗಾಂಧೀಜಿಯವರ ಈ ದೃಷ್ಟಿಯಿಂದ ಭಿನ್ನವಾಗಿ ನೆಹರೂ ಅವರಿಗೆ

ಪಾಶ್ಚಿಮಾತ್ಯರ ಕೈಗಾರಿಕಾ ಅಭಿವೃದ್ಧಿಯ ಬಗ್ಗೆ ಅಪಾರ ಮೆಚ್ಚುಗೆ ಇತ್ತು. ಅದೇ ಸಮಯದಲ್ಲಿ ವಸಾಹತುಶಾಹಿಯ ಕಹಿ ಅನುಭವವೂ ಅವರಿಗಿತ್ತು. ಬೌದ್ಧಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಹಿಂದುಳಿದಿದ್ದರಿಂದಲೇ ಭಾರತ ದಾಸ್ಯಕ್ಕೆ ಒಳಗಾಗಬೇಕಾಯಿತು. ಹಿಂದೊಮ್ಮೆ ಶ್ರೇಷ್ಠ ನಾಗರಿಕತೆಯಾಗಿದ್ದ ಭಾರತ ತನ್ನ ಸಾಂಪ್ರದಾಯಿಕ ಮನೋಧರ್ಮದ ಫಲವಾಗಿಯೇ ಶೋಷಣೆಗೆ ಒಳಗಾಯಿತು. ಭಾರತದ ಹಳ್ಳಿಗಳು ಬೌದ್ಧಿಕವಾಗಿಯೂ, ಆರ್ಥಿಕವಾಗಿಯೂ ಹಿಂದುಳಿದವು; ಸಂಕುಚಿತ ಪ್ರವೃತ್ತಿಯವು. ಭಾರತದ ಪುನರುಜ್ಜೀವನ ಪಾಶ್ಚಾತ್ಯರ ವೈಜ್ಞಾನಿಕ ಚಿಂತನೆ ಹಾಗೂ ಬೃಹತ್ ಪ್ರಮಾಣದ ಕೈಗಾರಿಕೀಕರಣದಿಂದ ಮಾತ್ರ ಸಾಧ್ಯವೆಂಬ ನಿಲುವಿಗೆ ಬದ್ಧರಾಗಿದ್ದ ನೆಹರೂ ಅವರು ಪ್ರಧಾನಿಯಾಗಿ ಅದೇ ದಿಕ್ಕಿನಲ್ಲಿ ದೇಶವನ್ನು ಮುನ್ನಡೆಸಿದರು.

ಆಧುನೀಕರಣ ಸಿದ್ಧಾಂತದ ಮೂಲ ತತ್ವಗಳು ಚರ್ಚೆಗೆ ಬರುವ ಹಲವಾರು ದಶಕಗಳಷ್ಟು ಮುಂಚೆಯೇ ಮೈಸೂರು ಸಂಸ್ಥಾನದ ಪ್ರಖ್ಯಾತ ಇಂಜಿನಿಯರ್ ಹಾಗೂ ಮುತ್ಸದ್ದಿ ಸರ್.ಎಂ. ವಿಶ್ವೇಶ್ವರಯ್ಯ, ತ್ವರಿತಗತಿಯ ಕೈಗಾರಿಕೀಕರಣ, ನಗರೀಕರಣ ಹಾಗೂ ಶಕ್ತಿಶಾಲಿಯಾದ ರಾಷ್ಟ್ರವನ್ನು ಕಟ್ಟುವುದರ ಮೂಲಕ ಭಾರತ ಪಶ್ಚಿಮದ ರಾಷ್ಟ್ರಗಳ ಜೊತೆ ಜೊತೆಯಾಗಿಯೇ ಹೆಜ್ಜೆ ಹಾಕಬಹುದೆಂಬುದನ್ನು ಸೂಚಿಸಿದ್ದರು. ಜಪಾನ್ ಮತ್ತು ರಷ್ಯಾಗಳು ಅವರ ಮುಂದಿದ್ದ ಉದಾಹರಣೆಗಳಾಗಿದ್ದವು. ದೇಶದಲ್ಲಿ ಆಗತಾನೆ ರೂಪುಗೊಳ್ಳುತ್ತಿದ್ದ ಬಂಡವಾಳಶಾಹಿ ವರ್ಗಕ್ಕೆ ಈ ಹಾದಿ ಆಪ್ಯಾಯಮಾನವೆನಿಸಿತು. ''1944ರ 'ಬಾಂಬೆ ಪ್ಲಾನ್'ನಲ್ಲಿ ಅಂದಿನ ಪ್ರಮುಖ ಕೈಗಾರಿಕೋದ್ಯಮಿಗಳು, ಖಾಸಗಿಯವರು ಬಂಡವಾಳ ತೊಡಗಿಸಲು ಸಾಧ್ಯವಿಲ್ಲದ ಭಾರೀ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ ಸರ್ಕಾರವೇ ಬಂಡವಾಳ ಹೂಡಬೇಕು ಮತ್ತು ಅವುಗಳನ್ನು ನಿಯಂತ್ರಿಸಬೇಕು''[19] ಎಂದು ಒತ್ತಾಯಿಸಿದರು.

ಭಾರತದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸರ್.ಎಂ.ವಿ. ಅವರ 'ಕೈಗಾರಿಕೀಕರಣ ಮಾಡು ಇಲ್ಲವೇ ನಾಶವಾಗು' (ಇಂಡಿಸ್ಟ್ರಿಯಲೈಸ್ ಆರ್ ಪೆರಿಶ್)ಮಾದರಿಯ ಆರ್ಥಿಕ ಅಭಿವೃದ್ಧಿ ಔಪಚಾರಿಕವಾಗಿ ಜಾರಿಗೆ ಬಂದಿತು. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಕೈಗಾರಿಕೀಕರಣ ಪ್ರಾರಂಭವಾಯಿತು. ಆದರೆ ಈ ತಂತ್ರಜ್ಞಾನಗಳ ಸಾಮಾಜಿಕ ಮತ್ತು ಪಾರಿಸರಿಕ ಪರಿಣಾಮಗಳ ಬಗ್ಗೆ ಯಾವ ಚಿಂತನೆಯೂ ನಡೆಯಲಿಲ್ಲ. ತಂತ್ರಜ್ಞಾನದ ಆಯ್ಕೆಯಲ್ಲಿ ತಾತ್ವಿಕವಾಗಿ ಪರ್ಯಾಯಗಳಿದ್ದವು. ಹೆಚ್ಚಿನ ಬಂಡವಾಳ ಅಗತ್ಯವಾದ ತಂತ್ರಜ್ಞಾನವನ್ನು ನಾವು ಆಯ್ಕೆ ಮಾಡಬಹುದಿತ್ತು ಅಥವಾ ಹೆಚ್ಚಿನ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬಹುದಿತ್ತು. ತಂತ್ರಜ್ಞಾನವನ್ನು ಜನ ಸಾಮಾನ್ಯರ ಮೂಲಭೂತ ಅಗತ್ಯಗಳ ಪೂರೈಕೆಗೆ ಬಳಸಬಹುದಿತ್ತು ಅಥವಾ ಭೋಗವಸ್ತುಗಳ ಉತ್ಪಾದನೆಗೆ ಬಳಸಬಹುದಿತ್ತು. ಪರಿಸರದ ಗುಣಮಟ್ಟವನ್ನು ಹಾಳು ಮಾಡುವ ತಂತ್ರಜ್ಞಾನವನ್ನು ಆಯ್ಕೆ ಮಾಡಬಹುದಿತ್ತು. ನೈಸರ್ಗಿಕ

ಸಂಪನ್ಮೂಲವನ್ನು ಹಿತಮಿತವಾಗಿ ಬಳಸುವ ತಂತ್ರಜ್ಞಾನವೂ ಲಭ್ಯವಿತ್ತು. ಆದರೆ ತಮ್ಮದೇ ಆದ ಹಿತಾಸಕ್ತಿಗಳಿದ್ದ ಬಂಡವಾಳಶಾಹಿ ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು, ತಂತ್ರಜ್ಞರು, ಆಡಳಿತಗಾರರು ಹಾಗೂ ಶ್ರೀಮಂತ ರೈತರು ತಮ್ಮದೇ ಆದ ಆಯ್ಕೆಗಳನ್ನು ಮಾಡಿದರು. ಬಂಡವಾಳಶಾಹಿಗಳ ಪ್ರಭಾವದಿಂದ ಸರ್ಕಾರ ವಿದ್ಯುತ್ತು, ಸಂಪರ್ಕ, ಖನಿಜಗಳು ಮುಂತಾದ ಮೂಲಭೂತ ಕೈಗಾರಿಕಾ ಸೌಕರ್ಯಗಳಲ್ಲಿ ಅಪಾರ ಹಣವನ್ನು ಹೂಡಿತು. ಇದರೊಡನೆ ಈ ಉದ್ಯಮಿಗಳಿಗೆ ನೀರು, ಅರಣ್ಯ ಉತ್ಪನ್ನಗಳು, ಕಚ್ಚಾವಸ್ತುಗಳು ಮುಂತಾದವುಗಳನ್ನು ಮಾರುಕಟ್ಟೆಗಿಂತ ಬಹಳ ಕಡಿಮೆಯ ದರದಲ್ಲಿ ಒದಗಿಸಿತು. ಶ್ರೀಮಂತ ರೈತರು, ದೊಡ್ಡ ಜಮೀನ್ದಾರರು ತಮ್ಮ ಅಪಾರ ಭೂಮಿಗೆ ಅಲ್ಪವೆಚ್ಚದಲ್ಲಿ ನೀರು, ವಿದ್ಯುತ್ತು, ರಸಗೊಬ್ಬರಗಳು ಸದಾಕಾಲ ಒದಗುವಂತೆ ನೋಡಿಕೊಂಡರು. ಆಡಳಿತ ಶಾಹಿ ಮತ್ತು ರಾಜಕಾರಣಿಗಳು ಜೊತೆಗೆ ಸೇರಿ ಕಾಯಿದೆ, ಕಾನೂನುಗಳ ಜಟಿಲ ಜಾಲವನ್ನು ನಿರ್ಮಿಸಿ ನೈಸರ್ಗಿಕ ಸಂಪನ್ಮೂಲಗಳ ನಿಯಂತ್ರಣ ಮತ್ತು ಬಳಕೆಯ ಮೇಲೆ ತಮ್ಮದೇ ಆದ ಸ್ವಾಮ್ಯವನ್ನು ಸ್ಥಾಪಿಸಿದರು. ಇವುಗಳ ಫಲವಾಗಿ ನಿಸರ್ಗ ಸಂಪನ್ಮೂಲಗಳ ಮೇಲೆ ನೇರವಾಗಿ ಅವಲಂಬಿಸಿದ್ದ ಭೂರಹಿತರು, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು, ಕುಶಲ ಕರ್ಮಿಗಳು, ಅಲೆಮಾರಿ ಹಾಗೂ ಮೂಲ ನಿವಾಸಿ ಸಮುದಾಯಗಳ ಹಿತಾಸಕ್ತಿ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಯಿತು.

ಭಾರತದ ಸಂದರ್ಭದಲ್ಲಿ ಆಧುನೀಕರಣ ಸಿದ್ಧಾಂತದ ಚೌಕಟ್ಟಿನಲ್ಲಿ ಕೃಷಿ ಕ್ಷೇತ್ರದಲ್ಲಿ ನಾವು ಪರಿಗಣಿಸಬಹುದಾದ ವಿಶೇಷ ಬೆಳವಣಿಗೆಯೆಂದರೆ 'ಹಸಿರು ಕ್ರಾಂತಿ'. ಅಧಿಕ ಇಳುವರಿಯ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳು, ನೀರಾವರಿ ಸೌಲಭ್ಯ ಮುಂತಾದವುಗಳನ್ನು ಒದಗಿಸಿ ಆ ಮೂಲಕವಾಗಿ ಕೃಷಿ ಕ್ಷೇತ್ರದಲ್ಲಿನ ಉತ್ಪಾದನೆಯನ್ನು ಹೆಚ್ಚಿಸುವುದು 60ರ ದಶಕದ ಹಸಿರು ಕ್ರಾಂತಿಯ ಉದ್ದೇಶವಾಗಿತ್ತು. ಇಂತಹ ಒಂದು ಪ್ರಯತ್ನ ದೇಶದ ಎಲ್ಲ ಕೃಷಿಕರಿಗೂ ಲಾಭದಾಯಕ ವಾಗುತ್ತದೆ ಎಂಬ ಪರಿಭಾವನೆಯಿಂದ ಪ್ರಾರಂಭವಾದ ಹಸಿರು ಕ್ರಾಂತಿಯಿಂದ ಆಹಾರೋತ್ಪಾದನೆಯ ಪ್ರಮಾಣ, ಕೃಷಿ ಭೂಮಿಯ ಉತ್ಪಾದಕತೆ ಹೆಚ್ಚಿತು. ಆದರೆ ಇದೇ ಸಂದರ್ಭದಲ್ಲಿ ಕೃಷಿಕರ ನಡುವಿನ ತಾರತಮ್ಯವೂ ಹೆಚ್ಚಾಯಿತು. "ಹೆಚ್ಚಿನ ಸಂಪನ್ಮೂಲವಿದ್ದಂತಹ ರೈತರು, ಸಣ್ಣ ರೈತರಿಗಿಂತ ಹೆಚ್ಚು ಯಶಸ್ವಿಯಾಗಿ ಹಸಿರು ಕ್ರಾಂತಿಯ ಸೌಲಭ್ಯಗಳನ್ನು ಬಳಸಿಕೊಂಡರು. ಇದರಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬೀಜ, ರಸಗೊಬ್ಬರ, ನೀರಾವರಿ ಕೂಲಿಯಾಳುಗಳು ದೊರೆಯುವುದು ಮತ್ತಷ್ಟು ದುರ್ಲಭವಾಗಿ ಅವರ ಪರಿಸ್ಥಿತಿ ಮತ್ತಷ್ಟು ಕಷ್ಟಕರವಾಯಿತು".[20]

ಸಮಾಜವೊಂದರಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಅಸಮಾನತೆಗಳನ್ನು ಗಮನಿಸದೇ ಅಭಿವೃದ್ಧಿಯ ಹೆಸರಿನಲ್ಲಿ ಆಧುನಿಕ ತಂತ್ರಜ್ಞಾನವನ್ನಾಧರಿಸಿದ ಹೊಸ ಪರಿಪಾಠಗಳನ್ನು ಬಳಕೆಗೆ ತಂದಾಗ ದೀರ್ಘಾವಧಿಯಲ್ಲಿ ಎಂಥ ಪರಿಣಾಮಗಳು ಕಂಡುಬರುತ್ತವೆಯೆಂಬುದನ್ನು ಸ್ವಾತಂತ್ರ್ಯ

ನಂತರ ನಾವು ಕೈಗೊಂಡ ಕೈಗಾರಿಕೀಕರಣ ಮತ್ತು ಹಸಿರು ಕ್ರಾಂತಿಯ ಪ್ರಯತ್ನಗಳು ತೋರಿಸಿ ಕೊಟ್ಟವು. ನಮ್ಮ ಸಮಾಜದಲ್ಲಿದ್ದ ಅಸಮಾನತೆ, ಆಧುನಿಕ ತಂತ್ರಜ್ಞಾನದ ಸೌಲಭ್ಯಗಳು ಎಲ್ಲರ ಕೈಗೆ ಎಟುಕದಂತೆ ಮಾಡಿತು. ಇದರ ಪರಿಣಾಮವಾಗಿ ಅಸಮಾನತೆ ಮತ್ತಷ್ಟು ಹೆಚ್ಚಿತು. ಆಧುನೀಕರಣ ಪ್ರಕ್ರಿಯೆ, ಸಂಘರ್ಷಗಳನ್ನು ಕಡಿಮೆಮಾಡುವುದರ ಬದಲಾಗಿ ಹೆಚ್ಚಿಸಿತು.

ಆಧುನೀಕರಣ ಸಿದ್ಧಾಂತ ಹಾಗೂ ಅದನ್ನಾಧರಿಸಿದ 'ಬಂಡವಾಳದ ವೃದ್ಧಿ, ವಿಸ್ತರಣೆಗಳೇ ಅಭಿವೃದ್ಧಿ' ಎಂಬ ನಿಲುವಿನ ಅಭಿವೃದ್ಧಿ ಆಚರಣೆಗಳನ್ನು ತಮ್ಮ ನೆಲೆಯಿಂದ ವಿಮರ್ಶಿಸಿ, ವ್ಯಾಖ್ಯಾನಿಸಿ, ಪ್ರತಿಕ್ರಿಯಿಸಿರುವ ಸಮುದಾಯವಾದಿ, ಪರಿಸರವಾದಿ, ಸ್ತ್ರೀವಾದಿ ಚಿಂತಕರು ಆಧುನೀಕರಣ ಸಿದ್ಧಾಂತದಲ್ಲಿನ ದೌರ್ಬಲ್ಯಗಳನ್ನು ಎತ್ತಿ ತೋರಿಸಿದ್ದಾರೆ.

ಸಮುದಾಯವಾದಿ ಪ್ರತಿಕ್ರಿಯೆ

ಸಮುದಾಯಕ್ಕೆ ಸಂಬಂಧಿಸಿದ ನಮ್ಮ ಹಲವಾರು ನಂಬಿಕೆಗಳ ಮೂಲವನ್ನು ಸಾಮಾಜಿಕ ಬದಲಾವಣೆಗಳನ್ನು ವಿಶ್ಲೇಷಿಸಿದ ಕಾರ್ಲ್‌ಮಾರ್ಕ್ಸ್, ಮ್ಯಾಕ್ಸ್‌ವೆಬರ್, ಹರ್ಬರ್ಟ್‌ಸ್ಪೆನ್ಸರ್ ಮುಂತಾದವರ ಚಿಂತನೆ, ಸಿದ್ಧಾಂತಗಳಲ್ಲಿ ಗುರುತಿಸಬಹುದು. ಬಂಡವಾಳದ ವೃದ್ಧಿ, ವಿಸ್ತರಣೆಗಳ ಫಲವಾಗಿ, ಸಾಂಪ್ರದಾಯಿಕ ಸಂಬಂಧಗಳನ್ನು ಹಣಕಾಸು ಆಧಾರಿತ ಮಾರುಕಟ್ಟೆ ಸಂಬಂಧಗಳು ಪಲ್ಲಟಗೊಳಿಸಿದವು. ಸಾಮಾಜಿಕ ಅಂತಸ್ತು, ಸಂಪ್ರದಾಯ ಹಾಗೂ ಧರ್ಮಗಳ ಜಾಗದಲ್ಲಿ ಸಮಾನತೆ, ಆಧುನಿಕತೆ ಹಾಗೂ ವೈಜ್ಞಾನಿಕ ಮನೋಧರ್ಮಗಳು ಬಂದವು. "ಮಾರ್ಕ್ಸ್ ಮತ್ತು ಸ್ಪೆನ್ಸರ್, ಈ ಪರಿವರ್ತನೆಗಳು ಮನುಷ್ಯರನ್ನು ಈ ಹಿಂದಿನ ಸೀಮಿತ ದೃಷ್ಟಿಯ ನಿರ್ಬಂಧಗಳಿಂದ ತುಂಬಿದ ಗ್ರಾಮೀಣ ಜೀವನದ ಮೂರ್ಖತನದಿಂದ ಮುಕ್ತಿಗೊಳಿಸುತ್ತದೆ"[21] ಎಂದರು. ಆದರೆ ಸಂಪ್ರದಾಯದ ದಬ್ಬಾಳಿಕೆಯಿಂದ ಬಿಡುಗಡೆಯನ್ನು 'ಅಭಿವೃದ್ಧಿ' ಎಂದು ಕರೆಯಲೊಪ್ಪದ ಹಲವಾರು ಚಿಂತಕರು ವ್ಯಕ್ತಿಯನ್ನು, ಅವನ ಸಮುದಾಯದೊಂದಿಗೆ ಬೆಸೆದು, ಅವನಿಗೆ ಪ್ರತ್ಯೇಕ ಅನನ್ಯತೆಯನ್ನೂ, ಅಸ್ತಿತ್ವವನ್ನೂ ನೀಡುವ ಧಾರ್ಮಿಕ, ಜಾತೀಯ, ಕೌಟುಂಬಿಕ ಸಂಬಂಧಗಳನ್ನು ಈ ಪ್ರಕ್ರಿಯೆ ನಾಶಗೊಳಿಸುತ್ತದೆಂದು ಅಭಿಪ್ರಾಯಪಟ್ಟರು. ಕಷ್ಟಕಾಲದಲ್ಲಿ ಬಂಧು, ಬಾಂಧವರಿಂದ ದೊರೆಯುತ್ತಿದ್ದ ನೆರವು, ಅನುಕಂಪ, ಸಹಾನುಭೂತಿಗಳಿಂದ ಸಹ್ಯವಾಗಿದ್ದ ಜೀವನದ ಜಾಗದಲ್ಲಿ, ಅನಿಶ್ಚಿತತೆ, ವೈಷಮ್ಯ, ವ್ಯಕ್ತಿಗತವಲ್ಲದ ಸಂಬಂಧಗಳ ಪ್ರಪಂಚ ಬರುತ್ತಲಿದೆ. ವ್ಯಕ್ತಿಯನ್ನು ತನ್ನ ಸಮುದಾಯದ ಬೇರುಗಳಿಂದ ಬೇರ್ಪಡಿಸಿ, ಅವನನ್ನು ಕೇವಲ ತಾತ್ವಿಕವಾಗಿ, ಸಮಾನ ಹಕ್ಕುಗಳಿರುವ, ಅಮೂರ್ತ ಪ್ರಜೆಯಾಗಿಸುವ ಮಾರುಕಟ್ಟೆ ಕೇಂದ್ರಿತ ಮತ್ತು ಪ್ರಭುತ್ವ ನೇತೃತ್ವದ ಅಭಿವೃದ್ಧಿ ಮಾದರಿ ಬಡತನ, ಅಸಮಾನತೆ, ತಾರತಮ್ಯಗಳ ಸಮಸ್ಯೆಗಳನ್ನು ನಿವಾರಿಸುವಲ್ಲಿ ಅಸಮರ್ಥವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಉಪಯುಕ್ತವಾಗಿರುವ ಸಾಮಾಜಿಕ ಸಂಸ್ಥೆಗಳನ್ನು ನಶಿಸಿ ಹೋಗಲು ಬಿಡದೇ ಉಳಿಸಿಕೊಳ್ಳಬೇಕು ಎಂದು ಸಮುದಾಯ ವಾದಿಗಳು ಒತ್ತಾಯಿಸುತ್ತಾರೆ.

ಸ್ಥಳೀಯ ಸನ್ನಿವೇಶ, ಸ್ಥಳಜನ್ಯ ತಿಳಿವಳಿಕೆ, ಸಹಭಾಗಿತ್ವ, ವಿಕೇಂದ್ರೀಕರಣ ಮುಂತಾದ ಪರಸ್ಪರ ಸಂಬಂಧಿತ ಪರಿಕಲ್ಪನೆಗಳು ಅಭಿವೃದ್ಧಿ ಪ್ರವರ್ತಕರ ಗಮನ ಸೆಳೆಯುತ್ತಿರುವ ಸಂದರ್ಭದಲ್ಲಿ ಸಮುದಾಯಕ್ಕೆ ವಿಶೇಷ ಮಹತ್ವವಿದೆಯೆಂದು ಅಭಿಪ್ರಾಯ ಪಡುವ ಸಮುದಾಯವಾದಿಗಳು, ಇದೇ ಸಂದರ್ಭದಲ್ಲಿ ಊರೊಟ್ಟಿನ ಸಂಪನ್ಮೂಲಗಳಂಥ ವಿಷಯಗಳಿಗೆ ಸಂಬಂಧಿಸಿದಂತೆ ಆಧುನೀಕರಣ ಸಿದ್ಧಾಂತದ ದೌರ್ಬಲ್ಯವನ್ನು ಎತ್ತಿತೋರುತ್ತಾರೆ.

ಊರೊಟ್ಟಿನ ಸಂಪತ್ತು

ಊರೊಟ್ಟಿನ ಗೋಮಾಳ, ನೆಡುತೋಪು, ನದೀಕೊಳ್ಳ ಮುಂತಾದ ಸಂಪನ್ಮೂಲಗಳು ಹೇಗೆ ದುರಂತದೆಡೆಗೆ ಸಾಗುತ್ತವೆ ಎಂಬುದನ್ನು ವಿಶ್ಲೇಷಿಸಿ ಗ್ಯಾರೆಟ್ ಹಾರ್ಡಿನ್, 1968ರಲ್ಲಿ 'ದಿ ಟ್ರಾಜಿಡಿ ಆಫ್ ಕಾಮನ್ಸ್' ಎಂಬ ಶೀರ್ಷಿಕೆಯ ಪ್ರಬಂಧವನ್ನು ಮಂಡಿಸಿದರು. ಹಾರ್ಡಿನ್ ನಡೆಸಿದ ಅಧ್ಯಯನದಲ್ಲಿ, ಅಲ್ಪಕಾಲದಲ್ಲಿ ಅತಿ ಹೆಚ್ಚು ಲಾಭ ಪಡೆಯುವ ಉದ್ದೇಶದಿಂದ ಪ್ರತಿಯೊಬ್ಬ ಗೋಪಾಲಕನೂ ಅತಿ ಹೆಚ್ಚು ದನಗಳನ್ನು ಸಂಗೋಪನೆ ಮಾಡುತ್ತಾನೆ. ಇದರಿಂದ ಗೋಮಾಳದ ಸೀಮಿತ ಸಂಪನ್ಮೂಲದ ಮೆಲೆ ಸೀಮಾತೀತ ಸಂಖ್ಯೆಯಲ್ಲಿ ದನಗಳು ಮೇಯುತ್ತವೆ. ಪ್ರತಿಯೊಬ್ಬ ಗೋಪಾಲಕನೂ ತನ್ನ ಹಿತವನ್ನು ಮಾತ್ರ ಪರಿಗಣಿಸಿದ್ದರಿಂದ ಊರೊಟ್ಟಿನ ಆಸ್ತಿಯಾಗಿದ್ದ ಗೋಮಾಳ, ಅತಿಬಳಕೆಯಿಂದ ತನ್ನ ಸತ್ವವನ್ನು ಕಳೆದುಕೊಂಡು ಇಡೀ ಸಮುದಾಯದ ಜೀವನೋಪಾಯಕ್ಕೆ ಸಂಚಕಾರ ತರುತ್ತದೆ.

'ದಿ ಲಾಜಿಕ್ ಆಫ್ ಕಲೆಕ್ಟಿವ್ ಆ್ಯಕ್ಷನ್' ಗ್ರಂಥದಲ್ಲಿ, ಮಾಂಕರ್‌ಓಲ್ಸನ್, ಊರೊಟ್ಟಿನ ಸಂಪತ್ತಿನ ನಿರ್ವಹಣೆಯನ್ನು ಖಾಸಗಿಯ ಅಥವಾ ಹೊರಗಿನವರ ನಿಯಂತ್ರಣಕ್ಕೆ ಒಳಪಡಿಸಬೇಕೆಂದು ಅಭಿಪ್ರಾಯಪಡುತ್ತಾನೆ. ಹಾರ್ಡಿನ್‌ನಂತೆಯೇ ಓಲ್ಸನ್ ಕೂಡ, ಊರೊಟ್ಟಿನ ಸಂಪತ್ತಿನ ಸಂದರ್ಭದಲ್ಲಿ ಪ್ರತಿಯೊಬ್ಬರೂ ಸಂಪನ್ಮೂಲವನ್ನು ಅತಿ ಬಳಕೆಗೆ ಒಳಪಡಿಸಿ, ಸಂಪತ್ತಿನ ಸಂರಕ್ಷಣೆ ಮತ್ತು ನಿರ್ವಹಣೆಯನ್ನು ಮಾತ್ರ ಬೇರೆಯವರು ಮಾಡಬೇಕೆಂಬ ಮನೋಭಾವವನ್ನು ತೋರುತ್ತಾರೆ ಎಂದಿದ್ದಾನೆ. ಊರೊಟ್ಟಿನ ಆಸ್ತಿಯನ್ನು "ಬಳಸುವವರು ನಾವು, ಸಂರಕ್ಷಿಸಬೇಕಾದವರು ಹೊರಗಿನವರು" ಎಂಬ ಈ ನಡವಳಿಕೆಯನ್ನು "ಫ್ರೀಲೋಡಿಂಗ್"ಎಂಬ ಹೆಸರಿನಿಂದ ಓಲ್ಸನ್ ಕರೆದಿದ್ದಾನೆ. ಊರೊಟ್ಟಿನ ಸಂಪತ್ತನ್ನು ಬಳಸದಂತೆ ಯಾವೊಬ್ಬ ವ್ಯಕ್ತಿಯ ಮೇಲೂ ನಿಷೇಧ ಹೇರುವುದು ಸಾಧ್ಯವಿಲ್ಲವಾದ್ದರಿಂದ, ಸಾಮೂಹಿಕ ಆಸ್ತಿಯಾದ ಊರೊಟ್ಟಿನ ಸಂಪತ್ತಿನ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲು, ಯಾರಿಗೂ ಯಾವ ರೀತಿ ಪ್ರೋತ್ಸಾಹವೂ ಇರುವುದಿಲ್ಲ. ಹೀಗಾಗಿ ಪ್ರತಿಯೊಬ್ಬರೂ ಊರೊಟ್ಟಿನ ಸಂಪತ್ತಿನಿಂದ ಸಾಧ್ಯವಾದಷ್ಟು ಪ್ರಯೋಜನವನ್ನು, ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಾಧ್ಯವಾದಷ್ಟು ಇತರರಿಗಿಂತ ಬೇಗ ಪಡೆಯಲು ಪ್ರಯತ್ನಿಸುತ್ತಾರೆಯೇ ಹೊರತಾಗಿ ಸಂರಕ್ಷಣೆ, ನಿಯಂತ್ರಣಗಳ ಬಗೆಗೆ ಯೋಚಿಸುವುದಿಲ್ಲ.

'ದಿ ಟ್ರಾಜೆಡಿ ಆಫ್ ಕಾಮನ್ಸ್' ನ ವಿಶ್ಲೇಷಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದು ಸಂಪ್ರದಾಯ ಮತ್ತು ಆಧುನಿಕತೆಗಳನ್ನು ಒಂದರಪಕ್ಕ ಒಂದನ್ನಿಟ್ಟು ಪರೀಕ್ಷಿಸುವ ಆಧುನೀಕರಣ ಸಿದ್ಧಾಂತದ ಚಿಂತನೆಗಳಲ್ಲಿಯೇ ಮುಳುಗಿ ಹೋಗಿರುವುದು ಕಂಡುಬರುತ್ತದೆ. ಈ ವಿಶ್ಲೇಷಣೆ ಸಾಂಪ್ರದಾಯಿಕವಾದ, ಅನೌಪಚಾರಿಕವಾದ ಸಾಮೂಹಿಕ ಆಸ್ತಿವ್ಯವಸ್ಥೆಯನ್ನು ಅದಕ್ಷ, ಅವೈಚಾರಿಕ ಹಾಗೂ ಅನರ್ಥಕಾರಿಯೆಂದು ಚಿತ್ರಿಸಿ, ಆಧುನಿಕ ಆಸ್ತಿ ಹಕ್ಕಿನ ವ್ಯವಸ್ಥೆಯನ್ನು ಅದಕ್ಕೆ ವಿರುದ್ಧವಾದ ಅಪೇಕ್ಷಣೀಯ ಗುಣ ಲಕ್ಷಣಗಳ ವ್ಯವಸ್ಥೆಯಾಗಿ ಚಿತ್ರಿಸುತ್ತದೆ. 'ಟ್ರಾಜಿಡಿ ಆಫ್ ಕಾಮನ್ಸ್' ಮಾದರಿಯ ಮುಖ್ಯವಾದ ದೌರ್ಬಲ್ಯವೆಂದರೆ, ಖಾಸಗಿಯೂ ಅಲ್ಲದ, ಸರ್ಕಾರದ ನಿಯಂತ್ರಣಕ್ಕೂ ಸೇರದ ಊರೊಟ್ಟಿನ ಸಂಪತ್ತು ಮುಕ್ತ ಬಳಕೆಯ ವರ್ಗಕ್ಕೆ (ಓಪನ್ ಆ್ಯಕ್ಸೆಸ್) ಸೇರಿದ್ದು, 'ಎಲ್ಲರಿಗೂ ಪುಕ್ಕಟೆ' ಎಂಬ ಧೋರಣೆಯಿಂದ ಎಲ್ಲರ ಶೋಷಣೆಗೆ ಒಳಪಡುತ್ತದೆ ಎಂಬ ಸಾರಾಸಗಟಾದ ನಿಲುವು. ಟ್ರಾಜಿಡಿ ಆಫ್ ಕಾಮನ್ಸ್'ಗೆ ಸಂಬಂಧಿಸಿದಂತೆ ಕೆಲವು ವಿದ್ವತ್ಪೂರ್ಣ ವ್ಯಾಖ್ಯಾನಗಳು ಊರೊಟ್ಟಿನ ಸಂಪತ್ತಿನ ನಾಶವನ್ನು ತಡೆಗಟ್ಟಲು ಸರ್ಕಾರವೇ ಸಂಪನ್ಮೂಲಗಳ ನಿರ್ವಹಣೆಯ ಜವಾಬ್ದಾರಿಯನ್ನು ಹೊರಬೇಕೆಂದು ಶಿಫಾರಸು ಮಾಡಿದರೆ, ಮತ್ತೆ ಕೆಲವು ವಿದ್ವಾಸರು ಸಮಸ್ಯೆಯನ್ನು ಪರಿಹರಿಸಲು ಖಾಸಗೀ ನಿಯಂತ್ರಣ ಅಗತ್ಯವೆಂದಿದ್ದಾರೆ. ಆದರೆ ಸರ್ಕಾರದ ನಿಯಂತ್ರಣವೇ ಆಗಲಿ, ಖಾಸಗೀ ನಿಯಂತ್ರಣವೇ ಆಗಲಿ ಎಲ್ಲ ಸಂದರ್ಭಗಳಲ್ಲೂ ಏಕ ಪ್ರಕಾರವಾಗಿ ಯಶಸ್ವಿಯಾದ ಉದಾಹರಣೆಗಳಿಲ್ಲ. ಆದರೆ ಸರ್ಕಾರದಂತಹ ಅಥವಾ ಮಾರುಕಟ್ಟೆಯಂತಹ ವ್ಯವಸ್ಥೆಗಳಿಂದ ಭಿನ್ನವಾದ ಸಾಂಸ್ಥಿಕ ರಚನೆಗಳನ್ನವಲಂಬಿಸಿ ಸ್ಥಳೀಯ ಸಮುದಾಯವೇ ಊರೊಟ್ಟಿನ ಸಂಪತ್ತನ್ನು ಸಾಕಷ್ಟು ದೀರ್ಘಕಾಲದವರೆಗೆ ಸಾಕಷ್ಟು ಯಶಸ್ವಿಯಾಗಿ ನಿರ್ವಹಿಸಿರುವ ಉದಾಹರಣೆಗಳಿವೆ. ಇವುಗಳಲ್ಲಿ ಕೆಲವೆಂದರೆ, ಪಶ್ಚಿಮ ಬಂಗಾಲದ ಅರಾಬರಿಯಲ್ಲಿ ಅರಣ್ಯಗಳ ಪುನರುಜ್ಜೀವನ,[23] ಉತ್ತರ ಪ್ರದೇಶದ ಬೆಟ್ಟಗುಡ್ಡಗಳಲ್ಲಿ ಅರಣ್ಯ ಸಂರಕ್ಷಣೆ,[24] ಸುಖೋಮಾಜಿರಿಯಲ್ಲಿ ಅರಣ್ಯ ಮತ್ತು ಬಂಜರು ಭೂಮಿಯ ನಿರ್ವಹಣೆ[25], ಊರೊಟ್ಟಿನ ಸಂಪತ್ತಿನ ನಿರ್ವಹಣೆಯ ಪ್ರಕರಣಗಳ ವಿಮರ್ಶೆ[26] ಮತ್ತು ಓರಿಸ್ಸಾದಲ್ಲಿ ಹಳ್ಳಿಯ ಸಾಮೂಹಿಕ ಸಂಪತ್ತು- ಒಂದು ಅಧ್ಯಯನ.[27]

ಸಮುದಾಯಗಳಿಂದಲೇ ಪ್ರೇರಿತವಾದ ಹಾಗೂ ಯಶಸ್ವಿಯಾದ ಊರೊಟ್ಟಿನ ಸಂಪನ್ಮೂಲಗಳ ನಿರ್ವಹಣಾ ವ್ಯವಸ್ಥೆಗಳ ಅಸ್ತಿತ್ವ 'ದಿ ಟ್ರಾಜಿಡಿ ಆಫ್ ಕಾಮನ್ಸ್' ಸಿದ್ಧಾಂತವನ್ನು ನಿರಾಕರಿಸಿ, ಊರೊಟ್ಟಿನ ಸಂಪನ್ಮೂಲಗಳ ನಿರ್ವಹಣಾ ವ್ಯವಸ್ಥೆಗಳ ಸಾಂಪ್ರದಾಯಿಕ ಬಳಕೆಯ ಪದ್ಧತಿಗಳನ್ನು ಪುನರ್‌ಪರಿಶೀಲನೆಗೆ ಒಳಪಡಿಸಿದೆ.[28]

ಊರೊಟ್ಟಿನ ಸಂಪನ್ಮೂಲದ ನಿರ್ವಹಣೆಯ ಯಶಸ್ವೀ ಪ್ರಕರಣಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಜನರ ಸಹಭಾಗಿತ್ವದ ಚಳವಳಿಗೆ ಅಗತ್ಯವಾದ ಬೌದ್ಧಿಕವಾದ ಬೆಂಬಲವನ್ನು

ಒದಗಿಸಿವೆ. ಸ್ಥಳೀಯ ಜನತೆ ಮತ್ತು ಸ್ಥಳೀಯ ಸಂಪನ್ಮೂಲಗಳ ನಡುವೆ ಸಾಮರಸ್ಯವನ್ನು ಸಾಧಿಸಲು ಕೈಗಾರಿಕಾ ಪೂರ್ವ, ವಸಾಹತು ಪೂರ್ವದ ಪರಿಸ್ಥಿತಿಗೆ ಹಿಂದಿರುಗುವ ಅಗತ್ಯವಿಲ್ಲವೆಂಬುದನ್ನು ಈ ಪ್ರಕರಣಗಳು ತೋರಿಸುತ್ತವೆ. ಊರೊಟ್ಟಿನ ಸಂಪನ್ಮೂಲಗಳ ಸ್ಥಳೀಯ ನಿರ್ವಹಣೆಯ ಪ್ರಕರಣಗಳಲ್ಲಿ ಸಾಂಪ್ರದಾಯಕ ಬೇರುಗಳಿದ್ದರೂ ಸಹ, ಸಮಕಾಲೀನ ಪ್ರಪಂಚದ ಅಗತ್ಯಗಳಿಗನುಸಾರವಾಗಿ ಸದೃಢವಾದ ಸಾಂಸ್ಥಿಕ ರಚನೆಗಳನ್ನು ಸ್ಥಳೀಯವಾಗಿಯೇ ರೂಪಿಸಿ ಕೊಂಡಿರುವುದು ಈ ಅಧ್ಯಯನಗಳಿಂದ ತಿಳಿದುಬರುತ್ತದೆ. ಈ ಏರ್ಪಾಟುಗಳಲ್ಲಿ ಆಧುನಿಕ ಪೂರ್ವಕ್ಕಿಂತ ಆಧುನಿಕೋತ್ತರ ಸ್ವರೂಪಗಳನ್ನು ಗುರುತಿಸಬಹುದು.

ಪರಿಸರವಾದಿ ಪ್ರತಿಕ್ರಿಯೆ

ಆಧುನಿಕ ಉತ್ಪಾದನಾ ಪ್ರಕ್ರಿಯೆಗಳ ಮುಖ್ಯ ಉದ್ದೇಶ ಜನ ಬಳಸುವ ವಸ್ತುಗಳ ಅತಿ ಹೆಚ್ಚಿನ ಪ್ರಮಾಣದ ಉತ್ಪಾದನೆ. ಗರಿಷ್ಠ ಲಾಭಾಂಶವೇ ಮುಖ್ಯ ಗುರಿಯಾಗಿರುವ ಈ ರೀತಿಯ ಉತ್ಪಾದನೆ ಸಂಪನ್ಮೂಲಗಳನ್ನು ಬೇಕಾಬಿಟ್ಟಿಯಾಗಿ ಬಳಸಿಕೊಳ್ಳುತ್ತದೆ. ಉತ್ಪಾದಕತೆಯನ್ನು ಆರ್ಥಿಕ ಲಾಭದ ಸಂಕುಚಿತ ದೃಷ್ಟಿಯಿಂದ ಮಾತ್ರ ಅರ್ಥೈಯಿಸುವುದರಿಂದ, ಪ್ರಕೃತಿಯ ಜೀವಿ-ಪರಿಸ್ಥಿತಿ ವ್ಯವಸ್ಥೆಯಲ್ಲಿನ ಇನ್ನಿತರ ಸ್ವರೂಪದ ಉತ್ಪಾದನೆಗಳನ್ನು ಇಲ್ಲಿ ಪರಿಗಣಿಸುವುದೇ ಇಲ್ಲ. ಇದರ ಪರಿಣಾಮವಾಗಿ ದೀರ್ಘಾವಧಿಯಲ್ಲಿ ಆಧುನಿಕ ಉತ್ಪಾದನಾ ಪ್ರಕ್ರಿಯೆಗಳು ಅನುತ್ಪಾದಕವಾಗುತ್ತವೆ.

ಅಭಿವೃದ್ಧಿ ಯೋಜನೆಗಳಿಗೆ ನೈಸರ್ಗಿಕ ಸಂಪನ್ಮೂಲಗಳು ಅವಶ್ಯಕ. ಪ್ರಕೃತಿಗೆ ಸಮೀಪವಾಗಿ ಬದುಕುವ ಕೋಟ್ಯಂತರ ಜನರ ದಿನ ನಿತ್ಯದ ಬದುಕಿಗೂ ಈ ಸಂಪನ್ಮೂಲಗಳು ಬೇಕು. ಆಧುನೀಕರಣ ಪ್ರಕ್ರಿಯೆ ಹಾಗೂ ಆರ್ಥಿಕ ಬೆಳವಣಿಗೆಗಳು ಜನಸಾಮಾನ್ಯರಿಗೆ ಅಗತ್ಯವಾದ ಸಂಪನ್ಮೂಲಗಳ ಜೊತೆಗ ನೇರವಾಗಿ ಸ್ಪರ್ಧಿಸುತ್ತವೆ. ಇಂಥ ಸಂದರ್ಭದಲ್ಲಿ ನೀರು, ನೆಲ, ಅರಣ್ಯ ಮುಂತಾದ ಸಂಪನ್ಮೂಲಗಳ ಜೀವಿ-ಪರಿಸ್ಥಿತಿ ವ್ಯವಸ್ಥೆಗೆ ಧಕ್ಕೆಯುಂಟಾಗಿ, ಸಂಪನ್ಮೂಲವನ್ನವಲಂಬಿಸಿದ ಜನರ ಬದುಕಿಗೆ ತೀವ್ರ ಹಾನಿಯುಂಟಾಗುತ್ತದೆ. ಅಭಿವೃದ್ಧಿ ಯೋಜನೆಗಳೇ ಜನರ ಬದುಕನ್ನು ಹಾಳು ಮಾಡುತ್ತವೆ. ಇದರ ಪರಿಣಾಮವಾಗಿ ಒಂದೇ ಸಮಾಜದಲ್ಲಿ ಏಕಕಾಲದಲ್ಲಿ "ಚಲನಶೀಲ, ಪ್ರಗತಿಪರ, ಆಧುನಿಕ ಹಾಗೂ "ಜಡವಾದ, ಹಿಂದುಳಿದ, ಸಾಂಪ್ರದಾಯಿಕ" ವಲಯಗಳನ್ನು ಕಾಣಬಹುದು. ಆದರೆ ಸಾಂಪ್ರದಾಯಿಕ ವಲಯದಿಂದ ಹೆಚ್ಚಿನ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಹೊರತೆಗೆದ ಹೊರತೂ ಆಧುನಿಕ ಸಮಾಜದ ಚಲನಶೀಲತೆ ಸಾಧ್ಯವಾಗುವುದಿಲ್ಲ.

"ಆರ್ಥಿಕ ಅಭಿವೃದ್ಧಿಗೆ ಇದುವರೆವಿಗೂ ಬಳಸದಿದ್ದ ಹೊಸ ಸಂಪನ್ಮೂಲವನ್ನು ಬಳಸಿಕೊಳ್ಳಲಾಗುತ್ತದೆ" ಎಂಬ ಮೂಲಭೂತ ಗೃಹೀತದ ಮೇಲೆ ವಾಲ್ಟ್ ರೋಸ್ಟೋವಿನ ಮಾದರಿ ಆಧಾರಿತವಾಗಿದೆ. ಇದು ಸಂಪನ್ಮೂಲಗಳು ಹೇರಳವಾಗಿರುವ ಪರಿಸ್ಥಿತಿಯಲ್ಲಿ ಮಾತ್ರ ಸತ್ಯ. ಆದರೆ

ನೆಲ, ಜಲ, ಅರಣ್ಯಗಳಂಥ ಸಂಪನ್ಮೂಲಗಳು ಪರಿಮಿತವಾಗಿರುವ ಸಂದರ್ಭದಲ್ಲಿ ಸಂಪನ್ಮೂಲಕ್ಕಾಗಿ ತೀವ್ರ ಪೈಪೋಟಿ ನಡೆಯುತ್ತದೆ. ಇದರಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಬೆಂಬಲವಿರುವವರಿಗೆ ಹೆಚ್ಚಿನ ಸಂಪನ್ಮೂಲಗಳು ದೊರೆಯುತ್ತವೆ. ಇಂಥ ಪರಿಸ್ಥಿತಿಯಲ್ಲಿ ಅಭಿವೃದ್ಧಿ, ಆರ್ಥಿಕ ಧ್ರುವೀಕರಣಕ್ಕೆ ದಾರಿ ಮಾಡಿಕೊಡುತ್ತದೆಯೇ ಹೊರತಾಗಿ ಎಲ್ಲರ ಅಭ್ಯುದಯಕ್ಕಲ್ಲ. "ಅಭಿವೃದ್ಧಿ ಯೋಜನೆಗಳಲ್ಲಿ ಆಧುನೀಕರಣ ತಂತ್ರಜ್ಞಾನವನ್ನು ಬಳಕೆಗೆ ತಂದಾಗ, ಬದುಕಲು ಅಗತ್ಯವಾದ ಸಂಪನ್ಮೂಲಗಳು ಹೆಚ್ಚಿನ ಪ್ರಮಾಣದಲ್ಲಿ ಬೇರಡೆಗೆ ಸಾಗಿ, ಸಾಮಾಜಿಕ, ಆರ್ಥಿಕ ಅಸಮಾನತೆಗಳು ಮತ್ತಷ್ಟು ಹೆಚ್ಚುತ್ತವೆ. ಆಧುನಿಕ ತಂತ್ರಜ್ಞಾನ ಪ್ರೇರಿತ ಈ 'ತಾಂತ್ರಿಕ ಧ್ರುವೀಕರಣ' (ಟೆಕ್ನೊಲಾಜಿಕಲ್ ಪೋಲರೈಸೇಶನ್) ಪ್ರಕೃತಿಗೆ ಸಮೀಪವಾಗಿ ವಾಸಿಸುವ ಜನರನ್ನು ಮತ್ತಷ್ಟು ದಾರಿದ್ರ್ಯಕ್ಕೆತಳ್ಳಿ, ಅವರ ಬದುಕಿಗೆ ಆಪಾಯವನ್ನು ಉಂಟುಮಾಡುತ್ತದೆ"[29] ಆಧುನೀಕರಣ ಸಿದ್ಧಾಂತವನ್ನಾಧರಿಸಿದ ಅಭಿವೃದ್ಧಿ ಮಾದರಿಯಲ್ಲಿ ಅಭಿವೃದ್ಧಿಯ ಫಲ ಒಂದು ವರ್ಗದವರಿಗೆ ದೊರೆತರೆ, ಅಭಿವೃದ್ಧಿಗೆ ತೆರಬೇಕಾದ ಪಾರಿಸರಿಕ ಬೆಲೆಯನ್ನು ಬಹಳಷ್ಟು ಮಂದಿ ಬಡಜನರು ಭರಿಸಬೇಕಾಗುತ್ತದೆ. 18ನೆ ಶತಮಾನದ ಅಂತ್ಯದಲ್ಲಿ ಬ್ರಿಟನ್ 'ಟೇಕ್ ಆಫ್' ಹಂತವನ್ನು ಮುಟ್ಟಲು ಸಾಧ್ಯವಾದದ್ದು ಮೂರು ಖಂಡಗಳಲ್ಲಿ ಬ್ರಿಟನ್ ವಸಾಹತುಗಳ ಶೋಷಣೆಯಿಂದ. "ಭಾರತದಲ್ಲಿ ಕೃಷಿ ಮತ್ತು ಜವಳೀ ಉದ್ಯಮಗಳ ನಾಶ, ಆಫ್ರಿಕಾದಲ್ಲಿ ಗುಲಾಮರ ವ್ಯಾಪಾರ ಮತ್ತು ಉತ್ತರ ಅಮೇರಿಕಾದಲ್ಲಿ ಸ್ಥಳೀಯ ರೆಡ್ ಇಂಡಿಯನ್ನರ ಶೋಷಣೆ, ನಾಶಗಳು ಬ್ರಿಟನ್ನಿನ ಆಧುನಿಕ ಕೈಗಾರಿಕಾ ಕೇಂದ್ರಗಳ ಆರ್ಥಿಕ ಬೆಳವಣಿಗೆಗೆ ಪೂರ್ವ ಷರತ್ತುಗಳಾಗಿದ್ದವು. ಸಮಕಾಲೀನ ಭಾರತದಲ್ಲಿ ಹಾಗೂ ಭಾರತದಂತಹ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಾಲ್ಟ್ ರೋಸ್ಟೋವ್ ಪ್ರತಿಪಾದಿಸಿದ 'ಟೇಕ್ ಆಫ್' ಸಾಧ್ಯವಾಗುವುದು ಕೋಟ್ಯಂತರ ಜನರ ಬದುಕಿಗೆ ಆಧಾರವಾಗಿರುವ ಸಂಪನ್ಮೂಲಗಳ ನೆಲೆಯ ನಾಶದಿಂದ ಮಾತ್ರ."[30] ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಾದ ಸಂಪನ್ಮೂಲಗಳನ್ನು, ಬಡಜನರ ದಿನನಿತ್ಯದ ಬದುಕಿಗೆ ಆಧಾರವಾದ ಸಂಪನ್ಮೂಲಗಳ ನಾಶದಿಂದ ಸೃಷ್ಟಿಸಲಾಗುತ್ತದೆಯೆಂಬುದೇ ತೃತೀಯ ವಿಶ್ವದ ದೇಶಗಳ ಬಹುತೇಕ ಪರಿಸರ ಚಳವಳಿಗಳ ಮುಖ್ಯ ಆಕ್ಷೇಪಣೆಯಾಗಿದೆ. ಚಿಪ್ಕೊ, ನರ್ಮದಾ ಯೋಜನೆ, ಪಶ್ಚಿಮ ಘಟ್ಟ ಉಳಿಸಿ, ನೀಲಗಿರಿ ವಿರೋಧಿ ಮುಂತಾದ ಎಲ್ಲ ಚಳವಳಿಗಳಲ್ಲೂ ಇದನ್ನು ಗುರುತಿಸಬಹುದು. ಸಂಪನ್ಮೂಲಗಳ ಬುನಾದಿಯನ್ನೇ ನಾಶ ಮಾಡುವ ಈ ಮಾದರಿಯ ಅಭಿವೃದ್ಧಿಯನ್ನು ದೀರ್ಘ ಕಾಲದವರೆಗೆ ನಡೆಸುವುದು ಸಾಧ್ಯವೇ ಇಲ್ಲ. ಈ ಅರಿವೇ ಪ್ರಕೃತಿಯೊಡನೆ ಹೊಂದಿಕೊಂಡು ಬಾಳುವ ಚಿಂತನೆಗೆ, ಆರ್ಥಿಕತೆಗೆ ಹೊಸ ಅರ್ಥ, ಆಯಾಮ, ಪ್ರಸಕ್ತತೆಗಳನ್ನು ನೀಡುವ ಪ್ರಯತ್ನಗಳಿಗೆ ಕಾರಣವಾಯಿತು.

1972ರಲ್ಲಿ ನಡೆದ ವಿಶ್ವರಾಷ್ಟ್ರ ಸಂಸ್ಥೆಯ 'ಮಾನವ - ಪರಿಸರ ಸಮ್ಮೇಳನ' ಮತ್ತು 1973ರಲ್ಲಿ ಅಸ್ತಿತ್ವಕ್ಕೆ ಬಂದ ವಿಶ್ವರಾಷ್ಟ್ರ ಸಂಸ್ಥೆಯ ಪರಿಸರ ಕಾರ್ಯಕ್ರಮಗಳು ಪರಿಸರದ ಸಮಸ್ಯೆಗಳು ಮತ್ತು ವಿವಾದಾತ್ಮಕ ವಿಷಯಗಳತ್ತ ಜಗತ್ತಿನ ರಾಷ್ಟ್ರಗಳ ಗಮನ ಸೆಳೆದವು. ಅಭಿವೃದ್ಧಿ ಯೋಜನೆಗಳಿಂದ

ಪರಿಸರ ನಾಶವಾಗಬೇಕಾಗಿಲ್ಲ, ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಈ ಎರಡೂ ಪರಸ್ಪರ ಪೂರಕವಾಗುವಂತೆ ಮಾಡುವ ಸಾಧ್ಯತೆಗಳಿವೆಯೆಂಬ ವಿಷಯ 'ತಾಳಿಕೆಯ ಅಭಿವೃದ್ಧಿ' (ಸಸ್ಟೈನಬಲ್ ಡೆವಲಪ್‌ಮೆಂಟ್) ಪರಿಕಲ್ಪನೆಯಿಂದ ಗೋಚರಿಸಿತು. ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಸ್ತೃತವಾದ ಸಾಹಿತ್ಯ ಸೃಷ್ಟಿಯಾದಂತೆ, ಅದಕ್ಕೆ ಸಮಾನಾಂತರವಾಗಿ, ಪರಿಸರ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಮುಖ್ಯ ಸಂಸ್ಥೆಗಳ ಕಾರ್ಯ ಸೂಚಿಗಳಲ್ಲಿಯೂ ಬದಲಾವಣೆಗಳಾದವು.

1980ರ ದಶಕದಲ್ಲಿ ಮಾನವ ಮತ್ತು ಪ್ರಕೃತಿಯ ನಡುವಿನ ಪರಸ್ಪರ ಪ್ರತಿಕ್ರಿಯೆಗೆ ಸಂಬಂಧಪಟ್ಟಂತೆ ಸಮಗ್ರ ದೃಷ್ಟಿಯೊಂದು ರೂಪುಗೊಳ್ಳಲಾರಂಭಿಸಿತು. "ಅಭಿವೃದ್ಧಿ ಚಿಂತನೆಗಳಲ್ಲಿ ಅದುವರೆವಿಗೆ ಕಂಡುಬರುತ್ತಿದ್ದ ಮಾನವ-ಪ್ರಕೃತಿ ದ್ವೈತವನ್ನು (ಡ್ಯೂಯಾಲಿಟಿ) ನಿವಾರಿಸುವ ಪ್ರಯತ್ನಕ್ಕೆ ಬದ್ಧರಾಗಿದ್ದ ಅನೇಕ ಪರಿಸರವಾದಿಗಳ ಚಿಂತನೆ ಈ ಬದಲಾವಣೆಗಳಿಗೆ ಕಾರಣವಾಯಿತು."[31] ಪರಿಸರದ ಸಮಸ್ಯೆಗಳನ್ನು ಸಾಮಾಜಿಕ ರಚನೆಗಳ ವಿಶ್ಲೇಷಣೆಯ ಮೂಲಕವಾಗಿ ವ್ಯಾಖ್ಯಾನಿಸುವ ನೂತನ ಪ್ರಯತ್ನಗಳು ಕೂಡ ಈ ಪಲ್ಲಟಕ್ಕೆ ಕಾರಣವಾಗಿ ಅದನ್ನು ಪ್ರಭಾವಿಸಿತು. ಸಮಾಜ-ಪ್ರಕೃತಿಯ ಸಂಬಂಧಗಳಲ್ಲಿ ಆಸಕ್ತರಾಗಿದ್ದ ಸಮಾಜ ವಿಜ್ಞಾನಿಗಳು ಮತ್ತು ಮಾನವ ಶಾಸ್ತ್ರಜ್ಞರ ಪ್ರಭಾವವನ್ನು ಈ ಚಿಂತನೆಗಳಲ್ಲಿ ಗುರುತಿಸಬಹುದು. ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸ್ಥಳೀಯ ಜನರ ಸಕ್ರಿಯ ಪಾತ್ರವನ್ನು ಈ ವಿಜ್ಞಾನಿಗಳು ಎತ್ತಿ ತೋರಿದರು. ಉಷ್ಣವಲಯದಲ್ಲಿನ ಅರಣ್ಯನಾಶದ ಸಾಮಾಜಿಕ ಪರಿಣಾಮಗಳಿಗೆ ಸಂಬಂಧಪಟ್ಟಂತಹ ಅಧ್ಯಯನಗಳು ಸ್ಥಳೀಯ ಜನ ಸಮುದಾಯ, ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸಕ್ಕೆ ಅಗತ್ಯವಾದ ಸಂಪನ್ಮೂಲಗಳ ಅತಿ ಬಳಕೆಯನ್ನು ತಪ್ಪಿಸಲು ಹೇಗೆ ಶಕ್ತಿಹೀನರಾಗುತ್ತಾರೆ, ಅವರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಹೇಗೆ ಅವರನ್ನು ಅಸಹಾಯಕರನ್ನಾಗಿ ಮಾಡುತ್ತದೆ, ಸಂಪನ್ಮೂಲಗಳನ್ನು ತಾಳಿಕೆಯ, ಬಾಳಿಕೆಯ ಮಾರ್ಗದಲ್ಲಿ ಬಳಸಿಕೊಳ್ಳಲು ಅವರ ಆರ್ಥಿಕ ಪರಿಸ್ಥಿತಿ ಹೇಗೆ ಅಡ್ಡಿ ಮಾಡುತ್ತದೆ ಮುಂತಾದವುಗಳ ಮೇಲೆ ಕೇಂದ್ರೀಕೃತವಾಗಿದೆ.

ಬಡತನ, ಶಕ್ತಿಹೀನತೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕ್ಷತಿ-ಇವುಗಳ ನಡುವಿನ ಸಂಬಂಧ, 1980ರ ದಶಕದ ಪರಿಸರ ಮತ್ತು ಅಭಿವೃದ್ಧಿಗಳಿಗೆ ಸಂಬಂಧಿಸಿದ ಮಹತ್ವದ ಅಧ್ಯಯನ, ಸಂಶೋಧನೆಗಳಿಗೆ ಮಾರ್ಗದರ್ಶಕ ತತ್ವಗಳಾಯಿತು. 1987ರ ಬ್ರಂಟ್‌ಲಾಂಡ್ ವರದಿಯಲ್ಲಿ ತಾಳಿಕೆಯ ಅಭಿವೃದ್ಧಿಗೆ ನೀಡಿರುವ ವ್ಯಾಖ್ಯೆ, ಜನ ಸಾಮಾನ್ಯರ ವರ್ತಮಾನದ ಅಗತ್ಯಗಳು ಹಾಗೂ ಆಶೋತ್ತರಗಳನ್ನು ಪೂರೈಸುವ ಷರತ್ತಿನೊಂದಿಗೆ ಪ್ರಾರಂಭವಾಗುತ್ತದೆ. ಪರಿಸರ ಸಮಸ್ಯೆಗಳ ವಿಶ್ಲೇಷಣೆ, ಈ ಸಮಸ್ಯೆಗಳ ಮೂಲ ಸಂಪನ್ಮೂಲಗಳ ಮೇಲಿನ ಜನ ಸಮುದಾಯದ ಹಿಡಿತದಲ್ಲಿ ಕಂಡು ಬರುವ ಸಾಮಾಜಿಕ ಅಸಮಾನತೆಯಲ್ಲಿದೆ ಎಂಬುದನ್ನು ಸೂಚಿಸುತ್ತದೆ. ಇದರೊಂದಿಗೆ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಆಗಲೇಬೇಕಾದ ಎರಡು ಕೆಲಸಗಳತ್ತ

ಗಮನ ಸೆಳೆಯುತ್ತದೆ. "ಮೊದಲನೆಯದಾಗಿ, ಬಡತನ ನಿವಾರಣೆ ಮತ್ತು ಪರಿಸರದ ಸಮಸ್ಯೆಗಳ ಪರಿಹಾರಕ್ಕೆ ಪೂರ್ವ ಷರತ್ತಾಗಿ ಸಂಪನ್ಮೂಲಗಳು ಶ್ರೀಮಂತ ವರ್ಗದಿಂದ ಬಡಜನರತ್ತ ಸಾಗಬೇಕಾಗುತ್ತದೆ. ಎರಡನೆಯದಾಗಿ ಸಮಾಜದ ಪ್ರತಿಷ್ಠಿತ ವರ್ಗದಲ್ಲಿ ಸಂಚಯವಾಗಿರುವ ರಾಜಕೀಯ ಶಕ್ತಿ, ಸಂಪನ್ಮೂಲಗಳಿಗೆ ಸಮೀಪವಾಗಿ ಬದುಕುವ ಸ್ಥಳೀಯ ಜನರಿಗೂ ಲಭಿಸುವಂತೆ ಪರಿಸರದ ಮೇಲೆ ನಿಯಂತ್ರಣ ಪ್ರಜಾಪ್ರಭುತ್ವದ ತತ್ವಗಳಿಗನುಸಾರವಾಗಿ ನಡೆಯಬೇಕಾಗುತ್ತದೆ."[32] 1980ರ ವರ್ಲ್ಡ್ ಕಾನ್ಸರ್‌ವೇಷನ್ ಸ್ಟ್ರಾಟೆಜಿಯ ನಂತರ ಪರಿಸರ ಸಮಸ್ಯೆಗಳ ಸಾಮಾಜಿಕ, ಸಾಂಸ್ಕೃತಿಕ ವಿಶ್ಲೇಷಣೆ ಮತ್ತು ಆ ಪರಿಸರದಲ್ಲೇ ಬದುಕುವ ಜನರ ಹೊಟ್ಟೆ ಪಾಡಿನ ಪ್ರಶ್ನೆಗಳಿಗೆ ಹೆಚ್ಚಿನ ಒತ್ತು ದೊರೆಯುತ್ತಿರುವುದು ಕಂಡುಬರುತ್ತದೆ.

ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳ ನಿರ್ವಹಣೆ ಮತ್ತು ಪರಿಹಾರಗಳಿಗೆ ಸ್ಥಳೀಯ ಜನರ ಸಶಕ್ತೀಕರಣ ಉತ್ತರ ನೀಡಬಲ್ಲದೆಂಬ ಹೊಸ ಚಿಂತನೆ "ತಲಸ್ಪರ್ಶಿ ಅಭಿವೃದ್ಧಿ" (ಗ್ರಾಸ್ ರೂಟ್ ಡೆವಲಪ್‌ಮೆಂಟ್) ಎಂಬ ಹೆಸರಿನಲ್ಲಿ ಪ್ರಾರಂಭವಾಯಿತು. ಸ್ಥಳೀಯ ಸಮಸ್ಯೆಗಳನ್ನು ಗುರುತಿಸುವುದರಿಂದ ಪ್ರಾರಂಭವಾಗಿ, ಬದಲಾವಣೆಗಳನ್ನು ಸ್ಥಳೀಯವಾಗಿಯೇ ನಿರ್ವಹಿಸಬಲ್ಲ ಘಟ್ಟಕ್ಕೆ ಮುಟ್ಟುವ ಈ ರೀತಿಯ ಅಭಿವೃದ್ಧಿಯಲ್ಲಿ ತಲದಿಂದ ಪ್ರಾರಂಭವಾಗುವ ಮೇಲ್ಮುಖ ವಿಧಾನವನ್ನು ಕಾಣಬಹುದು. ಇದರ ಜೊತೆಜೊತೆಗೇ ಸ್ಥಳೀಯವಾಗಿ ನಡೆದ ಪ್ರತಿಭಟನೆಗಳು ಸಂಪನ್ಮೂಲಗಳ ಮೇಲೆ ಸ್ಥಳೀಯರ ನಿಯಂತ್ರಣ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ಹೆಚ್ಚಿನ ಸಹಭಾಗಿತ್ವಕ್ಕಾಗಿ ಒತ್ತಾಯಿಸಿದವು. ಈ ಸಂದರ್ಭದಲ್ಲಿ 'ಚಿಪ್ಕೋ' ಚಳವಳಿ ತಲಸ್ಪರ್ಶಿ ಪರಿಸರ ಪ್ರತಿಭಟನೆಯ ಒಂದು ಮಹತ್ವದ ಘಟನೆ.

ಸ್ತ್ರೀವಾದಿ ಪ್ರತಿಕ್ರಿಯೆ

ಮಹಿಳೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಅಧ್ಯಯನಗಳು ಮಹಿಳೆಯರ ಇಂದಿನ ಸ್ಥಿತಿಗತಿಗಳಿಗೆ "ಪಿತೃ ಪ್ರಧಾನ ಪದ್ಧತಿ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳು, ಜಾತಿ ಹಾಗೂ ವರ್ಗದ ವ್ಯವಸ್ಥೆಗಳಲ್ಲಿ ಅಂತರ್ಗತವಾಗಿರುವ ವಿವಿಧ ಸ್ವರೂಪದ ಶೋಷಣೆಗಳು ಮುಖ್ಯ ಕಾರಣವೆಂದು ಗುರುತಿಸುತ್ತದೆ. ತೃತೀಯ ರಾಷ್ಟ್ರಗಳ ಮಹಿಳೆಯರ ಇತಿಹಾಸ ನಿರಾಕರಣೆ, ದಾಸ್ಯ, ಅಮಾನವೀಕರಣ ಹಾಗೂ ಅಂತಿಮವಾಗಿ ಹೆಣ್ಣು ಭ್ರೂಣ ಹತ್ಯೆ, ವಧೂ ದಹನದಂತಹ ಪಾಶವೀ ಪ್ರವೃತ್ತಿಗಳಿಂದ ತುಂಬಿದೆ."[33] ಕೈಗೆಟುಕದ ಸಂಪನ್ಮೂಲಗಳು, ಒಂದು ವೇಳೆ ಲಭ್ಯವಾದರೂ ಅವುಗಳ ಮೇಲೆ ಮಹಿಳೆಯರಿಗಿರುವ ಸೀಮಿತ ನಿಯಂತ್ರಣ ಮಹಿಳೆಯರ ಅಧೀನ ಸ್ಥಾನವನ್ನು ನಿರಂತರವಾಗಿ ಮುಂದುವರೆಸಿಕೊಂಡು ಬಂದಿದೆ. ಅವರನ್ನು ವಂಚಿತ ವರ್ಗವನ್ನಾಗಿ ಮಾಡಿದೆ. ಮಹಿಳೆ ಬಡವಳಾದರಂತೂ ಅಂಚೀಕರಣದ ಪರಿಣಾಮ ಇಮ್ಮಡಿಯಾಗುತ್ತದೆ- ಮೊದಲಿಗೆ ಬಡತನದಿಂದ, ಎರಡನೆಯದಾಗಿ ಮಹಿಳೆಯೆಂಬ ಏಕಮಾತ್ರ ಕಾರಣದಿಂದ.

1950 ರಿಂದ 1970ರ ವರೆಗಿನ ಅವಧಿಯಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಜನಕಲ್ಯಾಣ ಧೋರಣೆಯ (ವೆಲ್‌ಫೇರ್ ಅಪ್ರೋಚ್) ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಅನುಷ್ಠಾನಗೊಳಿಸಲಾಯಿತು. ಬಹುತೇಕ ಸಂದರ್ಭಗಳಲ್ಲಿ ಇವು ಏಕ ಆಯಾಮದ ಕಾರ್ಯಕ್ರಮಗಳಾಗಿದ್ದು, ಮಹಿಳೆ ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಒಂದನ್ನು ಗುರುತಿಸಿ, ಅದನ್ನು ಪರಿಹರಿಸುವ ಪ್ರಯತ್ನ ನಡೆಯುತ್ತಿತ್ತು. ತಾಯ್ತನ, ತಾಯಿ ಮತ್ತು ಮಗುವಿನ ಆರೈಕೆ, ಆರೋಗ್ಯ ರಕ್ಷಣೆ, ಆದಾಯ ಗಳಿಕೆ ಮುಂತಾದ ಹಲವಾರು ಕಾರ್ಯಕ್ರಮಗಳು ಈ ದಿಕ್ಕಿನಲ್ಲಿ ಪ್ರಾರಂಭವಾದವು. ಮಹಿಳಾ ಅಭಿವೃದ್ಧಿ ಯೋಜನೆಗಳ ಈ ತೀರಾ ಸರಳೀಕೃತ ಮಾದರಿಗಳಿಂದ ಸ್ವಲ್ಪ ಭಿನ್ನವಾಗಿ, ಮಹಿಳೆಯರ ಅಭಿವೃದ್ಧಿಯ ಸಂಕೀರ್ಣ ಸಮಸ್ಯೆಗಳನ್ನು ವಿಷದವಾಗಿ ಪರಿಶೀಲಿಸುವ ಪ್ರತ್ಯೇಕ ಅಧ್ಯಾಯವೊಂದನ್ನು 6ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಯಿತು. ಆದರೆ ಈ ಸಮಸ್ಯೆಗಳ ನಿವಾರಣೆಗಾಗಿ ಕಾರ್ಯೋಪಾಯಗಳನ್ನು ರೂಪಿಸುವಾಗ ಮಹಿಳೆಯ ಬದಲಿಗೆ ಕುಟುಂಬ ಅಭಿವೃದ್ಧಿ ಯೋಜನೆಗಳ ಮೂಲಭೂತ ಘಟಕವಾಯಿತು. ಕುಟುಂಬದೊಳಗಿನ ಲಿಂಗಾಧಾರಿತ ತಾರತಮ್ಯ ಹಾಗೂ ಅದರಿಂದಾಗುವ ಹಾನಿಯ ಬಗ್ಗೆ ಅಭಿವೃದ್ಧಿ ಯೋಜನೆಗಳು ಯಾವ ಕಾಳಜಿಯನ್ನೂ ತೋರಲಿಲ್ಲ. "7ನೆಯ ಪಂಚವಾರ್ಷಿಕ ಯೋಜನೆಯ ವೇಳೆಗೆ ಈ ಮನೋಭಾವದಲ್ಲಿ ಸ್ವಲ್ಪ ಪರಿವರ್ತನೆ ಕಂಡುಬಂದು ಮಹಿಳೆಯರಲ್ಲಿ ಆತ್ಮ ವಿಶ್ವಾಸ ಬೆಳೆಸುವುದು ಅವರ ಹಕ್ಕು, ಸವಲತ್ತುಗಳ ಬಗ್ಗೆ ಒತ್ತು ನೀಡಲಾಯಿತು".[34] ಅಂತಾರಾಷ್ಟ್ರೀಯ ಮಹಿಳಾ ವರ್ಷದ ವಿಶ್ವಸಮಾವೇಶ (1975), ವಿಶ್ವ ಸಂಸ್ಥೆಯ ಮಹಿಳಾ ದಶಕದ ವಿಶ್ವಸಮಾವೇಶ (1980), ವಿಶ್ವ ಸಂಸ್ಥೆಯ ಮಹಿಳಾ ದಶಕದ ಸಿದ್ಧಿ- ಸಾಧನೆಗಳ ಪರಾಮರ್ಶೆಯ ವಿಶ್ವ ಸಮಾವೇಶ ಈ ಪರಿವರ್ತನೆಯನ್ನು ಪ್ರಭಾವಿಸಿತು.

1986-2000ದ ಅವಧಿಯಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕಾರ್ಯೋಪಾಯಗಳನ್ನು ವಿಶ್ವಸಂಸ್ಥೆ ರೂಪಿಸಿದ ನಂತರ, 1988-2000ದ ಅವಧಿಗೆ ಭಾರತ ಸರ್ಕಾರ "ನ್ಯಾಷನಲ್ ಪರ್‌ಸ್ಪೆಕ್ಟಿವ್ ಪ್ಲಾನ್ ಫಾರ್ ವಿಮೆನ್" ಎಂಬ ಯೋಜನೆಯನ್ನು ಸಿದ್ಧಪಡಿಸಿತು. ಇದರ ಪರಿಣಾಮವಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆಯೊಂದು ರೂಪುಗೊಂಡಿತು. ಅನೇಕ ರಾಜ್ಯಗಳಲ್ಲಿ ಮಹಿಳಾ ಅಭಿವೃದ್ಧಿ ನಿಗಮಗಳು ಅಸ್ತಿತ್ವಕ್ಕೆ ಬಂದವು. ಈ ನಿಗಮಗಳಡಿಯಲ್ಲಿ ಅನೇಕ ಕಾರ್ಯಕ್ರಮಗಳು ರೂಪುಗೊಂಡು ಜಾರಿಯಾದವು.

1950 ರಿಂದ ಪ್ರಾರಂಭವಾದ ಬಹುತೇಕ ಮಹಿಳಾ ಅಭಿವೃದ್ಧಿ ಯೋಜನೆಗಳು, 'ಬಡತನದಲ್ಲಿರುವ ಮಹಿಳೆಯರಿಗೆ ನೆರವಾಗುವ' ಕಲ್ಯಾಣಕಾರಿ ವಿಧಾನವನ್ನೇ ಅನುಸರಿಸಿಕೊಂಡು ಬಂದಿದೆ. ಈ ತತ್ವವನ್ನೇ ಇಂದಿಗೂ ಅನೇಕ ಯೋಜನೆಗಳಲ್ಲಿ ಗುರುತಿಸಬಹುದು. ಈ ಮಾರ್ಗವನ್ನು ಬಳಸುವ

ಯೋಜನೆ, ಕುಟುಂಬದಲ್ಲಿ, ಸಮುದಾಯದಲ್ಲಿ ಮಹಿಳೆಗಿರುವ ಅಧೀನ ಸ್ಥಾನದ ಪ್ರಶ್ನೆಯನ್ನು ಎತ್ತುವುದೇ ಇಲ್ಲ. ಸ್ತ್ರೀ ಪುರುಷರ ನಡುವೆ ಅಧಿಕಾರ ಸಂಬಂಧಿತ ಅಸಮಾನತೆಗಳನ್ನು ಗಮನಿಸುವುದೇ ಇಲ್ಲ. ಉತ್ಪಾದಕ ಆಸ್ತಿಗಳ ಒಡೆತನ ಪುರುಷರಲ್ಲಿದ್ದು, ಅನೇಕ ಸಂದರ್ಭಗಳಲ್ಲಿ ಸಂವಿಧಾನದತ್ತ ಮೂಲಭೂತ ಹಕ್ಕುಗಳಿಂದಲೂ ಮಹಿಳೆ ವಂಚಿತಳಾಗುತ್ತಿದ್ದಾಳೆಂಬುದನ್ನು ಪರಿಗಣಿಸುವುದೇ ಇಲ್ಲ. ಇಂಥ ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರಿಗೆ ಅಲ್ಪಸ್ವಲ್ಪ ಪ್ರಯೋಜನವನ್ನು ನೀಡಿದರೂ ಸಹ, ಕುಟುಂಬದಲ್ಲಿನ ಅವರ ಸಾಂಪ್ರದಾಯಿಕ ಪಾತ್ರಗಳನ್ನೇ ಮತ್ತಷ್ಟು ಭದ್ರಪಡಿಸಿ, ಅವರ ಸ್ಥಿತಿಗತಿಗಳನ್ನು ಇರುವಂತೆಯೇ ಕಾಯ್ದುಕೊಂಡು,ಲಿಂಗ ತಾರತಮ್ಯವನ್ನು ಹಾಗೆಯೇ ಉಳಿಸಿಕೊಂಡು ಬರುತ್ತವೆ.

ಸಮಾಜ ವಿಜ್ಞಾನಿ ಕೇಟ್ ಯಂಗ್ ಮಹಿಳೆಯರ ಅಗತ್ಯಗಳನ್ನು 'ಪ್ರಾಕ್ಟಿಕಲ್ ಜಂಡರ್ ನೀಡ್ಸ್' ಮತ್ತು 'ಸ್ಟ್ರಾಟೆಜಿಕ್ ಜಂಡರ್ ನೀಡ್ಸ್' ಎಂದು ಪ್ರತ್ಯೇಕಿಸುತ್ತಾನೆ[35] ಸ್ಟ್ರಾಟೆಜಿಕ್ ಜಂಡರ್ ನೀಡ್ಸ್, ಕುಟುಂಬ, ಸಮುದಾಯ ಮತ್ತು ಸಮಾಜಗಳಲ್ಲಿ ಮಹಿಳೆಯರ ಅಧೀನ ಸ್ಥಾನಮಾನ, ಅಧಿಕಾರದಲ್ಲಿನ ಅಸಮಾನತೆಗಳು ಮುಂತಾದವುಗಳಿಂದ ಉದ್ಭವಿಸುವ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿವೆ. "ಸ್ಟ್ರಾಟೆಜಿಕ್ ಅಗತ್ಯಗಳು ಪೂರೈಕೆಯಾದರೆ ಮಹಿಳೆಗೆ ಅವಕಾಶಗಳು ಲಭ್ಯವಾಗುತ್ತವೆ. ಭೌತಿಕ ಸಂಪನ್ಮೂಲದ ಮೇಲೆ, ತನ್ನ ಆಸ್ತಿಯ ಮೇಲೆ, ತನ್ನ ದೇಹ ಹಾಗೂ ಸಂತಾನೋತ್ಪತ್ತಿ ಪ್ರಕ್ರಿಯೆಯ ಮೇಲೆ ನಿಯಂತ್ರಣ ಲಭಿಸುತ್ತದೆ. ಹಿಂಸೆ, ಶೋಷಣೆಗಳಿಂದ ಮುಕ್ತವಾದ ಸ್ವತಂತ್ರ ಜೀವನ ನಡೆಸಲು ಸಾಧ್ಯವಾಗುತ್ತದೆ."[36] ವ್ಯಕ್ತಿ, ಕುಟುಂಬ ಮತ್ತು ವಿವಿಧ ಸಾಂಸ್ಥಿಕ ಹಂತಗಳಲ್ಲಿ ಮಹಿಳೆಯರ ಹೋರಾಟ ತೀವ್ರಗೊಂಡಾಗ ಮಾತ್ರ ಇದು ಸಾಧ್ಯವಾಗುತ್ತದೆ, 1970 ರಿಂದೀಚೆಗೆ ತೀವ್ರಗೊಂಡು, ವ್ಯಾಪಕವಾಗಿ ಹಬ್ಬುತ್ತಿರುವ ಮಹಿಳಾ ಚಳವಳಿಗಳು ಈ ಬಗ್ಗೆ ಗಮನಹರಿಸಿವೆ.

ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳಾ ಚಳವಳಿಗಳ ನಿಲುವು, ಧೋರಣೆಗಳನ್ನು ಅಂತರ್ಗತ ಗೊಳಿಸಲು ಹಾಗೂ ಮಹಿಳೆಯರನ್ನು ಸಂಘಟಿಸಿ, ಯೋಜನೆಗಳಲ್ಲಿ ಪಾಲುದಾರರನ್ನಾಗಿ ಮಾಡಲು ಕೈಗೊಳ್ಳಬೇಕಾದ ವ್ಯಾಪಕ ಕ್ರಮಗಳ ಬಗ್ಗೆ ಅನೇಕ ವೇದಿಕೆಗಳಲ್ಲಿ ಚರ್ಚೆಗಳು ನಡೆದಿವೆ. "ಭಾರತದ ಸಂದರ್ಭದಲ್ಲಿ ನಡೆದಿರುವ ಮಹಿಳಾ ಚಳವಳಿಗಳು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಈ ದೇಶದ ನಾಗರಿಕರಾಗಿ ಭಾಗವಹಿಸುವ ಹಕ್ಕನ್ನು ಒತ್ತಾಯಿಸಿವೆ."[37] ಲಿಂಗ ಸಂವೇದನೆಯಿಲ್ಲದ ಪರಿಸ್ಥಿತಿಯಲ್ಲಿ ರೂಪುಗೊಳ್ಳುವ ಯೋಜನೆಗಳಿಂದ ಮಹಿಳೆಯರ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ ಎಂಬ ಅಂಶದ ಮೇಲೆ ಒತ್ತು ನೀಡಿವೆ.

ಮಹಿಳೆಯರ 'ಸ್ಟ್ರಾಟೆಜಿಕ್' ಅಗತ್ಯಗಳನ್ನು ಪೂರೈಸಬೇಕಾದ ಅವಶ್ಯಕತೆ, ಸ್ಥಳೀಯ ಪರಿಸರದ ಬಗೆಗೆ ಅವರಿಗಿರುವ ಹೆಚ್ಚಿನ ಅರಿವು, ಸ್ಥಳೀಯ ಸಂಪನ್ಮೂಲಗಳ ಬಳಕೆ ಮತ್ತು ನಿರ್ವಹಣೆಯಲ್ಲಿ ಅವರಿಗಿರುವ ಹೆಚ್ಚಿನ ಪಾತ್ರ, ಹಾಗೂ ಇದುವರೆವಿಗೂ ಅಭಿವೃದ್ಧಿ ಯೋಜನೆಗಳಲ್ಲಿ ಅವರನ್ನು

ಸಕ್ರಿಯವಾಗಿ ಸೇರಿಸಿಕೊಂಡಿಲ್ಲವೆಂಬ ಕಾರಣಗಳಿಂದಾಗಿ ಮಹಿಳೆಯರ ಭಾಗವಹಿಸುವಿಕೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಪ್ರಯತ್ನಗಳು ಈಗ ನಡೆದಿವೆ.

ಸಮುದಾಯವಾದ, ಪರಿಸರವಾದ ಮತ್ತು ಸ್ತ್ರೀವಾದ ಈ ಮೂರೂ ಪ್ರಕಾರಗಳಲ್ಲಿನ ಚಿಂತನೆಗಳು ನೈತಿಕವಾಗಿ ಅಪೇಕ್ಷಣೀಯವಾದಂತಹ ಅಭಿವೃದ್ಧಿ ಆಚರಣೆಗಳಿಗೆ ಭಾಗವಹಿಸುವಿಕೆ ಒಂದು ಮುಖ್ಯವಾದ ಪೂರ್ವಷರತ್ತು ಎಂಬ ವಿಚಾರದತ್ತ ಒಮ್ಮುಖವಾಗಿ ಪ್ರವಹಿಸುತ್ತವೆ. ಭಾರತದ ಸಂದರ್ಭದಲ್ಲಿ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಯ ಒಂದು ಕವಲನ್ನು ಜಯಪ್ರಕಾಶ ನಾರಾಯಣರ ಪಕ್ಷರಹಿತ ರಾಜಕಾರಣ ಹಾಗೂ ಬಂಡವಾಳಶಾಹಿ ತತ್ವಗಳಿಗೆ ವಿರುದ್ಧವಾದ, ಗ್ರಾಮಾಭಿಮುಖವಾದ ವಿಕೇಂದ್ರೀಕೃತ ಅಭಿವೃದ್ಧಿ ಪರಿಕಲ್ಪನೆಯಲ್ಲಿ ಕಾಣಬಹುದು. ಹಲವಾರು ತಲೆಮಾರುಗಳ ಗಾಂಧೀವಾದಿಗಳು, ಲೋಹಿಯಾವಾದಿಗಳು, ಸರ್ವೋದಯ ಚಿಂತಕರು, ಜನಸಾಮನ್ಯರ ಭಾಗವಹಿಸುವಿಕೆಯಿಂದ ಅಂತಃ ಸತ್ವ ಪಡೆಯುವ 'ಪರ್ಯಾ ಅಭಿವೃದ್ಧಿಯ' ಮಾದರಿಗಳಿಗೆ ಸಂಬಂಧಪಟ್ಟಂತೆ ಕೆಲಸ ಮಾಡಿದ್ದಾರೆ.

"ಪ್ರಭುತ್ವ, ಸದಾಕಾಲ ಸ್ವಾತಂತ್ರ್ಯ ವಿರೋಧಿ" ಎಂಬ ನಿಯೋಕನ್ಸರ್ವೇಟಿವ್ ನಿಲುವನ್ನು ಒಪ್ಪದ ಪ್ರಜಾಪ್ರಭುತ್ವವಾದಿಗಳು ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ಕಿತ್ತೊಗೆಯುವ ಅಗತ್ಯವಿಲ್ಲ, ಅದರ ಬದಲಿಗೆ ಪ್ರಭುತ್ವದ ಅಧಿಕಾರವನ್ನು ಹಂಚಿಕೊಂಡು, ಪ್ರಭುತ್ವದೊಡನೆ ಪಾಲುದಾರರಾಗಿ, ಯೋಜನೆ ಗಳಲ್ಲಿ ಭಾಗವಹಿಸಿ, ಉತ್ತಮವಾಗಿ ಕೆಲಸಮಾಡಬಲ್ಲ ಸಮುದಾಯ ಸಂಘಟನೆಗಳು ಅಥವಾ ನಾಗರಿಕ ಸಂಘಟನೆಗಳನ್ನು (ಸಿವಿಲ್ ಸೊಸೈಟಿ) ರೂಪಿಸುವುದು ಹೆಚ್ಚು ಅಪೇಕ್ಷಣೀಯ ಎಂಬ ವಾದವನ್ನು ಪ್ರತಿಪಾದಿಸಿದರು. ದೂರದಲ್ಲೆಲ್ಲೋ ಇರುವ ಕ್ಷೇಮರಾಜ್ಯಕ್ಕಿಂತ ಪಕ್ಕದಲ್ಲಿಯೇ ಇರುವ ಸಮುದಾಯ ಸಂಘಟನೆಗಳು ಮಹಿಳೆಯರ ಅಗತ್ಯಗಳ ಬಗ್ಗೆ ಸ್ಪಷ್ಟವಾಗಿ, ನಿಖರವಾಗಿ, ಚಿಂತಿಸಿ ಕಾರ್ಯಪ್ರವೃತ್ತವಾಗಬಲ್ಲದೆಂದು ಸ್ತ್ರೀವಾದಿಗಳಾದ ಕೆರೋಲ್ ಪೇಟ್‌ಮ್ಯಾನ್ ಮತ್ತು ಶೈಲಾ ರೌಬೋಥಮ್ ಅಭಿಪ್ರಾಯಪಡುತ್ತಾರೆ. ಈ ಚಿಂತನೆಗಳೂ ಭಾಗವಹಿಸುವಿಕೆ ಹಾಗೂ ಸಹಭಾಗಿತ್ವ ಅಭಿವೃದ್ಧಿಯನ್ನು ಪ್ರಭಾವಿಸಿವೆ.

ಆರ್ಥಿಕ ಬೆಳವಣಿಗೆಗೆ ಒತ್ತುಕೊಟ್ಟ ಅಭಿವೃದ್ಧಿ ಮಾದರಿಗಳ ವೈಫಲ್ಯ ಹಾಗೂ ಆಧುನೀಕರಣ ಸಿದ್ಧಾಂತದ ವಿಮರ್ಶಾತ್ಮಕ ವ್ಯಾಖ್ಯಾನಗಳ ಫಲವಾಗಿ ೭೦ರ ದಶಕದ ಮಧ್ಯಭಾಗದ ವೇಳೆಗೆ "ಜನಸಾಮಾನ್ಯರ ಮೂಲಭೂತ ಅಗತ್ಯಗಳನ್ನು ಪೂರೈಸದ ಅಭಿವೃದ್ಧಿ, ಅಭಿವೃದ್ಧಿಯೇ ಅಲ್ಲ. ಅದು ಅಭಿವೃದ್ಧಿ ಪರಿಕಲ್ಪನೆಯ ವಿಕಟಾನುಕರಣ"[38] ಎಂಬ ಭಾವನೆ ಹೆಚ್ಚು ಪ್ರಚಲಿತವಾಯಿತು. "ಪ್ರಪಂಚದಾದ್ಯಂತ ಕೋಟ್ಯಂತರ ಜನರನ್ನು ಹಸಿವೆ, ದಾರಿದ್ರ್ಯಗಳತ್ತ ತಳ್ಳುವ ಅಭಿವೃದ್ಧಿಯ ಪರಿಕಲ್ಪನೆಯನ್ನು ಒಪ್ಪಿಕೊಳ್ಳುವುದು ಸಾಧ್ಯವೇ ಇಲ್ಲವೆಂದು ಬ್ರಾಂಟ್ ಕಮೀಷನ್ ಘೋಷಿಸಿತು."[39] "ಅಭಿವೃದ್ಧಿ ಪಾಶ್ಚಿಮಾತ್ಯ ರಾಷ್ಟ್ರಗಳ ಹೊಸ ಶ್ರದ್ಧಾತಿರೇಕದ ನಂಬಿಕೆಯಾಗಿದೆ. ಹೀಗಾಗಿ ಅದು

ತಿರಸ್ಕೃತವಾಗಿದೆ. ಪಾಶ್ಚಿಮಾತ್ಯೀಕರಣ ವೈವಿಧ್ಯವನ್ನು ನಾಶಪಡಿಸುವ ಏಕರೂಪೀಕರಣ ಪ್ರಕ್ರಿಯೆಯಾಗಿದೆ. ಅಭಿವೃದ್ಧಿ ಪರಿಸರವನ್ನು ನಾಶಪಡಿಸುತ್ತಿದೆ. ಅಭಿವೃದ್ಧಿಯ ಪರಿಕಲ್ಪನೆಯನ್ನು ಅದು ನೀಡಿರುವ ಫಲಗಳಿಗಿಂತ ಹೆಚ್ಚಾಗಿ ಅದರ ಹಿಂದಿರುವ ಉದ್ದೇಶಗಳಿಗಾಗಿ ನಾವು ತಿರಸ್ಕರಿಸಬೇಕಾಗಿದೆ. ಅಭಿವೃದ್ಧಿಯ ಯಶಸ್ಸಿನಿಂದ ಏನಾಗಿದೆಯೆಂಬುದನ್ನು ಕಳೆದ ನಾಲ್ಕು ದಶಕಗಳಲ್ಲಿ ನಾವು ನೋಡಿದ್ದೇವೆ. ಈ ಪರಿಸ್ಥಿತಿಯಲ್ಲಿ ಅಭಿವೃದ್ಧಿಯ ವೈಫಲ್ಯಕ್ಕಿಂತ ಅದರ ಯಶಸ್ಸಿಗೇ ನಾವು ಹೆದರಬೇಕಾಗಿದೆ.''[40] ''ಅಭಿವೃದ್ಧಿ ಕೇವಲ ಒಂದು ಆರ್ಥಿಕ ಪ್ರಕ್ರಿಯೆಯಲ್ಲ. ಈ ಪ್ರಪಂಚದ ಹೊಸ ತಲೆಮಾರಿನ ದೇಶಗಳಿಗೆ ಆರ್ಥಿಕ ಪರಿಹಾರಗಳು ಬೇಕು. ಆದರೆ ಅದರೊಡನೆಯೇ ಆ ದೇಶಗಳಿಗೆ, ದೇಶದ ಜನರಿಗೆ ಸ್ಫೂರ್ತಿ ನೀಡುವ ಹೊಸ ಆಲೋಚನೆಗಳು ಬೇಕು, ಮುನ್ನಡೆಯಲು ಹೊಸ ಭರವಸೆ ಬೇಕು, ಮಾನವ ಹಕ್ಕುಗಳ ಬಗ್ಗೆ ಗೌರವ, ಸ್ವಾತಂತ್ರ್ಯ, ನ್ಯಾಯ, ಅಹಿಂಸೆ, ಶಾಂತಿ, ಸೌಹಾರ್ದತೆಗಳಲ್ಲಿ ನಂಬಿಕೆ ಮೂಡಿಸುವ ಪರಿಸರವೂ ಬೇಕು.''[41] ''ಅಭಿವೃದ್ಧಿ ಭೋಗ ವಸ್ತುಗಳ ಉತ್ಪಾದನೆ, ಬಳಕೆಗಳಿಂದ ಪ್ರಾರಂಭವಾಗುವುದಿಲ್ಲ. ಅದು ಜನಸಾಮಾನ್ಯರಿಂದ, ಅವರ ಶಿಕ್ಷಣ, ಸಂಘಟನೆಗಳಿಂದ ಪ್ರಾರಂಭವಾಗುತ್ತದೆ. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಯಾರಿಗಾಗಿ ಯೋಜನೆಯನ್ನು ರೂಪಿಸಲಾಗುತ್ತಿದೆಯೋ ಅವರನ್ನು ಸಕ್ರಿಯವಾಗಿ ಸೇರಿಸಿಕೊಳ್ಳುವುದರಿಂದ ಪ್ರಾರಂಭವಾಗುತ್ತದೆ.''[42]

ಈ ಸಮಕಾಲೀನ ಚಿಂತನೆಗಳ ಫಲವಾಗಿ 70ರ ದಶಕದ ಅಂತ್ಯದಿಂದ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಜನಸಾಮಾನ್ಯರ ಭೌತಿಕ ಹಾಗೂ ಮಾನಸಿಕ ಸಾಮರ್ಥ್ಯಗಳನ್ನು ವಿಸ್ತರಿಸಬಲ್ಲ, ಬೆಳೆಸಬಲ್ಲ ಅಂಶಗಳಿಗೆ ತಾತ್ವಿಕವಾಗಿಯಾದರೂ ಗಮನ ನೀಡುವ ಪರಿಪಾಠ ಪ್ರಾರಂಭವಾಯಿತು. ಅಭಿವೃದ್ಧಿ ಕೇವಲ ಆರ್ಥಿಕ ಬೆಳವಣಿಗೆಗೆ ಮಾತ್ರ ಸೀಮಿತಗೊಳ್ಳದೇ ಜನರ ಅಭ್ಯುದಯಕ್ಕೂ ವಿಸ್ತರಿಸಿತು. ''ಜನಸಾಮಾನ್ಯರು ಯಾರಿಂದಲೋ, ಎಲ್ಲೋ ರೂಪುಗೊಂಡ ಯೋಜನೆಗೆ ಒಳಗಾಗುವ ನಿಸ್ಸಹಾಯಕರಲ್ಲ. ತಮಗಾಗಿ ರೂಪುಗೊಂಡ ಯೋಜನೆಯ ಎಲ್ಲ ಹಂತಗಳಲ್ಲೂ ಅವರು ಸಂಪೂರ್ಣವಾಗಿ ಭಾಗವಹಿಸಬಲ್ಲರು''[43] ಎಂಬ ಅಂಶ ತಡವಾಗಿಯಾದರೂ ಸ್ಪಷ್ಟವಾಗಲಾರಂಭಿಸಿತು. ಆಧುನೀಕರಣ ಸಿದ್ಧಾಂತವನ್ನಾಧರಿಸಿದ ಅಭಿವೃದ್ಧಿಯ ಮಾದರಿಯ ಅವಸಾನ ಹಾಗೂ ಆರ್ಥಿಕ ಬೆಳವಣಿಗೆಯೊಡನೆ ಮಾನವನ ಅಭ್ಯುದಯಕ್ಕೂ ಒತ್ತು ನೀಡಿದ ಆಧುನಿಕೋತ್ತರ ಚಿಂತನೆಯ ಫಲವಾಗಿ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆ ರೂಪುಗೊಳ್ಳಲಾರಂಭಿಸಿತು.

ಆಧುನೀಕರಣ ಸಿದ್ಧಾಂತ ಹಾಗೂ ಅದನ್ನಾಧರಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ಅರೆಕೊರೆಗಳನ್ನು ಸಮಕಾಲೀನ ಚಿಂತಕರು ಎತ್ತಿತೋರುತ್ತಿದ್ದ ಸಂದರ್ಭದಲ್ಲೇ, ಅಭಿವೃದ್ಧಿ ಹೊಂದಿದ ದೇಶಗಳು ಹಾಗೂ ತೃತೀಯ ವಿಶ್ವದ ದೇಶಗಳಿಗೆ ಹಣಕಾಸಿನ ನೆರವು ನೀಡುತ್ತಿದ್ದ ಅಂತಾರಾಷ್ಟ್ರೀಯ ನೆರವು ನೀಡಿಕೆ ಸಂಸ್ಥೆಗಳು ಈ ಬೆಳವಣಿಗೆಗಳಿಗೆ ತೋರಿದ ಪ್ರತಿಕ್ರಿಯೆಗಳನ್ನು ನಾವು ಗಮನಿಸಬೇಕು.

ಬಂಡವಾಳದ ವಿಸ್ತರಣೆ ಮತ್ತು ಕೈಗಾರಿಕೀಕರಣಗಳೇ 'ಅಭಿವೃದ್ಧಿ' ಎಂಬ ನಿಲುವಿಗೆ ಬದ್ಧವಾಗಿದ್ದ ವಿಶ್ವರಾಷ್ಟ್ರ ಸಂಸ್ಥೆ 1960ರ ದಶಕವನ್ನು ವಿಶ್ವರಾಷ್ಟ್ರ ಸಂಸ್ಥೆಯ ಅಭಿವೃದ್ಧಿ ದಶಕವೆಂದು ಆಚರಿಸಲು ಕರೆಯಿತ್ತಿತು. ಈ ಸಂದರ್ಭದಲ್ಲಿ ಬಹುತೇಕ ಎಲ್ಲ ಅಭಿವೃದ್ಧಿಶೀಲ ದೇಶಗಳೂ ಅಂತಾರಾಷ್ಟ್ರೀಯ ನೆರವು ನೀಡಿಕೆ ಸಂಸ್ಥೆಗಳಿಂದ ನೆರವು ಪಡೆದವು. ಈ ಆರ್ಥಿಕ ನೆರವಿನಿಂದ ಚಾಲನೆ ಪಡೆದ ಯೋಜನೆಗಳ ಫಲ ಪ್ರಾರಂಭದಲ್ಲಿ ಸಮಾಜದ ಕೆಲವೇ ವರ್ಗಗಳಿಗೆ, ದೇಶದ ಕೆಲವೇ ಭಾಗಗಳಿಗೆ ದೊರೆತರೂ ಮುಂದೆ ಅದು ಎಲ್ಲರಿಗೂ ಲಭಿಸುತ್ತದೆಂಬ ಆಶಯವಿತ್ತು. ಆದರೆ ನಿರೀಕ್ಷೆಯಂತೆ ಆರ್ಥಿಕ ಬೆಳವಣಿಗೆಯಾಗಲಿ, ಬೃಹತ್ ಪ್ರಮಾಣದ ಕೈಗಾರಿಕೀಕರಣವಾಗಲಿ ಹಸಿವೆ, ಬಡತನಗಳ ಸಮಸ್ಯೆಯನ್ನು ಪರಿಹರಿಸಲಿಲ್ಲ. ಅದರ ಬದಲಿಗೆ ಬಡವ-ಶ್ರೀಮಂತರ ನಡುವಿನ ಕಂದರ ಹೆಚ್ಚಿ, ನಿರುದ್ಯೋಗ, ಪ್ರಾದೇಶಿಕ ಅಸಮಾನತೆ, ಪರಿಸರಮಾಲಿನ್ಯ ಮುಂತಾದ ತೀವ್ರ ಸಮಸ್ಯೆಗಳು ತಲೆದೋರಿದವು. ಇದಕ್ಕೆ ಪ್ರತಿಕ್ರಿಯೆಯಾಗಿ 1970ರ ನಂತರ, ಅಂತಾರಾಷ್ಟ್ರೀಯ ನೆರವು ನೀಡಿಕೆಯ ಸಂಸ್ಥೆಗಳು 'ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಗಳೆರಡನ್ನೂ ಏಕಕಾಲದಲ್ಲಿ ಸಾಧಿಸಬೇಕು' ಎಂಬ ನೀತಿಯನ್ನು ರೂಪಿಸಿ ಕಾರ್ಯೋನ್ಮುಖವಾದವು.

ಆರ್ಥಿಕ ಅಭಿವೃದ್ಧಿಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಿದ್ದ ವಿಶ್ವಬ್ಯಾಂಕ್, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ, ಅಮೆರಿಕಾ ಸಂಯುಕ್ತ ಸಂಸ್ಥಾನದ ಅಂತಾರಾಷ್ಟ್ರೀಯ ಅಭಿವೃದ್ಧಿ ನೆರವು ನಿಧಿ ಮುಂತಾದ ಸಂಸ್ಥೆಗಳು ಅಭಿವೃದ್ಧಿ ಕಾರ್ಯವನ್ನು ನಡೆಸುತ್ತಲೇ ಸಂಪತ್ತನ್ನು ಮರುಹಂಚಿಕೆ ಮಾಡುವ ಶಿಕ್ಷಣ, ಆರೋಗ್ಯ, ನೈರ್ಮಲ್ಯ, ವಸತಿ ಮುಂತಾದ ಮೂಲಭೂತ ಅಗತ್ಯಗಳ ಪೂರೈಕೆಯ ಯೋಜನೆಗಳನ್ನು ಪ್ರೋತ್ಸಾಹಿಸಿದವು. ಈ ಕಾರ್ಯೋಪಾಯದ ಅಂಗವಾಗಿಯೇ, ನೆರವು ಪಡೆದ ಸರ್ಕಾರಗಳನ್ನು, ಅಭಿವೃದ್ಧಿ ಯೋಜನೆಗಳಲ್ಲಿ ಸಮುದಾಯದ ಸಹಭಾಗಿತ್ವಕ್ಕಾಗಿ ನೆರವು ನೀಡಿದ ಸಂಸ್ಥೆಗಳು ಒತ್ತಾಯಿಸಲು ಪ್ರಾರಂಭಿಸಿದವು. ಇದರ ಜೊತೆಗೆ ಬೃಹತ್ ಯೋಜನೆಗಳ ಮೂಲಕವಾಗಿ ಮಾತ್ರ ಅಭಿವೃದ್ಧಿಯನ್ನು ಪರಿಭಾವಿಸುವ ಪ್ರವೃತ್ತಿ ಕಡಿಮೆಯಾಗಿ ಬಡತನ ನಿವಾರಣೆ ಮತ್ತು ಅಭಿವೃದ್ಧಿಯ ಸಾಧನೆಗೆ ಕಟ್ಟುನಿಟ್ಟಾದ ಆರ್ಥಿಕ ಪುನರ್ವಿನ್ಯಾಸ ಕ್ರಮಗಳಿಗೆ ಒತ್ತು ಕೊಟ್ಟವು. ಬಡದೇಶಗಳ ಸಾಲದ ಹೊರೆ, 'ಬ್ಯಾಲನ್ಸ್ ಆಫ್ ಪೇಮೆಂಟ್' ಸಮಸ್ಯೆಗಳಿಗೂ ಸೂಕ್ತ ಪರಿಹಾರವೆಂದು ತಂದ ಆರ್ಥಿಕ ಪುನರ್ವಿನ್ಯಾಸ ಕ್ರಮಗಳು ನಿರೀಕ್ಷಿತ ಫಲವನ್ನು ನೀಡದಿದ್ದಾಗ ಸರ್ಕಾರೀ ವ್ಯವಸ್ಥೆಗಳು ಹಾಗೂ ಸಂರಚನೆಗಳ ಆಧುನೀಕರಣದತ್ತ ನೆರವು ನೀಡಿಕೆಯ ಸಂಸ್ಥೆಗಳು ಗಮನಹರಿಸಲು ಪ್ರಾರಂಭಿಸಿದವು. ನೀಡಿದ ನೆರವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಬೇಕಾದ ಅನುರೂಪವಾದ ಪರಿಸರವನ್ನು ದೇಶದಲ್ಲಿ ರೂಪಿಸುವುದು ಆಯಾ ಸರ್ಕಾರಗಳ ಕರ್ತವ್ಯ. ಇಂಥ ಪರಿಸರದ ಸೂಚಿಗಳಾದ ಪ್ರಜಾಪ್ರಭುತ್ವ, ಮಾನವ ಹಕ್ಕುಗಳಿಗೆ ಮನ್ನಣೆ, ವ್ಯವಹಾರದಲ್ಲಿ ಪಾರದರ್ಶಕತೆ, ಉತ್ತಮವಾದ ನ್ಯಾಯ ನೀಡಿಕೆ ವ್ಯವಸ್ಥೆಗಳು ಮುಂತಾದವುಗಳಿದ್ದಾಗ ಮಾತ್ರ

ಅಂತಹ ದೇಶ ನೆರವು ಪಡೆಯಲು ಅರ್ಹವಾಗುತ್ತವೆಂಬ ಪೂರ್ವ ಷರತ್ತುಗಳನ್ನು ನೆರವು ನೀಡಿಕೆಯ ಸಂಸ್ಥೆಗಳು ಪ್ರಾರಂಭಿಸಿದವು.

ಸಿವಿಲ್ ಸೊಸೈಟಿ ಅಥವಾ ಸಂಘಟಿತ ಬದುಕು ಅಭಿವೃದ್ಧಿಯ ಮೇಲೆ ಬೀರುವ ಪ್ರಭಾವಕ್ಕೆ ಸಂಬಂಧಿಸಿ ಚಿಂತನೆಗಳೂ ಈ ಸಂಸ್ಥೆಗಳ ಮೇಲೆ ಪರಿಣಾಮ ಬೀರಿದವು. ಆರ್ಥಿಕ ನೆರವು ಪಡೆದ ದೇಶಗಳಲ್ಲಿ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಸ್ಪಷ್ಟ ಪರಿಚಯದ ಕೊರತೆಯೇ ಈ ಹಿಂದಿನ ಯೋಜನೆಗಳ ವೈಫಲ್ಯಕ್ಕೆ ಮುಖ್ಯ ಕಾರಣವೆಂಬ ತೀರ್ಮಾನಕ್ಕೆ ಬಂದ ನೆರವು ನೀಡಿಕೆಯ ಸಂಸ್ಥೆಗಳು, ಸ್ಥಳೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ರ್‍ಯಾಪಿಡ್ ರೂರಲ್ ಅಪ್ರೈಸಲ್, ಬೆನಿಫಿಶಿಯರಿ ಇಂಪ್ಯಾಕ್ಟ್ ಅಸೆಸ್‌ಮೆಂಟ್, ಸ್ಟಾಕ್‌ಹೋಲ್ಡರ್ ಅನಾಲಿಸಿಸ್ ಮುಂತಾದ ತಂತ್ರಗಳನ್ನು ಬಳಸಿದವು. ಸಮುದಾಯವಾದ, ಪರಿಸರವಾದ, ಸ್ತ್ರೀವಾದ ಮತ್ತು ಸಂಘಟಿತ ಬದುಕಿನ ಚಿಂತನೆಗಳಿಗೆ ಹಾಗೂ ಸ್ಥಳೀಯರ ಜನರ ಬದುಕಿನ ಮೇಲೆ ಅಭಿವೃದ್ಧಿ ಯೋಜನೆಗಳು ಬೀರಿದ ದುರ್ಭರ ಪರಿಣಾಮಗಳ ವಿರುದ್ಧ ಕಂಡು ಬಂದ ತೀವ್ರ ಜನಾಂದೋಳನಗಳಿಗೆ ಪ್ರತಿಕ್ರಿಯೆಯಾಗಿ, 'ಸಹಭಾಗಿತ್ವ ಅಥವಾ ಭಾಗವಹಿಸುವಿಕೆ' ಯನ್ನು ಮತ್ತೊಂದು ತಂತ್ರವನ್ನಾಗಿ ಅಂತಾರಾಷ್ಟ್ರೀಯ ನೆರವು ನೀಡಿಕೆಯ ಸಂಸ್ಥೆಗಳು ಬಳಕೆಗೆ ತಂದವು. ಯೋಜನೆಗಳನ್ನು ರೂಪಿಸುವ ಹಂತದಲ್ಲೇ ಜನಸಮಾನ್ಯರಿಗೆ ಅದರಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಬೇಕೆಂದು ನೆರವು ಪಡೆಯುವ ದೇಶಗಳಿಗೆ ಸೂಚಿಸಿದ ಈ ಸಂಸ್ಥೆಗಳು, ಈ ಹಿಂದಿನ ಅನೇಕ ಯೋಜನೆಗಳ ವೈಫಲ್ಯಕ್ಕೆ ಕಾರಣವಾದ ದೋಷಗಳನ್ನು 'ಸಹಭಾಗಿತ್ವ' ಸರಿಪಡಿಸುತ್ತದೆ ಎಂದು ಸಾರಿದವು. ಇದರ ಫಲವಾಗಿ ಸ್ಥಳೀಯ ಸರ್ಕಾರಗಳಿಗೆ ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ನೆರವು ಪಡೆದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡಲು ಜನರ ಸಹಭಾಗಿತ್ವ ಅನಿವಾರ್ಯವಾಯಿತು.

ಸಹಭಾಗಿತ್ವ ಅಭಿವೃದ್ಧಿ ಮತ್ತು ಭಾಗವಹಿಸುವಿಕೆ

"ಯೋಜನೆಯೊಂದರ ರೂಪು-ರೇಷೆಗಳ ತಯಾರಿ, ಅದಕ್ಕೆ ಸಂಬಂಧಿಸಿದ ನೀತಿ ನಿಲುವುಗಳ ನಿಷ್ಕರ್ಷೆ, ಯೋಜನೆಯ ಅನುಷ್ಠಾನ, ಮೌಲ್ಯಮಾಪನ ಮುಂತಾದ ವಿವಿಧ ಹಂತಗಳಲ್ಲಿ ಭಾಗವಹಿಸುವ ಮತ್ತು ನಿರ್ಧಾರ ಕೈಗೊಳ್ಳುವ ಮುಕ್ತ ಅವಕಾಶವನ್ನು ಜನಸಮುದಾಯಕ್ಕೆ ಕಲ್ಪಿಸಿ ಆ ಮೂಲಕವಾಗಿ ಸಾಧಿಸುವ ಅಭಿವೃದ್ಧಿಯೇ "ಸಹಭಾಗಿತ್ವ ಅಭಿವೃದ್ಧಿ."[44] ಅಂತಾರಾಷ್ಟ್ರೀಯ ನೆರವು ನೀಡಿಕೆಯ ಸಂಸ್ಥೆಗಳೂ ಸೇರಿದಂತೆ ಸಾರ್ವತ್ರಿಕವಾಗಿ ಈ ಪರಿಕಲ್ಪನೆ ಆಕರ್ಷಣೀಯ ವಾಗಿದ್ದರಿಂದ 1990ರ ಸುಮಾರಿಗೆ ಅದು ಎಲ್ಲ ಅಭಿವೃದ್ಧಿ ಯೋಜನೆಗಳ ಅವಿಭಾಜ್ಯ ಅಂಗವಾಯಿತು. ಜನಸಾಮಾನ್ಯರ ಸಹಭಾಗಿತ್ವವಿಲ್ಲದ ಅಭಿವೃದ್ಧಿ ಯೋಜನೆಯೊಂದನ್ನು ಕಲ್ಪಿಸಿ ಕೊಳ್ಳುವುದೇ ಅಸಾಧ್ಯವೆನಿಸುವಷ್ಟರ ಮಟ್ಟಿಗೆ ಅದು ಜನಪ್ರಿಯವಾಯಿತು.

ಅಭಿವೃದ್ಧಿ ಯೋಜನೆಯಲ್ಲಿ ಜನರ ಭಾಗವಹಿಸುವಿಕೆ ಅಥವಾ ಪಾಲ್ಗೊಳ್ಳುವಿಕೆ ಒಂದು ದೃಷ್ಟಿಯಲ್ಲಿ ಬಹಳ ಸರಳವಾದ ವಿಷಯ. ಜನಸಾಮಾನ್ಯರು, ತಮ್ಮ ಅಗತ್ಯ, ಆದ್ಯತೆಗಳಿಗನುಸಾರವಾಗಿ ಯೋಜನೆ ಯನ್ನು ರೂಪಿಸಿಕೊಂಡು, ಅದಕ್ಕೆ ಸಂಬಂಧಿಸಿದ ಎಲ್ಲ ನಿರ್ಧಾರಗಳನ್ನೂ ತಾವೇ ಕೈಗೊಂಡು, ಯೋಜನೆಯನ್ನು ಕಾರ್ಯಗತಗೊಳಿಸಿ ತಮ್ಮ ಏಳಿಗೆಯನ್ನು ತಾವೇ ಸಾಧಿಸಿಕೊಳ್ಳುವ ಪ್ರಕ್ರಿಯೆಯನ್ನು 'ಭಾಗವಹಿಸುವಿಕೆ' ಎನ್ನಬಹುದು. ಆದರೆ ಭಾಗವಹಿಸುವಿಕೆಗಿರುವ ಹಲವಾರು ಪರಿಭಾಷೆಗಳು ಅರ್ಥ ವಿವರಣೆಗಳನ್ನು ಗಮನಿಸಿದಾಗ ಅದರ ವಿವಿಧ ಆಯಾಮಗಳ ಪರಿಚಯ ವಾಗುತ್ತದೆ.

"ಯೋಜನೆಯೊಂದಕ್ಕೆ ಸಂಬಂಧಿಸಿದಂತೆ ನಿರ್ಧಾರಗಳನ್ನು ಕೈಗೊಳ್ಳುವ, ಅನುಷ್ಠಾನಗೊಳಿಸುವ, ಪ್ರಯೋಜನಗಳನ್ನು ಹಂಚಿಕೊಳ್ಳುವ ಹಾಗೂ ಯೋಜನೆಯ ಮೌಲ್ಯ ಮಾಪನ ಮಾಡುವ ಪ್ರಕ್ರಿಯೆಗಳಲ್ಲಿ ಜನರನ್ನು ಒಳಗೊಳ್ಳುವುದೇ, ಭಾಗವಹಿಸುವಿಕೆ" ಎನ್ನುತ್ತಾರೆ. ಕೋಹೆನ್ ಮತ್ತು ಉಪ್ಹಾಫ್[45], "ಯೋಜನೆಯಿಂದ ಪ್ರಯೋಜನ ಪಡೆಯುವವರೇ ಯೋಜನೆಯ ರೂಪುರೇಷೆ, ಸಾಗುವ ದಿಕ್ಕುಗಳನ್ನು ನಿಯಂತ್ರಿಸುವುದೇ ಭಾಗವಹಿಸುವಿಕೆ" ಎನ್ನುವುದು ಪೌಲ್ ಅವರ ಅಭಿಪ್ರಾಯ.[46] ಅಭಿವೃದ್ಧಿಯ ಪ್ರಯೋಜನಗಳಿಂದ ವಂಚಿತರಾಗಿ ಹೊರಗುಳಿದವರ ಸಶಕ್ತೀಕರಣವೇ ಭಾಗವಹಿಸುವಿಕೆ".[47] "ಸಂಪನ್ಮೂಲಗಳ ಮೇಲೆ ಹಾಗೂ ಸಂಪನ್ಮೂಲಗಳ ಮೇಲೆ ನಿಯಂತ್ರಣ ವಿರುವ ಸಾಂಸ್ಥಿಕ ರಚನೆಗಳ ಮೇಲೆ, ಹೆಚ್ಚಿನ ಹಿಡಿತವನ್ನು ಜನಸಾಮಾನ್ಯರಿಗೆ ಒದಗಿಸುವ ಪ್ರಕ್ರಿಯೆಯೇ ಭಾಗವಹಿಸುವಿಕೆ"[48] ಭಾಗವಹಿಸುವಿಕೆಗಿರುವ ಹಲವಾರು ಅರ್ಥ ವಿವರಣೆಗಳು, ಎಲ್ಲ ಅಭಿವೃದ್ಧಿ ಯೋಜನೆಗಳಿಗೂ ಅನ್ವಯವಾಗುವಂತಹ ಸರ್ವಕಾಲಿಕವಾದ ಅರ್ಥ ಭಾಗವಹಿಸುವಿಕೆಗಾಗಲೀ, ಭಾಗವಹಿಸುವಿಕೆಯ ಮಾದರಿಗಾಗಲೀ ಇಲ್ಲವೆಂಬುದನ್ನು ಸೂಚಿಸುತ್ತದೆ. ಇದರೊಡನೆ, ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತಿರುವ ಪ್ರತಿಯೊಂದು ಸಂಸ್ಥೆಯೂ ತನ್ನ ದೃಷ್ಟಿಯಲ್ಲಿ ಭಾಗವಹಿಸುವಿಕೆಯೆಂದರೇನು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸುವ ಸಂಪ್ರದಾಯವೂ ಬೆಳೆದುಬರುತ್ತಿದೆ. ಉದಾಹರಣೆಗೆ ವಿಶ್ವಬ್ಯಾಂಕ್‌ನ ದೃಷ್ಟಿಯಲ್ಲಿ ಅಭಿವೃದ್ಧಿ ಯೋಜನೆಯೊಂದರಲ್ಲಿನ ಪಾಲುದಾರರು (ಸ್ಟೇಕ್ ಹೋಲ್ಡರ್ಸ್) ಯೋಜನೆಯ ರೂಪು-ರೇಷೆಗಳು, ಯೋಜನೆಗೆ ಸಂಬಂಧಿಸಿದ ನಿರ್ಧಾರಗಳು ಹಾಗೂ ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಸಾಧಿಸುವ ಪ್ರಕ್ರಿಯೆಯೇ ಭಾಗವಹಿಸುವಿಕೆ ಅಥವಾ ಪಾಲ್ಗೊಳ್ಳುವಿಕೆ. ಆಹಾರ ಮತ್ತು ಕೃಷಿ ಸಂಸ್ಥೆ(ಎಫ್ಎಓ) "ಗ್ರಾಮೀಣ ಜನತೆ, ತಮ್ಮದೇ ಆದ ಸಂಸ್ಥೆಗಳ ಮೂಲಕ ಸಂಘಟಿತಗೊಂಡು, ತಮ್ಮ ಅಗತ್ಯಗಳನ್ನು ಗುರುತಿಸಿಕೊಂಡು ಯೋಜನೆಯ ವಿನ್ಯಾಸದಲ್ಲಿ ಭಾಗವಹಿಸಿ, ಪರಿಣಾಮದ ಮೌಲ್ಯಮಾಪನ ಮಾಡುವ ಪ್ರಕ್ರಿಯೆ"ಯನ್ನು ಭಾಗವಹಿಸುವಿಕೆಯೆಂದು ಪರಿಭಾವಿಸುತ್ತದೆ. ಇದರಲ್ಲಿರುವ ನಾಲ್ಕು ಮುಖ್ಯ ಅಂಶಗಳೆಂದರೆ ನಿರ್ಧಾರ ಕೈಗೊಳ್ಳುವ ವಿವಿಧ ಹಂತಗಳಲ್ಲಿ ಭಾಗವಹಿಸುವುದು, ಹಣಕಾಸಿನ ನಿಯಂತ್ರಣ ಮತ್ತು ನಿರ್ವಹಣೆ, ಉತ್ಪನ್ನಗಳ ಹಂಚಿಕೆಯಲ್ಲಿ ಪಾಲು ಮತ್ತು ಸಂಘಟಿತ ಪ್ರಯತ್ನಗಳ

ಫಲವಾಗಿ ಸೃಷ್ಟಿಯಾದ ಆಸ್ತಿಯಲ್ಲಿ ಪಾಲು, ಒಡೆತನ. ಕೆನಡಾದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ(ಸಿಐಡಿವಿ)ಯ ಅಭಿಪ್ರಾಯದಲ್ಲಿ "ವ್ಯಕ್ತಿಗಳಿಗೆ ಸಮಾನತೆ ಮತ್ತು ರಾಜಕೀಯ ಅಧಿಕಾರ ದೊರೆಯುವಂತೆ ಅಭಿವೃದ್ಧಿಯ ಎಲ್ಲ ಹಂತಗಳಲ್ಲಿ ವ್ಯಕ್ತಿ ಮತ್ತು ಸಮುದಾಯಗಳನ್ನು ಸೇರಿಸಿ ಕೊಳ್ಳುವುದೇ" ಭಾಗವಹಿಸುವಿಕೆ. "ಬಡವರು ಮತ್ತು ದುರ್ಬಲವರ್ಗದವರ ಅಗತ್ಯಗಳು ಮತ್ತು ಅಭಿಪ್ರಾಯಗಳನ್ನು ಪರಿಗಣಿಸಿ, ಪುರುಷರು ಮತ್ತು ಮಹಿಳೆಯರ ನಡುವಿನ ತಾರತಮ್ಯವನ್ನು ಹೋಗಲಾಡಿಸುವ ಪ್ರಕ್ರಿಯೆಯೇ ಭಾಗವಹಿಸುವಿಕೆ ಎಂಬುದು ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ನಿಲುವು. ಆಕ್ಸ್‌ಫಾಮ್, ಭಾಗವಹಿಸುವಿಕೆ"ಯನ್ನು ಒಂದು ಮೂಲಭೂಲ ಹಕ್ಕಾಗಿ ಪರಿಗಣಿಸುತ್ತದೆ. "ಬಡವರ ಹಾಗೂ ದುರ್ಬಲ ವರ್ಗದವರ ಸಾಮರ್ಥ್ಯವನ್ನು ವರ್ಧಿಸಿ ಸ್ವಾವಲಂಬಿ ಗಳಾಗುವಂತೆ ಮಾಡುವುದು ಭಾಗವಹಿಸುವಿಕೆಯ ಮುಖ್ಯ ಉದ್ದೇಶ. ಬಡವರು, ದುರ್ಬಲ ವರ್ಗದವರು, ಅಂಚಿಗೆ ತಳ್ಳಲ್ಪಟ್ಟವರಿಗೆ ಧ್ವನಿಯನ್ನು ನೀಡಿ, ಅವರ ಜೀವವನ್ನು ರೂಪಿಸುವ ಎಲ್ಲ ಯೋಜನೆಗಳಲ್ಲಿ, ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅವರನ್ನು ಸೇರಿಸಿಕೊಳ್ಳುವುದೇ ಭಾಗವಹಿಸುವಿಕೆಯ ಅಂತಿಮ ಗುರಿ".

ಕೋಹೆನ್ ಮತ್ತು ಉಪ್ಹಾಫ್ ಅವರ ಅರ್ಥ ವಿವರಣೆ ಭಾಗವಹಿಸುವಿಕೆ ಸಾಧ್ಯವಾಗುವ ನಾಲ್ಕು ಮುಖ್ಯ ಹಂತಗಳನ್ನು ಗುರುತಿಸುತ್ತದೆ. ಅವುಗಳೆಂದರೆ ನಿರ್ಧಾರ ಕೈಗೊಳ್ಳುವ ಹಂತ, ಯೋಜನೆಯ ಅನುಷ್ಠಾನ, ಪ್ರಯೋಜನದ ಹಂಚಿಕೆ ಮತ್ತು ಮೌಲ್ಯಮಾಪನ. ಪಿಯರ್ಸ್ ಮತ್ತು ಸ್ಟಿಫೆಲ್ ಅವರ ದೃಷ್ಟಿ ಇದಕ್ಕಿಂತ ಭಿನ್ನವಾಗಿದ್ದು, ಭಾಗವಹಿಸುವಿಕೆ ಕೇವಲ ಅಭಿವೃದ್ಧಿಗೆ ಸೀಮಿತವಾಗದೇ, ಅದಕ್ಕೆ ಮೀರಿದ ಸಂರಚನೆಯ ಹಾಗೂ ರಾಜಕೀಯ ಪಾತ್ರವನ್ನು ನೀಡುತ್ತದೆ. 1980ರ ಸುಮಾರಿಗೆ ಈ ಎರಡೂ ಚಿಂತನೆಗಳು ವಿವಿಧ ರೀತಿಯ ಅಭಿವೃದ್ಧಿ ಆಚರಣೆಗಳ ಪ್ರಾರಂಭಕ್ಕೆ ಕಾರಣವಾಗಿ 1990ರಲ್ಲಿ ಪಾಲುದಾರಿಕೆಯ ಪರಿಕಲ್ಪನೆಗೆ (ಸ್ಟೇಕ್ ಹೋಲ್ಡಿಂಗ್) ದಾರಿ ಮಾಡಿಕೊಟ್ಟಿತು. ಪ್ರಸ್ತುತದಲ್ಲಿ ಭಾಗವಹಿಸುವಿಕೆಗೆ ಸಂಬಂಧಿಸಿದ ಚಿಂತನೆ ಮತ್ತು ಆಚರಣೆಗಳು ಪಾಲುದಾರಿಕೆ ಮತ್ತು ವಿವಿಧ ಪಾಲುದಾರರು ಅಭಿವೃದ್ಧಿ ಯೋಜನೆಯ ಅಂತಿಮ ಪ್ರಯೋಜನಗಳ ಮೇಲೆ ಹೇಗೆ ಪ್ರಭಾವ ಬೀರಬಲ್ಲರೆಂಬುದರ ಸುತ್ತ ನಡೆಯುತ್ತಿದೆ.

ಅಭಿವೃದ್ಧಿ ಯೋಜನೆಯಲ್ಲಿನ ಜನರ ಭಾಗವಹಿಸುವಿಕೆಯನ್ನು 'ಸಾಧನವಾಗಿ ಭಾಗವಹಿಸುವಿಕೆ' (ಪಾರ್ಟಿಸಿಪೇಶನ್ ಆ್ಯಸ್ ಎ ಮೀನ್ಸ್) ಮತ್ತು 'ಗುರಿಯಾಗಿ ಭಾಗವಹಿಸುವಿಕೆ' (ಪಾರ್ಟಿಸಿಪೇಶನ್ ಆ್ಯಸ್ ಆ್ಯನ್ ಎಂಡ್) ಎಂದು ಎರಡು ದೃಷ್ಟಿಯಿಂದ ಪರಿಗಣಿಸಬಹುದು. ಮೊದಲನೆಯದರಲ್ಲಿ ಹೊರಗಿನಿಂದ ಬಂದ ಯೋಜನೆಯೊಂದರಲ್ಲಿ ಸ್ಥಳೀಯ ಜನ ಭಾಗವಹಿಸುತ್ತಾರೆ; ಯೋಜನೆಯೊಂದಿಗೆ ಸಹಕರಿಸುತ್ತಾರೆ. ಯೋಜನೆಯನ್ನು ಅನುಷ್ಠಾನಕ್ಕೆ ತರಲು ಭಾಗವಹಿಸುವಿಕೆ ಸಾಧನವಾಗುತ್ತದೆ. ಸ್ಥಳೀಯ ಜನ ಭಾಗವಹಿಸಲು ಹೊರಗಿನ ಸಂಸ್ಥೆಯೊಂದು ಅನುವು

ಮಾಡಿಕೊಡುತ್ತದೆ. ಹೊರಗಿನಿಂದ ಬಂದ ಯೋಜನೆಗೆ ಸ್ಥಳೀಯರ ಬೆಂಬಲ ಒದಗಿಸುವ ತಂತ್ರವಾಗಿ ಇದು ಕೆಲಸ ಮಾಡುತ್ತದೆ. 'ಸಹಭಾಗಿತ್ವ ಅಭಿವೃದ್ಧಿ' ಹೆಚ್ಚಾಗಿ ಈ ರೀತಿಯ ಭಾಗವಹಿಸುವಿಕೆಗೆ ಅಂದರೆ-ಸಾಧನೆಗಾಗಿ ಭಾಗವಹಿಸುವಿಕೆಗೆ ಅನ್ವಯಿಸುತ್ತದೆ. ಅರ್ಥಾತ್ ಹೊರಗಿನಿಂದ ರೂಪುಗೊಂಡ ಅಭಿವೃದ್ಧಿ ಯೋಜನೆಯೊಂದನ್ನು ಸ್ಥಳೀಯರ ಭಾಗವಹಿಸುವಿಕೆಯಿಂದ ಅನುಷ್ಠಾನಗೊಳಿಸುವ ಮಾರ್ಗಕ್ಕೆ ಅನ್ವಯಿಸುತ್ತದೆ. ಈ ಭಾಗವಹಿಸುವಿಕೆಯೇ ವ್ಯಾಪಕವಾಗಿದೆ.

ಎರಡನೆಯದಾದ 'ಗುರಿಯಾಗಿ ಭಾಗವಹಿಸುವಿಕೆ'ಯಲ್ಲಿ ಸ್ಥಳೀಯ ಜನತೆ ತಮ್ಮ ಅಭ್ಯುದಯಕ್ಕೆ ಅಗತ್ಯವಾದ ಅರಿವು, ಕೌಶಲ್ಯ, ಅನುಭವಗಳನ್ನು ಪಡೆದುಕೊಳ್ಳುವ, ಸಾಮರ್ಥ್ಯವನ್ನು ವರ್ಧಿಸಿಕೊಳ್ಳುವ ಸಶಕ್ತೀಕರಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಭಾಗವಹಿಸುವಿಕೆ ಇಲ್ಲಿ ಪರಿವರ್ತನೆಯ ಸಾಧನವಾಗುತ್ತದೆ.ಬಡವರು ಮತ್ತು ದುರ್ಬಲವರ್ಗದವರನ್ನು ಸ್ಥಳೀಯ ಸಂಪನ್ಮೂಲಗಳ ಲಭ್ಯತೆ ಮತ್ತು ಅದರ ಮೇಲಿನ ನಿಯಂತ್ರಣದಿಂದ ಹೊರಗಿರಿಸಿದ ಶಕ್ತಿಗಳ ವಿರುದ್ಧ ಸಂಘಟಿತರಾಗಿ ಸೆಣಸಿ, ಅಭಿವೃದ್ಧಿ ಯೋಜನೆಗಳಲ್ಲಿ ಸರಿಸಮನಾದ ಪಾಲು ಪಡೆಯುವಂತೆ ಮಾಡಲು ಅಗತ್ಯವಾದ ಸಾಮರ್ಥ್ಯವನ್ನು ಈ ರೀತಿಯ ಭಾಗವಹಿಸುವಿಕೆ ರೂಪಿಸುತ್ತದೆ. ಜನರ ಭಾಗವಹಿಸುವಿಕೆಯಿರುವ ಯೋಜನೆಯಲ್ಲಿ ಈ ಎರಡೂ ರೀತಿಯ ಭಾಗವಹಿಸುವಿಕೆಯನ್ನು ಕಾಣುವುದು ಬಹು ಸಾಮಾನ್ಯ.

'ಭಾಗವಹಿಸುವಿಕೆ ಅನುಕ್ರಮವಾಗಿ ಎಂಟು ಹಂತಗಳ ಮೂಲಕ ಸಾಗುವ ವ್ಯವಸ್ಥಿತ ಪ್ರಕ್ರಿಯೆ' ಎನ್ನುವ ವಿಶ್ವರಾಷ್ಟ್ರಸಂಸ್ಥೆಯ ಬಂಡವಾಳ ಅಭಿವೃದ್ಧಿ ನಿಧಿ ಈ ಎಂಟು ಹಂತಗಳನ್ನು ಕುಶಲ ನಿರ್ವಹಣೆ (ಮ್ಯಾನಿಪುಲೇಶನ್), ಮಾಹಿತಿ ನೀಡಿಕೆ (ಇನ್‌ಫರ್‌ಮೇಶನ್), ಸಮಾಲೋಚನೆ (ಕನ್ಸಲ್‌ಟೇಶನ್), ಒಮ್ಮತ ನಿರ್ಮಾಣ (ಕನ್ಸೆನಸಸ್ ಬಿಲ್ಡಿಂಗ್) ನಿರ್ಧಾರ ಕೈಗೊಳ್ಳುವಿಕೆ (ಡಿಸಿಶನ್ ಮೇಕಿಂಗ್), ಅಪಾಯ ಸಂಭವದ ಹೊಣೆಗಾರಿಕೆ (ರಿಸ್ಕ್‌ಶೇರಿಂಗ್), ಪಾಲುದಾರಿಕೆ (ಪಾರ್ಟ್‌ನರ್‌ಶಿಪ್)ಮತ್ತು ಸ್ವಯಂ ನಿರ್ವಹಣೆ(ಸೆಲ್ಫ್ ಮ್ಯಾನೇಜ್‌ಮೆಂಟ್)ಗಳೆಂದು ಗುರುತಿಸುತ್ತದೆ.[49] ಭಾಗವಹಿಸುವಿಕೆಗೆ ಅವಕಾಶವೇ ಇಲ್ಲದೆ, ಭಾಗವಹಿಸುವಿಕೆಯಿದೆಯೆಂಬ ಭ್ರಮೆ ಮೂಡಿಸುವ ಜಾಣತನದ ನಿರ್ವಹಣೆಯೇ ಮೊದಲ ಹಂತ. ಅನೇಕ ಪರಿಣಿತರು ಇದು ಭಾಗವಹಿಸುವಿಕೆಯೇ ಅಲ್ಲವೆಂದು ತೀರ್ಮಾನಿಸಿ ಇದನ್ನು ಮೊದಲನೆಯ ಹಂತವನ್ನಾಗಿ ಮಾಡಿರುವುದನ್ನು ಪ್ರಶ್ನಿಸುತ್ತಾರೆ. ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಏಕಮುಖವಾದ ಮಾಹಿತಿ ಪ್ರಸರಣ ಎರಡನೆಯ ಹಂತ. ಸಮಾಲೋಚನೆಯಲ್ಲಿ ದ್ವಿಮುಖ ಸಂವಹನಕ್ಕೆ ಅವಕಾಶವಿದೆ. ಆದರೆ ಜನಸಾಮಾನ್ಯರ ಕಾಳಜಿಯಿಂದ, ಅವರ ಸಲಹೆ ಸೂಚನೆಗಳಿಂದ ಯೋಜನೆಯ ರೂಪು-ರೇಷೆಗಳು ಬದಲಾಗಬೇಕೆಂದಿಲ್ಲ. ಒಮ್ಮತ ನಿರ್ಮಾಣದ ಹಂತದಲ್ಲಿ ಪಾಲುದಾರರು ತಮ್ಮೊಳಗೆ ಸಮಾಲೋಚನೆ ನಡೆಸಿ, ಎಲ್ಲರ ಅಗತ್ಯ, ನಿರೀಕ್ಷೆಗಳನ್ನು ಅರ್ಥಮಾಡಿಕೊಂಡು ಇಡೀ

ಗುಂಪೇ ಒಂದು ನಿಲುವು ತಳೆಯಲು ಅವಕಾಶವಿದೆ. ಆದರೆ ಧ್ವನಿಯಿಲ್ಲದ, ದುರ್ಬಲ ವರ್ಗದವರ ಆದ್ಯತೆಗಳಿಗೆ ಮಹತ್ವ ದೊರೆಯದಿರುವ ಸಾಧ್ಯತೆ ಈ ಹಂತದಲ್ಲಿದೆ. ನಿರ್ಧಾರ ಕೈಗೊಳ್ಳುವ ಐದನೇ ಹಂತದಲ್ಲಿ, ಇಡೀ ಗುಂಪಿನ ಒಮ್ಮತವನ್ನು ಒಟ್ಟಾಗಿ ಅನುಷ್ಠಾನಕ್ಕೆ ತಂದಾಗ 'ಜವಾಬ್ದಾರಿಯ ಹಂಚಿಕೆ' ಪ್ರಾರಂಭವಾಗಿ ಯೋಜನೆಯ ಪ್ರಯೋಜನಗಳ ಮೇಲೆ ಪ್ರಭಾವ ಬೀರುತ್ತದೆ. ಒಂದು ಸಂಘಟನೆಯಲ್ಲಿರುವ ವಿವಿಧ ಗುಂಪುಗಳ ಬಲಾಬಲ ಸ್ಪಷ್ಟವಾಗಿ ಕಂಡುಬರುವುದು ಈ ಹಂತದಲ್ಲಿ. ಒಮ್ಮತದ ನಿರ್ಧಾರವನ್ನು ಅನುಷ್ಠಾನಗೊಳಿಸಿದಾಗ ದೊರೆಯುವ ನಿರೀಕ್ಷಿತ ಹಾಗೂ ಅನಿರೀಕ್ಷಿತ ಫಲಗಳನ್ನು ಹಂಚಿಕೊಳ್ಳುವುದೇ 'ರಿಸ್ಕ್ ಶೇರಿಂಗ್'ಹಂತ. ಪಾಲುದಾರರ ಉತ್ತರದಾಯಿತ್ವ (ಅಕೌಂಟಬಿಲಿಟಿ) ಈ ಹಂತದಲ್ಲಿ ಗೋಚರಿಸುತ್ತದೆ. ಒಂದೇ ಗುರಿಯುತ್ತ ಸಾಗುತ್ತಿರುವ ವಿವಿಧ ವ್ಯಕ್ತಿಗಳ ಅಥವಾ ಗುಂಪುಗಳ ನಡುವೆ ಪರಸ್ಪರ ಗೌರವ, ಜವಾಬ್ದಾರಿ ಹಾಗೂ ಅಪಾಯದ ಹಂಚಿಕೆಗಳ ಮೇಲೆ ಆಧರಿತವಾದ ಪಾಲುದಾರಿಕೆ (ಪಾರ್ಟ್‌ನರ್‌ಶಿಪ್) ಏಳನೆಯ ಹಂತದ ಲಕ್ಷಣ. ಸ್ವಯಂನಿರ್ವಹಣೆ ಭಾಗವಹಿಸುವಿಕೆಯ ಅಂತಿಮ ಹಂತ. ಈ ಹಂತದಲ್ಲಿ ಸಂಘಟನೆ ಯಲ್ಲಿರುವ ಸಮಸ್ತರ ಒಳಿತಿಗಾಗಿ, ಒಳಿತನ್ನು ಗರಿಷ್ಠಮಟ್ಟಕ್ಕೇರಿಸುವ ಪ್ರಯತ್ನಗಳಲ್ಲಿ ಎಲ್ಲ ಪಾಲುದಾರರೂ ಸಕ್ರಿಯವಾಗಿ, ನಿರಂತರವಾಗಿ ಭಾಗವಹಿಸುತ್ತಾರೆ.

ಭೂಬಳಕೆಯ ಯೋಜನಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅಧ್ಯಯನ ನಡೆಸುವಾಗ ಅರ್ನ್‌ಸ್ಟೀನ್ ಭಾಗವಹಿಸುವಿಕೆಯ 'ನಿಚ್ಚಣಿಕೆ'ಯೊಂದನ್ನು (ಪಾರ್ಟಿಸಿಪೇಶನ್ ಲ್ಯಾಡರ್) ರೂಪಿಸಿದ್ದಾರೆ. ''ಈ ನಿಚ್ಚಣಿಕೆಯ ಎಂಟು ಮೆಟ್ಟಲುಗಳೆಂದರೆ, ಕುಶಲ ನಿರ್ವಹಣೆ (ಮ್ಯಾನಿಪುಲೇಶನ್), ಚಿಕಿತ್ಸೆ (ಥೆರಪಿ), ಮಾಹಿತಿ ನೀಡಿಕೆ (ಇನ್‌ಫಾರ್ಮಿಂಗ್), ಸಮಾಲೋಚನೆ(ಕನ್ಸಲ್‌ಟೇಶನ್), ಸಮಾಧಾನ ಹೇಳಿಕೆ (ಪ್ಲೇಕೇಶನ್) ಪಾಲುದಾರಿಕೆ(ಪಾರ್ಟ್‌ನರ್‌ಶಿಪ್),ಅಧಿಕಾರದ ನಿಯೋಜನೆ (ಡೆಲಿಗೇಶನ್ ಆಫ್‌ಪವರ್), ಮತ್ತು ನಾಗರಿಕ ನಿಯಂತ್ರಣ(ಸಿಟಿಜನ್ಸ್ ಕಂಟ್ರೋಲ್)[50]. ಮಾಹಿತಿ ನೀಡಿಕೆ, ಸಮಾಲೋಚನೆ ಮತ್ತು ಸಮಾಧಾನ ಹೇಳಿಕೆಗಳನ್ನು ಕೇವಲ 'ಸಾಂಕೇತಿಕ ಭಾಗವಹಿಸುವಿಕೆ' ಯೆಂದು (ಟೋಕನಿಸಮ್) ಗುರುತಿಸುವ ಅರ್ನ್‌ಸ್ಟೀನ್, ಪಾಲುದಾರಿಕೆ, ಅಧಿಕಾರದ ನಿಯೋಜನೆ ಹಾಗೂ ನಾಗರಿಕ ನಿಯಂತ್ರಣವನ್ನು ನಾಗರಿಕ ಅಧಿಕಾರದ ವಿವಿಧ ಮಜಲುಗಳೆಂದು (ಡಿಗ್ರೀಸ್ ಆಫ್ ಸಿಟಿಜನ್ಸ್ ಕಂಟ್ರೋಲ್) ಸೂಚಿಸುತ್ತಾರೆ. ಇದೇ ಎಂಟು ಅಂಶಗಳ ಆಧಾರದ ಮೇಲೆ ವೈಟ್ ಅವರು, ಮೊದಲ ಐದು ಮೆಟ್ಟಲುಗಳನ್ನು 'ತೋರಿಕೆಯ ಭಾಗವಹಿಸುವಿಕೆ'ಯೆಂದೂ ಅಂತಿಮ ಮೂರು ಮೆಟ್ಟಲುಗಳನ್ನು 'ನಿಜವಾದ ಭಾಗವಹಿಸುವಿಕೆ'ಯೆಂದೂ(ಜೆನ್ಯುಯನ್ ಪಾರ್ಟಿಸಿಪೇಶನ್) ಗುರುತಿಸುತ್ತಾರೆ.[51] ಯಾವುದೇ ಅಭಿವೃದ್ಧಿ ಯೋಜನೆಯಲ್ಲಿ ಈ ಎರಡೂ ರೀತಿಯ ಭಾಗವಹಿಸುವಿಕೆಯ ವಿವಿಧ ಸಂಯೋಜನೆಗಳನ್ನು ಕಾಣಬಹುದು. ಅನೇಕ ಸಂದರ್ಭಗಳಲ್ಲಿ ಯೋಜನೆಯಲ್ಲಿನ ಭಾಗವಹಿಸುವಿಕೆಯ ಸ್ವರೂಪವನ್ನು ಮೇಲೆ ಸೂಚಿಸಿದಂತೆ ನಿಖರವಾಗಿ ವರ್ಗೀಕರಿಸುವುದು ಸಾಧ್ಯವಿಲ್ಲವಾದ್ದರಿಂದ, ಓಕ್ಲೀ ಅವರು ಇದನ್ನು 'ಡೀಪ್ ಪಾರ್ಟಿಸಿಪೇಶನ್'

ಮತ್ತು 'ಶ್ಯಾಲೋ ಪಾರ್ಟಿಸಿಪೇಶನ್' ಎಂದು ವಿಂಗಡಿಸುತ್ತಾರೆ.[52] ನಾವು ಈ ಹಿಂದೆ ನೋಡಿದ ಗುರಿಯಾಗಿ ಭಾಗವಹಿಸುವಿಕೆಯೇ (ಪಾರ್ಟಿಸಿಪೇಶನ್ ಆ್ಯಸ್ ಆ್ಯನ್ ಎಂಡ್) 'ಡೀಪ್ ಪಾರ್ಡಿಸಿಪೇಶನ್', 'ಸಾಧನವಾಗಿ ಭಾಗವಹಿಸುವಿಕೆಯೇ' ಶ್ಯಾಲೋ ಪಾರ್ಟಿಸಿಪೇಶನ್. ಡೀಪ್‌ಪಾರ್ಟಿಸಿಪೇಶನ್ ಅಥವಾ ಗುರಿಯಾಗಿ ಭಾಗವಹಿಸುವಿಕೆ, ಜನ ತಮ್ಮ ಬದುಕನ್ನು ತಾವೇ ಯಶಸ್ವಿಯಾಗಿ ರೂಪಿಸಿಕೊಳ್ಳುವ, ನಿಯಂತ್ರಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಸಹಭಾಗಿತ್ವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಸಹಭಾಗಿತ್ವ ಅಭಿವೃದ್ಧಿಯ ಅಂತಿಮ ನಿರೀಕ್ಷೆ ಕೂಡ ಇದೇ. ಸಾಧನವಾಗಿ ಭಾಗವಹಿಸುವಿಕೆಯ ಉದ್ದೇಶ ಹೆಚ್ಚು ನಿಖರವಾದ, ಗಟ್ಟಿಯಾದ ಯೋಜನೆ ಹಮ್ಮಿಕೊಂಡಿರುವ ಉದ್ದೇಶಗಳನ್ನು ಸಾಧಿಸುವುದು. ಈ ರೀತಿಯ ಭಾಗವಹಿಸುವಿಕೆ ಜನರ ಅಭ್ಯುದಯದತ್ತ ಗಮನ ನೀಡುವುದಿಲ್ಲ; ಅದು ಅದರ ಉದ್ದೇಶವೂ ಅಲ್ಲ. ಇದರ ಬದಲಿಗೆ ಯೋಜನೆಯನ್ನು ಯಶಸ್ವಿ ಮಾಡಲು ಸ್ಥಳೀಯ ಜನರ ತಿಳಿವಳಿಕೆ, ದೈಹಿಕಶ್ರಮ ಮುಂತಾದ ಲಭ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದಕ್ಕೆ ಹೆಚ್ಚಿನ ಒತ್ತು ನೀಡುತ್ತದೆ. ಇದಕ್ಕೆ ಅಗತ್ಯವಾದ ಸಾಂಸ್ಥಿಕ ರಚನೆಗಳನ್ನು ರೂಪಿಸಿ, ಬೆಳಸುವುದನ್ನು ಈ ಸ್ವರೂಪದ ಭಾಗವಹಿಸುವಿಕೆ ಮಾಡುತ್ತದೆ.

ಭಾಗವಹಿಸುವಿಕೆಯ ಪ್ರಕ್ರಿಯೆ ಮತ್ತು ಆ ಮೂಲಕವಾಗಿ ಸಾಧ್ಯವಾಗುವ ಸಹಭಾಗಿತ್ವ ಅಭಿವೃದ್ಧಿ ಅಂತಿಮವಾಗಿ ಸ್ವಾವಲಂಬನೆಗೆ ದಾರಿ ಮಾಡಿಕೊಡುತ್ತದೆ. ಸ್ವಾವಲಂಬಿಗಳ ಒಂದು ಸಮುದಾಯ ತನ್ನ ಸಮಸ್ಯೆಗಳನ್ನು ತಾನೇ ಗುರುತಿಸಿಕೊಳ್ಳುವ, ಅವುಗಳಿಗೆ ಸೂಕ್ತ ಪರಿಹಾರಗಳನ್ನು ರೂಪಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತದೆ. ಸಮಯೋಚಿತವಾದ, ಪ್ರಸಕ್ತವಾದ, ಸ್ಥಳೀಯ ಸಂಸ್ಕೃತಿಗೆ ಅನುಗುಣವಾದ, ಪರಿಸರ ನಾಶಕ್ಕೆ ದಾರಿ ಮಾಡಿಕೊಡದ, ದೀರ್ಘಕಾಲ ಉಪಯುಕ್ತವಾಗಬಲ್ಲ ವೈವಿಧ್ಯವಾದ ಪರಿಹಾರಗಳನ್ನು ಅಂತಹ ಸಮುದಾಯ ಕಂಡುಕೊಳ್ಳಬಹುದು.

ಭಾಗವಹಿಸುವಿಕೆ ಮತ್ತು ಆ ಮೂಲಕವಾಗಿ ಸಾಧಿಸಲೆತ್ನಿಸುವ ಸಹಭಾಗಿತ್ವ ಅಭಿವೃದ್ಧಿ ಇಂದು ಸಾರ್ವತ್ರಿಕವಾಗಿ ಬಹು ಆಕರ್ಷಣೀಯವಾದ ಪರಿಕಲ್ಪನೆ. ಜನರ ಸಹಭಾಗಿತ್ವವಿಲ್ಲದ ಅಭಿವೃದ್ಧಿ ಯೋಜನೆಯೊಂದನ್ನು ಕಲ್ಪಿಸಿಕೊಳ್ಳುವುದೇ ಅಸಾಧ್ಯ ಎನ್ನಿಸುವಷ್ಟರ ಮಟ್ಟಿಗೆ ಅದು ಜನಪ್ರಿಯವಾಗಿದೆ. ಆದರೆ ಭಾಗವಹಿಸುವಿಕೆಯನ್ನು ಅಳವಡಿಸಿಕೊಂಡಿದ್ದೇವೆಂದು ಹೇಳಿಕೊಳ್ಳುವ ಅನೇಕ ಯೋಜನೆಗಳು ಕೇವಲ ಸಾಂಕೇತಿಕ ಸ್ವರೂಪದ ಭಾಗವಹಿಸುವಿಕೆಗೆ ಮಾತ್ರ ಸೀಮಿತಗೊಂಡು ತೀವ್ರ ಟೀಕೆಗೆ ಗುರಿಯಾಗಿವೆ. ಯೋಜನೆಯೊಂದರಲ್ಲಿ ಭಾಗವಹಿಸುವಿಕೆಗೆ ನಿಜವಾದ ಅವಕಾಶ ಇದ್ದಾಗ ಅಥವಾ ಅವಕಾಶವನ್ನು ಕಲ್ಪಿಸಿದಾಗ ಅದು ಯಶಸ್ವಿಯಾಗುವ ಸಾಧ್ಯತೆಯಿರುತ್ತದೆ. ಆದರೆ ಅನೇಕ ಯೋಜನೆಗಳಲ್ಲಿ, ಯೋಜನೆಯ ರೂಪುರೇಷೆಗಳೆಲ್ಲ ನಿರ್ಧಾರವಾಗಿ, ಬದಲಾವಣೆಗೆ ಯಾವುದೇ ಅವಕಾಶ ಇಲ್ಲದಿರುವ ಸಂದರ್ಭಗಳಲ್ಲೂ ಕೇವಲ ತೋರಿಕೆಗಾಗಿ ಭಾಗವಹಿಸುವಿಕೆಯನ್ನು

ಸೇರಿಸಲಾಗುತ್ತದೆ. 'ಭಾಗವಹಿಸುವಿಕೆ', 'ಸಮುದಾಯ'ದಂತೆಯೇ ಸ್ಪಷ್ಟರೂಪವಿಲ್ಲದ ಪರಿಕಲ್ಪನೆ ಯಾದ್ದರಿಂದ, ನೆರವು ನೀಡಿಕೆಯ ಸಂಸ್ಥೆಯ ಮೇಲಾಗಲೀ, ನೆರವು ಪಡೆಯುವ ಸರ್ಕಾರದ ಇಲಾಖೆಗಳ ಮೇಲಾಗಲೀ ಅದು ಯಾವ ರೀತಿಯ ನಿರ್ದಿಷ್ಟ ಜವಾಬ್ದಾರಿಗಳನ್ನೂ ಹೊರಿಸುವುದಿಲ್ಲ. ಅಭಿವೃದ್ಧಿಯ ಸಂದರ್ಭದಲ್ಲಿ 'ಭಾಗವಹಿಸುವಿಕೆ' ವ್ಯಾಪಕವಾಗಿ ಬಳಕೆಯಾಗುತ್ತಿರುವುದಕ್ಕೆ ಇದು ಒಂದು ಕಾರಣ" ಎನ್ನುತ್ತಾರೆ ನಂದಿನಿ ಸುಂದರ್ ಮತ್ತು ರೋಜರ್ ಜೆಫಿರಿ.[53] ಇದೆಲ್ಲದಕ್ಕಿಂತ ಅಧ್ವಾನದ ಪರಿಸ್ಥಿತಿಯೆಂದರೆ ಧನ ಸಹಾಯ ಪಡೆಯುವ ಏಕೈಕ ಕಾರಣದಿಂದ ಭಾಗವಹಿಸುವಿಕೆಯನ್ನು ಯೋಜನೆಯಲ್ಲಿ ಸೇರಿಸುವುದು.

ಹಲವಾರು ಸಂದರ್ಭಗಳಲ್ಲಿ ಬಡಜನರು ಮತ್ತು ಮಹಿಳೆಯರ ಭಾಗವಹಿಸುವಿಕೆಗೆ ಅವಕಾಶ ಮಾಡಿಕೊಡುವ ವ್ಯವಸ್ಥೆ ಈ ಮುಂಚೆಯೇ ಇದ್ದಿರುವ ಸಾಧ್ಯತೆಗಳಿವೆ. ಅಂತಹ ವ್ಯವಸ್ಥೆಯನ್ನು ಅಲಕ್ಷಿಸಿ ಹೊರಗಿನಿಂದ ಹೊಸ ವ್ಯವಸ್ಥೆಯನ್ನು ಹೇರುವುದರಿಂದ, ಆ ಮುಂಚಿನ ಏರ್ಪಾಟಿನ ಅನೇಕ ಉತ್ತಮ ಅಂಶಗಳು ಕಣ್ಮರೆಯಾಗಬಹುದು.

ಒಂದು ಆದರ್ಶ ಪರಿಸ್ಥಿತಿಯಲ್ಲಿ ಭಾಗವಹಿಸುವಿಕೆಯ ಪ್ರಕ್ರಿಯೆ, ಜನರಿಗೆ ತಮ್ಮ ಆಲೋಚನೆಗಳು, ಅಭಿಪ್ರಾಯಗಳು, ಹೊಸ ವಿಷಯಗಳು ಹಾಗೂ ಲಭ್ಯವಿರುವ ಸಂಪನ್ಮೂಲಗಳನ್ನು ಹಂಚಿಕೊಂಡು ಅಭಿವೃದ್ಧಿಯ ಗುರಿಯನ್ನು ಸಾಧಿಸುವ ಸಮಾನ ಅವಕಾಶಗಳನ್ನು ಕಲ್ಪಿಸುತ್ತದೆ. ಆದರೆ ಎಲ್ಲ ಸಮಾಜಗಳಲ್ಲಿ ಶತಮಾನಗಳಷ್ಟು ಹಳೆಯದಾದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಕುಲಸಂಬಂಧೀ ಅಸಮಾನತೆಗಳಿವೆ. ಇವು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂವಹನವನ್ನು ಅಸಾಧ್ಯವನ್ನಾಗಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯ, ಸಮಾನತೆ, ಪ್ರಜಾಪ್ರಭುತ್ವದ ಮೌಲ್ಯಗಳ ಮೇಲೆ ಆಧಾರಿತವಾಗಿರುವ ಭಾಗವಹಿಸುವಿಕೆ ಎಷ್ಟರಮಟ್ಟಿಗೆ ಸಾಧ್ಯ, ಸಾಧ್ಯವಾದರೆ ಎಷ್ಟರ ಮಟ್ಟಿಗೆ ಯಶಸ್ವಿಯಾಗಬಲ್ಲದು ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಕರ್ನಾಟಕದಲ್ಲಿ ಜಂಟೀ ಅರಣ್ಯ ಯೋಜನೆಯ ಚೌಕಟ್ಟಿನಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಮುಂದಿನ ಅಧ್ಯಾಯಗಳಲ್ಲಿ ಮಾಡಿದ್ದೇನೆ.

ಟಿಪ್ಪಣಿಗಳು

1. ಡೇವಿಡ್ ರೀಡ್, *ಸಸ್ಟೈನಬಲ್ ಡೆವಲಪ್‌ಮೆಂಟ್ : ಆನ್ ಇಂಟ್ರೋಡಕ್ಟರಿ ಗೈಡ್*, ಲಂಡನ್: ಅರ್ಥ್‌ಸ್ಕ್ಯಾನ್, 1995

2. ಕ್ಲಾಸ್‌ಡಾಡ್ಸ್, "ಡೆವಲಪ್‌ಮೆಂಟ್", *ಡೆವಲಪ್‌ಮೆಂಟ್ ಡಿಕ್ಷನರಿ*, ಡಬ್ಲ್ಯು. ಸ್ಯಾಶ್(ಸಂ). ಲಂಡನ್ : ಅಟ್ಲಾಂಟಿಕ್ ಹೈಲ್ಯಾಂಡ್ಸ್. 1992

3. ಸ್ಯಾಶ್, ಡಬ್ಲ್ಯು, "ಡೆಪಲಪ್‌ಮೆಂಟ್ ಎ ಗೈಡ್ ಟು ರೂಯಿನ್ಸ್", ನ್ಯೂ ಇಂಟರ್‌ನ್ಯಾಷನಲಿಸ್ಟ್, ಸಂ.14, ನಂ.6, ಜೂನ್ 1992, ಪು.62-78.

4. ಸ್ಯಾಶ್, ಡಬ್ಲ್ಯು, ಎ ಗೈಡ್ ಟು ನಾಲೆಡ್ಜ್ ಆಸ್ ಪವರ್, ಲಂಡನ್: ಜೆಡ್ ಬುಕ್ಸ್, 1992.

5. ಸ್ಯಾಶ್, ಡಬ್ಲ್ಯು, "ಬಯ್‌ಗಾನ್ ಸ್ಲೆಂಡರ್", ರಿಯಲ್ ಲೈಫ್ ಇಕನಾಮಿಕ್ಸ್; ಅಂಡರ್ ಸ್ಟಾಂಡಿಂಗ್ ವೆಲ್ತ್ ಕ್ರಿಯೇಶನ್ಸ್ ಪಿ. ಇಕಿನ್ಸ್ ಮತ್ತು ಎಂ.ಮ್ಯಾಕ್ಸ್‌ನೀಫ್(ಸಂ), ಲಂಡನ್: ಜೆಡ್ ಬುಕ್ಸ್, 1992.

6. ಬ್ರೂಕ್‌ಫೀಲ್ಡ್ ಎಚ್, ಇಂಟರ್ ಡಿಪೆಂಡೆಂಟ್ ಡೆವಲಪ್‌ಮೆಂಟ್, ಲಂಡನ್: ಮೆಥ್ಯೂನ್ ಅಂಡ್ ಕಂಪನಿ, 1975.

7. ಕ್ಲಾರ್ಕ್‌ಕೆರ್, ಸೈಟೆಡ್ ಇನ್ ಇಂಟರ್‌ಡಿಪೆಡೆಂಟ್ ಡೆವಲಪಮೆಂಟ್ ಲಂಡನ್ : ಮೆಥ್ಯೂನ್ ಅಂಡ್ ಕಂಪೆನಿ, 1992

8. ವಾಲ್ಟ್ ರೋಸ್ಟೋವ್, ದಿ ಸ್ಟೇಜಸ್ ಆಫ್ ಇಕನಾಮಿಕ್ ಗ್ರೋಥ್ : ಎ ನಾನ್ ಕಮ್ಯುನಿಸ್ಟ್ ಮ್ಯಾನಿಫೆಸ್ಟೊ, ಲಂಡನ್: ಕೇಂಬ್ರಿಡ್ಜ್, 1961.

9. ಮೂರ್, ಡಬ್ಲ್ಯೂ., ದಿ ಇಂಪಾಕ್ಟ್ ಆಫ್ ಇಂಡಸ್ಟ್ರಿ, ನ್ಯೂಜರ್ಸಿ: ಪ್ರಿಂಟೈಸ್ -ಹಾಲ್, 1965.

10. ಕೆರ್,ಸಿ., ಡನ್‌ಲಪ್, ಜೆ. ಇಂಡಸ್ಟ್ರಿಯಲಿಸಂ ಅಂಡ್ ಇಂದಸ್ಟ್ರಿಯಲ್ ಮ್ಯಾನ್, ಲಂಡನ್ : ಹೈನೆಮಾನ್, 1962.

11. ಡಡ್ಲೀ, ಈ, ದಿ ಕ್ರಿಟಿಕಲ್ ವಿಲೇಜರ್, ಲಂಡನ್ : ರೌಟ್‌ಲೆಡ್ಜ್, 1993.

12. ವಾಲ್ಟ್ ರೋಸ್ಟೋವ್, ದಿ ಸ್ಟೇಜಸ್ ಆಫ್ ಇಕನಾಮಿಕ್ ಗ್ರೋಥ, ಪು.20

13. ಚೇಂಬರ್ಸ್ ಆರ್., ರೂರಲ್ ಡೆವಲಪ್‌ಮೆಂಟ್ : ಪುಟಿಂಗ್ ದಿ ಲಾಸ್ಟ್ ಫಸ್ಟ್, ಹಾರ್‌ಲೋ : ಲಾಂಗ್ ಮನ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್, 1983.

14. ವಂದನಾಶಿವ, ಸ್ಟೇಯಿಂಗ್ ಅಲೈವ್ : ವುವೆನ್, ಇಕಾಲಜಿ ಅಂಡ್ ಡೆವಲಪ್‌ಮೆಂಟ್, ಲಂಡನ್ : ಜೆಡ್ ಬುಕ್ಸ್, 1988.

15. ಫ್ರಾಂಕ್, ಎ.ಜಿ., ಕ್ರೈಸಿಸ್ ಇನ್ ವರ್ಲ್ಡ್ ಇಕಾನಮಿ, ಲಂಡನ್ : ಹೈನೆಮಾನ್ ಎಜುಕೇಶನಲ್, 1980.

16. ಹಾಪ್‌ಕಿನ್ಸ್,ಟಿ. ಮತ್ತು ವ್ಯಾಲರ್‌ಸ್ಟೀನ್, ದಿ ಏಜ್ ಆಫ್ ಟ್ರಾನ್ಸಿಶನ್ :ಟ್ರಾಜೆಕ್ಟರಿ ಆಫ್ ವರ್ಲ್ಡ್ ಸಿಸ್ಟಮ್ಸ್ *1945-2025*, ಲಂಡನ್ : ಜೆಡ್ ಬುಕ್ಸ್, 1996.

17. ಬ್ರ್ಯಾಂಟ್, ಡಬ್ಲ್ಯು, ಕಾಮನ್ ಕ್ರೈಸಿಸ್ ನಾರ್ತ್-ಸೌತ್ : ಕೋ ಆಪರೇಶನ್ ಫಾರ್ ವರ್ಲ್ಡ್ ರಿಕವರಿ, ಲಂಡನ್ : ಪ್ಯಾನ್, 1983.

18. ಫ್ರಾಂಕ್, ಎ.ಜಿ., *ಲ್ಯಾಟಿನ್ ಅಮೇರಿಕ : ಅಂಡರ್ ಡೆವಲಪ್‌ಮೆಂಟ್ ಆರ್ ರಿವೆಲ್ಯೂಷನ್?* ಲಂಡನ್: ಜೆಡ್‌ಬುಕ್ಸ್, 1969.

19. ಠಾಕೂರ್ ದಾಸ್,ಪಿ. ಮೆಮೊರಾಂಡಮ್ ಔಟ್ ಲೈನಿಂಗ್ ಎ ಪ್ಲಾನ್ ಆಫ್ ಇಕನಾಮಿಕ್ ಡೆವಲಪ್‌ಮೆಂಟ್ ಫಾರ್ ಇಂಡಿಯಾ ಲಂಡನ್ : ಪೆಂಗ್ವಿನ್, 1944.

20. ಹ್ಯಾರಿಸ್,ಜೆ., "ಕ್ಯಾಪಿಟಲಿಸಮ್ ಅಂಡ್ ಪೆಸೆಂಟ್ ಪ್ರೊಡಕ್ಷನ್ : ದಿ ಗ್ರೀನ್ ರೆವಲ್ಯೂಷನ್ ಇನ್ ಇಂಡಿಯಾ" *ಪೆಸೆಂಟ್ಸ್ ಅಂಡ್ ಪೆಸೆಂಟ್ ಸೊಸೈಟೀಸ್* ಟ. ಶ್ಯಾನಿನ್(ಸಂ), ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1987.

21. ಅರುಣ್ ಅಗರ್‌ವಾಲ್, "ಕಮ್ಯೂನಿಟಿ-ಇನ್-ಕಾನ್ಸರ್‌ವೇಶನ್ :ಟ್ರೇಸಿಂಗ್ ದಿ ಔಟ್‌ಲೈನ್ಸ್ ಆಫ್ ಆ್ಯನ್ ಎನ್‌ಚಾಂಟಿಂಗ್ ಕಾನ್ಸೆಪ್ಟ್" *ಎ ನ್ಯೂ ಮಾರಲ್ ಇಕಾನಮಿ ಫಾರ್ ಇಂಡಿಯಾಸ್ ಫಾರೆಸ್ಟ್?* ರೋಜರ್ ಜೆಫ್ರಿ ಮತ್ತು ನಂದಿನೀ ಸುಂದರ್(ಸಂ), ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್, 1999.

22. ಓಸ್ಟ್ರಮ್, ಇ. *ಗವರ್ನಿಂಗ್ ದಿ ಕಾಮನ್ಸ್ : ದಿ ಎವಲ್ಯೂಷನ್ ಆಫ್ ಇನ್ಸ್‌ಟಿಟ್ಯೂಷನ್ಸ್ ಫಾರ್ ಕಲೆಕ್ಟಿವ್ ಆಕ್ಷನ್,* ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರಿಸ್, 1990.

23. ಬಜಾಜ್, ಎಮ್., "ನ್ಯಾಚುರಲ್ ರೀ ಜನರೇಶನ್ ವರ್ಸಸ್ ಅಫಾರೆಸ್ಟೇಶನ್ : ಆ್ಯನ್ ಎಕ್ಸಾಮಿನೇಶನ್ ಆಫ್ ದಿ ಪೊಟೆನ್‌ಶಿಯಲ್ ಫಾರ್ ನ್ಯಾಚುರಲ್ ರೀ ಜನರೇಶನ್ ವಿತ್ ಕಮ್ಯುನಿಟಿ ಪಾರ್ಟಿಸಿಪೇಶನ್" *ಪ್ರೈಸ್ ಆಫ್ ಫಾರೆಸ್ಟ್ಸ್* ಎ.ಅಗರವಾಲ್(ಸಂ), ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1992.

24. ನಂದಾ, ಎಸ್., "ಲೋಕಲ್ ಮ್ಯಾನೇಜ್‌ಮೆಂಟ್ ಆಫ್ ಕಮ್ಯೂನಿಟಿ ಪ್ರಾಪರ್ಟಿ ರಿಸೋರ್ಸಸ್ ಇನ್ ದಿ ಹಿಮಾಲಯ" *ಪ್ರೈಸ್ ಆಫ್ ಫಾರೆಸ್ಟ್ಸ್*, ಎ.ಅಗರವಾಲ್(ಸಂ), ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1992.

25. ಚೋಪ್ರಾ, ಕೆ. ಕಡೆಕೋಡಿ, ಜಿ.ಕೆ. ಅಂಡ್ ಎಂ. ಎನ್. ಮೂರ್ತಿ, *ಪಾರ್ಟಿಸಿಪೇಟರಿ ಡೆವಲಪ್‌ಮೆಂಟ್ : ಪೀಪಲ್ ಅಂಡ್ ಕಾಮನ್ ಪ್ರಾಪರ್ಟಿ ರಿಸೋರ್ಸಸ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1990.

26. ಸೇಥಿ, ಆರ್., "ದಿ ಎವಲ್ಯೂಷನ್ ಆಫ್ ಸೋಶಿಯಲ್ ನಾರ್ಮ್ಸ್ ಇನ್ ಕಾಮನ್ ಪ್ರಾಪರ್ಟಿ ರಿಸೋರ್ಸಸ್" ಅಮೆರಿಕನ್ ಇಕನಾಮಿಕ್ ರಿವ್ಯೂ, ಸಂಪುಟ: 86, ನಂ.9, 1996, ಪು.24-39.

27. ಸಾಹೂ, ಎಚ್. ಮತ್ತು ಮಿಶ್ರ,ಪಿ. "ಕಾಮನ್ ಪ್ರಾಪರ್ಟಿ ರಿಸೋರ್ಸಸ್: ಎ. ಕೇಸ್ ಸ್ಟಡಿ ಆನ್ ಕೋಸ್ಟಲ್ ಒರಿಸ್ಸಾ" ಎನ್‌ವೈರನ್‌ಮೆಂಟಲ್ ಕಾನ್ಸರ್‌ವೇಶನ್, ಸಂ.21, ನಂ.1, ಪು.17-28

28. ವೇಡ್, ಆರ್., *ವಿಲೇಜ್ ರಿಪಬ್ಲಿಕ್ಸ್,* ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, 1988.

29. ಬಂದೋಪಾಧ್ಯಾಯ, ಜೆ. ಮತ್ತು ವಂದನಾಶಿವ, "ದಿ ಪೊಲಿಟಿಕಲ್ ಇಕಾನಮಿ ಆಫ್ ಟೆಕ್ನೊಲಾಜಿಕಲ್ ಪೋಲರೈಸೇಶನ್" ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಸಂ.17, ನಂ: 45, 6ನೇ ನವೆಂಬರ್ 1982.

30. ವಂದನಾ ಶಿವ, ಇಕಾಲಜಿ ಅಂಡ್ ದಿ ಪಾಲಿಟಿಕ್ಸ್ ಆಫ್ ಸರ್ವೈವಲ್, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, 1991.

31. ವಂದನಾಶಿವ, ಸ್ಟೇಯಿಂಗ್ ಅಲೈವ್, ಪು.78

32. ಪಿಯರ್ಸ್, ಡಿ., ಬ್ಲೂಪ್ರಿಂಟ್ ಫಾರ್ ಎ ಗ್ರೀನ್ ಇಕಾನಮಿ, ಲಂಡನ್ : ಅರ್ತ್‌ಸ್ಕ್ಯಾನ್. 1989.

33. ಸ್ಟೀಫೆನ್, ಎಫ್., "ವಿಮೆನ್ಸ್ ಎಂಪವರ್‌ಮೆಂಟ್; ಎ ಪ್ರೋಸೆಸ್ ಆಫ್ ರೀಸ್ಟ್ರಕ್ಚರಿಂಗ್ ಪವರ್ ರಿಲೇಶನ್ಸ್" ಸರ್ಚ್‌ಬುಲೆಟಿನ್ ಸಂ.12, ನಂ 3, ಜುಲೈ-ಸೆಪ್ಟೆಂಬರ್, 1997, ಪು.4-11.

34. ಬಕ್ಷಮೂಸರಮಾಲಾ ಅಂಡ್ ಹೇಮಾ ಸುಬ್ರಮಣಿಯನ್, ಅಸಿಸ್ಟೆನ್ಸ್ ಫಾರ್ ವಿಮೆನ್ಸ್ ಡೆವಲಪ ಮೆಂಟ್ ಫಾರ್ ನ್ಯಾಷನಲ್ ಏಜನ್ಸೀಸ್, ಬಾಂಬೆ : ಪಾಪ್ಯುಲರ್ ಪಬ್ಲಿಶರ್ಸ್, 1992.

35. ಕೇಟ್‌ಯಂಗ್, ವಿಮೆನ್ ಅಂಡ್ ಇಕನಾಮಿಕ್ ಡೆವಲಪ್‌ಮೆಂಟ್: ಲೋಕಲ್, ರೀಜನಲ್ ಅಂಡ್ ನ್ಯಾಷನಲ್ ಪ್ಲಾನಿಂಗ್ ಸ್ಟ್ರಾಟೆಜೀಸ್, ಆಕ್ಸ್‌ಫರ್ಡ್ : ಬರ್ಗ್ ಪಬ್ಲಿಷರ್ಸ್, 1988.

36. ಸ್ಟೀಫೆನ್, ಎಫ್. "ವಿಮೆನ್ಸ್ ಎಂಪರ್‌ಮೆಂಟ್....", ಪು.9.

37. ಅಗ್ನಿಹೋತ್ರಿ, ಐ. "ಚೇಂಜಿಂಗ್ ಟರ್ಮ್ಸ್ ಆಫ್ ಪೊಲಿಟಿಕಲ್ ಡಿಸ್ಕೋರ್ಸ್ : ವಿಮೆನ್ಸ್ ಮೂವ್‌ಮೆಂಟ್ ಇನ್ ಇಂಡಿಯಾ 1970-1990", ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಸಂ.22 ಜುಲೈ 1995, ಪು.1869-1878.

38. ಎಸ್ಟೀವ್, ಜಿ. "ಡೆವಲಪ್‌ಮೆಂಟ್" ಡೆವಲಪ್‌ಮೆಂಟ್ ಡಿಕ್ಷನರಿ, ಡಬ್ಲ್ಯು. ಸಾಶ್ಸ್(ಸಂ) ಲಂಡನ್: ಅಂಟ್ಲಾಂಟಿಕ್ ಹೈಲ್ಯಾಂಡ್ಸ್ 1992.

39. ಐ.ಸಿ.ಐ.ಡಿ.ಸಿ. ನಾರ್ತ್-ಸೌತ್ : ಎ ಪ್ರೋಗಾಮ್ ಫಾರ್ ಸರ್ವೈವಲ್, ಲಂಡನ್ : ಪ್ಯಾನ್ ಬುಕ್ಸ್, 1980.

40. ಎಕಿನ್ಸ್.ಪಿ., ಎ ನ್ಯೂ ವರ್ಲ್ಡ್ ಆರ್ಡರ್ : ಗ್ರಾಸ್ ರೂಟ್ ಮೂವ್‌ಮೆಂಟ್ಸ್ ಫಾರ್ ಗ್ಲೋಬಲ್ ಚೇಂಜ್, ಲಂಡನ್ ಮತ್ತು ನ್ಯೂಯಾರ್ಕ್ : ರೌಟ್ ಲೆಡ್ಜ್, 1992.

41. ಐಸಿಐಡಿಸಿ, 1980 : ಪೂರ್ವೋಕ್ತ.

42. ಶ್ಯೂಮಾಕರ್, ಇ. ಎಫ್. ಸ್ಮಾಲ್ ಈಸ್ ಬ್ಯೂಟಿಫುಲ್; ಎ ಸ್ಟಡೀ ಆಫ್ ಇಕನಾಮಿಕ್ಸ್ ಆ್ಯಸ್ ಇಫ್ ಪೀಪಲ್ ಮ್ಯಾಟರ್ಡ್, ಲಂಡನ್ : ಸ್ಫಿಯರ್ ಬುಕ್ಸ್, 1973.

43. ಆ್ಯಡಮ್ಸ್, ಡಬ್ಲ್ಯು. ಎಮ್. *ಗ್ರೀನ್ ಡೆವಲಪ್‌ಮೆಂಟ್*, ಲಂಡನ್ ಅಂಡ್ ನ್ಯೂಯಾರ್ಕ್ : ರೌಟ್‌ಲೆಡ್ಜ್, 1990.

44. ಶಿರ್ಲೆ ಎ. ವೈಟ್, *ದಿ ಆರ್ಟ್ ಆಫ್ ಫೆಸಿಲಿಟೇಟಿಂಗ್ ಪಾರ್ಟಿಸಿಪೇಶನ್* ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1999.

45. ಕೋಹೆನ್ ಅಂಡ್ ಉಪ್ಹಾಫ್, ಸೈಟೆಡ್ ಇನ್ *ಯುಎನ್‌ಡಿಪಿ ಗೈಡ್ ಬುಕ್ ಆನ್ ಪಾರ್ಟಿಸಿಪೇಶನ್* ನ್ಯೂಯಾರ್ಕ : ಯುಎನ್‌ಡಿಪಿ, 1990.

46. ಪೌಲ್ ಪಿ., ಕೋಟೆಡ್ ಇನ್ *ಯುಎನ್‌ಡಿಪಿ ಗೈಡ್ ಬುಕ್ ಆನ್ ಪಾರ್ಟಿಸಿಪೇಶನ್*, ನೈರೋಬಿ: ಯುಎನ್‌ಡಿಪಿ, 1992.

47. ಘಾಯ್,ಡಿ., *ಪಾರ್ಟಿಸಿಪೇಶನ್ ಇನ್ ಡೆವಲಪ್‌ಮೆಂಟ್ :ಸಮ್ ಪರ್‌ಸ್ಪೆಕ್ಟಿವ್ಸ್ ಫ್ರಮ್ ಗ್ರಾಸ್‌ರೂಟ್ ಎಕ್ಸ್‌ಪೀರಿಯನ್ಸಸ್*, ಜನೀವ : ಯುನೈಟೆಡ್ ನೇಶನ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಡೆವಲಪ್‌ಮೆಂಟ್, 1988.

48. ಪಿಯರ್ಸ್ ಅಂಡ್ ಸ್ಟಿಫೆಲ್, ಸೈಟೆಡ್ ಇನ್ *ಯುಎನ್‌ಡಿಪಿ, ಗೈಡ್ ಬುಕ್ ಆನ್ ಪಾರ್ಟಿಸಿಪೇಶನ್*, ನೈರೋಬಿ : ಯುಎನ್‌ಡಿಪಿ, 1992.

49. ಯುನೈಟಡ್‌ನೇಷನ್ಸ್ ಕ್ಯಾಪಿಟಲ್ ಡೆವಲಪಮೆಂಟ್ ಫಂಡ್, ನ್ಯೂಯಾರ್ಕ್ : 1993

50. ಅರ್ನ್‌ಸ್ಟೈನ್, ಎಸ್., "ಲ್ಯಾಡರ್ ಆಫ್ ಸಿಟಿಜನ್ ಪಾರ್ಟಿಸಿಪೇಶನ್" *ಜರ್ನಲ್ ಆಫ್ ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾನರ್ಸ್*, ಸಂ.35, ನಂ.7, 1969, ಪು.38-49.

51. ವೈಟ್, ಎಸ್. "ದಿ ಕಾನ್ಸೆಪ್ಟ್ ಆಫ್ ಪಾರ್ಟಿಸಿಪೇಶನ್ : ಟ್ರಾನ್ಸ್‌ಫಾರ್ಮಿಂಗ್ ರೆಟೋರಿಕ್ ಟು ರಿಯಾಲಿಟಿ" *ಪಾರ್ಟಿಸಿಪೇಟರಿ ಕಮ್ಯೂನಿಕೇಶನ್ : ವರ್ಕಿಂಗ್ ಫಾರ್ ಚೇಂಜ್ ಅಂಡ್ ಡೆವಲಪ್‌ಮೆಂಟ್* ವೈಟ್, ಎಸ್., ನಾಯರ್, ಕೆ. ಅಂಡ್ ಅಸ್ಕಾಫ್ಟ್(ಸಂ) ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, 1994.

52. ಓಕ್ಲಿ,ಪಿ. ಪ್ರಾಜೆಕ್ಟ್ಸ್ ವಿತ್ ಪೀಪಲ್ *: ದಿ ಪ್ರಾಕ್ಟೀಸ್ ಆಫ್ ಪಾರ್ಟಿಸಿಪೇಶನ್ ಇನ್ ರೂರಲ್ ಡೆವಲಪ್‌ಮೆಂಟ್*, ಜನೀವಾ : ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಸೇಶನ್, 1991.

53. ನಂದಿನಿ ಸುಂದರ್ ಮತ್ತು ರೋಜರ್ ಜೆಫ್ರಿ, "ಇಂಟ್ರೊಡಕ್ಷನ್", ಎ ನ್ಯೂಮಾರಲ್ ಇಕಾನಮಿ ಫಾರ್ ಇಂಡಿಯಾಸ್ ಫಾರೆಸ್ಟ್? ನಂದಿನಿ ಸುಂದರ್ ಮತ್ತು ರೋಜರ್ ಜೆಫ್ರಿ(ಸಂ) ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, 1999.

ಅಧ್ಯಾಯ 2

ಅರಣ್ಯನೀತಿ ಮತ್ತು ಸಹಭಾಗಿತ್ವ ಅರಣ್ಯ ನಿರ್ವಹಣೆ

ಅರಣ್ಯನೀತಿ ಮತ್ತು ಸಹಭಾಗಿತ್ವ ಅರಣ್ಯ ನಿರ್ವಹಣೆ

ಅರಣ್ಯ ಸಂರಕ್ಷಣೆ ಮತ್ತು ನಿರ್ವಹಣೆಗಳಲ್ಲಿ ಸಮುದಾಯದ ಸಕ್ರಿಯ ಸಹಭಾಗಿತ್ವಕ್ಕೆ ಅವಕಾಶಮಾಡಿ ಕೊಡುವ ಜಂಟೀ ಅರಣ್ಯ ಯೋಜನೆ ಒಂದು ಅಪೇಕ್ಷಣೀಯವಾದ ಬೆಳವಣಿಗೆ. ಕರ್ನಾಟಕವೂ ಸೇರಿದಂತೆ ನಮ್ಮ ದೇಶದ ಹಲವಾರು ಭಾಗಗಳಲ್ಲಿ ಈ ರೀತಿಯ ಸಾಮುದಾಯಿಕ ಪ್ರಯತ್ನಗಳ ನಿದರ್ಶನಗಳು ಕಂಡುಬಂದರೂ, ದೇಶದಾದ್ಯಂತ ವ್ಯಾಪಕವಾಗಿ, ಬೃಹತ್ ಪ್ರಮಾಣದಲ್ಲಿ ಇದು ಪ್ರಾರಂಭವಾದದ್ದು ಸುಮಾರು ಹತ್ತು ವರ್ಷಗಳ ಹಿಂದೆ. ಕಟ್ಟು ನಿಟ್ಟಾದ ನಿಯಂತ್ರಣ ಮತ್ತು ವಾಣಿಜ್ಯೀಕರಣಗಳೇ ಮೂಲಮಂತ್ರವಾಗಿದ್ದ ಭಾರತದ ನೂರಐವತ್ತು ವರ್ಷಗಳ ಅರಣ್ಯ ನೀತಿಯಲ್ಲಿ, ಜೀವಿ ಪರಿಸ್ಥಿತಿ ಸಮತೋಲನ, ವಿಕೇಂದ್ರೀಕರಣ, ಜನರ ಸಹಭಾಗಿತ್ವ ಮುಂತಾದವುಗಳಿಗೆ ಅವಕಾಶ ಮಾಡಿಕೊಟ್ಟ ಪರಿವರ್ತನೆಗಳು ಬಂದದ್ದು ಹೇಗೆ, ಏಕೆ, ಇದರ ಹಿಂದಿರುವ ಉದ್ದೇಶಗಳೇನು, ಈ ಬದಲಾವಣೆಗಳಿಗೆ ದಾರಿಮಾಡಿಕೊಟ್ಟ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಂದರ್ಭಗಳಾವುವು ಮುಂತಾದವು ಕುತೂಹಲ ಕೆರಳಿಸುವ ಪ್ರಶ್ನೆಗಳು. ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಈ ಪ್ರಶ್ನೆಗಳಿಗೆ ನಿಖರ ಉತ್ತರಗಳನ್ನು ಕಂಡುಕೊಳ್ಳುವುದು ಅಗತ್ಯ. ಈ ಪ್ರಯತ್ನದೊಡನೆ, ಅನುಷ್ಠಾನಗೊಂಡಿರುವ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾಗುವ ಮುಂಚಿನ ಅವಧಿಯಲ್ಲಿ ಅರಣ್ಯ ನಿರ್ವಹಣೆಯ ಸ್ಥಳೀಯ ಪದ್ಧತಿಗಳು ಮತ್ತು ಜನ ಹಾಗೂ ಅರಣ್ಯಗಳ ನಡುವಿನ ಸಂಬಂಧಗಳ ಬಗ್ಗೆ ಸಂಶೋಧಕರಲ್ಲಿ ಒಮ್ಮತ ಕಂಡುಬರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಆಲೋಚನಾಧಾರೆಗಳನ್ನು ಗುರುತಿಸಬಹುದು. "ನಿಸರ್ಗ ವಿಧಿಸಿದ ಜೀವಿಪರಿಸ್ಥಿತಿ ಮಿತಿಗಳನ್ನು ಒಪ್ಪಿಕೊಂಡು, ಸಾಮಾಜಿಕವಾಗಿ ಅದಕ್ಕೆ ಹೊಂದಿಕೊಂಡು, ಆ ಮೂಲಕವಾಗಿ ಅರಣ್ಯಗಳೊಡನೆ ದೀರ್ಘಕಾಲಿಕ ಸಂಬಂಧವನ್ನೂ ಹಾಗೂ ಅದಕ್ಕೆ ಅನುಗುಣವಾದ ನಿರ್ವಹಣೆಯ ರೀತಿ ರಿವಾಜುಗಳನ್ನೂ ಸಮುದಾಯಗಳು ಬೆಳೆಸಿಕೊಂಡಿದ್ದವು"[1] ಎಂಬುದು ಮೊದಲನೆಯದು. ಎರಡನೆಯ ವಾದದಂತೆ ಬ್ರಿಟಿಷ್ ಪೂರ್ವ ಅವಧಿಯಲ್ಲಿ ಅರಣ್ಯ ಸಂಪನ್ಮೂಲಗಳು ಸಮೃದ್ಧವಾಗಿದ್ದು ಜನದಟ್ಟಣೆ ಬಹಳ ಕಡಿಮೆಯಿತ್ತು. ಜನಸಮುದಾಯ ಮತ್ತು ಅರಣ್ಯ ಸಂಪನ್ಮೂಲಗಳ ನಡುವಿನ

'ತಾಳಿಕೆಯ ಬಳಕೆ'ಯ (ಸ್ಟೈನಬಲ್‌ಯೂಸ್) ಸಂಬಂಧಕ್ಕೆ ಇದು ಮುಖ್ಯವಾದ ಕಾರಣವೇ ಹೊರತಾಗಿ, ಸಂಪನ್ಮೂಲಗಳ ನಿರ್ವಹಣೆಗೆ ಸ್ಥಳೀಯ ವ್ಯವಸ್ಥೆಗಳ ವೈಶಿಷ್ಟ್ಯವಲ್ಲ."[2] ಈ ವಾದವಿವಾದಗಳೇನೇ ಇರಲಿ, ಬ್ರಿಟಿಷರ ಆಗಮನದ ನಂತರ ಸ್ಥಳೀಯ ಜನಸಮುದಾಯ ಮತ್ತು ಅರಣ್ಯಗಳ ನಡುವಿನ ಸಂಬಂಧದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳಾದವು ಎನ್ನುವ ಬಗ್ಗೆ ಸಂಶೋಧಕರಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಭಾರತದ ಮೇಲೆ ತನ್ನ ಆಧಿಪತ್ಯವನ್ನು ಬಿಗಿಗೊಳಿಸಿದ್ದು 1796 ರ ನಂತರ. ಬ್ರಿಟಿಷ್ ಸರ್ಕಾರ 'ವೈಜ್ಞಾನಿಕ ಮತ್ತು ವ್ಯವಸ್ಥಿತ' ಎಂದು ಕರೆದ ಅರಣ್ಯ ನಿರ್ವಹಣೆ ಪ್ರಾರಂಭವಾದುದು 1850 ರ ನಂತರ. ಪ್ರಾರಂಭದಿಂದಲೂ ಭೂಮಿಯ ವೈಜ್ಞಾನಿಕ ಹಾಗೂ ಲಾಭದಾಯಕ ಬಳಕೆಗೆ ಅರಣ್ಯಗಳು ಬಹುದೊಡ್ಡ ಅಡಚಣೆಯೆಂಬ ನಿಲುವು ತಳೆದ ಬ್ರಿಟಿಷ್ ಸರ್ಕಾರ "ಅರಣ್ಯಗಳನ್ನು ನೆಲ ಸಮಮಾಡಿ ಆ ಜಾಗವನ್ನು ಕೃಷಿಗಾಗಿ ಬಳಸುವ ನೀತಿಯನ್ನು ಆಚರಣೆಗೆ ತಂದಿತು."[3] ಬ್ರಿಟಿಷ್ ಸರ್ಕಾರ ತನ್ನ ನೌಕಾದಳಕ್ಕೆ, ರೈಲ್ವೇ ಜಾಲದ ವಿಸ್ತರಣೆಗೆ ಅಪಾರ ಪ್ರಮಾಣದಲ್ಲಿ ಬೇಕಾದ ನಾಟಾಗಳಿಗಾಗಿ ವಿಸ್ತೃತ ಪ್ರಮಾಣದಲ್ಲಿ ಅರಣ್ಯಗಳ ನಾಶಕ್ಕೆ ಕಾರಣವಾಯಿತು. ಅವಿರತವಾಗಿ ಸಾಗಿದ ಎಲ್ಲ ಪ್ರಭೇದಗಳ ಮರಗಳ ನಾಶ 1855 ರಿಂದ 61 ರ ಅವಧಿಯಲ್ಲಿ ಗರಿಷ್ಠಮಟ್ಟ ಮುಟ್ಟಿತು. 1865 ರಲ್ಲಿ ಮೊಟ್ಟ ಮೊದಲ 'ಭಾರತದ ಅರಣ್ಯ ಅಧಿನಿಯಮ' ಜಾರಿಗೆ ಬಂದು ಅರಣ್ಯಗಳನ್ನು ಸರ್ಕಾರದ ಅಧೀನಕ್ಕೆ ಒಳಪಡಿಸುವ ಕಾನೂನು ಚೌಕಟ್ಟುಗಳು ರೂಪುಗೊಂಡವು. ಭಾರತದ ಅರಣ್ಯ ಅಧಿನಿಯಮಕ್ಕೆ 1878 ರಲ್ಲಿ ಬಂದ ಪರಿಷ್ಕರಣೆ ಹಾಗೂ 1894 ರಲ್ಲಿ ಘೋಷಿತವಾದ ಮೊಟ್ಟಮೊದಲ ಅರಣ್ಯ ನೀತಿ 'ಕಾಯ್ದಿಟ್ಟ ಅರಣ್ಯ'ಗಳ (ರಿಸರ್ವ್ಡ್ ಫಾರೆಸ್ಟ್) ಅಸ್ತಿತ್ವಕ್ಕೆ ದಾರಿಮಾಡಿಕೊಟ್ಟು ಸ್ಥಳೀಯ ಸಮುದಾಯದ ಹಕ್ಕುಗಳನ್ನು ನಿಯಂತ್ರಿಸಿ, ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ, ಬಳಸುವವರ ಅನುಭೋಗದ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾರಂಭಿಸಿದವು. ಈ ಕಾಯ್ದಿಟ್ಟ ಅರಣ್ಯ ಸಂಪೂರ್ಣವಾಗಿ ಅರಣ್ಯ ಇಲಾಖೆಯಿಂದಲೇ ನಿರ್ವಹಣೆಗೆ ಒಳಪಟ್ಟಿದ್ದು ಅವುಗಳಿಂದ ಸ್ಥಳೀಯರಿಗೆ ಯಾವ ಉತ್ಪನ್ನಗಳೂ ದೊರೆಯುತ್ತಿರಲಿಲ್ಲ. ಸಾಮಾನ್ಯವಾಗಿ ಸಮುದಾಯದ ನಿರ್ವಹಣೆಗೆ ಒಳಪಟ್ಟಿರುತ್ತಿದ್ದ ಇಂಥ ಅರಣ್ಯಗಳನ್ನು ಬ್ರಿಟಿಷ್ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿದ್ದರಿಂದ ಅಂಥ ಪ್ರದೇಶಗಳಿಂದ ದೊರೆಯುತ್ತಿದ್ದ ಉತ್ಪನ್ನಗಳಿಂದ ಸ್ಥಳೀಯರು ವಂಚಿತರಾದರು. ಈ ರೀತಿ ತೊಂದರೆಗೊಳಗಾದವರು ಮೂರು ತಿಂಗಳ ಒಳಗಾಗಿ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸುವ ಅವಕಾಶವಿದ್ದರೂ, ಅನಕ್ಷರಸ್ಥರೇ ಹೆಚ್ಚಾಗಿದ್ದ ಅಂದಿನ ಸಮಾಜದಲ್ಲಿ ಅದು ಸುಲಭವಾಗಿರಲಿಲ್ಲ. ಕಾಯ್ದಿಟ್ಟ ಅರಣ್ಯಗಳಿಂದ ಭಿನ್ನವಾಗಿದ್ದ "ಸಂರಕ್ಷಿತ ಅರಣ್ಯ"ವನ್ನು (ಪ್ರೊಟೆಕ್ಟೆಡ್ ಫಾರೆಸ್ಟ್) ಅರಣ್ಯ ಇಲಾಖೆಯೇ ನಿರ್ವಹಿಸಿದರೂ, ಸ್ಥಳೀಯ ಜನರಿಗೆ ಅಂತಹ ಅರಣ್ಯಗಳಿಂದ ಹಣ್ಣು ಹಂಪಲು ಎಲೆ, ಹುಲ್ಲು ಮುಂತಾದವುಗಳನ್ನು ಸಂಗ್ರಹಿಸುವ ಹಕ್ಕನ್ನು ನೀಡಲಾಗಿತ್ತು. "1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ

ಬಂದಾಗ 31 ದಶಲಕ್ಷ ಹೆಕ್ಟೇರುಗಳಷ್ಟು ಅರಣ್ಯ ಕಾಯ್ದಿಟ್ಟ ವರ್ಗದಲ್ಲಿಯೂ, 15 ದಶಲಕ್ಷ ಹೆಕ್ಟೇರುಗಳಷ್ಟು ಅರಣ್ಯ ಸಂರಕ್ಷಿತ ವರ್ಗದಲ್ಲಿಯೂ ಇದ್ದವು."[4]

ಭಾರತದ ಅರಣ್ಯ ಇತಿಹಾಸದಲ್ಲಿ ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಅರಣ್ಯ ನೀತಿಗೆ ಸಂಬಂಧ ಪಟ್ಟಂತೆ ಮೂರು ಮುಖ್ಯ ಘಟ್ಟಗಳನ್ನು ಗುರುತಿಸಬಹುದು. ಇವುಗಳೆಂದರೆ ೧೯೫೨ರ ಅರಣ್ಯನೀತಿ, 1976'ಲ್ಲಿ ರಾಷ್ಟ್ರೀಯ ಕೃಷಿ ಆಯೋಗ ನಿರೂಪಿಸಿದ ಅರಣ್ಯ ನೀತಿ ಮತ್ತು ೧೯೮೮ರ ಹೊಸ ಅರಣ್ಯ ನೀತಿ.

1952ರ ಅರಣ್ಯನೀತಿ

ಜೀವಿ ಪರಿಸ್ಥಿತಿ ಸಮತೋಲನ ಹಾಗೂ ಉತ್ತಮ ಭೂ ಬಳಕೆಯ ದೃಷ್ಟಿಯಿಂದ ದೇಶದ ಒಟ್ಟು ಭೂಭಾಗದ ಸರಾಸರಿ 33 ರಷ್ಟು ಭಾಗ ಅರಣ್ಯಗಳಿಂದ ಆಚ್ಛಾದಿತವಾಗಿರಬೇಕೆಂದು ಸೂಚಿಸಿದ ೧೯೫೨ರ ಅರಣ್ಯನೀತಿ, ರಕ್ಷಣೆ, ಸಂವಹನ ಹಾಗೂ ದೇಶದ ಜೀವಾಳವೆನಿಸಿದ ಕೆಲವು ಕೈಗಾರಿಕೆಗಳನ್ನು 'ರಾಷ್ಟ್ರೀಯ ಹಿತಾಸಕ್ತಿ'ಯೆಂದು ಪರಿಗಣಿಸಿ, ಅವುಗಳಿಗೆ ತೊಂದರೆಯಾಗುವಂತಹ ಯಾವುದೇ ಬಳಕೆಯನ್ನೂ ಅರಣ್ಯಗಳಿಗೆ ಸಮೀಪವಾಗಿ ಬದುಕುವ ಸಮುದಾಯಗಳು ಮಾಡಕೂಡದೆಂದು ವಿಧಿಸಿತು. ರಾಷ್ಟ್ರೀಯ ಉದ್ದೇಶಗಳಿಗಾಗಿ ಅಗತ್ಯವಾದ ಬೆಲೆಬಾಳುವ ಮರಮಟ್ಟುಗಳನ್ನು ಉತ್ಪಾದಿಸುವುದೇ ಅರಣ್ಯಗಳ ಪರಮ ಗುರಿಯಾಯಿತು. ಸ್ಥಳೀಯ ಸಮುದಾಯಗಳ ಅಗತ್ಯಗಳನ್ನು ತಕ್ಕ ಮಟ್ಟಿಗೆ ಪೂರೈಸಬೇಕಾದರೂ, ರಾಷ್ಟ್ರೀಯ ಹಿತಾಸಕ್ತಿಯ ಸಂದರ್ಭದಲ್ಲಿ, ಅರಣ್ಯಗಳಿಗೆ ಸಮೀಪವಾಗಿ ಬದುಕುತ್ತಿದ್ದಾರೆಂಬ ಏಕಮಾತ್ರ ಕಾರಣಕ್ಕೆ ಸ್ಥಳೀಯರಿಗೆ ಅರಣ್ಯಗಳ ಮೇಲೆ ಯಾವುದೇ ಹಕ್ಕೂ ಇಲ್ಲವೆಂಬುದನ್ನು ಸ್ಪಷ್ಟಪಡಿಸಲಾಯಿತು.

'ಅರಣ್ಯಾಭಿವೃದ್ಧಿಯಲ್ಲಿ ವೈಜ್ಞಾನಿಕ ವಿಧಾನಗಳಿಗೆ ಬದ್ಧತೆ, ಕೈಗಾರಿಕಾ ಪ್ರೇರಿತ ಆರ್ಥಿಕ ಪ್ರಗತಿಗೆ ಅತಿಹೆಚ್ಚಿನ ಆದ್ಯತೆ, ಅರಣ್ಯಾಭಿವೃದ್ಧಿಯಲ್ಲಿ ವೈವಿಧ್ಯದಿಂದ ಏಕ ಪ್ರಭೇದದ ನೆಡು ತೋಪುಗಳತ್ತ ಬದಲಾದ ಒತ್ತು, ಅರಣ್ಯಾಧಾರಿತ ಸಮುದಾಯಕ್ಕಿಂತ ನಗರದ ಜನರ ಬೇಡಿಕೆಗಳಿಗೆ ಪ್ರಾಮುಖ್ಯತೆ, ಅರಣ್ಯಗಳಿರುವುದು ಸ್ಥಳೀಯ ಸಮುದಾಯಕ್ಕಿಂತ ದೇಶದ ಆರ್ಥಿಕ ಅಭಿವೃದ್ಧಿಗಾಗಿ ಎಂಬ ನಿಲುವು, ಅರಣ್ಯ ನಿರ್ವಹಣೆಯನ್ನು ವೈಜ್ಞಾನಿಕ ತಿಳಿವಳಿಕೆಯಿಲ್ಲದ ಸ್ಥಳೀಯ ಜನರಿಗೆ ನೀಡುವುದು ಅಪಾಯಕಾರಿಯೆಂಬ ಧೋರಣೆ' ಮುಂತಾದ ಆಧುನೀಕರಣ ಸಿದ್ಧಾಂತದ ಲಕ್ಷಣ ಗಳನ್ನು ಈ ಅರಣ್ಯ ನೀತಿಯಲ್ಲಿ ಗುರುತಿಸಬಹುದು.

1952 ರ ಅರಣ್ಯ ನೀತಿಗೆ ಅನುಗುಣವಾಗಿ ಮೊದಲನೆಯ ಪಂಚವಾರ್ಷಿಕ ಯೋಜನೆಯಿಂದಲೇ ಕಡಿಮೆ ಮೌಲ್ಯದ ಮಿಶ್ರ ಅರಣ್ಯಗಳನ್ನು ಕಡಿದುಹಾಕಿ, ಅದೇ ಜಾಗದಲ್ಲಿ ಹೆಚ್ಚಿನ ಆರ್ಥಿಕ ಮೌಲ್ಯದ ವಾಣಿಜ್ಯ ಪ್ರಭೇದಗಳಾದ ನೀಲಗಿರಿ, ತೇಗ ಮುಂತಾದವುಗಳ ನೆಡುತೋಪುಗಳನ್ನು

ಬೆಳೆಸುವ ಪ್ರಯತ್ನ ಪ್ರಾರಂಭವಾಯಿತು. ಅರಣ್ಯ ವಿಜ್ಞಾನವನ್ನು ಕೈಗಾರಿಕೆಗಳಿಗೆ ಬೇಕಾದ ಮರಮಟ್ಟುಗಳನ್ನು ಉತ್ಪಾದಿಸುವುದರೊಂದಿಗೆ ಸಮೀಕರಿಸಲಾಯಿತು. "1966-74 ರ ಅವಧಿಯಲ್ಲಿ ಅರಣ್ಯೀಕರಣಕ್ಕಾಗಿ ಭಾರತ ಸರ್ಕಾರ ವೆಚ್ಚ ಮಾಡಿದ 67 ಕೋಟಿ ರೂ. ಗಳಲ್ಲಿ 56 ಕೋಟಿ ರೂ. ಗಳನ್ನು ಈ ರೀತಿಯ ಉತ್ಪಾದನೆಗೆ ಬಳಸಿತು."[5] ಬ್ರಿಟಿಷರ ಆಳ್ವಿಕೆಯಲ್ಲಿದ್ದ ಆದ್ಯತೆಗಳೇ 1976 ರ ವರೆಗೂ ಮುಂದುವರೆದವು. "ನಾವು ಅನುಸರಿಸಿದ ಇಂಥ ನೀತಿಯ ಫಲವಾಗಿ ನೈಸರ್ಗಿಕ ಅರಣ್ಯಗಳು ದೊಡ್ಡ ಪ್ರಮಾಣದಲ್ಲಿ ಹೇಳ ಹೆಸರಿಲ್ಲದಂತೆ ನಿರ್ನಾಮವಾದವು. ಅವುಗಳ ಜಾಗದಲ್ಲಿ ನೆಡುತೋಪುಗಳು ತಲೆಯೆತ್ತಿದವು. ಅರಣ್ಯ ಸಂಪನ್ಮೂಲ ತ್ವರಿತಗತಿಯಲ್ಲಿ ಕ್ಷೀಣಿಸಿತು. ಅರಣ್ಯಾಧಾರಿತ ಸ್ಥಳೀಯ ಜನ ತಮ್ಮ ನೆಲ ಮತ್ತು ಜೀವನೋಪಾಯವನ್ನು ಕಳೆದುಕೊಂಡರು."[6]

ರಾಷ್ಟ್ರೀಯ ಕೃಷಿ ಆಯೋಗ 1976

1952-76 ರ ಅವಧಿಯಲ್ಲಿ ಭಾರತ ಸರ್ಕಾರ ಅನುಸರಿಸಿದ ಅರಣ್ಯ ನೀತಿಯಿಂದ 70 ರ ದಶಕದ ಮಧ್ಯಭಾಗದ ವೇಳೆಗೆ ಅರಣ್ಯ ಸಮೀಪದ ಜನ ಸಮುದಾಯಗಳ ಬೇಡಿಕೆಗಳನ್ನು ಈಡೇರಿಸದಿದ್ದರೆ ಅರಣ್ಯಗಳನ್ನು ಉಳಿಸಿಕೊಳ್ಳುವುದೇ ಅಸಾಧ್ಯವೆಂಬುದು ಸ್ಪಷ್ಟವಾಗಿತ್ತು.

"ಅರಣ್ಯಕ್ಕೆ ಸಮೀಪವಾಗಿ ನೆಲೆಸಿರುವ ಗ್ರಾಮೀಣ ಪ್ರದೇಶದ ಜನರ ಹಕ್ಕು, ಸವಲತ್ತುಗಳು ಹಾಗೂ ಅರಣ್ಯ ಉತ್ಪನ್ನಗಳ ಪುಕ್ಕಟೆ ಸರಬರಾಜಿನಿಂದ ಅರಣ್ಯ ಸಂಪತ್ತು ನಾಶವಾಗತೊಡಗಿದೆ. ಈ ಪ್ರವೃತ್ತಿಯನ್ನು ವಿಪರ್ಯಾಯಗೊಳಿಸಬೇಕು. ಅರಣ್ಯಗಳ ಸಂರಕ್ಷಣೆ ಮತ್ತು ಪುನರುಜ್ಜೀವನಕ್ಕೆ ಸ್ಥಳೀಯರ ಕೊಡುಗೆ ಇಲ್ಲದಿರುವ ಸಂದರ್ಭದಲ್ಲಿ, ಅರಣ್ಯದ ಹೊರಗಡೆಯಿರುವ ಭೂಮಿಯಿಂದ ಜನರ ಬೇಡಿಕೆಗಳನ್ನು ಈಡೇರಿಸಿದರೆ, ಅರಣ್ಯ ಭೂಮಿಯನ್ನು ಹೆಚ್ಚಿನ ಉತ್ಪಾದನಾ ಉದ್ದೇಶಗಳಿಗೆ ಬಳಸಿಕೊಳ್ಳಬಹುದು; ವಾಣಿಜ್ಯೋದ್ದೇಶದ ಮರಮಟ್ಟುಗಳನ್ನು ಉತ್ಪಾದಿಸಬಹುದು"[7]

"ಅರಣ್ಯದ ಹೊರಗಿರುವ ಊರೊಟ್ಟಿನ ಭೂಮಿ ಹಾಗೂ ಖಾಸಗೀ ಜಮೀನು ಇತ್ಯಾದಿಗಳಲ್ಲಿ ಮರಗಿಡಗಳನ್ನು ಬೆಳೆಸಿ, ಜನರ ಅಗತ್ಯಗಳನ್ನು ಪೂರೈಸುವ ಪ್ರಯತ್ನದ ಜೊತೆಗೇ ಅರಣ್ಯಸಂಬಂಧಿತ ಕೆಲಸಗಳು, ಸಂರಕ್ಷಣೆಯಿಂದ ಉತ್ಪಾದನೆಯತ್ತ ತಿರುಗಬೇಕು. ಭವಿಷ್ಯದ ಯೋಜನೆಗಳಲ್ಲಿ ಮಿಶ್ರ ಪ್ರಭೇದಗಳಿರುವ ಅರಣ್ಯವನ್ನು ಸಂಪೂರ್ಣವಾಗಿ ಕಡಿದುಹಾಕಿ, ಆ ಜಾಗದಲ್ಲಿ ತ್ವರಿತವಾಗಿ ಬೆಳೆಯುವ, ಹೆಚ್ಚಿನ ಲಾಭ ತರುವ ಪ್ರಭೇದಗಳ ನೆಡುತೋಪುಗಳನ್ನು ಬೆಳೆಸಬೇಕು."[8]

ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾವಸ್ತುಗಳು, ಮರಮಟ್ಟುಗಳು ಹಾಗೂ ಉರುವಲಿನ ತೀವ್ರ ಕೊರತೆ, ಭಾರತ ಸರ್ಕಾರವನ್ನು ಅಂತಾರಾಷ್ಟ್ರೀಯ ನೆರವು ನೀಡಿಕೆ ಸಂಸ್ಥೆಗಳ ಧನಸಹಾಯದೊಂದಿಗೆ ಬೃಹತ್ ಪ್ರಮಾಣದಲ್ಲಿ 'ಸಾಮಾಜಿಕ ಅರಣ್ಯ ಯೋಜನೆ'ಯನ್ನು ಕೈಗೊಳ್ಳುವಂತೆ ಮಾಡಿತು. ಅರಣ್ಯದ ಹೊರಗಿನ ಸರ್ಕಾರಿ ಭೂಮಿ ಮತ್ತು ಖಾಸಗಿ ಜಮೀನುಗಳಲ್ಲಿ ತ್ವರಿತಗತಿಯಲ್ಲಿ

ಬೆಳೆಯುವ ಪ್ರಭೇದಗಳ ಮರಗಿಡಗಳನ್ನು ಕೋಟಿಗಟ್ಟಲೆ ಬೆಳೆಸಿ, ಸ್ಥಳೀಯ ಸಮುದಾಯಗಳ ಅಗತ್ಯಗಳನ್ನು ಪೂರೈಸಿ, ಆ ಮೂಲಕವಾಗಿ ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದ ಸಾಮಾಜಿಕ ಅರಣ್ಯ ಯೋಜನೆ ಭಾರತದ ಅರಣ್ಯ ಇತಿಹಾಸದಲ್ಲಿ ಮತ್ತೊಂದು ಮುಖ್ಯ ಘಟ್ಟವಾಯಿತು.

ಸಾಮಾಜಿಕ ಅರಣ್ಯ ಯೋಜನೆಯ ಫಲವಾಗಿ ಕಟ್ಟಡ ನಿರ್ಮಾಣ ಕೆಲಸಕ್ಕೆ ಬೇಕಾದ ಕಂಬಗಳು, ಕಾಗದ, ರೇಯಾನ್ ಕಾರ್ಖಾನೆಗಳಿಗೆ ಅಗತ್ಯವಾದ ಮೆದುಮರಗಳ ಪ್ರಮಾಣದಲ್ಲಿ ಏರಿಕೆ ಕಂಡು ಬಂದದ್ದು ನಿಜ. ಇದರೊಟ್ಟಿಗೆ ಸಣ್ಣ ಮರಮಟ್ಟುಗಳ ಉತ್ಪಾದನೆಯ ಪ್ರಮಾಣವೂ ಹೆಚ್ಚಿತು. ಆದರೆ "ಈ ಹೆಚ್ಚಳಗಳು ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆಮಾಡಲಿಲ್ಲ. ಇದರ ಬದಲಿಗೆ ಅರಣ್ಯ ಇಲಾಖೆಯ ಗಮನ ಕಾಡಿನ ಹೊರಗೆ ನೆಡುತೋಪುಗಳನ್ನು ಬೆಳೆಸುವುದರ ಮೇಲೆ ಕೇಂದ್ರೀಕೃತವಾಗಿದ್ದರಿಂದ ನೈಸರ್ಗಿಕ ಅರಣ್ಯದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು."[9] ಊರೊಟ್ಟಿನ ಸಾಮೂಹಿಕ ಆಸ್ತಿಯಾದ ಗೋಮಾಳ, ಕೆರೆಯಂಗಳ ಮುಂತಾದವುಗಳನ್ನು ಸಾಮಾಜಿಕ ಅರಣ್ಯದಡಿ ತಂದಿದ್ದರಿಂದ, ಅಂಥ ಜಮೀನುಗಳಿಂದ ದೊರೆಯುತ್ತಿದ್ದ ಉತ್ಪನ್ನಗಳಿಗೂ ಸಂಚಕಾರ ಬಂದಿತು. "ಸಾಮಾಜಿಕ ಅರಣ್ಯ ಯೋಜನೆಯ ವಿನ್ಯಾಸವನ್ನು ರೂಪಿಸುವುದರಲ್ಲಿನ ಸಮಸ್ಯೆಗಳು, ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳು ಮತ್ತು ಅನುಷ್ಠಾನದಲ್ಲಿನ ತೊಂದರೆಗಳಿಂದಾಗಿ ಸಾಮಾಜಿಕ ಅರಣ್ಯ ಯೋಜನೆ ಗ್ರಾಮೀಣ ಸಮುದಾಯಗಳಿಗೆ ಉರುವಲು, ಮೇವು, ಹಸುರುಗೊಬ್ಬರ, ಸಣ್ಣ ಮರಮಟ್ಟುಗಳನ್ನು ಪೂರೈಸುವ ತನ್ನ ಉದ್ದೇಶದಲ್ಲಿ ಸಫಲತೆ ಪಡೆಯಲಿಲ್ಲ."[10] 1976 ರಲ್ಲಿ ಅರಣ್ಯ, ರಾಜ್ಯಸರ್ಕಾರದಿಂದ, ರಾಜ್ಯ-ಕೇಂದ್ರ ಸರ್ಕಾರಗಳೆರಡರ ವ್ಯಾಪ್ತಿಗೆ ಸೇರುವ ಸಮವರ್ತೀ ಪಟ್ಟಿಗೆ ವರ್ಗಾವಣೆಯಾಯಿತು. 1980 ರ ಭಾರತದ ಅರಣ್ಯದ ಕರಡು ವಿಧೇಯಕ ಸ್ಥಳೀಯ ಜನರ ವಿನಾಶಕಾರಿ ಪ್ರವೃತ್ತಿಯಿಂದ ಅರಣ್ಯಗಳ ವಾಣಿಜ್ಯೋತ್ಪನ್ನಗಳನ್ನು ರಕ್ಷಿಸುವ ಅಗತ್ಯಕ್ಕೆ ಒತ್ತು ನೀಡಿತು. ಈ ಕರಡು ವಿಧೇಯಕಕ್ಕೆ ತೀವ್ರ ಪ್ರತಿರೋಧ ಕಂಡುಬರುವುದರೊಡನೆ, ಅರಣ್ಯಗಳ ಅತಿಬಳಕೆ ಮತ್ತು ಸಾಂಪ್ರದಾಯಿಕ ಸ್ಥಳೀಯ ಹಕ್ಕುಗಳ ಚ್ಯುತಿಯ ವಿರುದ್ಧ ಸೆಣಸುತ್ತಿದ್ದ ಎಲ್ಲ ಸಂಘಟನೆಗಳು ಒಂದು ಗೂಡಿದವು. ಇದರ ಪರಿಣಾಮವಾಗಿ 1980ರ ಕರಡು ವಿಧೇಯಕ ಸೋಲನ್ನನುಭವಿಸು ವುದರೊಡನೆ, ಜನರ ಒಳಿತನ್ನು ಗಮನದಲ್ಲಿಟ್ಟುಕೊಂಡ ಅರಣ್ಯ ಚಟುವಟಿಕೆಗಳಿಗೆ ಬೇಡಿಕೆ ಹೆಚ್ಚಿತು.

ಅರಣ್ಯ ಭೂಮಿಯಲ್ಲಿ ಕೈಗಾರಿಕೆಗಳ ಕಚ್ಚಾವಸ್ತು ಬೇಡಿಕೆಯನ್ನು ಪೂರೈಸುವ ನೆಡುತೋಪುಗಳು, ಹಳ್ಳಿಯ ಜಮೀನಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ ಇವು ಸ್ವಾತಂತ್ರ್ಯಾನಂತರದ ನಾಲ್ಕು ದಶಕಗಳ ಅವಧಿಯಲ್ಲಿ ಸರ್ಕಾರ ಕೈಗೊಂಡ ಎರಡು ಪ್ರಮುಖ ಕ್ರಮಗಳು. ಆದರೆ ಇವು ನಮ್ಮ ದೇಶದ ನೈಸರ್ಗಿಕ ಅರಣ್ಯಗಳ ಅವನತಿಯನ್ನು ತಡೆಯಲಿಲ್ಲ. ಕೈಗಾರಿಕೀಕರಣವನ್ನು ತ್ವರಿತಗೊಳಿಸುವ ಉದ್ದೇಶದಿಂದ, ಅರಣ್ಯಾಧಾರಿತ ಕೈಗಾರಿಕೆಗಳಿಗೆ ನೀಡಿದ ರಿಯಾಯಿತಿಗಳಿಂದ, ಕಚ್ಚಾವಸ್ತುಗಳು

ಹೆಚ್ಚುಕಡಿಮೆ, ಪುಕ್ಕಟೆಯೆನಿಸುವಷ್ಟು ಅಗ್ಗವಾಗಿ ದೊರೆಯಿತು. ಅತ್ಯಂತ ಅಗ್ಗದ ದರದಲ್ಲಿ, ವಿಪುಲ ಪ್ರಮಾಣದಲ್ಲಿ ಕಚ್ಚಾವಸ್ತು ದೊರೆಯುತ್ತಿದ್ದುದರಿಂದ, ಅರಣ್ಯಗಳ ಪುನರುಜ್ಜೀವನದಲ್ಲಿ ಕೈಗಾರಿಕೆಗಳು ಯಾವುದೇ ಆಸಕ್ತಿಯನ್ನು ತೋರಲಿಲ್ಲ. ಈ ಅತಿಬಳಕೆಯಿಂದ ಕೈಗಾರಿಕೆಗಳು ನಿರೀಕ್ಷಿಸಿದ್ದುದಕ್ಕಿಂತ ಬಹಳ ಮುಂಚೆಯೇ ಕಚ್ಚಾವಸ್ತುಗಳು ಮುಗಿದುಹೋದವು. ಕೈಗಾರಿಕೆಗಳಿಗೆ ಇದು ಹೆಚ್ಚಿನ ಸಮಸ್ಯೆಯನ್ನುಂಟು ಮಾಡಲಿಲ್ಲ. ಏಕೆಂದರೆ ಅವುಗಳಿಗೆ ಹೆಚ್ಚಿನ ದೂರದಿಂದ ಕಚ್ಚಾವಸ್ತುಗಳನ್ನು ತರಿಸಿಕೊಳ್ಳುವ ಸಾಮರ್ಥ್ಯವಿತ್ತು. ಅವು ಹಾಗೆಯೇ ಮಾಡಿದವು. ಆದರೆ ನಿಜವಾದ ತೊಂದರೆ ಗೊಳಗಾಗಿದ್ದು ಸ್ಥಳೀಯ ಸಮುದಾಯಗಳು. ಕೈಗಾರಿಕೆಗಳಿಂದಾದ ಅತಿಬಳಕೆಯ ಪರಿಣಾಮವಾಗಿ, ಅರಣ್ಯಗಳಿಂದ ಸ್ಥಳೀಯರಿಗೆ ಲಭಿಸುತ್ತಿದ್ದ ಉತ್ಪನ್ನಗಳಿಗೆ ಸಂಚಕಾರ ಬಂದಿತು. ಪರಿಸರ ಸಮಸ್ಯೆಗಳೂ ತಲೆದೋರಿದವು. ಹೊಸ ನೆಡುತೋಪುಗಳನ್ನು ಬೆಳೆಸಲು ಸೂಕ್ಷ್ಮ ಪ್ರದೇಶಗಳಲ್ಲೂ ಅರಣ್ಯಗಳನ್ನು ಸಂಪೂರ್ಣವಾಗಿ ನೆಲಸಮ ಮಾಡಿದ್ದರಿಂದ, ಭೂಕುಸಿತ, ಮಣ್ಣಿನ ಸವೆತ, ನದಿ ಜಲಾಶಯಗಳಲ್ಲಿ ಹೂಳು ತುಂಬುವುದು ಪ್ರಾರಂಭವಾಯಿತು.

ಸ್ವಾತಂತ್ರ್ಯಾನಂತರ ನಮ್ಮ ಸರ್ಕಾರ ಅನುಸರಿಸಿಕೊಂಡು ಬಂದ ಮಿಶ್ರ ಅರ್ಥವ್ಯವಸ್ಥೆಯಲ್ಲಿ ಖಾಸಗೀ ಹಾಗೂ ಸರ್ಕಾರಿ ವಲಯಗಳೆರಡಕ್ಕೂ ಅವಕಾಶಗಳಿದ್ದವು. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ, ಸಾಮಾನ್ಯವಾಗಿ ಮೂಲಭೂತ ಸೌಕರ್ಯಗಳನ್ನೂ, ಜನಸಾಮಾನ್ಯರ ಕಲ್ಯಾಣಕ್ಕೆ ಅಗತ್ಯವಾದ ಯೋಜನೆಗಳನ್ನೂ ತಾನು ಕೈಗೊಂಡು, ಮಾರುಕಟ್ಟೆಯ ಅಗತ್ಯಗಳಿಗೆ ಸ್ಪಂದಿಸುವ ಯೋಜನೆಗಳನ್ನು ಖಾಸಗೀ ವಲಯಕ್ಕೆ ಬಿಡುತ್ತದೆ. ಇದೇ ಕಾರಣಕ್ಕಾಗಿ ಆರೋಗ್ಯ, ಸಾರಿಗೆ, ಸಂಪರ್ಕ, ವಿದ್ಯುದುತ್ಪಾದನೆ ಮುಂತಾದವುಗಳು ಸರ್ಕಾರೀ ಕ್ಷೇತ್ರದಲ್ಲಿದ್ದರೆ ವಾಣಿಜ್ಯೋದ್ದೇಶದ ಚಟುವಟಿಕೆಗಳು ಖಾಸಗೀ ಕ್ಷೇತ್ರದಲ್ಲಿವೆ. ಆದರೆ ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಅರಣ್ಯ ಕ್ಷೇತ್ರದಲ್ಲಿ ಸರ್ಕಾರ ಅನುಸರಿಸಿದ ನೀತಿ ಮಾತ್ರ ಇದಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿತ್ತು. ಸರ್ಕಾರಕ್ಕೆ ಸೇರಿದ ಅರಣ್ಯ ಭೂಮಿಯನ್ನು ಕೈಗಾರಿಕಾ ನೆಡುತೋಪುಗಳಿಗೆ ಬಳಸಿದರೆ, ಖಾಸಗಿ ಕೃಷಿಭೂಮಿ, ಊರೊಟ್ಟಿನ ಭೂಮಿಯನ್ನು ಜನಸಮುದಾಯಕ್ಕೆ ಅಗತ್ಯವಾದ ಉರುವಲು, ಮೇವು, ಸಣ್ಣ ಮರಮಟ್ಟುಗಳನ್ನು ಪೂರೈಸಲು ಬಳಸಲು ಪ್ರೋತ್ಸಾಹಿಸಿತು. ಅರಣ್ಯ ಉತ್ಪನ್ನಗಳ ಉತ್ಪಾದನೆ, ಬಳಕೆಗಳಿಗೆ ಸಂಬಂಧಿಸಿದ ಪರಿಕಲ್ಪನೆ ಯಲ್ಲಿನ ಈ ಮೂಲಭೂತ ದೌರ್ಬಲ್ಯವೇ ಈ ಎರಡೂ ಕಾರ್ಯಕ್ರಮಗಳ- ಅರಣ್ಯ ಭೂಮಿಯಲ್ಲಿ ನೆಡುತೋಪು, ಹಳ್ಳಿಯ ಜಮೀನಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ-ವೈಫಲ್ಯಕ್ಕೆ ಕಾರಣವಾಯಿತೆಂದು ಬಹುತೇಕ ಚಿಂತಕರು ಅಭಿಪ್ರಾಯಪಡುತ್ತಾರೆ.

1988ರ ಅರಣ್ಯ ನೀತಿ

1988 ರಲ್ಲಿ ಘೋಷಿತವಾದ ಹೊಸ ಅರಣ್ಯ ನೀತಿ, ಈ ಮುಂಚಿನ ಎರಡು ನೀತಿಗಳಿಗಿಂತ ಆಮೂಲಾಗ್ರವಾಗಿ ಭಿನ್ನವಾಗಿದೆ. 1988 ರ ಅರಣ್ಯ ನೀತಿಯಂತೆ ಅರಣ್ಯಗಳನ್ನು ವಾಣಿಜ್ಯೋದ್ಯಮದ

ದೃಷ್ಟಿಯಿಂದ, ಕೈಗಾರಿಕೆಗಳಿಗಾಗಿ ಅತಿಬಳಕೆಗೆ ಒಳಪಡಿಸಬಾರದು. ಅದರ ಬದಲಿಗೆ ನೆಲ ಮತ್ತು ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕು. ಅರಣ್ಯದಿಂದ ಬರುವ ಆದಾಯಕ್ಕಿಂತ ಪಾರಿಸರಿಕ ಸ್ಥಿರತೆಯೇ ಹೆಚ್ಚು ಮುಖ್ಯ. ಏಕ ಪ್ರಭೇದದ ನೆಡುತೋಪಿಗಿಂತ ವೈವಿಧ್ಯವಿರುವ ಮಿಶ್ರ ಪ್ರಭೇದಗಳ ಅರಣ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಅರಣ್ಯಕ್ಕೆ ಸಮೀಪವಾಗಿ ವಾಸಿಸುವ ಸಮುದಾಯಗಳ ಕನಿಷ್ಠ ಅಗತ್ಯಗಳನ್ನು ಪೂರೈಸಿ, ಗುಡ್ಡಗಾಡುಜನ ಹಾಗೂ ಅರಣ್ಯಗಳ ನಡುವಿನ ಸಂಬಂಧವನ್ನು ಉತ್ತಮಪಡಿಸಬೇಕು.

ಅರಣ್ಯಗಳಿಗೆ ಸಂಬಂಧಿಸಿದಂತೆ 'ವ್ಯಾಪಾರ ಮತ್ತು ಬಂಡವಾಳ ಹೂಡಿಕೆಗಳಿಂದ' ದೇಶದ ಗಮನವನ್ನು ಜೀವಿಪರಿಸ್ಥಿತಿ ಸಮತೋಲನ ಮತ್ತು ಸ್ಥಳೀಯ ಸಮುದಾಯಗಳ ಕನಿಷ್ಠ ಅಗತ್ಯಗಳ ಪೂರೈಕೆಯತ್ತ ತಿರುಗಿಸಿದ ಈ ಅರಣ್ಯನೀತಿ, ಅರಣ್ಯಗಳ ರಕ್ಷಣೆ, ಪುನರುಜ್ಜೀವನ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ, ಮಹಿಳೆಯರೂ ಸೇರಿದಂತೆ ಸ್ಥಳೀಯರನ್ನು ಬೃಹತ್ ಪ್ರಮಾಣದಲ್ಲಿ ಸಕ್ರಿಯವಾಗಿ ಬಳಸಿಕೊಳ್ಳ ಬೇಕಾದ ಅಗತ್ಯವನ್ನು ಸೂಚಿಸಿತು. ಅರಣ್ಯಗಳಿಗೆ ಸಂಬಂಧಪಟ್ಟ ಎಲ್ಲ ಕೆಲಸ ಕಾರ್ಯಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವುದರ ಜೊತೆಗೆ, ಅವರ ಹಕ್ಕು, ಸವಲತ್ತುಗಳನ್ನು ಗೌರವಿಸಬೇಕೆಂದು ಸೂಚಿಸಿತು. ಚೌಬೀನೆಯನ್ನು ಹೊರತುಪಡಿಸಿ, ಇತರ ಕಿರು ಅರಣ್ಯ ಉತ್ಪನ್ನಗಳನ್ನು ರಕ್ಷಿಸಿ, ಉತ್ತಮ ಪಡಿಸಿ, ಸ್ಥಳೀಯರ ಸ್ಥಿತಿಗತಿಗಳು ಉತ್ತಮಗೊಳ್ಳುವಂತೆ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು" ಅಭಿಪ್ರಾಯಪಟ್ಟಿತು.

"ಕೈಗಾರಿಕೆಗಳು ತಮಗೆ ಬೇಕಾದ ಕಚ್ಚಾವಸ್ತುಗಳನ್ನು ತಾವೇ ಉತ್ಪಾದಿಸಿಕೊಳ್ಳಬೇಕು. ಈ ಉದ್ದೇಶಕ್ಕಾಗಿ ಅವು ಖಾಸಗೀ ಭೂಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡು ಅವರಿಗೆ ಅಗತ್ಯವಾದ ಹಣಕಾಸು ಮತ್ತು ತಾಂತ್ರಿಕ ನೆರವನ್ನು ಒದಗಿಸಬಹುದು. ಇದರ ಜೊತೆಗೆ ಕೈಗಾರಿಕೆಗಳಿಗೆ ರಿಯಾಯಿತಿ ದರದಲ್ಲಿ ಅರಣ್ಯಗಳಿಂದ ಕಚ್ಚಾಪದಾರ್ಥಗಳ ಸರಬರಾಜು ನಿಲ್ಲಬೇಕು."[12] ಈ ರೀತಿ ನೂರ ಐವತ್ತು ವರ್ಷಗಳ ಇತಿಹಾಸದಲ್ಲಿ ಅರಣ್ಯ ನೀತಿಯಲ್ಲಿನ ಬದಲಾವಣೆಗಳ ಪರಿಣಾಮವಾಗಿ ಅರಣ್ಯ ನಿರ್ವಹಣೆಯಲ್ಲಿನ ಆದ್ಯತೆಗಳೂ ಬದಲಾದವು. (ಕೋಷ್ಟಕ 1)

ಸಹಭಾಗಿತ್ವಕ್ಕೆ ಮಾರ್ಗದರ್ಶಿ ಸೂತ್ರಗಳು

1988 ರ ಅರಣ್ಯ ನೀತಿಯನ್ನು ಅನುಷ್ಠಾನಕ್ಕೆ ತಂದು, ಅರಣ್ಯ ಸಂರಕ್ಷಣೆ, ಅರಣ್ಯಾಭಿವೃದ್ಧಿ ಕಾರ್ಯ ಕ್ರಮಗಳಲ್ಲಿ ಜನಸಾಮಾನ್ಯರ ಭಾಗವಹಿಸುವಿಕೆಗೆ ಅವಕಾಶ ಮಾಡಿಕೊಡುವ ಸುತ್ತೋಲೆಯೊಂದನ್ನು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆ 01-06-1990 ರಲ್ಲಿ ಹೊರಡಿಸಿತು. ಸುತ್ತೋಲೆಯಲ್ಲಿರುವ ಮಾರ್ಗದರ್ಶಿ ಸೂತ್ರಗಳ ಮುಖ್ಯಾಂಶಗಳು ಹೀಗಿವೆ.[13]

- ಗ್ರಾಮ ಸಮುದಾಯ ಮತ್ತು ಅರಣ್ಯ ಇಲಾಖೆಯ ನಡುವೆ ಮಾಡಿಕೊಂಡ ಒಪ್ಪಂದದಡಿಯಲ್ಲಿ ಈ ಕಾರ್ಯಕ್ರಮ ಅನುಷ್ಠಾನಕ್ಕೆ ಬರುತ್ತದೆ.
- ಭೂಮಿಯ ಮಾಲೀಕತ್ವ ಅರಣ್ಯ ಇಲಾಖೆಯಲ್ಲಿಯೇ ಇರುತ್ತದೆ.
- ಅರಣ್ಯ ಬೆಳೆಸುವ ಕಾರ್ಯಕ್ರಮಗಳಿಗೆ ಯೋಜನೆಯನ್ನು ಇಲಾಖೆ ಮತ್ತು ಗ್ರಾಮ ಸಮುದಾಯ ಜೊತೆಯಾಗಿ ಮಾಡಬೇಕು.
- ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಗ್ರಾಮ ಸಮುದಾಯ ಮಾಡಬೇಕು.
- ಅರಣ್ಯ ರಕ್ಷಣೆ ಸ್ಥಳೀಯರ ಜವಾಬ್ದಾರಿ.
- ರಕ್ಷಣೆ ಮತ್ತು ಪುನರುಜ್ಜೀವನ ಚಟುವಟಿಕೆಗಳಿಂದ ದೊರೆತ ಉತ್ಪನ್ನ/ಲಾಭಾಂಶಗಳು ಅರಣ್ಯ ಇಲಾಖೆ ಮತ್ತು ಗ್ರಾಮ ಸಮುದಾಯದ ನಡುವೆ ಹಂಚಿಕೆಯಾಗಬೇಕು. ಇದಕ್ಕೆ ಸೂಕ್ತ ಒಪ್ಪಂದ ಅಗತ್ಯ.
- ಅರಣ್ಯದ ರಕ್ಷಣೆ ಮತ್ತು ಪುನರುಜ್ಜೀವನಕ್ಕಾಗಿ ಸಂಘಟಿತರಾದ ಹಳ್ಳಿಯ ಜನ ಮಾತ್ರ ಅಂತಹ ಅರಣ್ಯಗಳಿಂದ ಉತ್ಪನ್ನಗಳನ್ನು ಪಡೆಯಬಹುದು.
- ಸ್ಥಳೀಯ ಜನರ ಭಾಗವಹಿಸುವಿಕೆಯಿಂದ ದೊರೆಯುವ ಎಲ್ಲ ಪ್ರಯೋಜನಗಳೂ ಸ್ಥಳೀಯ ಸಮುದಾಯಕ್ಕೆ ದೊರೆಯಬೇಕೇ ವಿನಃ ವಾಣಿಜ್ಯ ಉದ್ದೇಶಗಳಿಗೆ ಬಳಕೆಯಾಗಬಾರದು.

ಜಂಟೀ ಅರಣ್ಯ ಯೋಜನೆ

ಅವನತಿ ಹೊಂದಿದ ಅರಣ್ಯಗಳ ಪುನರುಜ್ಜೀವನದ ಕೆಲಸದಲ್ಲಿ ಅರಣ್ಯಕ್ಕೆ ಸಮೀಪವಾಗಿ ವಾಸಿಸುವ ಜನಸಮುದಾಯದ ಸಹಭಾಗಿತ್ವಕ್ಕೆ ಅವಕಾಶವನ್ನು ಕಲ್ಪಿಸುವ ಆದೇಶವನ್ನು ಭಾರತ ಸರ್ಕಾರ 1990 ರ ಜೂನ್ 1 ರಂದು ಹೊರಡಿಸಿದ ನಂತರ ವಿಧ್ಯುಕ್ತವಾಗಿ ಪ್ರಾರಂಭವಾದ ಜಂಟೀ ಅರಣ್ಯ ನಿರ್ವಹಣಾ ಯೋಜನೆ ಇಂದು ನಮ್ಮ ದೇಶದ 27 ರಾಜ್ಯಗಳಲ್ಲಿ ಅನುಷ್ಠಾನಗೊಂಡಿದೆ. ಈ 27 ರಾಜ್ಯಗಳಲ್ಲಿ 63,618 ಗ್ರಾಮ ಅರಣ್ಯ ಸಮಿತಿಗಳು ಒಟ್ಟು 1,40,953.60 ಚ.ಕಿ.ಮೀಗಳಷ್ಟು ಅರಣ್ಯ ಪ್ರದೇಶವನ್ನು ಆಯಾ ರಾಜ್ಯದ ಅರಣ್ಯ ಇಲಾಖೆಯ ಜೊತೆಗೂಡಿ ಸಂರಕ್ಷಿಸಿ, ನಿರ್ವಹಿಸುತ್ತಿದೆ. ಅರುಣಾಚಲ ಪ್ರದೇಶದಲ್ಲಿ 13 ಗ್ರಾಮ ಅರಣ್ಯ ಸಮಿತಿಗಳು 58.10 ಚ.ಕಿಮೀ ಅರಣ್ಯ ಪ್ರದೇಶದ ಸಂರಕ್ಷಣೆ, ನಿರ್ವಹಣೆಯಲ್ಲಿ ತೊಡಗಿದ್ದರೆ ಮತ್ತೊಂದು ತುದಿಯಲ್ಲಿ ಮಧ್ಯಪ್ರದೇಶದಲ್ಲಿ 10,443 ಗ್ರಾಮ ಅರಣ್ಯ ಸಮಿತಿಗಳು 43,000 ಚ.ಕಿಮೀ ಅರಣ್ಯ ಪ್ರದೇಶದ ಜಂಟೀ ಜವಾಬ್ದಾರಿಯನ್ನು ಹೊತ್ತಿವೆ. ಸಿಕ್ಕಿಂ ರಾಜ್ಯದ ಪ್ರತಿಯೊಂದು ಗ್ರಾಮ ಅರಣ್ಯ ಸಮಿತಿಗೂ 0.30 ಚ.ಕಿಮೀ ಅರಣ್ಯ ಪ್ರದೇಶ ವಿದ್ದರೆ, ಮಣಿಪುರದ ಗ್ರಾಮ ಅರಣ್ಯ ಸಮಿತಿಗಳಿಗೆ ಸರಾಸರಿ

62 ಚ.ಕಿ.ಮೀ ಗರಿಷ್ಠ ಪ್ರಮಾಣದ ಅರಣ್ಯ ಪ್ರದೇಶದ ಉಸ್ತುವಾರಿಯಿದೆ. ಭಾರತದ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ 6,33,400 ಚ.ಕಿಮೀ. ಇದರಲ್ಲಿ ಶೇಕಡಾ 40 ಭಾಗ ಅಂದರೆ 2,53,360 ಚ.ಕಿಮೀ ವಿಸ್ತೀರ್ಣದ ಅರಣ್ಯ ಪ್ರದೇಶ ಅವನತಿಗೊಳಗಾಗಿದೆ. ಇದರಲ್ಲಿ 1,40,953.60 ಚ.ಕಿಮೀ ಪ್ರದೇಶ ಈಗ ಜಂಟೀ ನಿರ್ವಹಣೆಗೆ ಒಳಪಟ್ಟಿದೆ. ಅಂದರೆ, ಒಟ್ಟಾರೆಯಾಗಿ ಭಾರತದಾದ್ಯಂತ 63,618 ಗ್ರಾಮೀಣ ಅರಣ್ಯ ಸಮಿತಿಗಳು ಅರಣ್ಯ ಇಲಾಖೆಯ ಜೊತೆಗೂಡಿ ಅವನತಿ ಹೊಂದಿದ ಅರಣ್ಯದ ಒಟ್ಟು ವಿಸ್ತೀರ್ಣದ ಶೇಕಡಾ 55ರಷ್ಟನ್ನು ಪುನರುಜ್ಜೀವನಕ್ಕಾಗಿ ಜಂಟೀ ಅರಣ್ಯ ನಿರ್ವಹಣೆಗೊಳಪಡಿಸಿದೆ ಎಂದಂತಾಯ್ತು. ಅಂಕಿ ಅಂಶಗಳ ದೃಷ್ಟಿಯಿಂದ ಇದು ನಿಜಕ್ಕೂ ಉತ್ತಮ ಸಾಧನೆ (ಕೋಷ್ಟಕ 2)

ಜಂಟೀ ಅರಣ್ಯ ಯೋಜನೆಗೆ ವಿಧ್ಯುಕ್ತ ಸ್ಥಾನಮಾನ ದೊರೆತದ್ದು ಭಾರತ ಸರ್ಕಾರದ 1990ರ ಆದೇಶದಿಂದ ನಿಜ. ಆದರೆ ಇದಕ್ಕೆ ಬಹಳ ಮೊದಲೇ ಅರಣ್ಯಗಳಿಗೆ ಸಮೀಪವಾಗಿ ಬದುಕುತ್ತಿದ್ದ ಜನ ಸಮುದಾಯ ಸ್ವಪ್ರೇರಣೆಯಿಂದ ಅರಣ್ಯಗಳನ್ನು ರಕ್ಷಿಸುತ್ತಿದ್ದ ಅನೇಕ ಉದಾಹರಣೆಗಳು ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ದೊರೆಯುತ್ತವೆ. 'ಬಿಹಾರ್ ರಾಜ್ಯದ ಸಿಂಗಭೂಮ್ ಜಿಲ್ಲೆಯ ಬಿಸ್ರಾಮ್‌ಪುರ ವಲಯದ ಕುಡಾಲದಲ್ಲಿ 1970 ರಷ್ಟು ಹಿಂದೆಯೇ ಎರಡು ಗ್ರಾಮೀಣ ಸಮುದಾಯಗಳು ಸ್ವಪ್ರೇರಣೆಯಿಂದ 1600 ಹೆಕ್ಟೇರುಗಳಷ್ಟು ಅವನತಿ ಹೊಂದಿದ ಅರಣ್ಯ ಪ್ರದೇಶವನ್ನು ಅತ್ಯುತ್ತಮವಾಗಿ ಪುನರುಜ್ಜೀವನಗೊಳಿಸಿದ್ದವು.'[14] 'ಒರಿಸ್ಸಾ, ಪಶ್ಚಿಮ ಬಂಗಾಳ ಹಾಗೂ ಬಿಹಾರಗಳ 10,000ಕ್ಕೂ ಹೆಚ್ಚಿನ ಹಳ್ಳಿಗಳಲ್ಲಿ ಸ್ಥಳೀಯ ಜನ ಸಾಲ್ ಅರಣ್ಯಗಳನ್ನು ಯಾವುದೇ ಹೊರಗಿನ ನೆರವಿಲ್ಲದೆ ಸಂರಕ್ಷಿಸಿ, ಬೆಳೆಸಿದ ಉದಾಹರಣೆಗಳಿವೆ'.[15] ಪಶ್ಚಿಮಬಂಗಾಳದ ಮಿದ್ನಾಪುರ ಜಿಲ್ಲೆಯ ಅರಾಬರಿ ವಲಯದಲ್ಲಿ ಅರಣ್ಯಾಧಿಕಾರಿ ಅಜಿತ್ ಬ್ಯಾನರ್ಜಿ ಸಕ್ರಿಯವಾಗಿ ಸ್ಥಳೀಯ ಸಮುದಾಯವನ್ನು ಬಳಸಿಕೊಂಡು ಅವನತಿ ಹೊಂದಿದ ಅರಣ್ಯ ಪ್ರದೇಶವನ್ನು ಸಂರಕ್ಷಿಸಿ, ಅಭಿವೃದ್ಧಿಗೊಳಿಸಿದರು. ಈ ಕೆಲಸದಲ್ಲಿ ಇಲಾಖೆಯೊಂದಿಗೆ ಜೊತೆಗೂಡಿ ಕೆಲಸ ಮಾಡಿದ ಹಳ್ಳಿಗರಿಗೆ, ಹೆಚ್ಚಿನ ಪ್ರಮಾಣದಲ್ಲಿ ಉರುವಲು, ಮೇವು, ಸಣ್ಣ ಮರಮಟ್ಟು ಹಾಗೂ ಇನ್ನಿತರ ಅರಣ್ಯ ಉತ್ಪನ್ನಗಳು ಪ್ರತಿಫಲವಾಗಿ ದೊರೆತವು. ಇದರೊಂದಿಗೆ ಅಂತಿಮ ಕಟಾವಿನ ಸಮಯದಲ್ಲಿ ದೊರೆಯುವ ಉತ್ಪನ್ನಗಳಲ್ಲಿ ಒಂದು ಭಾಗವನ್ನು ಹಳ್ಳಿಗರಿಗೆ ನೀಡುವ ಯೋಜನೆಗೆ 1989 ರಲ್ಲಿ ಪಶ್ಚಿಮ ಬಂಗಾಲದ ಅರಣ್ಯ ಇಲಾಖೆ ಒಪ್ಪಿಗೆ ನೀಡಿತು. ''ಪಶ್ಚಿಮ ಬಂಗಾಳದ ಅರಾಬರಿಯಲ್ಲಿ ಅರಣ್ಯಾಧಿಕಾರಿ ಅಜಿತ್ ಬ್ಯಾನರ್ಜಿ ಅವರ ನಾಯಕತ್ವದಲ್ಲಿ ಮತ್ತು ಹರ್ಯಾನದ ಸುಖೋಮಾಜ್ರಿಯಲ್ಲಿ ಅರಣ್ಯಾಧಿಕಾರಿ ಪಿ. ಆರ್. ಮಿಶ್ರಾ ಅವರ ನೇತೃತ್ವದಲ್ಲಿ ನಡೆದ ಸ್ಥಳೀಯ ಸಹಭಾಗಿತ್ವದ ಹೊಸ ಪ್ರಯೋಗಗಳೇ ಮುಂದೆ ಜಂಟಿ ಅರಣ್ಯ ಯೋಜನೆಯನ್ನು ರೂಪಿಸುವುದರಲ್ಲಿ ಪ್ರೇರಣೆ ಯಾದವು''.[16]

ಭಾರತದ 27 ರಾಜ್ಯಗಳಲ್ಲಿ ನಡೆಯುತ್ತಿರುವ ಜಂಟೀ ಅರಣ್ಯ ಯೋಜನೆಗಳು ಅನುಷ್ಠಾನಗೊಳ್ಳುತ್ತಿರುವ ರೀತಿಯನ್ನು ಪರಿಶೀಲಿಸಿದಾಗ ಸ್ಥಳೀಯ ಭೂಸನ್ನಿವೇಶಗಳು, ಅರಣ್ಯ ಸಂಪನ್ಮೂಲದ ಲಭ್ಯತೆ, ಸಾಮಾಜಿಕ ಆರ್ಥಿಕ ಸ್ಥಿತಿಗತಿ, ಸಾಂಸ್ಕೃತಿಕ ವೈವಿಧ್ಯ ಮತ್ತು ಅರಣ್ಯಗಳ ಮೇಲಿನ ಒತ್ತಡಗಳಿಗನುಸಾರವಾಗಿ ಅನೇಕ ಬದಲಾವಣೆಗಳನ್ನು ಕಾಣಬಹುದು. ಅರಣ್ಯ ಇಲಾಖೆ ಮತ್ತು ಸ್ಥಳೀಯ ಸಮುದಾಯದ ನಡುವಿನ ಒಪ್ಪಂದದ ವಿವರಗಳು, ಉತ್ಪನ್ನ ಮತ್ತು ಲಾಭಾಂಶದಲ್ಲಿನ ಹಂಚಿಕೆ, ಸಂರಕ್ಷಣೆ, ನಿರ್ವಹಣೆಯ ವಿವಿಧ ವಿಧಾನಗಳು, ರಚನೆಗಳು ಮುಂತಾದವುಗಳಲ್ಲಿ ಈ ವ್ಯತ್ಯಾಸಗಳನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಭಾರತ ಸರ್ಕಾರ 1990 ರಲ್ಲಿ ಹೊರಡಿಸಿದ ಸುತ್ತೋಲೆ ಕೇವಲ ಮಾರ್ಗದರ್ಶಕ ಸೂತ್ರಗಳನ್ನು ಒಳಗೊಂಡಿದ್ದು ನಿಖರ ಆದೇಶಗಳನ್ನು ನೀಡುವ ಜವಾಬ್ದಾರಿಯನ್ನು ಆಯಾ ರಾಜ್ಯ ಸರ್ಕಾರಗಳಿಗೆ ನೀಡಿದ್ದರಿಂದ, ವಿವಿಧ ರಾಜ್ಯಗಳ ನಡುವೆ ಜಂಟೀ ಅರಣ್ಯ ಯೋಜನೆಗಳ ನಡುವಿನ ಈ ವ್ಯತ್ಯಾಸಗಳೂ ಸಹಜವೂ ಹೌದು.

ಕರ್ನಾಟಕದಲ್ಲಿ ಜಂಟೀ ಅರಣ್ಯ ಯೋಜನೆ

ಕರ್ನಾಟಕದಲ್ಲಿ 1.4.92 ರಿಂದ 31.3.2000ದ ವರೆಗಿನ ಅವಧಿಯಲ್ಲಿ 'ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ' (ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಫಾರ್ ವೆಸ್ಟರ್ನ್ ಘಾಟ್ಸ್) ಕಾರ್ಯಗತವಾಯಿತು. ಈ ಯೋಜನೆಗೆ ಹಣ ಬಂದದ್ದು ಬ್ರಿಟನ್ನಿನ ಅಂತಾರಾಷ್ಟ್ರೀಯ ಅಭಿವೃದ್ಧಿ ಇಲಾಖೆಯಿಂದ (ಡಿಪಾರ್ಟ್‌ಮೆಂಟ್ ಫಾರ್ ಇಂಟರ್‌ನ್ಯಾಷನಲ್ ಡಿವೆಲಪ್‌ಮೆಂಟ್. ಡಿಎಫ್‌ಐಡಿ). ಈ ಯೋಜನೆಯನ್ನು "ಜಂಟೀ ಅರಣ್ಯ ಯೋಜನೆ" ಪರಿಕಲ್ಪನೆಯ ಮೂಲಕವಾಗಿ ಅನುಷ್ಠಾನಗೊಳಿಸಬೇಕೆಂಬ ನಿರ್ಧಾರ ಕೈಗೊಂಡಿದ್ದರಿಂದ, ಅದಕ್ಕೆ ಅನುಗುಣವಾಗಿ 12 - 4 - 1993 ರಂದು ಕರ್ನಾಟಕ ಸರ್ಕಾರ ಆದೇಶವನ್ನು ಹೊರಡಿಸಿತು. (ಕೋಷ್ಟಕ 3) ಈ ಆದೇಶವನ್ನು ಜಾರಿಗೆ ತಂದ ನಂತರ, ಗ್ರಾಮೀಣ ಅರಣ್ಯ ಸಮಿತಿಗಳ ಕಾರ್ಯಾಚರಣೆಯ ಅವಲೋಕನದ ಸಂದರ್ಭದಲ್ಲಿ, ಈ ಸರ್ಕಾರೀ ಆದೇಶಕ್ಕೆ ಸೂಕ್ತ ತಿದ್ದುಪಡಿ ತರುವುದು ಅಗತ್ಯವೆನಿಸಿ 16-12-1996 ರಲ್ಲಿ ಅಂತಹ ತಿದ್ದುಪಡಿಗಳನ್ನು ತರಲಾಯಿತು. ಇದರ ಅನ್ವಯ ಕುಟುಂಬದ ಪ್ರತಿನಿಧಿಯಾಗಿ ಗ್ರಾಮೀಣ ಅರಣ್ಯ ಸಮಿತಿಯ ಸದಸ್ಯನ (ಳ) ಪತ್ನಿ (ತಿ) ಗೆ ಸಹಸದಸ್ಯತ್ವ ದೊರೆಯಿತು. ಜಂಟೀ ಅರಣ್ಯ ಯೋಜನೆಯ ಅನುಷ್ಠಾನಕ್ಕೆ ಪ್ರದೇಶವನ್ನು ಆಯ್ಕೆ ಮಾಡುವಾಗ ಶೇಕಡಾ 0.25ರಷ್ಟು ವೃಕ್ಷ ದಟ್ಟಣೆಯಿರಬೇಕೆಂಬ ಷರತ್ತನ್ನು ಬುಡಕಟ್ಟು ಜನರೇ ಪ್ರಮುಖರಾಗಿರುವ ಪ್ರಕರಣಗಳಲ್ಲಿ ಕೈಬಿಡಲಾಯಿತು. ಜಂಟೀ ಅರಣ್ಯ ನಿರ್ವಹಣಾ ಯೋಜನೆಗೆ ಶಾಸನಬದ್ಧ ಸ್ಥಾನಮಾನ ನೀಡುವ ಉದ್ದೇಶದಿಂದ, ಕರ್ನಾಟಕ ಅರಣ್ಯ ಅಧಿನಿಯಮಕ್ಕೆ ತಿದ್ದುಪಡಿ ತಂದು ಕರ್ನಾಟಕ ಅರಣ್ಯ ಅಧಿನಿಯಮದಲ್ಲಿ ಜಂಟೀ ಅರಣ್ಯ ನಿರ್ವಹಣಾ ಯೋಜನೆಯ ಪರಿಕಲ್ಪನೆ ಹಾಗೂ ಗ್ರಾಮ ಅರಣ್ಯ ಸಮಿತಿಗಳ ಸ್ಥಾಪನೆಯನ್ನು ಸೇರಿಸಲಾಯಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ 'ಪಶ್ಚಿಮ ಘಟ್ಟ ಅರಣ್ಯ

ಮತ್ತು ಪರಿಸರ ಯೋಜನೆ'ಯನ್ನು ಜಾರಿಗೆ ತರುವ ಸಮಯದಲ್ಲೇ ಅರಣ್ಯ ಇಲಾಖೆಯ ಸಿಬ್ಬಂದಿಗೆ ಅಗತ್ಯವಾದ ಸಾಮಾಜಿಕ ಕೌಶಲಗಳು ಹಾಗೂ ಮನೋಭಾವದಲ್ಲಿನ ಬದಲಾವಣೆಗಳನ್ನು ತರಲು 'ಮೈರಾಡಾ' ಸಂಸ್ಥೆಯ ಮೂಲಕ ತರಬೇತಿ ಶಿಬಿರ, ಕಾರ್ಯಾಗಾರಗಳನ್ನು ಏರ್ಪಡಿಸಲಾಯಿತು. ಗ್ರಾಮ ಅರಣ್ಯ ಸಮಿತಿಗಳಿಗೆ ಅಗತ್ಯವಾದ ಮಾದರಿ ಉಪವಿಧಿಗಳು ಹಾಗೂ ಸೌಹಾರ್ದ ಒಡಂಬಡಿಕೆಯಲ್ಲಿ ಅಳವಡಿಸಿಕೊಳ್ಳಬೇಕಾದ ಕಿರುಯೋಜನೆಗಳ ಮಾದರಿಗಳನ್ನೂ ಅಭಿವೃದ್ಧಿಪಡಿಸಲಾಯಿತು.

"ಜಂಟೀ ಅರಣ್ಯ ನಿರ್ವಹಣಾ ಯೋಜನೆಯಡಿಯಲ್ಲಿ ಕರ್ನಾಟಕದಲ್ಲಿ ಮೊಟ್ಟಮೊದಲ ಗ್ರಾಮ ಅರಣ್ಯ ಸಮಿತಿ 1993 ರ ಸೆಪ್ಟೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂದರೆ, ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವಿನ ಮೊಟ್ಟ ಮೊದಲ ಸೌಹಾರ್ದ ಒಡಂಬಡಿಕೆ ಸಹಿಯಾದದ್ದು ಜನವರಿ 12, 1995 ರಂದು."[17] ಉತ್ತರ ಕನ್ನಡದಲ್ಲಿ ಪಡೆದ ಅನುಭವದಿಂದ, ಅರಣ್ಯ ಇಲಾಖೆ, ಜಂಟೀ ಅರಣ್ಯ ಯೋಜನೆಯನ್ನು ಪಶ್ಚಿಮ ಘಟ್ಟ ಯೋಜನೆಯಡಿಯಲ್ಲಿ ಶಿವಮೊಗ್ಗ ವೃತ್ತಕ್ಕೆ ವಿಸ್ತರಿಸಿತು. ಉತ್ತರ ಕನ್ನಡ ಮತ್ತು ಶಿವಮೊಗ್ಗ ವೃತ್ತಗಳು ಸೇರಿದಂತೆ, ಪಶ್ಚಿಮಘಟ್ಟ ಪರಿಸರ ಮತ್ತು ಅರಣ್ಯ ಯೋಜನೆಯಡಿಯಲ್ಲಿ 2000 ದ ವೇಳೆಗೆ 485 ಗ್ರಾಮ ಅರಣ್ಯ ಸಮಿತಿಗಳು ಅಸ್ತಿತ್ವದಲ್ಲಿದ್ದು, 375 ಸೌಹಾರ್ದ ಒಡಂಬಡಿಕೆಗಳು ಸಹಿಯಾಗಿ, 419 ಕಿರು ಯೋಜನೆಗಳು ತಯಾರಾಗಿದ್ದವು. 1996 ರಿಂದ 2001 ರ ವರಗೆ ಜಪಾನ್ ದೇಶದ ನೆರವಿನಿಂದ ನಡೆದ 'ಪೂರ್ವ ಮೈದಾನ ಅರಣ್ಯ ಮತ್ತು ಪರಿಸರ ಯೋಜನೆ'ಯಲ್ಲೂ (ಫಾರೆಸ್ಟ್ರೀ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಫಾರ್ ಈಸ್ಟರ್ನ್ ಪ್ಲೇನ್ಸ್), ಜಂಟೀ ಅರಣ್ಯ ಯೋಜನೆಯ ಪರಿಕಲ್ಪನೆಗೇ ಒತ್ತು ನೀಡಿ, ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ, ಸಹಭಾಗಿತ್ವ ತತ್ವಗಳನ್ನು ಅಳವಡಿಸಿಕೊಂಡು ಕೆಲಸ ಮಾಡಲಾಯಿತು. 1996-2000 ವರೆಗೂ, ಅಂದರೆ ಯೋಜನೆಯ ಮೊದಲ ನಾಲ್ಕುವರ್ಷಗಳಲ್ಲಿ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸುವ, ಕಿರು ಯೋಜನೆಗಳನ್ನು ಸಿದ್ಧಪಡಿಸುವ ಹಾಗೂ ಸೌಹಾರ್ದ ಒಡಂಬಡಿಕೆಗೆ ಸಹಿ ಹಾಕುವ ಕೆಲಸಗಳು ಬಹಳ ನಿಧಾನಗತಿಯಲ್ಲಿ ಸಾಗಿದವು. "2570 ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸುವ ಗುರಿಯಲ್ಲಿ 1278 ಮಾತ್ರ ಸಾಧ್ಯವಾಯಿತು. 240 ಕಿರುಯೋಜನೆಗಳು ಸಿದ್ಧವಾದವು, ಆದರೆ ಒಂದೇ ಒಂದು ಸೌಹಾರ್ದ ಒಡಂಬಡಿಕೆಗೂ ಸಹಿಯಾಗಲಿಲ್ಲ. ಆದರೆ 2000-2001 ರಲ್ಲಿ ಸರ್ಕಾರೇತರ ಸಂಘಟನೆಗಳ ನೆರವಿನಿಂದ ಜನಸಾಮಾನ್ಯರಲ್ಲಿ ಅರಿವು ಮೂಡಿಸಿ, ಕ್ಷೇತ್ರ ತರಬೇತಿ ಶಿಬಿರಗಳನ್ನು ಏರ್ಪಡಿಸಿದ್ದರಿಂದ ಒಂದೇ ವರ್ಷದ ಅವಧಿಯಲ್ಲಿ 840 ಹೊಸ ಗ್ರಾಮ ಅರಣ್ಯ ಸಮಿತಿಗಳು ಅಸ್ತಿತ್ವಕ್ಕೆ ಬಂದು, 569 ಕಿರು ಯೋಜನೆಗಳು ಸಿದ್ಧವಾಗಿ 449 ಸೌಹಾರ್ದ ಒಡಂಬಡಿಕೆಗಳಿಗೆ ಸಹಿಹಾಕಲಾಯಿತು."[18]

1988 ರ ಅರಣ್ಯ ನೀತಿಯಿಂದ ಪ್ರೇರಿತವಾದ ಜಂಟೀ ಅರಣ್ಯ ಯೋಜನೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ನೀಡಿರುವ ಮಾರ್ಗದರ್ಶಿ ಸೂತ್ರಗಳು ಹಾಗೂ 1993 ರಲ್ಲಿ ಕರ್ನಾಟಕ ಸರ್ಕಾರ

ಹೊರಡಿಸಿದ ಆದೇಶಗಳನ್ನು ಅವಲೋಕಿಸಿದಾಗ, ಅರಣ್ಯ ನಿರ್ವಹಣೆ ಮತ್ತು ಪುನರುಜ್ಜೀವನಗಳಿಗೆ ಸಂಬಂಧಿಸಿದಂತೆ ಈ ಹಿಂದಿನ ಅರಣ್ಯ ನೀತಿಗಳಿಗೂ, 1988 ರ ಅರಣ್ಯ ನೀತಿ ಮತ್ತು ಜಂಟೀ ಅರಣ್ಯ ಯೋಜನೆಗಳಿಗೂ ನಡುವೆ ಇರುವ ಮೂಲಭೂತವಾದ ವ್ಯತ್ಯಾಸಗಳು ಸ್ಪಷ್ಟವಾಗಿ ಗೋಚರಿಸುತ್ತವೆ (ಕೋಷ್ಟಕ 4)

ಅಧ್ಯಯನಗಳ ಸಮೀಕ್ಷೆ

ನಮ್ಮ ದೇಶದಲ್ಲಿ ಜಂಟೀ ಅರಣ್ಯಯೋಜನೆ ಅನುಷ್ಠಾನಕ್ಕೆ ಬಂದು ಹತ್ತು-ಹನ್ನೆರಡು ವರ್ಷಗಳಾಗಿವೆ. ಈ ಅವಧಿಯಲ್ಲಿ ಜಂಟೀ ಅರಣ್ಯ ಯೋಜನೆಯಲ್ಲಿನ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಅನೇಕ ಅಧ್ಯಯನಗಳು ನಡೆದಿವೆ. ಸೊಸೈಟಿ ಫಾರ್ ಪ್ರಮೋಶನ್ ಆಫ್ ವೇಸ್ಟ್ ಲ್ಯಾಂಡ್ ಡೆವಲಪ್‌ಮೆಂಟ್, ಬ್ರಿಟನ್ನಿ ಅಂತಾರಾಷ್ಟ್ರೀಯ ಅಭಿವೃದ್ಧಿ ಇಲಾಖೆ, ಫೋರ್ಡ್ ಪ್ರತಿಷ್ಠಾನ, ಟಾಟಾ ಎನರ್ಜಿ ರಿಸರ್ಚ ಇನ್ಸ್ಟಿಟ್ಯೂಟ್, ಭಾರತೀಯ ವಿಜ್ಞಾನ ಸಂಸ್ಥೆ, ಇನ್ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಇಕನಾಮಿಕ್ ಚೇಂಜ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳೇ ಅಲ್ಲದೆ, ವಿಕ್ರಮ್ ಸಾರಾಭಾಯ್ ಸೆಂಟರ್ ಫಾರ್ ಡೆವಲಪ್‌ಮೆಂಟ್ ಇಂಟರ್ಯಾಕ್ಷನ್, ಆಗಾಖಾನ್ ರೂರಲ್ ಸಪೋರ್ಟ್ ಪ್ರೋಗ್ರಾಮ್, ಫೆವಾರ್ಡ್-ಕೆ, ನ್ಯಾಷನಲ್ ಟ್ರೀಗ್ರೋಯರ್ಸ್ ಕೋ - ಆಪರೇಟಿವ್ ಮುಂತಾದ ಸರ್ಕಾರೇತರ ಸಂಸ್ಥೆಗಳು ಪ್ರತ್ಯೇಕವಾಗಿ ಅಧ್ಯಯನಗಳನ್ನು ನಡೆಸಿವೆ. ಇವುಗಳ ಜೊತೆಗೆ ಸಮಾಜ ವಿಜ್ಞಾನಿಗಳು, ಅಭಿವೃದ್ಧಿ ಪರಿಣಿತರು, ಇಲಾಖೆಯ ಅಧಿಕಾರಿಗಳು, ವಿಷಯಾಸಕ್ತರು ಸ್ವತಂತ್ರವಾಗಿ ಸಂಶೋಧನೆಗಳನ್ನು ನಡೆಸಿದ್ದಾರೆ. ಕೆಲವು ಸಂಶೋಧನೆಗಳು ಇಡೀ ದೇಶದಲ್ಲಿನ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ವಿಮರ್ಶಾತ್ಮಕ ವರದಿ ನೀಡಿದರೆ, ಅನೇಕ ಅಧ್ಯಯನಗಳು ತಮ್ಮ ದೃಷ್ಟಿಯನ್ನು ಆಯ್ದ ಕೆಲವು ಪ್ರದೇಶಗಳಿಗೆ, ಹಳ್ಳಿಗಳಿಗೆ ಸೀಮಿತಗೊಳಿಸಿ ಕೊಂಡು, ಅಲ್ಲಿಗೆ ಸಂಬಂಧಿಸಿದಂತೆ ಜಂಟೀ ಅರಣ್ಯ ಯೋಜನೆಯ ತತ್ವ ಆಚರಣೆಗಳ ಬಗ್ಗೆ ಬೆಳಕು ಚೆಲ್ಲಿವೆ.

ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯದ ಕೋರಿಕೆಯ ಮೇರೆಗೆ, ಟಾಟಾ ಎನರ್ಜಿ ರಿಸರ್ಚ ಇನ್ಸ್ಟಿಟ್ಯೂಟ್ ಕೈಗೊಂಡ ಅಧ್ಯಯನ ಜಂಟೀ ಅರಣ್ಯ ಯೋಜನೆಗೆ ಸಂಬಂಧಪಟ್ಟಂತೆ ನಡೆದಿರುವ ನಮ್ಮ ದೇಶದ ವ್ಯಾಪಕ ಪೂರ್ಣ ಶೋಧನೆಗಳಲ್ಲೊಂದು. ದೇಶದ ವಿವಿಧ ಭಾಗಗಳಲ್ಲಿ ಆಚರಣೆಯಲ್ಲಿದ್ದ ಜಂಟೀ ಅರಣ್ಯ ಯೋಜನೆಯ ಸಾಂಸ್ಥಿಕ ವ್ಯವಸ್ಥೆಗಳನ್ನು (ಗ್ರಾಮ ಅರಣ್ಯ ಸಮಿತಿಗಳ ರಚನೆ, ಕಾರ್ಯನಿರ್ವಹಣೆಗಳಿಗೆ ಸಂಬಂಧಿಸಿದ ನೀತಿ, ನಿಯಮಗಳು, ಪಾಲುದಾರರ ನಡುವಿನ ವ್ಯವಹಾರಗಳನ್ನು ನಿಯಂತ್ರಿಸುವ ನಿಯಮಗಳು, ಅರಣ್ಯದ ಪುನರುಜ್ಜೀವನ, ನಿರ್ವಹಣೆ ಮುಂತಾದವುಗಳಿಗೆ ಸಂಬಂಧಿಸಿದ ಒಡಂಬಡಿಕೆಗಳು ಇತ್ಯಾದಿ) ವಿಷದವಾಗಿ ಪರಿಶೀಲಿಸಿ ಜನರ ಸಹಭಾಗಿತ್ವದಿಂದ, ಅವನತಿ ಹೊಂದಿದ ಅರಣ್ಯ ಭೂಮಿಯ ಉತ್ಪಾದಕತೆಯನ್ನು ಹೆಚ್ಚಿಸಲು

ಬಳಕೆಯಾಗುತ್ತಿರುವ ಅರಣ್ಯ ಕೃಷಿ ಪದ್ಧತಿಗಳು ಹಾಗೂ ತಂತ್ರಜ್ಞಾನಗಳ ಸಮೀಕ್ಷೆ ನಡೆಸುವುದು ಈ ರಾಷ್ಟ್ರೀಯ ಅಧ್ಯಯನದ ಉದ್ದೇಶವಾಗಿತ್ತು ಆಂಧ್ರಪ್ರದೇಶ, ಒರಿಸ್ಸಾ, ಮಿಜೋರಾಂ, ಹಾಗೂ ಮಧ್ಯ ಪ್ರದೇಶಗಳಲ್ಲಿ ವಿಸ್ತೃತವಾದ ಸಂಶೋಧನೆಯನ್ನು ಕೈಗೊಂಡ ಟಾಟಾ ಸಂಸ್ಥೆ, ಉಳಿದ ರಾಜ್ಯಗಳಿಂದ ಸಂಪೂರ್ಣ ಮಾಹಿತಿಯನ್ನು ಪಡೆದು ವಿಶ್ಲೇಷಿಸಿತು. ಸಾಂಸ್ಥಿಕ ಸಮಸ್ಯೆಗಳು, ಉತ್ಪನ್ನಗಳ ಹಂಚಿಕೆ, ಉತ್ಪಾದಕತೆ ಹಾಗೂ ಅರಣ್ಯ ಕೃಷಿ ಪದ್ಧತಿಗಳು ಎಂಬ ನಾಲ್ಕು ಶೀರ್ಷಿಕೆಗಳಡಿಯಲ್ಲಿ ಸಂಶೋಧನೆ ನಡೆಸಿದ ಟಾಟಾ ಸಂಸ್ಥೆ, ಜಂಟೀ ಅರಣ್ಯ ಯೋಜನೆ ಸ್ಥಿತಿಗತಿಗಳ ಬಗ್ಗೆ ವಿಷದ ವರದಿ ನೀಡಿತು. "ಗ್ರಾಮ ಅರಣ್ಯ ಸಮಿತಿಗಳಿಗೆ ವಿವಿಧ ರಾಜ್ಯಗಳಲ್ಲಿ ವಿವಿಧ ಸ್ಥಾನಗಳಿದ್ದರೂ - ಹರ್ಯಾನದಲ್ಲಿ ಸಂಘಗಳು, ಗುಜರಾತಿನಲ್ಲಿ ಸಹಕಾರ ಸಂಘಗಳು, ಅನೇಕ ರಾಜ್ಯಗಳಲ್ಲಿ ಅರಣ್ಯ ಇಲಾಖೆಯಲ್ಲಿ ನೋಂದಣಿಯಾಗಿರುವ ಸಮಿತಿಗಳು ಒಟ್ಟಾರೆಯಾಗಿ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ಸಮಾನತೆಯನ್ನಾಧರಿಸಿದ ಸಂಬಂಧವಿಲ್ಲವೆನ್ನುವುದನ್ನು ಅಧ್ಯಯನ ಎತ್ತಿತೋರಿತು. ಗ್ರಾಮ ಅರಣ್ಯ ಸಮಿತಿಗಳ ಸಮಸ್ಯೆಗಳು ಹಾಗೂ ಆಶೋತ್ತರಗಳಿಗೆ ಅರಣ್ಯ ಇಲಾಖೆ ಸಕ್ರಿಯವಾಗಿ ಸ್ಪಂದಿಸಬೇಕಾದ ಅಗತ್ಯವನ್ನು ಸ್ಪಷ್ಟವಾಗಿ ಸಾರಿತು."[19] ವಿವಿಧ ರಾಜ್ಯಗಳಲ್ಲಿ ವಿವಿಧ ಪ್ರಮಾಣದಲ್ಲಿರುವ 'ಉತ್ಪನ್ನಗಳ ಹಂಚಿಕೆಯ ವ್ಯವಸ್ಥೆ'ಯನ್ನು ದಾಖಲಿಸಿದ ವರದಿ ಲಘು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಹಾಗೂ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಜಾರಿಯಾಗಿರುವ ಜೀವಿಜನ್ಯ ಒತ್ತಡಗಳ ನಿಯಂತ್ರಣಾ ಕ್ರಮಗಳ ಫಲವಾಗಿ ಅಧ್ಯಯನಕ್ಕೆ ಒಳಗಾದ ಶೇಕಡಾ 40 ರಷ್ಟು ಪ್ರದೇಶದಲ್ಲಿ ಅರಣ್ಯದ ಪುನರುಜ್ಜೀವನ ಸಾಧ್ಯವಾಗಿದೆಯೆಂದು ಅಧ್ಯಯನ ತಿಳಿಸುತ್ತದೆ. ಅವನತಿ ಹೊಂದಿದ ಅರಣ್ಯಗಳ ಉತ್ಪಾದಕತೆಯನ್ನು ಹೆಚ್ಚಿಸಲು ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಬಳಕೆಗೆ ಬಂದಿರುವ ವಿವಿಧ ಅರಣ್ಯ ಕೃಷಿ ಪದ್ಧತಿಗಳನ್ನು ಈ ಅಧ್ಯಯನದಲ್ಲಿ ದಾಖಲಿಸಲಾಗಿದೆ.

70 ರ ದಶಕದ ಮಧ್ಯಭಾಗದವರೆಗೂ ನಮ್ಮ ಅಭಿವೃದ್ಧಿಯೋಜನೆಗಳಿಗೆ ಅಗತ್ಯವಾದ ಬಂಡವಾಳವನ್ನು ದೇಶದೊಳಗಿನಿಂದಲೇ ಒದಗಿಸಲಾಗುತ್ತಿತ್ತು. 75ರ ನಂತರ ಕಂಡುಬಂದ ತೀವ್ರ ಸ್ವರೂಪದ ಉರುವಲಿನ ಸಮಸ್ಯೆ ಹಾಗೂ ಅರಣ್ಯ ನಾಶಗಳು ಜಾಗತಿಕ ಗಮನವನ್ನು ಸೆಳೆದಿದ್ದರಿಂದ, ಈ ಸಮಸ್ಯೆಗಳ ಪರಿಹಾರಕ್ಕೆ ದೇಶದ ಹೊರಗಿನಿಂದ ಧನಸಹಾಯ ಬರಲು ಪ್ರಾರಂಭವಾಯಿತು. ಅರಣ್ಯಾಭಿವೃದ್ಧಿ, ಭಾರತದಲ್ಲಿ ವಿದೇಶಿ ಬಂಡವಾಳವನ್ನು ಆಕರ್ಷಿಸಿದ ಮೊದಲ ಕ್ಷೇತ್ರ. 1992 ರ ನಂತರ ವಿದೇಶಿ ಬಂಡವಾಳದ ನೆರವಿನಿಂದ ಹತ್ತು ಮಹತ್ವದ ಅರಣ್ಯ ಸಂಬಂಧೀ ಯೋಜನೆಗಳು ಕಾರ್ಯಗತಗೊಂಡಿವೆ. ಈ ಎಲ್ಲ ಯೋಜನೆಗಳಲ್ಲೂ ಸಹಭಾಗಿತ್ವದ ಅಂಶಗಳಿರುವುದು ಗಮನಿಸಬೇಕಾದ ವಿಷಯ. (ಕೋಷ್ಟಕ 5) ಈ ರೀತಿ ಬಂಡವಾಳ ಒದಗಿಸಿದ ವಿದೇಶಿ ಸಂಸ್ಥೆಗಳು ನಿಗದಿತ ಕಾಲಾವಧಿಯಲ್ಲಿ ಇಡೀ ಯೋಜನೆಯ ಸಮೀಕ್ಷೆ ನಡೆಸುವುದುಂಟು. ಕರ್ನಾಟಕದಲ್ಲಿನ

'ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ'ಯ ಸಂದರ್ಭದಲ್ಲಿ, ಜಂಟೀ ಅರಣ್ಯ ಯೋಜನೆಯ ಬಗ್ಗೆ ನಡೆದ ಸ್ವತಂತ್ರವಾದ ಅಧ್ಯಯನ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಿದೆ. ಯೋಜನಾ ಆಯೋಗದ ಕಾರ್ಯದರ್ಶಿ ಎನ್. ಸಿ. ಸಕ್ಸೇನಾ ಹಾಗೂ ಸೊಸೈಟಿ ಫಾರ್ ಪ್ರಮೋಶನ್ ಆಫ್ ವೇಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್ ಸಂಸ್ಥೆಯ ಮಧುಸರೀನ್ ಅವರ ನೇತೃತ್ವದಲ್ಲಿ ಉತ್ತರ ಕನ್ನಡದ 21 ಗ್ರಾಮ ಅರಣ್ಯ ಸಮಿತಿಗಳನ್ನೊಳಗೊಂಡಂತೆ ನಡೆದ ಅಧ್ಯಯನ ಅನೇಕ ಪ್ರಶ್ನೆಗಳನ್ನೆತ್ತಿವೆ. "ಜಂಟೀ ಅರಣ್ಯ ಯೋಜನೆಯ ಗಮನ ಸಂಪೂರ್ಣವಾಗಿ 'ಅವನತಿ ಹೊಂದಿದ ಅರಣ್ಯ ಪ್ರದೇಶ'ದ ಮೇಲೆ ಕೇಂದ್ರೀಕೃತವಾಗಿರುವುದನ್ನು ಒಪ್ಪದ ಈ ಅಧ್ಯಯನ, ಯೋಜನೆಯ ಗಮನ ಉತ್ತಮ ಅರಣ್ಯಗಳಿರುವ ಪ್ರದೇಶಗಳಿಗೂ ವಿಸ್ತರಿಸಬಾರದೇಕೆ ಎಂದು ಪ್ರಶ್ನಿಸುತ್ತದೆ. ನೆಡುತೋಪುಗಳು ಸ್ಥಳೀಯ ಸಮುದಾಯದ ವಿವಿಧ ಅಗತ್ಯಗಳನ್ನು ಪೂರೈಸುವುದಿಲ್ಲ. ಹೀಗಾಗಿ ಜಂಟೀ ಅರಣ್ಯ ಯೋಜನೆಯ ಗಮನ ನೆಡುತೋಪಿನಿಂದ ನೈಸರ್ಗಿಕ ಅರಣ್ಯಗಳ ಪುನರುಜ್ಜೀವನದತ್ತ ಹರಿಯಬೇಕು. ಚೌಬೀನೆಯನ್ನು ಬಿಟ್ಟು ಉಳಿದ ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಮಾರಾಟಗಳಲ್ಲಿ ಗ್ರಾಮ ಅರಣ್ಯ ಸಮಿತಿಗೆ ಹೆಚ್ಚಿನ ಪಾತ್ರ ನೀಡಬೇಕು. ಗುತ್ತಿಗೆದಾರರನ್ನು ಪ್ರಯತ್ನಪೂರ್ವಕವಾಗಿ ದೂರವಿಡಬೇಕು. ಗ್ರಾಮ ಅರಣ್ಯ ಸಮಿತಿಗಳು ಉತ್ತಮವಾಗಿ ಕೆಲಸ ಮಾಡಬೇಕಾದರೆ ಸಾಂಸ್ಥಿಕ ಏರ್ಪಾಟುಗಳು ಸುಭದ್ರವಾಗಿರಬೇಕು. ಈ ಸಾಂಸ್ಥಿಕ ಏರ್ಪಾಟುಗಳು ಅರಣ್ಯ ಇಲಾಖೆಯ ನಿರ್ದೇಶನಗಳಿಗಿಂತ ಹೆಚ್ಚಾಗಿ ಸ್ಥಳೀಯ ಅಗತ್ಯಗಳಿಗನುಸಾರವಾಗಿ ವಿಕಾಸಗೊಳ್ಳಬೇಕು. ಹಾಗಾದಲ್ಲಿ ಮಾತ್ರ ಮಹಿಳೆಯರು, ದುರ್ಬಲ ವರ್ಗದವರು, ಭೂರಹಿತರು ಹಾಗೂ ಅತಿ ಸಣ್ಣ ರೈತರು ಜಂಟೀ ಅರಣ್ಯ ಯೋಜನೆಯಲ್ಲಿ ಭಾಗವಹಿಸಬಹುದು. ನಿರ್ವಹಣಾ ಸಮಿತಿಗಳಲ್ಲಿ ಸ್ಥಳೀಯ ಪ್ರತಿಷ್ಠಿತರಿಗೆ ನೀಡಿರುವ ಅತಿಹೆಚ್ಚಿನ ಪ್ರಾತಿನಿಧ್ಯವನ್ನು ಕಡಿಮೆಮಾಡಿ, ಅರಣ್ಯದ ಮೇಲೆ ನೇರವಾಗಿ ಅವಲಂಬಿತವಾಗಿರುವ ಬಡಮಹಿಳೆಯರು ಹಾಗೂ ಪುರುಷರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು. ಸಧ್ಯದಲ್ಲಿ ಸಾಮಾನ್ಯವಾಗಿ ಅರಣ್ಯ ಸಮಿತಿಗಳಿಂದ ಹೊರಗುಳಿದಿರುವ ದುರ್ಬಲವರ್ಗದವರು ಮತ್ತು ಭೂರಹಿತರನ್ನು ಪ್ರಯತ್ನಪೂರ್ವಕವಾಗಿ ಅರಣ್ಯ ಸಮಿತಿಗಳಲ್ಲಿ ಸೇರಿಸಿಕೊಂಡು ಅವರ ಅಗತ್ಯಗಳಿಗೆ ಗಮನ ನೀಡಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯ ಸಮಿತಿಗಳ ನಡುವಿನ ಸಂಬಂಧ ಸಮಾನತೆಯ ತತ್ವಗಳಿಗನುಸಾರವಾಗಿರಬೇಕು."[20]

ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ನಡೆದಿರುವ ಮತ್ತೊಂದು ಸಂಘಟಿತ ಸಂಶೋಧನೆಯೆಂದರೆ "ದಿ ನ್ಯಾಷನಲ್ ಸಪೋರ್ಟ್ ಗ್ರೂಪ್ ಆನ್ ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್"ಗೆ ಸೇರಿದ 'ಇಕಾಲಜಿ ಅಂಡ್ ಇಕನಾಮಿಕ್ ರಿಸರ್ಚ್ ನೆಟ್ ವರ್ಕ್' ಭಾರತದ ಎಂಟು ರಾಜ್ಯಗಳಲ್ಲಿ ಕೈಗೊಂಡ ವ್ಯಾಪಕವಾದ ಅಧ್ಯಯನ. ದೇಶದ ವಿವಿಧ ಭಾಗಗಳಲ್ಲಿ ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಬಳಕೆಯಲ್ಲಿರುವ ಅರಣ್ಯ ನಿರ್ವಹಣಾ ವ್ಯವಸ್ಥೆಗಳು, ಈ ವ್ಯವಸ್ಥೆಗಳ ಜೀವಿ ಪರಿಸ್ಥಿತಿ, ಆರ್ಥಿಕ ಹಾಗೂ ಸಾಂಸ್ಥಿಕ ಮೌಲ್ಯ ಮಾಪನಗಳು, ಅರಣ್ಯ ಭೂಮಿಯ

ಉತ್ಪಾದಕತೆ ಹಾಗೂ ಜೀವದ್ರವ್ಯಗಳ ಉತ್ಪಾದನೆ, ಚೌಬೀನೆಯನ್ನು ಹೊರತುಪಡಿಸಿದಂತೆ ಉಳಿದ ಅರಣ್ಯ ಉತ್ಪನ್ನಗಳಿಂದ ದೊರೆಯುವ ಅಂದಾಜು – ಈ ಜಾಲದ ಮುಖ್ಯ ಉದ್ದೇಶಗಳು. ಈ ಜಾಲ ನಡೆಸಿದ ವ್ಯಾಪಕ ಅಧ್ಯಯನದ ಒಂದು ಮುಖ್ಯ ಶಿಫಾರಸೆಂದರೆ ಅವನತಿ ಹೊಂದಿದ ಅರಣ್ಯ ಭೂಮಿಯಲ್ಲಿ ಮರಗಿಡಗಳನ್ನು ಬೆಳೆಸುವ ಪ್ರಯತ್ನಕ್ಕಿಂತ, ಅರಣ್ಯ ಭೂಮಿಯನ್ನು ರಕ್ಷಿಸಿ, ನೈಸರ್ಗಿಕ ಪುನರುಜ್ಜೀವನಕ್ಕೆ ಅವಕಾಶ ಮಾಡಿಕೊಡುವುದು ಆರ್ಥಿಕವಾಗಿ ಲಾಭದಾಯಕ ಹಾಗೂ ಸ್ಥಳೀಯ ಸಮುದಾಯಕ್ಕೆ ಹೆಚ್ಚು ಉಪಯುಕ್ತ. ಜಂಟೀ ಅರಣ್ಯ ಯೋಜನೆಗೆ ಒಳಪಟ್ಟಿರುವ ಬಹುತೇಕ ಪ್ರದೇಶಗಳಲ್ಲಿ ಅರಣ್ಯ ಉತ್ಪನ್ನಗಳ ಸಂಗ್ರಹದ ಮೇಲೆ ಯಾವುದೇ ನಿರ್ಬಂಧವಿಲ್ಲದಿರುವುದು ಕಳವಳಕಾರಿ ಎಂದು ಅಭಿಪ್ರಾಯ ಪಟ್ಟಿರುವ ಈ ಅಧ್ಯಯನ ಗ್ರಾಮ ಅರಣ್ಯ ಸಮಿತಿಗಳೇ ಈ ಸಂಪನ್ಮೂಲದ ಸಂಗ್ರಹ, ಬಳಕೆ ಮತ್ತು ಮಾರಾಟಗಳಿಗೆ ಸಂಬಂಧಿಸಿದಂತೆ ಎಲ್ಲರಿಗೂ ಒಪ್ಪಿಗೆ ಯಾಗುವ ನಿಯಮಗಳನ್ನು ರೂಪಿಸಿಕೊಳ್ಳಬೇಕು ಎನ್ನುತ್ತದೆ. ಜಂಟೀ ಅರಣ್ಯ ಯೋಜನೆಯಲ್ಲಿ ಭಾಗವಹಿಸಲು ಎಲ್ಲ ಹಂತಗಳಲ್ಲಿ ಸಮಾನ ಅವಕಾಶಗಳನ್ನು ಮಹಿಳೆಯರಿಗೆ ಪ್ರಯತ್ನಪೂರ್ವಕವಾಗಿ ಒದಗಿಸಬೇಕೆನ್ನುವ ಅಧ್ಯಯನ, ವ್ಯವಹಾರಗಳಲ್ಲಿ ಪಾರದರ್ಶಕತೆಗೆ ಅತ್ಯಂತ ಮುಖ್ಯ ಸ್ಥಾನ ನೀಡ ಬೇಕೆನ್ನುತ್ತದೆ.[21]

ಕರ್ನಾಟಕದ ಸಂದರ್ಭದಲ್ಲಿ ನಾವು ಪರಿಗಣಿಸಬೇಕಾದ ಮತ್ತೊಂದು ಪ್ರಮುಖ ಅಧ್ಯಯನವೆಂದರೆ, ಸರ್ಕಾರೇತರ ಸಂಸ್ಥೆಯಾದ 'ಔಟ್‌ರೀಚ್' ಕಡೆಯಿಂದ, 1998 ರಲ್ಲಿ ಪಶ್ಚಿಮಘಟ್ಟ ಅರಣ್ಯ ಯೋಜನೆ ಯಡಿಯಲ್ಲಿ ನಡೆದ ಜಂಟೀ ಅರಣ್ಯ ಯೋಜನೆಯ, 'ಸಾಮಾಜಿಕ ಪರಿಣಾಮ ಮೌಲ್ಯಮಾಪನ' (ಸೋಷಿಯಲ್ ಇಂಪಾಕ್ಟ್ ಅಸೆಸ್‌ಮೆಂಟ್). ಶಿವಮೊಗ್ಗ ಮತ್ತು ಕೆನರಾ ವೃತ್ತಗಳ ಹದಿನೆಂಟು ಹಳ್ಳಿಗಳಲ್ಲಿ ಐದು ತಿಂಗಳಕಾಲ ನಡೆದ ಈ ಅಧ್ಯಯನದ ಮುಖ್ಯ ಉದ್ದೇಶ "ಪಶ್ಚಿಮಘಟ್ಟ ಯೋಜನೆಯ ಮೂಲಕ ಕಾರ್ಯಗತವಾದ ಜಂಟೀ ಅರಣ್ಯ ಯೋಜನೆಯ ಪ್ರಾಥಮಿಕ ಪಾಲುದಾರರ ಜೀವನೋಪಾಯ ಹಾಗೂ ಯೋಗಕ್ಷೇಮದ ಮೇಲೆ ಯೋಜನೆಯ ಪರಿಣಾಮವನ್ನು ಅಧ್ಯಯನ ಮಾಡುವುದು. ಇದರೊಂದಿಗೆ ಯೋಜನೆಯ ಎಲ್ಲ ಪಾಲುದಾರರಿಗೂ ಇದುವರೆಗಿನ ಅನುಭವವನ್ನು ಪರಿಶೀಲಿಸಿ ಅದರಿಂದ ಸೂಕ್ತ ಪಾಠಗಳನ್ನು ಕಲಿಯುವ ಅವಕಾಶನ್ನೊದಗಿಸುವುದು."

ಇದುವರೆವಿಗೂ ನಾವು ಪರಿಶೀಲಿಸಿರುವ ಅಧ್ಯಯನಗಳಿಗೆ ಹೋಲಿಸಿದರೆ, ಇದರಲ್ಲಿ ಔಟ್‌ರೀಚ್ ಸಂಸ್ಥೆಯ ದೃಷ್ಟಿಯಲ್ಲಿ, ಅತ್ಯಂತ 'ಆದರ್ಶಪ್ರಾಯ' ವೆನ್ನಿಸಿಕೊಂಡಿರುವ ಜಂಟೀ ಅರಣ್ಯ ಯೋಜನೆಯ ಗ್ರಾಮವೊಂದು ಕಾಣಸಿಗುತ್ತದೆ. ಇದೇ ಉತ್ತರ ಕನ್ನಡದ ಶಿರಸಿಯಿಂದ 26 ಕಿ.ಮೀ.ದೂರದಲ್ಲಿರುವ 'ಕೋಟೆ-ಕೊಪ್ಪ' ಏನಿದರ ಗುಣಲಕ್ಷಣಗಳು? "ಈ ಹಳ್ಳಿಯಲ್ಲಿ ಕೇವಲ 16 ಕುಟುಂಬಗಳಿವೆ. ಒಂದು ಯುವಕ ಸಂಘ, ಒಂದು ಮಹಿಳಾ ಸಂಘವಿದೆ. ಈ ಎರಡೂ ಸಂಘಗಳು

ಉತ್ತಮವಾಗಿ ಕೆಲಸಮಾಡುತ್ತಿವೆ ಎರಡು ಸರ್ಕಾರೇತರ ಸಂಸ್ಥೆಗಳು - ವಿಕಾಸ ಮತ್ತು ಬೈಫ್ - ಹೈನುಗಾರಿಕೆ ಮತ್ತು ತೋಟಗಾರಿಕಾ ಕ್ಷೇತ್ರದಲ್ಲಿ ಆದಾಯ ಉತ್ಪಾದನೆಯ ಕೆಲಸದಲ್ಲಿ ನಿರತವಾಗಿವೆ. 12 ಮಹಿಳಾ ಸದಸ್ಯರಿರುವ ಸ್ವಸಹಾಯ ಸಂಘವೊಂದು ಸಕ್ರಿಯವಾಗಿದೆ. ಇವುಗಳ ಫಲವಾಗಿ ಸಾಮಾನ್ಯ ತಿಳಿವಳಿಕೆ ಹಾಗೂ ಸಮುದಾಯ ಸಂಘಟನೆಯ ಬಗೆಗಿನ ಆಸಕ್ತಿ, ಪ್ರೇರಣೆಗಳು ಹೆಚ್ಚಿನ ಮಟ್ಟದಲ್ಲಿವೆ. ಇವುಗಳ ಜೊತೆಗೆ, ಇಂಥ ಹಳ್ಳಿಯಲ್ಲಿ ಜಂಟೀ ಅರಣ್ಯ ಯೋಜನೆಯನ್ನು ಪ್ರೋತ್ಸಾಹಿಸಲು ಅರಣ್ಯ ಇಲಾಖೆ ಅನೇಕ ಪ್ರೋತ್ಸಾಹಕಗಳನ್ನೂ - 16 ಅಸ್ತ್ರ ಒಲೆ, 9 ಗೋಬರ ಅನಿಲ ಸ್ಥಾವರ, 800 ಮೀಟರಿನ ರಸ್ತೆ, ಒಂದು ದೇವಸ್ಥಾನ - ಒದಗಿಸಿದೆ. ಹಳ್ಳಿಯ ಜನ ಜಂಟೀ ಅರಣ್ಯ ಯೋಜನೆಯಲ್ಲಿ ಆಸಕ್ತಿ ತೋರಿ 34 ಹೆಕ್ಟೇರ್ ಪ್ರದೇಶದಲ್ಲಿನ ಅರಣ್ಯವನ್ನು ರಕ್ಷಿಸುತ್ತಿದ್ದಾರೆ. ಬೆಂಕಿ, ಕಳ್ಳಸಾಗಣಿಕೆ ಪ್ರಕರಣಗಳು ಕಡಿಮೆಯಾಗಿವೆ. ಇಲಾಖೆಯ ಹಿರಿಯ ಅಧಿಕಾರಿಗಳು, ದೆಹಲಿಯ ಗಣ್ಯರು, ವಿದೇಶೀ ಪರಿಣಿತರೂ ಇಲ್ಲಿಗೆ ಭೇಟಿ ನೀಡುತ್ತಾರೆ.''[22] ಆದರೆ ಈ ಆದರ್ಶ ಅರಣ್ಯ ಸಮಿತಿಯ ಸದಸ್ಯರ ಬಗ್ಗೆ, ಹಳ್ಳಿಯಲ್ಲಿನ ದುರ್ಬಲ ವರ್ಗದವರು, ಭೂರಹಿತರ ಬಗ್ಗೆ, ಜಾತಿಪಂಗಡಗಳ ಬಗ್ಗೆ ಈ ಅಧ್ಯಯನ ಏನನ್ನೂ ಹೇಳುವುದಿಲ್ಲ.

ಶಿವಮೊಗ್ಗಕ್ಕೆ 30 ಕಿ.ಮೀ. ದೂರದಲ್ಲಿರುವ ಕೆಂಚಿಕೊಪ್ಪ, ಎಲ್ಲ ವಿಧದಲ್ಲೂ ಕೋಟೆಕೊಪ್ಪಕ್ಕೆ ತದ್ವಿರುದ್ಧ. ಔಟ್‌ರೀಚ್ ದೃಷ್ಟಿಯಲ್ಲಿ ಜಂಟೀ ಅರಣ್ಯ ಯೋಜನೆ ಇಲ್ಲಿ ನೂರಕ್ಕೆ ನೂರರಷ್ಟು ವಿಫಲ. ''ಇಲ್ಲಿ ವಿವಿಧ ಜಾತಿ, ಪಂಗಡಗಳಿಗೆ ಸೇರಿದ 367 ಕುಟುಂಬಗಳಿವೆ. ಆದರೆ ಗ್ರಾಮ ಅರಣ್ಯ ಸದಸ್ಯರ ಸಂಖ್ಯೆ 290. 77 ಕುಟುಂಬಗಳು ಸದಸ್ಯರಲ್ಲ. ಹಳ್ಳಿಗೆ ಹತ್ತಿರವಾಗಿ ಅರಣ್ಯವಿಲ್ಲ. ಯಾವ ಸಂಘವೂ ಹಳ್ಳಿಯಲಿಲ್ಲ. ಸರ್ಕಾರೇತರ ಸಂಸ್ಥೆಗಳಿಲ್ಲ. ದುರ್ಬಲ ವರ್ಗದವರನ್ನೂ, ಭೂರಹಿತರನ್ನೂ, ಮಹಿಳೆಯರನ್ನೂ ಮತ್ತಷ್ಟು ಅಂಚಿಗೆ ತಳ್ಳುವ ಸೆಣಸಾಟ, ತಿಕ್ಕಾಟಗಳ ತೀವ್ರ ಸ್ವರೂಪದ ಪಾರ್ಟಿ ರಾಜಕಾರಣವಿದೆ. ಸಮುದಾಯ ಸಂಘಟನೆಯ ಸೋಂಕೂ ಇಲ್ಲದ ಕೆಂಚಿಕೊಪ್ಪದ ಜನರಿಗೆ ಜಂಟೀ ಅರಣ್ಯ ಯೋಜನೆ, ವಶೀಲಿಯಿರುವ ಫಲಾನುಭವಿಗಳಿಗೆ ಅನುಕೂಲವಾಗುವ ಮತ್ತೊಂದು 'ಸರ್ಕಾರೀ ಸ್ಕೀಮು.''[23]

ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ನಡೆದಿರುವ ಈ ಅಧ್ಯಯನಗಳೇ ಅಲ್ಲದೆ ವಿವಿಧ ವಿಷಯಗಳ ಬಗ್ಗೆ ವೈಯಕ್ತಿಕ ಹಂತದಲ್ಲಿ, ಅನೇಕ ಸ್ವತಂತ್ರ ಸಂಶೋಧನೆಗಳೂ ನಡೆದಿವೆ. ಹರ್ಯಾನದ 'ಸುಖೋಮಾಜರಿ'ಯಲ್ಲಿ ಈ ಕ್ಷೇತ್ರದಲ್ಲಿ ನಡೆದಿರುವ ಮಾರ್ಗದರ್ಶಕ ಕೆಲಸಗಳ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ಮಧುಸರೀನ್ ಅವರು ''ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಸ್ಥಳೀಯ ಸಂಪನ್ಮೂಲವನ್ನು ಜಾಣ್ಮೆಯಿಂದ ಬಳಸುವ ಸಾಮರ್ಥ್ಯವನ್ನು ಸ್ಥಳೀಯ ಸಮುದಾಯದಲ್ಲಿ ಬೆಳೆಸಿ, ಅವರನ್ನು ಸಶಕ್ತೀಕರಣಗೊಳಿಸುವ ಬದಲಾಗಿ, ಅರಣ್ಯ ಇಲಾಖೆಯ ಉದ್ದೇಶ ಸಾಧನೆಗಾಗಿ, ಸಮುದಾಯವನ್ನು ಇಲಾಖೆ ಬಳಸಿಕೊಳ್ಳುತ್ತಿದೆ'' ಎನ್ನುತ್ತಾರೆ.''[24] ಜಂಟೀ ಅರಣ್ಯ ಯೋಜನೆಯ

ತವರು ಎಂದೇ ಹೆಸರಾದ ಪಶ್ಚಿಮ ಬಂಗಾಳದಲ್ಲಿ ಈ ಯೋಜನೆಯ ವಿಷದ ಅಧ್ಯಯನ ನಡೆಸಿರುವ ಮಾರ್ಕ್‌ಪೋಫೆನ್‌ಬರ್ಗರ್ ಅವರು "ಪಶ್ಚಿಮ ಬಂಗಾಳದಲ್ಲಿ ಜಂಟೀ ಅರಣ್ಯ ಯೋಜನೆಯ ಕಾರ್ಯಕ್ರಮ ಸಂಕೀರ್ಣವಾದ ನೋಂದಾವಣೆಯ ಪ್ರಕ್ರಿಯೆಗಾಗಲೀ, ಆಯವ್ಯಯದ ಮೂಲಕ ಹಣಕಾಸು ಹಂಚಿಕೆಗಾಗಲೀ ಕಾಯದೇ, 'ಅರಣ್ಯ ಸಂರಕ್ಷಿಸಿ ಉತ್ಪನ್ನದಲ್ಲಿ ಪಾಲು ಪಡೆಯಿರಿ' ಎಂಬ ಸರಳವಾದ, ನೇರವಾದ 'ಕೇರ್ ಅಂಡ್ ಶೇರ್' ತತ್ವವನ್ನು ಜಾರಿಗೆ ತಂದಿದ್ದರಿಂದ, ಉಳಿದ ರಾಜ್ಯಗಳಿಗಿಂತ ಹೆಚ್ಚು ಸುವ್ಯವಸ್ಥಿತವಾಗಿ ಜಂಟೀ ಅರಣ್ಯ ಯೋಜನೆ ಪಶ್ಚಿಮಬಂಗಾಳದಲ್ಲಿ ಹಬ್ಬಿದೆ" ಎನ್ನುತ್ತಾರೆ[25]. "ಜಂಟೀ ಅರಣ್ಯ ಯೋಜನೆಯಲ್ಲಿ ಮಹಿಳೆಯರಿಗೆ ಹೆಚ್ಚು ಅರ್ಥಪೂರ್ಣವಾದ ಅವಕಾಶಗಳನ್ನು ಉದ್ದೇಶಪೂರ್ವಕವಾಗಿ ಕಲ್ಪಿಸಿ, ಅವುಗಳ ಪ್ರಯೋಜನ ಪಡೆಯುವಂತೆ ಮಾಡಲು, ಗ್ರಾಮ ಅರಣ್ಯ ಸಮಿತಿ ಹಾಗೂ ನಿರ್ವಹಣಾ ಸಮಿತಿಗಳ ಸಭೆಗೆ ಮುಂಚೆ, ಮಹಿಳಾ ಸದಸ್ಯರು ಪ್ರತ್ಯೇಕವಾಗಿ ಸೇರಿ, ಅಂದಿನ ಸಭೆಯಲ್ಲಿ ಚರ್ಚೆಗೆ ಬರಲಿರುವ ವಿಷಯಗಳ ಬಗ್ಗೆ ಚರ್ಚಿಸಿ ತಮ್ಮದೇ ಆದ ನಿಲುವನ್ನು ವ್ಯಕ್ತಪಡಿಸುವಂತೆ ಮಹಿಳೆಯರನ್ನು ಪ್ರೋತ್ಸಾಹಿಸಬೇಕು."[26] ಪಶ್ಚಿಮ ಬಂಗಾಳದ ಜಿಲಿಮಿಲಿಯ ನಾರೀ ವಿಕಾಸ ಸಂಘ, ಗುಜರಾತಿನ ಮಾಲೇಕ್ ಪುರ ಹಾಗೂ ಕೋರಾಪುರದ ಅರಣ್ಯ ಸಮಿತಿಗಳಲ್ಲಿ ಈ ಪದ್ಧತಿ ಅತ್ಯಂತ ಪರಿಣಾಮಕಾರಿಯಾಗಿರುವುದರತ್ತ, ಮಂಜುರಾಜು ಗಮನ ಸೆಳೆಯುತ್ತಾರೆ. "ಗ್ರಾಮ ಅರಣ್ಯ ಸಮಿತಿಯ ಹಂತದಲ್ಲಿ ಹಾಗೂ ಗ್ರಾಮ ಅರಣ್ಯ ಸಮಿತಿ ಹಾಗೂ ಅರಣ್ಯ ಇಲಾಖೆಯ ನಡುವಿನ ವ್ಯವಹಾರದಲ್ಲಿ ಪಾರದರ್ಶಕತೆ, ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಬಳಕೆಗೆ ಸಂಬಂಧಿಸಿದಂತೆ ಸಮುದಾಯವೇ ರೂಪಿಸಿಕೊಂಡು ಪಾಲಿಸುವ ನಿಯಮಗಳು, ಅರಣ್ಯ ಸಂಪನ್ಮೂಲಗಳ ಬಗ್ಗೆ ಹಾಗೂ ಅವುಗಳ ಬಳಕೆಗೆ ಸಂಬಂಧಿಸಿದ ನಿಯಮಗಳ ಬಗ್ಗೆ ಗರಿಷ್ಠ ಅರಿವು, ಪುನರುಜ್ಜೀವನಗೊಂಡ ಅರಣ್ಯ ತಮ್ಮದೆಂಬ ನ್ಯಾಯಬದ್ಧ ಹೆಮ್ಮೆ, ಸಮುದಾಯದ ಅಗತ್ಯಗಳ ಪೂರೈಕೆ - ಇವು ಜಂಟೀ ಅರಣ್ಯ ಯೋಜನೆಯನ್ನುಯಶಸ್ವಿಯನ್ನಾಗಿಸುವ ಕೆಲವು ಅಂಶಗಳು."[27]

ಸಹಭಾಗಿತ್ವ ನೀತಿಗೆ ಸಂಕಲ್ಪ ಶಕ್ತಿ

ಭಾರತದ ಅರಣ್ಯ ಇತಿಹಾಸದಲ್ಲಿ 1988ರ ಅರಣ್ಯ ನೀತಿ ಹಾಗೂ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳು ಅತ್ಯಂತ ನಿರ್ಣಾಯಕವಾದ ಘಟ್ಟ. ದೇಶದ ಒಟ್ಟು ಭೂಭಾಗದ ಶೇಕಡಾ 20 ರಷ್ಟನ್ನು ತನ್ನ ಅಧೀನದಲ್ಲಿರಿಸಿಕೊಂಡು, ದೇಶದ ಅತ್ಯಂತ ದೊಡ್ಡ ಜಮೀನ್ದಾರನೆನ್ನಿಸಿ ಕೊಂಡಿರುವ ಅರಣ್ಯ ಇಲಾಖೆ ತನ್ನ ಅಧಿಕಾರಕ್ಕೆ ತಾನೇ ಸ್ವತಃ ಕಡಿವಾಣ ಹಾಕಿಕೊಂಡು, ಅಧಿಕಾರವನ್ನು ಸ್ಥಳೀಯ ಸಮುದಾಯದೊಡನೆ ಹಂಚಿಕೊಳ್ಳಬೇಕಾದ ಪರಿಸ್ಥಿತಿ ಇದರಿಂದ ಉಂಟಾಯಿತು. ಅರಣ್ಯ ಇಲಾಖೆಯ ಕಾರ್ಯಾಚರಣೆಯ ರೀತಿಯಲ್ಲಿ ಇಂತಹ ಮೂಲಭೂತ ಪರಿವರ್ತನೆಯನ್ನು ತರಲು ಸರ್ಕಾರಕ್ಕೆ, ಸರ್ಕಾರ ನಡೆಸುತ್ತಿರುವ ಪಕ್ಷಕ್ಕೆ ಅತ್ಯಂತ

ಪ್ರಬಲವಾದ ಸಂಕಲ್ಪ ಶಕ್ತಿ ಇರಬೇಕು. ಇಂಥ ಶಕ್ತಿ ಇತ್ತೇ ಎಂಬುದನ್ನು ನಾವು ಪರಿಶೀಲಿಸಬೇಕು. ಅವನತಿ ಹೊಂದಿದ ಅರಣ್ಯ ಭೂಮಿಯಲ್ಲಿ ಸ್ಥಳೀಯರ ಸಹಭಾಗಿತ್ವದ ಮೂಲಕವಾಗಿ ಮರಗಿಡಗಳನ್ನು ಬೆಳೆಸುವ ಉದ್ದೇಶದ ಜಂಟೀ ಅರಣ್ಯ ಯೋಜನೆ ಸಾಮುದಾಯಿಕ ಸಂಪನ್ಮೂಲವನ್ನು ಸೃಷ್ಟಿಸುತ್ತದೆ. ಆದರೆ ಸಾಮುದಾಯಿಕ ಆಸ್ತಿಯನ್ನು ನಿರ್ಮಿಸುವ ಕ್ಷೇತ್ರದಲ್ಲಿ ಹೇಳಿಕೊಳ್ಳುವಂಥ ಯಾವ ದಾಖಲೆಯನ್ನೂ ಸೃಷ್ಟಿಸಿರದ, ಅದಕ್ಕೆ ಬೇಕಾದಂಥ ದೃಢ ಸಂಕಲ್ಪವಿಲ್ಲದ ಸರ್ಕಾರ ಏಕಾಏಕಿ ಈ ನಿಲುವನ್ನು ತಳೆದದ್ದು ಹೇಗೆ ? ಸ್ವಾತಂತ್ರ್ಯಾನಂತರದ ನಾಲ್ಕು ದಶಕಗಳ ಕಾಲ ಕೈಗಾರಿಕೋದ್ಯಮಿಗಳು, ಶ್ರೀಮಂತರ ಪರವಾಗಿಯೇ ಇದ್ದ ಅರಣ್ಯ ನೀತಿ, ತದ್ವಿರುದ್ಧವಾದ ಮಾರ್ಗವನ್ನು ಹಿಡಿದು ಇದ್ದಕ್ಕಿದ್ದಂತೆ ಜನಪರವಾಗಲು ಕಾರಣಗಳೇನು? ಅರಣ್ಯ ನೀತಿಯಲ್ಲಿ ಬದಲಾವಣೆ ಬೇಕೆಂಬ ಜನರ ಆಂದೋಳನಗಳು ಇದಕ್ಕೆ ಕಾರಣವೇ ? ಜನರ ಸಹಭಾಗಿತ್ವವಿಲ್ಲದೆ ಅರಣ್ಯಗಳನ್ನು ಉಳಿಸಿಕೊಳ್ಳುವುದು ಸಾಧ್ಯವೇ ಇಲ್ಲವೆಂಬ ವಿಷಯ ಸರ್ಕಾರಕ್ಕೆ ಮನದಟ್ಟಾಗಿದೆಯೇ ಅಥವಾ ಈ ಎಲ್ಲವೂ ಕೇವಲ ತೋರಿಕೆಯ ಪರಿವರ್ತನೆಗಳೇ ಮುಂತಾದ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ.

ಪ್ರಜಾಪ್ರಭುತ್ವದಲ್ಲಿ ಸರ್ಕಾರವೊಂದು ಯಾವುದೇ ಕ್ಷೇತ್ರದಲ್ಲಿ ರೂಪಿಸಲು ಪ್ರಯತ್ನಿಸುವ ಹೊಸ ನೀತಿಯ ಬಗ್ಗೆ ಸಾಕಷ್ಟು ವಾದ ವಿವಾದಗಳು, ಚರ್ಚೆಗಳು ನಡೆಯುವುದು ಬಹು ಸಾಮಾನ್ಯ. ಕೆಲವೊಮ್ಮೆ ಇವು ತೀವ್ರ ಸ್ವರೂಪ ಪಡೆದು, ಅತಿ ದೀರ್ಘಕಾಲ ನಡೆಯುವುದನ್ನು ಮಹಿಳಾ ಮೀಸಲಾತಿ ಸಂದರ್ಭದಲ್ಲಿ ನಾವು ನೋಡುತ್ತಿದ್ದೇವೆ. ಆದರೆ ನಾಲ್ಕು ದಶಕಗಳ ಕಾಲ ನಾವು ಅನುಸರಿಸಿಕೊಂಡು ಬಂದಿದ್ದ ಅರಣ್ಯ ನೀತಿಯನ್ನು ಕೈಬಿಟ್ಟು, ಅತಿಮಹತ್ವದ ಹೊಸ ನೀತಿಯನ್ನು ತರುವ ಸಂದರ್ಭದಲ್ಲಿ ತೀವ್ರವಾದ ಚರ್ಚೆಗಳಾಗಲೀ, ತೀಕ್ಷ್ಣವಾದ ಅಭಿಪ್ರಾಯಭೇದಗಳಾಗಲೀ, ಮಹಿಳಾ ಮೀಸಲಾತಿಯ ಸಂದರ್ಭದಲ್ಲಿ ಕಂಡುಬರುತ್ತಿರುವಂಥ ರಾಜಕೀಯ ಅಡೆತಡೆಗಳಾಗಲೀ ಬರಲೇ ಇಲ್ಲ ಎಂಬುದನ್ನು ನಾವು ಗಮನಿಸಬೇಕು. ಇದಕ್ಕೇನು ಕಾರಣ?

ಗ್ರಾಮಾಂತರ ಪ್ರದೇಶದಲ್ಲಿ ಅನುಷ್ಠಾನಗೊಳ್ಳುವ ಯಾವುದೇ ಯೋಜನೆ ಗ್ರಾಮೀಣ ಬಡಜನ ಹಾಗೂ ಗ್ರಾಮೀಣ ಪ್ರತಿಷ್ಠಿತರು, ಈ ಎರಡು ಗುಂಪುಗಳನ್ನು ಪರಿಗಣಿಸಲೇಬೇಕು. ಯಾವುದೇ ಯೋಜನೆಯಿಂದ ಈ ಎರಡೂ ಗುಂಪುಗಳಿಗೆ ನಷ್ಟವಾದರೆ ಅಂತಹ ಯೋಜನೆ ರಾಜಕೀಯವಾಗಿ ಕಾರ್ಯಸಾಧ್ಯವಲ್ಲ. ಆದರೆ ಎರಡೂ ಗುಂಪುಗಳಿಗೆ ಪ್ರಯೋಜನವಾಗುವ ಅಥವಾ ಪ್ರತಿಷ್ಠಿತರಿಗೆ ತೊಂದರೆಯಾಗದೇ ಬಡಜನರಿಗೆ ಪ್ರಯೋಜನವಾಗುವ ಯೋಜನೆಗಳು ಯಶಸ್ವಿಯಾಗುವ ಸಾಧ್ಯತೆಗಳು ಹೆಚ್ಚು. (ಕೋಷ್ಟಕ 6)

ಶೇಕಡಾ 70ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುವ ಭಾರತದಂತಹ ಪ್ರಜಾ ಪ್ರಭುತ್ವದಲ್ಲಿ ಗ್ರಾಮೀಣ ಜನರ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ, ಸದಾಕಾಲ ನಿರ್ಲಕ್ಷಿಸುವುದು

ಸಾಧ್ಯವಿಲ್ಲ. ಇದರೊಡನೆ ಗ್ರಾಮಿಣ ಬಡ ಜನರ ಹೊಟ್ಟೆ ಪಾಡಿನ ಪ್ರಶ್ನೆಯನ್ನು ಗಮನದಲ್ಲಿರಿಸಿಕೊಂಡ ಅರಣ್ಯ ನೀತಿ ಗ್ರಾಮಿಣ ಪ್ರದೇಶದ ಪ್ರತಿಷ್ಠಿತ ವರ್ಗವನ್ನು ಯಾವ ಕಾರಣದಿಂದಲೂ ಅಸಂತುಷ್ಟ ಗೊಳಿಸುವುದಿಲ್ಲ. ಹೀಗಾಗಿ ಗ್ರಾಮೀಣ ಪ್ರದೇಶದ ಶ್ರೀಮಂತ ರೈತರು, ದೊಡ್ಡ ಜಮೀನ್ದಾರರು ಮುಂತಾದ ಪ್ರತಿಷ್ಠಿತ ವರ್ಗದಿಂದ ಈ ಹೊಸ ನೀತಿಗೆ ಯಾವ ಪ್ರತಿಭಟನೆಯೂ ಇರಲಿಲ್ಲ. ಎರಡನೆಯದಾಗಿ ಭಾರತದಲ್ಲಿನ ರಾಜಕೀಯ ವ್ಯವಸ್ಥೆ ಸಾರ್ವಜನಿಕ ಅಭಿಪ್ರಾಯಕ್ಕೆ ಸೂಕ್ತವಾಗಿ ಸ್ಪಂದಿಸುತ್ತ ಬಂದಿರುವುದನ್ನು ನಾವು ನೋಡಬಹುದು. ಜನಪರವಾದ ಅರಣ್ಯ ನೀತಿಗಾಗಿ ನಡೆದಿರುವ ಜನಾಂದೋಳನಗಳು, ಹಲವಾರು ಸಂದರ್ಭಗಳಲ್ಲಿ ಈ ಆಂದೋಳನಗಳಿಗೆ ದೊರೆತಿರುವ ಜಯ, ಕರ್ನಾಟಕದಲ್ಲಿ ಕಾಗದದ ಕಾರ್ಖಾನೆಗೆ ಗುತ್ತಿಗೆ ಆಧಾರದ ಮೇಲೆ ಊರೊಟ್ಟಿನ ಭೂಮಿಯನ್ನು ನೀಡಿದ ಪ್ರಕರಣದಲ್ಲಿ ಜನರಿಗೆ ದೊರೆತ ಯಶಸ್ಸು ಮುಂತಾದವುಗಳು ರಾಜಕೀಯ ಪಕ್ಷಗಳನ್ನು ಹೊಸ ಆರಣ್ಯ ನೀತಿಗೆ ಯಾವುದೇ ತಡೆಯೊಡ್ಡದಂತೆ ಮಾಡಿರಲು ಸಾಧ್ಯ.

1988ರ ಅರಣ್ಯ ನೀತಿ, ಅರಣ್ಯಾಧಾರಿತ ಕೈಗಾರಿಕೆಗಳಿಗೆ, ಅದರ ಮಾಲಿಕರಿಗೆ ಸ್ವಾಗತಾರ್ಹ ಬೆಳವಣಿಗೆಯಾಗಲಿಲ್ಲ. ಒಂದು ಕಾಲದಲ್ಲಿ ಅರಣ್ಯಗಳಿಗೆ ಸಂಬಂಧಿಸಿದ ನೀತಿ-ನಿಲುವುಗಳ ನಿರೂಪಣೆಗೆ ಸಂಬಂಧಪಟ್ಟಂತೆ ಸರ್ಕಾರದ ಮೇಲೆ ಪ್ರಭಾವ ಬೀರಿದ ಈ ಶಕ್ತಿಯುತ ಲಾಬಿ ತಾತ್ಕಾಲಿಕವಾಗಿ ತಟಸ್ಥವಾಗಿದ್ದರೂ, ನಿಷ್ಕ್ರಿಯವಾಗಿಲ್ಲ. ಎಲ್ಲ ಅರಣ್ಯಾಧಾರಿತ ಕೈಗಾರಿಕೆಗಳಿಗೆ ಕಡಿಮೆಯ ಪ್ರಮಾಣದಲ್ಲಾದರೂ ಸಬ್ಸಿಡಿ ದೊರೆಯುತ್ತಲೇ ಇದೆ. ಖಾಸಗೀ ಜಮೀನುಗಳಿಂದ ತಮ್ಮ ಕಚ್ಚಾವಸ್ತು ಬೇಡಿಕೆಗಳನ್ನು ಪೂರೈಸಿಕೊಳ್ಳಲು ಯಾವ ನಿರ್ಬಂಧವೂ ಇಲ್ಲ. ಅವನತಿ ಹೊಂದಿದ ಅರಣ್ಯ ಭೂಮಿಯನ್ನು ತಮಗೆ ಗುತ್ತಿಗೆಯ ಆಧಾರದ ಮೇಲೆ ನೀಡಬೇಕೆಂಬ ತಮ್ಮ ಬೇಡಿಕೆಯನ್ನು ಈ ಕೈಗಾರಿಕೆಗಳು ಮುಂದುವರೆಸಿಯೇ ಇವೆ. ಇವೆಲ್ಲದಕ್ಕಿಂತ ಹೆಚ್ಚಾಗಿ 1988ರ ಅರಣ್ಯ ನೀತಿಯ ಫಲವಾಗಿ ಜಾರಿಗೆ ಬಂದ ಜಂಟೀ ಅರಣ್ಯ ಯೋಜನೆಯ ಯಶಸ್ಸಿನಲ್ಲೇ ತಮ್ಮ ಹಿತಾಸಕ್ತಿಯಿದೆ ಎಂಬ ಸೂಕ್ಷ್ಮದ ಅರಿವಿರುವ ಕೈಗಾರಿಕಾ ಲಾಬಿಗಳು ಅರ್ಥ ಪೂರ್ಣಮೌನ ತಾಳಿರುವುದರಲ್ಲಿ ಆಶ್ಚರ್ಯವಿಲ್ಲ!

ಭಾರತದಾದ್ಯಂತ ಬಹುತೇಕ ಅರಣ್ಯಾಧಿಕಾರಿಗಳಿಗೆ ಜಂಟೀ ಅರಣ್ಯ ನಿರ್ವಹಣಾ ಯೋಜನೆಯ ಉದ್ದೇಶ ಬಹಳ ಸೀಮಿತ. ಜನ ಮತ್ತು ಜಾನುವಾರುಗಳ ಜೀವಿಜನ್ಯ ಒತ್ತಡಗಳಿಂದ ಅವನತಿ ಹೊಂದಿದ ಅರಣ್ಯ ಭೂಮಿಯಷ್ಟೇ ಈ ಯೋಜನೆಗೆ ಸೀಮಿತಗೊಂಡಿರುವುದರಿಂದ ಅಂತಹ ಜಾಗಗಳಲ್ಲಿ ಅರಣ್ಯ ಬೆಳೆಸುವ ಕೆಲಸಗಳಲ್ಲಿ ಸ್ಥಳೀಯ ಜನರನ್ನು ಒಳಗೊಳ್ಳುವುದರಿಂದ ಇಲಾಖೆಗೆ ಸಾಕಷ್ಟು ಪ್ರಯೋಜನವುಂಟು. ಈ ಜನರಿಗೆ ಅಲ್ಪ-ಸ್ವಲ್ಪ ಪ್ರಯೋಜನ ನೀಡಿ, ಅವರನ್ನು ಉತ್ತಮವಾದ ಅರಣ್ಯಗಳಿಂದ ದೂರವಿಡಬಹುದು. ಅಂಥ ಅರಣ್ಯಗಳನ್ನು ಜೀವಿಜನ್ಯ ಒತ್ತಡಗಳಿಂದ ಕಾಪಾಡಬಹುದು. ಹೀಗಾದಾಗ ಅರಣ್ಯ ಇಲಾಖೆ, ಅಂಥ ಅರಣ್ಯಗಳಲ್ಲಿ ಕೈಗಾರಿಕೆಗಳಿಗೆ

ಕಚ್ಚಾವಸ್ತುವನ್ನು ಒದಗಿಸುವ ತನ್ನ ಮುಖ್ಯವಾದ ಆರ್ಥಿಕ ಚಟುವಟಿಕೆಯನ್ನು ಯಾವುದೇ ಅಡಚಣೆಯಿಲ್ಲದೇ ಮುಂದುವರೆಸಬಹುದು. ಕೈಗಾರಿಕೆಗಳಿಗೆ ಬೇಕಿರುವುದೂ ಇದೇ! ಅಭಿವೃದ್ಧಿಯ ಭಾಷೆಯಲ್ಲಿ ಇದು 'ಯಥಪ್ರಕಾರ ವ್ಯವಹಾರ'ದ (ಬಿಸಿನೆಸ್ ಆ್ಯಸ್ ಯೂಶ್ಯುಯಲ್) ಮಾದರಿ ಎನ್ನಿಸಿಕೊಳ್ಳುತ್ತದೆ. ಇಂಥ ವ್ಯವಹಾರದಿಂದ ಉತ್ಪಾದಕರು, ಬಳಕೆದಾರರು, ವ್ಯಾಪಾರಿಗಳು ಮುಂತಾದವರಿಗೆ ದೊರೆಯುವ ಲಾಭಾಂಶದಲ್ಲಿ ಅತ್ಯಲ್ಪಭಾಗ ಸ್ಥಳೀಯ ಸಮುದಾಯಕ್ಕೂ ಜಿನುಗಿ ಬರುತ್ತದೆ. ಇವೆಲ್ಲದರ ಜೊತೆಗೆ ಅರಣ್ಯಗಳ ಮೇಲಿನ ಹತೋಟಿಗಾಗಲೀ, ಇಲಾಖೆಯ ಸಂರಚನೆ, ಅಧಿಕಾರಕ್ಕಾಗಲೀ ಜಂಟೀ ಅರಣ್ಯ ಯೋಜನೆ ಯಾವ ಸವಾಲನ್ನೂ ಒಡ್ಡುವುದಿಲ್ಲ. ಜಂಟೀ ಅರಣ್ಯ ಯೋಜನೆಯಡಿಯಲ್ಲಿರುವ ಅರಣ್ಯ ಭೂಮಿಯೂ ಸೇರಿದಂತೆ ಸಮಸ್ತ ಅರಣ್ಯಕ್ಕೂ ಇಲಾಖೆಯೇ ಒಡೆಯ. ಹೀಗೆ ಯಾವ ಕಾರಣದಿಂದಲೂ ಸರ್ಕಾರಕ್ಕೆ ಸವಾಲನ್ನೊಡ್ಡದ, ಇರುಸು-ಮುರುಸು ಮಾಡದ ಯೋಜನೆಗೆ ಸರ್ಕಾರ ಸಂಪೂರ್ಣ ಬೆಂಬಲ ನೀಡಲು ಹಿಂತೆಗೆಯಬೇಕಾದ್ದಿಲ್ಲ.

ಅರಣ್ಯ ನೀತಿಯ ವಿಕಾಸ ಹಾಗೂ ಕಾಲಕಳೆದಂತೆ ಅದರಲ್ಲಾದ ಮಹತ್ವದ ಪರಿವರ್ತನೆಗಳನ್ನು, ಅರಣ್ಯಗಳಲ್ಲಿ ಹಾಗೂ ಅರಣ್ಯ ಉತ್ಪನ್ನಗಳಲ್ಲಿ ತಮ್ಮದೇ ಆದ ಆಸಕ್ತಿಯಿರುವ ಗುಂಪುಗಳ ನಡುವಿನ ಪರಸ್ಪರ ಪ್ರತಿಕ್ರಿಯೆ ಮತ್ತು ಅವು ಬೀರುವ ಸಾಪೇಕ್ಷ ಪ್ರಭಾವಗಳ ವಿಶ್ಲೇಷಣೆಯಿಂದ ಅರ್ಥ ಮಾಡಿಕೊಳ್ಳಬಹುದು. 1864 ರಿಂದ 1988ರವರೆಗಿನ ಅರಣ್ಯ ನಿರ್ವಹಣೆಯ ಗುರಿ ಸಂಪೂರ್ಣವಾಗಿ ವಾಣಿಜ್ಯ ಮತ್ತು ಕೈಗಾರಿಕಾ ಉತ್ಪಾದನೆಯ ಪರವಾಗಿ ಇದ್ದು, ತಾಳಿಕೆಯ ಬಳಿಕೆಗಾಗಲೀ, ಸ್ಥಳೀಯ ಸಮುದಾಯಗಳ ಅಗತ್ಯಗಳ ಬಗೆಗಾಗಲೀ ಒಂದಿಷ್ಟೂ ಕಾಳಜಿಯಿರಲಿಲ್ಲ. ಆದರೆ ಕಳೆದೆರಡು ದಶಕಗಳಲ್ಲಿ ನಡೆದ ಅರಣ್ಯ ಸಂಬಂಧಿ ಚರ್ಚೆಗಳು, ವಾದವಿವಾದಗಳು, ಆಂದೋಳನಗಳ ಮೂಲಕ ವ್ಯಕ್ತವಾದ ಅರಣ್ಯವಾಸೀ ಹಾಗೂ ಅರಣ್ಯ ಸಮೀಪವಾಸಿ ಸಮುದಾಯಗಳ ಬಗೆಗಿನ ಕಾಳಜಿಗೆ ಸರ್ಕಾರ ಸ್ಪಂದಿಸಿದೆ. ಜನಪರ ನೀತಿಯನ್ನು ಅಳವಡಿಸಿಯೂ ಶಕ್ತಿಯುತ ಲಾಬಿಗಳ ಹಿತಾಸಕ್ತಿಯನ್ನು ಕಾಪಾಡಬಹುದೆಂಬುದೇ ಸರ್ಕಾರದ ಸಹಕಾರಿ ನಿಲುವಿಗೆ ಕಾರಣವೆಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವ ತತ್ವಗಳಿಗನುಸಾರವಾಗಿ ವಿಕೇಂದ್ರೀಕೃತ ಅರಣ್ಯ ನಿರ್ವಹಣೆಯ ಬೇಡಿಕೆಗಳನ್ನು ಒಪ್ಪಿಕೊಂಡ ನಂತರ ಕೇವಲ ತಾತ್ವಿಕವಾಗಿ ಯಾದರೂ ಜಂಟೀ ಅರಣ್ಯ ನಿರ್ವಹಣಾ ಯೋಜನೆಯ ಮೂಲಕ ಅದನ್ನು ಆಚರಣೆಗೆ ತರಲು ಸರ್ಕಾರ ಬದ್ಧವಾಗಿದೆ.

ಕೋಷ್ಟಕ 1

ಅರಣ್ಯ ನಿರ್ವಹಣೆಯಲ್ಲಿನ ಮಹತ್ವದ ಬದಲಾವಣೆಗಳು

ಕ್ರ.ಸಂ.	ವರ್ಷ	ವಿಷಯ/ಘಟನೆ	ಮುಖ್ಯ ಒತ್ತು	ಫಲ/ಪರಿಣಾಮ
1.	1861	ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ ಅವರ ನೇಮಕಾತಿ	ಅರಣ್ಯನಿರ್ವಹಣೆ, ಆಡಳಿತಗಳಿಗೆ ಜರ್ಮನ್ ಪ್ರಾಧ್ಯಾಪಕರ ನೇಮಕ	ಸಮಶೀತೋಷ್ಣವಲಯದ ಅರಣ್ಯ ಕೃಷಿ ಪದ್ಧತಿಗಳನ್ನು ಆಧರಿಸಿ ಭಾರತದಲ್ಲೂ ನಿರ್ವಹಣೆ ಪ್ರಾರಂಭ
2.	1865	ಭಾರತದ ಅರಣ್ಯ ಅಧಿನಿಯಮ ಜಾರಿಗೆ	ಅರಣ್ಯ ಪ್ರದೇಶಗಳ ವಿಧ್ಯುಕ್ತ ಘೋಷಣೆ	ಕೇಂದ್ರೀಕರಣಕ್ಕೆ ಅಗತ್ಯವಾದ ಕಾನೂನಿನ ಚೌಕಟ್ಟುಸಿದ್ಧ
3.	1878	ಭಾರತದ ಅರಣ್ಯ ಅಧಿನಿಯಮದ ಪರಿಷ್ಕರಣೆ	ಕಾಯ್ದಿಟ್ಟ ಅರಣ್ಯಗಳು ಅಸ್ತಿತ್ವಕ್ಕೆ	--
4.	1894	ಮೊದಲ ರಾಷ್ಟ್ರೀಯ ಅರಣ್ಯ ನೀತಿ	ಹಕ್ಕುಗಳ ನಿಯಂತ್ರಣ ಹಾಗೂ ಬಳಕೆದಾರರ ಸವಲತ್ತುಗಳ ಮೇಲೆ	ಅನಾದರಣೆಗೊಳಗಾದ ಸ್ಥಳೀಯ ಸಮುದಾಯ ನಿರ್ಬಂಧ
5.	1927	1927 ರ ಭಾರತದ ಅರಣ್ಯ ಅಧಿನಿಯಮ	ಸಮಗ್ರಕಾನೂನು. ಜಾರಿಗೆ	ಅಧಿಕಾರ ಶಾಹಿಯ ಕೇಂದ್ರೀಕರಣ
6.	1952	1952 ರ ರಾಷ್ಟ್ರೀಯ ಅರಣ್ಯ ನೀತಿ	ರಕ್ಷಣೆ, ಸಂಪರ್ಕ ಹಾಗೂ ಕೈಗಾರಿಕಾ ಕ್ಷೇತ್ರಗಳಿಗೆ ನಾಟಾಗಳ	ವಸಾಹತುಶಾಹಿ ನೀತಿಯ ಮುಂದುವರಿಕೆ ನಿರಂತರ ಸರಬರಾಜು
7.	1976 ಆಯೋಗ	ರಾಷ್ಟ್ರೀಯ ಕೃಷಿ ಅರಣ್ಯ ನೀತಿ	ವಾಣಿಜ್ಯೋದ್ದೇಶದ ಅರಣ್ಯ ನೀತಿ	ಸ್ಥಳೀಯ ಸಮುದಾಯಕ್ಕೆ ಅರಣ್ಯಗಳಿಂದ ದೊರೆಯು ತ್ತಿದ್ದ ಉತ್ಪನ್ನಗಳಲ್ಲಿ ತೀವ್ರ ಇಳಿತ
8.	1988	1988 ರ ರಾಷ್ಟ್ರೀಯ ಅರಣ್ಯ ನೀತಿ	ಪರಿಸರ ಸಂರಕ್ಷಣೆ ಮತ್ತು ಅರಣ್ಯಾಭಿವೃದ್ಧಿಯಲ್ಲಿ ಜನರ ಸಹಭಾಗಿತ್ವ	ಸಮುದಾಯವನ್ನು ಬಲಗೊಳಿಸುವ ಅವಕಾಶ
9.	1990	ಭಾರತ ಸರ್ಕಾರದಿಂದ ಜಂಟಿ ಅರಣ್ಯ ನಿರ್ವಹಣಾ ಯೋಜನೆಗೆ ಸಂಬಂಧಿಸಿದ ಸುತ್ತೋಲೆ	ಅವನತಿಹೊಂದಿದ ಪ್ರದೇಶಗಳಲ್ಲಿನ ಅರಣ್ಯಾಭಿವೃದ್ಧಿ ಚಟುವಟಿಕೆಗಳಲ್ಲಿ ಭಾಗವಹಿಸುವ ಸ್ಥಳೀಯರಿಗೆ ಉತ್ಪನ್ನಗಳಲ್ಲಿ ಪಾಲು	ವಿಕೇಂದ್ರೀಕೃತ ಅರಣ್ಯ ನಿರ್ವಹಣೆಯ ಪ್ರಾರಂಭ

ಮೂಲ : ಇಂಡಿಯನ್ ಕೌನ್ಸಿಲ್ ಆಫ್ ಫಾರೆಸ್ಟ್ರಿ ರಿಸರ್ಚ್ ಅಂಡ್ ಎಜುಕೇಷನ್, ಡೆಹ್ರಾಡೂನ್, ಮೇ ೨೦೦೦.

ಕೋಷ್ಟಕ 2

ಭಾರತದಲ್ಲಿ ಜಂಟೀ ಅರಣ್ಯ ನಿರ್ವಹಣಾ ಯೋಜನೆಯ ಸ್ಥಿತಿಗತಿ

ಸಂಖ್ಯೆ	ರಾಜ್ಯ	ಜಂಟೀ ಅರಣ್ಯ ಯೋಜನೆಯಡಿಯಲ್ಲಿರುವ ಪ್ರದೇಶದ ವಿಸ್ತೀರ್ಣ ಚ.ಕಿಮೀ.ಗಳಲ್ಲಿ	ಗ್ರಾಮ ಅರಣ್ಯ ಸಮಿತಿಗಳ ಸಂಖ್ಯೆ	ಪ್ರತಿ ಗ್ರಾಮ ಅರಣ್ಯ ಸಮಿತಿಯೂ ನೋಡಿಕೊಳ್ಳುತ್ತಿರುವ ಪ್ರದೇಶದ ಸರಾಸರಿ ವಿಸ್ತೀರ್ಣ ಚ.ಕಿಮೀ.ಗಳಲ್ಲಿ
1.	ಆಂಧ್ರಪ್ರದೇಶ	17675.70	6816	2.59
2.	ಅಸ್ಸಾಂ	69.70	245	0.28
3.	ಅರುಣಾಚಲಪ್ರದೇಶ	58.10	13	4.46
4.	ಬಿಹಾರ	741.40	296	2.5
5.	ಚತ್ತೀಸಘಡ್	28,238.55	6412	4.4
6.	ಗೋವಾ	130	26	5
7.	ಗುಜರಾತ್	1380.15	1237	1.1
8.	ಹರ್ಯಾಣ	658.52	471	1.3
9.	ಹಿಮಾಚಲ ಪ್ರದೇಶ	1112.47	914	1.2
10.	ಜಮ್ಮು ಮತ್ತು ಕಾಶ್ಮೀರ	795.46	1895	0.4
11.	ಜಾರ್ಖಂಡ್	4304.63	1379	3.12
12.	ಕರ್ನಾಟಕ	1850	2620	0.7
13.	ಕೇರಳ	49.95	32	1.5
14.	ಮಧ್ಯಪ್ರದೇಶ	43,000	10,443	4.1
15.	ಮಹಾರಾಷ್ಟ್ರ	6866.88	2153	3.18
16.	ಮಣಿಪುರ	5072.92	82	62
17.	ನಾಗಾಲ್ಯಾಂಡ್	1500	55	27.20
18.	ಒರಿಸ್ಸಾ	7834.67	12317	0.63
19.	ಮಿಜೋರಾಮ್	127.40	129	0.92
20.	ಪಂಜಾಬ್	735.60	184	4
21.	ರಾಜಾಸ್ಥಾನ	3093.36	3042	1.01
22.	ಸಿಕ್ಕಿಂ	6	158	0.03
23.	ತಮಿಳುನಾಡು	3733.89	999	3.7
24.	ತ್ರಿಪುರ	319.89	180	1.7
25.	ಉತ್ತರಪ್ರದೇಶ	507.03	540	0.9
26.	ಉತ್ತರಾಂಚಲ	6066.08	7435	0.8
27.	ಪಶ್ಚಿಮ ಬಂಗಾಳ	4880.95	3545	1.3

ಮೂಲ : ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ 2003.

ಕೋಷ್ಟಕ 3

ಕರ್ನಾಟಕದಲ್ಲಿ ಜಂಟೀ ಅರಣ್ಯ ನಿರ್ವಹಣಾ ಯೋಜನೆಯ ಮುಖ್ಯಾಂಶಗಳು

1. ಮುಖ್ಯ ಕಾರ್ಯಘಟಕ ಗ್ರಾಮೀಣ	:	ಗ್ರಾಮ ಅರಣ್ಯ ಸಮಿತಿ ಸ್ವತಂತ್ರವಾದ, ಸ್ವಯಂ ಆಡಳಿತ ನಡೆಸಬಲ್ಲ ಸಂಸ್ಥೆ. ಈ ಸಮಿತಿಯ ಮೂಲಕವಾಗಿ ಸಮುದಾಯ ಯೋಜನೆಯ ತಯಾರಿ, ಅನುಷ್ಠಾನ, ಸಂರಕ್ಷಣೆ, ಅರಣ್ಯ ಉತ್ಪನ್ನಗಳ ಹಂಚಿಕೆಯಲ್ಲಿ ಭಾಗ ವಹಿಸುತ್ತದೆ. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ಅನ್ವಯ ಗ್ರಾಮ ಅರಣ್ಯ ಸಮಿತಿಗಳನ್ನು ನೋಂದಾಯಿಸಬೇಕು.
2. ಯೋಜನೆಯ ಗುರಿ	:	ಸಮುದಾಯದ ಅಗತ್ಯಗಳಿಗನುಸಾರವಾಗಿ ಅರಣ್ಯದ ರಕ್ಷಣೆ, ನಿರ್ವಹಣೆ ಮತ್ತು ಪುನರುಜ್ಜೀವನ.
3. ಸದಸ್ಯತ್ವ	:	18 ವರ್ಷಕ್ಕೆ ಮೇಲ್ಪಟ್ಟ ವಯಸ್ಕರೊಬ್ಬರು ಕುಟುಂಬದ ಪ್ರತಿನಿಧಿಯಾಗಿ ಸದಸ್ಯರಾಗಬಹುದು. ಸದಸ್ಯತ್ವ ಶುಲ್ಕ ಒಬ್ಬರಿಗೆ ರೂ.2/- ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ರೂ. 1/-.
4. ನಿರ್ವಹಣಾ ಸಮಿತಿ	:	(see below)
5. ನಿರ್ವಹಣಾ ಸಮಿತಿಯ ಅಧಿಕಾರ ಅವಧಿ	:	5 ವರ್ಷಗಳು, ಮೂರು ತಿಂಗಳಿಗೊಮ್ಮೆ ಸಭೆ ಸೇರುವುದು ಅಗತ್ಯ.
6. ನಿರ್ವಹಣಾ ಸಮಿತಿಯ ಕೆಲಸಗಳು	:	ನಿರ್ವಹಣಾ ಯೋಜನೆಯನ್ನು ಜಾರಿಗೊಳಿಸುವುದು, ಅರಣ್ಯ ಸಮಿತಿಯ ಪ್ರತಿನಿಧಿಯಾಗಿ ಇಲಾಖೆಯೊಡನೆ ಒಪ್ಪಂದ ಮಾಡಿಕೊಳ್ಳುವುದು, ಅರಣ್ಯ ಸಂರಕ್ಷಣೆ, ನಿರ್ವಹಣೆಗೆ ಸಂಬಂಧಿಸಿದಂತೆ ದಿನನಿತ್ಯದ ಕೆಲಸಕಾರ್ಯಗಳ ಮೇಲ್ವಿಚಾರಣೆ, ಅರಣ್ಯ ಉತ್ಪನ್ನಗಳ ಹಂಚಿಕೆ, ಬ್ಯಾಂಕ್ ಸಾಲ, ಗ್ರಾಮೀಣ ಸಾಲಗಳನ್ನು ಪಡೆಯುವುದು ಇತ್ಯಾದಿ.
7. ಯೋಜನೆಯಡಿಯಲ್ಲಿ ಬರುವ ಪ್ರದೇಶ	:	ಶೇಕಡಾ 0.25 ಹಾಗೂ ಅದಕ್ಕೂ ಕಡಿಮೆ ವೃಕ್ಷದಟ್ಟಣೆ ಇರುವ ಅವನತಿ ಹೊಂದಿದ ಅರಣ್ಯ ಭೂಮಿ, ಕಂದಾಯ

4. ನಿರ್ವಹಣಾ ಸಮಿತಿ :

ಒಟ್ಟು ಸದಸ್ಯರ ಸಂಖ್ಯೆ	15	ಸರ್ವಸದಸ್ಯರ ಸಭೆಯಿಂದ ಚುನಾಯಿತರು. ಸ್ಥಳೀಯ ಕಂದಾಯ ನಿರೀಕ್ಷರು, ಚುನಾವಣಾ ಆಧಿಕಾರಿ ಸರ್ವಾನುಮತದ ಆಯ್ಕೆಯಾದರೆ ಚುನಾವಣೆ ಅನಗತ್ಯ
ಅಧ್ಯಕ್ಷರು	1	
ಮಹಿಳೆಯರು	2	
ಪರಿಶಿಷ್ಟ ಜಾತಿ/ವರ್ಗ	2	
ಭೂರಹಿತ ಕಾರ್ಮಿಕ	1	
ಕುಶಲ ಕರ್ಮಿ	1	
ಸಾಮಾನ್ಯ ಪ್ರವರ್ಗ	4	
ಗ್ರಾಮ ಲೆಕ್ಕಿಗ	1	ಪದನಿಮಿತ್ತ ಸದಸ್ಯರು
ಗ್ರಾಮ ಪಂಚಾಯಿತಿ ಕಾರ್ಯದರ್ಶಿ	1	
ಸ್ವಯಂ ಸೇವಾಸಂಘದ ಪ್ರತಿನಿಧಿ	1	
ಅರಣ್ಯಾಧಿಕಾರಿ (ಸದಸ್ಯ ಕಾರ್ಯದರ್ಶಿ)	1	

	ಇಲಾಖೆಯಲ್ಲಿರುವ ಅರಣ್ಯೇತರ ಪಾಳುಭೂಮಿ. ಈ ಭೂಮಿ ಸಂಪೂರ್ಣವಾಗಿ ಸರ್ಕಾರದ ಆಸ್ತಿ. ಭೂಮಿಯ ಮೇಲೆ ಗ್ರಾಮ ಅರಣ್ಯ ಸಮಿತಿಗೆ ಯಾವುದೇ ಹಕ್ಕಿಲ್ಲ. ಆದರೆ ಈ ಅರಣ್ಯ ಭೂಮಿಯ ಉತ್ಪನ್ನಗಳ ಮೇಲೆ ಸಮಿತಿಯ ಸದಸ್ಯರಿಗೆ ಫಲಾನುಭವದ ಹಕ್ಕುಂಟು.
8. ಉತ್ಪನ್ನಗಳ ಹಂಚಿಕೆ	: ಫಲಾನುಭವಿಗಳಿಗೆ ಹುಲ್ಲು, ಸೊಪ್ಪು, ಸೌದೆ, ರೆಂಬೆ, ಕೊಂಬೆಗಳು, ಸವರಿದ ಭಾಗಗಳು ಉಚಿತ. ಅಂತಿಮ ಕೊಯ್ಲಿನ ಉತ್ಪನ್ನಗಳು ಗ್ರಾಮ ಅರಣ್ಯ ಸಮಿತಿ ಮತ್ತು ಅರಣ್ಯ ಇಲಾಖೆಯ ನಡುವೆ 50 : 50 ಪ್ರಮಾಣದಲ್ಲಿ ಹಂಚಿಕೆ. ಗ್ರಾಮ ಅರಣ್ಯ ಸಮಿತಿಯ 50% ಭಾಗದಲ್ಲಿ ಸೇರಿದ 25% ಭಾಗ ಗ್ರಾಮ ಅರಣ್ಯ ಅಭಿವೃದ್ಧಿ ನಿಧಿಗೆ. ಉಳಿದದ್ದು ಅರಣ್ಯ ಸಮಿತಿಯ ಸದಸ್ಯರಿಗೆ ಸಮಪ್ರಮಾಣ ದಲ್ಲಿ ಅಥವಾ ಗ್ರಾಮ ಅಭಿವೃದ್ಧಿ ನಿಧಿಗೆ.
9. ಸೌಹಾರ್ದ ಒಡಂಬಡಿಕೆ	: ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಯ ಪ್ರತಿನಿಧಿಯಾದ ನಿರ್ವಹಣಾ ಸಮಿತಿಯ ನಡುವೆ.
10. ಧನಸಹಾಯ	: ಸದಸ್ಯತ್ವದ ಹಣ, ಅರಣ್ಯ ಇಲಾಖೆಯಿಂದ ಬಂದ ಪ್ರಾರಂಭಿಕ ಹಣ, ಉತ್ಪನ್ನಗಳ ಹರಾಜಿನಿಂದ ಬಂದ ಆದಾಯ ಹಾಗೂ ಇನ್ನಿತರ ನೆರವು, ಸಾಲಗಳಿಂದ ಒಟ್ಟಾದ ಹಣವೇ ಗ್ರಾಮೀಣ ಅರಣ್ಯ ಅಭಿವೃದ್ಧಿನಿಧಿ.
11. ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ	: ಸಮುದಾಯದ ಅಗತ್ಯಗಳಿಗನುಸಾರವಾಗಿ ಗ್ರಾಮ ಅರಣ್ಯ ಸಮಿತಿ, ಅರಣ್ಯ ಇಲಾಖೆಯೊಡನೆ ಸಮಾಲೋಚಿಸಿ ಬೆಳೆಸಬೇಕಾದ ಸಸ್ಯಪ್ರಭೇದಗಳನ್ನು ಆಯ್ಕೆಮಾಡುತ್ತದೆ.
12. ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳ ಹಕ್ಕುಗಳು	: ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿರುವ ಕುಟುಂಬ ಗಳು ಅರಣ್ಯ ಪ್ರದೇಶವನ್ನು ಪ್ರವೇಶಿಸಿ, ಸ್ವಂತ ಉಪಯೋಗಕ್ಕಾಗಿ ಹಣ್ಣು, ಹುಲ್ಲು, ನೆಲಕ್ಕೆ ಬಿದ್ದ ರೆಂಬೆಕೊಂಬೆಗಳನ್ನು ಸಂಗ್ರಹಿಸಬಹುದು.
13. ದಾಖಲೆಗಳ ಜವಾಬ್ದಾರಿ	: ಅರಣ್ಯ ಸಮಿತಿಯ ನಿಧಿ, ಲೆಕ್ಕಪತ್ರವ್ಯವಸ್ಥೆ, ಸಭೆಯ ನಡಾವಳಿಗಳು ಮುಂತಾದವುಗಳ ಜವಾಬ್ದಾರಿ ಸದಸ್ಯ ಕಾರ್ಯದರ್ಶಿಯಾದ ಅರಣ್ಯರಕ್ಷಕ ಅಥವಾ ಅರಣ್ಯ ಸಿಬ್ಬಂದಿಯದು.
14. ಮಹಿಳೆಯರ ಭಾಗವಹಿಸುವಿಕೆ	: ಕುಟುಂಬವನ್ನು ಪ್ರತಿನಿಧಿಸಿದಾಗ ಮಹಿಳೆಯರು ಅರಣ್ಯ ಸಮಿತಿಯ ಸದಸ್ಯರು. ನಿರ್ವಹಣಾ ಸಮಿತಿಯಲ್ಲಿ ಕನಿಷ್ಠ ಪಕ್ಷ ಇಬ್ಬರು ಮಹಿಳೆಯರು.
15. ಮೇಲ್ವಿಚಾರಣೆ	: ಕನಿಷ್ಠ ಪಕ್ಷ ಆರು ತಿಂಗಳಿಗೊಮ್ಮೆ ಜಿಲ್ಲಾ ಅರಣ್ಯಾಧಿಕಾರಿ ಅರಣ್ಯಸಮಿತಿಯ ಸಭೆಯಲ್ಲಿ ಭಾಗವಹಿಸಬೇಕು.
16. ಜಂಟಿ ಅರಣ್ಯ ನಿರ್ವಹಣಾ ಯೋಜನೆ	: ಗ್ರಾಮ ಅರಣ್ಯ ಸಮಿತಿ ಮತ್ತು ಅರಣ್ಯ ಇಲಾಖೆ ಸೇರಿ ಮಾಡಿರುವ, 5 ವರ್ಷಗಳ ಅವಧಿಯ ಯೋಜನೆ. ಸರ್ವಸದಸ್ಯರ ಸಭೆಯಲ್ಲಿ ಒಪ್ಪಿಗೆ ಪಡೆದ ನಂತರ ಯೋಜನೆಗೆ ಅಂತಿಮ ಒಪ್ಪಿಗೆ ಜಿಲ್ಲಾ ಅರಣ್ಯಾಧಿಕಾರಿ ಯಿಂದ.

17. ಸರ್ಕಾರೇತರ ಸಂಘಟನೆಗಳ ಪಾತ್ರ	:	ಜಂಟೀ ಅರಣ್ಯ ಯೋಜನೆಯ ಒಳಿತಿನ ದೃಷ್ಟಿಯಿಂದ ಅರಣ್ಯ ಸಮಿತಿಗಳ ಸಂಘಟನೆ, ಪ್ರೇರೇಪಣೆ, ಕಾರ್ಯಾಚರಣೆಗಳಲ್ಲಿ ಭಾಗವಹಿಸಬಹುದು. ಆದರೆ ಸರ್ಕಾರೇತರ ಸಂಸ್ಥೆಗಳು ಫಲಾನುಭವಿಗಳಾಗಲು ಸಾಧ್ಯವಿಲ್ಲ.

ಮೂಲ : ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ / ಎ. ಹೆಚ್. ಎಫ್. ಎಸ್ 232. ಎಫ್. ಎ. ಪಿ. 86 : ಬೆಂಗಳೂರು ದಿನಾಂಕ : 12-04-93

ಕೋಷ್ಟಕ : 4

ಅರಣ್ಯ ನೀತಿಯಲ್ಲಿನ ಮಹತ್ವದ ವ್ಯತ್ಯಾಸಗಳು

ಹಿಂದಿನ ಅರಣ್ಯನೀತಿ	1988 ರ ಅರಣ್ಯ ನೀತಿ ಮತ್ತು ಜಂಟೀ ಅರಣ್ಯ ಯೋಜನೆ
ಕೇಂದ್ರೀಕೃತ ನಿರ್ವಹಣೆ	ವಿಕೇಂದ್ರೀಕೃತ ನಿರ್ವಹಣೆ
ಆದಾಯಗಳಿಸುವ ಗುರಿ	ಸಂಪನ್ಮೂಲ ಬೆಳೆಸುವ ಗುರಿ
ಅತಿ ಹೆಚ್ಚಿನ ಉತ್ಪಾದನೆಯೇ	ತಾಳಿಕೆಯ ಉತ್ಪಾದನೆ (ಸಸ್ಟೈನಬಲ್ ಪ್ರೊಡಕ್ಷನ್)
ಮುಖ್ಯ ಉದ್ದೇಶ	ಮತ್ತು ತಾಳಿಕೆಯ ಬಳಕೆ.
ವೈವಿಧ್ಯವಿಲ್ಲದ ಉತ್ಪನ್ನ	ವಿವಿಧ ಉತ್ಪನ್ನಗಳು
ಬೃಹತ್ ಕಾರ್ಯಯೋಜನೆ	ಕಿರುಯೋಜನೆ
(ವರ್ಕಿಂಗ್ ಪ್ಲಾನ್)	(ಮೈಕ್ರೋ ಪ್ಲಾನ್)
ಏಕ ಪಕ್ಷೀಯ ನಿರ್ಧಾರ	ಸಹಭಾಗಿತ್ವ ನಿರ್ಧಾರ
ಶಿಕ್ಷಾತ್ಮಕ ನಿಯಮಗಳು	ಜನರೇ ರೂಪಿಸಿಕೊಂಡ ನಿಯಮಗಳು
ಜನರ ನಿಯಂತ್ರಣಕ್ಕೆ ಹೆಚ್ಚಿನ ಒತ್ತು	ಜನರ ಅನುಕೂಲಕ್ಕೆ ಮಹತ್ವ
ಏಕ ರೂಪದ ನಿರ್ವಹಣೆ	ಸ್ಥಳ ನಿಗದಿತ ನಿರ್ವಹಣೆ
ಮೊದಲ ಆದ್ಯತೆ ನೆಡುತೋಪುಗಳಿಗೆ	ಪುನರುಜ್ಜೀವನಕ್ಕೆ

ಮೂಲ : ಸೊಸೈಟಿ ಫಾರ್ ಪ್ರಮೋಶನ್ ಆಫ್ ವೇಸ್ಟ್‌ಲ್ಯಾಂಡ್

ಕೋಷ್ಟಕ 5

ವಿದೇಶೀ ನೆರವಿನ ಅರಣ್ಯ ಯೋಜನೆಗಳು

ಯೋಜನೆ	ನೆರವು ನೀಡಿದ ಸಂಸ್ಥೆ	ಮೊತ್ತ (ಕೋಟಿ ರೂ.ಗಳಲ್ಲಿ)	ಅವಧಿ	ಸಹಭಾಗಿತ್ವದ ಅಂಶ	ಮೀಸಲಾದ ಹಣ ಕೋಟಿ ರೂ.ಗಳಲ್ಲಿ
1.ಪಶ್ಚಿಮ ಬಂಗಾಲದ ಅರಣ್ಯ ಯೋಜನೆ	ವಿಶ್ವಬ್ಯಾಂಕ್	114	1992-97	ಜಂಟೀ ಆರಣ್ಯ ಯೋಜನೆಯ ಮೂಲಕವಾಗಿ ಅವನತಿ ಹೊಂದಿದ ಅರಣ್ಯ ಮತ್ತು ಮ್ಯಾಂಗ್ರೋವ್ ಅರಣ್ಯಗಳ ಪುನರುಜ್ಜೀವನ	46.4
2. ಮಹಾರಾಷ್ಟ್ರದ ಅರಣ್ಯ ಯೋಜನೆ	ವಿಶ್ವಬ್ಯಾಂಕ್	431	1992-98	ಇಕೋ-ಡೆವಲಪ್‌ಮೆಂಟ್	20.8
3. ಆಂಧ್ರಪ್ರದೇಶದ ಅರಣ್ಯ ಯೋಜನೆ	ವಿಶ್ವಬ್ಯಾಂಕ್	354	1994-2000	ಅವನತಿ ಹೊಂದಿದ ಅರಣ್ಯಗಳ ಪುನರುಜ್ಜೀವನ ಹಾಗೂ ಜಂಟೀ ಅರಣ್ಯ ಯೋಜನೆಗೆ ಬೆಂಬಲ	10.1
4. ಮಧ್ಯಪ್ರದೇಶದ ಅರಣ್ಯ ಯೋಜನೆ	ವಿಶ್ವಬ್ಯಾಂಕ್	246	1995-99	ಅರಣ್ಯ ಪುನರುಜ್ಜೀವನ ಹಾಗೂ ಗ್ರಾಮೀಣ ಸಂಪನ್ಮೂಲದ ಅಭಿವೃದ್ಧಿ	146.8
5. ರಾಜಾಸ್ಥಾನದ ಅರಣ್ಯೀಕರಣ ಹಾಗೂ ಇಂದಿರಾ ಗಾಂಧಿ ಕಾಲುವೆ ಯುದ್ದಕ್ಕೂ ಹುಲ್ಲು ಗಾವಲಿನ ಅಭಿವೃದ್ಧಿ	ಒಇಸಿಎಫ್ ಜಪಾನ್	107	1990-2000	ಲಭ್ಯವಿಲ್ಲ	--
6. ರಾಜಾಸ್ಥಾನದ ಅರಾವಳಿ ಶ್ರೇಣಿ ಯಲ್ಲಿ ಅರಣ್ಯೀಕರಣ ಯೋಜನ	ಒಇಸಿಎಫ್ ಜಪಾನ್	167	1992-97	ಬಂಜರು ಬೆಟ್ಟಗಳ ಅರಣ್ಯೀಕರಣ. ಅವನತಿ ಹೊಂದಿದ ಅರಣ್ಯಗಳ ಪುನರು ಜ್ಜೀವನ ಹಾಗೂ ಊರೊಟ್ಟಿನ	97.1

				ಭೂಮಿಯಲ್ಲಿ ನೆಡುತೋಪುಗಳು	
7. ರಾಜಾಸ್ಥಾನದ ಅರಣ್ಯ ಯೋಜನೆ	ಒಇಸಿಎಫ್ ಜಪಾನ್	139	1995-2000	ಬಂಜರು ಬೆಟ್ಟಗಳ ಅರಣ್ಯೀಕರಣ ಅವನತಿ ಹೊಂದಿದ ಅರಣ್ಯಗಳ, ಊರೊಟ್ಟಿನ ಭೂಮಿಗಳ ಪುನರುಜ್ಜೀವನ, ಉರುವಲು ಹಾಗೂ ಅರಣ್ಯಕೃಷಿ-ಗ್ರಾಮೀಣ ನೆಡು ತೋಪುಗಳು	50
8. ಹರ‍್ಯಾನದ ಅರಾವಳಿ ಶ್ರೇಣಿ, ಊರೊಟ್ಟಿನ ಭೂಮಿಗಳ ಪುನರುಜ್ಜೀವನ	ಯೂರೋಪಿಯನ್ ಯೂನಿಯನ್	48.1	1990-97	ನೆಡುತೋಪಿನ ಚಟುವಟಿಕೆಗಳು	48.1
9. ಕರ್ನಾಟಕದ ಪಶ್ಚಿಮಘಟ್ಟ ಅರಣ್ಯ ಯೋಜನೆ	ಒಡಿಎ ಯುಕೆ.	105	1993-99	ಜಂಟೀ ಆರಣ್ಯ ಯೋಜನೆ, ಸಹಭಾಗಿತ್ವ ಅರಣ್ಯ ಯೋಜನೆಗೆ ನೆರವು	53.4
10. ಹಿಮಾಚಲ ಪ್ರದೇಶ ಕುಲ್ಲುಮಂಡಿ ಅರಣ್ಯ ಯೋಜನೆ	ಒಡಿಎ ಯುಕೆ	13	1994-97	ಅರಣ್ಯೀಕರಣ ಕೆಲಸಗಳು ಹಾಗೂ ಜಂಟೀ ಅರಣ್ಯ ಯೋಜನೆಗೆ ಬೆಂಬಲ	5.4

ಅಧಾರ : ಸೊಸೈಟಿ ಫಾರ್ ಪ್ರಮೋಶನ್ ಆಫ್ ವೇಸ್ಟ್‌ಲ್ಯಾಂಡ್ ಡೆವಲಪಮೆಂಟ್, 1997

ಕೋಷ್ಟಕ 6

ಅಭಿವೃದ್ಧಿಯೋಜನೆಗಳ ರಾಜಕೀಯ ಕಾರ್ಯಸಾಧ್ಯತೆ

ಸ್ವರೂಪ ಸಂಖ್ಯೆ	ಪ್ರತಿಷ್ಠಿತರಿಗೆ	ಬಡಜನತೆಗೆ	ಯೋಜನೆಗಳ ರಾಜಕೀಯ ಕಾರ್ಯಸಾಧ್ಯತೆ
1	ಲಾಭದಾಯಕ	ಪ್ರಯೋಜನರಹಿತ	ಕಡಿಮೆ
2	ಲಾಭದಾಯಕ	ಲಾಭದಾಯಕ	ಹೆಚ್ಚು
3	ಯಾವುದೇ ಬದಲಾವಣೆ ಇಲ್ಲ	ಲಾಭದಾಯಕ	ಹೆಚ್ಚು
4	ಪ್ರಯೋಜನ ರಹಿತ	ಲಾಭದಾಯಕ	ಕಡಿಮೆ

ಮೂಲ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್‌ಮಿನಿಸ್ಟ್ರೇಷನ್, ಜುಲೈ, 2001

ಟಿಪ್ಪಣಿಗಳು

1. ಪೆರೀರಾ, ಡಬ್ಲ್ಯೂ ಅಂಡ್ ಸೀಬ್ರೂಕ್,ಜೆ. ಆಸ್ಕಿಂಗ್‌ದಿ ಅರ್ತ್ :ಫಾರಮ್ಸ್ ಫಾರೆಸ್ಟ್ರಿ ಅಂಡ್ ಸರ್ವೈವಲ್ ಇನ್ ಇಂಡಿಯಾ, ಲಂಡನ್ : ಅರ್ತಸ್ಕ್ಯಾನ್, 1990.

2. ನೇಗಿ, ಎಸ್., ಇಂಡಿಯನ್ ಫಾರೆಸ್ಟ್ರಿ ತ್ರೂ ದಿ ಏಜಸ್, ಡೆಲ್ಲಿ: ಇಂಡಸ್ ಪಬ್ಲಿಶಿಂಗ್ ಕಂಪನಿ, 1994.

3. ಸ್ಟೆಬಿಂಗ್, ಇ.ಪಿ. ದಿ ಫಾರೆಸ್ಟ್ಸ್ ಆಫ್ ಇಂಡಿಯಾ, ಲಂಡನ್: ಜಾನ್ ಲೇನ್, 1926.

4. ಸಕ್ಸೇನಾ, ಎನ್.ಸಿ. ದಿ ಸಾಗಾ ಆಫ್ ಪಾರ್ಟಿಸಿಪೇಟರಿ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಇನ್ ಇಂಡಿಯಾ, ಇಂಡೋನೇಷ್ಯಾ: ಸಿ.ಐ.ಎಫ್‌ಓಆರ್ ಸ್ಪೆಶಲ್ ಪಬ್ಲಿಕೇಶನ್, ಜಕಾರ್ತ, 1997.

5. ಭಾರತ ಸರ್ಕಾರ, ಡೆವಲಪ್‌ಮೆಂಟ್ ಆಫ್ ಫಾರೆಸ್ಟ್ರಿ ಅಂಡ್ ಫಾರೆಸ್ಟ್ ಪ್ರಾಡಕ್ಟ್ಸ್ : ಕಂಟ್ರಿಪ್ರೊಫೈಲ್ ಇಂಡಿಯಾ, ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಅಗ್ರಿಕಲ್ಚರ್, ನ್ಯೂಡೆಲ್ಲಿ,1981.

6. ಮಾಧವ ಗಾಡ್ಗೀಳ್ ಅಂಡ್ ರಾಮಚಂದ್ರ ಗುಹಾ, ದಿ ಫಿಶೂರ್ಡ್ ಲ್ಯಾಂಡ್ : ಆನ್ ಇಕಾಲಾಜಿಕಲ್ ಹಿಸ್ಟರಿ ಆಫ್ ಇಂಡಿಯಾ, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1992.

7. ಭಾರತ ಸರ್ಕಾರ , ರಿಪೋರ್ಟ್ ಆಫ್‌ದಿ ನ್ಯಾಷನಲ್ ಕಮೀಷನ್ ಆನ್ ಅಗ್ರಿಕಲ್ಚರ್ : ಪಾರ್ಟ್ XI, ಫಾರೆಸ್ಟ್ರಿ, ನ್ಯೂಡೆಲ್ಲಿ: ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರ್ ಅಂಡ್ ಕೋ ಆಪರೇಶನ್, 1976.

8. ಭಾರತ ಸರ್ಕಾರ, 1976, ರಿಪೋರ್ಟ್ ಆಫ್ ದಿ ನ್ಯಾಷನಲ್ ಕಮಿಷನ್ ಆನ್ ಆಗ್ರಿಕಲ್ಚರ್, ಪು.32

9. ಮಾರ್ಕ್ ಪೋಫೆನ್ ಬರ್ಗರ್, "ವ್ಯಾಲ್ಯೂಯಿಂಗ್ ಫಾರೆಸ್ಟ್", ವಿಲೇಜ್ ವಾಯ್ಸಸ್, ಫಾರೆಸ್ಟ್ ಚಾಯ್ಸಸ್, ಮಾರ್ಕ್‌ಪೋಫೆನ್ ಬರ್ಗರ್ ಅಂಡ್ ಬೆಟ್ಸಿಮ್ಯಾಕ್‌ಗೀನ್(ಸಂ), ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರಿಸ್, 1996.

10. ಸಕ್ಸೇನಾ, ಎನ್ ಸಿ., ದಿ ಸಾಗಾ ಆಫ್ ಪಾರ್ಟಿಸಿಪೇಟರಿ ಫಾರೆಸ್ಟ್ ಮ್ಯಾನೇಜ್‌ಮೆಂಟ್, ಪು.7.

11. ಭಾರತ ಸರ್ಕಾರ, ನ್ಯಾಷನಲ್ ಫಾರೆಸ್ಟ್‌ಪಾಲಿಸಿ, *1988*, ನ್ಯೂಡೆಲ್ಲಿ : ಮಿನಿಸ್ಟ್ರಿ ಆಫ್ ಎನ್‌ವೈರನ್‌ಮೆಂಟ್ ಅಂಡ್ ಫಾರೆಸ್ಟ್ಸ್, 1988

12. ಭಾರತ ಸರ್ಕಾರ, ನ್ಯಾಷನಲ್ ಫಾರೆಸ್ಟ್‌ಪಾಲಿಸಿ, 1988, ಪು.49

13. ಭಾರತ ಸರ್ಕಾರ, ಇನ್ ವಾಲ್ವ್‌ಮೆಂಟ್ ಆಫ್ ವಿಲೇಜ್ ಕಮ್ಯೂನಿಟೀಸ್ ಅಂಡ್ ವಾಲಂಟರಿ ಏಜೆನ್ಸೀಸ್ ಫಾರ್ ರೀಜನರೇಶನ್ ಆಫ್ ಡಿಗ್ರೇಡೆಡ್ ಫಾರೆಸ್ಟ್ ಲ್ಯಾಂಡ್ಸ್, ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಎನ್‌ವೈರನ್‌ಮೆಂಟ್ ಅಂಡ್ ಫಾರೆಸ್ಟ್, 1990.

14. ಸಿಂಗ್, ಆರ್. ಪಿ., "ಪೀಪಲ್ಸ್ ಪಾರ್ಟಿಸಿಪೇಶನ್ ಇನ್ ಫಾರೆಸ್ಟ್ ಮ್ಯಾನೇಜ್‌ಮೆಂಟ್", ವೇಸ್ಟ್‌ಲ್ಯಾಂಡ್ ನ್ಯೂಸ್, ಸಂ.8 ನಂ :4 ಮೇ - ಜುಲೈ, 1993, ಪು.72-84.

15. ಮಾರ್ಕ್ ಪೋಫೆನ್ ಬರ್ಗರ್, ವಿಲೇಜ್ ವಾಯ್ಸಸ್, ಫಾರೆಸ್ಟ್ ಚಾಯ್ಸಸ್, ಪು.26

16. ಸಕ್ಸೇನಾ, ಎನ್ ಸಿ., 1997, ದಿ ಸಾಗಾ ಆಫ್ ಪಾರ್ಟಿಸಿಪೇಟರಿ ಫಾರೆಸ್ಟ್ ಮ್ಯಾನೇಜ್‌ಮೆಂಟ್, ಪು.99

17. ಸಕ್ಸೇನಾ, ಎನ್.ಸಿ. ಅಂಡ್ ಮಧುಸರೀನ್, "ದಿ ವೆಸ್ಟರ್ನ್‌ಘಾಟ್ಸ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಇನ್ ಕರ್ನಾಟಕ : ಎ ಪ್ರಿಲಿಮಿನರಿ ಅಸೆಸ್‌ಮೆಂಟ್" ಎ ನ್ಯೂ

ಮಾರಲ್ ಇಕಾನಮಿ ಫಾರ್ ಇಂಡಿಯಾಸ್ ಫಾರೆಸ್ಟ್? ರೋಜರ್ ಜೆಫ್ರಿ ಅಂಡ್ ನಂದಿನಿ ಸುಂದರ್(ಸಂ) ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1999.

18, ರಾಮಲಿಂಗೇಗೌಡ, ಎಸ್. ಕೆ., ''ದಿ ಸ್ಟೇಟಸ್ ಆಫ್ ಜೆ ಎಫ್ ಪಿ ಎಮ್ ಪ್ರೋಗ್ರಾಮ್ ಇನ್ ಕರ್ನಾಟಕ ಅಂಡ್ ರೋಲ್ ಆಫ್ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಇನ್ ಸಸ್ಟೈನಬಲ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಬೈ ಕಮ್ಯೂನಿಟೀಸ್ ಅಂಡ್ ಸ್ಟೇಕ್ ಹೋಲ್ಡರ್ಸ್'' ಸ್ಟೇಟಸ್ ಪೇಪರ್ ಆನ್ ಜೆಎಫ್‌ಪಿಎಮ್ ಇನ್ ಕರ್ನಾಟಕ, ಬೆಂಗಳೂರು: ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್, 2002

19. ಟಾಟಾ ಎನರ್ಜಿ ರಿಸರ್ಚ್ ಇನ್‌ಸ್ಟಿಟ್ಯೂಟ್, ನ್ಯಾಷನಲ್ ಸ್ಟಡೀ ಆನ್ ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಅಂಡ್ ಕಮ್ಯೂನಿಟಿ ಫಾರೆಸ್ಟ್ರಿ ಇನ್ ಇಂಡಿಯಾ, ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಎನ್‌ವೈರನ್‌ಮೆಂಟ್ ಆಂಡ್ ಫಾರೆಸ್ಟ್, 1995.

20. ಸಕ್ಸೇನಾ, ಎನ್. ಸಿ., ಅಂಡ್ ಮಧುಸರೀನ್, ''ದಿ ವೆಸ್ಟರ್ನ್‌ಘಾಟ್ಸ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಇನ್ ಕರ್ನಾಟಕ : ಎ ಪ್ರಿಲಿಮಿನರಿ ಅಸೆಸ್‌ಮೆಂಟ್'', ಪು.201

21. ಭಟ್, ಪಿ. ಆರ್. ಮತ್ತು ಇತರರು, ''ಜಾಯಿಂಟ್ ಫಾರೆಸ್ಟ್ ಪ್ಲಾನಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಇನ್ ಉತ್ತರ ಕನ್ನಡ'', ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಅಂಡ್ ಕಮ್ಯುನಿಟಿ ಫಾರೆಸ್ಟ್ರಿ ಇನ್ ಇಂಡಿಯಾ, ಎನ್.ಹೆಚ್.ರವೀಂದ್ರನಾಥ, ಕೆ. ಎಸ್.ಮುರುಳಿ, ಕೆ.ಸಿ.ಮಲ್ಹೋತ್ರ(ಸಂ), ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಅಂಡ್ ಐಬಿಎಚ್ ಪಬ್ಲಿಸಿಂಗ್, 2000

22. ಔಟ್ ರೀಚ್, ಸೋಶಿಯಲ್ ಇಂಪಾಕ್ಟ್ ಸ್ಟಡಿ ಫಾರ್ ಡಿಪಾರ್ಟ್‌ಮೆಂಟ್ ಆಫ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಅಂಡ್ ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಆನ್ ವೆಸ್ಟರ್ನ್‌ಘಾಟ್ ಜೆಎಫ್‌ಪಿಎಮ್ ಪ್ರೋಗ್ರಾಮ್ ಇನ್ ಕರ್ನಾಟಕ, ಬೆಂಗಳೂರು : ಔಟ್‌ರೀಚ್, 1998.

23. ಔಟ್‌ರೀಚ್, 1998, ಪೂರ್ವೋಕ್ತ, ಪು.22

24. ಮಧುಸರೀನ್, ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್: ದಿ ಹರ್‍ಯಾನ ಎಕ್ಸ್‌ಪೀರಿಯನ್ಸ್, ಅಹಮದಾಬಾದ್ : ಸೆಂಟರ್ ಫಾರ್ ಎನ್‌ವೈರನ್‌ಮೆಂಟ್ ಎಜುಕೇಶನ್, 1996.

25. ಮಾರ್ಕ್ ಪೋಫೆನ್ ಬರ್ಗರ್, ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಇನ್ ವೆಸ್ಟ್ ಬೆಂಗಾಲ್: ದಿ ಪ್ರೋಸೆಸ್ ಆಫ್ ಏಜೆನ್ಸಿ ಚೇಂಜ್ : ವರ್ಕಿಂಗ್ ಪೇಪರ್ ನಂ.3 ನ್ಯೂಡೆಲ್ಲಿ: ಪೋರ್ಡ ಫೌಂಡೇಶನ್, 1996.

26. ಮಂಜು ಎಸ್. ರಾಜು ''ವಿಮೆನ್ ಇನ್ ಪೀಪಲ್ಸ್ ಇನ್ಸ್‌ಟಿಟ್ಯೂಶನ್ಸ್ ಫಾರ್ ಮ್ಯಾನೇಜ್‌ಮೆಂಟ್'' ಪೀಪಲ್ಸ್ ಇನ್ಸ್‌ಟಿಟ್ಯೂಶನ್ಸ್ ಫಾರ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಜಿ. ರಾಜು(ಸಂ), ಅಹಮದಾಬಾದ್: ಸೆಂಟರ್ ಫಾರ್ ಎನ್‌ವೈರನ್‌ಮೆಂಟ್ ಎಜ್ಯುಕೇಶನ್, 1994

27. ಜಿ.ರಾಜು, ''ಸಿಕ್ಸ್ ಬೇಸಿಕ್ ಟ್ರೈಟ್ಸ್ ಆಫ್ ಕಮ್ಯೂನಿಟಿ ಲೆವಲ್ ಇನ್ಸ್‌ಟಿಟ್ಯೂಶನ್ಸ್'', ಪೀಪಲ್ಸ್ ಇನ್ಸ್‌ಟಿಟ್ಯೂಶನ್ಸ್ ಫಾರ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಜಿ.ರಾಜು(ಸಂ). ಅಹಮದಾಬಾದ್ : ಸೆಂಟರ್ ಫಾರ್ ಎನ್‌ವೈರನ್‌ಮೆಂಟ್ ಎಜುಕೇಶನ್, 1994

ಅಧ್ಯಾಯ 3

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿ ತತ್ವಗಳು

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿ ತತ್ವಗಳು

ಕರ್ನಾಟಕದಲ್ಲಿ ಜಂಟೀ ಅರಣ್ಯ ಯೋಜನೆಯ ವೈಫಲ್ಯ ಮತ್ತು ಸೀಮಿತ ಯಶಸ್ಸುಗಳಿಗೆ ಕಾರಣಗಳನ್ನು ಗುರುತಿಸುವಾಗ ಯಾವ ಸಂಶೋಧಕರೂ ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ ಅನುಷ್ಠಾನಗೊಂಡ ಸಮಯಕ್ಕಿಂತ ಹಿಂದೆ, ಅಂದರೆ 1992ಕ್ಕಿಂತ ಹಿಂದೆ ಹೋಗುವುದಿಲ್ಲ ವೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಪಶ್ಚಿಮಘಟ್ಟ ಯೋಜನೆಯ ಪ್ರಸ್ತಾಪ ಬಂದದ್ದು 1988ರಲ್ಲಿ. ಯೋಜನೆ ಪ್ರಾರಂಭವಾದದ್ದು 1992ರಲ್ಲಿ. ಜಂಟೀ ಅರಣ್ಯ ಯೋಜನೆ ಹಾಗೂ ಅದರಲ್ಲಿನ ಸಹಭಾಗಿತ್ವ ಅಭಿವೃದ್ಧಿಯ ತತ್ವಗಳು ರೂಪುಗೊಂಡು ಪಶ್ಚಿಮಘಟ್ಟ ಯೋಜನೆಯಲ್ಲಿ ಅಳವಡಿಕೆಯಾಗಿದ್ದು ಈ ನಾಲ್ಕು ವರ್ಷಗಳ ಅವಧಿಯಲ್ಲಿ ಈ ಪ್ರಕ್ರಿಯೆಯಲ್ಲಿನ ಮುಖ್ಯ ಪಾತ್ರಧಾರಿಗಳೆಂದರೆ ಕರ್ನಾಟಕ ಅರಣ್ಯ ಇಲಾಖೆ, ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ, ಸ್ಥಳೀಯ ಸಮುದಾಯ ಮತ್ತು ಕರ್ನಾಟಕದ ಸರ್ಕಾರೇತರ ಸಂಸ್ಥೆಗಳು. ಈ ಪಾತ್ರಧಾರಿಗಳ ನಡುವೆ ನಡೆದ ಚರ್ಚೆ, ಸಮಾಲೋಚನೆ, ಸಂಧಾನ, ಒಪ್ಪಂದ, ಪ್ರತಿಭಟನೆ ಮುಂತಾದವುಗಳಲ್ಲೇ ಜಂಟೀ ಅರಣ್ಯ ಯೋಜನೆಯ ಮೂಲಭೂತ ದೌರ್ಬಲ್ಯಗಳಿರಬಾರದೇಕೆ ಎಂಬ ಪ್ರಶ್ನೆಯನ್ನು ಈ ಅಧ್ಯಯನ ಎತ್ತಿದೆ. ಈ ಮುಖ್ಯ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಉದ್ದೇಶದಿಂದ, ನಾಲ್ಕು ವರ್ಷಗಳ ಅವಧಿಯಲ್ಲಿ, ಈ ನಾಲ್ಕು ಮುಖ್ಯ ಪಾತ್ರಧಾರಿಗಳು ಭಾಗವಹಿಸಿದ್ದ ಘಟನೆಗಳನ್ನು ಈ ಅಧ್ಯಾಯದಲ್ಲಿ ವಿಮರ್ಶಾತ್ಮಕವಾಗಿ ಪರಿಶೀಲಿಸಲಾಗಿದೆ.

ಯೋಜನಾ ಪ್ರಸ್ತಾಪ

1988ರ ಜುಲೈ ತಿಂಗಳಿನಲ್ಲಿ, ಕರ್ನಾಟಕ ಅರಣ್ಯ ಇಲಾಖೆ, ರಾಜ್ಯ ಸರ್ಕಾರದ ಮೂಲಕವಾಗಿ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗೆ (ಓವರ್ ಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಶನ್) ಅರಣ್ಯಾಭಿವೃದ್ಧಿ ಯೋಜನೆಯೊಂದನ್ನು, ಆರ್ಥಿಕ ನೆರವಿಗಾಗಿ ಸಲ್ಲಿಸಿತು. 'ಪ್ರಾಜೆಕ್ಟ್ ರಿಪೋರ್ಟ್ ಆನ್ ಇಂಟೆಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಫಾರೆಸ್ಟ್ಸ್ ಇನ್ ವೆಸ್ಟರ್ನ್ ಘಾಟ್ಸ್' ಎಂಬ ಶೀರ್ಷಿಕೆಯ ಈ ಪ್ರಸ್ತಾಪದ ಮುಖ್ಯ ಉದ್ದೇಶ ಪಶ್ಚಿಮ ಘಟ್ಟ ಪ್ರದೇಶದಲ್ಲಿ ವ್ಯಾಪಕವಾದ ಅರಣ್ಯ ಬೆಳೆಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿತ್ತು. ''ಪಶ್ಚಿಮ ಘಟ್ಟಗಳ ಶ್ರೇಣಿಯ ಉದ್ದಕ್ಕೂ 'ಮುಕ್ತ ಬಳಕೆಗಾಗಿ ತೆರೆದಿಟ್ಟ ಸಂಪನ್ಮೂಲ'ದಂತಿರುವ (ಓಪನ್ ಆ್ಯಕ್ಸಸ್ ರಿಸೋರ್ಸ್) ಅರಣ್ಯಗಳು,

ಸ್ಥಳೀಯ ಜನರ ತೀವ್ರ ಸ್ವರೂಪದ ಅವಲಂಬನೆ ಹಾಗೂ ಅತಿಬಳಕೆಯಿಂದಾಗಿ ತ್ವರಿತಗತಿಯಲ್ಲಿ ನಾಶವಾಗುತ್ತಿವೆ. ಸ್ಥಳೀಯ ಜನರಿಗೆ ನೀಡಿದ್ದ ಸವಲತ್ತುಗಳು ಹಕ್ಕುಗಳ ರೂಪವನ್ನು ತಾಳುತ್ತಿವೆ. ಅರಣ್ಯ ನಾಶದಿಂದಾಗಿ ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಅಂತರ ಹೆಚ್ಚುತ್ತಿದೆ. ಈ ಕೊರತೆಯನ್ನು ತುಂಬುವ ಏಕೈಕ ಮಾರ್ಗವೆಂದರೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಅರಣ್ಯೀಕರಣವನ್ನು ಕೈಗೊಳ್ಳುವುದು.''[1]

ಪಶ್ಚಿಮ ಘಟ್ಟದಲ್ಲಿನ ಅರಣ್ಯಗಳ ಸಮಗ್ರ ಅಭಿವೃದ್ಧಿಗೆ ಕರ್ನಾಟಕ ಅರಣ್ಯ ಇಲಾಖೆ ರೂಪಿಸಿದ ಯೋಜನೆಯಲ್ಲಿ ಈ ಕೆಳಕಂಡ ನಾಲ್ಕು ಮುಖ್ಯ ಅಂಶಗಳಿದ್ದವು.

- ಸ್ಥಳೀಯ ಜನರನ್ನು ಅರಣ್ಯಗಳಿಗೆ ಹೋಗದಂತೆ ನಿರ್ಬಂಧಿಸಿ, ಅರಣ್ಯ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಅವರ ಕನಿಷ್ಠ ಅಗತ್ಯಗಳನ್ನು ಅವರಿಗೆ ಸಮೀಪವಾಗಿಯೇ ಸ್ಥಾಪಿಸಲಾಗುವ ಡಿಪೋಗಳಿಂದ ಪೂರೈಸುವುದು. ಅದನ್ನು ಅವರು ದುಡ್ಡು ಕೊಟ್ಟು ಕೊಳ್ಳಬೇಕು.
- ಸ್ಥಳೀಯ ಜನರನ್ನು ಅರಣ್ಯಗಳಿಗೆ ಹೋಗದಂತೆ ತಡೆದು, ಅರಣ್ಯಗಳ ಮೇಲಿನ ಒತ್ತಡವನ್ನು ನಿಯಂತ್ರಿಸಿದ ನಂತರ, ಬೃಹತ್ ಪ್ರಮಾಣದಲ್ಲಿ ಅರಣ್ಯಾಭಿವೃದ್ಧಿಯ ಕೆಲಸಗಳನ್ನು ಕೈಗೊಳ್ಳುವುದು.
- ಕೃಷಿ ಚಟುವಟಿಕೆಯಿಲ್ಲದಿರುವ ಸಮಯದಲ್ಲಿ ಸ್ಥಳೀಯ ಜನರಿಗೆ ನಿರಂತರವಾಗಿ ಇಲಾಖೆಯ ಕೆಲಸಕಾರ್ಯಗಳಲ್ಲಿ ಕೂಲಿ ದೊರೆಯುವ ಕೆಲಸವನ್ನೊದಗಿಸುವುದು.
- ಬುಡಕಟ್ಟು ಜನಾಂಗದವರಿಗಾಗಿ 'ಸೆಕ್ಯೂರಿಟಿ ನೆಡುತೋಪು'ಗಳನ್ನು (ಸೆಕ್ಯೂರಿಟಿ ಪ್ಲಾಂಟೇಶನ್ಸ್) ಸ್ಥಾಪಿಸುವುದರ ಜೊತೆಗೆ, ಡಿಪೋಗಳಿಂದ ಅವರ ಅಗತ್ಯಗಳನ್ನು ಪುಕ್ಕಟೆಯಾಗಿ ಪೂರೈಸುವುದು.

ಅರಣ್ಯೀಕರಣ, ರಕ್ಷಣೆಯನ್ನು ಬಿಗಿಗೊಳಿಸುವುದು, ಹೆಚ್ಚುವರಿ ಸಿಬ್ಬಂದಿ, ತರಬೇತಿ ಸಂಶೋಧನೆ ಮುಂತಾದವುಗಳಿಗಾಗಿ ಒಟ್ಟು ೫೫ ದಶಲಕ್ಷ ಪೌಂಡುಗಳಷ್ಟು ಧನ ಸಹಾಯವನ್ನು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯಿಂದ ಕೋರಲಾಗಿತ್ತು. ನೈಸರ್ಗಿಕ ಅರಣ್ಯ ಪ್ರದೇಶದಲ್ಲಿ ಆಂಶಿಕವಾಗಿ ಬಯಲಾದ ಜಾಗಗಳಲ್ಲಿ, ಆ ಪ್ರದೇಶದಲ್ಲಿ ಸಹಜವಾಗಿಯೇ ಬೆಳೆಯುವ ಮರಗಿಡಗಳನ್ನು ಬೆಳೆಸುವುದು (ಎನ್‌ರಿಚ್‌ಮೆಂಟ್ ಪ್ಲಾಂಟೇಶನ್ಸ್), ವಾಣಿಜ್ಯೋದ್ದೇಶದ ಶ್ರೀಗಂಧ ಹಾಗೂ ತೇಗಗಳ ನೆಡುತೋಪುಗಳು, ಸ್ಥಳೀಯ ಅಗತ್ಯಗಳನ್ನು ಪೂರೈಸಲು ಉರುವಲು ಸೌದೆಯ ನೆಡುತೋಪುಗಳು, ಬುಡಕಟ್ಟು ಜನರಿಗಾಗಿ ಮಿಶ್ರನೆಡುತೋಪುಗಳು- ಹೀಗೆ ಒಟ್ಟಾರೆಯಾಗಿ 3,55,330 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಬೆಳೆಸುವ ಕಾರ್ಯಕ್ರಮಗಳನ್ನು ರೂಪಿಸಲಾಗಿತ್ತು. (ಕೋಷ್ಟಕ : 1) ಈ ಯೋಜನೆಯ ಬಗ್ಗೆ ಸಾರ್ವಜನಿಕರಿಗಾಗಲೀ, ಮಾಧ್ಯಮಗಳಿಗಾಗಲೀ ಯಾವುದೇ ಮಾಹಿತಿಯೂ ಲಭ್ಯವಿರಲಿಲ್ಲ. ಯೋಜನೆಯನ್ನು ಪರಿಶೀಲಿಸುವ, ಅದರ ಬಗ್ಗೆ ಮಾತುಕತೆ ನಡೆಸುವುದಕ್ಕಿಂತ

ಮುಂಚಿತವಾಗಿ, ಯೋಜನೆಯ ಮುಖ್ಯಾಂಶಗಳನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡುವಂತೆ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಕರ್ನಾಟಕ ಅರಣ್ಯ ಇಲಾಖೆಗೆ ಸೂಚಿಸಿತು. ಯೋಜನೆಯ ವಿವರಗಳನ್ನು ಸಾರ್ವಜನಿಕರ ಅವಲೋಕನೆಗೆ ಒದಗಿಸುವುದರ ಜೊತೆಗೆ, ಪರಿಸರದ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಹಾಗೂ ಸಮುದಾಯವನ್ನು ಸಂಘಟಿಸುವುದರ ಜೊತೆಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ 'ಲಾಬಿ' ಮಾಡುವಲ್ಲಿ ಸಕ್ರಿಯವಾಗಿರುವ 'ಸಮಾಜ ಪರಿವರ್ತನಾ ಸಮುದಾಯ'ವನ್ನು ಯೋಜನೆಯ ಬಗ್ಗೆ ಪ್ರತಿಕ್ರಿಯಿಸುವಂತೆ ಕರ್ನಾಟಕ ಅರಣ್ಯ ಇಲಾಖೆ ಕೇಳಿಕೊಂಡಿತು. ಯೋಜನಾ ಪ್ರಸ್ತಾಪವನ್ನು ವಿಷದವಾಗಿ ಪರಿಶೀಲಿಸಿದ ಸಮಾಜ ಪರಿವರ್ತನಾ ಸಮುದಾಯ "ಇಡೀ ಯೋಜನೆಯಲ್ಲಿ ಗ್ರಾಮೀಣ ಜನರನ್ನು ಅರಣ್ಯ ಇಲಾಖೆಯ ನೆಡುತೋಪುಗಳಲ್ಲಿ ಕೂಲಿಗಾಗಿ ದುಡಿಯುವ ಶ್ರಮಿಕರಂತೆ ಹಾಗೂ ಕೆಲವು ಪ್ರಯೋಜನಗಳನ್ನು ಪಡೆಯುವ ಫಲಾನುಭವಿಗಳಂತೆ ನೋಡಲಾಗಿದೆಯೇ ಹೊರತಾಗಿ, ಯೋಜನೆಯ ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಪ್ರಜೆಗಳಂತಲ್ಲ"[2] ಎಂದು ಅಭಿಪ್ರಾಯಪಟ್ಟಿತು. ಇದಕ್ಕೆ ಪ್ರತಿಯಾಗಿ, ಪಶ್ಚಿಮಘಟ್ಟ ಅರಣ್ಯಯೋಜನೆಯಲ್ಲಿ, ಅರಣ್ಯ ನಿರ್ವಹಣೆಯಲ್ಲಿ ಜನರ ಭಾಗವಹಿಸುವಿಕೆಗೆ ಸಂಬಂಧಪಟ್ಟಂತೆ ನಿರ್ದಿಷ್ಟ ಸಲಹೆಗಳನ್ನು ನೀಡುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಸರ್ಕಾರೇತರ ಸಂಸ್ಥೆಗಳನ್ನು ಕೋರಿದರು. ಈ ಕೋರಿಕೆಯನ್ನು ಒಪ್ಪಿಕೊಂಡ 'ಫೆವಾರ್ಡ್-ಕೆ'ನ ಅಂಗ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಆಸಕ್ತ ವಿಜ್ಞಾನಿಗಳು ವಿದ್ವಾಂಸರುಗಳು ಹಲವಾರು ಸಭೆ, ವಿಚಾರಗೋಷ್ಠಿ, ಕಾರ್ಯಾಗಾರಗಳ ಮೂಲಕ ತಮ್ಮ ನಿಲುವನ್ನು ಸ್ಪಷ್ಟವಾಗಿ ರೂಪಿಸಿಕೊಂಡು ಅರಣ್ಯ ಇಲಾಖೆಗೆ ಸಲ್ಲಿಸಿದವು. ಹಳ್ಳಿಗೆ ಸಮೀಪವಾಗಿರುವ ಗ್ರಾಮಾರಣ್ಯ, ಗೋಮಾಳ ಹಾಗೂ ಕಾಯ್ದಿಟ್ಟ ಅರಣ್ಯಗಳ ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯವನ್ನು ಸಕ್ರಿಯವಾಗಿ ಸೇರಿಸಿಕೊಳ್ಳಲು ಕೆಳಕಂಡ ಮೂರು ಮುಖ್ಯ ಕಾರ್ಯೋಪಾಯಗಳನ್ನು ಸರ್ಕಾರೇತರ ಸಂಸ್ಥೆಗಳು ಸೂಚಿಸಿದವು.[3]

- ಹಳ್ಳಿಯ ಜನ ತಮ್ಮ ದಿನನಿತ್ಯದ ಜೀವದ್ರವ್ಯ ಅಗತ್ಯಗಳನ್ನು ಪೂರೈಸಿಕೊಳ್ಳಲು ಅನುಕೂಲವಾಗುವಂತೆ ಅಗತ್ಯ ಪ್ರಮಾಣದ ಭೂಮಿಯನ್ನು ಗ್ರಾಮಪಂಚಾಯತದ ಸಮಿತಿಯ ಒಡೆತನಕ್ಕೆ ವರ್ಗಾಯಿಸುವುದು.

- ಬಡತನ ರೇಖೆಗಿಂತ ಕೆಳಗಿರುವ ಜನರನ್ನು ಒಟ್ಟುಗೂಡಿಸಿ ಕಾಯ್ದಿಟ್ಟ ಅರಣ್ಯ ಪ್ರದೇಶದಿಂದ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಅವರಿಗೇ ನೀಡಿ, ಅವರೇ ಗುತ್ತಿಗೆದಾರರಂತೆ ಕೆಲಸ ಮಾಡಲು ಪ್ರೇರೇಪಿಸುವುದು. ಇದೇ ರೀತಿ ತಲೆಹೊರೆ ಸೌದೆ ಸಂಗ್ರಹಿಸುವವರನ್ನು ಒಟ್ಟುಗೂಡಿಸಿ ಉರುವಲು ಸೌದೆಯನ್ನು ಬೆಳೆಯುವ ಮತ್ತು ಸಮೀಪದ ನಗರ ಪ್ರದೇಶಗಳಿಗೆ ಪೂರೈಸುವ ಗುತ್ತಿಗೆಯನ್ನು ಅವರಿಗೇ ವಹಿಸುವುದು.

- ಇಡೀ ಯೋಜನೆಗೆ ಸಂಬಂಧಿಸಿದಂತೆ ಸಮುದಾಯದಿಂದ ಚುನಾಯಿತರಾದ, ಸರ್ಕಾರೇತರ

ಸಂಸ್ಥೆಗಳ ಸದಸ್ಯರು ಹಾಗೂ ಪದನಿಮಿತ್ತ ಆಡಳಿತಾಧಿಕಾರಿಯಿರುವ ಸಮಾಲೋಚನಾ ಸಮಿತಿಗಳನ್ನು ವಲಯ, ಜಿಲ್ಲೆ ಹಾಗೂ ವಿಭಾಗದ ಮಟ್ಟಗಳಲ್ಲಿ ಸಂಘಟಿಸುವುದು.

'ಫೆವಾರ್ಡ್-ಕೆ' ನ ಅಂಗಸಂಸ್ಥೆಗಳು ಹಾಗೂ ಇನ್ನಿತರ ಆಸಕ್ತರು ಅರಣ್ಯ ಇಲಾಖೆಗೆ ಸಲ್ಲಿಸಿದ ಸಲಹೆಗಳಲ್ಲಿ ಪ್ರತಿಹಂತದಲ್ಲೂ ಅತಿಸಣ್ಣ ಹಾಗೂ ಸಣ್ಣ ರೈತರು, ಭೂರಹಿತರು, ಮಹಿಳೆಯರು, ಕುಶಲ ಕರ್ಮಿಗಳು ಮುಂತಾದವರ ಸಕ್ರಿಯ ಭಾಗವಹಿಸುವಿಕೆಗೆ ಅತಿ ಹೆಚ್ಚಿನ ಆದ್ಯತೆ ನೀಡಬೇಕೆಂಬ ಒತ್ತಾಯ ಸ್ಪಷ್ಟವಾಗಿತ್ತು. ವಿವಿಧ ಹಂತಗಳಲ್ಲಿ ಸಮಿತಿಗಳ ರಚನೆ, ಅವುಗಳ ಕರ್ತವ್ಯ, ಜವಾಬ್ದಾರಿಗಳ ಬಗ್ಗೆ ಸಾಕಷ್ಟು ವಿವರವಾದ ಮಾಹಿತಿಗಳು ಸಲಹೆಗಳಲ್ಲಿದ್ದರೂ ಅವುಗಳನ್ನು ಹೇಗೆ ಕಾರ್ಯಗತ ಗೊಳಿಸಬೇಕು, ಭಾಗವಹಿಸುವಿಕೆಯನ್ನು ಹೇಗೆ ಸಾಧಿಸಬೇಕು ಎಂಬ ಬಗ್ಗೆ ಫೆವಾಡ್-ಕೆ ಹಾಗೂ ಇನ್ನಿತರ ಆಸಕ್ತ ಸಂಸ್ಥೆಗಳೂ ನಿಖರವಾಗಿ ಏನನ್ನೂ ಹೇಳಿರಲಿಲ್ಲ. ಕರ್ನಾಟಕ ಅರಣ್ಯ ಇಲಾಖೆ ಈ ಯಾವ ಸಲಹೆಗಳಿಗೂ ಪ್ರತಿಕ್ರಿಯಿಸಲಿಲ್ಲ.

ಆಕ್ಸ್‌ಫರ್ಡ್ ಫಾರೆಸ್ಟ್ರಿ ಸಂಸ್ಥೆಯ ಪ್ರವೇಶ

ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯ ಅರಣ್ಯಾಭಿವೃದ್ಧಿ ಯೋಜನೆಯ ಪ್ರಸ್ತಾಪವನ್ನು ಪರಿಶೀಲಿಸಿ, ಅರಣ್ಯ ಇಲಾಖೆಯೊಡನೆ ಚರ್ಚಿಸಿ, ಅಗತ್ಯವಾದ ಕಡೆಗಳಲ್ಲಿ ಪ್ರಸ್ತಾಪವನ್ನು ಪರಿಷ್ಕರಿಸುವಂತೆ, ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ, 'ಆಕ್ಸಫರ್ಡ್ ಫಾರೆಸ್ಟ್ರಿ ಇನ್‌ಸ್ಟಿಟ್ಯೂಟ್'ನ ಸಮಾಲೋಚಕರನ್ನು ಕೇಳಿಕೊಂಡಿತು. ಪ್ರಸ್ತಾಪವನ್ನು ಪರಿಶೀಲಿಸಿದ ಈ ಸಂಸ್ಥೆಯ ಪರಿಣಿತರು ಕೆಳಕಂಡ ಸಲಹೆಗಳನ್ನು ನೀಡಿದರು.

"• ಬಡಜನರ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸಲು ಬೇಕಾದ ಯಾವ ಸ್ಪಷ್ಟ ಕ್ರಮಗಳೂ ಯೋಜನೆಯಲ್ಲಿಲ್ಲ. ಅಂತಹ ಕ್ರಮಗಳನ್ನು ಸೇರಿಸಬೇಕು.

• ಅರಣ್ಯದೊಳಗೆ ವಾಸಿಸುತ್ತಿರುವ ಜನರಿಗೆ ಸಂಬಂಧಿಸಿದಂತೆ ಇಲಾಖೆಯ ನಿಲುವು ಹಾಗೂ ಯೋಜನೆಯ ಕಾರ್ಯಸೂಚಿಯನ್ನು ಸ್ಪಷ್ಟವಾಗಿ ನಿರೂಪಿಸಬೇಕು.

• ಅರಣ್ಯಗಳನ್ನು ಅವುಗಳ ನಿರ್ವಹಣೆಯ ರೀತಿಗೆ ಅನುಸಾರವಾಗಿ ವಿಂಗಡಿಸಿ, ಇಂತಹ ಪ್ರತಿಯೊಂದು ಭಾಗದಲ್ಲಿಯೂ ಸ್ಥಳೀಯ ಸಮುದಾಯದೊಡನೆ ಚರ್ಚಿಸಿ, ಸ್ಥಳೀಯರ ಸಹಭಾಗಿತ್ವದಿಂದ 'ಕಿರುಯೋಜನೆ'ಗಳನ್ನು (ಮೈಕ್ರೋಪ್ಲಾನ್) ರೂಪಿಸಬೇಕು.

• ನಿರ್ವಹಣೆಯ ರೀತಿಗೆ ಅನುಸಾರವಾಗಿ ವಿಂಗಡಿಸಿದ ಇಂತಹ ಪ್ರತಿಯೊಂದು ಭಾಗದಲ್ಲಿಯೂ ಸ್ಥಳ ನಿರ್ದಿಷ್ಟ ನಿರ್ವಹಣಾ ಕೆಲಸಗಳ ಬಗ್ಗೆ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮಾಲೋಚಿಸಬೇಕು.

● ಸ್ಥಳೀಯವಾಗಿ ಅರಣ್ಯ ನಿರ್ವಹಣೆಯ ಜವಾಬ್ದಾರಿಯನ್ನು ಇಲಾಖೆ ಮತ್ತು ಸಮುದಾಯಗಳು ಸಮಾನವಾಗಿ ಹಂಚಿಕೊಳ್ಳಬೇಕು.

● ಪಶ್ಚಿಮ ಘಟ್ಟಗಳ ಅರಣ್ಯಗಳನ್ನು ಉಳಿಸಲೆಂದೇ ಬೆಳೆಯುತ್ತಿರುವ ಪ್ರಬಲವಾದ ಸಾಮಾಜಿಕ ಹಾಗೂ ರಾಜಕೀಯ ಆಂದೋಲನಗಳನ್ನು ಅರಣ್ಯ ಇಲಾಖೆ ಸೂಕ್ತ ರೀತಿಯಲ್ಲಿ ಸಮರ್ಥವಾಗಿ ಬಳಸಿಕೊಳ್ಳಬೇಕು".[4]

ಪರಿಷ್ಕೃತ ಯೋಜನಾ ಪ್ರಸ್ತಾಪ

1989-90 ರ ಅವಧಿಯಲ್ಲಿ ಕರ್ನಾಟಕ ಅರಣ್ಯ ಇಲಾಖೆ ಹಾಗೂ ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್‌ಟಿಟ್ಯೂಟ್‌ಗಳ ನಡುವೆ ನಿರಂತರವಾಗಿ ನಡೆದ ಚರ್ಚೆ, ಸಮಾಲೋಚನೆಗಳ ಫಲವಾಗಿ, ಕರ್ನಾಟಕ ಸರ್ಕಾರ ಈ ಮುಂಚೆ ಸಲ್ಲಿಸಿದ್ದ ಯೋಜನಾ ಪ್ರಸ್ತಾಪ ಜುಲೈ, 1990ರಲ್ಲಿ ಪರಿಷ್ಕರಣಗೊಂಡಿತು. ಈ ಪರಿಷ್ಕೃತ ಪ್ರಸ್ತಾಪದಲ್ಲಿ, 1998ರ ಹೊಸ ಅರಣ್ಯ ನೀತಿಗೆ ಅನುಗುಣವಾದ 'ಜಂಟೀ ಅರಣ್ಯ ಯೋಜನೆ' ಅತಿಮುಖ್ಯವಾದ 'ನಿರ್ವಹಣಾ ಕಾರ್ಯೋಪಾಯ'ವಾಗಿ (ಮ್ಯಾನೇಜ್‌ಮೆಂಟ್ ಸ್ಟ್ರಾಟಜಿ) ರೂಪುಗೊಂಡಿತು. ಪಶ್ಚಿಮಘಟ್ಟಗಳ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ, 'ಅಧಿಕಾರದಲ್ಲಿ ಸಮಪಾಲು, ಜವಾಬ್ದಾರಿಯಲ್ಲಿ ಸಮಪಾಲು' ತತ್ವವನ್ನಾಧರಿಸಿದ ಜಂಟೀ ಅರಣ್ಯ ಯೋಜನೆ ಮತ್ತು ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಗಳ ಪ್ರವೇಶ ಇಡೀ ಯೋಜನೆಯ ವಿಕಾಸದಲ್ಲಿ ಅತ್ಯಂತ ಮಹತ್ವದ ಘಟ್ಟವಾಯಿತು. ಪರಿಷ್ಕೃತ ಪ್ರಸ್ತಾಪದಂತೆ "ಪಶ್ಚಿಮ ಘಟ್ಟ ಶ್ರೇಣಿಯ ಎಲ್ಲ ಆರು ಜಿಲ್ಲೆಗಳಿಗೂ ಯೋಜನೆಯನ್ನು ವಿಸ್ತರಿಸುವುದರ ಬದಲಿಗೆ, ಮೊದಲಿಗೆ ಒಂದು ಜಿಲ್ಲೆಗೆ ಮಾತ್ರ ಸೀಮಿತಗೊಳಿಸಿ ಆರನೆಯ ಯೋಜನೆಯ ಅಂತ್ಯದ ವೇಳೆಗೆ ಎಲ್ಲ ಆರು ಜಿಲ್ಲೆಗಳಿಗೂ ವಿಸ್ತರಿಸಲು ನಿರ್ಧರಿಸಲಾಯಿತು. ಮೊದಲ ಐದು ವರ್ಷಗಳಿಗೆ ಇಡೀ ಯೋಜನೆಗೆ ತಗಲುವ ಒಟ್ಟು ವೆಚ್ಚ 28.4 ದಶಲಕ್ಷ ಪೌಂಡುಗಳು. ಸರ್ಕಾರೇತರ ಸಂಸ್ಥೆಗಳು ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲು, ಅರಣ್ಯ ಇಲಾಖೆ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಕೊಂಡಿಯಂತೆ ಕೆಲಸ ಮಾಡುವ 'ಸಂಪರ್ಕ ಸಂಸ್ಥೆ'ಯೊಂದನ್ನು (ಲಿಂಕ್ ಆರ್ಗನೈಸೇಷನ್) ಸ್ಥಾಪಿಸಬೇಕು. ಈ ಸಂಪರ್ಕ ಸಂಸ್ಥೆ ಸಮುದಾಯವನ್ನು ಎಲ್ಲ ಹಂತಗಳ (ಗ್ರಾಮ, ವಲಯ, ವಿಭಾಗ) ಜಂಟೀ ಅರಣ್ಯ ಯೋಜನೆಯ ತಂಡಗಳಲ್ಲಿ ಸಂಪರ್ಕ ಸಂಸ್ಥೆಯ ಪ್ರತಿನಿಧಿಯೊಬ್ಬರು ಇರಲೇಬೇಕು."[5]

1990ರ ಜುಲೈ ತಿಂಗಳಿನಲ್ಲಿ ಪರಿಷ್ಕೃತಗೊಂಡ ಯೋಜನಾ ಪ್ರಸ್ತಾಪದ ವಿವರಗಳು ಸಾರ್ವಜನಿಕರಿಗಾಗಲೀ, ಫೆವಾರ್ಡ-ಕೆ ಸೇರಿದಂತೆ ಯಾವುದೇ ಸರ್ಕಾರೇತರ ಸಂಸ್ಥೆಗಳಿಗಾಗಲೀ ದೊರೆಯಲಿಲ್ಲ. ಈ ವಿವರಗಳನ್ನು ಪಡೆಯಲು ಸರ್ಕಾರೇತರ ಸಂಸ್ಥೆಗಳು ನಡೆಸಿದ ಎಲ್ಲ

ಪ್ರಯತ್ನಗಳನ್ನು ಅರಣ್ಯ ಇಲಾಖೆ ನಿಷ್ಫಲಗೊಳಿಸಿತು. "ಅರಣ್ಯ ಇಲಾಖೆಯ ತೀವ್ರ ಅಸಹಕಾರವನ್ನು ಎದುರಿಸಲು ಬೇರೆ ದಾರಿಯೇ ಇಲ್ಲದೇ, ಬ್ರಿಟನ್ನಿನ ಪ್ರಮುಖ ಸರ್ಕಾರೇತರ ಸಂಸ್ಥೆಯಾದ 'ಸೇವ್ ದಿ ಫಾರೆಸ್ಟ್ - ಸೇವ್ ದಿ ಪ್ಲಾನೆಟ್' ಮೂಲಕವಾಗಿ, ಫೆವಾರ್ಡ್-ಕೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಬಗ್ಗೆ ಒತ್ತಡ ತರಲು ಪ್ರಾರಂಭಿಸಿತು. 1990ರ ಸೆಪ್ಟೆಂಬರ್ 7 ರಂದು ಬ್ರಿಟನ್ನಿನ ಪ್ರಧಾನಿ ಮಾರ್ಗರೆಟ್ ಥ್ಯಾಚರ್ ಅವರಿಗೆ ಮನವಿಯೊಂದನ್ನು ಸಲ್ಲಿಸಿ, ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಕರ್ನಾಟಕ ಅರಣ್ಯ ಇಲಾಖೆಗೆ ನೀಡುತ್ತಿರುವ ಆರ್ಥಿಕ ನೆರವನ್ನು ನಿಲ್ಲಿಸಬೇಕೆಂದು ಕೋರಿತು. ಇದರಿಂದಾಗಿ ಕರ್ನಾಟಕದಲ್ಲಿ ಅರಣ್ಯ ಇಲಾಖೆ ಹಾಗೂ ಸರ್ಕಾರೇತರ ಸಂಸ್ಥೆಗಳ ನಡುವಿನ ಸಂಬಂಧ ಮತ್ತಷ್ಟು ಹದಗೆಟ್ಟಿತು."[6] ಈ ಮಧ್ಯೆ ಸೆಪ್ಟೆಂಬರ್ 24 ರಂದು (1990), ಕರ್ನಾಟಕ ಸರ್ಕಾರದ ಅಭಿವೃದ್ಧಿ ಆಯುಕ್ತರು, ಪರಿಷ್ಕೃತಗೊಂಡ ಯೋಜನೆಯ ವಿವರಗಳನ್ನು ಸಾರ್ವಜನಿಕರ ಪ್ರತಿಕ್ರಿಯೆಗಾಗಿ ಬಿಡುಗಡೆ ಮಾಡಬೇಕೆಂದು ಅರಣ್ಯ ಇಲಾಖೆಗೆ ಆದೇಶ ನೀಡಿದರು. ಈ ರೀತಿ ಪಡೆದ ವಿವರಗಳನ್ನು ಫೆವಾರ್ಡ್-ಕೆ ಹಾಗೂ ಆಸಕ್ತ ವಿಜ್ಞಾನಿಗಳ ತಂಡ ವಿಷದ ವಿವೇಚನೆ ಹಾಗೂ ಸೂಕ್ಷ್ಮ ಪರಿಶೀಲನೆಗೆ ಒಳಪಡಿಸಿ, ಕರ್ನಾಟಕ ಅರಣ್ಯ ಇಲಾಖೆ ಹಾಗೂ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಮಂತ್ರಾಲಯದ ಸಚಿವರಿಗೆ ತಮ್ಮ ಅಧಿಕೃತ ಪ್ರತಿಕ್ರಿಯೆಯನ್ನು ಸೂಚಿಸಿದವು. ಪರಿಷ್ಕೃತ ಪ್ರಸ್ತಾಪದಲ್ಲಿದ್ದ ಪರಿಸರದ ವಿಷಯಗಳಿಗೆ ಹೆಚ್ಚಿನ ಒತ್ತು, ಸ್ಥಳೀಯ ಸಮುದಾಯಗಳ ಅರಣ್ಯದ ಮೇಲಿನ ಅವಲಂಬನೆಯನ್ನು ಸ್ಪಷ್ಟವಾಗಿ ಗುರುತಿಸಿ ಮಾನ್ಯ ಮಾಡಿರುವುದು, ಹಾಗೂ ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯರ ಸಕ್ರಿಯ ಭಾಗವಹಿಸುವಿಕೆಗೆ ನೀಡಿರುವ ಪ್ರಾಮುಖ್ಯತೆಯನ್ನು ಎಲ್ಲ ಸರ್ಕಾರೇತರ ಸಂಸ್ಥೆಗಳು ಮೆಚ್ಚಿ, ಸ್ವಾಗತಿಸಿದರೂ ನಾಲ್ಕು ವಿಷಯಗಳಿಗೆ ಸಂಬಂಧಿಸಿದಂತೆ ತೀವ್ರ ಕಾಳಜಿಯನ್ನು ವ್ಯಕ್ತ ಪಡಿಸಿದವು.

- "ಸಶಕ್ತೀಕರಣ ಹಾಗೂ ಬಡತನ ನಿರ್ಮೂಲನೆಯನ್ನು ಇಡೀ ಯೋಜನೆಯ ಒಟ್ಟಾರೆ ಉದ್ದೇಶವನ್ನಾಗಿ ಮಾಡಿ, ಯೋಜನೆಯ ಸಾಮಾಜಿಕ ನ್ಯಾಯದ ಅಂಶವನ್ನು ಸದೃಢಗೊಳಿಸಬೇಕು.
- ನಿರ್ವಹಣೆಯ ಕೆಲಸಕ್ಕಾಗಿ ಅರಣ್ಯಗಳನ್ನು ವಲಯಗಳಾಗಿ ವಿಂಗಡಿಸುವಾಗ ಸ್ಥಳೀಯರ ಸಹಭಾಗಿತ್ವ ವಿರಲೇಬೇಕು.
- ಅರಣ್ಯವಾಸಿಗಳನ್ನು ಅರಣ್ಯಗಳಿಂದ ಹೊರಗೆ ಸ್ಥಳಾಂತರಿಸುವುದಕ್ಕೆ ಅವಕಾಶ ಕಲ್ಪಿಸಲೇ ಬಾರದು.
- ಅಭಿವೃದ್ಧಿ ಯೋಜನೆಗಳಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ಸಕ್ರಿಯವಾಗಿ ಸೇರಿಸಿಕೊಳ್ಳುವ ನೀತಿಯನ್ನು ಅಧಿಕೃತವಾಗಿ ಸಾಂಸ್ಥೀಕರಣಗೊಳಿಸಬೇಕು."[7]

ಅರಣ್ಯ ಇಲಾಖೆ ಮತ್ತು ಸರ್ಕಾರೇತರ ಸಂಸ್ಥೆಗಳು, ಅರಣ್ಯ ಇಲಾಖೆ ಹಾಗೂ ಸಮುದಾಯಗಳ ನಡುವೆ ಕೊಂಡಿಯಂತೆ ಕೆಲಸ ಮಾಡುವ 'ಸಂಪರ್ಕ ಸಂಸ್ಥೆ'ಯೊಂದನ್ನು ಸ್ಥಾಪಿಸಬೇಕೆಂಬ

ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್‌ಸ್ಟಿಟ್ಯೂಟ್ ಸಲಹೆಯನ್ನು ನಾವು ಈಗಾಗಲೇ ನೋಡಿದ್ದೇವೆ. ಈ ರೀತಿಯ ಕೆಲಸಕ್ಕೆ ಅಗತ್ಯವಾದ ಸಾಮರ್ಥ್ಯ ಫೆವಾರ್ಡ-ಕೆ ಗಿದ್ದರೂ, ಅರಣ್ಯ ಇಲಾಖೆಯ ಅಭಿಪ್ರಾಯದಂತೆ "ರಾಜ್ಯದಾದ್ಯಂತ ಚಿರಪರಿಚಿತವಾಗಿರುವ ಸಂಸ್ಥೆಯೊಂದನ್ನು ಆಯ್ಕೆ ಮಾಡುವ ಉದ್ದೇಶದಿಂದ" ಮೈರಾಡಾ ಸಂಸ್ಥೆಯನ್ನು ಪರಿಗಣಿಸಲಾಯಿತು. ಗುಲ್ಬರ್ಗಾ ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರದ ಜೊತೆಗೆ ಸೇರಿ, 'ಜಲಾನಯನ ಪ್ರದೇಶದ ಸಹಭಾಗಿತ್ವ ಸಮಗ್ರ ಅಭಿವೃದ್ಧಿ' (ಪಾರ್ಟಿಸಿಪೇಟರಿ ಇಂಟಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ವಾಟರ್ ಶೆಡ್ಸ್) ಯೋಜನೆಯನ್ನು ನಿರ್ವಹಿಸಿದ ಅನುಭವ ಮೈರಾಡಾ ಸಂಸ್ಥೆಗಿತ್ತು. 'ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ' (ಪಾರ್ಟಿಸಿಪೇಟರಿ ರೂರಲ್ ಅಪ್ರೈಸಲ್) ಹಾಗೂ ಸಮುದಾಯ ಆಧಾರಿತ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸಾಕಷ್ಟು ಅನುಭವ, ಪರಿಣಿತಿಗಳೂ ಈ ಸಂಸ್ಥೆಗಿದ್ದವು. ಆದರೆ ಈ ಬಗ್ಗೆ ಸಮಾಲೋಚನೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವಶಾಲಿಯಾಗಿರುವ ಸರ್ಕಾರೇತರ ಸಂಸ್ಥೆ 'ಆಕ್ಸ್‌ಫಾಮ್' "ಸಮುದಾಯವನ್ನು ಸಂಘಟಿಸಿ, ಯೋಜನೆಯಲ್ಲಿ ಸಮುದಾಯದ ಸದಸ್ಯರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವ ಜವಾಬ್ದಾರಿಯನ್ನು ಅರಣ್ಯ ಇಲಾಖೆಯಿದ ಬೇರ್ಪಡಿಸಿ, ಹೊರಗಿನ ಸರ್ಕಾರೇತರ ಸಂಸ್ಥೆಯೊಂದಕ್ಕೆ ನೀಡಿದಲ್ಲಿ, ಯೋಜನೆಯ ಸಾಮಾಜಿಕ ಹಾಗೂ ತಾಂತ್ರಿಕ ಉದ್ದೇಶಗಳನ್ನು ಬೇರ್ಪಡಿಸಿದಂತಾಗುತ್ತದೆ. ಸ್ಥಳೀಯ ಸಮುದಾಯದ ಸಂಘಟನೆ ಮತ್ತು ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಜವಾಬ್ದಾರಿಯೇ ಇಲ್ಲದಂತಹ ಅನಾರೋಗ್ಯಕರ ಸನ್ನಿವೇಶ ಸೃಷ್ಟಿಯಾಗುತ್ತದೆ"[8] ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಬಹುಶಃ ಇದೇ ಕಾರಣಕ್ಕಾಗಿ, 'ಮೈರಾಡಾ' ಸಂಪರ್ಕ ಸಂಸ್ಥೆಯಾಗಿ ಕೆಲಸ ಮಾಡಲು ಒಪ್ಪಲಿಲ್ಲ. ಸಂಪರ್ಕ ಸಂಸ್ಥೆಯ ಪರಿಕಲ್ಪನೆ ಪ್ರಸ್ತಾಪದಲ್ಲಿ ಮಾತ್ರ ಉಳಿದು, ಸಮುದಾಯವನ್ನು ಸಂಘಟಿಸುವ, ಸಮುದಾಯದ ಸದಸ್ಯರನ್ನು ಯೋಜನೆಯಲ್ಲಿ ಭಾಗವಹಿಸುವಂತೆ ಮಾಡುವ ಜವಾಬ್ದಾರಿ ಅರಣ್ಯ ಇಲಾಖೆಯ ಪಾಲಿಗೇ ಬಂದಿತು.

ಯೋಜನೆಯ ರೂಪು-ರೇಷೆಗಳು

1992ರ ಅಕ್ಟೋಬರ್ 8 ರಂದು ಭಾರತ ಮತ್ತು ಬ್ರಿಟನ್ ಸರ್ಕಾರಗಳು 'ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ'ಗೆ ಅಂತಿಮವಾಗಿ ಸಹಿ ಹಾಕಿದವು. ಯೋಜನೆಯ ಮೂಲಭೂತ ಉದ್ದೇಶವನ್ನು "ಅರಣ್ಯ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿರುವ ಸಮಾಜದ ವಿವಿಧ ಬಳಕೆದಾರರ ಪರಸ್ಪರ ಘರ್ಷಣೆಗೀಡು ಮಾಡಿಕೊಡುವ ಬೇಡಿಕೆಗಳನ್ನು (ಕಾನ್‌ಫ್ಲಿಕ್ಟಿಂಗ್ ಡಿಮಾಂಡ್ಸ್) ಪೂರೈಸಲು ಅಗತ್ಯವಾದ ನಿರ್ವಹಣಾ ಸಾಮರ್ಥ್ಯವನ್ನು ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಬೆಳೆಸುವುದು"[9] ಎಂದು ಗುರುತಿಸಲಾಯಿತು. "ಅರಣ್ಯ ಇಲಾಖೆಯಲ್ಲಿ ಹೊಸ ಸಾಂಸ್ಥಿಕ ಬದಲಾವಣೆಗಳನ್ನು ತರುವುದರ ಮೂಲಕವಾಗಿ ಹಾಗೂ ಇಲಾಖೆ ಹಾಗೂ ಸ್ಥಳೀಯ

ಸಮುದಾಯದ ನಡುವಿನ ಸಂಬಂಧದಲ್ಲಿ ಪರಿವರ್ತನೆಯನ್ನು ತರುವುದರ ಮೂಲಕವಾಗಿ ಇದನ್ನು ಸಾಧಿಸಬೇಕು. ಸಮುದಾಯದ ಮೇಲೆ ಪ್ರಭಾವ ಬೀರುವ ಯೋಜನೆಯ ಎಲ್ಲ ಚಟುವಟಿಕೆಗಳ ಬಗೆಗೆ ಸ್ಥಳೀಯರೊಡನೆ ಸಮಾಲೋಚಿಸಿದ ನಂತರ ನಿರ್ಧಾರ ಕೈಗೊಳ್ಳಬೇಕು. ಯೋಜನೆಯ ಉದ್ದೇಶವನ್ನು ಜಂಟೀ ಅರಣ್ಯ ಯೋಜನೆಯ ಮೂಲಕ, ಅದರಲ್ಲಿರುವ ಜನರ ಸಹಭಾಗಿತ್ವದ ಪರಿಕಲ್ಪನೆಯ ಅನುಷ್ಠಾನದ ಮೂಲಕ ಸಾಧಿಸಲು ಪ್ರಯತ್ನಿಸಬೇಕು. ಕಿರುಯೋಜನೆಯ ತಯಾರಿ ಕೇವಲ ಗಿಡಮರಗಳನ್ನು ಬೆಳೆಸುವುದಕ್ಕೆ ಮಾತ್ರ ಸೀಮಿತಗೊಳ್ಳದೇ ಭೂಬಳಕೆಯ ಸಮಸ್ಯೆಗಳು, ಕಾಯ್ದಿಟ್ಟ ಅರಣ್ಯದಲ್ಲಿನ ಸಂಪನ್ಮೂಲಗಳ ನಿರ್ವಹಣೆಗೂ ವಿಸ್ತರಿಸಬೇಕು. ಕಿರು ಯೋಜನೆಯಲ್ಲಿ ಸ್ಥಳೀಯವಾದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನಾಧರಿಸಿದ ಸಮಗ್ರ ದೃಷ್ಟಿ ವ್ಯಕ್ತವಾಗಬೇಕು.''[10]

ಪ್ರಕ್ರಿಯಾ ಯೋಜನೆ

ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ಭಾಗವಾದ, 'ಸಾಮಾಜಿಕ ಅಭಿವೃದ್ಧಿ ವಿಭಾಗ' (ಸೋಷಿಯಲ್ ಡಿವಲಪ್‌ಮೆಂಟ್ ಡಿಪಾರ್ಟ್‌ಮೆಂಟ್) ರೂಪಿಸಿದ ಪರಿಕಲ್ಪನೆಯಂತೆ, ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ ''ಪ್ರಕ್ರಿಯಾ ಯೋಜನೆ''ಯಾಗಿ (ಪ್ರೋಸೆಸ್ ಪ್ರಾಜೆಕ್ಟ್) ಪರಿವರ್ತನೆಗೊಂಡಿತ್ತು. ಇದರ ಪ್ರಕಾರ ಇಡೀ ಯೋಜನೆಯ ಒತ್ತು ಅಂತಿಮ ಫಲಿತಾಂಶಕ್ಕಿಂತ ಹೆಚ್ಚಾಗಿ ಗುರಿಯೆಡೆಗೆ ಸಾಗುವ ಪ್ರಕ್ರಿಯೆಗಳ ಮೇಲಿತ್ತು. ಲಕ್ಷ್ಯಕ್ಕಿಂತ ಹೆಚ್ಚಾಗಿ ಮಾರ್ಗಗಳ ಮೇಲೆ, ಸಾಧ್ಯಕ್ಕಿಂತ ಹೆಚ್ಚಾಗಿ ಸಾಧನಗಳ ಮೇಲಿತ್ತು. ಅಂತಿಮ ಗುರಿಯನ್ನು ಮುಂಚಿತವಾಗಿಯೇ ನಿರ್ಧರಿಸುವ ಸಾಂಪ್ರದಾಯಿಕ ಯೋಜನೆಗಳಿಗಿಂತ ಭಿನ್ನವಾಗಿ, ಪ್ರಕ್ರಿಯಾ ಯೋಜನೆಯಲ್ಲಿ ವಿಕಾಸಕ್ಕೆ, ಸಂಧಾನಕ್ಕೆ ಅವಕಾಶಗಳಿದ್ದವು. ''ಪ್ರಕ್ರಿಯಾ ಯೋಜನೆಯಲ್ಲಿ 'ಟಾರ್ಗೆಟ್'ಗಳಲ್ಲ. ಅದರ ಬದಲಿಗೆ 'ಪ್ರಮುಖ ಹಂತ'ಗಳಿವೆ (ಕೀ ಸ್ಟೇಜಸ್). ಯೋಜನೆ ಮುಂದುವರೆದಂತೆ ಈ ಪ್ರಮುಖ ಹಂತಗಳು ಬದಲಾಗುತ್ತವೆ. ಕಾಲ ಕಾಲಕ್ಕೆ ಯೋಜನೆಯಲ್ಲಿ ಭಾಗವಹಿಸುತ್ತಿರುವವರೆಲ್ಲರೂ ಯೋಜನೆ ಹೇಗೆ ಸಾಗಿದೆ, ಮೈಲಿಗಲ್ಲುಗಳತ್ತ ಹೇಗೆ ಮುಂದುವರೆದಿದೆ ಎಂಬುದನ್ನು ಪರಿಶೀಲಿಸಬೇಕು.''[11]

ಸಾಂಸ್ಥಿಕ ಬದಲಾವಣೆಗಳು

ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಸಾಂಸ್ಥಿಕ ಬದಲಾವಣೆಗಳಲ್ಲಿ ಯೋಜನಾ ನಿರ್ದೇಶಕರ ನೇಮಕ, ಕಾರ್ಯಯೋಜನಾ (ವರ್ಕಿಂಗ್ ಪ್ಲಾನ್) ವಿಭಾಗದ ಪುನರ್‌ರಚನೆ, ವಿಶೇಷ ಪರಿಣಿತಿಯ ಯೋಜನೆ ಮತ್ತು ನಿಗಾವಣೆಯ ಘಟಕಗಳು, ವಿಭಾಗದ ಹಂತದಲ್ಲಿ ಜಂಟೀ ಅರಣ್ಯ ಯೋಜನಾ ತಂಡಗಳ ಸೃಷ್ಟಿ, ಸಮುದಾಯವನ್ನು ಸಂಘಟಿಸಿ, ಸದಸ್ಯರು ಯೋಜನೆಯಲ್ಲಿ ಭಾಗವಹಿಸುವಂತೆ ಮಾಡಲು ಪ್ರತ್ಯೇಕವಾದ ವಲಯ ಅರಣ್ಯಾಧಿಕಾರಿಗಳ ನೇಮಕಾತಿ, ಅರಣ್ಯಾಧಿಕಾರಿ

ಗಳಿಗೆ ಹಾಗೂ ಸಿಬ್ಬಂದಿಗೆ ಇಂಗ್ಲೆಂಡಿನಲ್ಲಿ ಹಾಗೂ ಸ್ಥಳೀಯವಾಗಿ ಮೈರಾಡಾ ಸಂಸ್ಥೆಯಿಂದ ತರಬೇತಿ ಮುಂತಾದವುಗಳಿದ್ದವು.

1988ರಲ್ಲಿ ಕರ್ನಾಟಕ ಅರಣ್ಯ ಇಲಾಖೆ ಸಲ್ಲಿಸಿದ ಪ್ರಸ್ತಾಪಕ್ಕಿಂತ ಭಿನ್ನವಾದ ಪರಿಷ್ಕೃತ ಯೋಜನೆಯ ಅವಧಿ ಐದು ವರ್ಷಗಳಾಗಿದ್ದು, ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟದ ಅರಣ್ಯಗಳಿಗೆ ಮಾತ್ರ ಸೀಮಿತಗೊಂಡಿತು. 24 ದಶಲಕ್ಷ ಪೌಂಡುಗಳ ಆರ್ಥಿಕ ನೆರವಿನ ಯೋಜನೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ 42000 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಅರಣ್ಯಾಭಿವೃದ್ಧಿಯ ಕಾರ್ಯಗಳು ರೂಪುಗೊಂಡವು. (ಕೊಷ್ಟಕ 2)

ವಿಶ್ಲೇಷಣೆ

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ತತ್ವಗಳು ಅಳವಡಿಕೆಯಾದ ರೀತಿ ಹಾಗೂ ಅದಕ್ಕೆ ಕಾರಣವಾದ ಘಟನೆಗಳನ್ನು ನಾವು ಪರಿಶೀಲಿಸಿದ್ದೇವೆ. ಈ ಹಂತದಲ್ಲಿ ಅವುಗಳ ವಿಮರ್ಶಾತ್ಮಕ ವಿಶ್ಲೇಷಣೆ ಅಗತ್ಯವಾಗುತ್ತದೆ.

ಸಹಭಾಗಿತ್ವವಿಲ್ಲದ ಯೋಜನೆ

ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಮುಖ್ಯಾಂಶಗಳನ್ನು ನಾವು ಈಗಾಗಲೇ ನೋಡಿದ್ದೇವೆ. ಸ್ಥಳೀಯ ಜನರನ್ನು ಅರಣ್ಯಗಳಿಗೆ ಹೋಗದಂತೆ ನಿರ್ಬಂಧಿಸಿ, ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಿ, ಅನಂತರ ಬೃಹತ್ ಪ್ರಮಾಣದಲ್ಲಿ ಅರಣ್ಯೀಕರಣವನ್ನು ಕೈಗೊಳ್ಳುವ ಅರಣ್ಯ ಇಲಾಖೆಯ ಉದ್ದೇಶ, ಅದು ಕಳೆದ ನೂರು ವರ್ಷಗಳಲ್ಲಿ ಅನುಸರಿಸಿಕೊಂಡು ಬಂದ ಉದ್ದೇಶದ ಮುಂದುವರಿಕೆಯೇ ಆಗಿತ್ತು. "ಅರಣ್ಯ ಇಲಾಖೆ ಯೋಜನಾ ಪ್ರಸ್ತಾಪವನ್ನು ಸಲ್ಲಿಸಿದ್ದು 1988ರ ಜುಲೈ ತಿಂಗಳಿನಲ್ಲಿ. ಹೊಸ ರಾಷ್ಟ್ರೀಯ ಅರಣ್ಯ ನೀತಿ ಘೋಷಿತವಾದದ್ದು 1988 ರ ಡಿಸೆಂಬರ್ ತಿಂಗಳಿನಲ್ಲಿ. ಹೀಗಾಗಿಯೇ ಜನರ ಭಾಗವಹಿಸುವಿಕೆಗೆ ಅವಕಾಶ ಮಾಡಿಕೊಂಡುವ ಹೊಸ ಅರಣ್ಯ ನೀತಿಯ ಅಂಶಗಳು ಈ ಪಶ್ಚಿಮಘಟ್ಟ ಯೋಜನೆಯ ಪ್ರಸ್ತಾಪದಲ್ಲಿ ಇರಲಿಲ್ಲ"[12] ಎಂಬ ವಾದವನ್ನು ಅರಣ್ಯ ಇಲಾಖೆ ಮುಂದಿಡುತ್ತದೆ. ಆದರೆ ಇದು ಹುರುಳಿಲ್ಲದ ವಾದ. 1984 ರ ಸಾಮಾಜಿಕ ಅರಣ್ಯ ಯೋಜನೆಯಲ್ಲೂ ಸ್ಥಳೀಯ ಸಮುದಾಯದ ಬಾಗವಹಿಸುವಿಕೆಯ ಪ್ರಸ್ತಾಪವಿತ್ತು. ಇದರೊಡನೆ 1988 ರ ಹೊಸ ಅರಣ್ಯ ನೀತಿ ಘೋಷಿತವಾಗುವ ಸಾಕಷ್ಟು ಮುಂಚೆಯೇ ಅರಣ್ಯ ನೀತಿಯಲ್ಲಿ ಬರಲಿರುವ ಬದಲಾವಣೆಗಳ ಸ್ಪಷ್ಟ ಸೂಚನೆಗಳು ಎಲ್ಲ ಅರಣ್ಯ ಇಲಾಖೆಗಳಿಗೂ ದೊರೆತಿದ್ದವು. ಕರ್ನಾಟಕವೂ ಸೇರಿದಂತೆ ಎಲ್ಲ ರಾಜ್ಯ ಸರ್ಕಾರಗಳೊಡನೆ, ಹಿರಿಯ ಅರಣ್ಯಾಧಿಕಾರಿ ಗಳೊಡನೆ ಕೇಂದ್ರ ಸರ್ಕಾರ ಚರ್ಚೆ ಸಮಾಲೋಚನೆಗಳನ್ನು ನಡೆಸಿತ್ತು.

ಆರನೆಯ ಪಂಚವಾರ್ಷಿಕ ಯೋಜನೆಯವರೆಗೆ (1980-85) ಕೈಗಾರಿಕೆಗಳ ಅಗತ್ಯವನ್ನು ಪೂರೈಸುವುದು ಅರಣ್ಯ ಕ್ಷೇತ್ರದಲ್ಲಿ ಹೂಡುವ ಬಂಡವಾಳದ ಮುಖ್ಯ ಉದ್ದೇಶಗಳಲ್ಲೊಂದಾಗಿತ್ತು ಎಂಬುದನ್ನು ಯೋಜನಾ ದಾಖಲೆಗಳು ತಿಳಿಸುತ್ತವೆ. ಆದರೆ ಮೊಟ್ಟಮೊದಲ ಬಾರಿಗೆ ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ (1985-90), ಮಾರುಕಟ್ಟೆಯಿಂದ ಹೊರಗಿರುವ, ಸ್ಥಳೀಯ ಜನ ಸಮುದಾಯಗಳ ಅಗತ್ಯಗಳ ಪೂರೈಕೆ ಹಾಗೂ ಜೀವಿ ಪರಿಸ್ಥಿತಿ ಪ್ರಯೋಜನಗಳ ಪ್ರಸ್ತಾಪವಿದೆ. ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾವಸ್ತುಗಳನ್ನು ಸ್ಥಳೀಯ ಜನರ ಬೇಡಿಕೆಗಳನ್ನು ಪೂರೈಸಿದ ನಂತರವೇ ಒದಗಿಸಬೇಕೆಂಬ ಉಲ್ಲೇಖವಿದೆ.

ಭಾರತದ ಅರಣ್ಯ ನೀತಿಯನ್ನು ರೂಪಿಸುವ ಅತ್ಯುನ್ನತ ಮಟ್ಟದ ನೀತಿ ನಿರೂಪಣಾ ಮಂಡಳಿಯಾದ 'ಸೆಂಟ್ರಲ್ ಬೋರ್ಡ್ ಆಫ್ ಫಾರೆಸ್ಟ್ರಿ'ಯ ಸಭೆ, 1987 ರಲ್ಲಿ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಿತ್ತು. ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳೊಡನೆ ಹಿರಿಯ ಅರಣ್ಯಾಧಿಕಾರಿಗಳೂ ಭಾಗವಹಿಸಿದ್ದ ಈ ಸಭೆಯಲ್ಲಿ ಕೆಳಕಂಡ ಐದು ಮುಖ್ಯ ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು.[13]

- ಅರಣ್ಯಾಭಿವೃದ್ಧಿಯ ಮುಖ್ಯ ಉದ್ದೇಶ ನೆಲ, ಜಲಗಳ ಸಂರಕ್ಷಣೆಯಾಗಬೇಕೇ ಹೊರತಾಗಿ ಸರ್ಕಾರದ ಖಜಾನೆಯನ್ನು ತುಂಬುವುದಲ್ಲ.
- ಮಾರುಕಟ್ಟೆ ಹಾಗೂ ಕೈಗಾರಿಕೆಗಳ ಅಗತ್ಯವನ್ನು ಖಾಸಗೀ ಜಮೀನಿನಲ್ಲಿ ಕೃಷಿ ಅರಣ್ಯಗಳ ಅಭಿವೃದ್ಧಿಯಿಂದ ಪೂರೈಸಬೇಕು.
- ಅವನತಿ ಹೊಂದಿದ ಅರಣ್ಯ ಭೂಮಿಯಲ್ಲಿ ವಾಣಿಜ್ಯೋದ್ದೇಶದ ನೆಡುತೋಪುಗಳನ್ನು ಬೆಳೆಸುವುದನ್ನು ನಿಲ್ಲಿಸಬೇಕು.
- ನೈಸರ್ಗಿಕ ಅರಣ್ಯಗಳನ್ನು ಸಂಪೂರ್ಣವಾಗಿ ಕಡಿದುಹಾಕಿ ಆ ಜಾಗದಲ್ಲಿ ಏಕಪ್ರಭೇದದ ನೆಡುತೋಪನ್ನು ನಿರ್ಮಿಸಬಾರದು.
- ಅರಣ್ಯಾಭಿವೃದ್ಧಿಯ, ಸಂರಕ್ಷಣೆಯ ಎಲ್ಲ ಚಟುವಟಿಕೆಗಳಲ್ಲೂ ಸ್ಥಳೀಯರನ್ನು ಸಕ್ರಿಯವಾಗಿ ಒಳಗೊಳ್ಳಬೇಕು.

1988 ರ ಹೊಸ ಅರಣ್ಯ ನೀತಿಗೆ ದಾರಿ ಮಾಡಿಕೊಟ್ಟ ಈ ನಿರ್ಣಯಗಳಿಗೆ ಕರ್ನಾಟಕ ಸರ್ಕಾರ ಮತ್ತು ಅರಣ್ಯ ಇಲಾಖೆಗಳು ಭಾಗಿಗಳಾಗಿದ್ದರೂ ಸಹ, ಪಶ್ಚಿಮಘಟ್ಟ ಅರಣ್ಯ ಹಾಗೂ ಪರಿಸರ ಯೋಜನೆಯಲ್ಲಿ ಜನರ ಭಾಗವಹಿಸುವಿಕೆಗೆ ಯಾವ ಅವಕಾಶವನ್ನೂ ಕಲ್ಪಿಸಿಲ್ಲ. ಜನರನ್ನು ಅರಣ್ಯಗಳಿಂದ ಸಂಪೂರ್ಣವಾಗಿ ಹೊರಗಿಡುವ ಯೋಜನೆಯನ್ನೇ, ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವುದನ್ನು ನಾವಿಲ್ಲಿ ಗಮನಿಸಬೇಕು.

ವಿದೇಶೀ ನೆರವು

ಅಭಿವೃದ್ಧಿ ಯೋಜನೆಯೊಂದಕ್ಕೆ ವಿದೇಶಿ ನೆರವು ಅಗತ್ಯವಾದ ಸಂದರ್ಭದಲ್ಲಿ, ಸಂಬಂಧಪಟ್ಟ ಇಲಾಖೆ ವಿವರವಾದ ಯೋಜನಾ ಪ್ರಸ್ತಾಪವೊಂದನ್ನು ಸಿದ್ಧಪಡಿಸಿದ ನಂತರ, ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುತ್ತದೆ. ರಾಜ್ಯ ಸರ್ಕಾರ ಅದನ್ನು ಪರಿಶೀಲಿಸಿದ ನಂತರ ಯೋಜನಾ ಪ್ರಸ್ತಾಪ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯ ಯೋಜನಾ ಪ್ರಸ್ತಾಪವನ್ನು ವಿಷದವಾಗಿ ಪರೀಕ್ಷಿಸಿ, ತನ್ನ ಶಿಫಾರಸ್ಸಿನೊಂದಿಗೆ ಆರ್ಥಿಕ ವ್ಯವಹಾರಗಳ ಮಂತ್ರಾಲಯಕ್ಕೆ (ಮಿನಿಸ್ಟ್ರಿ ಆಫ್ ಇಕನಾಮಿಕ್ ಅಫೇರ್ಸ್) ಕಳುಹಿಸುತ್ತದೆ. ಅಲ್ಲಿ ಅಂತಿಮ ಅವಲೋಕನೆಗೆ ಒಳಪಟ್ಟನಂತರ, ಸಂಬಂಧಪಟ್ಟ ಅಂತಾರಾಷ್ಟ್ರೀಯ ನೆರವು ನೀಡಿಕೆಯ ಸಂಸ್ಥೆಗೆ ಯೋಜನಾ ಪ್ರಸ್ತಾಪವನ್ನು ಕಳುಹಿಸಲಾಗುತ್ತದೆ. ಸಾಕಷ್ಟು ಸಮಯ ಹಿಡಿಯುವ ಈ ಇಡೀ ಪ್ರಕ್ರಿಯೆಯಲ್ಲಿ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಹಂತದಲ್ಲಿ, ಯೋಜನೆಯ ಕೂಲಂಕುಶ ಪರಿಶೀಲನೆಗೆ ಅಗತ್ಯವಾದ ಅವಕಾಶಗಳಿರುತ್ತವೆ.

ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ ಜನರ ಸಕ್ರಿಯ ಭಾಗವಹಿಸುವಿಕೆಗೆ ಕರ್ನಾಟಕ ಸರ್ಕಾರ ಅವಕಾಶ ಕಲ್ಪಿಸದಿದ್ದರೂ, ಯೋಜನಾ ಪ್ರಸ್ತಾಪವನ್ನು ಕೂಲಂಕುಶವಾಗಿ ಪರಿಶೀಲಿಸುವಾಗ ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ಆ ಕೆಲಸವನ್ನು ಮಾಡಬಹುದಿತ್ತು. ಹೊಸ ಅರಣ್ಯ ನೀತಿಯನ್ನು ಸಂಸತ್ತಿನಲ್ಲಿ ಮಂಡಿಸುವ ಸಿದ್ಧತೆಯಲ್ಲಿದ್ದ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಪ್ರಸ್ತಾಪದಲ್ಲಿ ತಿದ್ದುಪಡಿ ಮಾಡಲು ಅಗತ್ಯವಾದ ಎಲ್ಲ ಮಾಹಿತಿಗಳೂ ಲಭ್ಯವಿತ್ತು, ಅಧಿಕಾರವೂ ಇತ್ತು. ಹೀಗಾಗಿಯೂ ಯಾವ ಬದಲಾವಣೆಯನ್ನೂ ಯೋಜನಾ ಪ್ರಸ್ತಾಪದಲ್ಲಿ ಮಾಡಲಿಲ್ಲವೇಕೆ? ಹೊಸ ಅರಣ್ಯ ನೀತಿ ಇನ್ನೂ ಅಧಿಕೃತವಾಗಿ ಘೋಷಣೆ ಯಾಗಿಲ್ಲವೆಂಬ ಕೇವಲ ತಾಂತ್ರಿಕ ಕಾರಣದಿಂದಲೇ? ತಾನು ತರಲಿರುವ ಹೊಸ ಅರಣ್ಯ ನೀತಿಯಲ್ಲಿ ಸರ್ಕಾರಕ್ಕೆ ನಂಬಿಕೆಯಿರಲಿಲ್ಲವೇ? ತತ್ವಕ್ಕೂ ಆಚರಣೆಗೂ ಸಂಬಂಧ ಅನಗತ್ಯವೆಂಬ ಧೋರಣೆಯೇ? ಹೆಚ್ಚಿನ ಬದಲಾವಣೆಗಳಿಲ್ಲದೇ ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಪ್ರಸ್ತಾಪ, ಅದೇ ಸ್ವರೂಪದಲ್ಲಿ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗೆ ಹೋದದನ್ನು ಪರಿಸರ ಮತ್ತು ಅರಣ್ಯ ಇಲಾಖೆಯ ಕಾರ್ಯದರ್ಶಿಯಾಗಿದ್ದ ಶ್ರೀ ಮಹೇಶ್ ಪ್ರಸಾದ್ ಸಮರ್ಥಿಸಿಕೊಳ್ಳುತ್ತಾರೆ. "ಅಭಿವೃದ್ಧಿ ಯೋಜನೆಗೆ ಕೇಂದ್ರ ಸರ್ಕಾರವೇ ಸಂಪನ್ಮೂಲವನ್ನು ಒದಗಿಸಬೇಕಾದಾಗ, ಯೋಜನಾ ಪ್ರಸ್ತಾಪ ತೀವ್ರ ಸ್ವರೂಪದ ಪರೀಕ್ಷೆಗೆ ಒಳಗಾಗುತ್ತದೆ. ಅಲ್ಪಾವಧಿ ಹಾಗೂ ದೀರ್ಘಾವಧಿಯ ವೆಚ್ಚ, ಪ್ರತಿಫಲಗಳ ತುಲನೆ ನಡೆಯುತ್ತದೆ. ಸಿಬ್ಬಂದಿ, ವಾಹನಗಳು ಮುಂತಾದ ಅನುತ್ಪಾದಕ ವೆಚ್ಚಗಳಿಗೆ ಕಡಿವಾಣ ಬೀಳುತ್ತದೆ. ಇಂಥ ಪರಿಶೀಲನೆಗೆ ಸಾಕಷ್ಟು ಸಮಯವೂ ಹಿಡಿಯುತ್ತದೆ. ಆದರೆ ವಿದೇಶೀ ನೆರವಿನ ಪ್ರಶ್ನೆ ಬಂದಾಗ ಈ ಎಲ್ಲವೂ ಸಹಜವಾಗಿಯೇ

ಸ್ವಲ್ಪ ಸಡಿಲಗೊಳ್ಳುತ್ತವೆ. ಪರಿಶೀಲನೆ ಕೇವಲ ಒಂದು ಮಾಮೂಲೀ ಕ್ರಮವಾಗುವ ಸಂಭವವೂ ಉಂಟು. ನೆರವು ನೀಡುವ ಸಂಸ್ಥೆ ನೀಡುವ ಸಲಹೆ, ಸೂಚನೆ, ಷರತ್ತುಗಳನ್ನು, ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಒಪ್ಪಿಕೊಳ್ಳಲೇ ಬೇಕಾದ ಅನಿವಾರ್ಯತೆಯಿರುವಂಥ ಸಂದರ್ಭಗಳಲ್ಲಿ ಯೋಜನಾ ಪ್ರಸ್ತಾಪ ಮೂಲ ರೂಪದಲ್ಲೇ ಹೋಗುವುದು ತಪ್ಪೇನಲ್ಲ. ಹೇಗಿದ್ದರೂ ಯೋಜನೆಯಲ್ಲಿ ಯಾವ ಅಂಶಗಳು ಸೇರಬೇಕೆಂಬ ಸ್ಪಷ್ಟ ಸೂಚನೆ, ನೆರವು ನೀಡಿಕೆ ಸಂಸ್ಥೆಯಿಂದ ಬಂದೇ ಬರುತ್ತದಲ್ಲ ಎಂಬ ನಿಲುವು ಬಹು ಸಾಮಾನ್ಯ. ಹೀಗಾಗಿ ಯೋಜನಾ ಪ್ರಸ್ತಾಪ ಆಳವಾದ ಪರಿಶೀಲನೆಗೆ ಒಳಗಾಗದಿರುವ ಸಂದರ್ಭಗಳೂ ಉಂಟು. ನೆರವು ನೀಡಿಕೆ ಸಂಸ್ಥೆಯ ಸಲಹೆ, ಸೂಚನೆಗಳು ಬಂದನಂತರ ಒಂದೇ ಬಾರಿಗೆ ಅವೆಲ್ಲವನ್ನು ಅಳವಡಿಸಿಕೊಂಡರಾಯಿತು. ಇದರಿಂದ ಪರಿಶೀಲನೆಯ ನೆಪದಲ್ಲಿ ಯೋಜನಾ ಪ್ರಸ್ತಾಪ ದೀರ್ಘಕಾಲ ಕೇಂದ್ರ ಸರ್ಕಾರದಲ್ಲೇ ಕಾದಿರುವುದೂ ತಪ್ಪುತ್ತದೆ''[14] ಕರ್ನಾಟಕ ಅರಣ್ಯ ಇಲಾಖೆ ಸಲ್ಲಿಸಿದ ಪ್ರಸ್ತಾಪ ಹಿಡಿದದ್ದೂ ಈ ಹಾದಿಯನ್ನೇ!

ಸಾಗರೋತ್ತರ ಅಭಿವೃದ್ಧಿ ಸಂಸ್ಥೆ

ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ ಸಮುದಾಯದ ಸಕ್ರಿಯ ಭಾಗವಹಿಸುವಿಕೆಗೆ ಸೂಕ್ತ ಅವಕಾಶಗಳನ್ನು ಕಲ್ಪಿಸುವಂತೆ ಸಲಹೆ ಬಂದದ್ದು, ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಯೋಜನಾ ಪ್ರಸ್ತಾಪವನ್ನು ಪರಿಶೀಲಿಸಲು ನೇಮಿಸಿದ್ದ ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್‌ಟಿಟ್ಯೂಟ್ ಕಡೆಯಿಂದ. ಇಂಥ ಸಲಹೆಯನ್ನು ನೀಡಲು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಿದ್ದ ಆಸಕ್ತಿ, ಒತ್ತಾಯಗಳನ್ನು ಪರಿಶೀಲಿಸಬೇಕಗುತ್ತದೆ.

ಕರ್ನಾಟಕದಲ್ಲಿ ಸಾಮಾಜಿಕ ಅರಣ್ಯ ಯೋಜನೆ 1984-90 ರ ಅವಧಿಯಲ್ಲಿ ಜಾರಿಯಲ್ಲಿತ್ತು. ಈ ಯೋಜನೆಗೆ ವಿಶ್ವ ಬ್ಯಾಂಕ್ ದೀರ್ಘಾವಧಿಯ ಸಾಲವನ್ನೂ, ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ 14 ದಶಲಕ್ಷ ಪೌಂಡುಗಳ ಅನುದಾನವನ್ನೂ ನೀಡಿತ್ತು. ಉರುವಲು ಸೌದೆಯ ಕೊರತೆಯನ್ನು ನೀಗಿಸಿ, ಸಣ್ಣಮರಮಟ್ಟು, ಮೇವು, ಹಸಿರು ಗೊಬ್ಬರಗಳನ್ನು ಒದಗಿಸುವ ಉದ್ದೇಶದ ಈ ಯೋಜನೆಯಲ್ಲಿ ಖಾಸಗೀ ಭೂಮಿಯಲ್ಲಿ ಕೃಷಿ ಅರಣ್ಯವನ್ನೂ, ಊರೊಟ್ಟಿನ ಭೂಮಿ ಹಾಗೂ ಸರ್ಕಾರೀ ಪಾಳು ಭೂಮಿಯಲ್ಲಿ ಸಮುದಾಯ ಅರಣ್ಯಗಳನ್ನು ಬೆಳೆಸುವ ಕ್ರಮಗಳಿದ್ದವು. ಸ್ಥಳೀಯ ಹಂತದಲ್ಲಿ ಯೋಜನೆಯನ್ನು ರೂಪಿಸುವ ಹಾಗೂ ನಿರ್ಧಾರ ಕೈಗೊಳ್ಳುವ ಎಲ್ಲ ಹಂತಗಳಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಅವಕಾಶ ನೀಡುವುದರೊಡನೆ ಯೋಜನೆಯ ಫಲ ಅತ್ಯಂತ ಬಡವರಿಗೆ ದೊರೆಯುವುದನ್ನು ಖಾತರಿಗೊಳಿಸುವ ಅಂಶಗಳೂ ಸಾಮಾಜಿಕ ಅರಣ್ಯ ಯೋಜನೆಯಲ್ಲಿದ್ದವು. ``ಆದರೆ ಸಾಮಾಜಿಕ ಅರಣ್ಯ ಯೋಜನೆಯ ತತ್ವಗಳನ್ನು ಆಚರಣೆಗೆ ತರಲು ಅರಣ್ಯ ಇಲಾಖೆಯಲ್ಲಿ ತರಬೇಕಿದ್ದ ಸಾಂಸ್ಥಿಕ ಹಾಗೂ ನಿರ್ವಹಣಾ ಕ್ಷೇತ್ರಗಳಲ್ಲಿನ

ಪರಿವರ್ತನೆಗಳಿಗೆ ಯೋಜನೆಯಲ್ಲಿ ಸಾಕಷ್ಟು ಗಮನ ನೀಡಿರಲಿಲ್ಲ. ಯೋಜನೆಯಲ್ಲಿ ಸ್ಥಳೀಯ ಸಮುದಾಯವನ್ನು ಸಕ್ರಿಯವಾಗಿ ಸೇರಿಸಿಕೊಳ್ಳಲು ಅಗತ್ಯವಾದ ಮಾರ್ಗದರ್ಶಿ ಸೂತ್ರಗಳು, ಯೋಜನೆ ಪ್ರಾರಂಭವಾದ ಮೂರು ವರ್ಷಗಳ ನಂತರ ರೂಪುಗೊಂಡಿತು. ಈ ಹಂತದಲ್ಲಿ ಯೋಜನೆಯಲ್ಲಿ ಬದಲಾವಣೆಗಳನ್ನು ತರಲು ಅರಣ್ಯ ಇಲಾಖೆ ಆಸಕ್ತಿ ತೋರಲಿಲ್ಲ. ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಈ ಬಗ್ಗೆ ನೀಡಿದ ಸಲಹೆ, ಸೂಚನೆಗಳನ್ನು ಕರ್ನಾಟಕ ಅರಣ್ಯ ಇಲಾಖೆ ಪರಿಗಣಿಸಲೇ ಇಲ್ಲ. ಈ ಎಲ್ಲ ಕಾರಣಗಳಿಂದ ಸಾಮಾಜಿಕ ಅರಣ್ಯ ಯೋಜನೆ ಯಶಸ್ವಿ ಯಾಗಲಿಲ್ಲ."[15] ಸಾಮಾಜಿಕ ಅರಣ್ಯ ಯೋಜನೆಯಲ್ಲಿನ ಬಡತನ ನಿರ್ಮೂಲನಾ ಅಂಶಗಳು, ಬಡಜನರ ಮೇಲೆ ಯೋಜನೆಯ ಪರಿಣಾಮ, ಸ್ಥಳೀಯ ಸಮುದಾಯದಲ್ಲಿ ಅರಣ್ಯ ನಿರ್ವಹಣೆಗೆ ಸಂಬಂದಿಸಿದಂತೆ ಅಗತ್ಯ ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವಲ್ಲಿನ ವೈಫಲ್ಯ, ಮುಂತಾದವುಗಳಿಗೆ ಸಂಬಂದಿಸಿದಂತೆ ಸಾಮಾಜಿಕ ಅರಣ್ಯ ಯೋಜನೆಯನ್ನು ಕಟುವಾಗಿ ಟೀಕಿಸಿದ ಸರ್ಕಾರೇತರ ಸಂಸ್ಥೆಗಳು, ಅಂತಹ ಯೋಜನೆಗೆ ಅನುದಾನ ನೀಡಿದ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗೆ ತಮ್ಮ ತೀವ್ರ ಅಸಮಾಧಾನ ಹಾಗೂ ವಿರೋಧಗಳನ್ನು ಸೂಚಿಸಿದವು. ಇವುಗಳಿಂದ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಕಲಿತ ಪಾಠ, ಪಶ್ಚಿಮ ಘಟ್ಟ ಅರಣ್ಯ ಹಾಗೂ ಪರಿಸರ ಯೋಜನೆಯ ಪ್ರಸ್ತಾಪದ ಹಂತದಲ್ಲೇ ಅಗತ್ಯವಾದ ಬದಲಾವಣೆಗಳನ್ನು ತರುವಂತೆ ಸೂಚಿಸಲು ಕಾರಣವಾಯಿತು.

ಅಭಿವೃದ್ಧಿಶೀಲ ದೇಶಗಳಲ್ಲಿನ ಯೋಜನೆಗಳಿಗೆ ಆರ್ಥಿಕ ನೆರವು ಒದಗಿಸುವುದಕ್ಕೆ ಸಂಬಂಧಿಸಿದಂತೆ 1985-90 ರ ಅವಧಿಯಲ್ಲಿ ಕಂಡು ಬಂದ ಹೊಸ ಬೆಳವಣಿಗೆಗಳೂ, ಪಶ್ಚಿಮಘಟ್ಟ ಯೋಜನೆಗೆ ಸಂಬಂಧಿಸಿದಂತೆ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ನಿಲುವನ್ನು ಪ್ರಭಾವಿಸಿರುವಂತೆ ಕಂಡು ಬರುತ್ತದೆ. "ನೀಡಿದ ನೆರವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಬೇಕಾದ ಅಗತ್ಯ ಪರಿಸರವನ್ನು ದೇಶದಲ್ಲಿ ರೂಪಿಸುವುದು ಆಯಾ ದೇಶಗಳ ಕರ್ತವ್ಯ. ಇಂಥ ಪರಿಸರದ ಸೂಚಿಗಳಾದ ಪ್ರಜಾ ಪ್ರಭುತ್ವ, ಮಾನವ ಹಕ್ಕುಗಳಿಗೆ ಮನ್ನಣೆ, ವ್ಯವಹಾರದಲ್ಲಿ ಪಾರದರ್ಶಕತೆ, ಉತ್ತಮವಾದ ನ್ಯಾಯ ನೀಡಿಕೆಯ ವ್ಯವಸ್ಥೆ, ಯೋಜನೆಗಳಲ್ಲಿ ಜನರ ಸಹಭಾಗಿತ್ವ, ವಿಕೇಂದ್ರೀಕರಣ ಮುಂತಾದವು ಗಳಿದ್ದಾಗ, ಅಂಥ ಮೌಲ್ಯಗಳನ್ನು ಪ್ರಾಮಾಣಿಕವಾಗಿ ಬೆಂಬಲಿಸಿ, ಬೆಳೆಸುವ ಸಂಕಲ್ಪವಿದ್ದಾಗ ಮಾತ್ರ, ಅಂಥ ದೇಶಗಳು ನೆರವು ಪಡೆಯಲು ಅರ್ಹವಾಗುತ್ತವೆ ಎಂಬ ನಿಲುವು ನೆರವು ನೀಡಿಕೆಯ ಸಂಸ್ಥೆಗಳಲ್ಲಿ ಸ್ಪಷ್ಟವಾಗಿ ಕಂಡುಬರಲು ಪಾರಂಭವಾದವು".[16]

"ಶೀತಲ ಸಮರದ ಅಂತ್ಯ, ಜನಾಭಿಮುಖವಾದ ಜನರ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಿಕೊಡುವ ಹೊಸರೀತಿಯ ಅಭಿವೃದ್ಧಿಯನ್ನು, ಐತಿಹಾಸಿಕವಾದ ಅವಕಾಶಗಳನ್ನು ಸೃಷ್ಟಿಸಿದೆ. ಯೋಜನೆಯೊಂದರ ಆರ್ಥಿಕ, ಪಾರಿಸರಿಕ ಹಾಗೂ ಸಾಮಾಜಿಕ ಯಶಸ್ಸು ಸಾಧ್ಯವಾಗಬೇಕಾದರೆ

ಜನರ ಸಹಭಾಗಿತ್ವ ಅತ್ಯಂತ ಅವಶ್ಯಕ. ಅಭಿವೃದ್ಧಿ ಯೋಜನೆಗಳಿಗೆ ನೆರವು ನೀಡುವ ಎಲ್ಲ ಸಂಸ್ಥೆಗಳು ಇದನ್ನು ಗಮನದಲ್ಲಿಡಬೇಕೆಂದು ವಿಶ್ವಬ್ಯಾಂಕ್ ಕರೆ ಕೊಟ್ಟಿತು."[17] ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಕೂಡ ಈ ನೀತಿಯನ್ನು ಅನುಸರಿಸಿತು.

ಪಾಲುದಾರರ ನಿರೀಕ್ಷೆಗಳು

ಅರಣ್ಯ ಸಂಪನ್ಮೂಲದ ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಿ, ಪರಿಸರ ಸಂರಕ್ಷಣೆ ಹಾಗೂ ಅಭಿವೃದ್ಧಿ - ಈ ಎರಡೂ ಗುರಿಗಳನ್ನು ಸಾಧಿಸುವುದು ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಮುಖ್ಯ ಉದ್ದೇಶ. ಇದು ಸಾಧ್ಯವಾಗಬೇಕಾದರೆ ಯೋಜನೆಯಲ್ಲಿ ಭಾಗವಹಿಸುತ್ತಿರುವ ಎಲ್ಲ ಪಾಲುದಾರರಿಗೂ ಅನ್ವಯವಾಗುವಂತೆ ಸಾಮಾನ್ಯವಾದ ನಿರೀಕ್ಷೆಯಿರಬೇಕು, ಸಮಾನವಾದ ಆಸಕ್ತಿ, ಕಾಳಜಿಗಳಿರಬೇಕು. ಇದು ಎಷ್ಟರ ಮಟ್ಟಿಗಿದೆ ಎನ್ನುವುದು ಯೋಜನೆಯ ಯಶಸ್ಸಿನ ಮೇಲೆ ಪ್ರಭಾವ ಬೀರುತ್ತದೆ.

ಪಶ್ಚಿಮ ಘಟ್ಟ ಯೋಜನೆಯಲ್ಲಿನ ನಾಲ್ಕು ಪಾಲುದಾರರೆಂದರೆ ಕರ್ನಾಟಕ ಅರಣ್ಯ ಇಲಾಖೆ, ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ, ಫೆವಾರ್ಡ್-ಕೆ ಮುಂಚೂಣಿಯಲ್ಲಿರುವ ಸರ್ಕಾರೇತರ ಸಂಸ್ಥೆಗಳು ಹಾಗೂ ಅರಣ್ಯಕ್ಕೆ ಸಮೀಪವಾಗಿ ವಾಸಿಸುವ ಸ್ಥಳೀಯ ಸಮುದಾಯಗಳು. ಅರಣ್ಯ ಇಲಾಖೆಯ ಪಾಲಿಗೆ, ಇದು ಅರಣ್ಯೀಕರಣಕ್ಕೆ ಅಧಿಕ ಪ್ರಮಾಣದಲ್ಲಿ ಬಂಡವಾಳವನ್ನೊದಗಿಸುವ ಯೋಜನೆ. ಅರಣ್ಯ ನಿರ್ವಹಣೆಗೆ ಸಂಬಂಧಿಸಿದಂತೆ ತನ್ನ ತಾಂತ್ರಿಕ ಸಾಮರ್ಥ್ಯದ ಮಟ್ಟವನ್ನು ಹೆಚ್ಚಿಸಿ ಕೊಳ್ಳುವ ಅವಕಾಶದ ಜೊತೆಗೆ ಅರಣ್ಯ ಸಂರಕ್ಷಣೆಗೆ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆಂಬುದು ಅರಣ್ಯ ಇಲಾಖೆಯ ನಿರೀಕ್ಷೆ. ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗೆ ಇದು, ಭಾರತ ಮತ್ತು ಬ್ರಿಟನ್‌ಗಳ ಸಹಕಾರದಿಂದ ನಡೆಯಲಿರುವ ಉಷ್ಣವಲಯದ ಅರಣ್ಯಗಳ ಸಂರಕ್ಷಣೆಗೆ ಸಂಬಂಧಿಸಿದ ಪ್ರತಿಷ್ಠಿತ ಪರಿಸರ ಯೋಜನೆ. ಇದರ ಜೊತೆಗೆ ಸ್ಥಳೀಯ ಸಂಪನ್ಮೂಲಗಳನ್ನು ಸಮುದಾಯವೇ ನಿರ್ವಹಿಸಿರುವ ಹೊಸ ಪ್ರಯೋಗವೂ ಹೌದು. ಸರ್ಕಾರೇತರ ಸಂಸ್ಥೆಗಳಿಗೆ, ಜನರ ಭಾಗವಹಿಸುವಿಕೆ ಹಾಗೂ ಬಡತನ ನಿವಾರಣೆಯ ಮೇಲೆ ಒತ್ತಿರುವ ಪ್ರಮುಖ ಯೋಜನೆಯೊಂದರಲ್ಲಿ ನಿರ್ಣಾಯಕವಾದ ಪಾತ್ರ ವಹಿಸುವ ಅವಕಾಶ. ಸ್ಥಳೀಯ ಸಮುದಾಯಗಳಿಗೆ ತಮ್ಮ ಅಗತ್ಯಗಳನ್ನು ಪೂರೈಸಲಿರುವ ಯೋಜನೆಯ ಎಲ್ಲ ಹಂತಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಯೋಜನೆಯ ರೂಪು -ರೇಷೆಗಳನ್ನು ನಿರ್ಧರಿಸಿ, ಅನುಷ್ಠಾನಗೊಳಿಸಲು ಸುಸಂಧಿ.

ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಗೆ ಸಂಬಂಧಿಸಿದಂತೆ, ಯೋಜನೆಯಲ್ಲಿನ ನಾಲ್ಕು ಪಾಲುದಾರರ ನಿರೀಕ್ಷೆಗಳನ್ನು ಪರಿಶೀಲಿಸಿದಾಗ, ಅರಣ್ಯ ಇಲಾಖೆ ಒಂದು ಕಡೆ, ಉಳಿದ ಪಾಲುದಾರರು ಬೇರೊಂದು ಕಡೆಯಿರುವುದು ಸ್ಪಷ್ಟವಾಗುತ್ತದೆ. ಯೋಜನೆಯ ಮುಖ್ಯ

ಪಾಲುದಾರರಾದ ಅರಣ್ಯ ಇಲಾಖೆ ಹಾಗೂ ಸಾಗರೋತ್ತರ ಸಂಸ್ಥೆಗಳ ಗುರಿ, ನಿರೀಕ್ಷೆಗಳ ನಡುವೆ ಸಂಬಂಧವೇ ಇಲ್ಲದಿರುವುದೂ ಗೋಚರಿಸುತ್ತದೆ. ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಹಾಗೂ ಸರ್ಕಾರೇತರ ಸಂಸ್ಥೆಗಳ ಉದ್ದೇಶಗಳಲ್ಲಿ ಸಾಮ್ಯವಿದ್ದರೂ ಅದು ಹೊರನೋಟಕ್ಕೆ ಮಾತ್ರ. "1989 ರಲ್ಲಿ ಬ್ರಿಟಿಷ್ ಸರ್ಕಾರ ಪರಿಸರ ಸಂರಕ್ಷಣೆಗೆ, ಅದರಲ್ಲೂ ಮುಖ್ಯವಾಗಿ ಉಷ್ಣವಲಯದ ಅರಣ್ಯಗಳ ಸಂರಕ್ಷಣೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಬ್ರಿಟಿಷ್ ನೆರವು ನಿಧಿಯ ಗಣನೀಯ ಭಾಗವನ್ನು ಮೀಸಲಿಡಲು ನಿರ್ಧರಿಸಿತ್ತು. 1992 ರಲ್ಲಿ ಈ ಹಣದಲ್ಲಿ ಉಳಿದಿರುವ ಭಾಗವನ್ನು ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಗೆ ನೀಡುವಂತೆ ಅಂತಾರಾಷ್ಟ್ರೀಯ ನೆರವು ರಾಜಕಾರಣದ ಲಾಬಿ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ಮೇಲೆ ತೀವ್ರ ಒತ್ತಡವನ್ನು ಹೇರಿತ್ತು. ಕರ್ನಾಟಕ ಅರಣ್ಯ ಇಲಾಖೆ ಮತ್ತು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳ ನಡುವೆ ಯೋಜನೆಯ ನಿರೀಕ್ಷೆಗೆ ಸಂಬಂಧಿಸಿದಂತೆ ಒಮ್ಮತವಿಲ್ಲದಿದ್ದರೂ ನೆರವು ದೊರೆಯುವುದರಲ್ಲಿ ಅನುಮಾನವಿರಲಿಲ್ಲ. ಎಲ್ಲ ಸರ್ಕಾರೇತರ ಸಂಸ್ಥೆಗಳೂ ಇದನ್ನು ತೀವ್ರವಾಗಿ ವಿರೋಧಿಸಿದ್ದವು."[18] ಸಾಮಾಜಿಕ ಅರಣ್ಯ ಯೋಜನೆಯ ವೈಫಲ್ಯದ ಹಿನ್ನೆಲೆಯಲ್ಲಿ ಸರ್ಕಾರೇತರ ಸಂಸ್ಥೆಗಳು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯನ್ನು ಕಟುವಾಗಿ ಟೀಕಿಸಿದ್ದವು. ಅರಣ್ಯ ಇಲಾಖೆ ಮತ್ತು ಸರ್ಕಾರೇತರ ಸಂಸ್ಥೆಗಳ ಸಂಬಂಧ ತಿಕ್ಕಾಟ, ಘರ್ಷಣೆ, ಅಪನಂಬಿಕೆಗಳಿಂದ ಕೂಡಿತ್ತು. ಪ್ರಜಾಪ್ರಭುತ್ವ, ವಿಕೇಂದ್ರೀಕರಣ, ಪಾರದರ್ಶಕತೆ ಮುಂತಾದವುಗಳನ್ನೊಳಗೊಂಡ, ಸಹಭಾಗಿತ್ವ ತತ್ವಗಳ ಮೇಲೆ ಆಧಾರಿತವಾದ ಜಂಟಿ ಅರಣ್ಯ ಯೋಜನೆ ಆರಂಭವಾದದ್ದು ಪರಸ್ಪರ ಅಪನಂಬಿಕೆಯ ಇಂಥ ವಿಷಮ ಪರಿಸ್ಥಿತಿಯಲ್ಲಿ.

ಅರಣ್ಯ ಇಲಾಖೆಯ ಅಸಹಕಾರ

ಅರಣ್ಯ ಇಲಾಖೆ ಸಲ್ಲಿಸಿದ ಮೊದಲನೆಯ ಪ್ರಸ್ತಾಪ, ಇಲಾಖೆ ಉತ್ತರ ಕನ್ನಡದ ಕಾಯ್ದಿಟ್ಟ ಅರಣ್ಯದಲ್ಲಿ ಅನುಸರಿಸಿಕೊಂಡು ಬಂದಿದ್ದ ನೀತಿಯ ಮುಂದುವರಿಕೆಯೇ ಆಗಿತ್ತು. ಕಟ್ಟುನಿಟ್ಟಾದ ನಿಯಂತ್ರಣ ಕ್ರಮಗಳು ಅರಣ್ಯ ಸಂಪನ್ಮೂಲಗಳ ಅತಿಬಳಕೆಯನ್ನು ತಪ್ಪಿಸಲಾರದು ಎಂಬ ಸತ್ಯವನ್ನು ಯೋಜನಾ ಪ್ರಸ್ತಾಪದಲ್ಲಿ ಇಲಾಖೆ ಗುರುತಿಸಿತ್ತು. ಆದರೂ ಅರಣ್ಯದ ಮೇಲೆ ಅವಲಂಬಿತರಾದವರನ್ನು ಅರಣ್ಯಕ್ಕೆ ಹೋಗದಂತೆ ತಡೆದು ಅವರ ಅಗತ್ಯಗಳನ್ನು ಡಿಪೋಗಳಿಂದ ಪೂರೈಸುವ ಪ್ರಸ್ತಾಪ, ಅರಣ್ಯ ಮತ್ತು ಸ್ಥಳೀಯ ಸಮುದಾಯಗಳ ನಡುವಿನ ಸಂಬಂಧವನ್ನು ಮತ್ತಷ್ಟು ಹದಗೆಡಿಸುವಂಥದಾಗಿತ್ತು. ಅರಣ್ಯ ಇಲಾಖೆ ಸಲ್ಲಿಸಿದ ಪ್ರಸ್ತಾಪವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಟ್ಟುನಿಟ್ಟಿನ ನಿಯಂತ್ರಣವೇ ಇಲಾಖೆಯ ಮುಖ್ಯ ಉದ್ದೇಶವಾಗಿದ್ದು, ಸ್ಥಳೀಯ ಸಮುದಾಯಗಳ ಬೇಡಿಕೆಗಳ ಪೂರೈಕೆ ಆದ್ಯತೆಯ ವಿಷಯವೇ ಅಲ್ಲವೆಂಬುದು ಸ್ಪಷ್ಟವಾಗುತ್ತದೆ.

ಯೋಜನೆಯ ಪ್ರಸ್ತಾಪವನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಿದ ನಂತರ ನಡೆದ ವ್ಯಾಪಕ ಚರ್ಚೆ, ಸಮಾಲೋಚನೆ, ಸಭೆ, ಸಮಾವೇಶ, ಕಾರ್ಯಾಗಾರಗಳು, ಯೋಜನೆಯ ಗುರಿ, ಉದ್ದೇಶಗಳನ್ನು ಪುನರ್ನಿರೂಪಿಸುವುದರಲ್ಲಿ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗೆ ಪ್ರಬಲ ಬೆಂಬಲವನ್ನೊದಗಿಸಿದರೂ, ಅರಣ್ಯ ಇಲಾಖೆ ಆ ಬಗ್ಗೆ ಪ್ರತಿಕ್ರಿಯಿಸಲೇ ಇಲ್ಲ. ಸಾಮಾಜಿಕ ಅರಣ್ಯ ಯೋಜನೆಯ ನಂತರ ಸರ್ಕಾರೇತರ ಸಂಸ್ಥೆಗಳಿಗೆ ಅರಣ್ಯ ಇಲಾಖೆಯ ಬಗ್ಗೆ ಹೆಚ್ಚಿನ ವಿಶ್ವಾಸವಿರಲಿಲ್ಲ. ಸಾಮಾಜಿಕ ಅರಣ್ಯ ಯೋಜನೆಯ ಸಂದರ್ಭದಲ್ಲಿ ಜನರ ಭಾಗವಹಿಸುವಿಕೆಗೆ ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿ ಭರವಸೆ ನೀಡಿದ್ದ ಅರಣ್ಯ ಇಲಾಖೆ ತನ್ನ ಮಾತನ್ನು ಉಳಿಸಿಕೊಂಡಿರಲಿಲ್ಲ, ಆದರೂ, ಸಮುದಾಯವನ್ನು ಸಂಘಟಿಸುವ ಕೆಲಸದಲ್ಲಿ ಸಾಕಷ್ಟು ಪರಿಣಿತಿಯಿದ್ದ ಸರ್ಕಾರೇತರ ಸಂಸ್ಥೆಗಳು, ಯೋಜನಾ ಪ್ರಸ್ತಾಪದಲ್ಲಿ ಸಹಭಾಗಿತ್ವ ತತ್ವಗಳನ್ನು ಅಳವಡಿಸಿದಲ್ಲಿ ಅಂಥ ಯೋಜನೆಯನ್ನು ಬೆಂಬಲಿಸಲು ನಿರ್ಧರಿಸಿದವು. ಅದರೊಂದಿಗೆ, ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿಯ ತತ್ವಗಳನ್ನು ಅಳವಡಿಸಲು ಅಗತ್ಯವಾದ ಸಲಹೆ, ಸೂಚನೆಗಳನ್ನೂ ನೀಡಿದವು. ಆದರೆ ಈ ಸಲಹೆಗಳಿಗೆ ಅರಣ್ಯ ಇಲಾಖೆ ಯಾವ ಪ್ರತಿಕ್ರಿಯೆಯನ್ನೂ ತೋರಲಿಲ್ಲ. "ಅರಣ್ಯ ನೀತಿಯ ಬಗ್ಗೆ ಹಾಗೂ ವಿಶೇಷವಾಗಿ ಪಶ್ಚಿಮಘಟ್ಟ ಅರಣ್ಯ ಯೋಜನೆಯ ಬಗ್ಗೆ ಇಲಾಖೆಯೊಡನೆ ಚರ್ಚಿಸಲು ಸರ್ಕಾರೇತರ ಸಂಸ್ಥೆಗಳು ಮಾಡಿದ ಎಲ್ಲ ಪ್ರಯತ್ನಗಳನ್ನೂ ಅರಣ್ಯ ಇಲಾಖೆ ವ್ಯವಸ್ಥಿತವಾಗಿ ವಿಫಲಗೊಳಿಸಿತು. ಅಗತ್ಯವಾದ ಮಾಹಿತಿಯನ್ನು ತಡೆಹಿಡಿಯುವುದರ ಜೊತೆಗೆ, ಸರ್ಕಾರೇತರ ಸಂಸ್ಥೆಗಳು ಯೋಜನಾ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಮಾಡಿದ ಸಲಹೆಗಳನ್ನು ಸಾರಾ ಸಗಟಾಗಿ ತಿರಸ್ಕರಿಸಿತು. ಅರಣ್ಯ ಇಲಾಖೆ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ನಡೆದ ಕೆಲವೇ ಸಮಾಲೋಚನೆಗಳಲ್ಲಿ, ಸೂಕ್ತವಾದ ನಿರ್ಧಾರ ಕೈಗೊಳ್ಳುವ ಅಧಿಕಾರವಿರುವುದು ಇಲಾಖೆಗೆ ಮಾತ್ರ ಎಂಬುದನ್ನು ಸ್ಪಷ್ಟವಾಗಿ ತೋರಿಸಿತು. ಮಾಹಿತಿಯ ಪೂರೈಕೆ, ಶಿಫಾರಸುಗಳ ಪರಿಗಣನೆ, ಸರ್ಕಾರೇತರ ಸಂಸ್ಥೆಗಳೊಡನೆ ಸಮಾಲೋಚನೆಯ ಪ್ರಕ್ರಿಯೆಗಳು ವ್ಯವಸ್ಥಿತವಾಗಿರಲಿಲ್ಲ. "ಇಂಥ ಪರಿಸ್ಥಿತಿಯನ್ನು ಎದುರಿಸಲು ಕರ್ನಾಟಕ ಸರ್ಕಾರದ ಅಭಿವೃದ್ಧಿ ಆಯುಕ್ತರು ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವಶಾಲಿಯಾಗಿರುವ ಸರ್ಕಾರೇತರ ಸಂಸ್ಥೆಯಾದ 'ಆಕ್ಸ್‌ಫಾಮ್'ನ ನೆರವನ್ನು ಪಡೆಯದೇ ಬೇರೆಯ ದಾರಿಯೇ ಇರಲಿಲ್ಲ."[19] ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯನ್ನು ಜನಾಭಿಮುಖವಾಗಿ ಮಾಡಿ, ಸಹಭಾಗಿತ್ವ ಅಭಿವೃದ್ಧಿಯ ತತ್ವಗಳನ್ನು ಯೋಜನಾ ಪ್ರಸ್ತಾಪದಲ್ಲಿ ಅಳವಡಿಸಲು, ತನಗಿರುವ ಮಿತಿಯಲ್ಲೇ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಮಾಡಿದ ಪ್ರಯತ್ನಗಳು ಸಾಕಷ್ಟು ಪ್ರಾಮಾಣಿಕವಾಗಿದ್ದವೆಂದು ಬಹುತೇಕ ಸರ್ಕಾರೇತರ ಸಂಸ್ಥೆಗಳು ಅಭಿಪ್ರಾಯ ಪಡುತ್ತವೆ. ಆದರೆ ಕರ್ನಾಟಕ ಅರಣ್ಯ ಇಲಾಖೆ ಬಗ್ಗೆ ಈ ಮಾತು ಬರುವುದಿಲ್ಲ. ಅಷ್ಟೇ ಅಲ್ಲ "ಅರಣ್ಯ ಇಲಾಖೆ, ಪಶ್ಚಿಮ ಘಟ್ಟ ಅರಣ್ಯ ಯೋಜನೆಯನ್ನು, ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಸೂಚಿಸಿದ ಬದಲಾವಣೆ

ಗಳೊಂದಿಗೆ ಒಪ್ಪಿಕೊಳ್ಳುತ್ತದೆ. ಆದರೆ ಅದನ್ನು ಅನುಷ್ಠಾನಗೊಳಿಸುವುದಿಲ್ಲ. ಕಾರ್ಯಗತ ಮಾಡುವ ಪ್ರಕ್ರಿಯೆಗೆ ಅನೇಕ ಅಡೆತಡೆಗಳನ್ನು ತರುತ್ತದೆ''[20] ಎಂಬ ಅನುಮಾನವನ್ನೂ ಸರ್ಕಾರೇತರ ಸಂಸ್ಥೆಗಳು ವ್ಯಕ್ತಪಡಿಸಿದ್ದವು.

ಕೇಂದ್ರ ಸರ್ಕಾರದ ಒತ್ತಡ

ಕರ್ನಾಟಕ ಅರಣ್ಯ ಇಲಾಖೆಗೆ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯಿಂದ ನೆರವು ಒದಗಿದರೂ ಸಹ, ಅದು ಮೂಲಭೂತವಾಗಿ ಭಾರತ ಮತ್ತು ಬ್ರಿಟನ್‌ಗಳ ನಡುವಿನ ಒಪ್ಪಂದದ ಫಲ. ಕರ್ನಾಟಕ ಅರಣ್ಯ ಇಲಾಖೆಗೆ ಹಣ ಒದಗಿ ಬರುವುದು ಕೂಡ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಮೂಲಕವಾಗಿಯೇ. ಇದರೊಂದಿಗೆ ವಾರ್ಷಿಕ ಆಯವ್ಯಯದಲ್ಲಿ ರಾಜ್ಯದ ಅರಣ್ಯ ಇಲಾಖೆಗೆ ಹಣ ದೊರೆಯುವುದೂ ಈ ಮಂತ್ರಾಲಯದ ಮೂಲಕವಾಗಿ. ಹೀಗಾಗಿ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ಕರ್ನಾಟಕ ಅರಣ್ಯ ಇಲಾಖೆಯ ಮೇಲೆ ತೀವ್ರ ಪ್ರಭಾವ ಬೀರ ಬಲ್ಲದೆಂಬುದರಲ್ಲಿ ಅನುಮಾನವೇ ಇಲ್ಲ. "ನೆರವು ನೀಡುವ ಸಂಸ್ಥೆ ವಿಧಿಸುವ ಎಲ್ಲ ಷರತ್ತುಗಳನ್ನೂ ನೆರವು ಪಡೆಯುವ ದೇಶ ಒಪ್ಪಿಕೊಳ್ಳಲೇ ಬೇಕೆಂಬುದೇನೂ ಇಲ್ಲ. ಅಲ್ಲಿ ಕೂಡ ಚರ್ಚೆ, ಸಂಧಾನಗಳಿಗೆ ಅವಕಾಶವುಂಟು. ಆದರೆ ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಸಂದರ್ಭದಲ್ಲಿ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಸೂಚಿಸಿದ ಬಹುತೇಕ ಬದಲಾಣೆಗಳು, ಭಾರತ ಸರ್ಕಾರದ 1988ರ ಹೊಸ ಅರಣ್ಯ ನೀತಿಗೆ ಅನುಗುಣವಾಗಿಯೇ ಇದ್ದುದರಿಂದ ಅವುಗಳನ್ನು ಒಪ್ಪಿಕೊಳ್ಳಲು ಸರ್ಕಾರದ ಅಭ್ಯಂತರವೇನೂ ಇರಲಿಲ್ಲ. ಯೋಜನೆಯ ಅನುಷ್ಠಾನದಲ್ಲಿ ಸ್ಥಳೀಯವಾಗಿ ಅಲ್ಪ-ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದುದು ಸಹಜ .ಈ ಅಂಶವನ್ನು ಕರ್ನಾಟಕ ಅರಣ್ಯ ಇಲಾಖೆಯ ತೀರ್ಮಾನಕ್ಕೆ ಬಿಟ್ಟು ಉಳಿದಂತೆ ಪರಿಷ್ಕೃತ ಯೋಜನಾ ಪ್ರಸ್ತಾಪಕ್ಕೆ ಒಪ್ಪಿಗೆ ಸೂಚಿಸಲಾಯಿತು.''[21] ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ಸಲಹೆ, ಸೂಚನೆಗಳು 1988 ರ ಹೊಸ ಅರಣ್ಯ ನೀತಿಗೆ ಅನುಸಾರವಾಗಿತ್ತೆಂದು ಕೇಂದ್ರ ಸರ್ಕಾರ ಹೇಳಿದರೂ, ಕರ್ನಾಟಕ ಅರಣ್ಯ ಇಲಾಖೆ ಅದನ್ನು ವ್ಯವಸ್ಥಿತವಾಗಿ ವಿರೋಧಿಸಿದ್ದೇಕೆ ಎಂಬ ಪ್ರಶ್ನೆಗೆ ಖಚಿತ ಉತ್ತರ ದೊರೆಯುವುದಿಲ್ಲ. ಅದೇನೇ ಇದ್ದರೂ ಕೇಂದ್ರ ಸರ್ಕಾರದ ಒತ್ತಾಯಕ್ಕೆ ಮಣಿಯದೇ ಬೇರೆ ದಾರಿಯೇ ಇರಲಿಲ್ಲವೆಂಬುದಂತೂ ಬಹಳ ಸ್ಪಷ್ಟವಾಗಿ ತೋರುತ್ತದೆ. ಸರ್ಕಾರೇತರ ಸಂಸ್ಥೆಗಳು, ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ಸಂಧಾನಕಾರರು, ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಗುರಿಯನ್ನು ಸ್ಥಳೀಯ ಸಮುದಾಯದ ಭಾಗವಹಿಸುವಿಕೆಯಿಲ್ಲದೇ ತಲುಪುವುದು ಸಾಧ್ಯವಿಲ್ಲವೆನ್ನುವುದನ್ನು ಅರಣ್ಯ ಇಲಾಖೆಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದವು. ಆ ಪ್ರಯತ್ನಗಳಿಗೆ ಪ್ರತಿಕ್ರಿಯಿಸದಿದ್ದ ಅರಣ್ಯ ಇಲಾಖೆ, ಕೇಂದ್ರ

ಸರ್ಕಾರದ ಸೂಚನೆಯಂತೆ ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವದ ಪರಿಕಲ್ಪನೆಯನ್ನು ಒಪ್ಪಿಕೊಂಡಿತು. ಅಷ್ಟಾದರೂ ಸಹಭಾಗಿತ್ವ ಅಭಿವೃದ್ಧಿಯ ತತ್ವಗಳು "ಯೋಜನೆಗೆ ಹೊಸದಾಗಿ ತಗುಲಿಕೊಂಡ ಅಂಶ" (ಆ್ಯಡ ಆನ್ ಕಾಂಪೊನೆಂಟ್) ವಾಯಿತೇ ವಿನಃ ಇಡೀ ಯೋಜನೆಯಲ್ಲಿ ಅಂತರ್ಗತಗೊಂಡ ಸತ್ವವಾಗಲಿಲ್ಲ. ಪಶ್ಚಿಮಘಟ್ಟ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ತತ್ವದ ಅಳವಡಿಕೆಯನ್ನು "ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ನೆರವು ನಿಂತ ಕೂಡಲೇ ಕಣ್ಮರೆಯಾಗಲಿರುವ ನವವಸಾಹತು ಶಾಹಿಯ ಹೇರಿಕೆಯೆಂದು ಹಿರಿಯ ಅರಣ್ಯಾಧಿಕಾರಿಗಳು ಬಣ್ಣಿಸಿದರು."[22] ಪರಿಷ್ಕೃತ ಯೋಜನೆಯನ್ನು ಒಪ್ಪಿಕೊಂಡಿದ್ದರೂ ಅರಣ್ಯ ಇಲಾಖೆಯ ಹಿರಿಯ ಅಧಿಕಾರಗಳ ಅಸಮಾಧಾನ ಈ ಮಾತುಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿತ್ತು. ಯೋಜನೆಯ ಅನುಷ್ಠಾನದಲ್ಲಿ ಮುಸುಕಿನೊಳಗೇ ನಡೆಯಲಿರುವ ಗುದ್ದಾಟದ ಸ್ಥೂಲ ಸ್ವರೂಪದ ಮೇಲೆ ಬೆಳಕು ಚೆಲ್ಲಿತ್ತು.

ಸಾಂಸ್ಥಿಕ ಬದಲಾವಣೆಗಳು

ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ, ಭಾಗವಹಿಸುವಿಕೆಯನ್ನು ಅಳವಡಿಸಿ ಕೊಂಡು, ಅನುಷ್ಠಾನಗೊಳಿಸಲು ಹಲವಾರು ಸಾಂಸ್ಥಿಕ ಬದಲಾವಣೆಗಳು ಅಗತ್ಯವಾಗುತ್ತವೆ. ಈ ಸಾಂಸ್ಥಿಕ ಅಗತ್ಯಗಳನ್ನು ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಅಂತಿಮ ರೂಪದಲ್ಲಿ ಎಷ್ಟರ ಮಟ್ಟಿಗೆ ಗುರುತಿಸಲಾಗಿದೆ, ಈ ಬದಲಾವಣೆಗಳನ್ನು ತರಲು ಎಂಥ ಕಾರ್ಯೋಪಾಯಗಳನ್ನು ರೂಪಿಸಲಾಗಿದೆ ಎಂಬುದನ್ನು ಪರಿಶೀಲಿಸಬೇಕು. ಈ ಕಾರ್ಯೋಪಾಯಗಳು ಯೋಜನೆಯ ದಾಖಲೆ ಯಲ್ಲಿ ಸ್ಪಷ್ಟವಾಗಿ ನಿರೂಪಿತಗೊಂಡಿದ್ದಲ್ಲಿ, ಆ ಮಟ್ಟಿಗೆ ಯೋಜನೆ, ಸಹಭಾಗಿತ್ವ ನೀತಿಗೆ ಸಂಬಂಧಿಸಿದಂತೆ ಪ್ರಾಮಾಣಿಕವಾಗುತ್ತದೆ.

ಕಾರ್ಯ ಯೋಜನೆ ಮತ್ತು ಕಿರು ಯೋಜನೆಗಳ ಸಮನ್ವಯ

ಅರಣ್ಯ ಇಲಾಖೆಯ ಸಂಪ್ರದಾಯದಂತೆ ಪ್ರತಿಯೊಂದು ಅರಣ್ಯ ವಿಭಾಗವೂ ಅರಣ್ಯ ಸಂಪನ್ಮೂಲಗಳ ಬಳಕೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ 'ಕಾರ್ಯಯೋಜನೆ' ಯೊಂದನ್ನು (ವರ್ಕಿಂಗ್ ಪ್ಲಾನ್) ಸಿದ್ಧಪಡಿಸುತ್ತದೆ. ಇದು ಸಂಪೂರ್ಣವಾಗಿ ಇಲಾಖೆಗೆ ಸಂಬಂಧಪಟ್ಟ ತಾಂತ್ರಿಕ ಕೆಲಸ. ಜಂಟೀ ಅರಣ್ಯ ಯೋಜನೆಯಲ್ಲಿ ಇದಕ್ಕೆ ತೀರಾ ವಿರುದ್ಧವಾಗಿ ಇನ್ನೊಂದು ತುದಿಯಲ್ಲಿ ಅರಣ್ಯ ಇಲಾಖೆ ಮತ್ತು ಸ್ಥಳೀಯ ಸಮುದಾಯಗಳು ಜೊತೆಗೆ ಸೇರಿ 'ಕಿರು ಯೋಜನೆ'ಯೊಂದನ್ನು (ಮೈಕ್ರೋ ಪ್ಲಾನ್) ರೂಪಿಸಬೇಕು. ಕಾರ್ಯ ಯೋಜನೆಯಲ್ಲಿನ 'ಟಾಪ್-ಡೌನ್ ಅಪ್ರೋಚ್' ಹಾಗೂ ಕಿರುಯೋಜನೆಯಲ್ಲಿನ 'ಬಾಟಮ್ ಅಫ್ ಅಪ್ರೋಚ್'ಗಳೆರಡನ್ನೂ ಸಮನ್ವಯಗೊಳಿಸಬೇಕು. ಕಿರು ಯೋಜನೆಯಲ್ಲಿ ಕಂಡುಬರುವ ಸ್ಥಳೀಯ ಸಮುದಾಯದ ಅಗತ್ಯ, ಆಸೆ-ಆಶೋತ್ತರಗಳು, ಆ ವಿಭಾಗದ ಕಾರ್ಯಯೋಜನೆಯ

ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸ್ಪಷ್ಟವಾಗಿ ಕಾಣಿಸಬೇಕು. ಆದರೆ ಪಶ್ಚಿಮಘಟ್ಟ ಅರಣ್ಯ ಯೋಜನೆಯ ಅಂತಿಮ ದಾಖಲೆ ಇದನ್ನು ಹೇಗೆ ಸಾಧಿಸಬೇಕು ಎಂಬುದಕ್ಕೆ ಯಾವ ಮಾರ್ಗದರ್ಶನವನ್ನೂ ನೀಡುವುದಿಲ್ಲ. ಅರಣ್ಯ ಇಲಾಖೆಗೆ ಈ ಬಗ್ಗೆ ಸ್ಪಷ್ಟ ಕಲ್ಪನೆಯೂ ಇಲ್ಲ, ಆಸಕ್ತಿಯೂ ಇಲ್ಲ. ಹೀಗಾಗಿ ಇದು ಕೇವಲ ಘೋಷಣೆಯಾಗಿಯೆ ಉಳಿದಿದೆ. ಈ ಎರಡು ಯೋಜನೆಗಳನ್ನು ಸಮನ್ವಯಗೊಳಿಸುವ ಪ್ರಯತ್ನಗಳು ಅಪವಾದವೆಂಬಂತೆ ಒಂದೆರಡು ಕಡೆಗಳಲ್ಲಿ ನಡೆದಿದ್ದರೂ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸುವ ಸರ್ಕಾರೇತರ ಸಂಸ್ಥೆಗಳ ಕೋರಿಕೆಗೆ ಇಲಾಖೆ ವಿರೋಧ ವ್ಯಕ್ತಪಡಿಸುತ್ತದೆ.

ಅಧಿಕಾರಿ ಮತ್ತು ಅಧಿಕಾರ

ಅರಣ್ಯ ಇಲಾಖೆಯೊಳಗೆ ಬದಲಾವಣೆಗಳನ್ನು ತರಲು, ಹೊಸ ಅಧಿಕಾರಿಗಳನ್ನು ನೇಮಿಸಿ, ಅವರಿಗೆ ತರಬೇತಿ ನೀಡಿ ಮಾಹಿತಿಯ ಲಭ್ಯತೆಯನ್ನಾಧರಿಸಿ ನಿರ್ಧಾರಗಳನ್ನು ಕೈಗೊಳ್ಳುವ ಹೊಸ ವಿಧಾನಗಳನ್ನು ಸೂಚಿಸಲಾಗಿದೆ. ಹಿರಿಯ ಅಧಿಕಾರಿಗಳ ಮಟ್ಟದಲ್ಲಿ ಹೊಸ ಹುದ್ದೆಯನ್ನು ಸೃಷ್ಟಿಸಿ, ಅದಕ್ಕೆ ಅಗತ್ಯವಾದ ತರಬೇತಿಗೆ ವ್ಯವಸ್ಥೆಮಾಡಿರುವುದು ಸರಿಯಾದ ಹೆಜ್ಜೆಯೇನೋ ಹೌದು. ಆದರೆ ಈ ಹೊಸ ಹುದ್ದೆಗೆ ಬರುವ ಅಧಿಕಾರಿಗಳು ರೂಪುಗೊಂಡಿರುವುದು ಅರಣ್ಯ ಇಲಾಖೆಯ ನೀತಿ, ನಿಲುವು, ಧೋರಣೆ, ಅಧಿಕಾರಶಾಹಿಗಳಿಂದಲೇ. ಇಂಥ ಅಧಿಕಾರಿ, ಈ ಯೋಜನೆಯ ಸಂದರ್ಭದಲ್ಲಿ ಅಂಥ ಪರಿಸರದಿಂದ ಮುಕ್ತನಾಗಿ, ಹೊರಗೆ ನಿಂತು ಸಹಭಾಗಿತ್ವವನ್ನು ಪ್ರಾಮಾಣಿಕವಾಗಿ ಬೆಂಬಲಿಸಿ ಬೆಳೆಸುವುದು ಅತ್ಯಂತ ಕಷ್ಟಸಾಧ್ಯವಾದ ಕೆಲಸ.

ಅರಣ್ಯ ಇಲಾಖೆಯಲ್ಲಿ 'ಟೆರಿಟೋರಿಯಲ್' ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವಿರುತ್ತದೆ. ಕರ್ನಾಟಕದಲ್ಲಿ ಸಾಮಾಜಿಕ ಅರಣ್ಯ ಯೋಜನೆಯ ಸಂದರ್ಭದಲ್ಲಿ ಮಧ್ಯಹಂತದ ಟೆರಿಟೋರಿಯಲ್ ಅಧಿಕಾರಿಗಳು ಸಹಭಾಗಿತ್ವದ ಪರಿಕಲ್ಪನೆಗಳನ್ನು ಬಳಸಿ ಸಮುದಾಯದ ಅಗತ್ಯಗಳಿಗೆ ಸ್ಪಂದಿಸುವ ಮನೋಭಾವವನ್ನು ಬೆಳೆಸುವ ಪ್ರಯತ್ನಗಳನ್ನು ತೀವ್ರವಾಗಿ ವಿರೋಧಿಸಿದ್ದರು. ಯೋಜನೆಯ ವೈಫಲ್ಯಕ್ಕೆ ಇದೂ ಕಾರಣವಾಗಿತ್ತು. ಇಷ್ಟಾದರೂ ಪಶ್ಚಿಮಘಟ್ಟ ಅರಣ್ಯ ಯೋಜನೆಯ ಸಂದರ್ಭದಲ್ಲಿ ಸಹಭಾಗಿತ್ವ ತತ್ವಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಈ ಟೆರಿಟೋರಿಯಲ್ ಅಧಿಕಾರಿಗಳಿಗೇ ನೀಡಲಾಗಿದೆ. ''ಅರಣ್ಯ ಇಲಾಖೆಯಲ್ಲಿರುವ ಈ ಟೆರಿಟೋರಿಯಲ್ ಅಧಿಕಾರಿಗಳ ನಿರ್ವಹಣಾ ಪದ್ಧತಿಗಳನ್ನು ಸಹಭಾಗಿತ್ವ ಅಭಿವೃದ್ಧಿಯ ದಿಕ್ಕಿನಲ್ಲಿ ಪುನರ್ನಿರ್ದೇಶಿಸುವುದು ಅತ್ಯಂತ ದೊಡ್ಡ ಸವಾಲು. ಆದರೆ ಇದನ್ನು ಸಾಧಿಸಲು ಅಗತ್ಯವಾದ ಕಾರ್ಯೋಪಾಯಗಳ ಬಗ್ಗೆ ಅರಣ್ಯ ಇಲಾಖೆಯಾಗಲೀ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯಾಗಲೀ ಏನನ್ನೂ ಹೇಳಿಲ್ಲ'' ಎನ್ನುತ್ತಾರೆ ಅಂತಿಮ ದಾಖಲೆಯನ್ನು ಸವಿಸ್ತಾರವಾಗಿ ವಿಮರ್ಶಿಸಿರುವ ಸಮಾಜ ವಿಜ್ಞಾನಿ ಶ್ರೀ. ಎ. ರ್‍ಯೂ.[23]

ಸಂಪರ್ಕ ಸಂಸ್ಥೆಗಳು

ಅರಣ್ಯ ಇಲಾಖೆ ಮತ್ತು ಸ್ಥಳೀಯ ಸಮುದಾಯದ ನಡುವಿನ ಸಂಬಂಧ ಸಮಾನ ಮಟ್ಟದ್ದಲ್ಲ. ಜಂಟೀ ಅರಣ್ಯ ಯೋಜನೆಯಲ್ಲಿ ಅರಣ್ಯ ಇಲಾಖೆ ಪ್ರಬಲ ಪಾಲುದಾರನಾದರೆ ಸ್ಥಳೀಯ ಸಮುದಾಯ ದುರ್ಬಲ ಪಾಲುದಾರ. ಈ ಅಸಮಾನತೆಯನ್ನು ತೊಡೆದುಹಾಕುವ ಉದ್ದೇಶದಿಂದ ಸಂಪರ್ಕ ಸಂಸ್ಥೆಯ ಸೇವೆಯನ್ನು ಬಳಸಿಕೊಳ್ಳುವ ಪ್ರಸ್ತಾಪ ಪಶ್ಚಿಮ ಘಟ್ಟ ಯೋಜನೆಯಲ್ಲಿದೆ. ಪ್ರತಿಯೊಂದು ಹಂತದ ಜಂಟೀ ಅರಣ್ಯ ಯೋಜನೆಯ ತಂಡದಲ್ಲೂ ಈ ಸಂಪರ್ಕ ಸಂಸ್ಥೆಯಿಂದ ನೇಮಕಗೊಂಡ ಹಾಗೂ ಸಂಪರ್ಕ ಸಂಸ್ಥೆಗೆ ಮಾತ್ರ ಜವಾಬ್ದಾರನಾದ ಸದಸ್ಯನಿರುತ್ತಾನೆ. "ಅರಣ್ಯ ಸಂಪನ್ಮೂಲಗಳನ್ನು ಬಳಸುವ ಸ್ಥಳೀಯ ಜನರ ಹಾಗೂ ಇಡೀ ಸಮುದಾಯದ ದೃಷ್ಟಿಕೋನವನ್ನು ಸರಿಯಾಗಿ ಅರ್ಥಮಾಡಿಕೊಂಡು, ಯೋಜನೆಯನ್ನು ತಯಾರಿಸುವ ಹಾಗೂ ಅನುಷ್ಠಾನಗೊಳಿಸುವ ವಿವಿಧ ಹಂತಗಳಲ್ಲಿ ಅವರ ಅಭಿಪ್ರಾಯಗಳೂ ಸ್ಪಷ್ಟವಾಗಿ ನಿರೂಪಣೆಗೊಳ್ಳುವಂತೆ ಮಾಡುವುದು ಈ ವ್ಯಕ್ತಿಯ ಜವಾಬ್ದಾರಿಯಾಗಿರುತ್ತದೆ"[24]. ಈ ಸದಸ್ಯನಲ್ಲದೇ ತಂಡದಲ್ಲಿ ಮತ್ತಿಬ್ಬರಿರುತ್ತಾರೆ. ಅವರು ಅರಣ್ಯ ಇಲಾಖೆಯ ಅಧಿಕಾರಿಗಳು. ಆದರೆ ಅಂತಿಮವಾಗಿ ಅಂಗೀಕೃತವಾದ ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ ಈ ಸಂಪರ್ಕ ಸಂಸ್ಥೆಯನ್ನು ಸಂಪೂರ್ಣವಾಗಿ ಕೈ ಬಿಡಲಾಗಿದೆ. ಸಂಪರ್ಕ ಸಂಸ್ಥೆಯ ಸದಸ್ಯನ ಜಾಗದಲ್ಲಿ ಮತ್ತೊಬ್ಬ ಅರಣ್ಯಾಧಿಕಾರಿಯನ್ನೆ- ವಲಯ ಅರಣ್ಯಾಧಿಕಾರಿ (ಸಂಘಟನೆ) -ನೇಮಿಸಿಕೊಳ್ಳಲಾಗಿದೆ. ಸಮುದಾಯವನ್ನು ಸಂಘಟಿಸುವ, ಅವರ ಅಭಿಪ್ರಾಯಗಳನ್ನು ನಿರೂಪಿಸುವ ಕೆಲಸವನ್ನು ಈ ಅಧಿಕಾರಿ ಮಾಡಬೇಕು. ಸರ್ಕಾರೇತರ ಸಂಸ್ಥೆಯನ್ನು, ಸ್ಥಳೀಯ ಸಮುದಾಯವನ್ನೂ ಸಂಪೂರ್ಣವಾಗಿ ಹೊರಗಿಟ್ಟ ಜಂಟೀ ಅರಣ್ಯ ಯೋಜನೆಯ ತಂಡ ಎಷ್ಟರ ಮಟ್ಟಿಗೆ ಸಮುದಾಯದ ಅಗತ್ಯ, ನಿರೀಕ್ಷೆಗಳನ್ನು ಪ್ರತಿನಿಧಿಸಬಲ್ಲದೆಂಬುದು ಗಹನವಾದ ಪ್ರಶ್ನೆಯಾಗುತ್ತದೆ.

ದುರ್ಬಲ ವರ್ಗಗಳು

ಸ್ಥಳೀಯ ಸಮುದಾಯದ ಅಂಗವಾದ ದುರ್ಬಲ ವರ್ಗಗಳ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸಲು ವಿಶೇಷ ಕ್ರಮಗಳನ್ನು ಕೈಗೊಂಡ ಹೊರತೂ, ಅವರ ಜೀವನ ಮಟ್ಟ ಮತ್ತಷ್ಟು ಕುಸಿಯುತ್ತದೆ ಎಂಬ ಅಂಶವನ್ನು ಅಂತಿಮ ಯೋಜನಾ ದಾಖಲೆಯಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಜನರ ಜೀವನೋಪಾಯ ಮಾರ್ಗಗಳನ್ನು ರಕ್ಷಿಸುವುದು ಯೋಜನೆಯ ಉದ್ದೇಶಗಳಲ್ಲೊಂದು ಎಂಬುದನ್ನು ಒತ್ತಿ ಹೇಳಲಾಗಿದೆ. ಆದರೆ ಈ ದುರ್ಬಲ ವರ್ಗಗಳ ನಿಖರ ಅರ್ಥ ಮಾತ್ರ ಈ ದಾಖಲೆಯಲ್ಲಿ ಸಿಗುವುದಿಲ್ಲ. ಅದರ ಬದಲಿಗೆ ಈ ದಾಖಲೆ "ಬಡವರು, ಮಹಿಳೆಯರು, ಗುಡ್ಡಗಾಡು ಜನಾಂಗದವರನ್ನು" ಈ ಗುಂಪಿನಲ್ಲಿ ಸೇರಿಸುತ್ತದೆ. "ಈ ಯೋಜನೆ, ಅರಣ್ಯ ಉತ್ಪನ್ನಗಳನ್ನು

ಆಧರಿಸಿ ಬದುಕುವ ಇಂತಹ ಜನರನ್ನು ಗುರುತಿಸಿ, ಸಂಘಟಿಸಿ, ಅರಣ್ಯಗಳನ್ನು ಬೆಳೆಸುವ, ಉತ್ಪನ್ನಗಳನ್ನು ಸಂಗ್ರಹಿಸುವ, ಬಳಸುವ ಸಂಘಗಳನ್ನು ಕಟ್ಟಲು ನೆರವಾಗುತ್ತದೆ. ಜಂಟೀ ಅರಣ್ಯ ಯೋಜನೆಯ ತಂಡದಲ್ಲಿರುವ ವಲಯ ಅರಣ್ಯಾಧಿಕಾರಿ (ಸಂಘಟನೆ) ಸ್ಥಳೀಯ ಜನರನ್ನು ಸಂಘಟಿಸಿ, ಸಮುದಾಯ ಸಂಸ್ಥೆಗಳನ್ನು (ಕಮ್ಯುನಿಟಿ ಇನ್‌ಸ್ಟಿಟ್ಯೂಟ್) ಗುರುತಿಸಿ, ಅಭಿವೃದ್ಧಿ ಪಡಿಸುವ ಮಹತ್ವದ ಜವಾಬ್ದಾರಿಯ ಜೊತೆಗೆ, ಬಡವರು, ಮಹಿಳೆಯರು, ಗುಡ್ಡಗಾಡು ಜನ, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಈ ಯೋಜನೆಯಲ್ಲಿ ಸಂಪೂರ್ಣವಾಗಿ ಭಾಗವಹಿಸುವಂತೆ ಮಾಡುತ್ತಾನೆ.''[25] ಆದರೆ ಈ ನಿರೀಕ್ಷೆಗಳನ್ನು ಪೂರೈಸಬಲ್ಲ ಸಾಮರ್ಥ್ಯವನ್ನು ವಲಯ ಅರಣ್ಯಾಧಿಕಾರಿಯಲ್ಲಿ (ಸಂಘಟನೆ) ಬೆಳೆಸುವ ಯಾವ ಕ್ರಮಗಳೂ ಯೋಜನೆಯಲ್ಲಿ ಪ್ರಸ್ತಾಪವಾಗಿಲ್ಲ. ಇಂಥ ಕೆಲಸಗಳನ್ನು ನಿರ್ವಹಿಸುವಂತೆ ಪ್ರೋತ್ಸಾಹಿಸಲು, ಉತ್ತೇಜಿಸಲು ಯಾವ ಪ್ರೋತ್ಸಾಹಕಗಳೂ ಯೋಜನೆಯಲ್ಲಿಲ್ಲ. ಚೆನ್ನಾಗಿ ನುರಿತ, ಬದ್ಧತೆಯಿರುವ ಸರ್ಕಾರೇತರ ಸಂಸ್ಥೆಗಳು ಇಂಥ ಜವಾಬ್ದಾರಿಯನ್ನು ನಿರ್ವಹಿಸಬಲ್ಲವಾದರೂ ಅಧಿಕೃತವಾಗಿ ಯೋಜನೆಯಲ್ಲಿ ಅವುಗಳಿಗೆ ಸ್ಥಾನವಿಲ್ಲ. ''ಬಡಜನರು, ಮಹಿಳೆಯರು, ಗುಡ್ಡಗಾಡು ಜನ ಮುಂತಾದವರನ್ನು ಈ ಯೋಜನೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಸೂಕ್ತವಾದ ಸಾಂಸ್ಥಿಕ ಬೆಂಬಲದೊಂದಿಗೆ, ಸ್ಥಳೀಯ ಪರಿಸ್ಥಿತಿ ಹಾಗೂ ಸಾಮಾಜಿಕ ವಿಶ್ಲೇಷಣೆಯನ್ನು ಆಧರಿಸಿದ ವೃತ್ತಿನಿರತ ಪರಿಣಿತರ ಸಲಹೆ, ಸೂಚನೆಗಳು ಅವಶ್ಯಕ. ಇದು ವಲಯ ಅರಣ್ಯಾಧಿಕಾರಿಯ ಪರಿಣಿತಿಯ ಕ್ಷೇತ್ರವಲ್ಲ. ಇದನ್ನು ಮನಗಾಣದೇ ಸಮಾಜ ವಿಜ್ಞಾನಿಯ ಕೆಲಸವನ್ನು ಅದರ ಗಂಧವೂ ಇಲ್ಲದ ಅರಣ್ಯ ಸಿಬ್ಬಂದಿಗೆ ವಹಿಸಿರುವುದು ಯೋಜನೆಯ ವೈಫಲ್ಯಕ್ಕೆ ದಾರಿ ಮಾಡಿ ಕೊಟ್ಟಂತೆ.''[26] ಇಂಥ ಪರಿಸ್ಥಿತಿಯಲ್ಲಿ ಜಂಟೀ ಅರಣ್ಯ ಯೋಜನೆಯ ತಂಡ ಸಮುದಾಯವನ್ನು ಸಂಘಟಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆಂದು ನಿರೀಕ್ಷಿಸುವುದಾಗಲೀ, ಅರಣ್ಯ ಇಲಾಖೆಯ ದೃಷ್ಟಿಯಿಂದ ಆದ್ಯತೆಯಿರದ ಅಥವಾ ಕನಿಷ್ಠ ಆದ್ಯತೆಯ ಈ ಕೆಲಸಕ್ಕೆ ಹಿರಿಯ ಅರಣ್ಯಾಧಿಕಾರಿಗಳು ಬೆಂಬಲ ನೀಡುತ್ತಾರೆಂದು ಎದುರು ನೋಡುವುದಾಗಲೀ ತಪ್ಪಾಗುತ್ತದೆ.

ಪ್ರಕ್ರಿಯಾ ಯೋಜನೆ

ಕರ್ನಾಟಕ ಅರಣ್ಯ ಇಲಾಖೆ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗೆ ಸಲ್ಲಿಸಿದ ಮೊದಲನೆಯ ಪ್ರಸ್ತಾಪ ಸಾಂಪ್ರದಾಯಿಕವಾದ, 'ಟಾಪ್-ಡೌನ್' ಮಾದರಿಯ 'ನೀಲಿನಕ್ಷೆ'ಯ ಯೋಜನೆಯಾಗಿತ್ತು. ಆದರೆ ಮುಂದೆ ಇದು 'ಪ್ರಕ್ರಿಯಾ ಯೋಜನೆ' (ಪ್ರೋಸೆಸ್ ಪ್ರಾಜೆಕ್ಟ್) ಯಾಗಿ ಪರಿವರ್ತನೆಯಾದುದನ್ನು ನಾವು ಗಮನಿಸಿದ್ದೇವೆ. 1990 ರ ಪ್ರಾರಂಭದಲ್ಲಿ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ರೂಪಿಸಿದ ಪ್ರಕ್ರಿಯಾ ಯೋಜನೆಗೆ ಮೂರು ಮುಖ್ಯ ಗುಣಲಕ್ಷಣಗಳಿವೆ.

- "ಪ್ರಕ್ರಿಯಾ ಯೋಜನೆಗಳಲ್ಲಿ, ಯೋಜನೆಯ ಒಟ್ಟಾರೆ ಧ್ಯೇಯೋದ್ದೇಶಗಳು ಸ್ಪಷ್ಟವಾಗಿರುತ್ತವೆ. ಆದರೆ ಯೋಜನೆಯ ಕಾರ್ಯಾಚರಣೆಗೆ ಅಗತ್ಯವಾದ 'ಆದಾನ' (ಇನ್‌ಪುಟ್) ಹಾಗೂ ಯೋಜನೆಯ 'ಪ್ರದಾನ'ಗಳನ್ನು (ಔಟ್‌ಪುಟ್) ಯೋಜನೆಗೆ ಮೊದಲೇ ನಿಖರವಾಗಿ ಗೊತ್ತು ಪಡಿಸುವುದು ಸಾಧ್ಯವಿಲ್ಲ.
- ಯೋಜನೆ ಮುಂದುವರೆದಂತೆ, ಮುಂದಿನ ಹಂತವನ್ನು ಯೋಜಿಸಲು ಹಿಮ್ಮಾಹಿತಿ (ಫೀಡ್‌ಬ್ಯಾಕ್) ಅಗತ್ಯವಾಗುತ್ತದೆ. ಇಂತಹ ಹಿಮ್ಮಾಹಿತಿಗಳನ್ನು ಪಡೆಯಲು ಕಟ್ಟುನಿಟ್ಟಾದ ನಿಗಾವಣೆ ಅನಿವಾರ್ಯ.
- ಪ್ರಕ್ರಿಯಾ ಯೋಜನೆ ನಿರಂತರವಾಗಿ ಸಾಗಬೇಕಾದರೆ ಸ್ಥಳೀಯ ಸಮುದಾಯ ಯೋಜನೆಯನ್ನು ತಮ್ಮ ಸ್ವಂತದ್ದೆಂದು ಒಪ್ಪಿಕೊಂಡು ಅದಕ್ಕೆ ಬದ್ಧರಾಗಬೇಕಾಗುತ್ತದೆ."[27]

"ಯೋಜನೆಯೊಂದರ ಯಶಸ್ಸು ಫಲಾನುಭವಿಗಳ ಭಾಗವಹಿಸುವಿಕೆಯ ಮೇಲೆ ಅವಲಂಬಿತವಾಗಿರುವ ಸಂದರ್ಭಗಳಲ್ಲಿ, ಸಾಮಾಜಿಕ ಸಮಸ್ಯೆಗಳ ಪ್ರಾಬಲ್ಯ ಅಧಿಕವಾಗಿರುವ ಪರಿಸರದಲ್ಲಿ, ಯೋಜನೆಯೊಂದರ ವಿನ್ಯಾಸ, ಅನುಷ್ಠಾನ, ನಿಗಾವಣೆ ಹಾಗೂ ಮೌಲ್ಯ ಮಾಪನೆಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸಮುದಾಯದ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶವಿರುವ ಕಡೆಗಳಲ್ಲಿ ಪ್ರಕ್ರಿಯಾ ಯೋಜನೆ ಹೆಚ್ಚು ಪರಿಣಾಮಕಾರಿಯಾಗುತ್ತದೆ."[28]

ಪ್ರಕ್ರಿಯಾ ಯೋಜನೆಯ ಯಶಸ್ಸಿಗೆ ನಿಗದಿತ ಅಂತರಗಳಲ್ಲಿ ಹಿಮ್ಮಾಹಿತಿ ಅವಶ್ಯಕ. ಇದು ಸಾಧ್ಯವಾಗಬೇಕಾದರೆ ಕಟ್ಟುನಿಟ್ಟಾದ ನಿಗಾವಣೆ ಅನಿವಾರ್ಯ. ಈ ಉದ್ದೇಶದಿಂದ ಹಾಗೂ ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ ಸಹಭಾಗಿತ್ವದ ತತ್ವಗಳು ತಮ್ಮ ಆದ್ಯತೆಯನ್ನು ಕಳೆದುಕೊಳ್ಳದಂತೆ ಎಚ್ಚರವಹಿಸಲು, ಬೆಂಗಳೂರಿನಲ್ಲಿ ನಿಗಾವಣಾ ಘಟಕವೊಂದನ್ನು ಸ್ಥಾಪಿಸಲು ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ನಿರ್ಧರಿಸಿತು. ಆದರೆ ಈ ಪ್ರಸ್ತಾಪವನ್ನು ತೀವ್ರವಾಗಿ ವಿರೋಧಿಸಿದ ಅರಣ್ಯ ಇಲಾಖೆ, ನಿಗಾವಣಾ ಘಟಕದ ಚಟುವಟಿಕೆಗಳು, ಪಶ್ಚಿಮಘಟ್ಟ ಯೋಜನೆಯ ದೈನಂದಿನ ಕೆಲಸ ಕಾರ್ಯಗಳಲ್ಲಿ ನೇರವಾಗಿ ಮಧ್ಯ ಪ್ರವೇಶಿಸಿದಂತಾಗುತ್ತದೆ ಎಂಬ ನಿಲುವು ತಾಳಿತು. ಭಾರತದಲ್ಲಿಯೇ ಈ ಕ್ಷೇತ್ರದಲ್ಲಿ ಅತ್ಯುನ್ನತ ಮಟ್ಟದ ಪರಿಣಿತಿಯಿರುವಾಗ ವಿದೇಶೀ ಪರಿಣಿತರೊಬ್ಬರನ್ನು ನಿಗಾವಣಾ ಘಟಕದ ಮುಖ್ಯಸ್ಥರನ್ನಾಗಿ ಮಾಡಿ, ಬೆಂಗಳೂರಿನಲ್ಲಿ ಕೂಡಿಸಿ ಪಶ್ಚಿಮಘಟ್ಟ ಯೋಜನೆಯನ್ನು ಅವರ ಪರಿಶೀಲನೆಗೆ ಒಪ್ಪಿಸುವುದನ್ನು ಭಾರತ ಸರ್ಕಾರವು ಒಪ್ಪಲಿಲ್ಲ. ರಾಜಿಯ ಮಾರ್ಗವಾಗಿ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ದೆಹಲಿಯಲ್ಲಿ ಕ್ಷೇತ್ರ ನಿರ್ವಹಣಾ ಕಛೇರಿಯೊಂದನ್ನು ಸ್ಥಾಪಿಸಿ ಅಲ್ಲಿಂದಲೇ ನಿಗಾವಣೆ ನಡೆಸಲು ಬೇರೆ ಮಾರ್ಗವಿಲ್ಲದೇ ಒಪ್ಪಿಕೊಂಡಿತು.

ನೆರವು ನೀಡಿದ ವಿದೇಶೀ ಸಂಸ್ಥೆಯ ಸೂಕ್ಷ್ಮ ನಿಗಾವಣೆಯಿಂದ ಪಾರಾದ ಕರ್ನಾಟಕ ಅರಣ್ಯ ಇಲಾಖೆ, ಅದೇ ಕೆಲಸವನ್ನು ತಾನು ನಿರ್ವಹಿಸಿದ ರೀತಿಯನ್ನು ನಾವು ವಿವೇಚಿಸಬೇಕು. ರಾಜ್ಯದ

ಹಂತದಲ್ಲಿ ನಿಗಾವಣೆಗಿರುವ ಪ್ರಮುಖ ವ್ಯವಸ್ಥೆಯೆಂದರೆ 'ಸ್ಟೀರಿಂಗ್ ಕಮಿಟಿ'. ರಾಜ್ಯದ ಅಭಿವೃದ್ಧಿ ಆಯುಕ್ತರು ಇದರ ಅಧ್ಯಕ್ಷರು. ಯೋಜನೆಯಲ್ಲಿ ಭಾಗವಹಿಸುವ ಸಂಸ್ಥೆಗಳ ಆಯ್ಕೆ, ನಿಗದಿತ ಅಂತರಗಳಲ್ಲಿ ನಡೆಯುವ ಪರಿಶೀಲನೆಗಳಿಂದ ಬರುವ ಸಲಹೆಗಳನ್ನು ಅವಲಂಬಿಸಿ ಕ್ರಮ ಕೈಗೊಳ್ಳುವ ಅಧಿಕಾರ ಈ ಸಮಿತಿಗಿದೆ. ಆದರೆ ಕ್ಷೇತ್ರದ ಹಂತದಲ್ಲಿ ಈ ಎಲ್ಲ ಅಧಿಕಾರವೂ ಆ ಹಂತದ ಸಮಿತಿಯ ಅಧ್ಯಕ್ಷರಾಗಿರುವ ಟೆರಿಟೋರಿಯಲ್ ಅರಣ್ಯಾಧಿಕಾರಿಯ ಕೈಯ್ಯಲ್ಲಿದೆ. ಈ ಸಮಿತಿಗಳು ನಿಷ್ಪಕ್ಷಪಾತವಾಗಿ ಯೋಜನೆಯ ಕೆಲಸಗಳನ್ನು ಅವಲೋಕಿಸುವುದನ್ನಾಗಲೀ, ಪಾರದರ್ಶಕ ರೀತಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳುವುದನ್ನಾಗಲೀ ನಿರೀಕ್ಷಿಸುವಂತಿಲ್ಲ. ಅನೇಕ ಸಂದರ್ಭಗಳಲ್ಲಿ ಈ ಸಮಿತಿಗಳು ಸ್ಥಳೀಯ ಸರ್ಕಾರೇತರ ಸಂಸ್ಥೆಗಳನ್ನೂ ಗ್ರಾಮ ಅರಣ್ಯ ಸಮಿತಿಗಳನ್ನೂ ಮುಖ್ಯ ನಿರ್ಧಾರಗಳಿಂದ ಹೊರಗಿಟ್ಟಿರು ವುದರಿಂದ ನಿಜವಾದ ಭಾಗವಹಿಸುವಿಕೆ ಸಾಧ್ಯವಿಲ್ಲ.

ಸಾಂಪ್ರದಾಯಿಕವಾದ ನೀಲಿನಕ್ಷೆಯ ಯೋಜನೆಗೂ, ಪ್ರಕ್ರಿಯಾ ಯೋಜನೆಗೂ ಹಲವಾರು ವ್ಯತ್ಯಾಸಗಳಿವೆ. "ಆದರೆ ಈ ಬಗ್ಗೆ, ಅದರಲ್ಲೂ ಹೆಚ್ಚಾಗಿ ಪ್ರಕ್ರಿಯೆ ಯೋಜನೆಯ ಗುಣ ಲಕ್ಷಣಗಳ ಬಗ್ಗೆ ಅಧಿಕಾರಿಗಳ ಹಂತದಲ್ಲೂ ಹೆಚ್ಚಿನ ತಿಳುವಳಿಕೆಯಿಲ್ಲ."" ಇದರೊಡನೆ ಪ್ರಕ್ರಿಯಾ ಯೋಜನೆಯನ್ನು ಅಕ್ಷರಶಃ ಅನುಷ್ಠಾನಗೊಳಿಸಿದಾಗ ಕಂಡುಬರುವ ಪರಿಣಾಮಗಳು ಅಧಿಕಾರ ಶಾಹಿಯನ್ನು ಧೃತಿಗೆಡಿಸುವಂತಹದು. ಪ್ರಕಿಯಾ ಯೋಜನೆಗೆ ಕೇವಲ ತೋರಿಕೆಯ ಸಮ್ಮತಿ ತೋರಿದ ಅರಣ್ಯ ಇಲಾಖೆ ಅದರ ಅನುಷ್ಠಾನಕ್ಕೆ ಯಾವ ಪ್ರಾಮಾಣಿಕ ಪ್ರಯತ್ನವನ್ನೂ ಮಾಡಿಲ್ಲವೆಂಬುದು ಕ್ಷೇತ್ರಾಧ್ಯಯನಗಳಿಂದ ಸ್ಪಷ್ಟವಾಗುತ್ತದೆ. ಅದನ್ನು ಮುಂದಿನ ಅಧ್ಯಾಯಗಳಲ್ಲಿ ಕಾಣುತ್ತೇವೆ.

ಭಿನ್ನಾಭಿಪ್ರಾಯಗಳು

ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಹಲವಾರು ಅಂಶಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಅರಣ್ಯ ಇಲಾಖೆ ಹಾಗೂ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳ ನಡುವೆ ಪ್ರಾರಂಭದಿಂದಲೂ ಒಮ್ಮತವಿರಲಿಲ್ಲ. ಈ ಇಬ್ಬರು ಪಾಲುದಾರರ ನಿಲುವಿನಲ್ಲಿದ್ದ ತೀವ್ರ ಭಿನ್ನಾಭಿಪ್ರಾಯಗಳನ್ನು ಈ ಕೆಳಕಂಡ ಮಾಹಿತಿ ಸ್ಪಷ್ಟವಾಗಿ ತೋರಿಸುತ್ತದೆ.

ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ

ವಿಷಯ	ಅರಣ್ಯ ಇಲಾಖೆಯ ನಿಲುವು	ಸಾಗರೋತರ ಅಭಿವೃದ್ಧಿ ಸಂಸ್ಥೆಯ ನಿಲುವು
1. ಯೋಜನೆಯ ಉದ್ದೇಶ :	ಅರಣ್ಯಗಳಿಗೆ ಜನರ ಪ್ರವೇಶವನ್ನು ನಿರ್ಬಂಧಿಸಿ ಬೃಹತ್ ಪ್ರಮಾಣದ ಅರಣ್ಯೀಕರಣ	ಅರಣ್ಯಕ್ಕೆ ಸಮೀಪವಾಗಿ ವಾಸಿಸುವ ಜನ ಸಮುದಾಯದ ವಿವಿಧ ಬೇಡಿಕೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಇಲಾಖೆಯಲ್ಲಿ ಬೆಳೆಸುವುದು
2. ಸಹಭಾಗಿತ್ವ	ಸ್ಥಳೀಯ ಸಮುದಾಯದ ಭಾಗವಹಿಸುವಿಕೆಗೆ ಯಾವ ಅವಕಾಶವೂ ಇಲ್ಲ	ಸಮುದಾಯದ ಸಹಭಾಗಿತ್ವಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯ
3. ಸ್ಥಳೀಯ ಸಮುದಾಯ	ಇಲಾಖೆಯ ಅಗತ್ಯಕ್ಕನುಸಾರವಾಗಿ ನೆಡುತೋಪಿನಲ್ಲಿ ದಿನಗೂಲಿಯ ಆಧಾರಧ ಮೇಲೆ ಕೆಲಸ ಮಾಡುವವರು	ಯೋಜನೆಯಲ್ಲಿ ಅರಣ್ಯ ಇಲಾಖೆಯೊಡನೆ ಸಮಾನ ಪಾಲುದಾರರು
4. ಸಮಾಲೋಚನೆ	ಆರ್ಥಿಕ ನೆರವು ನೀಡುವ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ಪರಿಣಿತರೊಡನೆ ಮಾತ್ರ	ಯೋಜನೆಯ ಎಲ್ಲ ಹಂತಗಳಲ್ಲೂ ಸ್ಥಳೀಯ ಸಮುದಾಯದೊಡನೆ ಸಮಾಲೋಚನೆಗೆ ಆದ್ಯತೆ
5. ಮಾಹಿತಿ ಲಭ್ಯತೆ	ಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯನ್ನು ಬಿಟ್ಟು ಉಳಿದವರೊಡನೆ ಹಂಚಿಕೊಳ್ಳುವ ಅಗತ್ಯವಿಲ್ಲ	ಯೋಜನೆಯ ಎಲ್ಲ ಪಾಲುದಾರರಿಗೂ ಮಾಹಿತಿ ದೊರೆಯಬೇಕು
6. ಸಾಮರ್ಥ್ಯ ನಿರ್ಮಾಣ	ಅರಣ್ಯೀಕರಣಕ್ಕೆ ಸಂಬಂಧಿಸಿದಂತೆ ಇಲಾಖೆಯ ತಾಂತ್ರಿಕ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವುದರ ಮೇಲೆ ಹೆಚ್ಚಿನ ಒತ್ತು	ಸಮುದಾಯದ ಸಾಮರ್ಥ್ಯವನ್ನು ಬೆಳೆಸುವುದರ ಮೇಲೆ ಗಮನ
7. ಜೀವದ್ರವ್ಯಗಳ ಲಭ್ಯತೆ	ಬುಡಕಟ್ಟು ಜನರಿಗಾಗಿ, ಸೆಕ್ಯುರಿಟಿ ನೆಡುತೋಪುಗಳು, ಉಳಿದವರು ಅಗತ್ಯಗಳನ್ನು ಇಲಾಖೆಯ ಡಿಪೋಗಳಿಂದ ಹಣಕೊಟ್ಟು ಪಡೆಯಬೇಕು	ಜೀವದ್ರವ್ಯಗಳ ನಿರ್ವಹಣೆಯನ್ನು ತಮ್ಮ ಸ್ಥಳೀಯ ಸಮುದಾಯಕ್ಕೆ ಬಿಡಬೇಕು

8. ಜನಾಂದೋಳನಗಳು	ಉದಾಸೀನ ಮನೋಭಾವ	ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಜನಾಂದೋಳನಗಳನ್ನು ಬಳಸಿ ಕೊಳ್ಳಬೇಕು
9. ಸಮುದಾಯದ ಸಂಘಟನೆ	ಇಲಾಖೆಯ ಜವಾಬ್ದಾರಿಯಲ್ಲ	ಜವಾಬ್ದಾರಿ ಇಲಾಖೆಯದೇ
10. ಯೋಜನೆಯ ಸ್ವರೂಪ	ನೀಲಿ ನಕ್ಷೆಯ ಯೋಜನೆ ಪ್ರಯೋಗಗಳಿಗೆ ಅವಕಾಶವಿಲ್ಲ	ಪ್ರಕ್ರಿಯಾ ಯೋಜನೆ, ಹೊಸ ಪ್ರಯೋಗಗಳಿಗೆ ಅನೇಕ ಅವಕಾಶಗಳು

ಆಧಾರ : ಪ್ರಾಜೆಕ್ಟ್‌ರಿಪೋರ್ಟ್ ಆನ್ ಇಟೆಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಫಾರೆಸ್ಟ್ ಇನ್ ವೆಸ್ಟರ್ನ್ ಘಾಟ್ಸ್- 1988 ಹಾಗೂ 1992 ರ ಅಂತಿಮ ಪರಿಷ್ಕೃತ ಯೋಜನಾ ಪ್ರಸ್ತಾಪ : ಕರ್ನಾಟಕ ಅರಣ್ಯ ಇಲಾಖೆ.

ಮೇಲಿನ ಮಾಹಿತಿಯಲ್ಲಿ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ನಿಲುವು ಪ್ರಾರಂಭದಿಂದಲೂ ಹೀಗಿರಲಿಲ್ಲ. ಕರ್ನಾಟಕದ ಸರ್ಕಾರೇತರ ಸಂಸ್ಥೆಗಳು, ಬ್ರಿಟನ್ನಿನ ಆಕ್ಸ್‌ಫಾಮ್‌ಗಳ ತೀವ್ರ ಪ್ರತಿಭಟನೆ ಹಾಗೂ ಲಾಬಿಗಳಿಂದಾಗಿ ಅದರ ನಿಲುವಿನಲ್ಲೂ ಕೆಲವು ಬದಲಾವಣೆಗಳು ಕಂಡು ಬಂದು ಅಂತಿಮ ನಿಲುವು ರೂಪುಗೊಂಡಿತು. ಮಾಹಿತಿ ಲಭ್ಯತೆಗೆ ಸಂಬಂಧಿಸಿದಂತೆ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ಧೋರಣೆಯೂ ಪ್ರಾರಂಭದಲ್ಲಿ ಕರ್ನಾಟಕ ಅರಣ್ಯ ಇಲಾಖೆಗಿಂತ ಭಿನ್ನವಾಗಿರಲಿಲ್ಲ. 1988-92ರ ಅವಧಿಯಲ್ಲಿ ಸ್ಥಳೀಯ ಸಮುದಾಯದ ಸಹಭಾಗಿತ್ವ, ಸಮಾಲೋಚನೆ, ಕಿರುಯೋಜನೆಗಳ ತಯಾರಿ, ಸಮುದಾಯದ ಸಂಘಟನೆ, ಯೋಜನೆಯ ಸ್ವರೂಪ ಮುಂತಾದವುಗಳ ಬಗ್ಗೆ ಇಲಾಖೆಯ ನಿಲುವಿನಲ್ಲಿ ಬದಲಾವಣೆಗಳು ಕಂಡು ಬಂದವು. ಆದರೆ ಮಾಹಿತಿ ಪೂರೈಕೆ, ನಿಗಾವಣೆ, ಸಾಂಸ್ಥಿಕ ಬದಲಾವಣೆಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ಇಲಾಖೆ ತೀವ್ರ ವಿರೋಧ, ಅಸಹಕಾರಗಳನ್ನು ತೋರಿತು. ಈ ದ್ವಂದ್ವ ನಿಲುವೇ, ಅರಣ್ಯ ಇಲಾಖೆ, ಸಹಭಾಗಿತ್ವ ಅಭಿವೃದ್ಧಿಯ ತತ್ವಗಳನ್ನು ಜಾರಿಗೆ ತರಲು ತಾತ್ವಿಕ ಒಪ್ಪಿಗೆ ನೀಡಿದರೂ, ಅದರ ಅನುಷ್ಠಾನಕ್ಕೆ ಅಡ್ಡಿಯನ್ನುಂಟುಮಾಡುತ್ತದೆ ಎಂಬ ಅನುಮಾನಕ್ಕೆ ಕಾರಣವಾಯಿತು. ಇದರ ಜೊತೆಗೆ, ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಗೆ, ಭಾರತ ಮತ್ತು ಬ್ರಿಟನ್‌ಗಳು ಅಂತಿಮವಾಗಿ ಸಹಿ ಹಾಕಿದ ನಂತರ, ಇಡೀ ಯೋಜನೆಗೆ ಸಂಬಂಧಿಸಿದಂತೆ ಅರಣ್ಯಾಧಿಕಾರಿಗಳು ಮಾಡಿದ 'ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ನೆರವು ನಿಂತ ಕೂಡಲೇ ಕಣ್ಮರೆಯಾಗಲಿರುವ ನವ ವಸಾಹತುಶಾಹಿಯ ಹೇರಿಕೆ'ಯೆಂಬ ಕಟುಟೀಕೆ, ಯೋಜನೆಯ ಬಗೆಗಿರುವ ಅಸಮಾಧಾನವನ್ನು ಸೂಚಿಸಿತ್ತು. ಇಂಥ ಪ್ರತಿಕ್ರಿಯೆ ಸಹಭಾಗಿತ್ವ ತತ್ವಗಳ ಅನುಷ್ಠಾನದ ಬಗೆಗಿನ ಅನುಮಾನಗಳನ್ನು ಮತ್ತಷ್ಟು ಹೆಚ್ಚಿಸಿದವು.

ಪಶ್ಚಿಮಘಟ್ಟ ಅರಣ್ಯ ಯೋಜನೆ ಒಂದು 'ಪೈಲಟ್ ಪ್ರಾಜೆಕ್ಟ್'. ಇಂಥ ಯೋಜನೆಯಲ್ಲಿ ಅನೇಕ ಹೊಸ ಪ್ರಯೋಗಗಳಿಗೆ ಅವಕಾಶವಿರುತ್ತವೆ. ಪಶ್ಚಿಮಘಟ್ಟ ಅರಣ್ಯ ಯೋಜನೆಯ ಮೂಲಕವಾಗಿ ಕರ್ನಾಟಕದಲ್ಲಿ ಜಾರಿಗೆ ಬಂದ 'ಜಂಟೀ ಅರಣ್ಯ ಯೋಜನೆ'ಯೇ ಒಂದು ಹೊಸ

ಪ್ರಯೋಗ. ಅರಣ್ಯ ನಿರ್ವಹಣೆಯಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಅವಕಾಶವೊದಗಿಸುವ ಈ ಹೊಸ ಪ್ರಯೋಗ ಸಾಧ್ಯವಾಗಬೇಕಾದರೆ, ಮೊಟ್ಟಮೊದಲಿಗೆ ಯೋಜನೆಯ ಪಾಲುದಾರರಲ್ಲಿ ಯೋಜನೆಯ ಮೂಲಭೂತ ಉದ್ದೇಶಗಳ ಬಗ್ಗೆ ಸ್ಪಷ್ಟ ಕಲ್ಪನೆ ಮತ್ತು ಒಮ್ಮತಗಳಿರಲೇಬೇಕು. ಆದರೆ ಹಲವು ವಿಷಯಗಳ ಬಗ್ಗೆ ಅರಣ್ಯ ಇಲಾಖೆ ಮತ್ತು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳ ನಡುವೆ ಒಮ್ಮತ ಮೂಡಿದರೂ, 'ಸಾಮಾಜಿಕ ಉದ್ದೇಶಗಳಿಗೆ ನೀಡಿರುವ ಆದ್ಯತೆ' ಹಾಗೂ ದುರ್ಬಲ ವರ್ಗಗಳ ಅರಣ್ಯಾಧಾರಿತ ಅಗತ್ಯಗಳ ಪೂರೈಕೆ ಹಾಗೂ ಅವರ ಜೀವನೋಪಾಯ ಮಾರ್ಗಗಳ ರಕ್ಷಣೆಯ ಬಗ್ಗೆ ಈ ಎರಡು ಪಾಲುದಾರರ ನಡುವೆಯಿದ್ದ ತೀವ್ರ ಭಿನ್ನಾಭಿಪ್ರಾಯಗಳು ನಾಲ್ಕುವರ್ಷಗಳ ಸಂಧಾನದ ನಂತರವೂ ಬಗೆಹರಿಯಲಿಲ್ಲ. ಇಂಥ ಮೂಲಭೂತ ಅಭಿಪ್ರಾಯ ಭೇದವನ್ನು ಯೋಜನೆ ಕಾರ್ಯಗತವಾಗುವ ಮುನ್ನವೇ ಪರಿಹರಿಸಿಕೊಳ್ಳಬೇಕು, ಏಕೆಂದರೆ, ಯೋಜನೆ ಪ್ರಾರಂಭವಾದ ನಂತರ ಮೂಲಭೂತ ಧ್ಯೇಯೋದ್ದೇಶಗಳನ್ನು ಬದಲಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ ಇದು ಸಾಧ್ಯವಾಗಿಲ್ಲ. ಇದೇ ಕಾರಣದಿಂದಲೇ ಅಂತಿಮ ದಾಖಲೆಯಲ್ಲಿ ಯೋಜನೆಯ ಸಾಮಾಜಿಕ ಉದ್ದೇಶಗಳು ಸ್ಪಷ್ಟವಾಗಿ ನಿರೂಪಿತವಾಗಿದ್ದರೂ ಅವನ್ನು ಸಾಧಿಸುವ ಕಾರ್ಯತಂತ್ರಗಳ ಬಗ್ಗೆ ಅರಣ್ಯ ಇಲಾಖೆ ಮತ್ತು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳೆರಡೂ ದಿವ್ಯ ಮೌನ ತಾಳಿವೆ. ಪರಸ್ಪರ ಸಮ್ಮತಿಯಿಂದಲೇ ಈ ಎರಡೂ ಪಾಲುದಾರರು ಕಾರ್ಯತಂತ್ರಗಳನ್ನು ನಿರ್ಲಕ್ಷಿಸಿದ್ದಾರೆಂದು ಸರ್ಕಾರೇತರ ಸಂಸ್ಥೆಗಳು ಅನುಮಾನ ವ್ಯಕ್ತಪಡಿಸಿವೆ.

'ಸಾಮಾಜಿಕ ಉದ್ದೇಶಗಳಿಗೆ ನೀಡಿರುವ ಆದ್ಯತೆ ಹಾಗೂ ದುರ್ಬಲ ವರ್ಗಗಳ ಅರಣ್ಯಾಧಾರಿತ ಅಗತ್ಯಗಳ ಪೂರೈಕೆ ಹಾಗೂ ಅವರ ಜೀವನೋಪಾಯ ಮಾರ್ಗಗಳ ರಕ್ಷಣೆ'ಯ ಬಗ್ಗೆ ಕರ್ನಾಟಕ ಅರಣ್ಯ ಇಲಾಖೆ ಮತ್ತು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳ ನಡುವೆ ತೀವ್ರ ಭಿನ್ನಾಭಿಪ್ರಾಯಗಳಿದ್ದರೂ, ಪಶ್ಚಿಮ ಘಟ್ಟ ಯೋಜನೆ ಕಾರ್ಯಗತಗೊಂಡಿದ್ದೇಕೆ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಆರ್ಥಿಕ ನೆರವನ್ನು ನಿರಾಕರಿಸಿ ಯೋಜನೆಯಿಂದ ಹಿಂದೆ ಸರಿಯಬಹುದಿತ್ತಲ್ಲವೇ ಎಂಬ ಪ್ರಶ್ನೆಗಳು ಈ ಹಂತದಲ್ಲಿ ಉದ್ಭವಿಸುತ್ತದೆ. ಈ ಪ್ರಶ್ನೆಗಳನ್ನು ಉತ್ತರಿಸಲು ಅಂತಾರಾಷ್ಟ್ರೀಯ ನೆರವು ನೀಡಿಕೆಯ ರಾಜಕೀಯ ಆಯಾಮಗಳನ್ನು ಪರಿಶೀಲಿಸಬೇಕಾಗುತ್ತದೆ.

ಅಭಿವೃದ್ಧಿಶೀಲ ರಾಷ್ಟ್ರಗಳು ತಾವು ಪಡೆಯುವ ನೆರವಿಗೆ ಪ್ರತಿಯಾಗಿ, ನೆರವು ನೀಡುವ ಸಂಸ್ಥೆಗಳು ವಿಧಿಸುವ ಷರತ್ತುಗಳನ್ನು ಪಾಲಿಸಿ, ಕೆಲವೊಂದು ನಿರ್ಧಿಷ್ಟ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಆದರೆ ನೆರವು ನೀಡುವ ಸಂಸ್ಥೆಗಳು ತಮ್ಮ ಮನಸ್ಸಿಗೆ ಬಂದ ಷರತ್ತುಗಳನ್ನು ವಿಧಿಸುವಂತಿಲ್ಲ. "ಷರತ್ತುಗಳು ನ್ಯಾಯ ಸಮ್ಮತವಾಗಿರಬೇಕು. ನೆರವು ಪಡೆಯುವ ಅಭಿವೃದ್ಧಿಶೀಲ ದೇಶದ ಸ್ವಾತಂತ್ರ್ಯಕ್ಕೆ, ಸಾರ್ವಭೌಮತ್ವಕ್ಕೆ ಹಾನಿಯನ್ನುಂಟು ಮಾಡುವಂತಹ ಅಂಶಗಳಿರಬಾರದು.

ಅವುಗಳಿಗೆ ಬದಲಾಗಿ ಅಂಥ ದೇಶಗಳ ಆರ್ಥಿಕ ನೀತಿಯನ್ನು ಉತ್ತಮ ಪಡಿಸಿ, ಅಭಿವೃದ್ಧಿಗೆ ಬೆಂಬಲ ನೀಡಿ, ಪಡೆದ ಸಾಲವನ್ನು ಹಿಂತಿರುಗಿಸುವಂಥ ಸಾಮರ್ಥ್ಯವನ್ನು ಈ ದೇಶಗಳಲ್ಲಿ ಬೆಳೆಸುವ ಹಾಗಿರಬೇಕು.''[30] ಆದರೆ ''ಈ ಉನ್ನತ ನಿರೀಕ್ಷೆಗಳು ಆಚರಣೆ ಹಂತದಲ್ಲಿ ಸಾಧ್ಯವಾಗಿಲ್ಲ. ಉತ್ತಮವಾದ ಆರ್ಥಿಕ ನೀತಿಯನ್ನು ರೂಪಿಸಲು ಈ ಷರತ್ತುಗಳು ಸ್ವಲ್ಪ ಮಟ್ಟಿಗೆ ಸಹಾಯ ಕಾರಿಯಾಗಿದ್ದರೂ, ಯೋಜನೆಯ ಅನುಷ್ಠಾನದ ಹಂತದಲ್ಲಿ ಈ ಷರತ್ತುಗಳು ಪರಿಣಾಮ ಕಾರಿಯಾಗಿಲ್ಲ'' ಎನ್ನುತ್ತಾರೆ. ಅಂತಾರಾಷ್ಟ್ರೀಯ ನೆರವಿನ 29 ಯೋಜನೆಗಳನ್ನು ಅಧ್ಯಯನ ಮಾಡಿರುವ ಗಾರ್ಡನ್ ಕ್ರಾಫೋರ್ಡ್.[31]

ಅಂತಾರಾಷ್ಟ್ರೀಯ ನೆರವು ನೀಡಿಕೆಯ ಸಂಸ್ಥೆಯಿಂದ ನೆರವು ಪಡೆದ ದೇಶವೊಂದು, ನೆರವು ಪಡೆಯುವ ಮುನ್ನ ತಾನು ಒಪ್ಪಿಕೊಂಡ ಷರತ್ತುಗಳನ್ನು ಪಾಲಿಸುತ್ತದೆಯೇ ಅಥವಾ ಇಲ್ಲವೇ ಎಂಬುದು, ಒಪ್ಪಿಕೊಂಡ ಷರತ್ತುಗಳನ್ನು ಪಾಲಿಸದಿದ್ದಾಗ ಏನಾಗುತ್ತದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ. ವ್ಯಕ್ತಿಗಳ ನಡುವಿನ ವ್ಯವಹಾರದಲ್ಲಿ ಇಂಥ ನಡವಳಿಕೆಯಿಂದ ಒಪ್ಪಂದ ರದ್ದಾಗುತ್ತದೆ, ಶಿಕ್ಷೆ-ಜುಲ್ಮಾನೆಗಳೂ ಆಗಬಹುದು. ಆದರೆ ದೇಶ ದೇಶಗಳ ನಡುವೆ, ಜಾಗತಿಕ ಸಂಸ್ಥೆಗಳು ಮತ್ತು ಅಭಿವೃದ್ಧಿಶೀಲ ದೇಶಗಳ ನಡುವೆ, ಒಪ್ಪಂದ ರದ್ದಾಗುವುದು ಅತ್ಯಂತ ಅಪರೂಪ. ''ಒಪ್ಪಿಕೊಂಡ ಷರತ್ತುಗಳನ್ನು ಪಾಲಿಸಲಿಲ್ಲವೆಂಬ ಕಾರಣಕ್ಕಾಗಿ ಒಪ್ಪಂದವನ್ನು ರದ್ದುಪಡಿಸಿದ ಅಥವಾ ನೆರವನ್ನು ತಡೆಹಿಡಿದ ನಿದರ್ಶನಗಳು ಬೆರಳೆಣಿಕೆಯಷ್ಟು ಮಾತ್ರ. ಅಂತಾರಾಷ್ಟ್ರೀಯ ಹಣಕಾಸು ನಿಧಿ ಹಾಗೂ ವಿಶ್ವ ಬ್ಯಾಂಕುಗಳು ನೆರವು ನೀಡಿದ್ದ ಇಂಥ ಮೂರು ಪ್ರಕರಣಗಳಲ್ಲಿ ನೆರವನ್ನು ನಿಲ್ಲಿಸಿದ್ದರಿಂದ, ಅಭಿವೃದ್ಧಿಶೀಲ ದೇಶಗಳಿಗೆ ಯಾವ ಹೆಚ್ಚಿನ ತೊಂದರೆಯೂ ಆಗಲಿಲ್ಲ. ಅದಕ್ಕಿಂತ ಹೆಚ್ಚಾಗಿ ಒಪ್ಪಿಕೊಂಡ ಷರತ್ತುಗಳನ್ನು ಪಾಲಿಸದಿದ್ದ ಈ ದೇಶಗಳು ಬೇರೆಯ ಜಾಗತಿಕ ಸಂಸ್ಥೆಗಳೊಡನೆ ಸಂಧಾನ ಪ್ರಾರಂಭಿಸಿ ನೆರವು ಪಡೆಯುವುದರಲ್ಲಿ ಯಶಸ್ವಿಯಾದವು.''[32] ಅಂತಾರಾಷ್ಟ್ರೀಯ ಮಟ್ಟದಲ್ಲಿ ನೆರವು ನೀಡುವ ಎಲ್ಲ ಸಂಸ್ಥೆಗಳೂ ಒಟ್ಟಾಗಿ ಸೇರಿ ಶರತ್ತುಗಳನ್ನು ಪಾಲಿಸದ ದೇಶಗಳಿಗೆ ಯಾರೂ ನೆರವು ನೀಡಬಾರದೆಂದು ನಿರ್ಧರಿಸಿ ಅದನ್ನು ಆಚರಣೆಯಲ್ಲಿ ತಂದರೆ ಮಾತ್ರ, ಕರ್ತವ್ಯ ಲೋಪವೆಸಗಿದ ದೇಶಕ್ಕೆ ಪಾಠ ಕಲಿಸಿದಂತಾಗುತ್ತದೆ. ಆದರೆ ವಿವಿಧ ಬಣಗಳಿಗೆ, ವಿವಿಧ ರಾಜಕೀಯ ತತ್ವ, ನಿಲುವುಗಳಿಗೆ ಬದ್ಧವಾದ ಅಂತಾರಾಷ್ಟ್ರೀಯ ನೆರವು ನೀಡಿಕೆಯ ಸಂಸ್ಥೆಗಳು ಒಮ್ಮತದ ನಿರ್ಧಾರಕ್ಕೆ ಬರುವುದು ಬಹಳ ಕಷ್ಟ. ಹೀಗಾಗಿ ಒಪ್ಪಿಕೊಂಡ ಶರತ್ತುಗಳನ್ನು ಉಲ್ಲಂಘಿಸುವುದರಿಂದ ಒಂದು ಮೂಲದಿಂದ ನೆರವು ನಿಂತರೂ, ಮತ್ತೊಂದು ಮೂಲದಿಂದ ಅದನ್ನು ಪಡೆಯಬಹುದೆಂಬ ಭರವಸೆಯಿರುವ ಅನೇಕ ದೇಶಗಳು ಷರತ್ತುಗಳನ್ನು ಪಾಲಿಸದಿರುವ, ಅನುಷ್ಠಾನದಲ್ಲಿ ವಿಶೇಷ ಆಸಕ್ತಿ ತೋರದಿರುವ, ಉದ್ದೇಶ ಪೂರ್ವಕವಾಗಿ ನಿಧಾನ ಮಾಡುವ ಅನೇಕ ನಿದರ್ಶನಗಳನ್ನು ಕಾಣಬಹುದು. ಇದರೊಡನೆ ''ಅನೇಕ ಸಂದರ್ಭಗಳಲ್ಲಿ ನೆರವು ಪಡೆದ ಅಭಿವೃದ್ಧಿಶೀಲ ದೇಶ ತೋರಿಕೆಗೆ ಮಾತ್ರ ಷರತ್ತುಗಳನ್ನು ಪಾಲಿಸಿದಂತೆ ಮಾಡಿ

ಉಳಿದಂತೆ ತನ್ನ ಕಾರ್ಯಸೂಚಿಯನ್ನು ಮುಂದುವರೆಸಿಕೊಂಡು ಹೋಗುತ್ತದೆ. ನೆರವು ನೀಡಿದ ಸಂಸ್ಥೆಗೆ ಇದು ಸ್ಪಷ್ಟವಾಗಿ ತಿಳಿದಿದ್ದರೂ ಅದು ಜಾಣತನದಿಂದ ಇದನ್ನು ಗಮನಿಸುವುದಿಲ್ಲ. ಒಂದು ದೃಷ್ಟಿಯಲ್ಲಿ, ಇದು, ಎರಡು ಪಕ್ಷಗಳ ನಡುವಿನ ಅಲಿಖಿತ ಒಪ್ಪಂದವಿದ್ದಂತೆ."[33]

ನೆರವು ಪಡೆಯುವ ಅಭಿವೃದ್ಧಿಶೀಲ ದೇಶಗಳಂತೆಯೇ, ನೆರವು ನೀಡುವ ಅಂತಾರಾಷ್ಟ್ರೀಯ ಸಂಸ್ಥೆಗಳ ಮೇಲೂ, ನೆರವು ನೀಡಲು ಹಾಗೂ ನೀಡುತ್ತಿರುವ ನೆರವನ್ನು ಮುಂದುವರೆಸಲು ಒತ್ತಾಯಗಳಿರುವುದು ಸಾಮಾನ್ಯ. ಇಂತಹ ಪರಿಸ್ಥಿತಿಯಲ್ಲಿ ಒಪ್ಪಂದ ರದ್ದಾಗದಂತೆ ನೋಡಿಕೊಳ್ಳುವುದು ಹೆಚ್ಚು ಮುಖ್ಯವಾಗುತ್ತದೆಯೇ ಹೊರತಾಗಿ, ಷರತ್ತುಗಳು ಎಷ್ಟರ ಮಟ್ಟಿಗೆ ಜಾರಿಯಾಗಿದೆಂಬುದನ್ನು ಪರಿಶೀಲಿಸಿ ಕರ್ತವ್ಯ ಲೋಪವೆಸಗಿದವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವುದಲ್ಲ. ಕರ್ನಾಟಕ ಅರಣ್ಯ ಇಲಾಖೆ ಮತ್ತು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳ ನಡುವಿನ ವ್ಯವಹಾರದಲ್ಲಿ, ಈ ನೆರವಿನ ರಾಜಕಾರಣದ ಎಲ್ಲ ಮುಖಗಳನ್ನೂ ಕಾಣಬಹುದು.

ಈ ಮಹಾ ಪ್ರಬಂಧದ ಪ್ರಸ್ತಾವನೆಯಲ್ಲಿ ಜಂಟೀ ಅರಣ್ಯ ಯೋಜನೆಯ ವೈಫಲ್ಯಗಳಿಗೆ ಸಂಶೋಧಕರು ನೀಡಿರುವ ಕಾರಣಗಳನ್ನು ನಾವು ಗಮನಿಸಿದ್ದೇವೆ. ಆ ಕಾರಣಗಳಿಗಿಂತ ಭಿನ್ನವಾಗಿ, ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ತತ್ವಗಳನ್ನು ಸೂತ್ರೀಕರಿಸಿ, ಅಳವಡಿಸುವ ಹಂತದಲ್ಲಿಯೇ ದೌರ್ಬಲ್ಯಗಳಿರಬಾರದೇಕೆ ಎಂಬ ಮೂಲಭೂತ ಪ್ರಶ್ನೆಯನ್ನೆತ್ತಿ, ಅದಕ್ಕೆ ಉತ್ತರ ಹುಡುಕುವ ಪ್ರಯತ್ನವಾಗಿ ಸಹಭಾಗಿತ್ವ ತತ್ವಗಳು ಸೂತ್ರೀಕರಣಗೊಂಡು ಅಳವಡಿಕೆಯಾದ ರೀತಿ, ಹಾಗೂ ಅದಕ್ಕೆ ಕಾರಣವಾದ ಘಟನೆಗಳನ್ನು ವಿವರವಾಗಿ ಪರಿಶೀಲಿಸಿದ್ದೇವೆ. ಈ ಅಧ್ಯಾಯವನ್ನು ಮುಗಿಸುವ ಮುನ್ನ ಅಧ್ಯಯನದಿಂದ ದೊರೆತ ವಿಷಯಗಳನ್ನು ಮತ್ತೊಮ್ಮೆ ಮನನ ಮಾಡುವುದು ಅಗತ್ಯ.

ಸ್ಥಳೀಯ ಸಮುದಾಯವನ್ನು ಅರಣ್ಯಗಳಿಂದ ಸಂಪೂರ್ಣವಾಗಿ ಹೊರಗಿಟ್ಟು, ಬೃಹತ್ ಪ್ರಮಾಣದಲ್ಲಿ ಅರಣ್ಯೀಕರಣವನ್ನು ಕೈಗೊಳ್ಳುವುದು ಅರಣ್ಯ ಇಲಾಖೆಯ ಉದ್ದೇಶವಾಗಿತ್ತು. ಆದರೆ ನಾಲ್ಕು ವರ್ಷಗಳ ನಿರಂತರ ಮಾತುಕತೆ, ಚರ್ಚೆ, ಸಮಾಲೋಚನೆ, ಸಂಧಾನಗಳ ನಂತರ, "ಅರಣ್ಯ ಸಂಪನ್ಮೂಲದ ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಿ, ಪರಿಸರ ಸಂರಕ್ಷಣೆ ಮತ್ತು ಅರಣ್ಯಾಭಿವೃದ್ಧಿಗಳೆರಡನ್ನೂ ಸಾಧಿಸುವುದು ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯ ಉದ್ದೇಶವಾಯಿತು." ಆದರೆ ಕರ್ನಾಟಕ ಅರಣ್ಯ ಇಲಾಖೆಯ ಪಾಲಿಗೆ ಇದು ಬಲವಂತದ ಹೇರಿಕೆಯಾಯಿತೇ ವಿನಾ ಮನಃ ಪೂರ್ವಕವಾದ, ಪ್ರಾಮಾಣಿಕವಾದ ಪರಿವರ್ತನೆಯಾಗಲಿಲ್ಲ. ಇದರ ಫಲವಾಗಿ, ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಯ ಮೂಲ ಪರಿಕರಗಳಾದ ಸಮುದಾಯಕ್ಕೆ ನೀಡ ಬೇಕಾದ ಸಮಾನತೆಯ ಸ್ಥಾನ, ಸಮುದಾಯದೊಂದಿಗೆ ಸಮಾಲೋಚನೆ, ಮಾಹಿತಿ ವಿತರಣೆ, ಸಮುದಾಯದ ಸಂಘಟನೆ, ಜೀವದ್ರವ್ಯಗಳ ಪೂರೈಕೆ

ಮುಂತಾದವುಗಳ ಬಗ್ಗೆ ಅರಣ್ಯ ಇಲಾಖೆ ಮತ್ತು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳ ನಡುವೆಯಿದ್ದ ತೀವ್ರ ಭಿನ್ನಾಭಿಪ್ರಾಯಗಳು ಹಾಗೆಯೇ ಮುಂದುವರೆದವು. ಇದು ಕರ್ನಾಟಕದ ಸಂದರ್ಭದಲ್ಲಿ ಜಂಟೀ ಅರಣ್ಯ ಯೋಜನೆಯ ಅತ್ಯಂತ ದೊಡ್ಡ ದೌರ್ಬಲ್ಯ. ಸ್ಥಳೀಯ ಸಮುದಾಯದ ಅರ್ಥಪೂರ್ಣ ಸಹಭಾಗಿತ್ವಕ್ಕೆ ಅವಕಾಶ ಮಾಡಿಕೊಡಲು ಅಗತ್ಯವಾದ ಕಾರ್ಯಯೋಜನೆ ಮತ್ತು ಕಿರುಯೋಜನೆಗಳ ಸಮನ್ವಯ, ಸಂಪರ್ಕ ಸಂಸ್ಥೆಗಳ ಸ್ಥಾಪನೆ, ದುರ್ಬಲ ವರ್ಗಗಳ ಅರಣ್ಯಾಧಾರಿತ ಅಗತ್ಯಗಳ ಪೂರೈಕೆ, ನಿಗಾವಣೆ ಮತ್ತು ಹಿಮ್ಮಾಹಿತಿ ವ್ಯವಸ್ಥೆ ಮುಂತಾದ ಸಾಂಸ್ಥಿಕ ಬದಲಾವಣೆಗಳು ಹಾಗೂ ಕಾರ್ಯತಂತ್ರಗಳನ್ನು ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಇದು ಎರಡನೆ ಮುಖ್ಯ ದೌಬರ್ಲ್ಯ. ಈ ಹಿಂದೆ, ಸಮಾಜಿಕ ಅರಣ್ಯ ಯೋಜನೆಯ ಸಂದರ್ಭದಲ್ಲಿ ಸಮುದಾಯದ ಸಹಭಾಗಿತ್ವವನ್ನು ವಿರೋಧಿಸಿದ್ದ ಟೆರಿಟೋರಿಯಲ್ ಅಧಿಕಾರಿಗಳಿಗೇ ಸಹಭಾಗಿತ್ವ ಪರಿಕಲ್ಪನೆಯ ಮೇಲೆ ಆಧಾರಿತವಾಗಿರುವ ಜಂಟೀ ಅರಣ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ನೀಡಿದುದು ಯೋಜನೆಯ ವಿನ್ಯಾಸದಲ್ಲಿ ಮೂರನೆಯ ದೌರ್ಬಲ್ಯ. ಸಮಾಜ ವಿಜ್ಞಾನಿಗಳ ಸಮಾಲೋಚನೆಯೊಡನೆ ಮಾಡಬೇಕಿದ್ದ ಸಮುದಾಯ ಸಂಘಟನೆಯ ಕೆಲಸವನ್ನು ಅದರ ಗಂಧವೂ ಇಲ್ಲದ, ಆಸಕ್ತಿ, ತರಬೇತಿಗಳೂ ಇಲ್ಲದ ವಲಯ ಅರಣ್ಯಾಧಿಕಾರಿಗಳಿಗೆ ವಹಿಸಿದ್ದು ನಾಲ್ಕನೆಯ ದೌರ್ಬಲ್ಯ. ಒಟ್ಟಾರೆಯಾಗಿ ಸಮುದಾಯದ ಸಬಲೀಕರಣಕ್ಕೆ ಅರಣ್ಯ ಇಲಾಖೆ ಮುಸುಕಿನೊಳಗೇ ತೋರಿದ ವಿರೋಧ, ಅಸಹಕಾರ, ಔದಾಸೀನ್ಯಗಳ ಫಲವಾಗಿ, ಸಹಭಾಗಿತ್ವ ಅಭಿವೃದ್ಧಿ ವಿದೇಶೀ ನೆರವನ್ನು ಪಡೆಯುವ ಏಕಮಾತ್ರ ಉದ್ದೇಶದಿಂದ ಜಂಟೀ ಅರಣ್ಯ ಯೋಜನೆಗೆ ತೇಪೆಹಾಕಿ ಸೇರಿಸಿದ ಪರಿಕಲ್ಪನೆಯಾಯಿತೇ ವಿನಃ ಅದರಲ್ಲಿ ಅಂತರ್ಗತಗೊಂಡು ಯೋಜನೆಯನ್ನು ಅರ್ಥಪೂರ್ಣಗೊಳಿಸುವ, ಸತ್ವಪೂರ್ಣಗೊಳಿಸುವ ಶಕ್ತಿಯಾಗಲಿಲ್ಲ. ಇದು ಕರ್ನಾಟಕದ ಸಂದರ್ಭದಲ್ಲಿ, ಜಂಟೀ ಅರಣ್ಯ ಯೋಜನೆಯ ಅತ್ಯಂತ ದೊಡ್ಡ ದೌರ್ಬಲ್ಯ.

ಕೋಷ್ಟಕ 1

ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ : 1988

ಅರಣ್ಯೀಕರಣಕ್ಕೊಳಗಾಗುವ ಪ್ರದೇಶದ ಒಟ್ಟು ವಿಸ್ತೀರ್ಣ : 3,53,330 ಹೆಕ್ಟೇರುಗಳು

ಉದ್ದೇಶ	ವಿಸ್ತೀರ್ಣ ಹೆಕ್ಟೇರುಗಳಲ್ಲಿ	ಶೇಕಡಾವಾರು ಪ್ರದೇಶ
1.ನೈಸರ್ಗಿಕ ಅರಣ್ಯದಲ್ಲಿ ಆಂಶಿಕವಾಗಿ ಬಯಲಾಗಿರುವ ಪ್ರದೇಶಗಳಲ್ಲಿ 'ಎನ್‌ರಿಚ್‌ಮೆಂಟ್ ಪ್ಲಾಂಟಿಂಗ್'	1,84,771.6	52
2. ವಾಣಿಜ್ಯೋದ್ದೇಶದ ಏಕ ಪ್ರಭೇದದ ನೆಡುತೋಪುಗಳು	1,13,705.6	32
3. ಉರುವಲು ನೆಡುತೋಪುಗಳು	24,873.1	7
4. ಸ್ಥಳೀಯ ಅಗತ್ಯಗಳನ್ನು ಪೂರೈಸಲು ಬಿದಿರು	23,807.1	6.7
5. ಬುಡಕಟ್ಟು ಜನರಿಗಾಗಿ ಮಿಶ್ರ ಪ್ರಭೇದಗಳ ನೆಡುತೋಪು	7,106.6	2
6. ಮೇವು	1,065.9	0.3

ಆಧಾರ : ಕರ್ನಾಟಕ ಅರಣ್ಯ ಇಲಾಖೆ, 1988

ಕೋಷ್ಟಕ 2

ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ : ಪರಿಷ್ಕೃತ ಪ್ರಸ್ತಾಪ: 1991

ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯೀಕರಣಕ್ಕೊಳಗಾಗುವ ಪ್ರದೇಶದ ಒಟ್ಟು ವಿಸ್ತೀರ್ಣ : 42,000 ಹೆಕ್ಟೇರುಗಳು

ಉದ್ದೇಶ	ವಿಸ್ತೀರ್ಣ ಹೆಕ್ಟೇರುಗಳಲ್ಲಿ	ಶೇಕಡಾವಾರು ಪ್ರದೇಶ
1. ನೈಸರ್ಗಿಕ ಅರಣ್ಯಗಳಲ್ಲಿ ಆಂಶಿಕವಾಗಿ ಬಯಲಾದ ಪ್ರದೇಶಗಳಲ್ಲಿ ಎನ್‌ರಿಚ್‌ಮೆಂಟ್ ಪ್ಲಾಂಟಿಂಗ್	27720	66
2. ಕುಶಲ ಕರ್ಮಿಗಳಿಗೆ, ಇನ್ನಿತರರಿಗೆ ಅಗತ್ಯವಾದ ಬಿದಿರು	5880	14
3. ಮೇವು, ಹಸಿರುಗೊಬ್ಬರ, ಉರುವಲು, ಸಣ್ಣ ಚೌಬೀನೆ ಹಾಗೂ ಇನ್ನಿತರ ಉತ್ಪನ್ನಗಳು	8400	20

ಆಧಾರ : ಕರ್ನಾಟಕ ಅರಣ್ಯ ಇಲಾಖೆ : 1991

ಟಿಪ್ಪಣಿಗಳು

1. ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್(ಕೆ.ಎಫ್.ಡಿ), ಪ್ರಾಜೆಕ್ಟ್ ರಿಪೋರ್ಟ್ ಆಫ್ ಇಂಟೆಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಫಾರೆಸ್ಟ್ಸ್ ಇನ್ ವೆಸ್ಟರ್ನ್ ಘಾಟ್ಸ್, ಬೆಂಗಳೂರು : ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್, 1988

2. ಫೆವಾರ್ಡ್ ಕೆ., ರೆಸ್ಪಾನ್ಸ್ ಟು ವೆಸ್ಟರ್ನ್ ಘಾಟ್ಸ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಬೆಂಗಳೂರು : ಫೆಡರೇಶನ್ ಆಫ್ ವಾಲಂಟರಿ ಆರ್ಗನೈಸೇಸನ್ಸ್ ಫಾರ್ ರೂರಲ್ ಡೆವಲಪ್‌ಮೆಂಟ್ ಆಫ್ ಕರ್ನಾಟಕ(ಫೆವಾರ್ಡ್-ಕೆ), 1990.

3. ಸೆಂಟರ್ ಫಾರ್ ಇಕಲಾಜಿಕಲ್ ಸೈನ್ಸಸ್ ಮಾನೋಗ್ರಾಫ್ ಆನ್ ಪೀಪಲ್ಸ್ ಪಾರ್ಟಿಸಿಪೇಶನ್ ಇನ್ ದಿ ಮ್ಯಾನೇಜ್‌ಮೆಂಟ್ ಆಫ್ ನ್ಯಾಚುರಲ್ ರಿಸೋರ್ಸಸ್, ಬೆಂಗಳೂರು : ಸೆಂಟರ್ ಫಾರ್ ಇಕಲಾಜಿಲ್ ಸೈನ್ಸಸ್, 1989.

4. ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್‌ಟಿಟ್ಯೂಟ್, ವೆಸ್ಟರ್ನ್ ಘಾಟ್ಸ್ ಫಾರೆಸ್ಟ್ರಿ ಅಂಡ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ರಿಪೋರ್ಟ್ ಆನ್ ಪ್ರಾಜೆಕ್ಟ್ ಆಪ್ಷನ್ಸ್, ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸಿಟಿಟ್ಯೂಟ್, 1989.

5. ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್‌ಟಿಟ್ಯೂಟ್, ರಿವೈಸ್ಡ್ ಪ್ರಾಜೆಕ್ಟ್ ರಿಪೋರ್ಟ್, ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸಿಟಿಟ್ಯೂಟ್, 1990.

6. ಹಿರೇಮಠ ಎಸ್. ಆರ್., ನಿರ್ದೇಶಕರು, ಸಮಾಜ ಪರಿವರ್ತನಾ ಸಮುದಾಯ, ಧಾರವಾಡ : ವೈಯಕ್ತಿಕ ಸಂದರ್ಶನ

7. ಫೆವಾರ್ಡ್ ಕೆ., ರೆಸ್ಪಾನ್ಸ್ ಟು ರಿವೈಸ್ಡ್ ಪ್ರಪೋಸಲ್ ಆಫ್ ವೆಸ್ಟರ್ನ್ ಘಾಟ್ ಫಾರೆಸ್ಟ್ರಿ ಅಂಡ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್, ಬೆಂಗಳೂರು : ಫೆವಾರ್ಡ್, ನವೆಂಬರ್ 1990.

8. ಫೀನಿ, ಪಿ., ದಿ ವರ್ಲ್ಡ್ ಬ್ಯಾಂಕ್ ಫಾರೆಸ್ಟ್ರಿ ಪಾಲಿಸಿ : ಆ್ಯನ್ ಆಕ್ಸ್‌ಫಾಮ್ ರೆಸ್ಪಾನ್ಸ್, ಆಕ್ಸ್‌ಫರ್ಡ್: ಆಕ್ಸ್‌ಫಾಮ್ ಡೆವಲಪ್‌ಮೆಂಟ್ ಪಾಲಿಸಿ ಯೂನಿಟ್, 1991.

9. ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್(ಕೆ.ಎಫ್.ಡಿ.), ವೆಸ್ಟರ್ನ್ ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಪ್ರಪೋಸಲ್ ಡಾಕ್ಯುಮೆಂಟ್, ಬೆಂಗಳೂರು : ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್, 1991.

10. ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್(ಕೆ.ಎಫ್.ಡಿ.), ವೆಸ್ಟನ್‌ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಪ್ರಪೋಸಲ್ ಡಾಕ್ಯುಮೆಂಟ್, ಪು.16

11. ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್(ಕೆ.ಎಫ್.ಡಿ.), ವೆಸ್ಟನ್‌ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಪ್ರಪೋಸಲ್ ಡಾಕ್ಯುಮೆಂಟ್, ಪು.24

12. ರೈ ಎನ್. ಎನ್., ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕರ್ನಾಟಕ ಅರಣ್ಯ ಇಲಾಖೆ, ಬೆಂಗಳೂರು : ವೈಯಕ್ತಿಕ ಸಂದರ್ಶನ

13. ಸಕ್ಸೇನಾ, ಎನ್. ಸಿ. ದಿ ಸಾಗಾ ಆಫ್ ಪಾರ್ಟಿಸಿಪೇಟರಿ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಇನ್ ಇಂಡಿಯ ಇಂಡೋನೇಷ್ಯಾ : ಸಿಡಿಎಫ್ ಓ ಆರ್ ಸ್ಪೆಶಲ್ ಪಬ್ಲಿಕೇಶನ್ಸ್, 1997.

14. ಮಹೇಶ್ ಪ್ರಸಾದ್, ಮಾಜಿ ಕಾರ್ಯದರ್ಶಿ, ಪರಿಸರ ಮತ್ತು ಅರಣ್ಯ ಇಲಾಖೆ, ಭಾರತ ಸರ್ಕಾರ, ನವದೆಹಲಿ : ವೈಯಕ್ತಿಕ ಸಂದರ್ಶನ

15. ಶೀಲ್ಡ್ಸ್, ಡಿ, ರೆಡ್‌ಹೆಡ್, ಜೆ ಮತ್ತು ಶೆಪರ್ಡ್, ಜಿ., ಇವಾಲ್ಯುಯೇಶನ್ ರಿಪೋರ್ಟ್' : ದಿ ಕರ್ನಾಟಕ ಸೋಶಿಯಲ್ ಫಾರೆಸ್ಟ್ರಿ ಪ್ರಾಜೆಕ್ಟ್, ಲಂಡನ್ : ಓವರಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಶನ್, 1992.

16. ಬರ್ನೆಲ್ ಪೀಟರ್, ಫಾರಿನ್ ಏಡ್ ಇನ್ ಎ ಚೇಂಜಿಂಗ್ ವರ್ಲ್ಡ್, ಫಿಲಿಡೆಲ್ಫಿಯಾ : ಓಪನ್ ಯೂನಿವರ್ಸಿಟಿ ಪ್ರೆಸ್, 1997.

17. ವಿಲ್‌ಫ್ರೆಡ್ ಥಾಲ್ ವಿಟ್ಸ್, ಅಡ್ರೆಸ್ ಟು ಡೆವಲಪ್ ಅಸಿಸ್ಟೆನ್ಸ್ ಕಮಿಟಿ ಆಫ್ ದಿ ಆರ್ಗನೈಸೇಶನ್ ಫಾರ್ ಇಕನಾಮಿಕ್ ಕೋ ಆಪರೇಶನ್ ಅಂಡ್ ಡೆವಲಪ್‌ಮೆಂಟ್, ಪ್ಯಾರಿಸ್ : ವರ್ಲ್ಡ್‌ಬ್ಯಾಂಕ್, 1990.

18. ಹಿರೇಮಠ ಎಸ್. ಆರ್., ನಿರ್ದೇಶಕರು, ಸಮಾಜ ಪರಿವರ್ತನಾ ಸಮುದಾಯ, ಧಾರವಾಡ : ವೈಯಕ್ತಿ ಸಂದರ್ಶನ.

19. ಹಿರೇಮಠ ಎಸ್. ಆರ್., ನಿರ್ದೇಶಕರು, ಸಮಾಜ ಪರಿವರ್ತನಾ ಸಮುದಾಯ, ಧಾರವಾಡ : ವೈಯಕ್ತಿ ಸಂದರ್ಶನ.

20. ದಂಡಾವತಿ ಮಠ ಎಸ್., ಸಮಾಜ ಪರಿವರ್ತನಾ ಸಮುದಾಯ, ಧಾರವಾಡ : ವೈಯಕ್ತಿಕ ಸಂದರ್ಶನ

21. ಕೆ. ಎಮ್. ಚಡ್ಡಾ, ಜಂಟೀ ಕಾರ್ಯದರ್ಶಿಗಳು, ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ, ದೆಹಲಿ : ವೈಯಕ್ತಿಕ ಸಂದರ್ಶನ

22. ಪರಮೇಶ್ವರಪ್ಪ ಎಸ್., ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು : ವೈಯಕ್ತಿಕ ಸಂದರ್ಶನ.

23. ರ್‍ಯೂ, ಎ. ದಿ ಸೋಷಿಯಲ್ ಅಂಡ್ ಇನ್‌ಸ್ಟಿಟ್ಯೂಷನಲ್ ಫ್ರೇಂ ವರ್ಕ್ ಇನ್ ವೆಸ್ಟರ್ನ್ ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್, ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್‌ಸ್ಟಿಟ್ಯೂಟ್, 1990

24. ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್(ಕೆ.ಎಫ್.ಡಿ.), ವೆಸ್ಟನ್‌ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಪ್ರಪೋಸಲ್ ಡಾಕ್ಯುಮೆಂಟ್, ಪು.11-12

25. ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್(ಕೆ.ಎಫ್.ಡಿ.), ವೆಸ್ಟರ್ನ್‌ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಪ್ರಪೋಸಲ್ ಡಾಕ್ಯುಮೆಂಟ್, ಪು.10

26. ರ್‍ಯೂ ಎ., ದಿ ಸೋಶಿಯಲ್ ಅಂಡ್ ಇನ್‌ಸ್ಟಿಟ್ಯೂಷನಲ್ ಫ್ರೇಂ ವರ್ಕ್ ಇನ್ ವೆಸ್ಟರ್ನ್‌ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್, ಪು.25

27. ಸೋಷಿಯಲ್ ಡೆವಲ್‌ಪ್‌ಮೆಂಟ್ ಡಿಪಾರ್ಟ್‌ಮೆಂಟ್, ಗೈಡ್‌ಟು ಏಡ್ ಪ್ರೊಸೀಜರ್ಸ್, ಲಂಡನ್: ಓವರಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಶನ್, 1990.

28. ರಾಡ್ರಿಕ್ ಡೇನಿ, "ಅಕೌಂಟಬಲ್ ಏಡ್ : ಲೋಕಲ್ ಪಾರ್ಟಿಸಿಪೇಶನ್ ಇನ್ ಮೇಜರ್ ಪ್ರಾಜೆಕ್ಟ್ಸ್" ಫಾರಿನ್ ಏಡ್ ಅಂಡ್ ಡೆವಲಪ್‌ಮೆಂಟ್ ಟಾರ್ಪಮಿನ್ ಅಂಡ್ ಪೀಟರ್ಸ್(ಸಂ), ಲಂಡನ್ ಅಂಡ್ ನ್ಯೂಯಾರ್ಕ್ : ರೌಟ್‌ಲೆಡ್ಜ್, 2000

29. ಮಧು ಸರೀನ್, ಪ್ರೋಗ್ರಾಮ್ ಅಡ್ವೈಸರ್ ಟು ನ್ಯಾಷನಲ್ ಸಪೋರ್ಟ್ ಗ್ರೂಪ್ ಫಾರ್ ಜೆ ಎಫ್ ಪಿ ಎಮ್., ನ್ಯೂಡೆಲ್ಲಿ : ವೈಯಕ್ತಿಕ ಸಂದರ್ಶನ.

30. ಹಾಡ್ಜಿಮೈಕೇಲ್., *ಸಬ್-ಸಹರಾನ್ ಆಫ್ರಿಕಾ : ಗ್ರೋತ್, ಸೇವಿಂಗ್ಸ್ ಅಂಡ್ ಇನ್‌ವೆಸ್ಟ್‌ಮೆಂಟ್* ವಾಷಿಂಗ್‌ಟನ್ ಡಿಸಿ : ಇಂಟರ್ ನ್ಯಾಷನಲ್ ಮಾನೆಟರಿಫಂಡ್, 1995.

31. *ಗಾರ್ಡನ್ ಕ್ರಾಫೋರ್ಡ್ , ಅಸೆಸಿಂಗ್ ಏಡ್ : ವಾಟ್ ವರ್ಕ್ಸ್, ವಾಟ್ ಡಸಂಟ್ ಅಂಡ ವೈ?"* ವಾಷಿಂಗಟನ್ : ವರ್ಲ್ಡ್‌ಬ್ಯಾಂಕ್, 1998.

32. ಟೋನಿ ಕಿಲ್ಲಿಕ್, "ಪ್ರಿನ್ಸಿಪಲ್ಸ್, ಏಜೆಂಟ್ಸ್ ಅಂಡ್ ಫೈಲಿಂಗ್ಸ್ ಆಫ್ ಕಂಡೀಶನಾಲಿಟಿ", ಜರ್ನಲ್ ಆಫ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್, ಸಂ.14, ನಂ.6, 1997, ಪು.320-338

33. ಟೋನಿ ಕಿಲ್ಲಿಕ್, *ಏಡ್ ಅಂಡ್ ಪೊಲಿಟಿಕಲ್ ಇಕಾನಮಿ ಆಫ್ ಪಾಲಿಸಿ ಚೇಂಜ್*, ಲಂಡನ್ : ರೌಟ್‌ಲೆಡ್ಜ್ ಅಂಡ್ ಓವರ್‌ಸೀಸ್ ಡೆವಲಪ್‌ಮೆಂಟ್ ಇನ್ಸಿಟಿಟ್ಯೂಟ್, 1998.

ಅಧ್ಯಾಯ 4
ಆಚರಣೆಯಲ್ಲಿ ಸಹಭಾಗಿತ್ವ

ಆಚರಣೆಯಲ್ಲಿ ಸಹಭಾಗಿತ್ವ

ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಪರೀಕ್ಷಿಸಲು ನಡೆಸಿದ ಕ್ಷೇತ್ರಕಾರ್ಯ, ಅದರಿಂದ ದೊರೆತ ಮಾಹಿತಿಗಳ ವಿವರಣೆ, ವಿಶ್ಲೇಷಣೆ ಹಾಗೂ ವಿಮರ್ಶೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಕ್ಷೇತ್ರಕಾರ್ಯಕ್ಕಾಗಿ ಆಯ್ದುಕೊಂಡ ವಿವಿಧ ಭೌಗೋಳಿಕ ಪ್ರದೇಶಗಳಲ್ಲಿರುವ ಐದು ಹಳ್ಳಿಗಳ ಮೂಲಭೂತ ವಿವರಗಳೊಂದಿಗೆ ಪ್ರಾರಂಭವಾಗುವ ಅಧ್ಯಾಯ ಮೊದಲಿಗೆ ಈ ಐದು ಹಳ್ಳಿಗಳ ಅರಣ್ಯದ ಮೇಲಿನ ಅವಲಂಬನೆಯನ್ನು ಪರೀಕ್ಷಿಸುತ್ತದೆ. ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ಇರುವ ಅವಕಾಶಗಳನ್ನು ಪರಿಶೀಲಿಸಿದ ನಂತರ, ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಜಂಟೀ ಅರಣ್ಯ ಯೋಜನೆ ಅನುಷ್ಠಾನಗೊಂಡಿರುವ ರೀತಿಯನ್ನು ಅವಲೋಕಿಸಲಾಗಿದೆ. ಯೋಜನೆಯಲ್ಲಿ ಭಾಗವಹಿಸಲು ಇರುವ ಅವಕಾಶಗಳನ್ನು ಸಮುದಾಯ ಹೇಗೆ ಮತ್ತು ಎಷ್ಟರಮಟ್ಟಿಗೆ ಬಳಸಿಕೊಂಡಿದೆಯೆಂಬ ಭಾಗವಹಿಸುವಿಕೆಯ ಮೌಲ್ಯ ಮಾಪನವನ್ನು ಸೂಚ್ಯಂಕಗಳ ನೆರವಿನಿಂದ ಮುಂದಿನ ಭಾಗದಲ್ಲಿ ಮಾಡಲಾಗಿದೆ. ಸೂಚ್ಯಂಕ ಗಳನ್ನು ಪ್ರಮಾಣಾತ್ಮಕ ಹಾಗೂ ಗುಣಾತ್ಮಕಗಳೆಂದು ಎರಡು ಭಾಗಗಳಾಗಿ ವಿಂಗಡಿಸಿದ್ದು ಈ ಅಧ್ಯಾಯದಲ್ಲಿ ಪ್ರಮಾಣಾತ್ಮಕ ಸೂಚ್ಯಂಕಗಳು ನೀಡುವ ಭಾಗವಹಿಸುವಿಕೆಯ ವ್ಯಾಪ್ತಿ ಮತ್ತು ಪ್ರಮಾಣಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ.

ಕುಮಾರನಹಳ್ಳಿ

ಕುಮಾರನಹಳ್ಳಿ, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿಗೆ ಸೇರಿದ್ದು, ಹರಪನಹಳ್ಳಿಯಿಂದ ಎಂಟು ಕಿ.ಮೀ. ದೂರದಲ್ಲಿದೆ. ಹರಪನಹಳ್ಳಿಯಿಂದ ಅರಸೀಕೆರೆಗೆ ಹೋಗುವ ಡಾಂಬರು ರಸ್ತೆ ಈ ಹಳ್ಳಿಯ ಮೂಲಕ ಹಾದು ಹೋಗುತ್ತದೆ. ತಾಲ್ಲೂಕು ಕೇಂದ್ರವಾದ ಹರಪನಹಳ್ಳಿಯೇ ಈ ಹಳ್ಳಿಯ ಜನರಿಗೆ ಮುಖ್ಯ ಮಾರುಕಟ್ಟೆ. ಗ್ರಾಮದಲ್ಲಿ ಒಂದರಿಂದ ಏಳನೆಯ ತರಗತಿಯವರೆಗೆ ಮಾತ್ರ ವ್ಯಾಸಂಗಕ್ಕೆ ವ್ಯವಸ್ಥೆಯಿದ್ದು, ಮುಂದಿನ ವ್ಯಾಸಂಗಕ್ಕೆ 5 ಕಿ.ಮೀ. ದೂರದಲ್ಲಿರುವ ಹಿಕ್ಕಿಂಗೇರಿಗೆ ಹೋಗಬೇಕು. ಅಂಚೆ ಕಛೇರಿ, ಮೂರು ಕಿ.ಮೀ. ದೂರದಲ್ಲಿರುವ ಅಡವೀ ಹಳ್ಳಿಯಲ್ಲಿದ್ದರೆ, ನ್ಯಾಯಬೆಲೆ ಅಂಗಡಿ ಅಷ್ಟೇ ದೂರದಲ್ಲಿರುವ ಬಸಾಪುರದಲ್ಲಿದೆ. ಬ್ಯಾಂಕು, ಪಶುವೈದ್ಯ ಶಾಲೆ, ರಸಗೊಬ್ಬರ, ಕೀಟನಾಶಕ, ಬಿತ್ತನೆ ಬೀಜ ಮುಂತಾದವುಗಳಿಗೆ ಹರಪನಹಳ್ಳಿಗೇ ಹೋಗಬೇಕು.

ತಾಲ್ಲೂಕು ಕೇಂದ್ರ ಸಮೀಪದಲ್ಲಿಯೇ ಇದ್ದು, ಡಾಂಬರು ರಸ್ತೆಯಿರುವುದರಿಂದ ಸಾರಿಗೆ ವ್ಯವಸ್ಥೆ ಸಾಕಷ್ಟು ಅನುಕೂಲಕರವಾಗಿದೆ.

ಕುಮಾರನಹಳ್ಳಿಯ ಭೌಗೋಳಿಕ ವಿಸ್ತೀರ್ಣ 1198 ಹೆಕ್ಟೇರುಗಳಷ್ಟಿದ್ದು, ಹಳ್ಳಿಗೆ ಹೊಂದಿಕೊಂಡಿರುವಂತಿರುವ ಕಾಯ್ದಿಟ್ಟ ಅರಣ್ಯ, ಕಿರು ಅರಣ್ಯ, ಕಂದಾಯ ಅರಣ್ಯಗಳ ವಿಸ್ತೀರ್ಣ ಸುಮಾರು 140 ಹೆಕ್ಟೇರುಗಳು. ಸಾಗುವಳಿಗೆ ಒಳಪಟ್ಟಿರುವ ಕೃಷಿಭೂಮಿಯ ವಿಸ್ತೀರ್ಣ 138 ಹೆಕ್ಟೇರುಗಳು. ಹಳ್ಳಿಯಲ್ಲಿ ಒಟ್ಟು 110 ಕುಟುಂಬಗಳಿದ್ದು, ಅವುಗಳಲ್ಲಿ 107 ಕುಟುಂಬಗಳು 'ವಾಲ್ಮೀಕಿ'(ನಾಯಕ) ಜಾತಿಗೆ ಸೇರಿವೆ. ಉಳಿದ ಮೂರು ಲಿಂಗಾಯಿತ ಕುಟುಂಬಗಳು. ಈ ಮಟ್ಟಿಗೆ ಇದು ಏಕಜಾತಿಯ ಹಳ್ಳಿಯೆನ್ನಬಹುದು. ಹೀಗಾಗಿ ಹಳ್ಳಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಲ್ಲೂ ನಾಯಕರದೇ ಪ್ರಾಬಲ್ಯ. 2001ರ ಜನಗಣತಿಯಂತೆ ಕುಮಾರನಹಳ್ಳಿಯ ಜನಸಂಖ್ಯೆ 840. ಅಕ್ಷರಸ್ಥರ ಪ್ರಮಾಣ ಶೇಕಡಾ 58.

ಕುಮಾರನಹಳ್ಳಿಯಲ್ಲಿ ಕೃಷಿಗೆ ಒಳಪಟ್ಟಿರುವ 138 ಹೆಕ್ಟೇರುಗಳಲ್ಲಿ 43 ಹೆಕ್ಟೇರು ಪ್ರದೇಶಕ್ಕೆ ಕೊಳವೆ ಬಾವಿ ಆಧಾರಿತ ನೀರಾವರಿ ಸೌಲಭ್ಯವಿದೆ. ಉಳಿದದ್ದು ಒಣಭೂಮಿ. ಊರಿಗೆ ಸಮೀಪವಾಗಿ ಎರಡು ಸಣ್ಣ ಹಳ್ಳಿಗಳಿದ್ದರೂ ಅದು ದನಕರುಗಳಿಗೆ ಕುಡಿಯಲು ಮಾತ್ರ ಸಾಕಾಗುತ್ತದೆ. ಹಳ್ಳಿಯಲ್ಲಿ ಕಿರುನೀರು ಸರಬರಾಜು ವ್ಯವಸ್ಥೆಯಡಿಯಲ್ಲಿ ಎರಡು ಟ್ಯಾಂಕುಗಳಿದ್ದು, ಒಂದು ಬಾವಿ ಹಾಗೂ ನಾಲ್ಕು ಕೈಪಂಪುಗಳಿವೆ. ಹಳ್ಳಿಯ 77 ಕುಟುಂಬಗಳಿಗೆ (70%) ಕೃಷಿಯೇ ಆದಾಯದ ಮುಖ್ಯ ಮೂಲ. ಕೊಳವೆ ನೀರಾವರಿಯಿಂದ ಶೇಂಗಾ, ಜೋಳ, ಮೆಕ್ಕೆ ಜೋಳ, ಸೂರ್ಯಕಾಂತಿಗಳನ್ನು ಬೆಳೆಯುತ್ತಾರೆ. ಮಳೆಯಾಧಾರಿತ ಕೃಷಿಯಲ್ಲಿ ರಾಗಿ, ಜೋಳ, ಎಳ್ಳು, ಹೆಸರು, ತೊಗರಿ, ಅಲಸಂದೆಗಳಿಗೆ ಪ್ರಾಮುಖ್ಯತೆ. ಬೀಡಿ ಎಲೆಗಳು ಹಾಗೂ 'ಅಂಟು' ಸಂಗ್ರಹಣೆ ಹಳ್ಳಿಯ ಜನರ ಮುಖ್ಯ ಉಪಕಸುಬು. ಇದರೊಡನೆ ಎಂಟು ಕುಟುಂಬಗಳು ಹೈನುಗಾರಿಕೆಯಲ್ಲಿ, 20 ಕುಟುಂಬಗಳು ಕುರಿ ಸಾಕಣೆಕೆಯಲ್ಲಿ ಹಾಗೂ 2 ಕುಟುಂಬಗಳು ಸಣ್ಣ ಪ್ರಮಾಣದಲ್ಲಿ ಕೋಳಿ ಸಾಕಣೆಯಲ್ಲಿ ತೊಡಗಿವೆ. ಅಂಗಡಿ, ಹೋಟೆಲ್, ಮಾಸ್ತರಿಕೆ, ಟೈಲರಿಂಗ್ ನಡೆಸುತ್ತಿರುವ ನಾಲ್ಕೈದು ವ್ಯಕ್ತಿಗಳೂ ಇಲ್ಲಿದ್ದಾರೆ. 25 ಭೂ ರಹಿತ ಕುಟುಂಬಗಳಿಗೆ ಕೃಷಿ ಕೂಲಿ ಕೆಲಸವೇ ಮುಖ್ಯ ಉದ್ಯೋಗ. ಸಾಕಷ್ಟು ಕೆಲಸ ದೊರೆಯದಿದ್ದಾಗ ಇದರಲ್ಲಿ 12 ಕುಟುಂಬಗಳು ವಲಸೆ ಹೋಗುತ್ತವೆ.

ಜಂಟೀ ಅರಣ್ಯ ಯೋಜನೆಯೂ ಸೇರಿದಂತೆ ಕುಮಾರನಹಳ್ಳಿಯ ಸರ್ವಸಮಸ್ತ ಚಟುವಟಿಕೆಗಳಿಗೂ ಕೇಂದ್ರ ಬಿಂದುವೆಂದರೆ 'ಕೃಷಿ ಕಾರ್ಮಿಕ ಯುವಕ ಮಂಡಳಿ' ಹಳ್ಳಿಯ ಒಟ್ಟಾರೆ ಒಳಿತಿಗಾಗಿ, ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಈ ಯುವಕ ಮಂಡಳಿಯ ಸದಸ್ಯರೇ 'ವ್ಯವಸಾಯ ಸೇವಾ ಸಹಕಾರ ಸಂಘ'ವನ್ನು ನಡೆಸುತ್ತಾರೆ. ಮಹಿಳೆಯರೇ ಸೇರಿ ಸ್ಥಾಪಿಸಿಕೊಂಡಿರುವ 'ಹೊನ್ನತ್ತಮ್ಮ ಮಹಿಳಾ ಸ್ವಸಹಾಯ ಸಂಘ' ಅಸ್ತಿತ್ವದಲ್ಲಿದ್ದರೂ ನಿಷ್ಕ್ರಿಯವಾಗಿದೆ.

ಹಳ್ಳಿಯ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳ ಪ್ರೇರಕ ಹಾಗೂ ಮಾರ್ಗದರ್ಶಕ ಶಕ್ತಿಗಳೆಂದರೆ 'ಸಮಾಜ ಪರಿವರ್ತನಾ ಸಮುದಾಯ' ಹಾಗೂ 'ರೀಚ್' ಎಂಬ ಎರಡು ಸರ್ಕಾರೇತರ ಸಂಸ್ಥೆಗಳು.

ಮರಡವಳ್ಳಿ

ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ತಾಳಗುಪ್ಪ ಹೋಬಳಿಯಲ್ಲಿರುವ ಮರಡವಳ್ಳಿ ಗ್ರಾಮ ಸಾಗರದಿಂದ ಪಶ್ಚಿಮಕ್ಕೆ 15 ಕಿ.ಮೀ.ಗಳ ದೂರದಲ್ಲಿದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ದೇವಾಸ, ನಾಡಮಳ್ಳ, ಬಾಳೆಗೆರೆ, ಹುಲ್ಕೋಡು, ನಿಟ್ಲೆ ಹಳೇತೋಟ, ಕೆಸವಿನ ಮನೆಗಳೆಂಬ ಆರು ಸಣ್ಣ ಸಣ್ಣ ಹಳ್ಳಿಗಳಿವೆ. ಸಾಗರದಿಂದ ಮರಡವಳ್ಳಿಗೆ ಡಾಂಬರು ರಸ್ತೆಯಿದ್ದರೂ, ಉಳಿದ ಹಳ್ಳಿಗಳಿಗಿರುವುದು ಕಚ್ಚಾ ರಸ್ತೆ ಮಾತ್ರ. ಮರಡವಳ್ಳಿಯಲ್ಲಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಮಾತ್ರ ಲಭ್ಯವಿದ್ದು ಮುಂದಿನ ಶಿಕ್ಷಣಕ್ಕೆ ಸಾಗರಕ್ಕೆ ಹೋಗಬೇಕು. ಗ್ರಾಮ ಪಂಚಾಯಿತಿ ಕಛೇರಿ, ಅಂಚೆ ಕಛೇರಿ, ಸಹಕಾರಿ ಸಂಘ, ಯುವಕರ ಸಂಘ, ಮಹಿಳಾ ಸಂಘ, ದೂರವಾಣಿ ಕೇಂದ್ರ, ಜಾನುವಾರು ಆಸ್ಪತ್ರೆಯಿದ್ದರೂ ನ್ಯಾಯಬೆಲೆ ಅಂಗಡಿ, ಆರೋಗ್ಯ ಕೇಂದ್ರಗಳಿಲ್ಲ. ಸಾಗರದಿಂದ ಸರ್ಕಾರಿ ಹಾಗೂ ಖಾಸಗೀ ಬಸ್ಸುಗಳು ಬರುವುದರಿಂದ ಸಾರಿಗೆ ವ್ಯವಸ್ಥೆ ತಕ್ಕಮಟ್ಟಿಗೆ ಚೆನ್ನಾಗಿದೆ. ಸಾಗರವೇ ಹತ್ತಿರದ ಮಾರುಕಟ್ಟೆ.

ಮರಡವಳ್ಳಿಯ ಒಟ್ಟು ಭೂಕ್ಷೇತ್ರ 2815 ಹೆಕ್ಟೇರುಗಳಿದ್ದು ವ್ಯವಸಾಯ ಕ್ಷೇತ್ರದ ವಿಸ್ತೀರ್ಣ 588 ಹೆಕ್ಟೇರುಗಳು. ಇದರಲ್ಲಿ 84.2 ಹೆಕ್ಟೇರು ಖುಷ್ಕಿ, 262.4 ಹೆಕ್ಟೇರು ತರಿ ಹಾಗೂ 241.4 ಹೆಕ್ಟೇರುಗಳು ತೋಟದ ಭೂಮಿ. ಕಿರು ಅರಣ್ಯ, ಕಾಯ್ದಿಟ್ಟ ಅರಣ್ಯ ಹಾಗೂ ಕಂದಾಯ ಅರಣ್ಯಗಳು ಸೇರಿದಂತೆ ಅರಣ್ಯ ಪ್ರದೇಶದ ಒಟ್ಟು ವಿಸ್ತೀರ್ಣ 2359 ಹೆಕ್ಟೇರುಗಳು. ಮರಡವಳ್ಳಿಯಲ್ಲಿ ಒಟ್ಟು 222 ಕುಟುಂಬಗಳಿದ್ದು ಬ್ರಾಹ್ಮಣ ಕುಟುಂಬಗಳ ಸಂಖ್ಯೆಯೇ(76) ಹೆಚ್ಚಾಗಿವೆ. ಉಳಿದಂತೆ ಲಿಂಗಾಯಿತ(11), ಈಡಿಗ (13), ಮಡಿವಾಳ (13), ಒಕ್ಕಲಿಗ (1), ಕುಂಬಾರ(50), ಪರಿಶಿಷ್ಟಜಾತಿ (21), ಪರಿಶಿಷ್ಟ ಪಂಗಡ(22) ಹಾಗೂ 28 ಇನ್ನಿತರ ಕುಟುಂಬಗಳಿವೆ. ಈ ಗ್ರಾಮದ ಜನಸಂಖ್ಯೆ 920. ಅಕ್ಷರಸ್ಥರ ಪ್ರಮಾಣ ಶೇಕಡಾ 20.

ಮರಡವಳ್ಳಿಯ ವ್ಯಾಪ್ತಿಯಲ್ಲಿ 22 ಕೆರೆಗಳಿದ್ದು, ಕೃಷಿಗೆ ನೀರಾವರಿ ಸೌಲಭ್ಯವನ್ನೊದಗಿಸುತ್ತವೆ. 148 ಕುಟುಂಬಗಳಿಗೆ ಕೃಷಿಯೇ ಮುಖ್ಯ ಕಸುಬು. ಭತ್ತ, ಕಬ್ಬುಗಳೊಡನೆ ತೋಟದ ಉತ್ಪನ್ನಗಳಾದ ಅಡಿಕೆ, ತೆಂಗು, ಗೇರುಗಳಿಗೂ ಇಲ್ಲಿ ಪ್ರಾಮುಖ್ಯತೆಯಿದೆ. ಕಿರು ಅರಣ್ಯ ಉತ್ಪನ್ನಗಳ ಸಂಗ್ರಹ ಇಲ್ಲಿನ ಬಹುತೇಕ ಕುಟುಂಬಗಳ ಮುಖ್ಯ ಉಪಕಸುಬು.

ಶರಾವತಿ ವಲಯಾಭಿವೃದ್ಧಿ ಸಮಿತಿ ಇಲ್ಲಿನ ಪ್ರಮುಖ ಸರ್ಕಾರೇತರ ಸಂಸ್ಥೆ. ಶರಾವತಿ ಹಿನ್ನೀರಿನ ಪ್ರದೇಶವಾದ ಆವಿನಹಳ್ಳಿ ಹೋಬಳಿಯ ಹುಲ್ಕೋಡು ಗ್ರಾಮದಿಂದ ಬಾರಂಗಿ ಹೋಬಳಿಯ ಬಾಳೆಗೆರೆ ಗ್ರಾಮದವರೆಗಿನ ಎಂಟು ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಈ ಸರ್ಕಾರೇತರ

ಸಂಸ್ಥೆ ಶ್ರಮಿಸುತ್ತಿದೆ. ಮಹಿಳಾ ಮತ್ತು ಶಿಶುಕಲ್ಯಾಣ, ಸಾರ್ವಜನಿಕ ಕಾಮಗಾರಿ, ದುರ್ಬಲ ವರ್ಗ ಮತ್ತು ಕೂಲಿಕಾರ್ಮಿಕರ ಏಳಿಗೆ, ಔಷಧೀಯ ಸಸ್ಯಗಳ ಸಂರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ಈ ಸಂಸ್ಥೆ ತನ್ನನ್ನು ಆಸ್ಥೆಯಿಂದ ತೊಡಗಿಸಿಕೊಂಡಿದೆ.

ಹನಿಯಾ

ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು, ಹುಂಚ ಹೋಬಳಿಯಲ್ಲಿರುವ ಹನಿಯಾ, ಹೊಸನಗರದಿಂದ 7 ಕಿ.ಮೀ.ಗಳ ದೂರದಲ್ಲಿ-ಹೊಸನಗರ-ಕೊಲ್ಲೂರು ರಸ್ತೆಯಲ್ಲಿದೆ. ಮುಖ್ಯ ರಸ್ತೆಯಲ್ಲಿಯೇ ಇರುವುದರಿಂದ ತಾಲ್ಲೂಕು ಕೇಂದ್ರವಾದ ಹೊಸನಗರದೊಡನೆ ಉತ್ತಮ ಸಂಪರ್ಕ ವ್ಯವಸ್ಥೆ ಹೊಂದಿದೆ. ಹೊಸನಗರ ಮುಖ್ಯ ಮಾರುಕಟ್ಟೆಯೂ ಹೌದು. ಹನಿಯಾ ಗ್ರಾಮದಲ್ಲಿ ಕಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ, ಅಂಚೆ ಕಛೇರಿಗಳು ಮಾತ್ರವಿದ್ದು ಉಳಿದ ಸೌಲಭ್ಯಗಳಿಗೆ ಹತ್ತಿರದ ಹೊಸನಗರಕ್ಕೆ ಹೋಗಬೇಕು.

ಹನಿಯಾ ಗ್ರಾಮದ ಒಟ್ಟು ಭೂ ಕ್ಷೇತ್ರ 352 ಹೆಕ್ಟೇರುಗಳು. ಇದರಲ್ಲಿ ತರಿ ಭೂಮಿ 5.2, ಖುಷ್ಕಿ 15.6 ಹಾಗೂ ತೋಟದ ವಿಸ್ತೀರ್ಣ 31.2 ಹೆಕ್ಟೇರುಗಳು. ಅರಣ್ಯ 284 ಹೆಕ್ಟೇರುಗಳು. ಹನಿಯ ಗ್ರಾಮದಲ್ಲಿ 67 ಕುಟುಂಬಗಳಿದ್ದು, ಅದರಲ್ಲಿ 47 ಕುಟುಂಬಗಳಿಗೆ ಕೃಷಿಯೇ ಆದಾಯದ ಮುಖ್ಯ ಮೂಲ. 67 ಕುಟುಂಬಗಳಲ್ಲಿ 56 ಬ್ರಾಹ್ಮಣರು, 2 ಪರಿಶಿಷ್ಟ ಜಾತಿ, 3 ಪರಿಶಿಷ್ಟವರ್ಗ, 1 ಕ್ರಿಶ್ಚಿಯನ್ ಕುಟುಂಬಗಳಿವೆ. 5 ಕುಟುಂಬಗಳು ಇನ್ನಿತರವು. ಲಿಂಗಾಯಿತರು ಮತ್ತು ಈಡಿಗರು ಇಲ್ಲ. ಒಟ್ಟು ಜನಸಂಖ್ಯೆ 403. ಇದರಲ್ಲಿ ಸಾಕ್ಷರಸ್ಥರ ಸಂಖ್ಯೆ 363(90%) ಹನಿಯಾ ವ್ಯಾಪ್ತಿಯಲ್ಲಿ ಎರಡು ಕೆರೆಗಳಿದ್ದು ಕೃಷಿಕರು ಭತ್ತವನ್ನು ಬೆಳೆದರೂ ತೋಟದ ಬೆಳೆಗಳಾದ ಅಡಿಕೆ, ಬಾಳೆ, ಮಾವು, ತೆಂಗು, ಗೇರುಗಳಿಗೆ ಅತಿ ಹೆಚ್ಚಿನ ಮಹತ್ವವಿದೆ. ಕೃಷಿಯೇತರ ಚಟುವಟಿಕೆಗಳಲ್ಲಿ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹ ಮುಖ್ಯ ಉಪಕಸುಬು.

'ಗ್ರಾಮ ಭಾರತಿ ಟ್ರಸ್ಟ್' ಹನಿಯಾದ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳಿಗೆ, ಮೀಸಲಾದ ಸಂಸ್ಥೆ. ಬ್ರಾಹ್ಮಣವರ್ಗದವರೇ ಅಧಿಕ ಸಂಖ್ಯೆಯಲ್ಲಿರುವ ಈ ಸಂಸ್ಥೆ ಆಗಾಗ ಉಳಿದವರಿಗೂ ಸೇರಿದಂತೆ ಸಾಕ್ಷರತಾ ಆಂದೋಲನ, ಆರೋಗ್ಯ ತಪಾಸಣೆ ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದುಂಟು. ಈ ಸಂಸ್ಥೆಯಲ್ಲಿರುವ ಯುವ ನಾಯಕರೇ ತಾಲ್ಲೂಕು ಮಟ್ಟದಲ್ಲಿ ಪರಿಸರ ಸಂರಕ್ಷಣೆ, ಪರಿಸರ ಜಾಗೃತಿ ಶಿಬಿರಗಳನ್ನು ನಡೆಸಿವೆ. ಅವುಗಳ ಬಗ್ಗೆ ಮುಂದೆ ಚರ್ಚಿಸಲಿದ್ದೇವೆ.

ಉದ್ದೂರು

ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು ಹಳ್ಳಿ ಮೈಸೂರು ಹೋಬಳಿಯಲ್ಲಿರುವ ಉದ್ದೂರು, ತಾಲ್ಲೂಕು ಕೇಂದ್ರವಾದ ಹೊಳೆನರಸೀಪುರದಿಂದ 12 ಕಿ.ಮೀ.ಗಳ ದೂರದಲ್ಲಿದೆ. ತಾಲ್ಲೂಕು

ಕೇಂದ್ರದೊಡನೆ ಉತ್ತಮ ಸಂಪರ್ಕ ಹೊಂದಿರುವ ಉದ್ದೂರಿನಲ್ಲಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿವೆ. ಅಂಚೆ ಕಛೇರಿ, ಅಂಗನವಾಡಿ, ನ್ಯಾಯಬೆಲೆ ಅಂಗಡಿ ಮುಂತಾದವುಗಳಿಗೆ ಹಳ್ಳಿಯಿಂದ 6 ಕಿ.ಮೀ.ದೂರದಲ್ಲಿರುವ ಕೆರೆಗೋಡಿಗೆ ಹೋಗಬೇಕು. ಮಾರುಕಟ್ಟೆಯೂ ಸೇರಿದಂತೆ ಉಳಿದೆಲ್ಲ ಸೌಲಭ್ಯಗಳಿಗೆ ಹೊಳೆನರಸೀಪುರವೇ ಕೇಂದ್ರ.

ಉದ್ದೂರಿನ ಭೌಗೋಳಿಕ ವಿಸ್ತೀರ್ಣ 544 ಹೆಕ್ಟೇರುಗಳು. ಕೃಷಿಭೂಮಿ 328 ಹೆಕ್ಟೇರುಗಳು. ಇದರಲ್ಲಿ ಖುಷ್ಕಿ 320 ಹೆಕ್ಟೇರು, ತೋಟ 2.5 ಹೆಕ್ಟೇರು ಹಾಗೂ ಕೊಳವೆ ನೀರಾವರಿ ಪ್ರದೇಶ 5.5 ಹೆಕ್ಟೇರುಗಳು. ಹಳ್ಳಿಯ ವ್ಯಾಪ್ತಿಯಲ್ಲಿ 5 ಕೆರೆಗಳಿದ್ದರೂ, ಅವುಗಳಲ್ಲಿ ಹೂಳು ತುಂಬಿರುವುದರಿಂದ ಕೃಷಿ ಕೆಲಸಗಳಿಗೆ ನಿಷ್ಪ್ರಯೋಜಕ. ಮಳೆಗಾಲದನಂತರ ದನಕರುಗಳಿಗೆ ಕುಡಿಯಲು ನೀರು ದೊರೆಯುತ್ತದೆ. ಮಳೆ ಆಧಾರಿತ ಕೃಷಿಯಲ್ಲಿ ರಾಗಿ, ಹುರುಳಿ, ಆಲೂಗಡ್ಡೆಗಳು ಮುಖ್ಯ ಬೆಳೆ. ಅಲ್ಪ ಪ್ರಮಾಣದಲ್ಲಿ ಹೊಗೆಸೊಪ್ಪು, ತರಕಾರಿಗಳೂ ಉಂಟು. ಉದ್ದೂರಿನಲ್ಲಿ 250 ಕುಟುಂಬಗಳಿದ್ದು, ಅವುಗಳಲ್ಲಿ 140 ನೇರವಾಗಿ ಕೃಷಿಯನ್ನೇ ಅವಲಂಬಿಸಿವೆ. 250 ಕುಟುಂಬಗಳಲ್ಲಿ 90 ಲಿಂಗಾಯಿತರದ್ದು, 68 ಒಕ್ಕಲಿಗರು. ಉಳಿದಂತೆ ಪರಿಶಿಷ್ಟಜಾತಿ (24), ಪರಿಶಿಷ್ಟವರ್ಗ(20), ಬ್ರಾಹ್ಮಣರು(13) ಕುಂಬಾರರು(8), ಮಡಿವಾಳ(9), ಕ್ರಿಶ್ಚಿಯನ್(4) ಹಾಗೂ ಇನ್ನಿತರ(14) ಕುಟುಂಬಗಳಿವೆ. ಹಳ್ಳಿಯ ಒಟ್ಟು ಜನಸಂಖ್ಯೆ 1300. ಅಕ್ಷರಸ್ಥರ ಸಂಖ್ಯೆ 600(46%). ಹಳ್ಳಿಯ ಮುಖ್ಯ ಕಸುಬು ಕೃಷಿಯಾದರೂ ಹೊಳೆನರಸೀಪುರದ ಸರ್ಕಾರೀ ಹಾಗೂ ಇತರ ಕಛೇರಿಗಳಲ್ಲಿ ಕೆಲಸ, ಅಂಗಡಿ, ಮಂಡಿ, ಹೋಟೆಲ್, ಮಾಸ್ತರಿಕೆ, ಬಡಗಿ, ಕಂಟ್ರಾಕ್ಟರ್, ಟೈಲರಿಂಗ್, ಇಸ್ತ್ರಿ, ತರಕಾರಿ ವ್ಯಾಪಾರ, ಕೂಲಿ ಕೆಲಸ ಮಾಡುವ ಕುಟುಂಬಗಳೂ ಉದ್ದೂರಿನಲ್ಲಿವೆ. ಈ ಹಳ್ಳಿಯಲ್ಲಿ ಶ್ರೀ ವೀರಭದ್ರೇಶ್ವರ ಯುವಕ ಸಂಘವೆಂಬ ಸಂಘಟನೆಯಿದ್ದರೂ ಹಳ್ಳಿಯ ರಾಜಕೀಯದಿಂದಾಗಿ ಅದು ನಿಷ್ಕ್ರಿಯವಾಗಿದೆ.

ಉದ್ದೂರಿನ ವ್ಯಾಪ್ತಿಯಲ್ಲಾಗಲೀ, ಸುತ್ತಮುತ್ತಲಾಗಲೀ ಯಾವ ಅರಣ್ಯವೂ ಇಲ್ಲ. ಉದ್ದೂರಿನ ಸರ್ಕಾರೀ ಭೂಮಿಯಲ್ಲಿ 1982ರಲ್ಲಿ ಪ್ರಾರಂಭಿಸಿದ 52 ಹೆಕ್ಟೇರುಗಳ ನೀಲಗಿರಿ ತೋಪೇ ಜಂಟೀ ಅರಣ್ಯ ಯೋಜನೆಯ ಮುಖ್ಯ ಕ್ಷೇತ್ರ.

ಮುಕುಂದೂರು

ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕಟ್ಟಾಯ ಹೋಬಳಿಯಲ್ಲಿರುವ ಮುಕುಂದೂರು ಹಾಸನದಿಂದ ಸುಮಾರು 25 ಕಿ.ಮೀ.ಗಳ ದೂರದಲ್ಲಿದೆ. ಹಾಸನ-ಮೈಸೂರು ಹೆದ್ದಾರಿಯಿಂದ ಒಳಗೆ ತಿರುಗಿ 5 ಕಿ.ಮೀ.ಗಳಷ್ಟು ಕಚ್ಚಾ ದಾರಿಯಲ್ಲಿ ಕ್ರಮಿಸಿದ ನಂತರ ಮುಕುಂದೂರು ಸಿಗುತ್ತದೆ. ಮುಕುಂದೂರಿನಲ್ಲಿ 7ನೆಯ ತರಗತಿಯವರೆಗೂ ಶಾಲೆಯಿದ್ದು, 5 ಶಿಕ್ಷಕರು ಹಾಗೂ 250 ಮಕ್ಕಳಿದ್ದಾರೆ. ಮುಕುಂದೂರಿನಿಂದ ಒಂದೂವರೆ ಕಿ.ಮೀ.ದೂರದಲ್ಲಿರುವ 'ಕಾರ್ಲೆ'ಯಲ್ಲಿ

ಪ್ರೌಢಶಾಲೆ, ಅಂಚೆ ಕಛೇರಿ, ಆಸ್ಪತ್ರೆ, ಪಶು ವೈದ್ಯಶಾಲೆಗಳ ಸೌಲಭ್ಯವಿದೆ. ಅಲ್ಲಿಂದ ಸ್ವಲ್ಪ ದೂರದಲ್ಲಿರುವ ಗೋರೂರಿನಲ್ಲಿ ಮತ್ತೂ ಹೆಚ್ಚಿನ ಸೌಲಭ್ಯಗಳಿವೆ.

ಮುಕುಂದೂರಿನ ಭೌಗೋಳಿಕ ವಿಸ್ತೀರ್ಣ 910 ಹೆಕ್ಟೇರುಗಳು. ಕೃಷಿಭೂಮಿ 538 ಹೆಕ್ಟೇರು. ಮುಕುಂದೂರಿನ ಪಶ್ಚಿಮದ ಅಂಚಿನಲ್ಲಿ ಹೇಮಾವತಿ ನದಿ ಹರಿಯುತ್ತದೆ. ಇದರಿಂದ ದೊರೆಯುವ ನೀರಿನಿಂದ ಈ ಗ್ರಾಮದ 320 ಹೆಕ್ಟೇರು ಪ್ರದೇಶದಲ್ಲಿ ಎರಡು ಬೆಳೆ ಭತ್ತ ಬೆಳೆಯುತ್ತಾರೆ. 160 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯುತ್ತಾರೆ. 44 ಹೆಕ್ಟೇರ್ ಖುಷ್ಕಿ ಭೂಮಿಯಲ್ಲಿ ತೊಗರಿ, ಹರಳು, ರಾಗಿ, ಹುರುಳಿ, ಆಲೂಗೆಡ್ಡೆ, ತರಕಾರಿಗಳಿವೆ. 14 ಹೆಕ್ಟೇರ್ ತೋಟದಲ್ಲಿ ತೆಂಗು, ಅಡಿಕೆ, ಬಾಳೆಗಳಿವೆ. ಮುಕುಂದೂರಿನ 150 ಕುಟುಂಬಗಳಲ್ಲಿ 80 ಗೌಡರದು(ಒಕ್ಕಲಿಗ), 20 ಲಿಂಗಾಯಿತರದು ಉಳಿದಂತೆ ಪರಿಶಿಷ್ಟ ಜಾತಿ(14), ಪರಿಶಿಷ್ಟವರ್ಗ(9), ಕ್ರಿಶ್ಚಿಯನ್(3) ಹಾಗೂ ಉಳಿದ ಜಾತಿಗಳಿವೆ(24). ಊರಿನ 150 ಕುಟುಂಬಗಳಲ್ಲಿ 85 ಕುಟುಂಬಗಳಿಗೆ ಕೃಷಿಯೇ ಮುಖ್ಯ ಕಸುಬು. ಉಳಿದ ಕುಟುಂಬಗಳು ಉದ್ದೂರಿನಲ್ಲಿರುವಂತೆಯೇ ಕೃಷಿ ಕೂಲಿ ಕೆಲಸವೂ ಸೇರಿದಂತೆ ಜೀವನೋಪಾಯಕ್ಕಾಗಿ ವಿವಿಧ ಮಾರ್ಗಗಳನ್ನು ಅನುಸರಿಸಿದ್ದಾರೆ. ಊರಿನ ಜನಸಂಖ್ಯೆಯ ಶೇಕಡಾ 53ರಷ್ಟು ಅಕ್ಷರಸ್ಥರಿದ್ದಾರೆ.

ಉದ್ದೂರಿನಂತೆ ಮುಕುಂದೂರಿನಲ್ಲಾಗಲೀ, ಅದರ ಸುತ್ತಮುತ್ತಲಾಗಲೀ ಅರಣ್ಯವಿಲ್ಲ. ಊರಿನಲ್ಲಿರುವ 4 ಹೆಕ್ಟೇರುಗಳಷ್ಟು ಪ್ರದೇಶದ ಸರ್ಕಾರೀ ಗುಂಡು ತೋಪು ಈಗ ಜಂಟೀ ಅರಣ್ಯ ಯೋಜನೆಯ ಪ್ರದೇಶ.

ಮುಕುಂದೂರಿನಲ್ಲಿ ಮುಖ್ಯವಾಗಿ ಮೂರು ಸಂಘಗಳಿವೆ. ಶ್ರೀ ಮಲ್ಲೇಶ್ವರ ಸಮುದಾಯ ಭವನ ನಿರ್ಮಾಣ ಸಂಘ, ಹಾಸನದ ಡಿಸಿಸಿ ಬ್ಯಾಂಕಿನಲ್ಲಿ 10 ಲಕ್ಷ ರೂ.ಗಳ ಠೇವಣಿಯನ್ನಿಟ್ಟು ಅದರಿಂದ ಬಂದ ಬಡ್ಡಿಯಲ್ಲಿ ಗ್ರಾಮೀಣಾಭಿವೃದ್ಧಿಯ ಕೆಲಸಗಳನ್ನು ಮಾಡುತ್ತಿದೆ. ಸಮುದಾಯ ಭವನವೊಂದನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆ.

ಮುಕುಂದೂರು, ಹೊಸಹಳ್ಳಿ, ಮಲ್ಲೇನಹಳ್ಳಿಗಳ ಸಹಯೋಗದೊಂದಿಗೆ 250 ಸದಸ್ಯರನ್ನು ಹೊಂದಿರುವ ಹಾಲು ಉತ್ಪಾದಕರ ಸಂಘ, ಹಾಲು ಶೇಖರಣೆ ಮಾಡಿ ಹಾಸನದ ಹಾಲು ಒಕ್ಕೂಟಕ್ಕೆ ಸರಬರಾಜು ಮಾಡುತ್ತಿದೆ.

ಮುಕುಂದೂರು ಯುವಕ ಸಂಘ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಹತ್ವ ನೀಡುವುದರೊಡನೆ ಪಡಿತರ ವಸ್ತುಗಳ ನ್ಯಾಯಬೆಲೆ ಅಂಗಡಿಯೊಂದನ್ನು ನಡೆಸುತ್ತಿದೆ. ವಿವಿಧೋದ್ದೇಶ ಸಹಕಾರ ಸಂಘವೊಂದನ್ನು ಪ್ರಾರಂಭಿಸುವ ಉದ್ದೇಶವೂ ಇದೆ.

ಕ್ಷೇತ್ರಕಾರ್ಯ ಮಾಡಿದ ಮೇಲಿನ ಎಲ್ಲ ಹಳ್ಳಿಗಳಿಗೆ ಸಂಬಂಧಿಸಿದ ಅಗತ್ಯ ಮಾಹಿತಿಗಳನ್ನು ಕೋಷ್ಟಕ 1ರಲ್ಲಿ ಸಂಕ್ಷಿಪ್ತರೂಪದಲ್ಲಿ ನೀಡಲಾಗಿದೆ.

ಅರಣ್ಯದ ಮೇಲಿನ ಅವಲಂಬನೆ

ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ಎಲ್ಲ ಅಧ್ಯಯನಗಳೂ, ಗ್ರಾಮೀಣ ಸಮುದಾಯ ಹಾಗೂ ಸ್ಥಳೀಯ ಅರಣ್ಯ ಸಂಪನ್ಮೂಲಗಳ ನಡುವಿನ ಸಂಬಂಧವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿವೆ. ಹರ್ಯಾನದ ಸುಖೋಮಾಜರಿಯಲ್ಲಿ ಜಂಟೀ ಅರಣ್ಯ ಯೋಜನೆಯ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಮಧು ಸರೀನ್ ಅವರು, "ಅರಣ್ಯ ಸಂಪನ್ಮೂಲಗಳ ಮೇಲಿನ ಅವಲಂಬನೆ ಮತ್ತು ದಿನಕಳೆದಂತೆ ಕ್ಷೀಣಿಸುತ್ತಿರುವ ಸಂಪನ್ಮೂಲಗಳು, ಸ್ಥಳೀಯ ಸಮುದಾಯವನ್ನು ಸಂಘಟಿತರಾಗುವಂತೆ ಮಾಡಿ, ಕ್ಷೀಣಿಸುತ್ತಿರುವ ಸಂಪನ್ಮೂಲಗಳ ಸಂರಕ್ಷಣೆ, ಮಿತಬಳಕೆ ಹಾಗೂ ನಿರ್ವಹಣೆಯನ್ನು ಪ್ರೇರೇಪಿಸುತ್ತದೆ"[1] ಎನ್ನುತ್ತಾರೆ. ಪಶ್ಚಿಮ ಬಂಗಾಳದ ಚಂದಾನಾ ಹಳ್ಳಿಯಲ್ಲಿ ಇಂತಹದೇ ಪರಿಸ್ಥಿತಿಯಲ್ಲಿ ಸ್ಥಳೀಯ ಬುಡಕಟ್ಟು ಸಮುದಾಯ ಇಂತಹ ನಡವಳಿಕೆಯಿಂದ ಅರಣ್ಯ ಸಂಪನ್ಮೂಲವನ್ನು ಯಶಸ್ವಿಯಾಗಿ ನಿರ್ವಹಿಸಿರುವ ಪ್ರಕರಣವನ್ನು ಮಾರ್ಕ್‌ಪೋಫೆನ್ ಬರ್ಗರ್ ದಾಖಲಿಸಿದ್ದಾರೆ.[2] ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯ ಸಮುದಾಯದ ಸಹಭಾಗಿತ್ವವನ್ನು ಪರಿಶೀಲಿಸುತ್ತಿರುವ ಪ್ರಸ್ತುತದ ಅಧ್ಯಯನದಲ್ಲಿ ಪ್ರಾರಂಭಕ್ಕೆ ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿ ಅರಣ್ಯದ ಮೇಲಿನ ಅವಲಂಬನೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ. ಈ ಉದ್ದೇಶಕ್ಕಾಗಿ ಸ್ಥಳೀಯ ಸಮುದಾಯದ ಅರಣ್ಯದ ಮೇಲಿನ ಅವಲಂಬನೆಯನ್ನು ಸೂಚಿಸುವ ಆರು ಸೂಚ್ಯಂಕಗಳನ್ನು ಬಳಸಿಕೊಳ್ಳಲಾಗಿದೆ. ಈ ಸೂಚ್ಯಂಕಗಳೆಂದರೆ ಕಚ್ಚಾಮನೆಗಳ ಸಂಖ್ಯೆ, ಕೃಷಿಕರ ಸಂಖ್ಯೆ, ಜಾನುವಾರುಗಳ ಸಂಖ್ಯೆ, ಮೇವಿನ ಮೂಲ, ಅಡುಗೆಗೆ ಬಳಸುವ ಇಂಧನ ಮತ್ತು ಕಿರು ಅರಣ್ಯ ಉತ್ಪನ್ನಗಳ ಸಂಗ್ರಹ. ಇದರಲ್ಲಿ ಕಚ್ಚಾಮನೆಗಳ ಸಂಖ್ಯೆ, ಕೃಷಿಕರ ಸಂಖ್ಯೆ, ಜಾನುವಾರಗಳ ಸಂಖ್ಯೆ ಹಾಗೂ ಅಡುಗೆಯ ಇಂಧನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಎಲ್ಲ ಐದು ಹಳ್ಳಿಗಳಲ್ಲಿ ನಡೆದಿರುವ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ದಾಖಲೆಗಳಿಂದ ಪಡೆಯಲಾಗಿದೆ. ಕಚ್ಚಾಮನೆಗಳ ಸಂಖ್ಯೆಯನ್ನು ಗ್ರಾಮ ಪಂಚಾಯಿತಿ ಕಛೇರಿಯ ದಾಖಲೆಗಳೊಂದಿಗೆ ತಾಳೆ ನೋಡಲಾಗಿದೆ. ಮೇವಿನ ಮೂಲ ಮತ್ತು ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕ್ಷೇತ್ರಾಧ್ಯಯನದಲ್ಲಿ ಪ್ರಶ್ನಾವಳಿ ಮೂಲಕ ನಡೆಸಿದ ಸಂದರ್ಶನದಿಂದ ಪಡೆಯಲಾಗಿದೆ. ಈ ಅಂಕಿ-ಅಂಶಗಳನ್ನು 2 ರಿಂದ 6ವರೆಗಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

ಕಚ್ಚಾಮನೆಗಳು

ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಮನೆಗಳನ್ನು ತಾರಸಿ(ಆರ್‌ಸಿಸಿ), ಹೆಂಚು ಹಾಗೂ ಹುಲ್ಲಿನ ಮನೆಗಳೆಂದು ವಿಂಗಡಿಸಲಾಗಿದೆ(ಕೋಷ್ಟಕ 2). ತಾರಸಿ ಮನೆಗಳು ಅರಣ್ಯದ ಮೇಲೆ ಬೇಡಿಕೆಯನ್ನು ಹೊರಿಸುವುದಿಲ್ಲ. ಹೆಂಚಿನ ಮನೆಗಳಿಗೆ ಕೋಲುಗಳು, ತೀರುಗಳು ಅವಶ್ಯಕ. ಆದರೆ ಇದಕ್ಕೆ ಅರಣ್ಯಕ್ಕೆ

ಹೋಗಬೇಕೆಂದಿಲ್ಲ. ತೋಟ, ನೆಡು ತೋಪುಗಳಿಂದಲೂ(ನೀಲಗಿರಿ ಕೋಲು, ಅಡಕೆ, ತೆಂಗಿನ ತೀರುಗಳು) ಇವನ್ನು ಪಡೆಯಬಹುದು. ಆದರೆ ಹುಲ್ಲಿನ ಮನೆಗಳ ಸಂಗತಿಯೇ ಬೇರೆ. ಕನಿಷ್ಠ ವರ್ಷಕ್ಕೊಂದು ಬಾರಿಯಾದರೂ ಛಾವಣಿಯನ್ನು ಬದಲಿಸಲೇಬೇಕು. ಉದಾಹರಣೆಗೆ ಕುಮಾರನ ಹಳ್ಳಿಯ 33 ಕುಟುಂಬಗಳು(ಶೇ.30) ಪ್ರತಿವರ್ಷ ಡಿಸೆಂಬರ್ ಮತ್ತು ಜನವರಿಗಳಲ್ಲಿ ಊರಸುತ್ತಲಿನ ಗುಡ್ಡಗಳು, ಜತ್ತಿನಕಟ್ಟೆ, ಮಲ್ಲಾಪುರ ಅರಣ್ಯಗಳಿಂದ ಛಾವಣಿಗಾಗಿ ಬಾಧೆಹುಲ್ಲನ್ನು ಸಂಗ್ರಹಿಸುತ್ತವೆ. ದಿನಕ್ಕೆ ಸರಾಸರಿ 20 ಕಿಲೋಗ್ರಾಂನಂತೆ ಎರಡು ತಿಂಗಳಲ್ಲಿ, ಪ್ರತಿ ಕುಟುಂಬವೂ 1200 ಕಿಲೋಗ್ರಾಂ ಗಳಷ್ಟು ಹುಲ್ಲನ್ನು ಸಂಗ್ರಹಿಸುತ್ತವೆ. ಈ ರೀತಿ ಸಂಗ್ರಹಿಸಿದ ಸುಮಾರು 40 ಟನ್ನುಗಳಷ್ಟು ಹುಲ್ಲಿನಲ್ಲಿ ಅರ್ಧದಷ್ಟು ಹೊಸ ಛಾವಣಿಗಾಗಿ ಬಳಕೆಯಾದರೆ ಉಳಿದ 20 ಟನ್ನುಗಳು ಬೇರೆಯ ಹಳ್ಳಿಯವರಿಗೆ ಮಾರಾಟವಾಗುತ್ತವೆ. ಹುಲ್ಲಿನ ಮನೆಗಳಿಗೂ ಕೋಲುಗಳು, ತೀರುಗಳು ಬೇಕು. ಐದು ಜನರಿರುವ ಹುಲ್ಲಿನ ಮನೆಗೆ ಸರಾಸರಿ 20 'ಗಳ' ಗಳು ಬೇಕಾಗುತ್ತವೆ. ಮರಡವಳ್ಳಿಯಲ್ಲಿ ಶೇಕಡಾ 41.5ರಷ್ಟು ಮನೆಗಳು ಹುಲ್ಲಿನವಾಗಿದ್ದು, ಈ ಕುಟುಂಬಗಳೂ ಅರಣ್ಯದಿಂದ ಹುಲ್ಲನ್ನು ಸಂಗ್ರಹಿಸುತ್ತವೆ, ಆದರೆ ಮಾರಾಟ ಮಾಡುವುದಿಲ್ಲ. ಹನಿಯಾದಲ್ಲಿ ಕಚ್ಚಾಮನೆಗಳ ಪ್ರಮಾಣ ಶೇಕಡಾ 9ರಷ್ಟು ಮಾತ್ರ. ಉದ್ದೂರು ಮತ್ತು ಮುಕುಂದೂರುಗಳಲ್ಲಿ ಹುಲ್ಲಿನ ಮನೆಗಳ ಪ್ರಮಾಣ ಶೇಕಡಾ 16 ಮತ್ತು 32.6. ಆದರೆ ಹುಲ್ಲನ್ನು ಪೂರೈಸುವ ಯಾವ ಅರಣ್ಯವೂ ಸಮೀಪದಲ್ಲಿಲ್ಲ. ಉದ್ದೂರಿನಲ್ಲಿ ನೆಡುತೋಪಿನಿಂದ ಸ್ವಲ್ಪ ಹುಲ್ಲು ದೊರೆಯುತ್ತದೆ. ಉಳಿದಂತೆ ಊರ ಹೊರಗೆ ರಸ್ತೆಬದಿಯಲ್ಲಿ, ಬಯಲಲ್ಲಿ ಬೆಳೆದ ಹುಲ್ಲನ್ನು ಇಲ್ಲಿಯ ಜನ ಛಾವಣಿಗಾಗಿ ಕೊಯ್ಯುತ್ತಾರೆ. ರಾಗಿ ಹುಲ್ಲು, ಭತ್ತದ ಹುಲ್ಲು ದೊರೆತರೂ ಅದನ್ನು ಮೇವಿಗಾಗಿ ಬಳಸುವುದರಿಂದ ಛಾವಣಿಗಾಗಿ ಉಪಯೋಗಿಸುವುದಿಲ್ಲ. ಛಾವಣಿಗಾಗಿ ಬಳಸಿದ ಹುಲ್ಲಿನ ಬಾಳಿಕೆಯನ್ನು ಹೆಚ್ಚಿಸಲು ಅದರ ಮೇಲೆ ಪ್ಲಾಸ್ಟಿಕ್ ಹಾಳೆಗಳನ್ನು ಹೊದಿಸುವುದು, ಹುಲ್ಲಿನ ಬದಲಿಗೆ ತೆಂಗಿನಗರಿಗಳ ಚಾಪೆಗಳನ್ನು ಬಳಸುವುದೂ ಇಲ್ಲಿನ ಪದ್ಧತಿಯಾಗಿದೆ.

ಕೃಷಿಕರ ಸಂಖ್ಯೆ

ಅರಣ್ಯಕ್ಕೆ ಸಮೀಪವಾಗಿರುವ ಸಮುದಾಯವೊಂದರಲ್ಲಿ ಕೃಷಿಕರ ಸಂಖ್ಯೆ ಹೆಚ್ಚಾದಷ್ಟು ಅರಣ್ಯದ ಮೇಲಿನ ಅವಲಂಬನೆಯೂ ಹೆಚ್ಚುತ್ತದೆ. ಜಾನುವಾರುಗಳಿಗೆ ಮೇವು, ಹಸುರೆಲೆ ಗೊಬ್ಬರ, ಕೃಷಿ ಉಪಕರಣಗಳಿಗೆ ಬೇಕಾದ ಮರಮಟ್ಟುಗಳಿಗಾಗಿ ಕೃಷಿಕರು ಅರಣ್ಯವನ್ನೇ ಅವಲಂಬಿಸುತ್ತಾರೆ. ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಭೂಹಿಡುವಳಿಯ ಆಧಾರದ ಮೇಲೆ ಕೃಷಿಕರ ಕುಟುಂಬಗಳ ಸಂಖ್ಯೆಯನ್ನು ಕೋಷ್ಟಕ 3ರಲ್ಲಿ ತೋರಿಸಲಾಗಿದೆ. ಕುಮಾರನಹಳ್ಳಿಯಲ್ಲಿ ಶೇಕಡಾ 77 ಕೃಷಿಕ ಕುಟುಂಬಗಳಿವೆ. ಆದರೆ ಭೂಮಿಯಿದ್ದರೂ ಹಲವಾರು ಕಾರಣಗಳಿಂದ ಏನನ್ನೂ ಬೆಳೆಯದ, ಭೂಮಿಯಿಂದ ಯಾವ ಆದಾಯವನ್ನೂ ಪಡೆಯದ 21 ಕುಟುಂಬಗಳನ್ನು ಹೊರತುಪಡಿಸಿದರೆ

ಕುಮಾರನಹಳ್ಳಿಯಲ್ಲಿ 64 ಕುಟುಂಬಗಳ(58%) ಆದಾಯದ ಮುಖ್ಯಮೂಲ ಕೃಷಿಯೇ ಆಗುತ್ತದೆ. ಉಳಿದ ಹಳ್ಳಿಗಳಲ್ಲಿ ಈ ಪರಿಸ್ಥಿತಿ ಕಂಡು ಬರುವುದಿಲ್ಲ. ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ನಡೆದಿರುವ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಗಳಿಂದ ಕೃಷಿ ಉಪಕರಣಗಳಿಗೆ ಬೇಕಾದ ಮರಮಟ್ಟುಗಳ ಒಂದು ಅಂದಾಜು ನಮಗೆ ದೊರೆಯುತ್ತದೆ. ಕುಮಾರನಹಳ್ಳಿಯ ಎಲ್ಲ ಕೃಷಿ ಕುಟುಂಬಗಳಿಗೆ ಪ್ರತಿ ಎರಡು ವರ್ಷಗಳಿಗೊಮ್ಮೆಯಂತೆ 64 ನೇಗಿಲುಗಳು, 64 ಎಡಕುಂಟೆ, 64 ದೊಡ್ಡಕುಂಟೆ, 64 ಮಾರಿಗಡ್ಡೆ ಕುಂಟೆ ಹಾಗೂ 768 ಈಸುಗಳು ಬೇಕು. ಇದರಂತೆ ಪ್ರತಿಕುಟುಂಬದ ವಾರ್ಷಿಕ ಚೌಬೀನೆಯ ಅಗತ್ಯ 0.46 ಘನ ಮೀಟರುಗಳಷ್ಟಾಗುತ್ತದೆ. ಮರಡವಳ್ಳಿಯ 148 ಕೃಷಿ ಕುಟುಂಬಗಳಿಗೆ ನೇಗಿಲು, ನೊಗ, ಕುಂಟೆ, ಕೊರಡು, ಈಚು, ಮರಮಟ್ಟು ತೊಲೆಗಳೂ ಸೇರಿದಂತೆ ಪ್ರತಿ ಕುಟುಂಬದ ವಾರ್ಷಿಕ ಚೌಬೀನೆಯ ಬೇಡಿಕೆ 0.32 ಘನ ಮೀಟರುಗಳು. ಸುಮಾರು ಶೇಕಡಾ 75ರಷ್ಟು ಕುಟುಂಬಗಳು ಕೃಷಿಯ ಮೇಲೆಯೇ ಆಧಾರಿತವಾಗಿರುವ ಹನಿಯಾದಲ್ಲೂ ಪ್ರತಿಕುಟುಂಬಕ್ಕೆ ಪ್ರತಿವರ್ಷ 0.36 ಘನ ಮೀಟರುಗಳಷ್ಟು ಚೌಬೀನೆ ಬೇಕಾಗುತ್ತದೆ. ಕುಮಾರನಹಳ್ಳಿಯ ದೊಡ್ಡ ರೈತರಲ್ಲಿ ಶೇಕಡಾ 80 ಭಾಗ ಈ ಮರಮಟ್ಟುಗಳ ಬೇಡಿಕೆಯನ್ನು ತಮ್ಮ ಜಮೀನಿನಲ್ಲೇ ಇರುವ ನೀಲಗಿರಿ, ದಿಂಡಲ್, ಕಮರ, ಕರಿಜಾಲಿಗಳಿಂದ ಪೂರೈಸಿಕೊಳ್ಳುತ್ತಿದ್ದರೂ, ಉಳಿದ ಕೃಷಿ ಕುಟುಂಬಗಳು ಅರಣ್ಯದ ಮೇಲೆಯೇ ಅವಲಂಬಿತರಾಗಿದ್ದಾರೆ. ಉದ್ದೂರು, ಮುಕುಂದೂರುಗಳ ಕೃಷಿ ಕುಟುಂಬಗಳಿಗೂ ಈ ಬೇಡಿಕೆ ಅನ್ವಯವಾದರೂ ಈ ಅಗತ್ಯಗಳು ಅಲ್ಲಿನ ಜಮೀನುಗಳಲ್ಲಿರುವ ಮರಗಳಿಂದ ಅಥವಾ ರಸ್ತೆಬದಿಯಲ್ಲಿ ಕಡಿದ ಮರಗಳಿಂದ ಪೂರೈಕೆಯಾಗುತ್ತವೆ. ಉದ್ದೂರಿನ ಹಾಗೂ ಮುಕುಂದೂರಿನ ದೊಡ್ಡ ರೈತರಲ್ಲಿ ಅನುಕ್ರಮವಾಗಿ 8 ಮತ್ತು 5ಜನ ಮಾತ್ರ ಮರಮಟ್ಟುಗಳ ಬೇಡಿಕೆಯನ್ನು ಹಣ ಕೊಟ್ಟು ಕೊಂಡ ಮರಗಳಿಂದ ಪೂರೈಸಿಕೊಳ್ಳುತ್ತೇವೆಂದು ಸಂದರ್ಶನದ ಸಮಯದಲ್ಲಿ ಹೇಳಿದ್ದಾರೆ.

ಮರಡವಳ್ಳಿ ಮತ್ತು ಹನಿಯಾಗಳಲ್ಲಿನ ಕೃಷಿಕರು ಅಡಿಕೆ ತೋಟಗಳಿಗೆ ಸೊಪ್ಪನ್ನು ಬಳಸುತ್ತಾರೆ. ಒಂದು ಎಕರೆಗೆ ವರ್ಷಕ್ಕೆ 1000 ಹೊರೆಯಂತೆ (ಪ್ರತಿ ಹೊರೆ 15 ಕಿ.ಗ್ರಾಂ) ಮರಡವಳ್ಳಿ ಮತ್ತು ಹನಿಯಾಗಳ ವಾರ್ಷಿಕ ಸೊಪ್ಪಿನ ಅಗತ್ಯ 5321 ಹಾಗೂ 1640 ಮೆ.ಟನ್‌ಗಳು. ಇದು ಸೊಪ್ಪಿನ ಬೆಟ್ಟಗಳಿಂದ ಪೂರೈಕೆಯಾಗಬೇಕು.

ಜಾನುವಾರುಗಳು ಮತ್ತು ಮೇವಿನ ಮೂಲ

ಕೃಷಿಯೇ ಮುಖ್ಯ ಕಸುಬಾಗಿರುವ ಗ್ರಾಮೀಣ ಕುಟುಂಬಗಳಲ್ಲಿ ಜಾನುವಾರುಗಳಿರುವುದು ಸಹಜ. ಜಾನುವಾರುಗಳ ಸಂಖ್ಯೆ ಹೆಚ್ಚಾದಷ್ಟೂ ಅವುಗಳ ಮೇವು ಸಮಸ್ಯೆಯಾಗಿ ಅರಣ್ಯದ ಮೇಲಿನ ಅವಲಂಬನೆಯೂ ಹೆಚ್ಚಾಗುತ್ತದೆ. ಗೋಮಾಳ, ಹುಲ್ಲು ಬನ್ನಿ, ದನಮುಫತ್ತುಗಳಂತಹ ಊರೊಟ್ಟಿನ ಭೂಮಿಗಳು ಕಣ್ಮರೆಯಾದಂತೆ ಸಮಸ್ಯೆ ಮತ್ತಷ್ಟು ತೀವ್ರವಾಗುತ್ತದೆ. ಐದು ಹಳ್ಳಿಗಳಲ್ಲಿ ಜಾನುವಾರುಗಳ ಸಂಖ್ಯೆ ಮತ್ತು ಮೇವಿನ ಮೂಲವನ್ನು ಕೋಷ್ಟಕಗಳಲ್ಲಿ (4 ಮತ್ತು 5)

ತೋರಿಸಲಾಗಿದೆ. ಕುಮಾರನಹಳ್ಳಿಯ ಸುತ್ತಮುತ್ತಲಿರುವುದು ಕುರುಚಲು ಕಾಡು. ಮಳೆಯ ಪ್ರಮಾಣವೂ ಕಡಿಮೆ. ಮಳೆಗಾಲದ ಸಮಯದಲ್ಲಿ ಎರಡು ಹಳ್ಳಿಗಳ ಸುತ್ತಮುತ್ತ ಸ್ವಲ್ಪ ಹುಲ್ಲು ದೊರೆಯುತ್ತದೆ. ಆದರೆ ಕುಮಾರನಹಳ್ಳಿಯ 64 ಕೃಷಿ ಆಧಾರಿತ ಕುಟುಂಬಗಳಲ್ಲಿ 42(ಶೇಕಡಾ 65) ಕುಟುಂಬಗಳು ತಮ್ಮ ಹೊಲಗಳಿಂದಲೇ ತಮ್ಮ ಜಾನುವಾರುಗಳ ಮೇವಿನ ಬೇಡಿಕೆಯನ್ನು ಪೂರೈಸಿಕೊಳ್ಳುತ್ತಾರೆ. ರಾಗಿಹುಲ್ಲು, ಕಬ್ಬಿನ ತೊಂಡೆ, ಮೆಕ್ಕೆ ಜೋಳದ ಸಪ್ಪೆ, ರವದಿ, ತೊಗರಿ, ಹುರುಳಿ, ಶೇಂಗಾ ಬಳ್ಳಿ ಮುಂತಾದವುಗಳು ಈ ಕುಟುಂಬದ ಅಗತ್ಯಗಳನ್ನು ಪೂರೈಸುತ್ತವೆ. ಶೇಕಡಾ 7ರಷ್ಟು ಕೃಷಿ ಕುಟುಂಬಗಳು ಅರಣ್ಯದಿಂದ ಮೇವನ್ನು ತಂದರೆ, ಶೇಕಡಾ 7ರಷ್ಟು ಕುಟುಂಬಗಳು ಎರಡು ಮೂಲಗಳಿಂದಲೂ-ಹೊಲ ಮತ್ತು ಅರಣ್ಯ-ಮೇವನ್ನು ತರುತ್ತವೆ. ಮರಡವಳ್ಳಿಯಲ್ಲಿ ಮಲೆನಾಡಿನ ಗಿಡ್ಡ ತಳಿಗಳದ್ದೇ ಪ್ರಾಬಲ್ಯ. ಬಯಲು ಸೀಮೆಗೆ ಹೋಲಿಸಿದರೆ ಇಲ್ಲಿ ಜಾನುವಾರುಗಳ ಸಂಖ್ಯೆ ಅಧಿಕವೂ ಹೌದು. ಮರಡವಳ್ಳಿಯಲ್ಲಿ ಅರಣ್ಯದಿಂದ ಮೇವು ತರುವ ಕುಟುಂಬಗಳ ಪ್ರಮಾಣ ಶೇಕಡಾ 36. ಕುಮಾರನಹಳ್ಳಿಗೆ ಹೋಲಿಸಿದರೆ ಕೃಷಿ ಉಳಿಕೆ ವಸ್ತುಗಳಲ್ಲಿ, ಮರಡವಳ್ಳಿಯಲ್ಲಿ ಹೆಚ್ಚಿನ ಪ್ರಮಾಣವೂ ಇಲ್ಲ, ವೈವಿಧ್ಯವೂ ಇಲ್ಲ. ಹೀಗಾಗಿ ಅರಣ್ಯದಿಂದ ಮೇವು ತರುವವರ ಪ್ರಮಾಣ ಹೆಚ್ಚಾಗಿದೆ. ಅರಣ್ಯ ಹಾಗೂ ಹೊಲಗಳೆರಡರಿಂದಲೂ ಮೇವು ತರುವ ಕೃಷಿ ಕುಟುಂಬಗಳು ಶೇಕಡಾ 32 ರಷ್ಟಿದ್ದರೂ ಇದರಲ್ಲಿ ಅರಣ್ಯದಿಂದ ತರುವ ಮೇವಿನ ಪ್ರಮಾಣ ಜಾಸ್ತಿಯಾಗಿದ್ದು, ಹೊಲದಿಂದ ಬರುವ ಮೇವಿನ ಪ್ರಮಾಣ ಕಡಿಮೆಯಾಗಿರುವುದು ಕ್ಷೇತ್ರ ಕಾರ್ಯಗಳಿಂದ ತಿಳಿದುಬರುತ್ತದೆ. ಮರಡವಳ್ಳಿಯಲ್ಲಿ 48 ಭೂರಹಿತ ಕುಟುಂಬಗಳಿದ್ದರೂ ಇದರಲ್ಲಿ ಮೇವು ತರದಿರುವ ಕುಟುಂಬಗಳು 2 ಮಾತ್ರ. ಮನೆಯಲ್ಲಿ ಜಾನುವಾರು ಇಲ್ಲದಿರುವ ಕುಟುಂಬಗಳೂ ಆರಣ್ಯದಿಂದ ತಲೆ ಹೊರೆ ಮೇವು ತಂದು ಮಾರುವ ಪದ್ಧತಿ ಮರಡವಳ್ಳಿ ಮತ್ತು ಹನಿಯಾಗಳಲ್ಲಿವೆ. ಈ ರೀತಿ ಮಾರಾಟಕ್ಕೆ ತರುವ ಮೇವಿನ ಬಹುಭಾಗ ಮರಡವಳ್ಳಿ ಮತ್ತು ಹನಿಯಾಗಳಲ್ಲಿ ಸ್ಥಳೀಯ ಅರಣ್ಯಗಳಿಂದಲೇ ಬಂದರೆ, ಅರಣ್ಯವಿಲ್ಲದ ಉದ್ದೂರು, ಮುಕುಂದೂರುಗಳಲ್ಲಿ ಮಾತ್ರ ಸಾಕಷ್ಟು ದೂರದಿಂದ ಬರುತ್ತವೆ. ಈ ಹಳ್ಳಿಗಳಲ್ಲಿ ಹೊಲದಿಂದ ಮೇವು ತರುವ ಕುಟುಂಬಗಳ ಶೇಕಡಾವಾರು ಪ್ರಮಾಣದಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ.

ಅಡುಗೆಯ ಇಂಧನ

ಅರಣ್ಯಗಳಿಂದ ದೊರೆಯುವ ಜೀವದ್ರವ್ಯಗಳಲ್ಲಿ ಅತಿಹೆಚ್ಚಿನ ಬೇಡಿಕೆಯಿರುವುದು ಉರುವಲಿಗೆ. ಅಡುಗೆಗೆ ಇಂಧನವಾಗಿ ಉರುವಲು ಸೌದೆಯನ್ನು ಬಳಸುವ ಕುಟುಂಬಗಳ ಸಂಖ್ಯೆ ಹೆಚ್ಚಾದಷ್ಟೂ ಅರಣ್ಯದ ಮೇಲಿನ ಅವಲಂಬನೆ, ಅರಣ್ಯಗಳ ಮೇಲಿನ ಒತ್ತಡವೂ ಹೆಚ್ಚಾಗುತ್ತದೆ. ಕೃಷಿ ಆಧಾರಿತ ಕುಟುಂಬಗಳು ಕೃಷಿ ತ್ಯಾಜ್ಯವಸ್ತುಗಳನ್ನೂ ಇಂಧನವನ್ನಾಗಿ ಬಳಸುತ್ತವೆ. ಸುಧಾರಿತ ಒಲೆ(ಅಸ್ತ್ರ ಒಲೆ), ಗೋಬರ್ ಅನಿಲಗಳನ್ನು (ಜೈವಿಕ ಅನಿಲ) ಬಳಸುವ ಕುಟುಂಬಗಳು ಹೆಚ್ಚಾದಷ್ಟೂ

ಉರುವಲಿಗಾಗಿ ಅರಣ್ಯದ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಅಡುಗೆ ಅನಿಲವನ್ನು (ಕುಕಿಂಗ್ ಗ್ಯಾಸ್) ಇಂಧನವನ್ನಾಗಿ ಬಳಸುವ ಕುಟುಂಬಗಳು ಅಡುಗೆಗಾಗಿ ಅರಣ್ಯ ಮೂಲದ ಇಂಧನದಿಂದ ಮುಕ್ತವಾಗುತ್ತವೆ.

ಕುಮಾರನಹಳ್ಳಿಯಲ್ಲಿ 25 ಕುಟುಂಗಳು (ಶೇ.22.7) ಉರುವಲಿಗಾಗಿ ಸಂಪೂರ್ಣವಾಗಿ ಅರಣ್ಯವನ್ನೇ ಅವಲಂಬಿಸಿವೆ. ಪ್ರತಿಯೊಂದು ಕುಟುಂಬವೂ ಎರಡು ದಿನಗಳಿಗೊಮ್ಮೆ ಒಂದು ತಲೆ ಹೊರೆ ಸೌದೆಯನ್ನು (15 ಕಿ.ಗ್ರಾಂ) ಅರಣ್ಯದಿಂದ ತಪ್ಪದೆ ತರುತ್ತವೆ. ಮರಡವಳ್ಳಿ ಮತ್ತು ಹನಿಯಾಗಳಲ್ಲೂ ಸರಿಸುಮಾರು ಇದೇ ಪರಿಸ್ಥಿತಿಯಿದ್ದು, ಉರುವಲಿಗಾಗಿ ಸಂಪೂರ್ಣವಾಗಿ ಅರಣ್ಯದ ಮೇಲೆಯೇ ಅವಲಂಬಿಸಿರುವ ಕುಟುಂಬಗಳ ಪ್ರಮಾಣ ಅನುಕ್ರಮವಾಗಿ ಶೇಕಡಾ 21.6 ಮತ್ತು 25.3ರಷ್ಟಿದೆ. ಆದರೆ ಮರಡವಳ್ಳಿ ಮತ್ತು ಹನಿಯಾಗಳಲ್ಲಿ ಭೂರಹಿತ ಕೃಷಿ ಕಾರ್ಮಿಕರು ತಾವು ಕೆಲಸ ಮಾಡುವ ತೋಟಗಳಿಂದಲೂ ಉರುವಲನ್ನು ತರುತ್ತಾರೆ. ಕುಮಾರನಹಳ್ಳಿ, ಮರಡವಳ್ಳಿ ಮತ್ತು ಹನಿಯಾಗಳಲ್ಲಿ ಕ್ರಮವಾಗಿ 59 (53.6%), 81(36.5%) ಮತ್ತು 9(13.4%) ಕುಟುಂಬಗಳು ಅರಣ್ಯದಿಂದ ತಂದ ಉರುವಲಿನೊಡನೆ ಕೃಷಿ ತ್ಯಾಜ್ಯ ವಸ್ತುಗಳನ್ನೂ ಇಂಧನವನ್ನಾಗಿ ಬಳಸುತ್ತವೆ. ಭೂಹಿಡುವಳಿ ಹೆಚ್ಚಾದಷ್ಟೂ ಕೃಷಿ ತ್ಯಾಜ್ಯ ವಸ್ತುಗಳನ್ನು ಇಂಧನವನ್ನಾಗಿ ಬಳಸುವುದೂ ಹೆಚ್ಚಿ ಅರಣ್ಯದ ಮೇಲಿನ ಅವಲಂಬನೆ ಆ ಮಟ್ಟಿಗೆ ಕಡಿಮೆಯಾಗುತ್ತದೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ 26(23.6%) ಮತ್ತು 53(23.8%) ಕುಟುಂಬಗಳಲ್ಲಿ ಅಸ್ತ್ರ ಒಲೆಯನ್ನು ಬಳಸುತ್ತಿದ್ದರೆ, ಉದ್ದೂರಿನಲ್ಲಿ ಕೇವಲ 7(2.8%) ಅಸ್ತ್ರ ಒಲೆಗಳಿವೆ. ಕುಮಾರನಹಳ್ಳಿಯಲ್ಲಿ ಜೈವಿಕ ಅನಿಲವನ್ನು ಬಳಸುವ ಕುಟುಂಬವೇ ಇಲ್ಲ. ಮರಡವಳ್ಳಿ, ಹನಿಯಾಗಳಲ್ಲಿ 40(18%) ಮತ್ತು 30(44.8%) ಕುಟುಂಬಗಳು ಜೈವಿಕ ಅನಿಲವನ್ನು ಬಳಸುತ್ತವೆ. ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಮಾತ್ರ ಅಡುಗೆ ಅನಿಲವನ್ನು ಇಂಧನವನ್ನಾಗಿ ಬಳಸುವ ಕುಟುಂಬಗಳಿವೆ(ಕೋಷ್ಟಕ 6).

ಕಿರು ಅರಣ್ಯ ಉತ್ಪನ್ನಗಳು

ಕಿರು ಅರಣ್ಯ ಉತ್ಪನ್ನಗಳು ಅರಣ್ಯದಿಂದ ದೊರೆಯುವ ಮುಖ್ಯ ಸಂಪನ್ಮೂಲಗಳಲ್ಲೊಂದು. ಅರಣ್ಯದಿಂದ ಸಂಗ್ರಹವಾಗುವ ಉತ್ಪನ್ನಗಳು ಸ್ವಂತ ಬಳಕೆಗೂ ಆಗಿರಬಹುದು, ಮಾರಾಟಕ್ಕೂ ಆಗಿರಬಹುದು. ಈ ಉತ್ಪನ್ನಗಳು ಸಮುದಾಯದ ವಿವಿಧ ಬೇಡಿಕೆಗಳನ್ನು ಪೂರೈಸುವುದಲ್ಲದೇ ದುರ್ಬಲವರ್ಗದ ಕುಟುಂಬಗಳ ವರಮಾನವನ್ನು ಹೆಚ್ಚಿಸಲೂ ನೆರವಾಗುತ್ತವೆ. ಕುಮಾರನಹಳ್ಳಿಯ ಜನ ಕವಳಿ. ನೇರಳೆ. ಬಿಕ್ಕಿ. ನಕ್ರಿ ಮುಂತಾದ ಹಣ್ಣುಗಳೊಡನೆ ಬೇವಿನ ಬೀಜ, ಬತ್ತಿ ಬೀಜ(ಹೊಂಗೆ), ಪುಂಡಿನಾರು, ಅಂಟುಗಳನ್ನು ಸಂಗ್ರಹಿಸುತ್ತಾರೆ. ಬೀಡಿ ಎಲೆ ಬಹಳ ಮುಖ್ಯವಾದ ಅರಣ್ಯ ಉತ್ಪನ್ನ ಎರಡನೆಯ ಸ್ಥಾನ ಅಂಟಿಗೆ. ಡಿಸೆಂಬರ್, ಜನವರಿಗಳಲ್ಲಿ ಬಾಧೆ ಹುಲ್ಲೂ ಸಂಗ್ರಹವಾಗುತ್ತವೆ.

ಕುಮಾರನಹಳ್ಳಿಯಲ್ಲಿ ಎಲ್ಲ 25 ಭೂರಹಿತ ಕುಟುಂಬಗಳೂ ಸೇರಿದಂತೆ ಹಳ್ಳಿಯ ಒಟ್ಟು 52(47.2%) ಕುಟುಂಬಗಳು ಕಿರು ಅರಣ್ಯ ಉತ್ಪನ್ನಗಳಿಗಾಗಿ ಅರಣ್ಯಗಳ ಮೇಲೆ ಅವಲಂಬಿತವಾಗಿದೆ. ಮರಡವಳ್ಳಿಯಲ್ಲಿ ಅರಣ್ಯದಿಂದ ದೊರೆಯುವ ಕಿರು ಅರಣ್ಯ ಉತ್ಪನ್ನಗಳ ದೊಡ್ಡಪಟ್ಟಿಯೇ ಇದ್ದರೂ ಮಾರಾಟದ ದೃಷ್ಟಿಯಿಂದ ಮುಖ್ಯವಾದುದು ದಾಲ್ಚಿನ್ನಿ, ಸೀಗೆ ಮತ್ತು ಅಂಟುವಾಳ. ಈ ಮೂರೂ ಒಟ್ಟಿಗೆ ಸೇರಿ ಒಟ್ಟು 50 ಕ್ವಿಂಟಾಲುಗಳಷ್ಟು ಉತ್ಪನ್ನ ದೊರೆತು, ಅದರಲ್ಲಿ 2 ಕ್ವಿಂಟಾಲ್ ಮಾತ್ರ ಸ್ಥಳೀಯವಾಗಿ ಬಳಕೆಯಾಗಿ 48 ಕಿಂಟ್ವಾಲ್‌ಗಳು ಹೊರಗೆ ಮಾರಾಟಕ್ಕೆ ಹೋಗುತ್ತದೆ. ಕ್ಷೇತ್ರಾಧ್ಯಯನಗಳಿಂದ ತಿಳಿದುಬರುತ್ತದೆ. ಮರಡವಳ್ಳಿ ಮತ್ತು ಹನಿಯಾಗಳಲ್ಲಿ ಒಟ್ಟು 51(23%) ಮತ್ತು 15(22%) ಕುಟುಂಬಗಳು ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತವೆ. ಉದ್ದೂರು ಮತ್ತು ಮುಕುಂದೂರುಗಳಲ್ಲಿ ಈ ಪ್ರಶ್ನೆ ಇರುವುದೇ ಇಲ್ಲ. ಭೂಹಿಡುವಳಿಯ ಪ್ರಮಾಣ ಹೆಚ್ಚಾದಂತೆ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹದಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ ಕಡಿಮೆಯಾಗುವುದು ಕಂಡುಬಂದಿದೆ.

ವಾರ್ಷಿಕ ಬೇಡಿಕೆ

ಕ್ಷೇತ್ರಕಾರ್ಯದಿಂದ ದೊರೆತ ಅಂಕಿ-ಅಂಶಗಳು ಮತ್ತು ಐದು ಹಳ್ಳಿಗಳಲ್ಲಿ ನಡೆದಿರುವ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಿಂದ ಪಡೆದಿರುವ ಮಾಹಿತಿಗಳನ್ನು ಬಳಸಿಕೊಂಡು ಕ್ಷೇತ್ರಕಾರ್ಯದ ಹಳ್ಳಿಗಳ ಅರಣ್ಯಾಧಾರಿತ ಜೀವದ್ರವ್ಯಗಳ ವಾರ್ಷಿಕ ಬೇಡಿಕೆಯನ್ನು ಅಂದಾಜು ಮಾಡಲಾಗಿದೆ(ಕೋಷ್ಟಕ 8). ಈ ಲೆಕ್ಕಾಚಾರದಲ್ಲಿ ಹೊಲದಿಂದ ಕುಟುಂಬಗಳು ಪಡೆಯುವ ಜೀವದ್ರವ್ಯವನ್ನು ಕೈಬಿಡಲಾಗಿದೆ. ಈ ಅಂದಾಜಿನಿಂದ ಜನಸಂಖ್ಯೆ, ಕೃಷಿಕರ ಸಂಖ್ಯೆ, ಕಚ್ಚಾಮನೆಗಳು, ಜಾನುವಾರುಗಳು, ವಿವಿಧ ಮೂಲದ ಇಂಧನಗಳು, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಕಾರರ ಸಂಖ್ಯೆಗಳಿಗನುಸಾರವಾಗಿ, ಕುಮಾರನಹಳ್ಳಿ, ಮರಡವಳ್ಳಿ ಮತ್ತು ಹನಿಯಾಗಳಲ್ಲಿ ಅರಣ್ಯಗಳಿಂದ ಪಡೆಯುವ ಜೀವದ್ರವ್ಯಗಳ ವಾರ್ಷಿಕ ಪ್ರಮಾಣದಲ್ಲಿ ಸಹಜ ವ್ಯತ್ಯಾಸಗಳಿದ್ದರೂ, ಎಲ್ಲ ಹಳ್ಳಿಗಳಲ್ಲಿ ಗಣನೀಯ ಪ್ರಮಾಣದಲ್ಲಿ ಅವಲಂಬನೆಯಿರುವುದು ಕಂಡುಬರುತ್ತದೆ.

ಅರಣ್ಯ ಸಂಪನ್ಮೂಲಗಳ ಸಂರಕ್ಷಣೆ, ನಿರ್ವಹಣೆಗಳಿಗೆ, ಸ್ಥಳೀಯ ಸಮುದಾಯವನ್ನು ಸಂಘಟಿಸಿ ಕಾರ್ಯಪ್ರವೃತ್ತರನ್ನಾಗಿ ಮಾಡುವುದರಲ್ಲಿ ಅರಣ್ಯದ ಮೇಲಿನ ಅವಲಂಬನೆ ಅತ್ಯಂತ ಮುಖ್ಯ ಅಂಶವೆಂಬುದು ಸಂಶೋಧಕರಲ್ಲಿ ಸಾಮಾನ್ಯವಾಗಿ ಕಂಡುಬರುವ ಒಮ್ಮತದ ಅಭಿಪ್ರಾಯ. "ಈ ಅವಲಂಬನೆಯ ಜೊತೆಗೆ ಅರಣ್ಯ ಸಂಪನ್ಮೂಲಗಳಲ್ಲಿ ಕೊರತೆ ಕಂಡುಬಂದಾಗ, ಸಂಪನ್ಮೂಲಗಳು ತೀವ್ರಗತಿಯಲ್ಲಿ ಬರಿದಾಗುತ್ತಿದೆಯೆಂಬ ಭೀತಿ ಕಾಳಜಿ ಕಳವಳಗಳು ತಲೆದೋರಿದಾಗ ಅದು ಸ್ಥಳೀಯ ಸಮುದಾಯದ ಸಂಘಟನೆಗೆ, ಸಂಪನ್ಮೂಲಗಳ ಸಂರಕ್ಷಣೆ, ನಿರ್ವಹಣೆಗಳಿಗೆ ಪ್ರಚೋದನೆ

ನೀಡುತ್ತದೆ".[3] ಕ್ಷೇತ್ರಾಧ್ಯಯನದಲ್ಲಿ ಕಂಡುಬಂದಂತೆ ಕುಮಾರನಹಳ್ಳಿಯಲ್ಲಿ ಸ್ವಲ್ಪಮಟ್ಟಿಗೆ ಈ ಪರಿಸ್ಥಿತಿಯಿದೆ. ಹತ್ತುವರ್ಷಗಳ ಹಿಂದೆ ಹಳ್ಳಿಯ ಅಂಚಿನಲ್ಲಿಯೇ ದೊರೆಯುತ್ತಿದ್ದ ತಲೆ ಹೊರೆ ಉರುವಲಿಗಾಗಿ ಇಂದು ಜತ್ತಿನಕಟ್ಟೆ, ಅಡವಿಮಲ್ಲಾಪುರ ಅರಣ್ಯಗಳಲ್ಲಿ ಆರೇಳು ಕಿ.ಮೀ. ನಡೆಯ ಬೇಕಾಗಿದೆ. ಬೀಡಿ ಎಲೆಯ ಸಂಗ್ರಹಣೆಯಲ್ಲಿಯೂ ಪರಿಸ್ಥಿತಿ ಮತ್ತಷ್ಟು ತೀವ್ರವಾಗಿ ಪ್ರತಿವರ್ಷವೂ ಸಂಗ್ರಹಕಾರರು ಹಿಂದಿನ ವರ್ಷಕ್ಕಿಂತ ಹೆಚ್ಚು ದೂರ ನಡೆಯಬೇಕಾಗಿ ಬಂದಿದೆ. ಇತರರಿಗಿಂತ ಹೆಚ್ಚಾಗಿ ಈ ಸಮಸ್ಯೆಯ ಬಿಸಿ ತಟ್ಟಿರುವುದು ಭೂರಹಿತರು ಮತ್ತು ಅತಿಸಣ್ಣ ರೈತರಿಗೆ. ಮರಡವಳ್ಳಿ ಮತ್ತು ಹನಿಯಾಗಳಲ್ಲಿ ಅರಣ್ಯದ ಮೇಲೆ ಗಣನೀಯ ಪ್ರಮಾಣದಲ್ಲಿ ಅವಲಂಬನೆಯಿದ್ದರೂ, ಸಂಪನ್ಮೂಲ ಕ್ಷೀಣಿಸುತ್ತಿದೆಯೆಂಬ ಕಾಳಜಿ, ಕಳವಳಗಳು ಕಾಣಿಸುವುದಿಲ್ಲ. ಈ ಹಳ್ಳಿಗಳ ವ್ಯಾಪ್ತಿಯಲ್ಲಿ ಇನ್ನೂ ಸಾಕಷ್ಟು ದಟ್ಟವಾಗಿರುವ ಅರಣ್ಯಗಳಿರುವುದು ಇದಕ್ಕೆ ಕಾರಣವಿರಬಹುದು. ಉದ್ದೂರು, ಮುಕುಂದೂರುಗಳಲ್ಲಿ ಅರಣ್ಯಗಳೇ ಇಲ್ಲದಿರುವುದರಿಂದ ಅರಣ್ಯದ ಮೇಲಿನ ಅವಲಂಬನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲವೆನ್ನುವುದು ನಿಜವಾದರೂ, ಉದ್ದೂರಿನಲ್ಲಿ 12 ಎಕರೆ ಹಾಗೂ ಮುಕುಂದೂರಿನಲ್ಲಿ 10 ಎಕರೆ ಗೋಮಾಳಗಳ ಮೇಲೆ ಈ ಎರಡು ಹಳ್ಳಿಗಳ ಭೂರಹಿತ ಕುಟುಂಬಗಳ ಅವಲಂಬಿಸಿದ್ದುದು ತಿಳಿದುಬಂದಿದೆ.

ಇಲ್ಲಿಯವರೆಗೂ ನಾವು ಪರಿಶೀಲಿಸಿರುವ ಅರಣ್ಯದ ಮೇಲಿನ ಸ್ಥಳೀಯ ಸಮುದಾಯದ ಅವಲಂಬನೆಯ ಹಿನ್ನೆಲೆಯಲ್ಲಿ ಈ ಸಮುದಾಯಗಳು ಎಷ್ಟರಮಟ್ಟಿಗೆ ಸಂಘಟಿತಗೊಂಡಿವೆ, ಎಷ್ಟರ ಮಟ್ಟಿಗೆ ಸಂರಕ್ಷಣೆ, ನಿರ್ವಹಣೆಯ ಕೆಲಸಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿವೆಯೆಂಬುದನ್ನು ಜಂಟೀ ಅರಣ್ಯ ಯೋಜನೆಯ ಸಂದರ್ಭದಲ್ಲಿ ನಾವು ಮುಂದಿನ ಭಾಗದಲ್ಲಿ ಗಮನಿಸಲಿದ್ದೇವೆ.

ಸಹಭಾಗಿತ್ವದ ಅವಕಾಶಗಳು

ಜಂಟೀ ಅರಣ್ಯ ಯೋಜನೆ ಸಮುದಾಯದ ಸಹಭಾಗಿತ್ವಕ್ಕೆ ಅವಕಾಶವನ್ನೊದಗಿಸುವ ಪರಿಕಲ್ಪನೆಯ ಮೇಲೆ ಆಧಾರಿತವಾಗಿದೆ. ಯೋಜನೆಯ ಎಲ್ಲ ಹಂತಗಳಲ್ಲಿ ಯೋಜನೆಯೊಂದರ ರೂಪು-ರೇಷೆಗಳ ತಯಾರಿ, ನೀತಿ-ನಿಲುವುಗಳ ನಿಷ್ಕರ್ಷೆ, ಯೋಜನೆಯ ಅನುಷ್ಠಾನ, ಮೌಲ್ಯಮಾಪನ ಮುಂತಾದವುಗಳಲ್ಲಿ ಭಾಗವಹಿಸುವ ಮತ್ತು ನಿರ್ಧಾರ ಕೈಗೊಳ್ಳುವ ಅವಕಾಶಗಳು ತಾತ್ವಿಕವಾಗಿಯಾದರೂ ಸಮುದಾಯಕ್ಕಿದೆ. ಆದರೆ ಜನರ ಸಹಭಾಗಿತ್ವದ ಮೇಲೆ ಆಧಾರಿತವಾಗಿರುವ ಈ ಯೋಜನೆಯನ್ನು ರೂಪಿಸುವ ಹಂತದಲ್ಲಿ ಸಮುದಾಯಕ್ಕಾಗಲೀ, ಸರ್ಕಾರೇತರ ಸಂಸ್ಥೆಗಳಿಗಾಗಲೀ ಭಾಗವಹಿಸಲು ಯಾವುದೇ ಅವಕಾಶಗಳಿರಲಿಲ್ಲವೆಂಬ ಕಟು ಟೀಕೆಯನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಯೋಜನೆಯ ಅನುಷ್ಠಾನದ ಹಂತದಿಂದ ಮಾತ್ರ ಭಾಗವಹಿಸುವಿಕೆಗೆ ಅವಕಾಶಗಳು ತೆರೆದುಕೊಳ್ಳುತ್ತವೆ. ಈ ಅವಕಾಶಗಳ ಸ್ವರೂಪ ಮತ್ತು ಅವುಗಳ ಪ್ರಾಮಾಣಿಕತೆಯನ್ನು ಪರಿಶೀಲಿಸಬೇಕಾಗುತ್ತದೆ.

ಜಂಟೀ ಅರಣ್ಯ ಯೋಜನೆಯ ಮುಖ್ಯ ಕಾರ್ಯಘಟಕ ಗ್ರಾಮ ಅರಣ್ಯ ಸಮಿತಿ. ಈ ಗ್ರಾಮ ಅರಣ್ಯ ಸಮಿತಿ ರಚನೆಯ ಪ್ರಕ್ರಿಯೆಯ ಪ್ರಾರಂಭದಿಂದಲೇ ಭಾಗವಹಿಸುವಿಕೆಗೆ ಅವಕಾಶಗಳು ತೆರೆದುಕೊಳ್ಳುತ್ತವೆ. ಜಂಟೀ ಯೋಜನೆಯ ಬಗ್ಗೆ ತಿಳಿದವರು, ಆಸಕ್ತರು, ಸರ್ಕಾರೇತರ ಸಂಸ್ಥೆಗಳು ಹಳ್ಳಿಯ ಹತ್ತಾರು ಜನರಲ್ಲಿ ಈ ಬಗ್ಗೆ ಚರ್ಚಿಸಿ, ಸ್ಥಳೀಯ ಅಧಿಕಾರಿಗಳಿಂದ ಹೆಚ್ಚಿನ ಮಾಹಿತಿ ಪಡೆದು ಎಲ್ಲರೊಡನೆ ಹಂಚಿಕೊಳ್ಳುತ್ತಾರೆ. ಈ ಪ್ರಕ್ರಿಯೆಯನ್ನು ಅರಣ್ಯಾಧಿಕಾರಿಗಳೂ ಪ್ರಾರಂಭಿಸಬಹುದು. ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ ಕೆಲವು ಸ್ಥಳೀಯರು ಪ್ರವರ್ತಕರೆನಿಸಿಕೊಳ್ಳುತ್ತಾರೆ. ಈ ಪ್ರವರ್ತಕರ ಸಮಿತಿ ಇಲಾಖೆಯ ಅಧಿಕಾರಿಗಳೊಂದಿಗೆ ಮಾತುಕತೆ ಪ್ರಾರಂಭಿಸಿ ಗ್ರಾಮ ಅರಣ್ಯ ಸಮಿತಿ ರಚನೆಗೆ ನಾಂದಿ ಹಾಡುತ್ತದೆ. ಮುಂದೆ ಅರಣ್ಯ ನಿರ್ವಹಣಾ ಸಮಿತಿಯ ರಚನೆ ಆಗುವವರೆಗೂ ಈ ತಾತ್ಕಾಲಿಕ ಸಮಿತಿಯೇ ಜವಾಬ್ದಾರಿ ಹೊರುತ್ತದೆ.

ಗ್ರಾಮ ಅರಣ್ಯ ಸಮಿತಿ ವಿಧ್ಯುಕ್ತವಾಗಿ ರೂಪುಗೊಳ್ಳುವ ಮೊದಲೇ ಆ ಹಳ್ಳಿಯಲ್ಲಿನ ಸಣ್ಣ ಗುಂಪೊಂದು-ವಲಯ ಅರಣ್ಯಾಧಿಕಾರಿ, ಪ್ರವರ್ತಕರು, ಇನ್ನಿತರ ಆಸಕ್ತ ಸ್ಥಳೀಯರು, ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳನ್ನೊಳಗೊಂಡಂತೆ ಗ್ರಾಮ ಅರಣ್ಯ ಸಮಿತಿಯ ಉಪವಿಧಿಯನ್ನು ಸಿದ್ಧಪಡಿಸುವ ಕೆಲಸವನ್ನು ಪ್ರಾರಂಭಿಸುತ್ತದೆ. ಈ ಉಪವಿಧಿಗಳಲ್ಲಿ ಗ್ರಾಮ ಅರಣ್ಯ ಸಮಿತಿ ಹೇಗೆ ಕೆಲಸ ಮಾಡಬೇಕು, ಏನನ್ನು ಸಾಧಿಸಬೇಕು, ಎಂತಹ ನಿಯಮಾವಳಿಗಳನ್ನು ರೂಪಿಸಿ ಜಾರಿಗೆ ತರಬೇಕು ಮುಂತಾದ ವಿಷಯಗಳಿರುತ್ತವೆ. ಈ ಉಪವಿಧಿಯ ಸಮಿತಿ, ಸ್ಥಳೀಯ ಜನರೊಂದಿಗೆ ಸಭೆ ನಡೆಸಿ, ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವುಗಳ ಆಧಾರದ ಮೇಲೆ ಉಪವಿಧಿಗಳನ್ನು ರೂಪಿಸುತ್ತದೆ. ಇದೊಂದು ಮುಖ್ಯವಾದ ಹಂತ. ಸ್ಥಳೀಯ ಸಮುದಾಯಕ್ಕೆ ಇದರಲ್ಲಿ ಭಾಗವಹಿಸಲು ಮುಕ್ತ ಅವಕಾಶಗಳಿವೆ.

ಉಪವಿಧಿಗಳು ಸಿದ್ಧವಾದನಂತರ ಗ್ರಾಮ ಅರಣ್ಯ ಸಮಿತಿಯ ನೋಂದಾವಣೆಗೆ ಪ್ರಕ್ರಿಯೆಗಳು ಪ್ರಾರಂಭವಾಗುತ್ತವೆ. ನೋಂದವಣೆಗೆ ಮುನ್ನ ಗ್ರಾಮ ಅರಣ್ಯ ಸಮಿತಿಗೆ ಸದಸ್ಯರನ್ನು ಮಾಡಿಸುವ ಕೆಲಸ ಮುಗಿದಿರಬೇಕು. ಗ್ರಾಮ ಅರಣ್ಯ ಸಮಿತಿಯಲ್ಲಿ ಊರಿನ ಎಲ್ಲ ಕುಟುಂಬಗಳೂ ಸದಸ್ಯರಾಗ ಬಹುದು. 18ವರ್ಷಕ್ಕೆ ಮೇಲ್ಪಟ್ಟ ವಯಸ್ಕರೊಬ್ಬರು ಕುಟುಂಬದ ಪ್ರತಿನಿಧಿಯಾಗಿ 2.ರೂ.ಗಳನ್ನು ಕೊಟ್ಟು ಅರಣ್ಯ ಸಮಿತಿಯ ಸದಸ್ಯರಾಗಬಹುದು. 1996ರ ತಿದ್ದುಪಡಿಯ ನಂತರ 2.ರೂ.ಗಳ ಶುಲ್ಕದಿಂದ ಗಂಡ-ಹೆಂಡತಿಯರಿಬ್ಬರಿಗೂ ಅರಣ್ಯ ಸಮಿತಿಯ ಸದಸ್ಯತ್ವ ದೊರೆಯುತ್ತದೆ. ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ ಜಂಟೀ ಅರಣ್ಯ ಯೋಜನೆಯಲ್ಲಿ ಭಾಗವಹಿಸಲು ಇರುವ ಅತ್ಯಂತ ಮುಖ್ಯವಾದ, ಕಾನೂನುಬದ್ಧವಾದ ಅವಕಾಶ. ಈ ಸಮಿತಿಯ ಸದಸ್ಯರಲ್ಲದವರಿಗ ಯೋಜನಯ ಫಲಾನುಭವಕ್ಕೆ ಅವಕಾಶವಿಲ್ಲ.

ಗ್ರಾಮ ಅರಣ್ಯ ಸಮಿತಿ ನೋಂದಣಿಯಾದ 30 ದಿನಗಳಲ್ಲಿ ನಿರ್ವಹಣಾ ಸಮಿತಿಯ ರಚನೆಯಾಗ ಬೇಕು. ಗ್ರಾಮ ಅರಣ್ಯ ಸಮಿತಿಯ ಆಶೋತ್ತರಗಳನ್ನು ಪ್ರತಿನಿಧಿಸಿ, ದಿನನಿತ್ಯದ ಕೆಲಸಗಳನ್ನು ನಿರ್ವಹಿಸುವ ಜವಾಬ್ದಾರಿಯಿರುವ ಈ ಸಮಿತಿಯ ಆಯ್ಕೆ ಹೇಗೆ ನಡೆಯಬೇಕೆಂಬುದನ್ನು ಗ್ರಾಮ ಅರಣ್ಯ ಸಮಿತಿಯ ಸದಸ್ಯರು ನಿರ್ಧರಿಸುತ್ತಾರೆ. ಈ ಆಯ್ಕೆ ಸರ್ವಾನುಮತದಿಂದ ಆಗಬಹುದು ಅಥವಾ ಚುನಾವಣೆಯಿಂದಾಗಬಹುದು. ಈ ಪ್ರಕ್ರಿಯೆಯಲ್ಲೂ ಸದಸ್ಯರಿಗೆ ಭಾಗವಹಿಸುವ ಅವಕಾಶಗಳಿವೆ. ನಿರ್ವಹಣಾ ಸಮಿತಿಗೆ ಆಯ್ಕೆಯಾದ ಸದಸ್ಯರಿಗೆ, ಯೋಜನೆಯ ಅನುಷ್ಠಾನದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುವ ಅವಕಾಶಗಳಿವೆ.

ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಮತ್ತು ಅರಣ್ಯ ಸಿಬ್ಬಂದಿ ಜೊತೆಯಾಗಿ ಸೇರಿ, ಸಮಾಲೋಚನೆ ನಡೆಸಿ, ಅರಣ್ಯ ಸಂರಕ್ಷಣೆ ಮತ್ತು ಸ್ಥಳೀಯ ಬೇಡಿಕೆಗಳ ಪೂರೈಕೆಯ ದೃಷ್ಟಿಯಿಂದ ಅರಣ್ಯಾಭಿವೃದ್ಧಿಗೆ ಸಂಬಂಧಿಸಿದಂತೆ 'ಕಿರುಯೋಜನೆ'ಯೊಂದನ್ನು(ಮೈಕ್ರೋ ಪ್ಲಾನ್) ಸಿದ್ಧಪಡಿಸುತ್ತಾರೆ. ಈ ಕಿರು ಯೋಜನೆ ಒಂದು ಸಣ್ಣ ಪ್ರದೇಶದ ಸಂಪನ್ಮೂಲಗಳ ಬಳಕೆ, ನಿಯಂತ್ರಣ, ಅಭಿವೃದ್ಧಿ ಮತ್ತು ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಅದನ್ನು ಬಳಸುವವರ ಸಂಪೂರ್ಣ ಸಹಭಾಗಿತ್ವದಿಂದ ರೂಪಿಸಲಾಗುವ ನೀಲಿನಕ್ಷೆ. ಸಮುದಾಯದ ಸಹಭಾಗಿತ್ವದಿಂದ, ಅದರ ಮಧ್ಯದಿಂದಲೇ ರೂಪುಗೊಳ್ಳುವ ಈ ಪ್ರದೇಶ ನಿರ್ದಿಷ್ಟ ನಿರ್ವಹಣಾ ಯೋಜನೆ ಸ್ಥಳೀಯ ಅಗತ್ಯ, ಸ್ಥಳೀಯ ಆದ್ಯತೆಗಳಿಗೆ ಅನುಸಾರವಾಗಿರುತ್ತದೆ. ಇದು ಸಾಧ್ಯವಾಗಬೇಕಾದರೆ ಜನರ ಸಹಭಾಗಿತ್ವ ಇರಲೇಬೇಕು. ಈ ಕಾರಣದಿಂದಲೇ ಇಡೀ ಜಂಟೀ ಅರಣ್ಯ ಯೋಜನೆಯ ಅನುಷ್ಠಾನದ ಪ್ರಕ್ರಿಯೆಯಲ್ಲಿ ಅತ್ಯಂತ ಮಹತ್ವದ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಗೆ ಸಂಪೂರ್ಣ ಅವಕಾಶವಿರುವ ಹಂತವಾಗುತ್ತದೆ. ಈ ರೀತಿ ಸಿದ್ಧವಾದ ಯೋಜನೆ ಒಂದು ಕರಡು ಮಾತ್ರ. ಇದು ಮತ್ತೊಮ್ಮೆ ನಿರ್ವಹಣಾ ಸಮಿತಿಯಲ್ಲಿ, ಅನಂತರ ಮಹಾಸಭೆಯಲ್ಲಿ ಚರ್ಚಿತವಾಗಿ, ಅನುಮೋದನೆ ಪಡೆದನಂತರ ಅದಕ್ಕೆ ವಿಧ್ಯುಕ್ತ ಸ್ಥಾನ ದೊರೆಯುತ್ತದೆ. ಇದಾದ ನಂತರ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳು ಸೌಹಾರ್ದ ಒಡಂಬಡಿಕೆಗೆ (ಮೆಮೊರ್ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್) ಸಹಿ ಹಾಕುತ್ತವೆ.

ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಗೆ ತಾತ್ವಿಕವಾಗಿ ವಿಪುಲ ಅವಕಾಶಗಳಿವೆ. ಹೊರನೋಟಕ್ಕೆ ಈ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಲ್ಲಿ ಗ್ರಾಮ ಅರಣ್ಯ ಸಮಿತಿಯನ್ನು ಅತ್ಯಂತ ಪ್ರಬಲ ಸ್ಥಳೀಯ ಸಂಘಟನೆಯನ್ನಾಗಿ ಮಾಡಿ ಅರಣ್ಯಾಧಾರಿತ ಸಮುದಾಯದ ಹಿತವನ್ನು ಕಾಪಾಡುವುದು ಸಾಧ್ಯವೆನಿಸುತ್ತದೆ. ಈ ನಿರೀಕ್ಷೆ ಎಷ್ಟರಮಟ್ಟಿಗೆ ಸರಿ, ಭಾಗವಹಿಸುವಿಕೆಗೆ ಇರುವ ಅವಕಾಶಗಳು ಎಷ್ಟರಮಟ್ಟಿಗೆ ಪ್ರಾಮಾಣಿಕ, ಎಷ್ಟರಮಟ್ಟಿಗೆ ಈ ಅವಕಾಶಗಳನ್ನು ಕ್ಷೇತ್ರಾಧ್ಯಯನದ ಹಳ್ಳಿಗಳ ಸ್ಥಳೀಯ ಸಮುದಾಯ

ಬಳಸಿಕೊಂಡಿದೆ, ಹೇಗೆ ಬಳಸಿಕೊಂಡಿದೆ, ಭಾಗವಹಿಸುವಿಕೆಯನ್ನು ಪ್ರಭಾವಿಸುವ ಅಂಶಗಳು ಯಾವುವು ಮುಂತಾದ ಪ್ರಶ್ನೆಗಳಿಗೆ ಈಗ ಉತ್ತರ ಕಂಡುಕೊಳ್ಳಬೇಕಾಗಿದೆ. ಈ ಪ್ರಯತ್ನಕ್ಕೆ ಮೊದಲು ಕ್ಷೇತ್ರಕಾರ್ಯ ಮಾಡಿದ ಐದು ಹಳ್ಳಿಗಳಲ್ಲಿ ಜಂಟೀ ಅರಣ್ಯ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಮೂಲ ವಿವರಗಳ ಕಿರುಪರಿಚಯ ಅಗತ್ಯವಾಗುತ್ತದೆ.

ಜಂಟೀ ಅರಣ್ಯ ಯೋಜನೆ: ಅನುಷ್ಠಾನದ ವಿವರಗಳು

ಕ್ಷೇತ್ರಕಾರ್ಯ ಮಾಡಿದ ಐದು ಹಳ್ಳಿಗಳಲ್ಲಿ ಜಂಟೀ ಅರಣ್ಯ ಯೋಜನೆ ಪ್ರಾರಂಭವಾದ ರೀತಿ, ಗ್ರಾಮ ಅರಣ್ಯ ಸಮಿತಿ ಮತ್ತು ನಿರ್ವಹಣಾ ಸಮಿತಿಗಳ ಮೂಲಕವಾಗಿ ಯೋಜನೆಯಡಿಯಲ್ಲಿ ನಡೆದಿರುವ ಕೆಲಸಗಳ ಮೂಲಭೂತ ವಿವರಗಳ ಸ್ಥೂಲ ಚಿತ್ರವನ್ನು ಈ ಭಾಗದಲ್ಲಿ ಕೊಡಲಾಗಿದೆ. ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ವಿಶ್ಲೇಷಿಸಲು ಈ ತಿಳಿವಳಿಕೆ ಅಗತ್ಯವಾಗಿರುವುದರಿಂದ ಈ ವಿವರಗಳು ನಮಗೆ ಮುಖ್ಯವಾಗುತ್ತದೆ. ಕ್ಷೇತ್ರಾಧ್ಯಯನದ ಹಳ್ಳಿಗಳಲ್ಲಿ ಜಂಟೀ ಅರಣ್ಯ ಯೋಜನೆಯ ರೂಪಚಿತ್ರವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಪ್ರಶ್ನಾವಳಿಯ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಇಲ್ಲಿ ಬಳಸಲಾಗಿದೆ.

ಕುಮಾರನಹಳ್ಳಿ

ಕುಮಾರನಹಳ್ಳಿಯ ಸರ್ವ ಸಮಸ್ತ ಚಟುವಟಿಕೆಗಳ ಕೇಂದ್ರ ಬಿಂದುವೆಂದರೆ ಕೃಷಿ ಕಾರ್ಮಿಕ ಯುವಕ ಮಂಡಳಿ. 1989ರಲ್ಲಿ ಅಸ್ತಿತ್ವಕ್ಕೆ ಬಂದ ಈ ಮಂಡಳಿ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಅಲ್ಲಿನ ಹಿರೇಮರಡಿಗುಡ್ಡ, ಭೂತನಗುಡ್ಡ ಮತ್ತು ರಸ್ತೆ ಬದಿಗಳಲ್ಲಿ ಮರಗಿಡಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು, ಸ್ಥಳೀಯ ಶಾಲೆಯ ಮಕ್ಕಳಲ್ಲಿ ಪರಿಸರ ಜಾಗ್ರತಿಯನ್ನು ಮೂಡಿಸುವ ಕೆಲಸವನ್ನು ಮಾಡುತ್ತ ಬಂದಿದೆ. ಜಂಟೀ ಅರಣ್ಯ ಯೋಜನೆಯ ಹೊಸ ನೀತಿಯ ಬಗ್ಗೆ ತಿಳಿದ ಈ ಯುವಕ ಮಂಡಳಿ, ಆ ಬಗ್ಗೆ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿ, ಚರ್ಚಿಸಿದ ನಂತರ 1993ರಲ್ಲಿ ಸ್ವಯಂಪ್ರೇರಣೆಯಿಂದ ಹರಪನಹಳ್ಳಿಯ ವಲಯ ಅರಣ್ಯಾಧಿಕಾರಿ ಯನ್ನು ಭೇಟಿ ಮಾಡಿ ಕುಮಾರನಹಳ್ಳಿಯಲ್ಲಿ ಜಂಟೀ ಅರಣ್ಯ ಯೋಜನೆಯನ್ನು ಪ್ರಾರಂಭಿಸುವಂತೆ ಕೋರಿಕೆ ಸಲ್ಲಿಸಿತು. 20.2.1994ರಂದು ನಡೆದ ಪ್ರಾರಂಭಿಕ ಸಭೆಯಲ್ಲಿ ಅರಣ್ಯಾಧಿಕಾರಿಗಳು ಹಳ್ಳಿಯ ಜನರಿಗೆ ಯೋಜನೆಯ ಉದ್ದೇಶ, ಅಗತ್ಯ, ದೊರೆಯುವ ಸವಲತ್ತುಗಳು, ಪ್ರಯೋಜನಗಳ ಬಗ್ಗೆ ವಿವರಿಸಿದರು. 8.3.1994ರ ಸಭೆಯಲ್ಲಿ ಹಳ್ಳಿಯ ಆಸಕ್ತ ಯುವಕರನ್ನು ಗುರುತಿಸಿ ಪ್ರವರ್ತಕರ ಸಮಿತಿಯನ್ನು ರಚಿಸಲಾಯಿತು. ಈ ಪ್ರವರ್ತಕ ಸಮಿತಿ ಹಳ್ಳಿಯ ಜನರಿಗೆ ವಿವರಗಳನ್ನು ನೀಡಿ, ಅವರನ್ನು ಸಂಘಟಿಸಿ, ಅರಣ್ಯ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಗ್ರಾಮ ಅರಣ್ಯ ಸಮಿತಿಯ ರಚನೆಗೆ ನಾಂದಿ ಹಾಡಿತು. ಮತ್ತು ನಿರ್ವಹಣಾ ಸಮಿತಿ ವಿಧ್ಯುಕ್ತವಾಗಿ ರಚನೆ ಆಗುವವರೆಗೂ ತಾತ್ಕಾಲಿಕ ಜವಾಬ್ದಾರಿಯನ್ನು ಹೊತ್ತಿತು. ಕುಮಾರನ ಹಳ್ಳಿಯಲ್ಲಿ

23.3.1994ರಂದು ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರ ಸಮ್ಮುಖದಲ್ಲಿ ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಣ್ಣ ಪ್ರಮಾಣದಲ್ಲಿ ಜಂಟೀ ಅರಣ್ಯ ಯೋಜನೆಯ ಕೆಲಸಗಳು ಪ್ರಾರಂಭವಾದ ಎರಡು ವರ್ಷಗಳ ನಂತರ 4.3.1996ರಂದು ಗ್ರಾಮ ಅರಣ್ಯ ಸಮಿತಿ ವಿಧ್ಯುಕ್ತವಾಗಿ ನೋಂದಾವಣೆಯಾಯಿತು. ಸೌಹಾರ್ದ ಒಡಂಬಡಿಕೆ ಪತ್ರಕ್ಕೂ ಸಹಿಯಾಯಿತು.

ಜಂಟೀ ಅರಣ್ಯ ಯೋಜನೆಯ ಮುಖ್ಯ ಕಾರ್ಯಘಟಕ ಗ್ರಾಮ ಅರಣ್ಯ ಸಮಿತಿ. 1993ರ ಕರ್ನಾಟಕ ಸರ್ಕಾರದ ಆದೇಶದಂತೆ ಪ್ರತಿ ಕುಟುಂಬದಿಂದಲೂ ಒಬ್ಬ ವಯಸ್ಕ ಪುರುಷ ಅಥವಾ ಮಹಿಳೆ ಗ್ರಾಮ ಅರಣ್ಯ ಸಮಿತಿಯ ಸದಸ್ಯನಾ(ಳಾ)ಗಬಹುದಾದರೂ[ಈ ನಿಯಮಕ್ಕೆ 16.12.1996ರಂದು ತಿದ್ದುಪಡಿಬಂದು ಸದಸ್ಯನ(ಳ) ಪತ್ನಿ(ಪತಿ) ತಾನೇತಾನಾಗಿ, ಯಾವ ಶುಲ್ಕ ವನ್ನೂ ನೀಡದೇ ಸದಸ್ಯತ್ವ ಪಡೆಯುತ್ತಾಳೆ.(ನೆ)] ಕುಮಾರನಹಳ್ಳಿಯ 110ಕುಟುಂಬಗಳಿಂದ 98 ಸದಸ್ಯರಿದ್ದಾರೆ. ದಿನನಿತ್ಯದ ಕೆಲಸಕಾರ್ಯಗಳನ್ನು ನೋಡಿಕೊಳ್ಳುವ ನಿರ್ವಹಣಾ ಸಮಿತಿಯಲ್ಲಿ ಹನ್ನೊಂದು ಸದಸ್ಯರಿದ್ದು ಅದರಲ್ಲಿ ನಾಲ್ಕುಮಂದಿ ಮಹಿಳೆಯರಿದ್ದಾರೆ. ಅಧ್ಯಕ್ಷರಿಗೆ 35 ವರ್ಷವಾದರೆ ಉಳಿದ ಸದಸ್ಯರು 45-50ರ ವ್ಯಾಪ್ತಿಯಲ್ಲಿದ್ದು ಸದಸ್ಯರ ಸರಾಸರಿ ವಯಸ್ಸು ೪೭ ವರ್ಷಗಳಾಗಿದೆ. ಕುಮಾರನಹಳ್ಳಿ ಬಹುತೇಕ ಏಕಜಾತಿಯ ಹಳ್ಳಿಯಾಗಿದ್ದು ಎಲ್ಲ ಸದಸ್ಯರೂ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ.

ಕುಮಾರನಹಳ್ಳಿಯ ವ್ಯಾಪ್ತಿಯಲ್ಲಿ 1994-95 ರಿಂದ 1997-98ರ ಅವಧಿಯಲ್ಲಿ ಜಂಟೀ ಅರಣ್ಯ ಯೋಜನೆಯಡಿಯಲ್ಲಿ ತರಲಾದ 154 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಇಲಾಖೆ ನೀಲಗಿರಿ ಹಾಗೂ ಗಾಳಿಮರಗಳ(ಸರ್ವೇ) ನೆಡುತೋಪನ್ನು ಬೆಳೆಸಿದೆ. 1998-99ರ ಸಾಲಿನಲ್ಲಿ ಸಮಾಜ ಪರಿವರ್ತನಾ ಸಮುದಾಯ ಹಾಗೂ ರೀಚ್ ಸಂಸ್ಥೆಗಳು ಜಂಟೀ ಅರಣ್ಯ ಯೋಜನೆಯ ಅನುಷ್ಠಾನದಲ್ಲಿ ವಿಶೇಷ ಆಸಕ್ತಿವಹಿಸಿದ್ದರಿಂದ ಚಟುವಟಿಕೆಗಳು ಚುರುಕುಗೊಂಡವು. ಯೋಜನೆ ಅನುಷ್ಠಾನಗೊಂಡ ನಾಲ್ಕು ವರ್ಷಗಳ ನಂತರ 8.5.2000ರಂದು ಕಿರುಯೋಜನೆಯನ್ನು (ಮೈಕ್ರೋಪ್ಲಾನ್) ರೂಪಿಸಲಾಯಿತು.

ಕುಮಾರನಹಳ್ಳಿಯಲ್ಲಿ ಜಂಟೀ ಅರಣ್ಯ ಯೋಜನೆಯ ಮುಖ್ಯಕಾರ್ಯಕ್ಷೇತ್ರವೆಂದರೆ ಹಳ್ಳಿಯ ವ್ಯಾಪ್ತಿಯಲ್ಲಿರುವ ಐದು ನೆಡುತೋಪುಗಳು ಹಾಗೂ ಜತ್ತಿನಕಟ್ಟೆ, ಕಂಚಿಕೇರಿ, ಅಡವಿಮಲ್ಲಾಪುರ ಮತ್ತು ಜಾಜಿಕಲ್ಲುಗುಡ್ಡದ ಕಾಯ್ದಿಟ್ಟ ಅರಣ್ಯಗಳು. ನೆಡುತೋಪು ಮತ್ತು ಕಾಯ್ದಿಟ್ಟ ಅರಣ್ಯಗಳ ಸಂರಕ್ಷಣೆ, ಕಳ್ಳಸಾಗಣೆಯಿಂದ ರಕ್ಷಣೆ, ಅತಿಮೇಯಾಟದ ನಿಷೇಧ, ಸಂಪನ್ಮೂಲಗಳ ಮಿತಬಳಕೆ, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹ ಮುಂತಾದವುಗಳಿಗೆ ಸಂಬಂಧಿಸಿದಂತೆ ನಿರ್ವಹಣಾ ಸಮಿತಿ ನಿಯಮಗಳನ್ನು ರೂಪಿಸಿ ಜಾರಿಗೆ ತಂದಿದೆ. ಬೀಡಿ ಎಲೆಗಳ ಸಂಗ್ರಹಣೆ, ಮಾರಾಟಗಳಿಗೆ ಸಂಬಂಧಿಸಿದಂತೆ ಮಧ್ಯವರ್ತಿಗಳಿಂದ ಶೋಷಣೆಯನ್ನು ತಪ್ಪಿಸಿ, ಭೂರಹಿತರ ಹಾಗೂ ಅತಿಸಣ್ಣ

ರೈತರ ಆದಾಯ, ಜೀವನ ಮಟ್ಟಗಳನ್ನು ಹೆಚ್ಚಿಸಲು ನಿರಂತರವಾಗಿ ಪ್ರಯತ್ನಮಾಡುತ್ತ ಬಂದಿದೆ. ಗ್ರಾಮ ಅರಣ್ಯ ಸಮಿತಿಯ ಉತ್ತಮ ಕೆಲಸಕ್ಕಾಗಿ ಕರ್ನಾಟಕ ಸರ್ಕಾರದ ವನಮಿತ್ರ ಪ್ರಶಸ್ತಿ(1999) ಹಾಗೂ ಡಾ.ಶಿವರಾಮ ಕಾರಂತ ಫೆಲೋಶಿಪ್‌ಗಳು(2001) ಲಭಿಸಿವೆ.

ಕುಮಾರನಹಳ್ಳಿಯಲ್ಲಿ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಯ ನಡುವೆ ಸೌಹಾರ್ದಯುತವಾದ ಸಂಬಂಧವಿದೆ. ತಮ್ಮ ದಿನನಿತ್ಯದ ಪ್ರಾಮಾಣಿಕ ಅಗತ್ಯಗಳಿಗಾಗಿ ಜನ ಅರಣ್ಯಕ್ಕೆ ಹೋಗುವುದನ್ನು ಅರಣ್ಯ ಇಲಾಖೆ ತಡೆಯುವುದಿಲ್ಲ ಎಂಬುದು ಜನರ ಸಾಮಾನ್ಯ ಅಭಿಪ್ರಾಯ. ಆದರೆ ನೆಡುತೋಪುಗಳಿಗೆ ಖರ್ಚುಮಾಡಿದ ಹಣದ ವಿವರ ಕೇಳಿದಾಗ ಮಾತ್ರ ಇಲಾಖೆ ಸಿಡಿಮಿಡಿ ಮಾಡುತ್ತದೆ, ಮಾಹಿತಿಯನ್ನು ಕೊಡುವುದಿಲ್ಲ. ಹಣಕಾಸಿನ ವಿಷಯದಲ್ಲಿ ಇಲಾಖೆಯ ಅಧಿಕಾರಿಗಳ ಬಗ್ಗೆ ಜನರಲ್ಲಿ, ನಿರ್ವಹಣಾ ಮಂಡಳಿಯ ಸದಸ್ಯರಲ್ಲಿ ವಿಶ್ವಾಸವಿಲ್ಲ. ಕಳೆದ ಎರಡು ದಶಕಗಳಿಂದ ಸರ್ಕಾರದ ಕೈಗಾರಿಕಾಪರವಾದ ಅರಣ್ಯ ನೀತಿಯನ್ನು ಎಲ್ಲ ವೇದಿಕೆಗಳಲ್ಲಿ ವಿರೋಧಿಸುತ್ತ ಇಲಾಖೆಯ ವಿರುದ್ಧ ನ್ಯಾಯಾಲದಯಲ್ಲೂ ಹೋರಾಟ ನಡೆಸಿದ ಸಮಾಜ ಪರಿವರ್ತನಾ ಸಮುದಾಯ, ಈಗ, ಈ ಹಳ್ಳಿಯಲ್ಲಿ ಗ್ರಾಮ ಅರಣ್ಯ ಸಮಿತಿಯ ಹಿಂದೆ ನಿಂತಿರುವುದು ಇಲಾಖೆಯ ಪಾಲಿಗೆ ಇರುಸುಮುರುಸು ಆಗಿದೆಯಾದರೂ ಎದ್ದು ಕಾಣುವಂಥ ಯಾವ ಘರ್ಷಣೆಗಳೂ ನಡೆದಿಲ್ಲ.

ಕುಮಾರನಹಳ್ಳಿಯಲ್ಲಿ ಜಂಟೀ ಅರಣ್ಯ ಯೋಜನೆಯ ಅನುಷ್ಠಾನಕ್ಕಿರುವ ಮತ್ತೊಂದ ಪ್ರಬಲ ಪ್ರೇರಕ ಶಕ್ತಿಯೆಂದರೆ ಸಮಾಜ ಪರಿವರ್ತನಾ ಸಮುದಾಯ ಹಾಗೂ ರೀಚ್ ಸಂಸ್ಥೆಗಳು. 1988-92ರ ಅವಧಿಯಲ್ಲಿ ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ತತ್ವಗಳು ಸೂತ್ರೀಕರಣಗೊಳ್ಳುತ್ತಿದ್ದ ಸಮಯದಲ್ಲಿ ರಾಜ್ಯಮಟ್ಟದಲ್ಲಿ ಅತ್ಯಂತ ಸಕ್ರಿಯ ಪಾತ್ರವಹಿಸಿದ ಸಮಾಜ ಪರಿವರ್ತನಾ ಸಮುದಾಯ ಹಾಗೂ ಬಡತನ ನಿವಾರಣೆ, ಸಶಕ್ತೀಕರಣ, ಸಮುದಾಯ ಸಂಘಟನೆಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ 'ರೀಚ್' ಸಂಸ್ಥೆ ಗ್ರಾಮ ಅರಣ್ಯ ಸಮಿತಿ ಕೆಲಸಗಳಿಗೆ ಒತ್ತಾಸೆಯಾಗಿ ನಿಂತು ಮಾರ್ಗದರ್ಶನ ಮಾಡುತ್ತಿವೆ.

ಎದ್ದು ಕಾಣುವಂತಹ ಯಾವುದೇ ಸಾಮಾಜಿಕ ಅಥವಾ ರಾಜಕೀಯ ವೈಮನಸ್ಸು, ವೈಷಮ್ಯ, ಒಳಗುಂಪುಗಳಿಲ್ಲದಿರುವುದು ಕುಮಾರನಹಳ್ಳಿಯ ವೈಶಿಷ್ಟ್ಯ. ಕುಮಾರನಹಳ್ಳಿಯಲ್ಲಿ ಕಾಂಗ್ರೆಸ್ ಹಾಗೂ ಜನತಾದಳ ಎರಡರ ಪ್ರಭಾವವೂ ಇದೆಯಾದರೂ ಇದು ಕಲಹಕ್ಕೆ ದಾರಿ ಮಾಡಿ ಕೊಟ್ಟಿಲ್ಲ. ಹಳ್ಳಿಯ ಅಭಿವೃದ್ಧಿಗೆ ಅಡ್ಡಿಯಾಗಿಲ್ಲ. ಎಲ್ಲ ರಾಜಕೀಯ ಚುನಾವಣೆಗಳ ಸಂದರ್ಭದಲ್ಲೂ ಗ್ರಾಮ ಅರಣ್ಯಸಮಿತಿ ಅತ್ಯಂತ ಎಚ್ಚರಿಕೆಯಿಂದ ನಡೆದುಕೊಂಡಿದೆ. ಚುನಾವಣೆ ಘೋಷಣೆಯಾದ ಕೂಡಲೇ, ಗ್ರಾಮ ಅರಣ್ಯ ಸಮಿತಿ ಸಭೆ ಸೇರುತ್ತದೆ. ತುರ್ತಾದ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಂಡು, ಉಳಿದ ವಿಷಯಗಳನ್ನು ಮುಂದೂಡುತ್ತದೆ. ಚುನಾವಣೆ

ಮುಗಿಯುವವರೆಗೂ ಸಭೆ ಮತ್ತೆ ಸೇರುವುದಿಲ್ಲ. ಈ ಸಭೆಯ ನಂತರ ಹಳ್ಳಿ ಬಹುತೇಕ ಇಬ್ಭಾಗವಾಗಿ, ಜನ ತಮ್ಮ ತಮ್ಮ ನಾಯಕರ ಹಿಂದೆ ಸೇರಿ ಪ್ರಚಾರ ನಡೆಸುತ್ತಾರೆ. ಚುನಾವಣೆಯ ಬಿರುಸು ಮೂಡುತ್ತದೆ, ಕಾವೇರುತ್ತದೆ. ಓಟು ಹಾಕಿ, ಚುನಾವಣೆ ಮುಗಿದ ನಂತರ ಹಳ್ಳಿಯ ಎಲ್ಲ ಜನ ಸಂಜೆಗೆ ಒಟ್ಟಿಗೆ ಸೇರಿ ಹಬ್ಬದೂಟ ಮಾಡುತ್ತಾರೆ. ಇಬ್ಭಾಗವಾಗಿದ್ದ ಹಳ್ಳಿ ಒಂದಾಗುತ್ತದೆ. ಅಭಿವೃದ್ಧಿ ಕಾರ್ಯಕ್ರಮಗಳು ಮತ್ತೆ ಮುಂಚೂಣಿಗೆ ಬರುತ್ತವೆ. ಗ್ರಾಮ ಅರಣ್ಯ ಸಮಿತಿಯ ಸಭೆಗಳು ಪ್ರಾರಂಭವಾಗುತ್ತವೆ. ಈ ವಿಶಿಷ್ಟ ನಡವಳಿಕೆಯ ಹಿಂದೆ 'ರೀಚ್' ಸಂಸ್ಥೆಯ ಹಲವಾರು ವರ್ಷಗಳ ಅವಿರತ ಶ್ರಮವಿದೆ.

ಮರಡವಳ್ಳಿ

ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿಯ ಹಿಂದೆ ಕೃಷಿ ಕಾರ್ಮಿಕ ಯುವಕ ಮಂಡಳಿ ಇದ್ದ ರೀತಿಯಲ್ಲಿಯೇ ಮರಡವಳ್ಳಿಯಲ್ಲಿ ಪ್ರಾರಂಭದ ಪ್ರೇರಣೆ ದೊರೆತದ್ದು 'ಶರಾವತಿ ವಲಯಾಭಿವೃದ್ಧಿ ಸಮಿತಿ'ಯಿಂದ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಶರಾವತಿ ನದಿಯ ಹಿನ್ನೀರಿನ ಪ್ರದೇಶದ ಆವಿನಹಳ್ಳಿ ಹೋಬಳಿಯ ಹುಲ್ಲೋಡು ಗ್ರಾಮದಿಂದ ಬಾರಂಗಿ ಹೋಬಳಿಯ ಬಾಳೆಗೆರೆ ಗ್ರಾಮದವರೆಗಿನ ಎಂಟು ಗ್ರಾಮಗಳ ಸಮೂಹ ಸೇರಿ, 1997ರಲ್ಲಿ ಶರಾವತಿ ವಲಯಾಭಿವೃದ್ಧಿ ಸಮಿತಿ ರಚನೆಯಾಯಿತು. ಪರಿಸರ ಸಂರಕ್ಷಣೆ, ಸಾರ್ವಜನಿಕ ಕಾಮಗಾರಿ, ಮಹಿಳೆ ಮತ್ತು ಶಿಶುಕಲ್ಯಾಣ, ಕ್ರೀಡೆ, ಸಂಸ್ಕೃತಿ, ಗ್ರಾಮಾಭಿವೃದ್ಧಿ, ಶಿಕ್ಷಣ ಮುಂತಾದ ಕ್ಷೇತ್ರಗಳೂ ಸೇರಿದಂತೆ ಈ ವಲಯದ ಸರ್ವತೋಮುಖ ಅಭಿವೃದ್ಧಿಯೇ ಈ ಸಮಿತಿಯ ಗುರಿ. ಈ ಕ್ಷೇತ್ರಗಳೊಡನೆ ಅರಣ್ಯ ಸಂರಕ್ಷಣೆ, ಮರಗಿಡ ಬೆಳೆಸುವುದು, ಅವುಗಳ ಪೋಷಣೆ, ರಕ್ಷಣೆಗಳ ಜೊತೆಗೆ ಪರಿಸರ ಜಾಗೃತಿಯ ಬಗ್ಗೆ ಆಸಕ್ತಿವಹಿಸಿ ಕೆಲಸ ಮಾಡುತ್ತಿದ್ದ ಸಂಸ್ಥೆ ಜಂಟೀ ಅರಣ್ಯ ವಿವರಗಳು ತಿಳಿದ ನಂತರ ಸಾಗರದ ವಲಯ ಅರಣ್ಯಾಧಿಕಾರಿಗಳನ್ನು ಭೇಟಿ ಮಾಡಿ, ಚರ್ಚಿಸಿ 7.3.1998ರಂದು ಮರಡವಳ್ಳಿಯಲ್ಲಿ ಮೊಟ್ಟಮೊದಲ ಸಭೆ ನಡೆಸಿತು. 4.4.1998, 1.11.1998, 10.2.1999ರಂದು ವಿಧ್ಯುಕ್ತ ಸಭೆಗಳು ನಡೆದು, 24.3.1999ರಂದು ಗ್ರಾಮ ಅರಣ್ಯ ಸಮಿತಿ ನೋಂದಣಿಯಾಯಿತು. ಈ ನೋಂದಣಿಗೆ ಮುಂಚಿತವಾಗಿಯೇ ಪ್ರವರ್ತಕರ ಸಮಿತಿಯ ನೇತೃತ್ವದಲ್ಲಿ, ಅರಣ್ಯ ರಕ್ಷಣೆಯ ನಿಯಮಗಳು, ನೆಡುತೋಪು ಬರಬೇಕಾದ ಜಾಗ, ಅದರಲ್ಲಿರಬೇಕಾದ ಸಸ್ಯ ಪ್ರಭೇದಗಳ ಬಗ್ಗೆ ವಿವರವಾಗಿ ಚರ್ಚಿಸಿರುವುದನ್ನು ನಾವು ಗಮನಿಸಬೇಕು. ಇದಾದ ನಂತರ 27.11.1999ರಂದು ನಿಟ್ಟೆ ಹಳೇ ತೋಟ ಪ್ರಾಥಮಿಕ ಶಾಲೆಯಲ್ಲಿ ಮಹಾಸಭೆಯನ್ನು ಕರೆದು, ಅರಣ್ಯಾಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರ ಸಮ್ಮುಖದಲ್ಲಿ, ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಅಧ್ಯಕ್ಷರನ್ನು ಸರ್ವಾನುಮತದಿಂದ ಆರಿಸಲಾಯಿತು. 28.1.2000 ಹಾಗೂ 29.1.2000ರಂದು ಕಿರುಯೋಜನೆಯನ್ನು ಸಿದ್ಧಪಡಿಸುವ ಕೆಲಸಗಳು ನಡೆದವು. 8.11.2000ರಂದು ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯದ ನಿರ್ವಹಣಾ ಸಮಿತಿಯ ಸದಸ್ಯರು ಸೌಹಾರ್ದ ಒಡಂಬಡಿಕೆಗೆ ಸಹಿ ಹಾಕಿದರು.

ಮರಡವಳ್ಳಿಯಲ್ಲಿ 222 ಕುಟುಂಬಗಳಿದ್ದು, ಅದರಲ್ಲಿ 178 ಕುಟುಂಬಗಳಿಂದ, ಗ್ರಾಮ ಅರಣ್ಯ ಸಮಿತಿಯಲ್ಲಿ 178 ಸದಸ್ಯರಿದ್ದಾರೆ. ನಿರ್ವಹಣಾ ಮಂಡಳಿಯಲ್ಲಿ ಸರ್ಕಾರೀ ಆದೇಶದಂತೆ 11 ಸದಸ್ಯರಿದ್ದು, ಅದರಲ್ಲಿ ಮೂರು ಮಹಿಳೆಯರಿದ್ದಾರೆ. ಅಧ್ಯಕ್ಷರಿಗೆ 52 ವರ್ಷಗಳಾಗಿದ್ದರೆ, ಉಳಿದ ಸದಸ್ಯರ ಸರಾಸರಿ ವಯಸ್ಸು 34 ವರ್ಷಗಳು. ನಿರ್ವಹಣಾ ಸಮಿತಿಯಲ್ಲಿ ತಲಾ 3ರಂತೆ ಬ್ರಾಹ್ಮಣ, ಒಕ್ಕಲಿಗ, ಪರಿಶಿಷ್ಟ ಜಾತಿಗೆ ಸೇರಿದ ಸದಸ್ಯರಿದ್ದು, ಪರಿಶಿಷ್ಟಪಂಗಡಕ್ಕೆ ಸೇರಿದ ಒಬ್ಬ ಹಾಗೂ ದೇವಾಡಿಗ ಜಾತಿಗೆ ಸೇರಿದ ಒಬ್ಬ ಸದಸ್ಯರಿದ್ದಾರೆ. ಅಧ್ಯಕ್ಷರು ಪರಿಶಿಷ್ಟ ಜಾತಿಗೆ ಸೇರಿದವರು. ಹನ್ನೊಂದು ಸದಸ್ಯರಲ್ಲಿ 7 ಮಂದಿಗೆ ಪ್ರಾಥಮಿಕ ಶಿಕ್ಷಣ, ಒಬ್ಬರಿಗೆ ಮೆಟ್ರಿಕ್ಯುಲೇಷನ್, ಇಬ್ಬರಿಗೆ ಪದವಿಪೂರ್ವ ಹಂತದವರೆಗೂ ಶಿಕ್ಷಣವಿದೆ. ಪದವಿ ಪಡೆದ ಒಬ್ಬ ಸದಸ್ಯರಿದ್ದಾರೆ.

ಮರಡವಳ್ಳಿಯಲ್ಲಿ ಒಟ್ಟು 250 ಹೆಕ್ಟೇರ್ ಪ್ರದೇಶವನ್ನು ಜಂಟೀ ಅರಣ್ಯ ಯೋಜನೆಯ ಅಡಿಯಲ್ಲಿ ತರಲಾಗಿದೆ. ಇದರಲ್ಲಿ ಬಾಳೆಗೆರೆಯಲ್ಲಿ 50 ಹೆಕ್ಟೇರ್ ಪ್ರದೇಶದಲ್ಲಿ ಔಷಧ ಸಸ್ಯಗಳನ್ನು ಬೆಳೆಸಲಾಗಿದೆ. ದೇವಾಸದಲ್ಲಿ 15 ಹೆಕ್ಟೇರುಗಳಲ್ಲಿ ಮಿಶ್ರಪ್ರಭೇದಗಳ ನೆಡುತೋಪು ಹಾಗೂ 10 ಹೆಕ್ಟೇರ್ ಪ್ರದೇಶದಲ್ಲಿ ಉರುವಲು ನೆಡುತೋಪಿದೆ. ಉಳಿದಂತೆ ಅಕೇಷಿಯಾ ನೆಡುತೋಪುಗಳೂ ಇವೆ. ಈ ಎಲ್ಲ ನೆಡುತೋಪುಗಳ ಜೊತೆಗೆ ಹಳ್ಳಿಯ ಸುತ್ತಲಿನ ಬೆಟ್ಟಗುಡ್ಡಗಳ ಪ್ರದೇಶದಲ್ಲಿರುವ ಅರಣ್ಯಗಳ ಸಂರಕ್ಷಣೆ, ಕಳ್ಳಸಾಗಣೆ ತಡೆ, ಅತಿಮೇಯಾಟದ ನಿಷೇಧ, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹ ಮುಂತಾದವುಗಳಿಗೆ ಸಂಬಂಧಿಸಿದಂತೆ, ಅರಣ್ಯ ಸಮಿತಿ ನೀತಿ, ನಿಯಮಗಳನ್ನು ರೂಪಿಸಿ ಆಚರಣೆಗೆ ತಂದಿದೆ.

ಬೀಡಿ ಎಲೆಯ ಸಂಗ್ರಹಣೆ ಮತ್ತು ಮಾರಾಟ ಕುಮಾರನಹಳ್ಳಿಯ ನಿರ್ವಹಣಾ ಸಮಿತಿಯ ಸದಸ್ಯರನ್ನು ವರ್ಷಗಳಿಂದ ಎಡೆಬಿಡದೆ ಕಾಡುತ್ತಿದ್ದರೆ, ಮರಡವಳ್ಳಿಯಲ್ಲಿ ಬಾಳೆಗೆರೆಯಲ್ಲಿರುವ ಔಷಧ ವನ ಆ ಸ್ಥಾನದಲ್ಲಿದೆ. ಬಾಳೆಗೆರೆಯ 50 ಹೆಕ್ಟೇರ್ ಪ್ರದೇಶದಲ್ಲಿ, 200ಕ್ಕೂ ಹೆಚ್ಚು ಔಷಧ ಸಸ್ಯ ಪ್ರಭೇದಗಳಿರುವ ಮೂಲಿಕಾವನ ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಯ ಅವಿರತ ದುಡಿಮೆಯ ಫಲವಾಗಿ ಬೆಳೆದು ನಿಂತಿರುವ ಅತ್ಯಮೂಲ್ಯ ಆಸ್ತಿ. ಈ ಔಷಧ ವನಕ್ಕೆ ಮಲೆನಾಡು ಅಭಿವೃದ್ಧಿ ಯೋಜನೆಯಿಂದ ತುಂತುರು ನೀರಾವರಿಗೆ 2,65,000/-ರೂ.ಗಳು ಹಾಗೂ ಅರಣ್ಯ ಇಲಾಖೆಯ ಕಡೆಯಿಂದ ವಿಶೇಷ ಕೊಡುಗೆಯಾಗಿ 2,50,000/-ರೂ.ಗಳು ಬಂದಿದೆ. ಜಿಲ್ಲಾ ಪಂಚಾಯತಿ ಕೊಳವೆ ಬಾವಿ ಹಾಕಿಸಿಕೊಟ್ಟಿದೆ. ಸಂಪೂರ್ಣವಾಗಿ ಭೂರಹಿತ ಸದಸ್ಯರ ಕಡೆಯಿಂದಲೇ ನಿರ್ವಹಿಸಲಾಗುತ್ತಿರುವ ಈ ಔಷಧ ವನದಿಂದ, ಔಷಧ ಸಸ್ಯಗಳನ್ನು ಸಂಸ್ಕರಿಸಿ, ಮಾರಾಟ ಮಾಡುವ ಯೋಜನೆ ಅರಣ್ಯ ಸಮಿತಿಗಿದೆ. ಇದಕ್ಕಾಗಿ ಇದೇ ವನದಲ್ಲಿ ಕಾರ್ಯಾಗಾರಗಳು, ತರಬೇತಿ ಶಿಬಿರಗಳು, ಪರಿಣಿತರೊಡನೆ ಸಮಾಲೋಚನೆಗಳು ನಡೆದಿವೆ. ಆದರೆ ಈ ಮಧ್ಯೆ ಯಾವ ಹೆಚ್ಚಿನ ಪ್ರಚಾರವೂ ಇಲ್ಲದೆ, ಸಾಗರದ ಸಂಸ್ಥೆಯೊಂದು, ಶರಾವತಿ ಹಿನ್ನೀರಿನ ಈ ಪ್ರದೇಶವನ್ನು

ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು 'ಲೀಸ್' ಮೇಲೆ ಕೊಡುವಂತೆ ಅರ್ಜಿಸಲ್ಲಿಸಿತು. ಈ ಪ್ರದೇಶವನ್ನು ಸರ್ವೆ ಮಾಡಲು ಸಾಗರದಿಂದ ಸಿಬ್ಬಂದಿ ಬಂದಾಗ ಮಾತ್ರ ಈ ವಿಷಯ ಬಯಲಾಯಿತು. ಬಾಳೆಗೆರೆಯ ಔಷಧ ವನವಿರುವ ಸ್ಥಳ ಕಂದಾಯ ಇಲಾಖೆಗೆ ಸೇರಿದ್ದು, ಆ ಜಾಗದ ಮೇಲೆ ಅರಣ್ಯ ಇಲಾಖೆಯ ಅಧಿಕಾರವಿಲ್ಲವೆಂಬುವ ವಿಷಯ ಮತ್ತಷ್ಟು ಕಳವಳಕ್ಕೆ ದಾರಿಮಾಡಿಕೊಟ್ಟಿತು. ಈ ಅನಿರೀಕ್ಷಿತ ಸಮಸ್ಯೆಯನ್ನು ಗ್ರಾಮ ಅರಣ್ಯ ಸಮಿತಿಯಲ್ಲಿ ದೀರ್ಘವಾಗಿ ಚರ್ಚಿಸಿದ ನಿರ್ವಹಣಾ ಸಮಿತಿಯ ಸದಸ್ಯರು, ಗ್ರಾಮ ಅರಣ್ಯ ಸಮಿತಿಯನ್ನು ಕೇಳದೇ ಔಷಧ ವನದ ಭೂಮಿಯನ್ನು ಬೇರೆ ಯಾವುದೇ ಸಂಸ್ಥೆಗೆ ಪರಭಾರೆ ಮಾಡಕೊಡದೆಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 'ಕೇವಿಯಟ್' ಒಂದನ್ನು ದಾಖಲಿಸಿದೆ. ಇದರ ವಿರುದ್ಧ ಹೋರಾಡಲು ಗ್ರಾಮ ಅರಣ್ಯ ಸಮಿತಿಯಲ್ಲೇ ಪ್ರತ್ಯೇಕವಾದ 'ಲೀಗಲ್‌ಸೆಲ್' ಒಂದನ್ನು ಮಾಡಿಕೊಂಡಿದೆ. ಅರಣ್ಯ ಇಲಾಖೆಯಿಂದ ಔಷಧ ವನಕ್ಕೆಂದು ವಿಶೇಷ ಧನಸಹಾಯ ನೀಡಲು ನೆರವಾದ ಜಿಲ್ಲೆಯ ಹಿರಿಯ ರಾಜಕಾರಣಿ ಹಾಗೂ ಹಿರಿಯ ಸಚಿವರಿಗೆ ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಯ "ಗೌರವ ಸದಸ್ಯತ್ವ" ನೀಡಿದೆ. ಈ ಹೋರಾಟದಲ್ಲಿ ಅರಣ್ಯ ಇಲಾಖೆ ಸಂಪೂರ್ಣವಾಗಿ ಗ್ರಾಮ ಅರಣ್ಯ ಸಮಿತಿಯ ಪರವಾಗಿ ನಿಂತಿದೆ.

ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ಬಹುತೇಕ ಸದಸ್ಯರ ಜವಾಬ್ದಾರಿಯುತ ನಡವಳಿಕೆ ಹಾಗೂ ಸ್ವಯಂಪ್ರೇರಿತ ಶ್ರಮದಾನ ಈ ಗ್ರಾಮ ಅರಣ್ಯ ಸಮಿತಿಯಲ್ಲಿ ಎದ್ದು ಕಾಣುವ ಅಂಶಗಳು. ಬ್ರಾಹ್ಮಣ ಕುಟುಂಬಗಳೇ ಹೆಚ್ಚಿನ ಪ್ರಮಾಣದಲ್ಲಿರುವ(ಶೇ.34) ಈ ಹಳ್ಳಿಯಲ್ಲಿ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರು ಪರಿಶಿಷ್ಟ ಜಾತಿಗೆ ಸೇರಿದವರು. ಆದರೆ ಇದು ಜಂಟೀ ಅರಣ್ಯ ಯೋಜನೆಯ ಕಾರ್ಯಕ್ರಮಗಳಲ್ಲಿ ಬ್ರಾಹ್ಮಣರೂ ಸೇರಿದಂತೆ ಎಲ್ಲ ಜಾತಿಯವರೂ ಕೂಡಿ ಭಾಗವಹಿಸಲು ಯಾವ ದೃಷ್ಟಿಯಿಂದಲೂ ಅಡ್ಡಿಯಾಗಿಲ್ಲ. ಭೂರಹಿತರು ಹಾಗೂ ದುರ್ಬಲ ವರ್ಗದವರ ಬಗ್ಗೆ ವಿಶೇಷ ಕಾಳಜಿಯಿರುವ ಈ ಸಮಿತಿ ಮಹಿಳೆಯರಿಗಾಗಿ ಸ್ವಸಹಾಯ ಸಂಘವೊಂದನ್ನು ಸ್ಥಾಪಿಸಿದ್ದು, ಅದು ಉತ್ತಮವಾಗಿ ಕೆಲಸ ಮಾಡುತ್ತಿದೆ. ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಯ ಕೆಲಸಕ್ಕಾಗಿ 'ಸಾಂಘ್ವಿ ಸಂಸ್ಥೆ' ವಿಶೇಷ ಪ್ರಶಸ್ತಿಯೊಂದನ್ನು ನೀಡಿದೆ.

ಮರಡವಳ್ಳಿಯಲ್ಲಿ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವಿನ ಸಂಬಂಧ ಉತ್ತಮವಾಗಿದ್ದರೂ ಹಣಕಾಸಿನ ವಿಷಯ ಬಂದಾಗ, ಗ್ರಾಮ ಅರಣ್ಯ ಸಮಿತಿ ಇಲಾಖೆ ವೆಚ್ಚ ಮಾಡಿದ ಹಣದ ಲೆಕ್ಕ ಕೇಳಿದಾಗ ಸಂಬಂಧ ಶೀತಲವಾಗುತ್ತದೆ. ವಲಯ ಅರಣ್ಯಾಧಿಕಾರಿ ಬದಲಾದಾಗ ಇದೇ ಉತ್ತಮ ಸಂಬಂಧ ಉಳಿಯಬಹುದೇ ಎಂಬ ಬಗ್ಗೆ ಅಧ್ಯಕ್ಷರು ಅನುಮಾನ ಪಡುತ್ತಾರೆ. ಗ್ರಾಮ ಅರಣ್ಯ ಸಮಿತಿಗೆ ಕಾನೂನುಬದ್ಧವಾದ ಸ್ಥಾನವಿಲ್ಲದಿರುವ ಈ ಪರಿಸ್ಥಿತಿಯಲ್ಲಿ, ಸಂರಕ್ಷಣೆಯ ಮೂಲಕವಾಗಿ ಶ್ರೀಮಂತಗೊಂಡ ಅರಣ್ಯವನ್ನು ಗ್ರಾಮ ಅರಣ್ಯ ಸಮಿತಿಯಿಂದ,

ಇಲಾಖೆಯೇ ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಳ್ಳುವ ಸಾಧ್ಯತೆಯೂ ಇಲ್ಲದಿಲ್ಲ ಎಂಬುದು ನಿರ್ವಹಣಾ ಸಮಿತಿಯ ನಾಲ್ಕು ಸದಸ್ಯರ ಅಭಿಪ್ರಾಯ.

ಹನಿಯಾ

ವೃಕ್ಷಲಕ್ಷ ಆಂದೋಳನದ ಭಾಗವಾದ, ಹೊಸನಗರ ತಾಲ್ಲೂಕಿನ ಹನಿಯಾದಲ್ಲಿರುವ 'ವೃಕ್ಷ ಜಾಗೃತಿ ವೇದಿಕೆ', ಈ ತಾಲ್ಲೂಕಿನ ಎಲ್ಲ ಪರಿಸರ ಸಂಘಟನೆಗಳ ಮುಂಚೂಣಿಯಲ್ಲಿರುವ ಸರ್ಕಾರೇತರ ಸಂಸ್ಥೆ. ಪಶ್ಚಿಮಘಟ್ಟ ಅರಣ್ಯ ಮತ್ತು ಪರಿಸರ ಯೋಜನೆ 1993ರ ಏಪ್ರಿಲ್ ತಿಂಗಳಿನಲ್ಲಿ ಉತ್ತರ ಕನ್ನಡದಲ್ಲಿ ಪ್ರಾರಂಭವಾದಾಗ, ಅದರ ಉದ್ದೇಶ, ಕಾರ್ಯವಿಧಾನಗಳ ಬಗ್ಗೆ ತೀವ್ರ ಹೋರಾಟ ನಡೆಸಿದ ಸಂಸ್ಥೆ. ".... ಇಡೀ ಯೋಜನೆಯೇ ಹಳ್ಳಿಗರನ್ನು ಅರಣ್ಯ ಇಲಾಖೆಯ ಅಡಿಯಾಳುಗಳನ್ನಾಗಿ ಮಾಡುವ ಪ್ರಯತ್ನ" ವೆಂದು ಟೀಕಿಸಿದ ಈ ಸಂಸ್ಥೆಯ ಕಾರ್ಯಕರ್ತರು ಯೋಜನೆಯುದ್ದಕ್ಕೂ ಅದನ್ನು ಹತ್ತಿರದಿಂದ ಗಮನಿಸಿ, ತಪ್ಪುಗಳನ್ನು ಎತ್ತಿ ತೋರುತ್ತಾ, ಅರಣ್ಯ ಇಲಾಖೆಯ ಪಾಲಿಗೆ ಬಿಸಿ ತುಪ್ಪವಾಗಿದ್ದರು. 1997-98ರಲ್ಲಿ ಈ ಯೋಜನೆಯನ್ನು ಯಾವುದೇ ಬದಲಾವಣೆಗಳಿಲ್ಲದೆ ಶಿವಮೊಗ್ಗ ವೃತ್ತಕ್ಕೂ ವಿಸ್ತರಿಸುವ ನಿರ್ಧಾರವನ್ನು ಸರ್ಕಾರ ಕೈಗೊಂಡಾಗ, ವೃಕ್ಷ ಜಾಗೃತಿ ವೇದಿಕೆ ಮನೆಯ ಬಾಗಿಲಿಗೇ ಬಂದ ಜಂಟೀ ಅರಣ್ಯ ಯೋಜನೆಯ ವಿರುದ್ಧ ಸಮರವನ್ನೇ ಸಾರಿ, ಉಗ್ರವಾಗಿ ಪ್ರತಿಭಟಿಸಿತು. ಜಿಲ್ಲೆಯಾದ್ಯಂತ ಪ್ರತಿಭಟನಾ ಸಭೆಗಳು ನಡೆದವು. ಆದರೆ ಇದೇ ಸರ್ಕಾರೇತರ ಸಂಸ್ಥೆ, 1997ರ ಅಕ್ಟೋಬರ್ ತಿಂಗಳಲ್ಲಿ ಹೊಸನಗರ ಅರಣ್ಯಾಧಿಕಾರಿಗಳನ್ನು ಭೇಟಿ ಮಾಡಿ ಹನಿಯಾದಲ್ಲಿ ಜಂಟೀ ಅರಣ್ಯ ಯೋಜನೆಯನ್ನು ಅನುಷ್ಠಾನಕ್ಕೆ ತರುವಂತೆ ಕೋರಿತು. 16.11.1997ರಂದು ಹನಿಯಾದಲ್ಲಿ ಪ್ರಾರಂಭಿಕ ಸಭೆ ನಡೆದು ಅರಣ್ಯಾಧಿಕಾರಿಗಳು ಯೋಜನೆಯ ಉದ್ದೇಶ, ಪ್ರಯೋಜನಗಳ ಬಗ್ಗೆ ವಿವರಿಸಿದರು. ಈ ಉದ್ದೇಶಗಳನ್ನೇ ತೀವ್ರವಾಗಿ ಪ್ರತಿಭಟಿಸಿದ್ದ ಜನ ಆ ಮಾಹಿತಿಯನ್ನು ಪ್ರತಿಭಟನೆಯಿಲ್ಲದೇ ಸ್ವೀಕರಿಸಿದರು! ಗ್ರಾಮ ಅರಣ್ಯ ಸಮಿತಿಯ ರಚನೆ, ನಿರ್ವಹಣಾ ಸಮಿತಿಯ ಸದಸ್ಯರ, ಅಧ್ಯಕ್ಷರ ಆಯ್ಕೆಯ ಪ್ರಕ್ರಿಯೆಯೂ ಅಂದೇ ಮುಗಿಯಿತು. 2.1.1998 ಹಾಗೂ 3.1.1998ರಂದು ಕಿರು ಯೋಜನೆಯ ತಯಾರಿ ನಡೆದು 5.2.1998ರಂದು ನಡೆದ ಮಹಾಸಭೆಯಲ್ಲಿ ಕಿರುಯೋಜನೆ ಅಂಗೀಕೃತವಾಯಿತು.

ಹನಿಯಾ ಗ್ರಾಮದಲ್ಲಿ 67 ಕುಟುಂಬಗಳಿದ್ದು 55 ಕುಟುಂಬಗಳು ಗ್ರಾಮ ಅರಣ್ಯ ಸಮಿತಿಗೆ ಸದಸ್ಯರನ್ನು ಕಳುಹಿಸಿವೆ. ಸರ್ಕಾರೀ ಆದೇಶದಂತೆ 11 ಚುನಾಯಿತ ಸದಸ್ಯರಿದ್ದು ಅದರಲ್ಲಿ ಮೂರುಮಂದಿ ಮಹಿಳೆಯರಿದ್ದಾರೆ. ಚುನಾಯಿತ ಸದಸ್ಯರಲ್ಲಿ ತಲಾ ಒಬ್ಬರು ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಡದ ಹಾಗೂ ಕ್ರಿಶ್ಚಿಯನ್ ಜಾತಿಗೆ ಸೇರಿದವರು. ಉಳಿದ ಎಂಟು ಸದಸ್ಯರೂ, ಅಧ್ಯಕ್ಷರನ್ನೂ ಸೇರಿದಂತೆ ಬ್ರಾಹ್ಮಣರು. ನಿರ್ವಹಣಾ ಸಮಿತಿಯಲ್ಲಿರುವ ಮೂರೂ ಮಹಿಳಾ

ಸದಸ್ಯರು ಬ್ರಾಹ್ಮಣರಷ್ಟೇ ಅಲ್ಲದೇ ಅಧ್ಯಕ್ಷರ ಕುಟುಂಬಕ್ಕೆ ಸೇರಿದ ಸಂಬಂಧಿಗಳು. ಕ್ಷೇತ್ರಾಧ್ಯಯನದ ಸಮಯದಲ್ಲಿ (ಏಪ್ರಿಲ್-ಮೇ, 2001), ಅಧ್ಯಕ್ಷರು ಗತಿಸಿ ಮೂರು ತಿಂಗಳಾಗಿದ್ದು ಅಧ್ಯಕ್ಷರ ಆಯ್ಕೆಗೆ ಯಾವ ಕ್ರಮವನ್ನೂ ಕೈಗೊಂಡಿರಲಿಲ್ಲ. ಸದಸ್ಯರ ಸರಾಸರಿ ವಯಸ್ಸು 34 ವರ್ಷಗಳಾಗಿದ್ದು ಮೂರು ಮಂದಿ ಪ್ರಾಥಮಿಕ ಶಿಕ್ಷಣ, ಮೂರು ಮೆಟ್ರಿಕ್ಯುಲೇಷನ್, ಮೂರು ಪದವಿಪೂರ್ವ ಹಂತದಲ್ಲಿದ್ದರೆ ಒಬ್ಬ ಸದಸ್ಯರು ಪದವಿ ಪಡೆದಿದ್ದಾರೆ.

ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಹನಿಯಾ ವ್ಯಾಪ್ತಿಯಲ್ಲಿರುವ ಒಟ್ಟು 80 ಹೆಕ್ಟೇರ್ ವಿಸ್ತೀರ್ಣವಿರುವ, ಅಕೇಶಿಯಾ ನೆಡುತೋಪು ಹಾಗೂ ಮಿಶ್ರ ಪ್ರಭೇದಗಳಿರುವ ನೆಡುತೋಪನ್ನು ಗ್ರಾಮ ಅರಣ್ಯ ಸಮಿತಿಯ ರಕ್ಷಣೆಗೆ ಒಪ್ಪಿಸಲಾಗಿದೆ. ಇದರೊಡನೆ ಗ್ರಾಮಕ್ಕೆ ಹೊಂದಿಕೊಂಡಂತಿರುವ 283 ಹೆಕ್ಟೇರುಗಳ ಕಾಯ್ದಿಟ್ಟ ಅರಣ್ಯದ ಸಂರಕ್ಷಣೆಯನ್ನೂ ಗ್ರಾಮ ಅರಣ್ಯ ಸಮಿತಿಗೆ ಒಪ್ಪಿಸಲಾಗಿದೆ. ಲಭ್ಯವಿರುವ ದಾಖಲೆಗಳಂತೆ ಈ ಕೆಲಸಕ್ಕೆ ಅಗತ್ಯವಾದ ನಿಯಮಗಳನ್ನು ಗ್ರಾಮ ಅರಣ್ಯ ಸಮಿತಿ ರೂಪಿಸಿ ಜಾರಿಗೊಳಿಸಿದೆ.

ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ಯಾವ ವಿಶೇಷ ಸಂಬಂಧವೂ ಇಲ್ಲ. ನಿರ್ವಹಣಾ ಸಮಿತಿಯ ಸಭೆಯನ್ನು ಕರೆಯಲು ಇಲಾಖೆಗೂ ಉತ್ಸಾಹವಿಲ್ಲ, ಸಮಿತಿಗೂ ಉತ್ಸಾಹವಿಲ್ಲ. ಹಿರಿಯ ಅಧಿಕಾರಿಗಳ ಭೇಟಿಯ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ತ್ವರಿಗತಿಯಲ್ಲಿ ಸಭೆ ಸಮಾವೇಶಗೊಂಡು ಅಷ್ಟೇ ತ್ವರಿತವಾಗಿ ಮುಕ್ತಾಯಗೊಳ್ಳುತ್ತದೆ. ಅರಣ್ಯ ಇಲಾಖೆಯ ಕಡೆಯಿಂದಾಗಾಲೀ, ನಿರ್ವಹಣಾ ಸಮಿತಿಯ ಕಡೆಯಿಂದಾಗಲೀ ಯಾವ ವಿಶೇಷ ಚಟುವಟಿಕೆಗಳೂ ನಡೆದಿಲ್ಲ. ಅರಣ್ಯ ಇಲಾಖೆಗೆ ಆಗಿರುವ ಏಕೈಕ ಪ್ರಯೋಜನವೆಂದರೆ ಜಂಟೀ ಅರಣ್ಯ ಯೋಜನೆಯ ವಿರುದ್ಧದ 'ಅಪಪ್ರಚಾರ' ಸಂಪೂರ್ಣವಾಗಿ ನಿಂತಿದೆ.

ಉದ್ದೂರು

ಉದ್ದೂರಿನಲ್ಲಿ ಜಂಟೀ ಅರಣ್ಯ ಯೋಜನೆ ಪ್ರಾರಂಭವಾದದ್ದು ಸಂಪೂರ್ಣವಾಗಿ ಅರಣ್ಯ ಇಲಾಖೆಯ ಕಡೆಯಿಂದ. ಇಂತಿಷ್ಟು ಗ್ರಾಮ ಅರಣ್ಯ ಸಮಿತಿಗಳನ್ನು ಸ್ಥಾಪಿಸಲೇಬೇಕೆಂಬ ಒತ್ತಡವಿದ್ದ ಹೊಳೇನರಸೀಪುರದ ವಲಯ ಅರಣ್ಯಾಧಿಕಾರಿಗಳು, ಹಳ್ಳಿಯಲ್ಲಿ ನೆಡುತೋಪೊಂದಿದೆ ಎಂಬ ಏಕಮಾತ್ರ ಕಾರಣದಿಂದ ಉದ್ದೂರನ್ನು ಆಯ್ಕೆ ಮಾಡಿದರು. ಉದ್ದೂರಿಗೆ ಬಂದು ಅಲ್ಲಿನ ಪ್ರಬಲ ಜಾತಿಯ ಪ್ರಬಲ ರಾಜಕಾರಣಿಯ ಜೊತೆಗೆ ಚರ್ಚಿಸಿದ ನಂತರ 2.1.1998ರಂದು ಪ್ರಾರಂಭಿಕ ಸಭೆ ನಡೆಯಿತು. 19.2.1998ರಂದು ಗ್ರಾಮ ಅರಣ್ಯ ಸಮಿತಿಯ ನೋಂದಣಿಯಾಯಿತು. ನೋಂದವಣಿಯಾದ 30 ದಿನಗಳೊಳಗೆ ನಿರ್ವಹಣಾ ಸಮಿತಿಯ ಸದಸ್ಯರ ಆಯ್ಕೆಯಾಗಬೇಕು. ಆದರೆ ಉದ್ದೂರಿನಲ್ಲಿ ಎಂಟು ತಿಂಗಳ ನಂತರ 1.9.1998ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ನಿರ್ವಹಣಾ ಸಮಿತಿಯ ಸದಸ್ಯರನ್ನು ಆಯ್ಕೆಮಾಡಲಾಯಿತು.

ಅಧ್ಯಕ್ಷರ ಆಯ್ಕೆಗೆ ಇಬ್ಬರು ಅಭ್ಯರ್ಥಿಗಳಿದ್ದರಿಂದ ಚೀಟಿ ಎತ್ತುವುದರ ಮೂಲಕ ಅಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ಇದರಲ್ಲಿ ಆಯ್ಕೆಯಾಗದವರು ನಿರ್ವಹಣಾ ಸಮಿತಿಯ ಸದಸ್ಯರಾದರು. ಕಿರು ಅರಣ್ಯ ಯೋಜನೆ 13.6.1998ರಂದು ಸಿದ್ಧವಾಗಿ 18.6.1998ರಂದು ಸೌಹಾರ್ದ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಉದ್ದೂರಿನಲ್ಲಿ 250 ಕುಟುಂಬಗಳಿವೆ. ಇದರಲ್ಲಿ 120 ಕುಟುಂಬಗಳು ಮಾತ್ರ ಗ್ರಾಮ ಅರಣ್ಯ ಸಮಿತಿಯಲ್ಲಿ ಪ್ರಾತಿನಿಧ್ಯ ಹೊಂದಿದೆ. ನಿರ್ವಹಣಾ ಸಮಿತಿಯಲ್ಲಿ ಹನ್ನೊಂದು ಸದಸ್ಯರಿದ್ದು ಇಬ್ಬರು ಮಹಿಳೆಯರಿದ್ದಾರೆ. ಹಿಂದುಳಿದ ಜಾತಿ/ಬುಡಕಟ್ಟು ಜನಾಂಗ, ಮಹಿಳಾ ಸದಸ್ಯರು, ಭೂರಹಿತ ಕಾರ್ಮಿಕರು, ಕುಶಲಕರ್ಮಿಗಳು, ಸಾಮಾನ್ಯ ಪ್ರವರ್ಗದ ಸದಸ್ಯರಿಗೆ ಸರ್ಕಾರಿ ಆದೇಶಕ್ಕನುಸಾರವಾಗಿ ಪ್ರಾತಿನಿಧ್ಯ ದೊರಕಿದೆ. ಹನ್ನೊಂದರಲ್ಲಿ ಆರು ಜನ ಲಿಂಗಾಯಿತರು, ಮೂರು ಪರಿಶಿಷ್ಟ ಜಾತಿ, ಒಂದು ಪರಿಶಿಷ್ಟವರ್ಗ ಹಾಗೂ ಒಂದು ಮಡಿವಾಳ ಜಾತಿಯ ಸದಸ್ಯರಿದ್ದಾರೆ. ಅಧ್ಯಕ್ಷರು ಮೆಟ್ರಿಕ್ಯುಲೇಶನ್ ಮಾಡಿದ್ದಾರೆ. ಇನ್ನೊಬ್ಬ ಸದಸ್ಯರು ಎಂಟನೆಯ ತರಗತಿಯವರೆಗೆ ಓದಿದ್ದಾರೆ. ಉಳಿದವರಿಗೆ ಅಕ್ಷರ ಜ್ಞಾನವಿದೆ. ಎಲ್ಲ ಸದಸ್ಯರೂ 50 ವರ್ಷದ ಆಸುಪಾಸಿನವರು.

ಉದ್ದೂರಿನ ಸುತ್ತ ಅರಣ್ಯವಿಲ್ಲ. ಊರಿನಿಂದ ಒಂದು ಕಿ.ಮೀ.ದೂರದಲ್ಲಿರುವ 1982ರ, 52 ಹೆಕ್ಟೇರ್ ನೀಲಗಿರಿ ನೆಡುತೋಪೇ ಜಂಟೀ ಅರಣ್ಯ ಯೋಜನೆಯ ಮುಖ್ಯಕಾರ್ಯಕ್ಷೇತ್ರ. ಈ ನೆಡುತೋಪನ್ನು ಕಾಪಾಡುವುದು ಅರಣ್ಯ ಇಲಾಖೆಗೆ ಅತ್ಯಂತ ದೊಡ್ಡ ಸಮಸ್ಯೆ. ಉದ್ದೂರು ಸೇರಿದಂತೆ ಸುತ್ತಮುತ್ತಲ ಎಲ್ಲ ಹಳ್ಳಿಗಳ ಕಣ್ಣೂ ಈ ನೆಡುತೋಪಿನ ಮೇಲೆ. ಮರಕಡಿಯುವುದು ತೀರಾ ಸಾಮಾನ್ಯ. ಅರಣ್ಯ ಇಲಾಖೆಯದು ತೀರಾ ನಿಸ್ಸಹಾಯಕ ಪರಿಸ್ಥಿತಿ. ಜಂಟೀ ಅರಣ್ಯ ಯೋಜನೆ ಬಂದಾಗ ಒಂದು ರೀತಿಯಲ್ಲಿ ಸಮಾಧಾನ. ನೆಡುತೋಪಿನ ರಕ್ಷಣೆಯನ್ನು ಗ್ರಾಮ ಅರಣ್ಯ ಸಮಿತಿಗೆ ಒಪ್ಪಿಸಿ ಇಲಾಖೆ ಕೈ ತೊಳೆದುಕೊಂಡಿದೆ. ಈ ನೆಡುತೋಪಿನ ರಕ್ಷಣೆಗಾಗಿ ನಿರ್ವಹಣಾ ಸಮಿತಿ ನಿಯಮಗಳನ್ನು ರೂಪಿಸಿ, ಜಾರಿಮಾಡಿದೆ. ಈ ನೆಡುತೋಪಿನ ಜೊತೆಗೆ ಸುಮಾರು 5 ಹೆಕ್ಟೇರ್ ಸರ್ಕಾರಿ ಪ್ರದೇಶದಲ್ಲಿ ವಿವಿಧ ಪ್ರಭೇದಗಳ ಸಸಿಗಳನ್ನು ಹಾಕುವ ಯೋಜನೆ ಮಾಡಿದೆ. ಅಧ್ಯಕ್ಷರು ಪ್ರಬಲ ಕೋಮಿನವರು, ಪ್ರಬಲ ರಾಜಕಾರಣಿಗಳು. ಅವರಿಗೆ ವಿರೋಧವಿಲ್ಲ, ಅವರು ಹೇಳಿದ್ದೆ ಕಡೆಯ ಮಾತು. ಅಧ್ಯಕ್ಷರು ಹೇಳಿ ಕಳುಹಿಸಿದಾಗ ಇಲಾಖೆಯವರು ಬರುತ್ತಾರೆ, ಅಧ್ಯಕ್ಷರಿಗೆ ಅಗತ್ಯವಾದಾಗ ಸಭೆಗಳು ನಡೆಯುತ್ತವೆ. ಅಧ್ಯಕ್ಷರು ಮತ್ತು ಅರಣ್ಯ ಇಲಾಖೆಯ ನಡುವೆ ಸಂಬಂಧ ಚೆನ್ನಾಗಿದೆ.

ಮುಕುಂದೂರು

ಉದ್ದೂರಿನಂತೆ ಮುಕುಂದೂರಿನಲ್ಲೂ ಜಂಟೀ ಯೋಜನೆಗೆ ಕಾರಣ ಅರಣ್ಯ ಇಲಾಖೆಯೇ. 'ಟಾರ್ಗೆಟ್ ಮುಟ್ಟುವ' ಆತುರವೇ ಜಂಟೀ ಅರಣ್ಯ ಯೋಜನೆಯ ಅನುಷ್ಠಾನಕ್ಕೆ ಕಾರಣ.

ಉದ್ದೂರಿನಂತೆ ಮುಕುಂದೂರು ಅತ್ಯಂತ ಪ್ರಬಲ ರಾಜಕಾರಣದ ತಾಣ. ಹಾಸನ ತಾಲ್ಲೂಕಿನ ವಲಯ ಅರಣ್ಯಾಧಿಕಾರಿ ಪ್ರಾರಂಭದಲ್ಲಿ ಭೇಟಿಯಾದದ್ದು ಈ ಊರಿನ ಪ್ರಬಲ ರಾಜಕಾರಣಿಯನ್ನು 20.9.1997ರಂದು ಮೊದಲ ಸಭೆ, 22.9.1997ರಂದು ಅರಣ್ಯ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ನಿರ್ವಹಣಾ ಮಂಡಳಿಯ ಸದಸ್ಯರು ಹಾಗೂ ಅಧ್ಯಕ್ಷರ ಸರ್ವಾನುಮತದ ಆಯ್ಕೆ. 19.2.1998ರಂದು ಕಿರು ಯೋಜನೆಯ ತಯಾರಿಯಾಗಿ 18.6.1998 ಸೌಹಾರ್ದ ಒಡಂಬಡಿಕೆಯ ದಾಖಲೆಗೆ ಸಹಿ.

ಮುಕುಂದೂರಿನಲ್ಲಿ 150 ಕುಟುಂಬಗಳಿವೆ. ಇದರಲ್ಲಿ 128 ಕುಟುಂಬಗಳಿಂದ ಗ್ರಾಮ ಅರಣ್ಯ ಸಮಿತಿಯಲ್ಲಿ ಸದಸ್ಯರಿದ್ದಾರೆ. ನಿರ್ವಹಣಾ ಸಮಿತಿಯಲ್ಲಿ 11 ಮಂದಿ ಚುನಾಯಿತ ಸದಸ್ಯರಿದ್ದಾರೆ. ಅದರಲ್ಲಿ ಇಬ್ಬರು ಮಹಿಳೆಯರು, ಪರಿಶಿಷ್ಟ ಜಾತಿಯ ಇಬ್ಬರು ಸದಸ್ಯರಿದ್ದಾರೆ. ಒಬ್ಬ ಮಹಿಳಾ ಸದಸ್ಯೆ ಬ್ರಾಹ್ಮಣರು, ಇನ್ನೊಬ್ಬ ಸದಸ್ಯರು ಲಿಂಗಾಯಿತರು. ಉಳಿದ ಏಳುಮಂದಿ ಗೌಡರು(ಒಕ್ಕಲಿಗರು). ಇಬ್ಬರು ಪದವೀಧರರು ಹಾಗೂ ಇಬ್ಬರು ಪ್ರೌಢಶಾಲೆಯ ಹಂತದ ಶಿಕ್ಷಣ ಪಡೆದಿದ್ದಾರೆ. ಉಳಿದವರಿಗೆ ಅಕ್ಷರ ಜ್ಞಾನವಿದೆ. ಅಧ್ಯಕ್ಷರಿಗೆ 60 ವರ್ಷವಾದರೆ ಉಳಿದ ಸದಸ್ಯರ ಸರಾಸರಿ ವಯಸ್ಸು 46.

ಮುಕುಂದೂರಿನಲ್ಲಿ ಮೂರು ಗೋಮಾಳಗಳಿವೆ. ಇವುಗಳ ಒಟ್ಟು ವಿಸ್ತೀರ್ಣ 4 ಹೆಕ್ಟೇರುಗಳು. ಇದೇ ಜಂಟೀ ಅರಣ್ಯ ಯೋಜನೆಯ ಮುಖ್ಯ ಕಾರ್ಯಕ್ಷೇತ್ರ. ಊರನ್ನು ಪ್ರವೇಶಿಸುತ್ತಿದ್ದಂತೆಯೇ ಸಿಗುವ ಒಂದೂವರೆ ಹೆಕ್ಟೇರುಗಳ ವಿಸ್ತೀರ್ಣದ ಗೋಮಾಳದಲ್ಲಿ ಮಿಶ್ರ ಪ್ರಭೇದಗಳ ನೆಡುತೋಪಿದೆ. ಊರಿನ ದಕ್ಷಿಣದ ಅಂಚಿನಲ್ಲಿ ಇರುವ 1996ರಲ್ಲಿ ತಮಿಳುನಾಡಿನಿಂದ ವಿಶೇಷವಾಗಿ ತರಿಸಿದ್ದ 600 ಕಸಿ ಮಾಡಿದ ಮಾವಿನ ಸಸಿಗಳನ್ನು ಅರಣ್ಯ ಇಲಾಖೆ ನೆಟ್ಟಿತು. ಈ ಪ್ರದೇಶಕ್ಕೆ ಬೇಲಿ ಹಾಕಿ ಬೇಲಿಯ ಅಂಚಿನಲ್ಲಿ ನೀಲಗಿರಿ, ಸರ್ವೇ, ಬಿದಿರುಗಳನ್ನು ಹಾಕಿತು. ಗ್ರಾಮ ಅರಣ್ಯ ಸಮಿತಿ ರಚನೆಯಾದ ನಂತರ ಈ ನೆಡುತೋಪಿನ ಉಸ್ತುವಾರಿ ಗ್ರಾಮ ಅರಣ್ಯ ಸಮಿತಿಗೆ ಬಂದಿತು.

ಮುಕುಂದೂರಿನ ಗ್ರಾಮ ಅರಣ್ಯ ಸಮಿತಿ ಈಗ ಈ ಗೋಮಾಳದಲ್ಲಿರುವ ಮರಗಿಡಗಳ ರಕ್ಷಣೆಗೆ ನೀತಿ, ನಿಯಮಗಳನ್ನು ರೂಪಿಸಿದೆ. ಊರಿಗೆ ಸಮೀಪವಾಗಿಯೇ ಇರುವ ಏಳು ಎಕರೆ ಖಾಲಿ ಪ್ರದೇಶದಲ್ಲಿ ನೆಡುತೋಪು ಬೆಳೆಸುವ ಯೋಜನೆಯನ್ನು ಹಾಕಿಕೊಂಡಿದೆ.

ಮುಕುಂದೂರಿನ ಗ್ರಾಮ ಅರಣ್ಯ ಸಮಿತಿ ನಮ್ಮ ರಾಜ್ಯದ ಅತ್ಯಂತ ಶ್ರೀಮಂತ ಅರಣ್ಯ ಸಮಿತಿಯಾಗಿದೆ. ಆದರೆ ಈ ಆದಾಯ ಬಂದಿರುವುದು ಅರಣ್ಯ ಸಂರಕ್ಷಣೆಯ ಚಟುವಟಿಕೆಗಳಿಂದಲ್ಲ. ಊರಿನಲ್ಲಿರುವ ಹೇಮಾವತಿ ನದೀ ತೀರದಿಂದ ಮರಳು ಸಾಗಿಸುವ ಲಾರಿಗಳಿಂದ ರಾಯಧನ ವಸೂಲಿ ಮಾಡುವುದರಿಂದ ಹೀಗೆ ದೊರೆತ ಹಣದಲ್ಲಿ ಹತ್ತುಲಕ್ಷರೂ.ಗಳನ್ನು ಹಾಸನದ ಡಿ.ಸಿ.ಸಿ.ಬ್ಯಾಂಕ್‌ನಲ್ಲಿ ಠೇವಣಿಯಾಗಿಟ್ಟಿದೆ. ಊರಿನ ಮೂರು ಮುಖ್ಯ ಪಂಗಡಗಳಾದ

ಲಿಂಗಾಯಿತರು, ಗೌಡರು ಹಾಗೂ ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ಮದುವೆ ಮುಂತಾದ ಸಮಾರಂಭಗಳಿಗೆಂದು ತಲಾ 30,000.00 ರೂ.ಗಳ ವೆಚ್ಚದಲ್ಲಿ ಪಾತ್ರೆ ಪಗಡ, ಶಾಮಿಯಾನಗಳನ್ನು ಒದಗಿಸಿದೆ. ಈ ಹಣದಲ್ಲಿ ಉಳಿದ ಭಾಗವನ್ನು ಊರಿನ ಎಲ್ಲ ಕುಟುಂಬಗಳಿಗೆ ತಲಾ 10,000/-ಗಳಂತೆ ಹಂಚಲಾಗಿದೆ. ಕ್ಷೇತ್ರಕಾರ್ಯದ ಸಂದರ್ಶನದ ಸಮಯದಲ್ಲಿ ಎಲ್ಲ ಕುಟುಂಬಗಳೂ ಇದನ್ನು ದೃಢಪಡಿಸಿವೆ. ಆದರೆ ಅರಣ್ಯ ಸಂರಕ್ಷಣೆಯ ಚಟುವಟಿಕೆಗಳಿಗೆ ಈ ಹಣದಿಂದ ಒಂದು ರೂಪಾಯಿಯನ್ನೂ ಗ್ರಾಮ ಅರಣ್ಯ ಸಮಿತಿ ಖರ್ಚುಮಾಡಿಲ್ಲ. ನೆಡುತೋಪಿನ ಸಂರಕ್ಷಣೆಯ ಎಲ್ಲ ಕೆಲಸಗಳಿಗೂ ಹಣ ಅರಣ್ಯ ಇಲಾಖೆಯಿಂದಲೇ ಬರಬೇಕೆಂಬುದು ನಿರ್ವಹಣಾ ಸಮಿತಿಯ ಸದಸ್ಯರ, ಅದಕ್ಕಿಂತ ಹೆಚ್ಚಾಗಿ ಅಧ್ಯಕ್ಷರ ವಾದ. ಅಧ್ಯಕ್ಷರ ಮಾತಿಗೆ ಇಲ್ಲ ಎಂದಿಲ್ಲ. ಅರಣ್ಯ ಇಲಾಖೆಯೂ ಅಧ್ಯಕ್ಷರ ಹಾದಿಯನ್ನು ಹಿಡಿಯುವುದರಿಂದ ಇಲಾಖೆ ಹಾಗೂ ಅರಣ್ಯ ಸಮಿತಿಯ ಸಂಬಂಧ ಚೆನ್ನಾಗಿಯೇ ಇದೆ.

ಪ್ರಮಾಣಾತ್ಮಕ ಸಹಭಾಗಿತ್ವ

ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯ ಸಮುದಾಯದ ಸಹಭಾಗಿತ್ವಕ್ಕೆ ಇರುವ ಅವಕಾಶಗಳನ್ನು ನಾವು ಈಗಾಗಲೇ ಪರಿಶೀಲಿಸಿದ್ದೇವೆ. ಈ ಅವಕಾಶಗಳನ್ನು ಸ್ಥಳೀಯ ಸಮುದಾಯ ಎಷ್ಟರಮಟ್ಟಿಗೆ ಬಳಸಿಕೊಂಡಿದೆಯೆಂಬುದು ಮುಂದಿನ ಪ್ರಶ್ನೆ. ಸಹಭಾಗಿತ್ವದ ಮೌಲ್ಯ ಮಾಪನಕ್ಕಾಗಿ ಕೆಲವು ಸೂಚ್ಯಂಕಗಳನ್ನು ಬಳಸಿಕೊಳ್ಳಲಾಗಿದೆ. ಈ ಸೂಚ್ಯಂಕಗಳನ್ನು ಸಹಭಾಗಿತ್ವ ಅಭಿವೃದ್ಧಿ ಸಾಹಿತ್ಯ, ಜಂಟೀ ಅರಣ್ಯ ಯೋಜನೆಯ ಪ್ರಾರಂಭಿಕ ವಿಮರ್ಶೆಗಳು ಹಾಗೂ ಈ ಸಂಶೋಧನೆಯ ಪರಿಶೋಧನೆಯ ಹಂತದಲ್ಲಿ ಅರಣ್ಯಾಧಿಕಾರಿಗಳು, ಜಂಟೀ ಅರಣ್ಯ ಯೋಜನೆಯ ಸಲಹಾಕಾರರು ಮತ್ತು ವಿದ್ವಾಂಸರುಗಳ ಜೊತೆಗೆ ನಡೆಸಿದ ಚರ್ಚೆಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಈ ಸೂಚ್ಯಂಕಗಳನ್ನು ಪ್ರಮಾಣಾತ್ಮಕ ಹಾಗೂ ಗುಣಾತ್ಮಕಗಳೆಂದು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಪ್ರಮಾಣಾತ್ಮಕ ಸೂಚ್ಯಂಕಗಳು ಭಾಗವಹಿಸುವಿಕೆಯ ವ್ಯಾಪ್ತಿ ಮತ್ತು ಪ್ರಮಾಣಗಳ ಮಾಪನ ಮಾಡಿದರೆ ಗುಣಾತ್ಮಕ ಸೂಚ್ಯಂಕಗಳು ಭಾಗವಹಿಸುವಿಕೆಯ ಸ್ವರೂಪ ಮತ್ತು ಗುಣಗಳನ್ನು ನಿರೂಪಿಸಿ, ವಿವರಣೆ ನೀಡುತ್ತವೆ.

ಪ್ರಮಾಣಾತ್ಮಕ ಸೂಚ್ಯಂಕಗಳು

1. ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ: ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ ಕುಟುಂಬ ಆಧಾರಿತವಾದದ್ದು. ಆದ್ದರಿಂದ ಗ್ರಾಮ ಅರಣ್ಯ ಸಮಿತಿಯಲ್ಲಿ ಮತ್ತು ಆ ಮೂಲಕವಾಗಿ ಜಂಟೀ ಅರಣ್ಯ ಯೋಜನೆಯಲ್ಲಿ ಎಷ್ಟು ಕುಟುಂಬಗಳು ಭಾಗವಹಿಸುತ್ತಿವೆ, ಅಥವಾ ಭಾಗವಹಿಸುವಿಕೆಯ ಬುನಾದಿ ಎಷ್ಟು ವಿಶಾಲವಾಗಿದೆಯೆಂಬುದನ್ನು ಇದು ಸೂಚಿಸುತ್ತದೆ. ಈ ಸೂಚ್ಯಂಕ ಭಾಗವಹಿಸು

ವಿಕೆಯ ಗುಣಮಟ್ಟವನ್ನು ಸೂಚಿಸುವುದಿಲ್ಲವಾದರೂ, ಈ ಸಂದರ್ಭದಲ್ಲಿ ಭಾಗವಹಿಸುವಿಕೆಗೆ ಸದಸ್ಯತ್ವ ಅಗತ್ಯವೆಂಬುದನ್ನು ನಾವು ಮರೆಯುವಂತಿಲ್ಲ

2. ಸಭೆಗಳಲ್ಲಿನ ಹಾಜರಾತಿ : ಗ್ರಾಮ ಅರಣ್ಯ ಸಮಿತಿ, ಗ್ರಾಮ ಹಾಗೂ ಸರ್ಕಾರದ (ಇಲ್ಲಿ ಅರಣ್ಯ ಇಲಾಖೆ) ನಡುವಿನ ಮುಖ್ಯ ಕೊಂಡಿ. ಈ ಸಮಿತಿಯ ಸಭೆಗಳಲ್ಲಿ ಭಾಗವಹಿಸುವುದರಿಂದ ಅರಣ್ಯ ಯೋಜನೆಗೆ ಸಂಬಂಧಿಸಿದ ಅರಿವಿನ ಮಟ್ಟ ಹೆಚ್ಚುತ್ತದೆ. ತಮ್ಮ ಆದ್ಯತೆಗಳನ್ನು ಸೂಚಿಸುವ, ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ, ನಿರ್ಧಾರಗಳನ್ನು ಪ್ರಭಾವಿಸುವ ಅವಕಾಶಗಳು ದೊರೆಯುತ್ತವೆ. ಅರಣ್ಯ ಇಲಾಖೆಯ ಸಿಬ್ಬಂದಿಗೂ ಇದು ಅನ್ವಯಿಸುತ್ತದೆ.

3. ನಿಯತಕಾಲಿಕ ಸಭೆಗಳು : ಗ್ರಾಮ ಅರಣ್ಯ ಸಮಿತಿಯ ಮಹಾಸಭೆ ವರ್ಷಕ್ಕೆ ಒಮ್ಮೆ ನಡೆಯಬೇಕು. ನಿರ್ವಹಣಾ ಸಮಿತಿಯ ಸಭೆ ತಿಂಗಳಿಗೆ ಒಮ್ಮೆ ಅಥವಾ ಅಗತ್ಯವಿದ್ದರೆ ಅದಕ್ಕಿಂತ ಮುಂಚೆಯೂ ನಡೆಯಬಹುದು. ನಿರ್ವಹಣಾ ಸಮಿತಿಯ ಸಭೆಯಲ್ಲಿ, ಗ್ರಾಮ ಅರಣ್ಯ ಸಮಿತಿಯ ಯಾವ ಸದಸ್ಯ ಬೇಕಾದರೂ ಭಾಗವಹಿಸಬಹುದು. ಅವಧಿಗೆ ತಕ್ಕ ಹಾಗೆ ನಡೆಯುವ, ಉತ್ತಮ ಹಾಜರಾತಿಯಿರುವ ಸಭೆಗಳು ಉತ್ತಮ ಭಾಗವಹಿಸುವಿಕೆಯನ್ನು ಸೂಚಿಸುತ್ತವೆ.

4. ತರಬೇತಿಗಳು : ತರಬೇತಿಯಿಂದ ಕೌಶಲ್ಯ ಹೆಚ್ಚುತ್ತದೆ. ಅರಿವಿನ ಮಟ್ಟ ಏರುತ್ತದೆ. ಭಾಗವಹಿಸುವಿಕೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ಸಾಮರ್ಥ್ಯ ನಿರ್ಮಾಣ ಪ್ರಯತ್ನವಾದ ತರಬೇತಿ, ಭಾಗವಹಿಸುವಿಕೆಯನ್ನು ಹೆಚ್ಚಿಸುವ ಬದ್ಧತೆಯನ್ನು ಸೂಚಿಸುತ್ತದೆ.

5. ಸಸ್ಯ ಪ್ರಭೇದಗಳ ಹಾಗೂ ಸಸಿಗಳನ್ನು ನೆಡುವ ಜಾಗದ ಆಯ್ಕೆ : ಎಂತಹ ಮರಗಳನ್ನು ನೆಡಬೇಕು, ಯಾವ ಜಾಗದಲ್ಲಿ ನೆಡಬೇಕು ಎಂಬುದು ಗ್ರಾಮ ಅರಣ್ಯ ಸಮಿತಿ ಪ್ರಾರಂಭದ ಹಂತದಲ್ಲಿ ಮಾಡಬೇಕಾದ ಅತ್ಯಂತ ಮಹತ್ವದ ನಿರ್ಧಾರಗಳು. ಅರಣ್ಯ ಸಮಿತಿಯ ಸಹಭಾಗಿತ್ವದ ಮೂಲಕವಾಗಿ ಕೈಗೊಳ್ಳಬೇಕಾದ ಈ ನಿರ್ಧಾರಗಳನ್ನು ಗ್ರಾಮ ಅರಣ್ಯ ಸಮಿತಿ ಎಷ್ಟು ಸಮರ್ಥವಾಗಿ ಮಾಡುತ್ತದೆ. ಎಷ್ಟು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುತ್ತದೆ ಎಂಬುದು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಮೇಲೆ ಗ್ರಾಮ ಅರಣ್ಯ ಸಮಿತಿಗಿರುವ ಹಿಡಿತವನ್ನು ಸೂಚಿಸುತ್ತದೆ.

6. ನಿಯಮ ಪಾಲನೆ-ನಿಯಮ ಉಲ್ಲಂಘನೆ : ಅರಣ್ಯ ಸಂರಕ್ಷಣೆ, ಅಭಿವೃದ್ಧಿ, ಅಕ್ರಮ ಕಡಿತದ ತಡೆ, ಒತ್ತುವರಿ ಮತ್ತು ಅತಿಮೇಯಾಟವನ್ನು ತಡೆಯುವುದು ಮುಂತಾದವುಗಳಿಗೆ ಸಂಬಂಧಿಸಿದಂತೆ ಎಲ್ಲ ಸದಸ್ಯರ ಒಪ್ಪಿಗೆಯಿಂದ ನೀತಿ ನಿಯಮಗಳನ್ನು ಗ್ರಾಮ ಅರಣ್ಯ ಸಮಿತಿ ರೂಪಿಸುತ್ತದೆ, ಜಾರಿಗೆ ತರುತ್ತದೆ. ಈ ನಿಯಮಗಳು ಎಷ್ಟರ ಮಟ್ಟಿಗೆ ಪಾಲನೆಯಾಗಿದೆ, ಉಲ್ಲಂಘನೆಯ ಪ್ರಕರಣಗಳಿವೆಯೇ ಎಂಬುದು ಸಮುದಾಯದ ಬದ್ಧತೆ, ಜವಾಬ್ದಾರಿಯುತ ನಡವಳಿಕೆಯನ್ನು ಸೂಚಿಸುತ್ತದೆ.

7. ಮಹಿಳೆಯರ ಭಾಗವಹಿಸುವಿಕೆ : ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಪ್ರಯತ್ನಗಳು ಈಗ ನಡೆದಿವೆ. ಜಂಟೀ ಅರಣ್ಯ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಉತ್ತಮವಾಗಿದ್ದಲ್ಲಿ, ಅವರ ಅಗತ್ಯಗಳಿಗೆ ಯೋಜನೆ ಸ್ಪಂದಿಸಿದ್ದಲ್ಲಿ ಅದು ಒಳ್ಳೆಯ ಬೆಳವಣಿಗೆಯಾಗುತ್ತದೆ.

ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ

ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವಕ್ಕೆ ಕುಟುಂಬವೇ ಮೂಲ ಘಟಕ. ಜಂಟೀ ಅರಣ್ಯ ಯೋಜನೆಗೆ ಸಂಬಂಧಪಟ್ಟ ಕರ್ನಾಟಕ ಸರ್ಕಾರದ 1993ರ ಆದೇಶದಂತೆ ಒಂದು ಕುಟುಂಬದಿಂದ ಒಬ್ಬ ವಯಸ್ಕ ಸದಸ್ಯ ಗ್ರಾಮ ಅರಣ್ಯ ಸಮಿತಿಯಲ್ಲಿರುತ್ತಾನೆ. ಕ್ಷೇತ್ರಕಾರ್ಯ ಮಾಡಿದ ಹಳ್ಳಿಗಳಲ್ಲಿ ಉದ್ದೂರೊಂದನ್ನು ಬಿಟ್ಟರೆ ಉಳಿದ ನಾಲ್ಕು ಹಳ್ಳಿಗಳಲ್ಲಿ ಶೇಕಡಾ 80ಕ್ಕೂ ಹೆಚ್ಚು ಕುಟುಂಬಗಳು ಅರಣ್ಯ ಸಮಿತಿಯಲ್ಲಿ ಪ್ರಾತಿನಿಧ್ಯ ಪಡೆದಿವೆ(ಕೋಷ್ಟಕ 9). ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ ಭಾಗವಹಿಸುವಿಕೆಯ ಗುಣಮಟ್ಟವನ್ನು ಸೂಚಿಸುವುದಿಲ್ಲವಾದ ಕಾರಣ ಇದು ಹೊರನೋಟಕ್ಕೆ ಮಾತ್ರ ಉತ್ತಮ ಪ್ರಮಾಣದ ಭಾಗವಹಿಸುವಿಕೆ ಎನ್ನಿಸುತ್ತದೆ. ಆದರೆ ಇದರ ಒಳ ಹೊಕ್ಕರೆ ದೊರೆಯುವ ಚಿತ್ರವೇ ಬೇರೆ.

ಶೇಕಡಾ 85ರಷ್ಟು ಕುಟುಂಬಗಳು ಸದಸ್ಯರಾಗಿರುವ ಮುಕುಂದೂರಿನಲ್ಲಿ 54 ಭೂರಹಿತ ಕುಟುಂಬಗಳಿವೆ. ಇದರಲ್ಲಿ ಪ್ರಶ್ನಾವಳಿ ಆಧಾರಿತ ಕ್ಷೇತ್ರ ಸಂದರ್ಶನಕ್ಕಾಗಿ ಆಯ್ದ 14 ಕುಟುಂಬಗಳ ಮಾದರಿಯಲ್ಲಿ, 10ಕುಟುಂಬಗಳು ಅರಣ್ಯ ಸಮಿತಿಯಲ್ಲಿ ಸದಸ್ಯತ್ವಪಡೆದಿದೆ. ಆದರೆ ಈ ಹತ್ತು ಸದಸ್ಯರಲ್ಲಿ 7 ಮಂದಿಗೆ ತಾವು ಸದಸ್ಯರಾಗಿರುವುದು ತಿಳಿದಿಲ್ಲ. ಅವರ ಹೆಸರುಗಳು ಮಾತ್ರ ಸದಸ್ಯರ ಪಟ್ಟಿಯಲ್ಲಿದೆ. ಅತಿ ಸಣ್ಣ ರೈತರ 11ಕುಟುಂಬಗಳಲ್ಲಿ 8 ಕುಟುಂಬಗಳಿಂದ ಸದಸ್ಯರಿದ್ದಾರೆ. ಆದರೆ ಈ 8ರಲ್ಲಿ 5 ಸದಸ್ಯರಿಗೆ ಇದರ ಅರಿವಿಲ್ಲ. ಉದ್ದೂರಿನಲ್ಲಿಯೂ ಸರಿಸುಮಾರು ಇದೇ ಪರಿಸ್ಥಿತಿಯಿದೆ. ಈ ಎರಡೂ ಹಳ್ಳಿಗಳಲ್ಲಿ ಸದಸ್ಯತ್ವದ ಶುಲ್ಕವನ್ನು ಊರಿನ ರಾಜಕೀಯ ಧುರೀಣರೇ ಕಟ್ಟಿದ್ದಾರೆ. ಸದಸ್ಯರು ತಾವೇ ಶುಲ್ಕವನ್ನು ಕಟ್ಟಿಲ್ಲವಾದ ಕಾರಣ ಸದಸ್ಯತ್ವದ ಬಗ್ಗೆ ಅವರಿಗೆ ತಿಳಿದಿಲ್ಲದಿರುವುದು ಸಹಜವೆನ್ನಿಸುತ್ತದೆ. ಉಳಿದ ಮೂರು ಹಳ್ಳಿಗಳಲ್ಲಿ ಈ ಪರಿಸ್ಥಿತಿ ಕಾಣುವುದಿಲ್ಲ.

ಗ್ರಾಮ ಅರಣ್ಯ ಸಮಿತಿಗೆ ಒಂದು ಕುಟುಂಬದಿಂದ ಒಬ್ಬ ಸದಸ್ಯ ಎಂದಾಗ, ಬಹುತೇಕ ಸಂದರ್ಭಗಳಲ್ಲಿ ಆ ಸದಸ್ಯ ಪುರುಷನೇ ಆಗಿರುತ್ತಾನೆ. ಇದರಿಂದಾಗಿ ಅರಣ್ಯ ಸಮಿತಿಯ ಸದಸ್ಯತ್ವದಿಂದ ಮಹಿಳೆ ಹೊರಗುಳಿಯುವ ಸಾಧ್ಯತೆಯಿತ್ತು. ಇದನ್ನು ತಪ್ಪಿಸಲು 16.12.1996ರಂದು ಕರ್ನಾಟಕ ರಾಜ್ಯ ಸರ್ಕಾರ ತಿದ್ದುಪಡಿಯೊಂದನ್ನು ತಂದು, ಗಂಡ(ಅಥವಾ ಹೆಂಡತಿ) 2/- ರೂ.ಶುಲ್ಕ ಕೊಟ್ಟು ಅರಣ್ಯ ಸಮಿತಿಯ ಸದಸ್ಯನಾ(ಳಾ)ಗಿದ್ದರೆ. ಹೆಂಡತಿ(ಅಥವಾ ಗಂಡ) ತಾನಾಗಿಯೇ, ಶುಲ್ಕ ಕೊಡದೇ ಅರಣ್ಯ ಸಮಿತಿಯ ಸದಸ್ಯತ್ವ ಪಡೆಯುತ್ತಾಳೆ(ನೆ). ಮಹಿಳೆಯರಿಗೆ ಗ್ರಾಮ ಅರಣ್ಯ

ಸಮಿತಿಯಲ್ಲಿ ಹೆಚ್ಚಿನ ಸ್ಥಾನ, ಸಂಖ್ಯಾ ಬಲಗಳನ್ನು ಒದಗಿಸುವ ಈ ತಿದ್ದುಪಡಿ ಈ ಐದೂ ಹಳ್ಳಿಗಳಲ್ಲಿ ಸದಸ್ಯರ ಸಂಖ್ಯೆಯಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ. ಉದ್ದೂರು ಮತ್ತು ಮುಕುಂದೂರಿನ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರಿಗಾಗಲೀ, ನಿರ್ವಹಣಾ ಸಮಿತಿಯ ಸದಸ್ಯರಿಗಾಗಲೀ ಈ ತಿದ್ದುಪಡಿಯ ಬಗ್ಗೆ ತಿಳಿದಿಲ್ಲ. ಉಳಿದ ಮೂರೂ ಅರಣ್ಯ ಸಮಿತಿಗಳಿಗೆ ಈ ವಿಷಯ ತಿಳಿದಿದೆ. ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿಯಲ್ಲಿ ಈಗಾಗಲೇ ಶೇಕಡಾ 34ರಷ್ಟು ಮಹಿಳೆಯರು ಇರುವುದರಿಂದ ಈ ತಿದ್ದುಪಡಿಯಿಂದ ನಮಗೆ ಪ್ರಯೋಜನವಿಲ್ಲವೆನ್ನುವುದು ಇಲ್ಲಿನ ಅಧ್ಯಕ್ಷರ ಅಭಿಪ್ರಾಯ. ಮರಡವಳ್ಳಿಯಲ್ಲಿ ಈ ಪ್ರಮಾಣ ಶೇಕಡಾ 12ರಷ್ಟಿದೆ. 'ಇರುವಷ್ಟು ಮಹಿಳೆಯರೇ ಗುಣಮಟ್ಟದ ಕೆಲಸ ಮಾಡುತ್ತಾರೆ. ಆದ್ದರಿಂದ ಮತ್ತಷ್ಟು ಮಹಿಳಾ ಸದಸ್ಯರೇಕೆ' ಎನ್ನುವುದು ಮರಡವಳ್ಳಿಯ ಮಾತಾದರೆ ಶೇಕಡಾ 7ರಷ್ಟು ಮಹಿಳೆಯರಿರುವ ಹನಿಯಾ ಈ ವಿಷಯದಲ್ಲಿ ತೀರಾ ನಿರಾಸಕ್ತವಾಗಿದೆ. ಈ ಯಾವ ಹಳ್ಳಿಗಳಲ್ಲಿಯೂ ಅರಣ್ಯ ಇಲಾಖೆಯು ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ.

ಕ್ಷೇತ್ರಕಾರ್ಯದ ಐದೂ ಹಳ್ಳಿಗಳಲ್ಲಿ ಅನೇಕ ಕುಟುಂಬಗಳು ಗ್ರಾಮ ಅರಣ್ಯ ಸಮಿತಿಯಿಂದ, ಆ ಮೂಲಕವಾಗಿ ಜಂಟೀ ಅರಣ್ಯ ಯೋಜನೆಯಿಂದ ಹೊರಗುಳಿದಿವೆ. ಈ ರೀತಿ ಗ್ರಾಮ ಅರಣ್ಯ ಸಮಿತಿಯಲ್ಲಿ ಸದಸ್ಯತ್ವ ಪಡೆಯದಿರುವ ಕುಟುಂಬಗಳ ಪ್ರಮಾಣ ಕುಮಾರನಹಳ್ಳಿಯಲ್ಲಿ ಶೇಕಡಾ 11ರಷ್ಟಿದ್ದರೆ, ಗರಿಷ್ಟ ಪ್ರಮಾಣ ಶೇಕಡಾ 52 ಉದ್ದೂರಿನಲ್ಲಿದೆ. ಕುಟುಂಬಗಳು ಈ ರೀತಿ ಹೊರಗುಳಿಯಲು ಕಾರಣಗಳೇನು ಎಂಬುದು ಮುಖ್ಯವಾದ ವಿಷಯವಾಗುತ್ತದೆ. ಕ್ಷೇತ್ರಕಾರ್ಯದಿಂದ ತಿಳಿದುಬರುವಂತೆ ಈ ಪರಿಸ್ಥಿತಿಗೆ ಮೂರು ಮುಖ್ಯ ಕಾರಣಗಳಿವೆ. ಅವುಗಳೆಂದರೆ ಯೋಜನೆಯ ಬಗ್ಗೆ ಅರಿವಿನ ಕೊರತೆ, ಅರಣ್ಯ ಇಲಾಖೆಗೆ ಜನರ ಅಗತ್ಯಗಳ ಬಗ್ಗೆ ತಿಳಿದೇ ಇಲ್ಲ, ಹೀಗಾಗಿ ಯೋಜನೆಯಿಂದ ಯಾವ ಪ್ರಯೋಜನವೂ ಇಲ್ಲವೆಂಬ ಭಾವನೆ ಹಾಗೂ ಯೋಜನೆಯಿಂದ ಉಪಕಾರಕ್ಕಿಂತ ತೊಂದರೆಯೇ ಹೆಚ್ಚೆಂಬ ಅಭಿಪ್ರಾಯ.

ಕುಮಾರನಹಳ್ಳಿಯಲ್ಲಿ ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ ಪಡೆಯದಿರುವ ಎಲ್ಲ ಹನ್ನೆರಡು ಕುಟುಂಬಗಳೂ ಭೂರಹಿತರ ಗುಂಪಿಗೆ ಸೇರಿದ್ದು, ಈ ಕುಟುಂಬಗಳು ಸ್ಥಳೀಯವಾಗಿ ಕೆಲಸ ದೊರೆಯದಿದ್ದಾಗ ಚಿಕ್ಕಮಗಳೂರಿನ ಕಾಫಿ ತೋಟಗಳಿಗೆ ವಲಸೆ ಹೋಗುತ್ತವೆ. ವಲಸೆ ಹೋಗುವ ಕುಟುಂಬಗಳಿಗೆ ಸದಸ್ಯತ್ವ ನೀಡುವ, ಅಂತಿಮ ಹಂಚಿಕೆಯಲ್ಲಿ ಪಾಲನ್ನು ನೀಡುವ ವಿಷಯಗಳ ಬಗ್ಗೆ ಸರಕಾರಿ ಆದೇಶ ಮೌನವಾಗಿರುವುದರಿಂದ ಈ ಕುಟುಂಬಗಳಿಗೆ ಸದಸ್ಯತ್ವ ದೊರೆತಿಲ್ಲ. ಸದಸ್ಯರಲ್ಲದಿರುವುದರಿಂದ ಹಳ್ಳಿಯಲ್ಲಿ ಇರುವ ಸಮಯದಲ್ಲಿ-ಸಾಮಾನ್ಯವಾಗಿ ಜೂನ್ ತಿಂಗಳಿಂದ ಫೆಬ್ರವರಿ, ಮಾರ್ಚ್‌ವರೆಗೆ-ಅರಣ್ಯದಿಂದ ಅಗತ್ಯ ಜೀವ ದ್ರವ್ಯಗಳನ್ನು ಪಡೆಯುವುದರ ಮೇಲೆ ನಿರ್ಬಂಧವಿದೆ. ಸದಸ್ಯರಲ್ಲದಿರುವುದರಿಂದ ಈ ಹನ್ನೆರಡು ಕುಟುಂಬಗಳಿಗೆ, ಬೀಡಿ ಎಲೆಗಳನ್ನು

ಸಂಗ್ರಹಿಸಲು ಅಗತ್ಯವಾದ ಗುರುತಿನ ಚೀಟಿಯನ್ನು ಗ್ರಾಮ ಅರಣ್ಯ ಸಮಿತಿ ನೀಡಿಲ್ಲ. ಜಂಟೀ ಅರಣ್ಯ ಯೋಜನೆ ಬರುವ ಮೊದಲು ಊರಿನಲ್ಲಿದ್ದ ಸಮಯದಲ್ಲಿ ಬೀಡಿ ಎಲೆಯ ಸಂಗ್ರಹಣೆ, ಮಾರಾಟಗಳಿಂದ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿದ್ದ ಈ ಕುಟುಂಬದ ಪಾಲಿಗೆ ಅದು ನಿಂತಿದೆ. ಜಂಟೀ ಅರಣ್ಯ ಯೋಜನೆ ತಮ್ಮನ್ನು ಮತ್ತಷ್ಟು ದಾರಿದ್ರ್ಯಕ್ಕೆ, ಬಡತನಕ್ಕೆ ತಳ್ಳಿದೆಯೆಂಬುದು ಈ ವಲಸೆ ಹೋಗುವ ಕುಟುಂಬಗಳ ದೂರು.

ಕ್ಷೇತ್ರಕಾರ್ಯದ ಉಳಿದ ನಾಲ್ಕು ಹಳ್ಳಿಗಳಲ್ಲಿ ವಲಸೆ ಹೋಗುವ ಕುಟುಂಬಗಳಿಲ್ಲ. ಅಲ್ಲಿನ ಸಮಸ್ಯೆಗಳೇ ಬೇರೆ ರೀತಿಯದು. ಮರಡವಳ್ಳಿಯಲ್ಲಿ 44 ಕುಟುಂಬಗಳು ಅರಣ್ಯ ಸಮಿತಿಯಿಂದ ಹೊರಗುಳಿದಿವೆ. ಇದರಲ್ಲಿ ಏಳು ಕುಟುಂಬಗಳು ಅನುಕೂಲಸ್ಥರದು. ಈ ಏಳು ಕುಟುಂಬಗಳು ಸೇರಿ ಸುಮಾರು 28 ಹೆಕ್ಟೇರುಗಳಷ್ಟು ಅರಣ್ಯಭೂಮಿಯನ್ನು ಒತ್ತುವರಿ ಮಾಡಿಕೊಂಡಿವೆ. ಗ್ರಾಮ ಅರಣ್ಯ ಸಮಿತಿಗೆ ಸದಸ್ಯರಾಗಿ, ಜಂಟೀ ಅರಣ್ಯ ಯೋಜನೆಗೆ ಬೆಂಬಲ ನೀಡಿ, ಭಾಗವಹಿಸಿದರೆ ಒತ್ತುವರಿ ಮಾಡಿಕೊಂಡಿರುವ ಭೂಮಿ ಕೈ ತಪ್ಪುತ್ತದೆ ಎಂಬ ಭಯ ಈ ಕುಟುಂಬಗಳಿಗಿದೆ. ಹೀಗಾಗಿ ಈ ಕುಟುಂಬಗಳು ಜಂಟೀ ಅರಣ್ಯ ಯೋಜನೆಯನ್ನು ಮೊದಲಿನಿಂದಲೂ ವಿರೋಧಿಸುತ್ತ ಬಂದಿವೆ. ಈ ಏಳು ಶ್ರೀಮಂತ ಕುಟುಂಬಗಳ ಬಳಿ ಕೂಲಿ ಕೆಲಸ ಮಾಡುವ ಸುಮಾರು 15 ಕುಟುಂಬಗಳೂ ಗ್ರಾಮ ಅರಣ್ಯ ಸಮಿತಿಯಲ್ಲಿ ಇಲ್ಲ. ಸದಸ್ಯತ್ವ ಪಡೆದು ಯೋಜನೆಯಲ್ಲಿ ಭಾಗವಹಿಸಿದರೆ, ಹೆಚ್ಚು ಕಡಿಮೆ ವರ್ಷವಿಡೀ ದೊರೆಯುವ ಕೂಲಿ ಕೆಲಸಕ್ಕೆ, ಹೊಟ್ಟೆ ಪಾಡಿಗೆ ತೊಂದರೆಯಾದೀತೆಂಬ ಭಯ ಈ ಹದಿನೈದು ಕುಟುಂಬಗಳಿಗಿದೆ. ಯೋಜನೆಯಿಂದ ಯಾವ ಪ್ರಯೋಜನವೂ ಇಲ್ಲವೆಂಬ ಭಾವನೆ ಉಳಿದ ಕುಟುಂಬಗಳನ್ನು ದೂರದಲ್ಲಿಟ್ಟಿವೆ. ಹನಿಯಾದಲ್ಲಿ ಸದಸ್ಯರಲ್ಲದ ಹನ್ನೆರಡು ಕುಟುಂಬಗಳಲ್ಲಿ ಎಂಟು ಭೂರಹಿತರದು, ನಾಲ್ಕು ದೊಡ್ಡ ರೈತರದು. ಭೂರಹಿತರ ಎಂಟು ಕುಟುಂಬಗಳಿಗೆ, ಊರಿನ ಶ್ರೀಮಂತ ಕುಟುಂಬಗಳಿಗೆ ಸೇರಿದ ತೋಟದಲ್ಲಿ ಕೂಲಿ ಕೆಲಸ ದೊರೆಯುತ್ತಿದೆ. ಇದರಲ್ಲಿ ಮೂರು ಕುಟುಂಬಗಳಿಗೆ ಸೇರಿದ ಜನ ನೇರವಾಗಿ ನಿರ್ವಹಣಾ ಸಮಿತಿಯ ಸದಸ್ಯರ ಮನೆಯಲ್ಲೇ ಕೆಲಸ ಮಾಡುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಇದೇ ಭೂರಹಿತರು, ಸಮಿತಿಯ ಸಭೆಯಲ್ಲಿ ಧಣಿಗಳ ಎದುರಿಗೆ ನಿಂತು ಮಾತನಾಡುವುದು ಸಾಧ್ಯವಿಲ್ಲ. "ನಮಗೆ ದಿನನಿತ್ಯದ ಊಟ ಮುಖ್ಯ ಸ್ವಾಮಿ, ಅರಣ್ಯ ಸಮಿತಿ ನಮಗೆ ಯಾಕೆ ಬೇಕು, ಅದೇನು ನಮಗೆ ಅನ್ನ ಕೊಡ್ತದಾ?" ಎನ್ನುವುದು ಕೊಲ್ಲಾನಾಯ್ಕ ಮತ್ತು ಗುತ್ಯಪ್ಪ ಅವರ ಪ್ರಶ್ನೆ.

ಅರಣ್ಯ ಸಂಪನ್ಮೂಲವಿಲ್ಲದ ಉದ್ದೂರು ಮತ್ತು ಮುಕುಂದೂರುಗಳಲ್ಲಿ ಗ್ರಾಮ ಅರಣ್ಯ ಸಮಿತಿಯಿಂದ ಹೊರಗಿರುವ ಭೂರಹಿತ ಹಾಗೂ ಅತಿ ಸಣ್ಣ ರೈತರ ಕುಟುಂಬಗಳು ಜಂಟೀ ಅರಣ್ಯ ಯೋಜನೆಯಿಂದ ತಮ್ಮ ಜೀವನ ಮತ್ತಷ್ಟು ಕಷ್ಟಕರವಾಗಿದೆ ಎನ್ನುತ್ತಾರೆ. ಉದ್ದೂರಿನ ಏಳು ಭೂರಹಿತ ಕುಟುಂಬಗಳು, ಬೇಸಿಗೆಯಲ್ಲಿ ಕೆರೆಯಂಗಳದಿಂದ ಗೋಡು ಮಣ್ಣು ತೆಗೆದು ಮಾರಾಟ

ಮಾಡುತ್ತಿದ್ದರು; ಇಟ್ಟಿಗೆಯನ್ನೂ ಸುಡುತ್ತಿದ್ದರು. ಜಂಟೀ ಅರಣ್ಯ ಯೋಜನೆ ಬಂದ ಮೇಲೆ ಕೆರೆಯಂಗಳದ ಪ್ರದೇಶ ಯೋಜನೆಯ ವ್ಯಾಪ್ತಿಗೆ ಬಂದಿರುವುದರಿಂದ ಈ ಕುಟುಂಬಗಳು ಅಲ್ಲಿ ಕಾಲಿಡುವಂತಿಲ್ಲ. ಇದೇ ರೀತಿ ಮುಕುಂದೂರಿನಲ್ಲಿ 10ಭೂರಹಿತ ಕುಟುಂಬಗಳು, ಊರಿನಲ್ಲಿರುವ ಮೂರು ಗೋಮಾಳಗಳಿಂದ ಸಣ್ಣ ಪ್ರಮಾಣದಲ್ಲಿ ಉರುವಲು, ಮೇವು ಹಾಗೂ ಗಿಡಮೂಲಿಕೆಗಳನ್ನು ಸಂಗ್ರಹಿಸುತ್ತಿದ್ದುದಾಗಿ ಸಂದರ್ಶನದ ಸಮಯದಲ್ಲಿ ತಿಳಿಸಿದ್ದಾರೆ. ಊರೊಟ್ಟಿನ ಆಸ್ತಿಯಾದ ಈ ಗೋಮಾಳವನ್ನು ಜಂಟೀ ಅರಣ್ಯ ಯೋಜನೆಯಡಿಯಲ್ಲಿ ತಂದಿದ್ದರಿಂದ ಅಂತಹ ಸಮುದಾಯದ ಆಸ್ತಿಯಿಂದ ದೊರೆಯುತ್ತಿದ್ದ ಅಲ್ಪಸ್ವಲ್ಪ ಜೀವದ್ರವ್ಯಗಳಿಗೂ ಈ ಹಳ್ಳಿಗಳಲ್ಲಿ ಸಂಚಕಾರ ಬಂದಿದೆ.

ಉದ್ದೂರು, ಮುಕುಂದೂರುಗಳ ಬಗ್ಗೆ ಇನ್ನೊಂದು ಮಾತು ಇಲ್ಲಿ ಅಗತ್ಯವಾಗುತ್ತದೆ. ಉದ್ದೂರಿನ 250 ಕುಟುಂಬಗಳಲ್ಲಿ 120 ಕುಟುಂಬಗಳು(48%) ಮಾತ್ರ ಸದಸ್ಯತ್ವ ಪಡೆದಿವೆ. ಶೇಕಡಾ 52%ರಷ್ಟು ಕುಟುಂಬಗಳು ಯೋಜನೆಯಿಂದ ಹೊರಗುಳಿದಿವೆ. ಉದ್ದೂರಿನಲ್ಲಿರುವ ತೀವ್ರ ರಾಜಕೀಯ ಪೈಪೋಟಿಯೇ ಇದಕ್ಕೆ ಕಾರಣ. ಅಧ್ಯಕ್ಷರು ಪ್ರಬಲ ಕೋಮಿಗೆ ಸೇರಿದವರು. ವರ್ಚಸ್ಸಿರುವ ರಾಜಕಾರಣಿಗಳು. ಗ್ರಾಮ ಅರಣ್ಯ ಸಮಿತಿಯ ರಚನೆಯ ಸಂದರ್ಭದಲ್ಲಿ ಹೊಳೆನರಸೀಪುರದ ವಲಯ ಅರಣ್ಯಾಧಿಕಾರಿಗಳು ಹಳ್ಳಿಗೆ ಬಂದು ಭೇಟಿಯಾದದ್ದು ಒಂದು ಪಂಗಡದ, ಒಂದು ರಾಜಕೀಯ ಪಕ್ಷಕ್ಕೆ ಸೇರಿದ ನಾಯಕರನ್ನು ಮಾತ್ರ. ಅರಣ್ಯ ಇಲಾಖೆಯ ಈ ವರ್ತನೆಯಿಂದ ಮತ್ತೊಂದು ರಾಜಕೀಯ ಪಕ್ಷಕ್ಕೆ ಸೇರಿದ ನಾಯಕರು, ಅವರ ಜಾತಿಗೆ ಸೇರಿದ ಕುಟುಂಬಗಳು ಅರಣ್ಯ ಸಮಿತಿಗೆ ಸದಸ್ಯರನ್ನು ಕಳುಹಿಸಲಿಲ್ಲ. ಈ ಇಬ್ಬರು ರಾಜಕೀಯ ವಿರೋಧಿಗಳ ನಡುವೆ ಸಿಕ್ಕಿಬೀಳುವ ಉಸಾಬರಿಯೇ ಬೇಡವೆಂದು ನಿರ್ಧರಿಸಿದ ಅನೇಕ ಕುಟುಂಬಗಳು ಜಂಟೀ ಅರಣ್ಯ ಯೋಜನೆಯಿಂದ ದೂರ ಉಳಿದಿವೆ. ಮುಕುಂದೂರಿನಲ್ಲೂ ಇದೇ ಪರಿಸ್ಥಿತಿಯಿದ್ದರೂ ಅಲ್ಲಿ ಒಂದೇ ಪಕ್ಷದ್ದು ಹೆಚ್ಚಿನ ಪ್ರಾಬಲ್ಯ. ಹೀಗಾಗಿ ಅವರು ಹೇಳಿದರೆ ಮುಗಿಯಿತು. ಆದ್ದರಿಂದಲೇ ಅಲ್ಲಿನ ಸದಸ್ಯತ್ವ ಶೇಕಡಾ 85.

ಜಂಟೀ ಅರಣ್ಯ ಯೋಜನೆ ಸ್ಥಳೀಯ ಸಮುದಾಯದ ಸಹಭಾಗಿತ್ವಕ್ಕೆ ಅವಕಾಶವೊದಗಿಸಿ ಕೊಡುತ್ತದೆ. ಗ್ರಾಮ ಅರಣ್ಯ ಸಮಿತಿ, ಜಂಟೀ ಅರಣ್ಯ ಯೋಜನೆಯ ಸಂದರ್ಭದಲ್ಲಿ ಹೊಸದಾಗಿ ಜನ್ಮ ತಳೆದ ಸಂಸ್ಥೆ. ಈ ಸಮಿತಿಯ ಮೂಲಕವಾಗಿ ಭಾಗವಹಿಸುವಿಕೆ ಅನುಷ್ಠಾನಕ್ಕೆ ಬರುತ್ತದೆ. ಸಮಿತಿಯ ಸದಸ್ಯತ್ವ ಭಾಗವಹಿಸುವಿಕೆಯ ಮೊದಲನೆಯ ಹೆಜ್ಜೆ. ಆದರೆ ಅವಕಾಶವೊದಗಿಸಿದ ಮಾತ್ರಕ್ಕೆ ಜನ ಅದನ್ನು ಸಂಪೂರ್ಣವಾಗಿ ಬಳಸಿಕೊಂಡು ಯೋಜನೆಯಲ್ಲಿ ಭಾಗವಹಿಸುತ್ತಾರೆಂದು ಹೇಳುವಂತಿಲ್ಲ. ಇದನ್ನು ಕ್ಷೇತ್ರಕಾರ್ಯದ ಹಳ್ಳಿಗಳು ಸ್ಪಷ್ಟವಾಗಿ ತೋರಿಸಿ ಕೊಟ್ಟಿವೆ. ತಾತ್ವಿಕವಾಗಿ, ಗ್ರಾಮ ಅರಣ್ಯ ಸಮಿತಿ ಪ್ರಜಾಪ್ರಭುತ್ವದ ತತ್ವಗಳಿಗನುಸಾರವಾಗಿ ಕೆಲಸ ಮಾಡಬೇಕಾದ, ಮಾಡಬಲ್ಲ

ಸಂಸ್ಥೆ. ಆದರೆ ಅದು ಶೂನ್ಯದಲ್ಲಿ ಕೆಲಸ ಮಾಡುವುದಿಲ್ಲ. ಅದರ ಕೆಲಸ ಸ್ಥಳೀಯ ಪರಿಸರದಲ್ಲಿ, ಸ್ಥಳೀಯ ಸಮಾಜದಲ್ಲಿ. ಈ ಸಮಾಜದಲ್ಲಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಅಸಮಾನತೆಗಳು ಗ್ರಾಮ ಅರಣ್ಯ ಸಮಿತಿಯಲ್ಲೂ ಪ್ರತಿಬಿಂಬಿತವಾಗುತ್ತವೆ. ಈ ಅಸಮಾನತೆಗಳೇ ಸ್ಥಳೀಯ ಹಂತದಲ್ಲಿ ಭಾಗವಹಿಸುವಿಕೆಯನ್ನು ಪ್ರಭಾವಿಸುತ್ತವೆ. ಇಂತಹ ಸನ್ನಿವೇಶದಲ್ಲಿ ಸರ್ಕಾರೇತರ ಸಂಸ್ಥೆಗಳು ದುರ್ಬಲ ವರ್ಗದವರ ಹಿಂದೆ ನಿಂತಲ್ಲಿ ಭಾಗವಹಿಸುವಿಕೆ ಸ್ವಲ್ಪಮಟ್ಟಿಗೆ ಉತ್ತಮಗೊಳ್ಳುವ ಸಾಧ್ಯತೆಯಿದೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಇದನ್ನು ಕಾಣಬಹುದು.

ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ, ಗ್ರಾಮ ಅರಣ್ಯ ಸಮಿತಿಯಿಂದ ಹೊರಗಿರುವ ಭೂರಹಿತರು ಮತ್ತು ಸಣ್ಣ ರೈತರಲ್ಲಿ, ಜಂಟೀ ಅರಣ್ಯ ಯೋಜನೆಯಿಂದ ಯಾವ ಪ್ರಯೋಜನವೂ ಇಲ್ಲವೆಂಬ ಅಭಿಪ್ರಾಯವಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಗ್ರಾಮ ಅರಣ್ಯ ಸಮಿತಿಯ ಸದಸ್ಯರಾಗಿ, ಜಂಟೀ ಅರಣ್ಯ ಯೋಜನೆಯಲ್ಲಿ ಭಾಗವಹಿಸಿದಾಗ ಪ್ರಾರಂಭದಲ್ಲಿಯೇ, ಹಲವಾರು ತೊಂದರೆಗಳು ಎದುರಾಗುತ್ತವೆ. ಇವುಗಳಲ್ಲಿ ಮುಖ್ಯವಾದುವೆಂದರೆ

- ಅರಣ್ಯದಿಂದ ಪಡೆಯುತ್ತಿರುವ ದಿನ ನಿತ್ಯದ ಬಳಕೆಯ ವಸ್ತುಗಳ ಮೇಲೆ, ಸ್ವಯಂಪ್ರೇರಿತವಾಗಿ ಕಡಿವಾಣ ಹಾಕಿಕೊಂಡು ಬಳಕೆಯ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಬೇಕು.
- ಉರುವಲು, ಮೇವು ಮುಂತಾದವುಗಳನ್ನು ಸಂಗ್ರಹಿಸಲು ಹಳ್ಳಿಯಿಂದ ದೂರ ಹೋಗಬೇಕು. ಹೆಚ್ಚಿನ ದೈಹಿಕ ಶ್ರಮದ ಈ ಕೆಲಸಕ್ಕೆ ಹೆಚ್ಚಿನ ಸಮಯವೂ ಬೇಕು.
- ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ಗ್ರಾಮ ಅರಣ್ಯ ಸಮಿತಿ ರೂಪಿಸುವ ನಿಯಮ, ನಿಯಂತ್ರಣಗಳನ್ನು ಜಾರಿ ಮಾಡಲು ಶ್ರಮಿಸಬೇಕು.

ಗ್ರಾಮ ಅರಣ್ಯ ಸಮಿತಿಯ ಎಲ್ಲ ಸದಸ್ಯರನ್ನೂ ಈ ತೊಂದರೆಗಳು ಏಕ ಪ್ರಕಾರವಾಗಿ ತಾಕುವುದಿಲ್ಲ. ಅರಣ್ಯ ಸಂಪನ್ಮೂಲಗಳ ಮೇಲೆ ಹೆಚ್ಚಿನ ಅವಲಂಬನೆಯಿಲ್ಲದ ಸದಸ್ಯರ ಮೇಲೆ ಅದು ಯಾವ ಪರಿಣಾಮವನ್ನೂ ಬೀರುವುದಿಲ್ಲ. ಭೂಮಿಯಿರುವ ಸದಸ್ಯರು ತಮ್ಮ ಅಗತ್ಯಗಳ ಸಾಕಷ್ಟು ಭಾಗವನ್ನು ಅಲ್ಲಿಂದಲೇ ಪೂರೈಸಿಕೊಳ್ಳಲು ಪ್ರಯತ್ನಿಸಿದರೆ, ಅನುಕೂಲಸ್ಥರು ಬೇಕೆಂದಾಗ ತಮ್ಮ ಅಗತ್ಯಗಳನ್ನು ಹಣ ಕೊಟ್ಟು, ಕೊಂಡು ಪೂರೈಸಿಕೊಳ್ಳುತ್ತಾರೆ. ದನಕರುಗಳು ಅರಣ್ಯಕ್ಕೆ ಹೋಗದಂತೆ, ಕಳ್ಳಕಾಕರು ಮರಗಿಡಗಳನ್ನು ಕಡಿಯದಂತೆ ಕಾವಲು ಕಾಯುವ ಕೆಲಸದಲ್ಲಿ ಭಾಗವಹಿಸುವವರು ಬಡವರು, ಭೂರಹಿತರೇ ಹೊರತಾಗಿ ಅನುಕೂಲಸ್ಥರಲ್ಲ. ಹೀಗಾಗಿ ಎಲ್ಲ ದೃಷ್ಟಿಗಳಿಂದಲೂ ಈ ಗುಂಪಿಗೆ ಸೇರಿದ ಜನರೇ ಹೆಚ್ಚಿನ ತೊಂದರೆಗೊಳಗಾಗುತ್ತಾರೆ. ವಿಧಿಯಿಲ್ಲದೇ ಅವರು ಈ ತೊಂದರೆಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಇದು ಭಾಗವಹಿಸುವಿಕೆಗೆ ಅವರು ತೆರಬೇಕಾದ 'ಬೆಲೆ'ಯಾಗುತ್ತದೆ. ಜಂಟೀ ಅರಣ್ಯ ಯೋಜನೆಯಿಂದ ಭವಿಷ್ಯದಲ್ಲಿ ದೊರೆಯುವ

ಫಲ, ಪ್ರಯೋಜನಗಳು ಈ ಬೆಲೆಗೆ ತಕ್ಕುದಾಗಿರಬೇಕು. ಪ್ರಾರಂಭದಲ್ಲಿ ಈ ಜನರು ಅನುಭವಿಸುವ ನಷ್ಟವನ್ನು ಅವು ಸರಿದೂಗಿಸಬೇಕು. ಈ ಪ್ರಯೋಜನಗಳು, ಭವಿಷ್ಯದಲ್ಲಿ ದೊರೆಯುವ ಮರಮಟ್ಟಿನ ಪ್ರಮಾಣ, ಚೌಬೀನೆಯನ್ನು ಬಿಟ್ಟು ದೊರೆಯುವ ಇತರ ಅರಣ್ಯ ಉತ್ಪನ್ನಗಳ ಮೊತ್ತ, ಈ ಉತ್ಪನ್ನಗಳಿಗಿರುವ ಬೇಡಿಕೆ, ಮಾರುಕಟ್ಟೆಯ ವ್ಯವಸ್ಥೆ, ದೊರೆಯಬಹುದಾದ ಆದಾಯ ಮುಂತಾದವುಗಳ ಮೇಲೆ ಅವಲಂಬಿತವಾಗಿವೆ. ಆದರೆ ಅರಣ್ಯ ಇಲಾಖೆಗೆ ಈ ಬಗ್ಗೆ ಸ್ಪಷ್ಟ ಕಲ್ಪನೆಯಿಲ್ಲ, ಸ್ಥೂಲವಾದ ಅಂದಾಜೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಅರಣ್ಯ ಇಲಾಖೆಗಾಗಲೀ, ಗ್ರಾಮ ಅರಣ್ಯ ಸಮಿತಿಗಾಗಲೀ ಹಳ್ಳಿಯಲ್ಲಿನ ಎಲ್ಲ ಕುಟುಂಬಗಳ, ಅದರಲ್ಲೂ ಭೂರಹಿತರ, ಬಡವರ ಮನವೊಲಿಸಿ ಜಂಟೀ ಅರಣ್ಯ ಯೋಜನೆಯಲ್ಲಿ ಭಾಗವಹಿಸುವಂತೆ ಮಾಡುವುದು ಅಸಾಧ್ಯವಾಗುತ್ತದೆ. ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿ, ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವದ ಸೂಚ್ಯಂಕ ಇದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಸಭೆಗಳಲ್ಲಿನ ಹಾಜರಾತಿ

ತಾತ್ವಿಕವಾಗಿ, ಗ್ರಾಮ ಅರಣ್ಯ ಸಮಿತಿ ಕ್ರಿಯಾಶೀಲವಾಗಿ ಕೆಲಸ ಮಾಡಬಲ್ಲ ಒಂದು ಗ್ರಾಮ ಸಂಸ್ಥೆ. ಈ ಸಂಸ್ಥೆಗೆ ಅರಣ್ಯಾಧಿಕಾರಿಯನ್ನು ಪದನಿಮಿತ್ತ ಸದಸ್ಯ ಕಾರ್ಯದರ್ಶಿಯನ್ನಾಗಿ ಮಾಡುವ ಮೂಲಕವಾಗಿ, ಕರ್ನಾಟಕ ಅರಣ್ಯ ಇಲಾಖೆ ಸಮುದಾಯ ಸಂಘಟನೆಗೆ ಮತ್ತು ಅದರ ಮೂಲಕವಾಗಿ ಅರಣ್ಯ ಸಂರಕ್ಷಣೆ, ನಿರ್ವಹಣೆಗಳಿಗೆ ವಿಧ್ಯುಕ್ತವಾದ ಬೆಂಬಲ ನೀಡಿದೆ. ಗ್ರಾಮ ಅರಣ್ಯ ಸಮಿತಿ ಯಾವುದೇ ಕಾನೂನುಬದ್ಧ ಸಂಸ್ಥೆಗೆ ಸಮವಾಗಿ ಬ್ಯಾಂಕಿನ ಸಾಲ, ಸರ್ಕಾರದ ಅನುದಾನಗಳನ್ನು ಪಡೆದು, ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು, ಸ್ವತಂತ್ರವಾಗಿ ತನ್ನ ಕಾಲುಗಳ ಮೇಲೆ ತಾನು ನಿಲ್ಲಬಹುದು. ಇಂತಹ ಸಮಿತಿಯ ಸಭೆಗಳಲ್ಲಿ ಸದಸ್ಯರ ಭಾಗವಹಿಸುವಿಕೆ ಹೆಚ್ಚಿದಷ್ಟೂ ಸಮಿತಿಯ ಅಂತಃಸತ್ವವೂ ಹೆಚ್ಚುತ್ತದೆ. ಗ್ರಾಮ ಅರಣ್ಯ ಸಮಿತಿಯ ಸಭೆಗಳಲ್ಲಿನ ತಪ್ಪದ ಹಾಜರಾತಿ ಉತ್ತಮವಾದ ಸಹಭಾಗಿತ್ವವನ್ನು ಸೂಚಿಸುತ್ತದೆ.

ಗ್ರಾಮ ಅರಣ್ಯ ಸಮಿತಿ ಎರಡು ರೀತಿಯ ಸಭೆಗಳನ್ನು ನಡೆಸುತ್ತದೆ. ಮೊದಲನೆಯದು ವರ್ಷಕ್ಕೊಮ್ಮೆ ನಡೆಸಬೇಕಾದ ಮಹಾಸಭೆ. ಗ್ರಾಮ ಅರಣ್ಯ ಸಮಿತಿಯ ಎಲ್ಲ ಸದಸ್ಯರೂ ಇದರಲ್ಲಿ ಭಾಗವಹಿಸಲು ಅವಕಾಶವಿದೆ. ಎರಡನೆಯದು ನಿರ್ವಹಣಾ ಸಮಿತಿಯ ಸಭೆ. ಇದರಲ್ಲಿ ಚುನಾಯಿತ ಸದಸ್ಯರು ಹಾಗೂ ಪದನಿಮಿತ್ತ ಸದಸ್ಯರು ಭಾಗವಹಿಸಬಹುದು. ಇದರೊಂದಿಗೆ ಗ್ರಾಮ ಅರಣ್ಯ ಸಮಿತಿಯ ಯಾವುದೇ ಸದಸ್ಯ ಕೂಡ ನಿರ್ವಹಣಾ ಸಮಿತಿಯ ಸಭೆಯಲ್ಲಿ ಭಾಗವಹಿಸಬಹುದು. ಆದರೆ ಮತ ಹಾಕುವ ಪ್ರಸಂಗ ಬಂದರೆ ಅವರಿಗೆ ಮತಹಾಕುವ ಅಧಿಕಾರವಿರುವುದಿಲ್ಲ. ನಿರ್ವಹಣಾ ಸಮಿತಿ ಪ್ರತಿ ತಿಂಗಳೂ ನಡೆಯುವುದರಿಂದ, ಅದರಲ್ಲಿನ ಭಾಗವಹಿಸುವಿಕೆಯ ಅಂಕಿ-ಅಂಶಗಳನ್ನು ಕೋಷ್ಟಕ 10ರಲ್ಲಿ ತೋರಿಸಲಾಗಿದೆ.

ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ತಪ್ಪದೇ ಭಾಗವಹಿಸುವವರ ಪ್ರಮಾಣ ಅನುಕ್ರಮವಾಗಿ ಶೇಕಡಾ 63 ಮತ್ತು 69ರಷ್ಟಿದ್ದರೆ ಭಾಗವಹಿಸದೇ ಇರುವವರ ಪ್ರಮಾಣ ಹನಿಯಾ(62%) ಮತ್ತು ಉದ್ದೂರಿನಲ್ಲಿ(60%) ಹೆಚ್ಚಾಗಿದೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ತಪ್ಪದೇ ಭಾಗವಹಿಸುವವರ ಪಟ್ಟಿಯಲ್ಲಿ ಅಲ್ಪ ಪ್ರಮಾಣದಲ್ಲಾದರೂ ಭೂರಹಿತರು ಮತ್ತು ಮಹಿಳೆಯರನ್ನು ಕಾಣಬಹುದು. ಆದರೆ ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಇದು ಕಾಣುವುದಿಲ್ಲ. ಸಭೆಗಳಲ್ಲಿನ ಹಾಜರಾತಿ ಸದಸ್ಯ ಕಾರ್ಯದರ್ಶಿಯಾದ ಅರಣ್ಯಾಧಿಕಾರಿಯೂ ಸೇರಿದಂತೆ ಪದನಿಮಿತ್ತ ಸದಸ್ಯರಿಗೂ ಅನ್ವಯಿಸುತ್ತದೆ. ನಿರ್ವಹಣಾ ಸಮಿತಿಯ ಎಲ್ಲ ಸಭೆಗಳನ್ನೂ ಸದಸ್ಯ ಕಾರ್ಯದರ್ಶಿ ಕರೆದು, ಅಧ್ಯಕ್ಷರು ನಡೆಸಿಕೊಡಬೇಕು. ಆದರೆ ಆಶ್ಚರ್ಯದ ಸಂಗತಿಯೆಂದರೆ ಕ್ಷೇತ್ರಕಾರ್ಯದ ಎಲ್ಲ ಹಳ್ಳಿಗಳಲ್ಲೂ ಸದಸ್ಯ ಕಾರ್ಯದರ್ಶಿ ಕೆಲವೊಮ್ಮೆ ಭಾಗವಹಿಸುವವರ ಪಟ್ಟಿಯಲ್ಲಿರುವುದು. ಸದಸ್ಯ ಕಾರ್ಯದರ್ಶಿ ಅಥವಾ ಅಧ್ಯಕ್ಷರು ಅಥವಾ ಇಬ್ಬರೂ ಹಾಜರಿಲ್ಲದಿದ್ದರೂ, ಐದು ಜನ ಚುನಾಯಿತ ಸದಸ್ಯರಿದ್ದಲ್ಲಿ ಸಭೆಯನ್ನು ನಡೆಸಬಹುದಾದರೂ ಬಹುತೇಕ ಸಭೆಗಳಿಗೆ ಅರಣ್ಯಾಧಿಕಾರಿ ಬರದೇ ಇದ್ದಾಗ ಅದು ಅರಣ್ಯ ಇಲಾಖೆ ಗ್ರಾಮ ಅರಣ್ಯ ಸಮಿತಿಗೆ ನೀಡುವ ಮಹತ್ವದ ಸೂಚಿಯಾಗುತ್ತದೆ. 1.1.2001 ರಿಂದ 31.12.2002ರ ಎರಡು ವರ್ಷಗಳ ಅವಧಿಯಲ್ಲಿ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ನಡೆದ ಸಭೆಗಳಲ್ಲಿ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಶೇಕಡಾ 54 ಮತ್ತು 52ರಷ್ಟು ಸಭೆಗಳಲ್ಲಿ ಸದಸ್ಯ ಕಾರ್ಯದರ್ಶಿ ಭಾಗವಹಿಸಿದ್ದರೆ, ಹನಿಯಾದಲ್ಲಿ ಶೇಕಡಾ 22ರಷ್ಟು ಸಭೆಗಳಲ್ಲಿ ಮಾತ್ರ ಅರಣ್ಯಾಧಿಕಾರಿ ಭಾಗವಹಿಸಿದ್ದಾರೆ. ಉದ್ದೂರು ಮತ್ತು ಮುಕುಂದೂರಿನಲ್ಲಿ ಈ ಪ್ರಮಾಣ ಶೇಕಡಾ 77 ಮತ್ತು 71ರಷ್ಟಿದೆ(ಕೋಷ್ಟಕ 11). ಕ್ಷೇತ್ರಕಾರ್ಯದ ಸ್ಥಳೀಯ ಸನ್ನಿವೇಶದ ಪರಿಚಯವಿಲ್ಲದಿದ್ದರೆ ಉದ್ದೂರು, ಮುಕುಂದೂರುಗಳ ಮೇಲಿನ ಅಂಕಿ-ಅಂಶ ಹೊಸಬರನ್ನು ದಿಕ್ಕು ತಪ್ಪಿಸಬಹುದು. ಶೇಕಡಾ 77 ಮತ್ತು 71 ಸಭೆಗಳಲ್ಲಿ ಅರಣ್ಯಾಧಿಕಾರಿ ಭಾಗವಹಿಸಿರುವುದು ಅಧ್ಯಕ್ಷರ ರಾಜಕೀಯ ವರ್ಚಸ್ಸಿನ ಸೂಚಿಯೇ ವಿನಃ ಅರಣ್ಯ ಇಲಾಖೆಯ ಆಸಕ್ತಿಯ ಸೂಚಿಯಲ್ಲವೆಂಬುದು ಸಭೆಯ ಕಾರ್ಯಕಲಾಪಗಳನ್ನು ಪರೀಕ್ಷಿಸಿದಾಗ ತಿಳಿಯುತ್ತದೆ.

ಪದನಿಮಿತ್ತ ಸದಸ್ಯರಲ್ಲಿ ಅರಣ್ಯಾಧಿಕಾರಿಯ ಜೊತೆಗೆ ಗ್ರಾಮ ಲೆಕ್ಕಿಗ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯಿಂದ ನೇಮಕಗೊಂಡ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಯೂ ಇರುತ್ತಾರೆ. ಆದರೆ ಕ್ಷೇತ್ರಕಾರ್ಯದ ಎಲ್ಲ ಹಳ್ಳಿಗಳಲ್ಲಿ ಗ್ರಾಮ ಲೆಕ್ಕಿಗ ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿ ಭಾಗವಹಿಸದವರ ಪಟ್ಟಿಯಲ್ಲಿದ್ದಾರೆ. ಕುಮಾರನಹಳ್ಳಿ, ಮರಡವಳ್ಳಿಗಳ ಎಲ್ಲ ಸಭೆಗಳಲ್ಲೂ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಯಿದ್ದರೆ, ಹನಿಯಾದಲ್ಲಿ ಅಪರೂಪಕ್ಕೆ ಭಾಗವಹಿಸಿದ್ದಾರೆ. ಉದ್ದೂರು, ಮುಕುಂದೂರುಗಳಲ್ಲಿ ಇಂತಹ ಸಂಸ್ಥೆಗಳೇ ಇಲ್ಲ.

ಗ್ರಾಮ ಅರಣ್ಯ ಸಮಿತಿಯ ಸದಸ್ಯರಾಗಿದ್ದೂ, ಸಭೆಗಳಲ್ಲಿ ಭಾಗವಹಿಸದಿರಲು ಕಾರಣಗಳೇನು ಎಂಬುದನ್ನು ಕ್ಷೇತ್ರಕಾರ್ಯದ ಸಂದರ್ಶನಗಳಲ್ಲಿ ತಿಳಿಯಲು ಪ್ರಯತ್ನಿಸಲಾಯಿತು. ಉದ್ದೂರು ಮತ್ತು ಮುಕುಂದೂರುಗಳನ್ನು ಬಿಟ್ಟು ಉಳಿದ ಮೂರು ಹಳ್ಳಿಗಳಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಯ ಅನುಕೂಲವನ್ನು ನೋಡಿಕೊಂಡು ಸಭೆಯ ದಿನಾಂಕ ಮತ್ತು ವೇಳೆಯನ್ನು ಗೊತ್ತುಪಡಿಸಲಾಗುತ್ತಿದೆ. ಅನೇಕ ಸಮಯದಲ್ಲಿ ಇದು ಇತರ ಸದಸ್ಯರಿಗೆ ಹೊಂದುವುದಿಲ್ಲ. ಸಭೆಯ ದಿನಾಂಕ ಮತ್ತು ವೇಳೆಯನ್ನು ಎಲ್ಲ ಸದಸ್ಯರಿಗೂ ತಿಳಿಸಬೇಕು. ಇದು ಬಾಯಿಮಾತಿನ ಮೂಲಕ ಹರಡುತ್ತದೆ. ಇದರಲ್ಲಿ ಮಾಹಿತಿ ಮುಟ್ಟದಿರುವ ಸಾಧ್ಯತೆಗಳೂ ಉಂಟು. ಉದ್ದೂರು, ಮುಕುಂದೂರುಗಳಲ್ಲಿ ಅಧ್ಯಕ್ಷರ ಸಮಯ ಮಾತ್ರ ಮುಖ್ಯ. ಉಳಿದವೆಲ್ಲವೂ ಗೌಣ. ಆದರೆ ಹೆಚ್ಚಿನ ಶ್ರದ್ಧೆ ಕಂಡುಬರುವ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಸದಸ್ಯರು ಸಭೆಯಲ್ಲಿ ಭಾಗವಹಿಸುವಂತೆ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಕುಮಾರನಹಳ್ಳಿಯಲ್ಲಿ ನಿರ್ವಹಣಾ ಸಮಿತಿಯ ಸಭೆ ಪ್ರತಿತಿಂಗಳ ಮೊದಲ ಸೋಮವಾರ ರಾತ್ರಿ ಎಂಟು ಗಂಟೆಗೆ ನಡೆದರೆ, ಮರಡವಳ್ಳಿಯಲ್ಲಿ ತಿಂಗಳ ಕಡೆಯ ಭಾನುವಾರ ಬೆಳಿಗ್ಗೆ 11ಕ್ಕೆ ನಡೆಯುತ್ತದೆ. ಕುಮಾರನಹಳ್ಳಿಯಲ್ಲಿ ಮಹಿಳಾ ಸದಸ್ಯರು ಹಾಗೂ ಭೂರಹಿತರು ಬಂದ ಹೊರತು ಸಭೆ ಪ್ರಾರಂಭವಾಗುವುದಿಲ್ಲ. ಚರ್ಚೆಗೆ ಬರುವ ಪ್ರತಿಯೊಂದು ವಿಷಯದ ಬಗೆಗೂ ಅವರನ್ನು ಮಾತಾಡಲು ಪ್ರೇರೇಪಿಸುವ ಕೆಲಸವನ್ನು ಮರಡವಳ್ಳಿಯಲ್ಲಿ ಮಾಡಲಾಗುತ್ತಿದೆ.

ಸಭೆ ನಡೆಯುವ ಸ್ಥಳವೂ ಸಭೆಯಲ್ಲಿನ ಹಾಜರಾತಿಯನ್ನು ಪ್ರಭಾವಿಸುತ್ತದೆಂಬ ಅಂಶ ಕ್ಷೇತ್ರಾಧ್ಯಯನಗಳಿಂದ ಸ್ಪಷ್ಟವಾಗುತ್ತದೆ. ಕುಮಾರನಹಳ್ಳಿಯಲ್ಲಿ ನಿರ್ವಹಣಾ ಸಮಿತಿಯ ಸಭೆ ಹಳ್ಳಿಯ ದೇವಸ್ಥಾನದ ಆವರಣದಲ್ಲಿ ನಡೆದರೆ, ಮರಡವಳ್ಳಿಯಲ್ಲಿ ಶಾಲೆಯ ಅಂಗಳದಲ್ಲಿ ನಡೆಯುತ್ತದೆ. ಎರಡೂ ಸ್ಥಳಗಳು ಮುಕ್ತವಾದ, ಸಾರ್ವಜನಿಕ ಜಾಗಗಳು. ಉಳಿದ ಮೂರು ಹಳ್ಳಿಗಳಲ್ಲಿ ಸಭೆ ಸೇರಲು ಈ ರೀತಿ ನಿಗದಿತವಾದ ಸ್ಥಳವಿಲ್ಲ. ದೇವಸ್ಥಾನ, ನೆಡುತೋಪುಗಳೊಡನೆ ಅಧ್ಯಕ್ಷರ ಮನೆಯಲ್ಲೂ ನಡೆಯುತ್ತದೆ. ಹನಿಯಾದಲ್ಲಿ ಅಧ್ಯಕ್ಷರು ಬ್ರಾಹ್ಮಣರು, ದೇವಸ್ಥಾನ 'ಮಡಿ'ಗೆ ಹೆಸರುವಾಸಿ. ಅಧ್ಯಕ್ಷರ ತೋಟದಲ್ಲಿನ ಕೂಲಿಯಾಳುಗಳು ಅಧ್ಯಕ್ಷರ ಮನೆಯಲ್ಲಿಯೇ ಆಗಲಿ, ದೇವಸ್ಥಾನದಲ್ಲಿಯೇ ಆಗಲಿ ಸಭೆಗೆ ಬರುವುದು ಹನಿಯಾದಲ್ಲಿ ಸಲ್ಲದ ವಿಷಯ. ಉದ್ದೂರು, ಮುಕುಂದೂರುಗಳಲ್ಲಿ ಅಧ್ಯಕ್ಷರ ಮನೆಯ ಪಡಸಾಲೆಯಲ್ಲಿ ನಡೆದ ಎಲ್ಲ ಸಭೆಗಳಲ್ಲಿ ಹಾಜರಾತಿ ಶೇಕಡಾ 40ರಷ್ಟು ಕಡಿಮೆಯಾಗಿರುವುದು ನಡಾವಳಿ ಪುಸ್ತಕಗಳಿಂದ ತಿಳಿದುಬರುತ್ತದೆ. ಉದ್ದೂರಿನಲ್ಲಂತೂ ಇದು ಎದ್ದು ಕಾಣುತ್ತದೆ. ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಸಂದರ್ಭಗಳಲ್ಲಿ ಕೆಲವು ಸದಸ್ಯರನ್ನು ಬರದಂತೆ ಮಾಡಬೇಕಾದಾಗ ಸಭೆಯನ್ನು ಅಧ್ಯಕ್ಷರ ಮನೆಯಲ್ಲಿಯೇ ನಡೆಸಲಾಗುತ್ತದೆ ಎಂಬ ವಿಷಯ ಸಂದರ್ಶನದ ಸಮಯದಲ್ಲಿ ಮತ್ತೆ ಮತ್ತೆ ಕೇಳಿಬಂತು. ಉದ್ದೂರಿನ ಗ್ರಾಮ ಅರಣ್ಯ ಸಮಿತಿಯ

ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗೆ ನಿಂತು, ಸೋತು, ಅನಂತರ ನಿರ್ವಹಣಾ ಸಮಿತಿಯ ಸದಸ್ಯರಾದ ವಿರೋಧೀ ಪಕ್ಷದ ವ್ಯಕ್ತಿಯನ್ನು, ಸಮಿತಿಯಿಂದ ಹೊರಗಟ್ಟಲು ಸದ್ಯದ ಅಧ್ಯಕ್ಷರು ಇದೇ ಉಪಾಯವನ್ನು ಬಳಸಿದ್ದಾರೆ ಎಂಬ ದೂರಿದೆ. ಮೂರು ಬಾರಿ ತಮ್ಮ ಮನೆಯಲ್ಲಿಯೇ ನಡೆದ ಸಭೆಗೆ ಎದುರಾಳಿ ಸದಸ್ಯರು ಗೈರು ಹಾಜರಾದ್ದರಿಂದ ಅವರ ನಿರ್ವಹಣಾ ಸಮಿತಿಯ ಸದಸ್ಯತ್ವವನ್ನು ನಿಯಮದಂತೆ ರದ್ದುಪಡಿಸಲಾಗಿದೆ.

ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ ಪಡೆದ ಮಾತ್ರಕ್ಕೆ ಸದಸ್ಯರು ಸಭೆಗಳಲ್ಲಿ ಭಾಗವಹಿಸುತ್ತಾರೆ ಎಂದು ನಿರೀಕ್ಷಿಸುವುದು ಸರಿಯಲ್ಲ. ಸಭೆ ನಡೆಯುವ ದಿನ, ವೇಳೆಗಳ ಬಗ್ಗೆ ಸಾಕಷ್ಟು ಮುಂಚಿನ ಮಾಹಿತಿ, ಬಹುತೇಕ ಸದಸ್ಯರಿಗೆ ಅನುಕೂಲವಾದ ವೇಳೆ, ಚರ್ಚೆಗೆ ಬರಲಿರುವ ವಿಷಯಗಳು, ಅವುಗಳ ಬಗ್ಗೆ ಅರಿವು, ಸದಸ್ಯರ ಬದುಕಿಗೆ ಈ ವಿಷಯಗಳ ಪ್ರಸಕ್ತತೆ ಮುಂತಾದ ಅಂಶಗಳು ಸಭೆಯಲ್ಲಿನ ಭಾಗವಹಿಸುವಿಕೆಯನ್ನು ಪ್ರಭಾವಿಸುತ್ತವೆ. ಇದರೊಡನೆ ಸದಸ್ಯರನ್ನು ಸಭೆಗಳಲ್ಲಿ ತಪ್ಪದೇ ಭಾಗವಹಿಸುವಂತೆ ಪ್ರೇರೇಪಿಸುವ ಜವಾಬ್ದಾರಿ ಅಧ್ಯಕ್ಷರು ಹಾಗೂ ಇನ್ನಿತರ ಪ್ರಜ್ಞಾವಂತ ಸದಸ್ಯರ ಮೇಲಿದೆ. ಸಭೆಯಲ್ಲಿ ಚರ್ಚೆಗೆ ಬರುವ ವಿಷಯಗಳು, ತೆಗೆದುಕೊಳ್ಳುವ ನಿರ್ಧಾರಗಳು ಜನರ ದಿನ ನಿತ್ಯದ ಬದುಕಿಗೆ ಪ್ರಸ್ತುತವಾದುದು, ಅವರ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವಂತಹದು ಎಂಬ ನಂಬಿಕೆ, ವಿಶ್ವಾಸ ಬೆಳೆದಾಗ ಮಾತ್ರ ಸದಸ್ಯರು ತಾವಾಗಿಯೇ ತಪ್ಪದಂತೆ ಸಭೆಗಳಲ್ಲಿ ಭಾಗವಹಿಸುತ್ತಾರೆ. ಇದರೊಡನೆ ಭೂರಹಿತರು, ಮಹಿಳೆಯರು ಸಭೆಯಲ್ಲಿ ಭಾಗವಹಿಸುವಂತೆ, ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವಂತೆ ಮಾಡಲು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಇವು ಸಾಧ್ಯವಾದಾಗ ಮಾತ್ರ ಭಾಗವಹಿಸುವಿಕೆ ಹೆಚ್ಚುತ್ತದೆ, ಹೆಚ್ಚು ಅರ್ಥಪೂರ್ಣವಾಗುತ್ತದೆ.

ನಿಯತಕಾಲಿಕ ಸಭೆಗಳು

ಗ್ರಾಮ ಅರಣ್ಯ ಸಮಿತಿಯ ಸಭೆಗಳಲ್ಲಿ ಸದಸ್ಯರ ಸಹಭಾಗಿತ್ವ ಉತ್ತಮವಾಗಿರಬೇಕಾದಲ್ಲಿ, ನಿಗದಿಪಡಿಸಿದ ಅಂತರಗಳಲ್ಲಿ ಸಮಿತಿಯ ಸಭೆಗಳು ಸರಿಯಾಗಿ ನಡೆಯಬೇಕು. ಜಂಟೀ ಅರಣ್ಯ ಯೋಜನೆಯ ಮಾರ್ಗದರ್ಶಿ ಸೂತ್ರಗಳಂತೆ ತಿಂಗಳಿಗೊಮ್ಮೆ ನಿರ್ವಹಣಾ ಸಮಿತಿಯ ಸಭೆ, ವರ್ಷಕ್ಕೊಮ್ಮೆ ಮಹಾಸಭೆ ನಡೆಯಬೇಕು(ನಿರ್ವಹಣಾ ಸಮಿತಿಯ ಸಭೆಯ ಅಂತರಕ್ಕೆ ಈಗ ತಿದ್ದುಪಡಿ ಬಂದಿದ್ದು ಮೂರು ತಿಂಗಳಿಗೊಮ್ಮೆ ಸಭೆ ನಡೆದರೆ ಸಾಕು). ಸಭೆಗಳು ಕ್ರಮಬದ್ಧವಾಗಿ ನಡೆದಾಗ ಮಾತ್ರ, ಸದಸ್ಯರಿಗೆ ಗ್ರಾಮ ಅರಣ್ಯ ಸಮಿತಿಯಲ್ಲಿ ಹಾಗೂ ಜಂಟೀ ಅರಣ್ಯ ಯೋಜನೆಯಲ್ಲಿ ವಿಶ್ವಾಸ ಮೂಡಿ ಬರಲು ಸಾಧ್ಯ. ಸದಸ್ಯರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು, ಅನುಮಾನಗಳನ್ನು ಬಗೆಹರಿಸಿಕೊಳ್ಳಲು, ವಿವಿಧ ವಿಷಯಗಳ ಬಗ್ಗೆ ಚರ್ಚಿಸಲು ಇರುವ ವೇದಿಕೆಯೆಂದರೆ ಈ ಸಭೆಗಳು. ಹೀಗಾಗಿ ಸಮುದಾಯದ ಸಹಭಾಗಿತ್ವವನ್ನು ಅನುಷ್ಠಾನಕ್ಕೆ ತರಲು ಸಮಯಕ್ಕೆ ಸರಿಯಾಗಿ ಸಭೆಗಳು ನಡೆಯುವಂತೆ ನೋಡಿಕೊಳ್ಳುವುದು ಬಹಳ ಮುಖ್ಯ.

ಕ್ಷೇತ್ರಾಧ್ಯಯನದ ಅವಧಿಯಲ್ಲಿ (1.1.2001 ರಿಂದ 31.12.2002), ಐದು ಹಳ್ಳಿಗಳಲ್ಲಿ ನಡೆದಿರುವ ಸಭೆಗಳ ಸಂಖ್ಯೆಯನ್ನು ಕೋಷ್ಟಕ 12ರಲ್ಲಿ ತೋರಿಸಲಾಗಿದೆ. ಕುಮಾರನಹಳ್ಳಿಯಲ್ಲಿ ಅಗತ್ಯಕ್ಕಿಂತ ಹೆಚ್ಚು ಸಭೆಗಳು ನಡೆದಿದ್ದರೆ, ಎರಡು ವರ್ಷಗಳ ಅವಧಿಯಲ್ಲಿ ಹನಿಯಾದಲ್ಲಿ 9 ಹಾಗೂ ಮುಕುಂದೂರಿನಲ್ಲಿ 7 ಸಭೆಗಳು ನಡೆದಿವೆ. ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಗೆ ಸಿದ್ಧತೆ, ಬೀಡಿ ಎಲೆಯ ಮಾರಾಟದಲ್ಲಿನ ತೊಂದರೆ, ಜಲಾನಯನ ಪ್ರದೇಶದ ಅಭಿವೃದ್ಧಿಗೆ ತರಬೇತಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಕುಮಾರನಹಳ್ಳಿಯ ನಿರ್ವಹಣಾ ಸಮಿತಿ ಒಂದೇ ತಿಂಗಳಿನಲ್ಲಿ ಮೂರು ಬಾರಿ ಸಭೆ ಸೇರಿರುವುದೂ ಉಂಟು. ಮರಡವಳ್ಳಿಯಲ್ಲೂ ಇದೇ ಮಾದರಿಯನ್ನು ಕಾಣಬಹುದು. ಈ ಎರಡೂ ಹಳ್ಳಿಗಳಲ್ಲಿ ತಿಂಗಳಿನ ನಿಗದಿತ ದಿನಾಂಕದಂದು, ನಿಗದಿತ ವೇಳೆಗೆ (ತಿಂಗಳ ಮೊದಲ ಸೋಮವಾರ ರಾತ್ರಿ 8 ಗಂಟೆಗೆ ಹಾಗೂ ಕಡೆಯ ಭಾನುವಾರ ಬೆಳಿಗ್ಗೆ 11ಕ್ಕೆ) ಸಭೆ ನಡೆಯುವ ವಿಷಯ ಎಲ್ಲರಿಗೂ ತಿಳಿದಿದೆ(ಎರಡೂ ಹಳ್ಳಿಗಳಲ್ಲಿ ಈ ದಿನಗಳು ಅನಿವಾರ್ಯ ಕಾರಣಗಳಿಂದ ಸಭೆ ನಡೆಯದಿರುವುದೂ ಉಂಟು). ಹನಿಯಾದಲ್ಲಿ ಪ್ರಾರಂಭದಲ್ಲಿ ಹೆಚ್ಚು ಕಡಿಮೆ ನಿಗದಿತ ಅಂತರಗಳಲ್ಲಿ ಸಭೆ ನಡೆದರೂ, ಅನಂತರ ಸಭೆಗಳ ನಡುವಿನ ಅಂತರ ಹೆಚ್ಚುತ್ತ ಹೋಗಿ, ಎಂಟು ತಿಂಗಳಲ್ಲಿ ಒಂದೇ ಒಂದು ಬಾರಿ ನಿರ್ವಹಣಾ ಸಮಿತಿ ಸಭೆ ಸೇರಿರುವುದೂ ಉಂಟು. ಇದಕ್ಕೆ ಬಹಳ ಮುಖ್ಯವಾದ ಕಾರಣವೆಂದರೆ ಹನಿಯಾದ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗಿದ್ದ ಪ್ರಾರಂಭದ ಉತ್ಸಾಹ ಮಾಯವಾದದ್ದು. ಇದಾದನಂತರ 'ಅರಣ್ಯ ಇಲಾಖೆಯೇ ತನಗೆ ಬೇಕಾದಾಗ ಸಭೆಯನ್ನು ಕರೆಯಲಿ' ಎಂಬುದು ಅರಣ್ಯ ಸಮಿತಿಯ ನಿಲುವಾದರೆ ಇಲಾಖೆಯ ನಿಲುವು ಇದಕ್ಕೆ ತದ್ವಿರುದ್ಧ. 'ಇಲಾಖೆಯ ಅಧಿಕಾರಿಯ ಅನುಕೂಲವನ್ನು ನೋಡಿಕೊಂಡು, ಅರಣ್ಯ ಸಮಿತಿಯೇ ಸಭೆಯ ದಿನಾಂಕವನ್ನು ಗೊತ್ತುಪಡಿಸಲಿ' ಎಂಬುದು ಇಲಾಖೆಯ ವಾದ. ಈ ಪ್ರತಿಷ್ಠೆಯ ಯುದ್ಧದಲ್ಲಿ ಎಂಟು ತಿಂಗಳ ಕಾಲದಲ್ಲಿ ಒಂದೇ ಒಂದು ಸಭೆಯೂ ನಡೆದಿಲ್ಲ.

ಅರಣ್ಯ ಇಲಾಖೆ ಮತ್ತು ಹನಿಯಾದ ಗ್ರಾಮ ಅರಣ್ಯ ಸಮಿತಿಗಳ ನಡುವಿನ ಈ ಶೀತಲ ಸಮರ ಕೆಳಕಂಡ ಪ್ರಶ್ನೆಗಳಿಗೆ ದಾರಿಮಾಡಿಕೊಡುತ್ತದೆ.

- ಪ್ರಾರಂಭದಿಂದಲೂ ಜಂಟೀ ಅರಣ್ಯಯೋಜನೆಯನ್ನು ವಿರೋಧಿಸುತ್ತ ಬಂದಿದ್ದ ವೃಕ್ಷ ಜಾಗೃತಿ ವೇದಿಕೆ, ಸಂಸ್ಥೆಯ ಭದ್ರನೆಲೆಯಾದ ಹನಿಯಾದಲ್ಲೇ ಜಂಟೀ ಅರಣ್ಯ ಯೋಜನೆಗಾಗಿ ಅರಣ್ಯ ಇಲಾಖೆಯನ್ನು ಕೇಳಿದ್ದೇಕೆ?
- ವೃಕ್ಷ ಲಕ್ಷ ವೇದಿಕೆಯ ತೀವ್ರ ವಿರೋಧವನ್ನು ತಿಳಿದಿದ್ದರೂ, ವೇದಿಕೆಯ ಕೋರಿಕೆಯ ಮೇರೆಗೆ ಗ್ರಾಮ ಅರಣ್ಯ ಸಮಿತಿಯನ್ನು ಸ್ಥಾಪಿಸಿ, ಜಂಟೀ ಅರಣ್ಯ ಯೋಜನೆಯನ್ನು ಅಲ್ಲಿ ಪ್ರಾರಂಭಿಸಿದ್ದು ಏಕೆ?

ಮೇಲಿನ ಎರಡೂ ಪ್ರಶ್ನೆಗಳಿಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಡೆಸಿದ ಸಂದರ್ಶನಗಳ

ಜೊತೆಗೆ, ಶಿವಮೊಗ್ಗ ವೃತ್ತದ ಹಿರಿಯ ಅರಣ್ಯಾಧಿಕಾರಿಗಳು, ಶಿವಮೊಗ್ಗ, ಉತ್ತರ ಕನ್ನಡದ ಪರಿಸರ ಕ್ಷೇತ್ರಕ್ಕೆ ಸಂಬಂಧಿಸಿದ ಮುಖ್ಯ ಸರ್ಕಾರೇತರ ಸಂಸ್ಥೆಗಳೊಡನೆ ನಡೆಸಿದ ಚರ್ಚೆಯಿಂದಲೂ ಉತ್ತರವನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ.

ಹನಿಯಾದಲ್ಲಿ ಕ್ಷೇತ್ರಕಾರ್ಯ ನಡೆಸಿದ ಸಂದರ್ಭದಲ್ಲಿ ಭೂರಹಿತರು ಹಾಗೂ ಅತಿಸಣ್ಣ ರೈತರ ಜೊತೆಗೆ ಪ್ರಶ್ನಾವಳಿ ಆಧಾರಿತ ಸಂದರ್ಶನದಲ್ಲಿ ಮತ್ತೆ ಮತ್ತೆ ಬಂದ ಪ್ರಶ್ನೆಯೆಂದರೆ ಅರಣ್ಯ ಭೂಮಿಯ ಒತ್ತುವರಿಯದು. ಹನಿಯಾದ 67 ಕುಟುಂಬಗಳಲ್ಲಿ 44 ದೊಡ್ಡ ರೈತರದು, 4 ಸಣ್ಣ ರೈತರದು. ಈ 48 ಕುಟುಂಬಗಳೂ(72%) ಅರಣ್ಯಭೂಮಿಯನ್ನು ಒತ್ತುವರಿ ಮಾಡಿವೆಯೆಂಬುದು ಭೂರಹಿತರೂ ಹಾಗೂ ಸಣ್ಣ ರೈತರ ದೂರು. ಯಾವುದೇ ಹಳ್ಳಿಗೆ ಈ ಪ್ರಮಾಣ ಬಹು ಜಾಸ್ತಿ. ಜಂಟೀ ಅರಣ್ಯ ಯೋಜನೆ ಅನುಷ್ಠಾನಗೊಂಡಿರುವ ಯಾವುದೇ ಹಳ್ಳಿಯಲ್ಲಿಯೂ ಅರಣ್ಯ ಇಲಾಖೆ ತಾನಾಗಿಯೇ ಒತ್ತುವರಿಯನ್ನು ತೆರವುಗೊಳಿಸುವ ಕ್ರಮಕ್ಕೆ ಮುಂದಾಗಿಲ್ಲ. ಗ್ರಾಮ ಅರಣ್ಯ ಸಮಿತಿಯೇ ಒತ್ತುವರಿಯನ್ನು ತೆರವುಗೊಳಿಸಲು ಇಲಾಖೆಯ ಮೇಲೆ ತೀವ್ರ ಒತ್ತಡದ ಸಂದರ್ಭಗಳಲ್ಲಿ ಮಾತ್ರ ಒತ್ತುವರಿ ಮಾಡಿಕೊಂಡಿರುವವರ ಸ್ಥಾನಮಾನ, ರಾಜಕೀಯ ಸಂಬಂಧ ಮುಂತಾದವುಗಳನ್ನು ಗಮನಿಸಿ, ಸಾಕಷ್ಟು ಯೋಚಿಸಿದ ನಂತರವೇ ಮುಂದಾಗಿದೆ. ಅರಣ್ಯ ಇಲಾಖೆಯ ಈ ಧೋರಣೆ "ಜಂಟೀ ಅರಣ್ಯ ಯೋಜನೆಯನ್ನು ಅನುಷ್ಠಾನಗೊಳಿಸಿ, ನಿರ್ವಹಣಾ ಸಮಿತಿಯಲ್ಲಿ ಸ್ಥಾನ ಪಡೆದರೆ ಒತ್ತುವರಿಯನ್ನು ತೆರವು ಮಾಡಬೇಕಾದುದಿಲ್ಲ" ಎಂಬ ಸಂಕೇತವನ್ನು ನೀಡುತ್ತದೆ. ಹನಿಯಾದ ವೃಕ್ಷ ಲಕ್ಷ ವೇದಿಕೆ ಜಂಟೀ ಅರಣ್ಯ ಯೋಜನೆಯ ವಿರುದ್ಧ ತೀವ್ರ ಸ್ವರೂಪದ 'ಅಪಪ್ರಚಾರ'(ಈ ಮಾತು ಶಿವಮೊಗ್ಗ ವೃತ್ತದ ಹಿರಿಯ ಅರಣ್ಯಾಧಿಕಾರಿಗಳದು, ಸಂಶೋಧಕನದ್ದಲ್ಲ) ಮಾಡುತ್ತಿದ್ದ ಸಂದರ್ಭದಲ್ಲಿ, ಆದರಿಂದ ಅರಣ್ಯ ಇಲಾಖೆಗೆ ಹಾಗೂ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ 'ಸದುದ್ದೇಶ' ಗಳಿಗೆ ಆಗುತ್ತಿದ್ದ ಧಕ್ಕೆಯನ್ನು ತಡೆಯಲು ಹನಿಯಾದಲ್ಲಿ ಒತ್ತುವರಿಯನ್ನು ತೆರವುಗೊಳಿಸುವ ಆಲೋಚನೆ ಅರಣ್ಯ ಇಲಾಖೆಗೆ ಬಂದಿತ್ತು. ಈ ವಿಷಯ ಹನಿಯಾ ಗ್ರಾಮಕ್ಕೂ ಮುಟ್ಟಿದಾಗ ಜಂಟೀ ಅರಣ್ಯ ಯೋಜನೆಯನ್ನು ಸ್ವಾಗತಿಸುವ ಏರ್ಪಾಟು ತ್ವರಿತಗತಿಯಲ್ಲಿ ನಡೆಯಿತು. ಇದು ಹನಿಯಾದ ಸರ್ಕಾರೇತರ ಸಂಸ್ಥೆಯ ಬದಲಾದ ನಿಲುವಿಗೆ, ಶಿವಮೊಗ್ಗಾದ ಸರ್ಕಾರೇತರ ಸಂಸ್ಥೆಗಳ ವಲಯಗಳಲ್ಲಿ ದೊರೆಯುವ ಉತ್ತರ. ಇದರೊಡನೆ ಹನಿಯಾದ ದೊಡ್ಡ ರೈತರು, ಸಣ್ಣ ರೈತರು, ಅತಿಸಣ್ಣ ರೈತರು ಹಾಗೂ ಭೂರಹಿತರೆಲ್ಲರೂ ಹೇಳುವ ಇನ್ನೊಂದು ಕಾರಣವಿದೆ. ಇದು ಗೋಡಂಬಿ ಅಥವಾ ಗೇರು ಬೀಜದ ನೆಡುತೋಪಿಗೆ ಸಂಬಂಧಪಟ್ಟಿದ್ದು.

ಜಂಟೀ ಅರಣ್ಯ ಯೋಜನೆ ಮತ್ತು ನಿರ್ವಹಣೆಗೆ ಸಂಬಂಧಪಟ್ಟ ಕರ್ನಾಟಕ ಸರ್ಕಾರದ 12.4.1993ರ ಆದೇಶದ ಅನುಬಂಧ XIರಲ್ಲಿ ನೆಡುತೋಪುಗಳನ್ನು ಗ್ರಾಮ ಅರಣ್ಯ ಸಮಿತಿಗಳಿಗೆ

ವಹಿಸಿ ಕೊಡುವ ಪ್ರಕ್ರಿಯೆಯ ಪ್ರಸ್ತಾಪವಿದೆ. ಇದರಂತೆ ವಿವಿಧ ಯೋಜನೆಗಳ ಅಡಿಯಲ್ಲಿ ಬೆಳೆಸಲಾದ ನೆಡುತೋಪುಗಳನ್ನು ಜಂಟೀ ಅರಣ್ಯ ಯೋಜನೆಯ ನೆಡುತೋಪುಗಳಾಗಿ ಮಾಡಿ ಅಧಿಸೂಚನೆ ಹೊರಡಿಸಬಹುದು. ಅಂತಹ ಸಂದರ್ಭದಲ್ಲಿ ಆ ನೆಡುತೋಪುಗಳ ಸಂರಕ್ಷಣೆಯ ಜವಾಬ್ದಾರಿ ಗ್ರಾಮ ಅರಣ್ಯ ಸಮಿತಿಗೆ ಬಂದು, ಅಂತಿಮ ಕೊಯಿಲಿನ ಸಂದರ್ಭದಲ್ಲಿ ಉತ್ಪನ್ನದ ಶೇಕಡಾ 50 ಭಾಗ ಗ್ರಾಮ ಅರಣ್ಯ ಸಮಿತಿಗೆ ಬರುತ್ತದೆ. ಇದು ರಾಜ್ಯದಾದ್ಯಂತ ಅನ್ವಯಿಸಿದರೂ ಹನಿಯಾ ಸುತ್ತಮುತ್ತ ಸ್ವಲ್ಪ ವಿಶೇಷವಿದೆ. ಈ ಪ್ರದೇಶದಲ್ಲಿ ಅನೇಕ ಗೇರುಬೀಜದ ನೆಡುತೋಪುಗಳಿವೆ. ಹನಿಯಾದ ಪ್ರದೇಶ ಗೇರು ಬೆಳೆಗೆ ಹೇಳಿ ಮಾಡಿಸಿದಂತಹ ಜಾಗ. ಹೀಗಾಗಿ ಅರಣ್ಯ ಇಲಾಖೆಯ ಕಡೆಯಿಂದ ಇಲ್ಲಿ ಗೋಡಂಬಿಗೇ ಪ್ರಾಶಸ್ತ್ಯ. ಅದು ಬಿಟ್ಟರೆ ಅಕೇಷಿಯಾ. "ಗೇರು ಬೀಜದ ನೆಡುತೋಪಿನಿಂದ ಉತ್ಪನ್ನ ಉಳಿದವುಗಳ ಎರಡು ಪಾಲಿನಷ್ಟು". "ಜಂಟೀ ಅರಣ್ಯ ಯೋಜನೆ ಶಿವಮೊಗ್ಗ ವೃತ್ತಕ್ಕೆ ಕಾಲಿಟ್ಟಾಗ ಗೋಡಂಬಿಯ ನೆಡುತೋಪುಗಳನ್ನೂ ಗ್ರಾಮ ಅರಣ್ಯ ಸಮಿತಿಗೆ ಹಸ್ತಾಂತರಿಸುತ್ತಾರೆಂಬ ವಿಷಯವನ್ನು ಉತ್ತರ ಕನ್ನಡದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಹಿರಂಗಗೊಳಿಸಿದ್ದರು".[4] ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ದೊರೆಯುವ ಹೆಚ್ಚಿನ ಆದಾಯದ ಆಮಿಷ ವೃಕ್ಷಲಕ್ಷ ವೇದಿಕೆಯ ಭಾಗವಾಗಿದ್ದ ಹನಿಯಾದ ಜನರಿಗೆ ಜಂಟೀ ಅರಣ್ಯ ಯೋಜನೆ ಅತ್ಯಂತ ಆಕರ್ಷಕವಾಗಿ ತೋರಿತು. ಆದರೆ ಹನಿಯಾದಲ್ಲಿ ಗ್ರಾಮ ಅರಣ್ಯ ಸಮಿತಿ ಸ್ಥಾಪನೆಯಾಗಿ, ಜಂಟೀ ಅರಣ್ಯ ಯೋಜನೆ ಅನುಷ್ಠಾನಗೊಂಡನಂತರ, ಗೇರುಬೀಜದ ನೆಡುತೋಪುಗಳನ್ನು ಗ್ರಾಮ ಅರಣ್ಯ ಸಮಿತಿಯ ಜವಾಬ್ದಾರಿಗೆ ವಹಿಸಿಕೊಡುವುದಿಲ್ಲ ಎಂಬ ನಿರ್ಧಾರವನ್ನು ಸರ್ಕಾರ ಸ್ಪಷ್ಟವಾಗಿ ಪ್ರಕಟಿಸಿದ ನಂತರ ಹನಿಯಾ ಅರಣ್ಯ ಸಮಿತಿಯ ಉತ್ಸಾಹ ಮಾಯವಾಯಿತು".[5]

ಜಂಟೀ ಅರಣ್ಯ ಯೋಜನೆಯನ್ನು ಏಕಪ್ರಕಾರವಾಗಿ ವಿರೋಧಿಸುತ್ತಿದ್ದ ಸಂಸ್ಥೆಯ ಕೋರಿಕೆಯನ್ನು ಒಪ್ಪಿಕೊಂಡು ಹನಿಯಾದಲ್ಲಿ ಜಂಟೀ ಅರಣ್ಯ ಯೋಜನೆಯನ್ನು ಅರಣ್ಯ ಇಲಾಖೆ ಅನುಷ್ಠಾನ ಗೊಳಿಸಿದ್ದೇಕೆ ಎಂಬ ಪ್ರಶ್ನೆಗೆ ನಮಗೆ ಎರಡು ಉತ್ತರಗಳು ದೊರೆಯುತ್ತವೆ. "ಹನಿಯಾದ ಜನರಿಗೆ ಯೋಜನೆಯಲ್ಲಿ ನಿಜವಾದ ಆಸಕ್ತಿಯಿದ್ದು ಅಲ್ಲಿ ಯೋಜನೆಯ ಯಶಸ್ವಿಯಾಗಿದ್ದೇ ಆದರೆ ಅಂಥ ವಿರೋಧಿಗಳ ಮನಸ್ಸನ್ನೂ ಪರಿವರ್ತಿಸಿ, ಯೋಜನೆಯನ್ನು ಯಶಸ್ವಿ ಮಾಡಿದ ಕೀರ್ತಿ ಇಲಾಖೆಗೆ ಸಲ್ಲುತ್ತದೆ. ಇದು ಮೊದಲನೆಯ ಕಾರಣ. ಎರಡನೆಯದು ಹೀಗೆ ಯೋಜನೆ ಯಶಸ್ವಿಯಾಗಲಿಲ್ಲ ಎಂದುಕೊಳ್ಳೋಣ. ಅದಕ್ಕೆ ಸಂಪೂರ್ಣ ಕಾರಣ ಅರಣ್ಯ ಸಮಿತಿಯೇ ಆಗುತ್ತದೆ. ಏಕೆಂದರೆ ಅನೇಕ ಜಾಗಗಳಲ್ಲಿ ಯೋಜನೆ ಯಶಸ್ವಿಯಾಗಿದೆ. ಹನಿಯಾದಲ್ಲಿ ಆಗದಿದ್ದರೆ ಹನಿಯಾ ಸಮಿತಿಗೆ ಅಂಥ ಸಾಮರ್ಥ್ಯ ಇಲ್ಲವೆಂದಾಗುತ್ತದೆ. ಯೋಜನೆಯಲ್ಲಿ ವಿಫಲರಾದ ನಂತರ ಹನಿಯಾದ ಸಮಿತಿಯಾಗಲಿ ಅಥವಾ ಅದರ ಹಿಂದಿರುವ ವೃಕ್ಷಲಕ್ಷ ವೇದಿಕೆಯಾಗಲೀ ಯೋಜನೆಯನ್ನು ಟೀಕಿಸುವ ಕೆಲಸವನ್ನು ಬಹುಶಃ ಮಾಡಲಾರದು".[6]

ಉದ್ದೂರು ಮತ್ತು ಮುಕುಂದೂರುಗಳ ಗ್ರಾಮ ಅರಣ್ಯ ಸಮಿತಿಗಳು ಪ್ರಬಲ ಜಾತಿಗೆ ಸೇರಿದ ಪ್ರಬಲ ರಾಜಕಾರಣಿಗಳ ಹಿಡಿತದಲ್ಲಿರುವುದರಿಂದ ಅವರಿಗೆ ಬೇಕಾದಾಗ ಮಾತ್ರ ಸಭೆ ನಡೆಯುತ್ತದೆ. ಅಧ್ಯಕ್ಷರ ನಿರ್ಧಾರವೇ ಅಂತಿಮ ನಿರ್ಧಾರವಾದ್ದರಿಂದ ಈ ಹಳ್ಳಿಗಳಲ್ಲಿ ಇತರರ ಅಭಿಪ್ರಾಯಗಳಿಗೆ ಯಾವ ಬೆಲೆಯೂ ಇಲ್ಲ. ಚರ್ಚೆ, ಸಮಾಲೋಚನೆಗಳೇನಿದ್ದರೂ ಅಧ್ಯಕ್ಷರ ಆಪ್ತವರ್ಗಕ್ಕೆ ಮಾತ್ರ ಸೀಮಿತವಾದ್ದರಿಂದ ಇಲ್ಲಿ ಸಭೆಗಳು ಅನಗತ್ಯ. ಆದ್ದರಿಂದ ಅವುಗಳ ಸಂಖ್ಯೆ ಕನಿಷ್ಠವಾಗಿದೆ. ಗ್ರಾಮ ಅರಣ್ಯ ಸಮಿತಿಯ ಸಭೆಗಳಲ್ಲಿ ಭಾಗವಹಿಸಿ, ಜಂಟೀ ಅರಣ್ಯ ಯೋಜನೆಯ ವಿವಿಧ ಹಂತಗಳಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವಹಿಸುವ ಅವಕಾಶವನ್ನು ಜಂಟೀ ಅರಣ್ಯ ಯೋಜನೆ ಒದಗಿಸಿದರೂ ಕೂಡ ಹಳ್ಳಿಯಲ್ಲಿನ ಅಸಮಾನತೆಗಳು, ಸ್ವಂತ ಹಿತದ ಶಕ್ತಿ, ರಾಜಕಾರಣ ಈ ಅವಕಾಶಗಳನ್ನು ಹೇಗೆ ನಿಷ್ಕ್ರಿಯಗೊಳಿಸುತ್ತವೆ ಎಂಬುದನ್ನು ಉದ್ದೂರು, ಮುಕುಂದೂರುಗಳಲ್ಲಿ ನೋಡಬಹುದು.

ಜಂಟೀ ಅರಣ್ಯ ಯೋಜನೆಯ ಮಾರ್ಗದರ್ಶಿ ಸೂತ್ರಗಳಂತೆ ವರ್ಷಕ್ಕೊಮ್ಮೆ ಸೇರುವ ಮಹಾಸಭೆಗೆ ತನ್ನದೇ ಆದ ಮಹತ್ವವಿದೆ. ನಿರ್ವಹಣಾ ಸಮಿತಿ ಕೈಗೊಂಡ ನಿರ್ಣಯಗಳನ್ನು ಮಹಾಸಭೆ ಪರಿಶೀಲಿಸುತ್ತದೆ. ಕಿರು ಯೋಜನೆಯ ಅನುಷ್ಠಾನ, ಹಣಕಾಸಿನ ವ್ಯವಹಾರಗಳು, ಫಲಾನುಭವಿಗಳನ್ನು ಗುರುತಿಸುವುದು, ಭವಿಷ್ಯದಲ್ಲಿನ ಯೋಜನೆಗಳು ಮುಂತಾದವುಗಳ ವಿಷದ ಸಮೀಕ್ಷೆ ಮಹಾಸಭೆಯಲ್ಲಿ ನಡೆಯಬೇಕು. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಕ್ಷೇತ್ರಾಧ್ಯಯನದ ಅವಧಿಯಲ್ಲಿ ಎರಡು ಮಹಾಸಭೆಗಳು ನಡೆದಿವೆ. ಮುಕುಂದೂರಿನಲ್ಲಿ ಒಂದು ಸಭೆ ನಡೆದಿದೆ. ಆದರೆ ಹನಿಯಾ ಮತ್ತು ಉದ್ದೂರುಗಳಲ್ಲಿ ಎರಡು ವರ್ಷಗಳಲ್ಲಿ ಒಂದು ಮಹಾಸಭೆಯೂ ನಡೆದಿಲ್ಲ. ಹನಿಯಾ, ಉದ್ದೂರು ಮತ್ತು ಮುಕುಂದೂರು ಅರಣ್ಯ ಸಮಿತಿಗಳ ಅಧ್ಯಕ್ಷರು ನಿರ್ವಹಣಾ ಸಮಿತಿಯ ಸಭೆಗಳ ಬಗ್ಗೆ ತೋರಿದ ನಿರ್ಲಕ್ಷ ಮನೋಭಾವವನ್ನೇ ಮಹಾ ಸಭೆಗಳ ಬಗೆಗೂ ತಳೆದಿದ್ದಾರೆ.

ನಿರ್ವಹಣಾ ಸಮಿತಿಯ ಸಭೆ ನಿಯತಕಾಲಿಕವಾಗಿ ನಡೆದಾಗ ಮಾತ್ರ ಸದಸ್ಯರಿಗೆ ಅದರಲ್ಲಿ ಭಾಗವಹಿಸಲು ಅವಕಾಶ ದೊರೆಯುತ್ತದೆ. ಸರಿಯಾದ ಅಂತರಗಳಲ್ಲಿ ಸಭೆಗಳನ್ನು ನಡೆಸುವ ಜವಾಬ್ದಾರಿ ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರ ಮೇಲಿದೆ. ಸಹಭಾಗಿತ್ವ, ಸಮಾನತೆ, ಪಾಲುದಾರಿಕೆಗಳಂತಹ ಪರಿಕಲ್ಪನೆಗಳಿಗೆ ಅರಣ್ಯ ಇಲಾಖೆ ಮತ್ತು ನಿರ್ವಹಣಾ ಸಮಿತಿಯ ಸದಸ್ಯರು ಬದ್ಧರಾಗಿದ್ದಾಗ ಮಾತ್ರ, ಅವುಗಳನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಸಭೆಗಳನ್ನು ನಿಗದಿತ ಅಂತರದಲ್ಲಿ ಸರಿಯಾಗಿ ನಡೆಸುವುದು ಸಾಧ್ಯವಾಗುತ್ತದೆ. ಪರೋಕ್ಷವಾಗಿ, ನಿಗದಿತ ಅಂತರಗಳಲ್ಲಿ ಸರಿಯಾಗಿ ನಡೆಯುವ ಸಭೆಗಳು ಜಂಟೀ ಅರಣ್ಯ ಯೋಜನೆಯಲ್ಲಿನ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಹಾಗೂ ನಿರ್ವಹಣಾ ಸಮಿತಿಗಳ ಪ್ರಾಮಾಣಿಕ ಕಳಕಳಿಯನ್ನು ಸೂಚಿಸುತ್ತವೆ.

ತರಬೇತಿ

ಜಂಟೀ ಅರಣ್ಯ ಯೋಜನೆಯ ಪರಿಕಲ್ಪನೆಯೇ ಅನೇಕರಿಗೆ ಹೊಸದು. ಅದರಲ್ಲಿ ಭಾಗವಹಿಸುತ್ತಿರುವ ಜನರಿಗೆ ಅದೊಂದು ಹೊಸ ಅನುಭವ. ಯೋಜನೆಯಲ್ಲಿನ ಭಾಗವಹಿಸುವಿಕೆ ಯಶಸ್ವಿಯಾಗಬೇಕಾದರೆ, ಅರ್ಥಪೂರ್ಣವಾಗಬೇಕಾದರೆ, ಜನಸಾಮಾನ್ಯರು ನಿರ್ವಹಿಸಬೇಕಾದ ಜವಾಬ್ದಾರಿಗೆ ಅವರನ್ನು ಸಿದ್ಧಗೊಳಿಸಲು ತರಬೇತಿ ಅವಶ್ಯಕ. ಇಂಥ ತರಬೇತಿ ಸ್ಥಳೀಯ ಸಮುದಾಯದ ಸಾಮರ್ಥ್ಯವನ್ನು ಬೆಳೆಸುವಂತಿರಬೇಕು. ತರಬೇತಿಯ ನಂತರ, ಪಡೆದ ತರಬೇತಿಯನ್ನು ಕ್ಷೇತ್ರದಲ್ಲಿ ಬಳಸುವಂತಿರಬೇಕು. ತರಬೇತಿ ಶಿಬಿರಗಳು ಹಾಗೂ ತರಬೇತಿಯ ವಿಷಯಗಳು ಜನರನ್ನು ಯೋಜನೆಯಲ್ಲಿ ಭಾಗವಹಿಸುವಂತೆ ಪ್ರೇರೆಪಿಸುವುದರಿಂದ ಇಂತಹ ಶಿಬಿರಗಳು ಭಾಗವಹಿಸುವಿಕೆಯ ಸೂಚ್ಯಂಕಗಳಾಗುತ್ತವೆ.

ಕ್ಷೇತ್ರಾಧ್ಯಯನದ ಅವಧಿಯಲ್ಲಿ (1.1.2001 ರಿಂದ 31.12.2002) ಐದು ಹಳ್ಳಿಗಳಲ್ಲಿ ನಡೆದಿರುವ ತರಬೇತಿ ಶಿಬಿರಗಳ ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ(ಕೋಷ್ಟಕ 13). ಕುಮಾರನಹಳ್ಳಿಯಲ್ಲಿ ಎಂಟು ಶಿಬಿರಗಳು ನಡೆದಿದ್ದು ಪ್ರತಿ ಶಿಬಿರದಲ್ಲೂ ಸರಾಸರಿ 26 ಜನರು ಭಾಗವಹಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಇನ್ನೊಂದು ತುದಿಯಲ್ಲಿ ಮುಕುಂದೂರಿನಲ್ಲಿ ಎರಡು ವರ್ಷಗಳ ಅವಧಿಯಲ್ಲಿ ಒಂದೇ ಒಂದು ಶಿಬಿರ ನಡೆದಿದೆ. ಸದಸ್ಯರಿಗೆ ತರಬೇತಿ ನೀಡಲು ಕುಮಾರನಹಳ್ಳಿ ಮತ್ತು ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿಗಳು ಪರಿಣಿತರ ನೆರವನ್ನು ಪಡೆದಿವೆ. ಇದು ತರಬೇತಿಯನ್ನು ಅರ್ಥಪೂರ್ಣವನ್ನಾಗಿ ಮಾಡುವುದಷ್ಟೆ ಅಲ್ಲದೆ ಈ ಅರಣ್ಯ ಸಮಿತಿಗಳ ಪ್ರಾಮಾಣಿಕ ಉದ್ದೇಶವನ್ನೂ ಸೂಚಿಸುತ್ತದೆ. ಈ ಎರಡೂ ಗ್ರಾಮ ಅರಣ್ಯ ಸಮಿತಿಗಳು ಏರ್ಪಡಿಸಿರುವ ತರಬೇತಿಯ ವಿಷಯಗಳಲ್ಲೂ ವೈವಿಧ್ಯವಿದ್ದು, ಈ ವಿಷಯಗಳು ಜಂಟೀ ಅರಣ್ಯ ಯೋಜನೆಗಳ ಯಶಸ್ವೀ ಅನುಷ್ಠಾನಕ್ಕೆ ಅಗತ್ಯವಾಗಿವೆ. ತರಬೇತಿಗಾಗಿ ವಿಷಯಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಸಾಕಷ್ಟು ವಿಚಾರ ವಿನಿಮಯ, ಚರ್ಚೆಗಳು ನಡೆದಿರುವುದನ್ನು ಗ್ರಾಮ ಅರಣ್ಯ ಸಮಿತಿಯ ನಡಾವಳಿ ಪುಸ್ತಕಗಳಿಂದ ತಿಳಿಯಬಹುದು. ಉದಾಹರಣೆಗೆ 22.12.2001 ಮತ್ತು 23.12.2001ರಂದು ಕುಮಾರನಹಳ್ಳಿಯಲ್ಲಿ ನಡೆದ ತರಬೇತಿಯ ಉದ್ದೇಶ ಕಿರು ಅರಣ್ಯ ಉತ್ಪನ್ನವಾದ 'ಅಂಟ'ನ್ನು(ಗಮ್) ಸಂಗ್ರಹಿಸುವುದರಲ್ಲಿ ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಕೌಶಲವನ್ನು ಬೆಳೆಸುವುದು. ತರಬೇತಿಯ ಒಟ್ಟು ಸಾರಾಂಶ ಇಷ್ಟು. "ಮರಗಳಿಗೆ ಬೆಂಕಿ ಕೊಟ್ಟರೆ ಅಂಟು ಚೆನ್ನಾಗಿ ಬರುತ್ತದೆಂಬ ನಂಬಿಕೆಯಿದೆ. ಆದರೆ ಇದು ತಪ್ಪು. ಅಂಟಿನಲ್ಲಿ ಎರಡು ವಿಧ, ಬಿಳಿ ಹಾಗೂ ಕರಿ. ಕರೀ ಅಂಟಿಗೆ ಒಂದು ಕಿಲೋಗ್ರಾಂಗೆ ದೊರೆಯುವ ಬೆಲೆ 8 ರಿಂದ 10ರೂ.ಗಳು. ಬಿಳೀ ಅಂಟಿಗೆ 80 ರಿಂದ 90ರೂ.ಗಳು. ಈ ಎರಡು ರೀತಿಯ ಅಂಟುಗಳನ್ನು ಒಟ್ಟಿಗೆ ಮಾರಾಟ ಮಾಡಬಾರದು. ಬೇರ್ಪಡಿಸಿ, ಪ್ರತ್ಯೇಕವಾಗಿ ಮಾರಾಟ ಮಾಡಬೇಕು. ಹಾಗೆ ಮಾಡಿದರೆ ಮಾತ್ರ

ಅದು ಲಾಭದಾಯಕವಾಗುತ್ತದೆ.'' ಎರಡು ದಿನದ ತರಬೇತಿ ಪ್ರಾಯೋಗಿಕ ಪ್ರಾತ್ಯಕ್ಷಿಕೆಯೊಂದಿಗೆ ಈ ಕ್ಷೇತ್ರ ಕೌಶಲ್ಯವನ್ನು ಬೆಳೆಸಿತು. ಸಮಾಜ ಪರಿವರ್ತನಾ ಸಮುದಾಯ ಹಾಗೂ ರೀಚ್ ಸಂಸ್ಥೆಗಳು ನೀಡಿದ ಈ ತರಬೇತಿಯಿಂದ ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಆದಾಯ ಗಳಿಕೆಯ ಸಾಮರ್ಥ್ಯ ಹೆಚ್ಚಾಯಿತು. ಆದರೆ ಈ ಹೊಸ ಸಾಮರ್ಥ್ಯದಿಂದ ತಕ್ಷಣದಲ್ಲಿಯೇ ಆದಾಯ ಹೆಚ್ಚಾಗಲಿಲ್ಲ. ಸದಸ್ಯರು ಪಡೆದ ಈ ತರಬೇತಿಯಿಂದ ಹರಪನಹಳ್ಳಿಯ ಫಾರೆಸ್ಟ್ ಕಂಟ್ರಾಕ್ಟರ್ ಯೂನಸ್‌ಗೆ ಹೊಸ ಸಮಸ್ಯೆ ಎದುರಾಯಿತು. ಕುಮಾರನಹಳ್ಳಿಯ ಜನರಿಗೆ ಮೊದಲು ಅಂಟನ್ನು ಬೇರ್ಪಡಿಸುವುದು ಗೊತ್ತಿರಲಿಲ್ಲವಾದ್ದರಿಂದ ಅವರಿಗೆ ಹೆಚ್ಚಿನ ಬೆಲೆ ದೊರೆಯುತ್ತಿರಲಿಲ್ಲ. ಅಂಟನ್ನು ಕಡಿಮೆ ಬೆಲೆಗೆ ಕೊಂಡ ಯೂನಸ್, ಅದನ್ನು ಬೇರ್ಪಡಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭ ಸಂಪಾದಿಸುತ್ತಿದ್ದ. ಈಗ ಅದು ತಪ್ಪಿತು. ಇದಕ್ಕೆ ಪ್ರತಿಯಾಗಿ ಯೂನಸ್ ತನ್ನ ಮಧ್ಯವರ್ತಿಯ ಕರಾಮತ್ತನ್ನು ಬಳಸಿದ. ಹಳ್ಳಿಯವರು ಬೇರ್ಪಡಿಸಿದ ಅಂಟನ್ನು ಅವನು ಕೊಳ್ಳಲೇ ಇಲ್ಲ. ಬೇರೆ ಮಾರುಕಟ್ಟೆಯ ಪರಿಚಯವೇ ಇಲ್ಲದ ಕುಮಾರನಹಳ್ಳಿಯ ಜನ ಕಾದು, ಕಾದು, ನಿರಾಶರಾಗಿ ಕಡೆಗೆ ಯೂನಸ್ ಹೇಳಿದ ಬೆಲೆಗೇ ಅಂಟನ್ನು ಅವನಿಗೆ ಮಾರಿದರು. ಈ ಶೋಷಣೆಯನ್ನು ತಪ್ಪಿಸಲು, ಮಾರುಕಟ್ಟೆ ಸಮೀಕ್ಷೆಯ ಬಗ್ಗೆ, ಮಾರಾಟದ ತಂತ್ರಗಳ ಬಗ್ಗೆ ಸಮಾಜ ಪರಿವರ್ತನಾ ಸಮುದಾಯ ಮತ್ತೆ ತರಬೇತಿ ಶಿಬಿರಗಳನ್ನು ಏರ್ಪಡಿಸಿತು. ಯೂನಸ್ ಮೇಲೆ ಅವಲಂಬಿತವಾಗದೇ ದೂರದ ಬೆಳಗಾಂ ಮತ್ತು ಸೋಲಾಪುರದ ಮಾರುಕಟ್ಟೆಗಳಿಗೆ ಮಾಲನ್ನು ಕಳುಹಿಸುವ ಪ್ರಯತ್ನವನ್ನೂ ಮಾಡಿತು. ಮಾರಾಟಕ್ಕೆ ಸಂಬಂಧಪಟ್ಟಂತೆ ಅರಣ್ಯ ಸಮಿತಿಯ ನಾಲ್ಕು ಸದಸ್ಯರನ್ನು ರಾಣೆಬೆನ್ನೂರಿನಲ್ಲಿ ನಡೆದ ವಿಶೇಷ ತರಬೇತಿ ಶಿಬಿರಕ್ಕೆ ಕಳುಹಿಸಲಾಯಿತು. ಈ ಪ್ರಯತ್ನಗಳು ಇಂದಿಗೂ ನಿರಂತರವಾಗಿ ಸಾಗಿದೆ. ಇವುಗಳ ಫಲವಾಗಿ ತರಬೇತಿಯ ಆಂತರಿಕ ಮೌಲ್ಯ ಹೆಚ್ಚಾಗಿರುವುದು, ತರಬೇತಿ ಪರಿಣಾಮಕಾರಿಯಾಗಿರುವುದು ಕಂಡುಬರುತ್ತದೆ.

ಮರಡವಳ್ಳಿಯ ತರಬೇತಿ ಶಿಬಿರಗಳ ಹಿಂದೆಯೂ ಇದೇ ರೀತಿಯ ಹೋರಾಟವಿದೆ. 31.3.2000ದಲ್ಲಿ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಹಿಂದೆ ಸರಿದು ಪಶ್ಚಿಮ ಘಟ್ಟ ಅರಣ್ಯ ಯೋಜನೆ ಮುಕ್ತಾಯಗೊಂಡಾಗ ಅದಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳೂ ಸ್ತಬ್ಧವಾದವು. ಮರಡವಳ್ಳಿ ಗ್ರಾಮ ಅರಣ್ಯ ಸಮಿತಿ ಮಾತ್ರ ಇದಕ್ಕೆ ಅಪವಾದವಾಯಿತು. ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಒಟ್ಟಿಗೆ ಸೇರಿ, ಸ್ವಂತ ಪರಿಶ್ರಮದಿಂದ ದೇವಾಸದಲ್ಲಿ 15 ಹೆಕ್ಟೇರ್ ಪ್ರದೇಶದಲ್ಲಿ ಮಿಶ್ರ ಪ್ರಭೇದಗಳ ನೆಡುತೋಪನ್ನು ಬೆಳೆಸಲು ಪ್ರಾರಂಭಿಸಿದರು. ಆದರೆ ಇದಕ್ಕೆ ತರಬೇತಿ ಬೇಕು. ಗುಂಡಿ ತೋಡುವುದರಿಂದ ಹಿಡಿದು, ಸಸ್ಯ ಪ್ರಭೇದಗಳ ಆಯ್ಕೆ, ನರ್ಸರಿಗಳಲ್ಲಿ ಸಸಿಗಳನ್ನು ಬೆಳೆಸುವುದು, ಸಸಿಗಳನ್ನು ನೆಡುವುದು, ಸಸ್ಯ ಸಂರಕ್ಷಣೆ ಮುಂತಾದ ವಿವಿಧ ಹಂತಗಳಲ್ಲಿ ಅಗತ್ಯವಾದ ತರಬೇತಿಗಳನ್ನು ಅರಣ್ಯ ಸಮಿತಿ ಪರಿಣಿತರ ಸಹಾಯದಿಂದ ಏರ್ಪಡಿಸಿತು. ಈ ಎಲ್ಲವೂ ''ನೀಡ್ ಬೇಸ್ಡ್'' ತರಬೇತಿಗಳು. ಔಷಧ ಸಸ್ಯಗಳ ತೋಟವನ್ನು ಬೆಳೆಸಲು ಅಗತ್ಯವಾದ ತರಬೇತಿಯನ್ನು

ಔಷಧ ಸಸ್ಯಗಳ ಪರಿಣಿತರ ಕಡೆಯಿಂದ ಏರ್ಪಡಿಸಲಾಯಿತು. ಗ್ರಾಮ ಅರಣ್ಯ ಸಮಿತಿಯಲ್ಲಿನ ಮಹಿಳಾ ಸದಸ್ಯರಿಗೆ 'ಸ್ವಸಹಾಯ ಗುಂಪಿ'ನ ತರಬೇತಿಯನ್ನು 'ಸಾಂಘ್ವಿ' ಸಂಸ್ಥೆಯ ಕಡೆಯಿಂದ ಏರ್ಪಡಿಸಲಾಯಿತು. ಕುಮಾರನಹಳ್ಳಿಯಂತೆಯೇ ತರಬೇತಿಯ ಅವಧಿ ಕಡಿಮೆಯಾದರೂ ಸಹ ಕಲಿತ ವಿಷಯಗಳ ಬಳಕೆ ಎಡಬಿಡದೆ ನಡೆದಿರುವುದರಿಂದ ಭಾಗವಹಿಸುವಿಕೆಯ ಮೌಲ್ಯ ಹೆಚ್ಚಾಗಿದೆ.

ಅಧ್ಯಯನದ ಅವಧಿಯಲ್ಲಿ ಉದ್ದೂರಿನಲ್ಲಿ ಎರಡು ತರಬೇತಿ ಶಿಬಿರಗಳು ನಡೆದಿವೆ. ಮೊದಲನೆಯ ತರಬೇತಿ ಶಿಬಿರದ ಉದ್ದೇಶ ಗ್ರಾಮ ಅರಣ್ಯ ಸಮಿತಿ ಹಾಗೂ ನಿರ್ವಹಣಾ ಸಮಿತಿಯ ಸದಸ್ಯರಿಗೆ ಜಂಟೀ ಅರಣ್ಯ ಯೋಜನೆಯ ಉದ್ದೇಶಗಳನ್ನು ಪರಿಚಯ ಮಾಡಿ ಕೊಡುವುದು. 12 ಸದಸ್ಯರು ಭಾಗವಹಿಸಿರುವ ಈ ಶಿಬಿರ 27.4.2001ರಂದು ನಡೆದಿದೆ. ಉದ್ದೂರಿನಲ್ಲಿ ಗ್ರಾಮ ಅರಣ್ಯ ಸಮಿತಿ ಅಸ್ತಿತ್ವಕ್ಕೆ ಬಂದಿರುವುದು 2.1.1998ರಂದು. ಅಂದರೆ ಗ್ರಾಮ ಅರಣ್ಯ ಸಮಿತಿ ಅಸ್ತಿತ್ವಕ್ಕೆ ಬಂದ ಮೂರು ವರ್ಷಗಳ ನಂತರ ಜಂಟೀ ಅರಣ್ಯ ಯೋಜನೆಯ ಉದ್ದೇಶಗಳನ್ನು ಪರಿಚಯ ಮಾಡಿ ಕೊಡುವ ತರಬೇತಿ ಶಿಬಿರ ನಡೆದಿದೆ. ಮೂರು ವರ್ಷಗಳ ಕಾಲ ಗ್ರಾಮ ಅರಣ್ಯ ಸಮಿತಿ ಅಸ್ತಿತ್ವದಲ್ಲಿದ್ದು, ಕೆಲಸ ಮಾಡಿದನಂತರ, ಜಂಟೀ ಅರಣ್ಯ ಯೋಜನೆಯ ಮೂಲಭೂತ ಉದ್ದೇಶಗಳನ್ನು ಪರಿಚಯ ಮಾಡಿಕೊಡುವ ತರಬೇತಿ ಶಿಬಿರದ ಅಗತ್ಯವೇನಿತ್ತು, ಉದ್ದೇಶಗಳನ್ನು ತಿಳಿಯದೆಯೇ ಈ ಗ್ರಾಮ ಅರಣ್ಯ ಸಮಿತಿ ಕೆಲಸ ಮಾಡಿತೇ, ಮಾಡಿದ ಕೆಲಸಗಳಾದರೂ ಏನು ಎಂಬ ಪ್ರಶ್ನೆಗಳಿಗೆ ಸಮಿತಿಯ ಸದಸ್ಯರಿಂದಾಗಲೀ, ಇಲಾಖೆಯ ಅಧಿಕಾರಿಗಳಿಂದಾಗಲೀ ಖಚಿತ ಉತ್ತರ ದೊರೆಯುವುದಿಲ್ಲ. ಆದರೆ ಗ್ರಾಮ ಅರಣ್ಯ ಸಮಿತಿ ಸಭೆಯ ನಡಾವಳಿ ಪುಸ್ತಕ ಮಾತ್ರ ಇದರ ಗುಟ್ಟನ್ನು ಬಿಟ್ಟುಕೊಡುತ್ತದೆ. ತರಬೇತಿ ನಡೆದ ಮೂರು ದಿನಗಳ ನಂತರ 1.5.2001ರಂದು ಬೆಂಗಳೂರಿನ ಹಿರಿಯ ಅರಣ್ಯಾಧಿಕಾರಿಗಳು ಇಲ್ಲಿಗೆ ಭೇಟಿ ನೀಡಿ ನಿರ್ವಹಣಾ ಸಮಿತಿಯ ಸದಸ್ಯರ ಜೊತೆಗೆ ಮಾತುಕತೆ ನಡೆಸಿರುವುದು ಕಂಡುಬರುತ್ತದೆ.

ಉದ್ದೂರಿನ ಎರಡನೆಯ ತರಬೇತಿ ಶಿಬಿರ 9.12.2001ರಂದು ನಡೆದಿದೆ. ಇದರಲ್ಲಿ ಭಾಗವಹಿಸಿದವರ ಸಂಖ್ಯೆ 14. ಶಿಬಿರದ ಉದ್ದೇಶ ನೀಲಗಿರಿ ಎಲೆಗಳಿಂದ ಎಣ್ಣೆ ತೆಗೆಯುವುದನ್ನು ಹೇಳಿ ಕೊಡುವುದು. ಆದರೆ ಈ ಶಿಬಿರದಲ್ಲಿ ಭಾಗವಹಿಸಿದವರೆಲ್ಲರೂ ಉದ್ದೂರಿನ 'ದೊಡ್ಡ ರೈತರ' ಗುಂಪಿಗೆ ಸೇರಿದವರು. ಎಣ್ಣೆ ತೆಗೆಯುವ ಅಗತ್ಯವೇ ಇಲ್ಲದ ಇವರಿಗೇಕೆ ತರಬೇತಿ ಎನ್ನುವುದು ಅರ್ಥವಾಗುವುದಿಲ್ಲ. ಕ್ಷೇತ್ರ ಸಂದರ್ಶನದ ಸಮಯದಲ್ಲಿ ಕೆದಕಿ ಪ್ರಶ್ನೆ ಕೇಳಿದ ನಂತರ ಮಾತ್ರ ಅದು ದಾಖಲೆಯಲ್ಲಿರುವಂತೆ ಶಿಬಿರವಲ್ಲ. ಅದರ ಬದಲಿಗೆ ಎಣ್ಣೆ ತೆಗೆಯುವ ಕೆಲಸದ ಪ್ರಾತ್ಯಕ್ಷಿಕೆ ಎಂಬ ವಿಷಯ ತಿಳಿಯಿತು. ಉದ್ದೂರಿನಲ್ಲಿ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಗೆ ಸೇರಿದ ನೀಲಗಿರಿ ನೆಡುತೋಪಿನ ಮರಗಳಿಂದ ಡಿಸೆಂಬರ್, ಜನವರಿ ತಿಂಗಳಿನಲ್ಲಿ ಎಲೆಗಳನ್ನು ಸಂಗ್ರಹಿಸಿ ಅಲ್ಲಿಯೇ ಎಣ್ಣೆ ತೆಗೆಯುತ್ತಾರೆ. ಎಣ್ಣೆ ತೆಗೆಯುವ ಹಕ್ಕನ್ನು ಟೆಂಡರ್ ಮಾಡಿ ಕೊಡಲಾಗುತ್ತದೆ.

ಟೆಂಡರ್ ಪಡೆದ ವ್ಯಕ್ತಿ, ನೆಡುತೋಪಿಗೆ ಸಮೀಪವಾಗಿ ಯಂತ್ರಗಳನ್ನು ತಂದು ಸ್ಥಾಪಿಸಿ ಎಣ್ಣೆಯನ್ನು ತೆಗೆಯುತ್ತಾನೆ. ಈ ಕೆಲಸ ಹಲವಾರು ದಿನಗಳು ನಡೆಯುತ್ತದೆ. ಈ ಪ್ರಕ್ರಿಯೆಯನ್ನೇ ಗ್ರಾಮ ಅರಣ್ಯ ಸಮಿತಿ 'ತರಬೇತಿ' ಎಂದು ಕರೆದಿದೆ ಎನ್ನುತ್ತಾರೆ ಅರಣ್ಯ ಸಮಿತಿಯ ಸದಸ್ಯರಾದ ಕಾಳಯ್ಯ, ಶಿವಣ್ಣ ಮತ್ತು ನಾಗಯ್ಯ. ಮತ್ತೊಬ್ಬ ಸದಸ್ಯ ಮಲ್ಲಿಕಶೆಟ್ಟಿ ತರಬೇತಿಗೆ ಹಳ್ಳಿಯವರೆಲ್ಲರೂ ಬಂದು ಎಣ್ಣೆ ತೆಗೆಯುವುದನ್ನು ನೋಡಿದರು ಎನ್ನುತ್ತಾರೆ.

ಮುಕುಂದೂರಿನ ಗ್ರಾಮ ಅರಣ್ಯ ಸಮಿತಿ ಏರ್ಪಡಿಸಿರುವ ಏಕೈಕ ತರಬೇತಿ ಶಿಬಿರ ನಡೆದದ್ದು 4.3.2001ರಂದು. ಹದಿನೇಳು ಸದಸ್ಯರು ಭಾಗವಹಿಸಿದ ಈ ಶಿಬಿರವನ್ನು ನಡೆಸಿದವರು ಹಾಸನ ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು. ಶಿಬಿರದ ವಿಷಯ ಹಳ್ಳಿಯ ಅಂಚಿನಲ್ಲಿಯೇ ಹರಿಯುವ ಹೇಮಾವತಿ ನದೀ ತೀರದ ಮರಳಿನ ಸಂರಕ್ಷಣೆ. "ಮರಳು ಗ್ರಾಮದ ಸಂಪನ್ಮೂಲ; ಈ ಸಂಪನ್ಮೂಲದ ರಕ್ಷಣೆ ಗ್ರಾಮ ಅರಣ್ಯ ಸಮಿತಿಯ ಜವಾಬ್ದಾರಿ. ಇದರಿಂದಾಗಿಯೇ ಅದರ ಸಂರಕ್ಷಣೆಗೆ ತರಬೇತಿ ಏರ್ಪಡಿಸಲಾಯಿತು" ಎನ್ನುತ್ತಾರೆ ನಿರ್ವಹಣಾ ಸಮಿತಿಯ ಸದಸ್ಯ ದ್ಯಾವಯ್ಯ. ತರಬೇತಿಯ ವಿಷಯಗಳ ಬಗ್ಗೆ ಅರಣ್ಯ ಸಮಿತಿಯಲ್ಲಿ ದಾಖಲೆಗಳಿಲ್ಲ. ಆದರೆ ಸಂದರ್ಶನದ ಸಮಯದಲ್ಲಿ ತರಬೇತಿ ಪಡೆದವರು ಹೇಳುವಂತೆ ತರಬೇತಿಯಲ್ಲಿದ್ದ ವಿಷಯಗಳೆಂದರೆ ಮರಳು ಉಂಟಾಗುವ ರೀತಿ, ಆರ್ಥಿಕ ಮಹತ್ವ, ಮಾರಾಟಕ್ಕೆ ಮರಳನ್ನು ತೆಗೆಯಬೇಕಾದ ಸಂದರ್ಭಗಳಲ್ಲಿ ವಹಿಸಬೇಕಾದ ಎಚ್ಚರಿಕೆಗಳು ಇತ್ಯಾದಿ. ಆದರೆ ಈ ಇಡೀ ಶಿಬಿರದ ಅತ್ಯಂತ ಕುತೂಹಲಕಾರಿಯಾದ ಪರಿಣಾಮವೆಂದರೆ ಮರಳಿನ ಸಾಗಣೆಗೆ, ಗ್ರಾಮ ಅರಣ್ಯ ಸಮಿತಿಯ ಕಡೆಯಿಂದ ವ್ಯವಸ್ಥಿತವಾಗಿ ರಾಯಧನ ಸಂಗ್ರಹಿಸುವ ಕೆಲಸ ಪ್ರಾರಂಭವಾದದ್ದು. ಈ ವ್ಯವಹಾರದಿಂದ ಈ ಗ್ರಾಮ ಅರಣ್ಯ ಸಮಿತಿ ಇಡೀ ರಾಜ್ಯದಲ್ಲಿಯೇ ಅತ್ಯಂತ ಶ್ರೀಮಂತವಾದ ಸಮಿತಿಯಾಯಿತು. ಇದು ಗ್ರಾಮ ಅರಣ್ಯ ಸಮಿತಿ ಮಾಡಬಹುದಾದ, ಮಾಡಬೇಕಾದ ಕೆಲಸವೇ, ಈ ಕೆಲಸಕ್ಕೆ ಗ್ರಾಮ ಅರಣ್ಯ ಸಮಿತಿಗೆ ಅಧಿಕಾರವಿದೆಯೇ, ಇದನ್ನು ಜಂಟೀ ಅರಣ್ಯ ಯೋಜನೆಯ ಕೆಲಸವೆಂದು ಕರೆಯಬಹುದೇ ಎಂಬ ಪ್ರಶ್ನೆಗಳಿಗೆ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷ ಶಿವನಂಜಪ್ಪ ಹಾಗೂ ಸದಸ್ಯ ವಾಸುದೇವಯ್ಯ ಅದರಲ್ಲಿ ತಪ್ಪೇನಿದೆ ಎನ್ನುತ್ತಾರೆ. ಈ ರೀತಿ ಸಂಗ್ರಹವಾದ ಹಣದಲ್ಲಿ ಒಂದು ರೂಪಾಯಿಯನ್ನೂ ಅರಣ್ಯ ಸಂರಕ್ಷಣೆ, ಅರಣ್ಯಾಭಿವೃದ್ಧಿಯ ಕೆಲಸಗಳಿಗೆ ಬಳಸಿಲ್ಲ. ಅಂತಹ ಕೆಲಸಗಳಿಗೆ ಇಲಾಖೆಯಿಂದಲೇ ಹಣ ಬರಬೇಕೆಂಬುದು ಸಮಿತಿಯ ನಿಲುವು.

ಜಂಟೀ ಅರಣ್ಯ ಯೋಜನೆಯಲ್ಲಿ ಭಾಗವಹಿಸಲು ಸ್ಥಳೀಯ ಸಮುದಾಯದ ಸದಸ್ಯರಿಗೆ ತರಬೇತಿ ಅತ್ಯವಶ್ಯಕ. ತರಬೇತಿ, ಭಾಗವಹಿಸುವ ಪ್ರಕ್ರಿಯೆಗೆ ಅಗತ್ಯವಾದ ಸಾಮರ್ಥ್ಯವನ್ನು ಬೆಳೆಸಬೇಕು. ಅರಿವು ಮತ್ತು ಕೌಶಲಗಳನ್ನು ಹೆಚ್ಚಿಸಬೇಕು. ನೆಡುತೋಪನ್ನು ಬೆಳೆಸುವ ವಿಧಾನ, ಸಸಿಗಳ ಆಯ್ಕೆ, ನರ್ಸರಿ ನಿರ್ವಹಣೆ, ಅರಣ್ಯ ಸಂರಕ್ಷಣೆ, ಮಣ್ಣಿನ ಸಂರಕ್ಷಣೆ, ಚೆಕ್‌ಡ್ಯಾಮ್

ನಿರ್ಮಾಣ ಮುಂತಾದವುಗಳಿಗೆ ಸಂಬಂಧಿಸಿದ ತರಬೇತಿ ಜಂಟೀ ಅರಣ್ಯ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಕ್ಷೇತ್ರಕೌಶಲಗಳನ್ನು ಹೆಚ್ಚಿಸಿದರೆ, ಹಣಕಾಸಿನ ಲೆಕ್ಕವಿಡುವುದು, ನಡಾವಳಿಯನ್ನು ದಾಖಲಿಸುವುದು, ಸಮುದಾಯವನ್ನು ಸಂಘಟಿಸುವುದು ಮುಂತಾದವು ಗ್ರಾಮ ಅರಣ್ಯ ಸಮಿತಿಯ ಸತ್ವವನ್ನು ಹೆಚ್ಚಿಸಿ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತವೆ. ಈ ಸ್ವರೂಪದ ತರಬೇತಿಗಳು ನಡೆದಿರುವುದು ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಮಾತ್ರ. ಆದರೆ ಈ ಹಳ್ಳಿಗಳಲ್ಲೂ ಕೂಡ ಸಮುದಾಯದ ತರಬೇತಿಯ ಅಗತ್ಯವನ್ನು ಅವರಿಂದಲೇ ತಿಳಿದು ಅನಂತರ ತರಬೇತಿಯನ್ನು ಏರ್ಪಡಿಸಲಾಗಿಲ್ಲ. ತರಬೇತಿಯನ್ನು ಏರ್ಪಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳೇ ಮುಂದಾಳತ್ವ ವಹಿಸಿವೆ. ಕೆಲವೊಮ್ಮೆ ಗ್ರಾಮ ಅರಣ್ಯ ಸಮಿತಿಯೊಡನೆ ಸಮಾಲೋಚಿಸಿದಯೇ ತರಬೇತಿಯ ವಿಷಯ, ದಿನಾಂಕಗಳನ್ನು ನಿರ್ಧರಿಸಿವೆ. ಸಮಾಜ ಪರಿವರ್ತನಾ ಸಮುದಾಯ, ರೀಚ್ ಹಾಗೂ ಶರಾವತಿ ವಲಯಾಭಿವೃದ್ಧಿ ಸಮಿತಿಯ ಸದಸ್ಯರೊಡನೆ ನಡೆಸಿದ ಸಂದರ್ಶನಗಳಲ್ಲಿ "ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಯಾವಾಗ, ಎಂತಹ ತರಬೇತಿ ಬೇಕು ಎಂಬುದು ಅನೇಕ ಸಂದರ್ಭಗಳಲ್ಲಿ ತಿಳಿದಿರುವುದಿಲ್ಲ. ಹೀಗಾಗಿ ನಾವೇ ಆ ನಿರ್ಧಾರಗಳನ್ನು ಕೈಗೊಳ್ಳುತ್ತೇವೆ" ಎಂಬ ಧೋರಣೆ ಸ್ಪಷ್ಟವಾಗಿ ಕಂಡುಬರುತ್ತದೆ. ಇದು ಆಧುನೀಕರಣ ಸಿದ್ಧಾಂತವನ್ನು ಒಪ್ಪಿಕೊಂಡು ಅದನ್ನು ಅಳವಡಿಸಲು ಪ್ರಯತ್ನಿಸಿದ ಅಭಿವೃದ್ಧಿ ಕರ್ತರ ನಿಲುವಿಗಿಂತ ಭಿನ್ನವಲ್ಲವೆಂಬುದನ್ನು ನಾವು ಗಮನಿಸಬೇಕು.

ಸಸ್ಯ ಪ್ರಭೇದಗಳ ಹಾಗೂ ಸಸಿಗಳನ್ನು ನೆಡಬೇಕಾದ ಜಾಗದ ಆಯ್ಕೆ

ಸಸ್ಯ ಪ್ರಭೇದಗಳು ಹಾಗೂ ಅವುಗಳನ್ನು ನೆಡಬೇಕಾದ ಜಾಗದ ಆಯ್ಕೆಯ ಪ್ರಕ್ರಿಯೆ, ಸಹಭಾಗಿತ್ವ ತತ್ವಗಳ ಅನುಷ್ಠಾನಕ್ಕೆ ವಿಪುಲ ಅವಕಾಶಗಳನ್ನು ಒದಗಿಸುತ್ತದೆ. ಇದು ಅರಣ್ಯ ಇಲಾಖೆ ಮತ್ತು ಸ್ಥಳೀಯ ಸಮುದಾಯಗಳ ನಡುವಿನ ಮಾತುಕತೆ, ಸಂಧಾನಗಳ ಮೂಲಕವೇ ನಡೆಯಬೇಕಾದ ಕೆಲಸ. ಕಿರುಯೋಜನೆಯ ತಯಾರಿಕೆಯ ಹಂತದಲ್ಲಿ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಜೊತೆಗೆ ಸೇರಿ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ಮೂಲಕವಾಗಿ ಅರಣ್ಯದ ಮೇಲೆ ಅವಲಂಬಿತವಾಗಿರುವ ಸ್ಥಳೀಯ ಸಮುದಾಯದ ಅಗತ್ಯಗಳನ್ನು ಅಂದಾಜು ಮಾಡಿ, ಅದಕ್ಕೆ ಅನುಗುಣವಾಗಿ ಸಸ್ಯ ಪ್ರಭೇದಗಳನ್ನು ಆಯ್ಕೆ ಮಾಡಿ ಬೆಳೆಸಬೇಕಾಗುತ್ತದೆ. ಆದರೆ ಇಲ್ಲೊಂದು ವ್ಯವಹಾರಿಕ ತೊಂದರೆ ಕಂಡುಬರುತ್ತದೆ. ಕಿರುಯೋಜನೆಯಲ್ಲಿ ಸಸ್ಯ ಪ್ರಭೇದಗಳ ಆಯ್ಕೆಯಾದ ನಂತರ, ಸಸ್ಯಕ್ಷೇತ್ರಗಳಲ್ಲಿ ಬೆಳೆಸಿ, ಅನಂತರ ಅವುಗಳನ್ನು ಗೊತ್ತುಪಡಿಸಿದ ಜಾಗದಲ್ಲಿ ನೆಡುವುದು ಸಾಕಷ್ಟು ಸಮಯ ಹಿಡಿಯುವ ಕೆಲಸ. ಇದನ್ನು ನಿವಾರಿಸಿಕೊಳ್ಳಲು ಎರಡು ಮಾರ್ಗಗಳಿವೆ. ಮೊದಲನೆಯದು ಅಂತಹ ಸಸ್ಯ ಪ್ರಭೇದಗಳು ಬೇರೆಯ ಸಸ್ಯಕ್ಷೇತ್ರಗಳಲ್ಲಿದ್ದರೆ ಅಲ್ಲಿಂದ ತರಿಸಿ ಬಳಸುವುದು. ಎರಡನೆಯದು ಸದ್ಯದಲ್ಲಿ ಇರುವ ಸಸಿಗಳನ್ನು

ನೆಟ್ಟು ಅನಂತರ ಬೇಕಿರುವ ಸಸ್ಯಪ್ರಭೇದಗಳನ್ನು ನರ್ಸರಿಗಳಲ್ಲಿ ಬೆಳೆಸಿ, ಬಳಸುವುದು. ಈ ಎರಡೂ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವಿನ ಸಮಾಲೋಚನೆಯಿಂದ ಮಾತ್ರ ಇತ್ಯರ್ಥವಾಗಬೇಕು. ಇದು ಎಷ್ಟರಮಟ್ಟಿಗೆ ಸಾಧ್ಯವಾಗಿದೆ ಎಂಬುದು ಭಾಗವಹಿಸುವಿಕೆಯ ಆಚರಣೆಯನ್ನೂ, ಯಶಸ್ಸನ್ನೂ ಸೂಚಿಸುತ್ತದೆ. ಈ ಕಾರಣದಿಂದಲೇ ಸಸ್ಯಪ್ರಭೇದಗಳ ಆಯ್ಕೆ ಮತ್ತು ಅವುಗಳನ್ನು ಬೆಳೆಸಬೇಕಾದ ಪ್ರದೇಶಗಳ ಆಯ್ಕೆ ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸೂಚಿಸುವ ಅತ್ಯಂತ ಮುಖ್ಯವಾದ ವಿಷಯವಾಗುತ್ತದೆ.

ಕ್ಷೇತ್ರಕಾರ್ಯದ ಐದೂ ಹಳ್ಳಿಗಳಲ್ಲಿ ಭಾಗವಹಿಸುವಿಕೆಯ ಸ್ವರೂಪ, ವ್ಯಾಪ್ತಿಗಳನ್ನು ಅರ್ಥ ಮಾಡಿಕೊಳ್ಳಲು ಸಸ್ಯ ಪ್ರಭೇದಗಳ ಆಯ್ಕೆ ಹಾಗೂ ಮರಗಿಡಗಳನ್ನು ಬೆಳೆಸಬೇಕಾದ ಜಾಗದ ಆಯ್ಕೆಗೆ ಸಂಬಂಧಿಸಿದ ಮಾಹಿತಿಗಳನ್ನು ಸಂದರ್ಶನದ ಸಮಯದಲ್ಲಿ ಸಂಗ್ರಹಿಸಲಾಗಿದೆ. ಗ್ರಾಮ ಅರಣ್ಯ ಸಮಿತಿಯ ನಡಾವಳಿಗಳ ಹಾಗೂ ಕಿರುಯೋಜನೆಗಳ ದಾಖಲೆಗಳ ಪರಿಶೀಲನೆಯೊಡನೆ ಆಯಾ ವಲಯ ಅರಣ್ಯಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಡನೆ ನಡೆಸಿದ ಸಂದರ್ಶನಗಳಿಂದಲೂ ಮಾಹಿತಿಗಳನ್ನು ಪಡೆಯಲಾಗಿದೆ(ಕೋಷ್ಟಕ 14).

ಜಂಟೀ ಅರಣ್ಯ ಯೋಜನೆಯ ಒಂದು ಮುಖ್ಯ ಉದ್ದೇಶವೆಂದರೆ ಅರಣ್ಯಗಳ ಮೇಲೆ ಅವಲಂಬಿತವಾಗಿರುವ ಸ್ಥಳೀಯ ಜನ ಸಮುದಾಯದ ಉರುವಲು, ಮೇವು, ಸಣ್ಣ ಮರಮಟ್ಟು ಹಾಗೂ ಕಿರು ಅರಣ್ಯ ಉತ್ಪನ್ನಗಳ ಬೇಡಿಕೆಯನ್ನು ಅಂದಾಜು ಮಾಡಿ ಅವುಗಳನ್ನು ಪೂರೈಸಲು ಅಗತ್ಯವಾದ ಮರಗಿಡಗಳನ್ನು ಬೆಳೆಸುವುದು. ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳು ಒಟ್ಟಾಗಿ ಸೇರಿ ನಡೆಸುವ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ಮೂಲಕವಾಗಿ ಇದನ್ನು ಮಾಡಲಾಗುತ್ತದೆ. ಕ್ಷೇತ್ರಕಾರ್ಯದ ಐದೂ ಹಳ್ಳಿಗಳಲ್ಲಿ ಈ ಕೆಲಸವನ್ನು ಮಾಡಲಾಗಿದೆ(ಮಾಡಿರುವ ರೀತಿಯನ್ನು ಮುಂದೆ ಚರ್ಚಿಸುತ್ತೇವೆ). ಅರಣ್ಯ ಇಲಾಖೆ ಮತ್ತು ಸ್ಥಳೀಯ ಜನ ಜೊತೆಗೂಡಿ ತಮ್ಮ ಅಗತ್ಯಗಳನ್ನು ಪೂರೈಸಲು ಬೇಕಾದ ಸಸ್ಯ ಪ್ರಭೇದಗಳನ್ನು ಆಯ್ಕೆ ಮಾಡಿದ್ದಾರೆ. ಕುಮಾರನಹಳ್ಳಿಯ ಜನ ಮೇವಿನ ದೃಷ್ಟಿಯಿಂದ ಕಮರ, ಪಚ್ಚಾಲಿ, ಕೌಳೆ, ಉದಯ, ಕಾರೆ ಪ್ರಭೇದಗಳನ್ನೂ ಉರುವಲಿನ ದೃಷ್ಟಿಯಿಂದ ದಿಂಡಲ್, ಕಮರ, ಪಚ್ಚಾಲಿ, ಹೊಂಗೆ, ಬಳ್ಳಾರಿ ಜಾಲಿಗಳನ್ನೂ, ಕಿರು ಅರಣ್ಯ ಉತ್ಪನ್ನಗಳ ದೃಷ್ಟಿಯಿಂದ ಬೇವು, ಹೊಂಗೆ, ಕೌಳೆ, ಕಾರೆ ಮುಂತಾದ ಒಟ್ಟು 15 ಸಸ್ಯ ಪ್ರಭೇದಗಳನ್ನು ಆಯ್ಕೆ ಮಾಡಿದೆ. ಇದೇ ಮಾದರಿಯನ್ನು ಮರಡವಳ್ಳಿಯಲ್ಲೂ ನೋಡಬಹುದು. ಅಲ್ಲಿ ಕಿರು ಅರಣ್ಯ ಉತ್ಪನ್ನಗಳ ದೃಷ್ಟಿಯಿಂದ ಹಲಸು, ನೆಲ್ಲಿ, ನೇರಳೆ, ಅಳಲೆ, ಬಿಪ್ಪಾನಿ, ಬಿದಿರು, ವಾಟೆ, ಹುಳಿಮುರುಗಲು, ಜಮ್ಮ, ಮಡ್ಡಿ ಧೂಪಗಳಿಗೆ ಬೇಡಿಕೆಯಿದೆ. ಹನಿಯಾ, ಉದ್ದೂರು, ಮುಕುಂದೂರುಗಳಲ್ಲೂ ಇದನ್ನು ನೋಡಬಹುದು. ಆದರೆ ಮರಡವಳ್ಳಿಯನ್ನು ಬಿಟ್ಟರೆ ಉಳಿದ ಯಾವ ಕಡೆಗಳಲ್ಲೂ ಅರಣ್ಯ ಇಲಾಖೆ ಈ ಸಸ್ಯ ಪ್ರಭೇದಗಳನ್ನು ಒದಗಿಸಿಲ್ಲ,

ಒದಗಿಸುವ ಪ್ರಯತ್ನವನ್ನೂ ಮಾಡಿಲ್ಲ. ಸ್ಥಳೀಯ ಸಮುದಾಯದ ವಿವಿಧ ಬೇಡಿಕೆಗಳ ಬದಲಿಗೆ, ತೇಗ, ನೀಲಗಿರಿ, ಅಕೇಶಿಯಾ, ಸರ್ವೇ, ಬಿದಿರುಗಳನ್ನು ಮಾತ್ರ ಅರಣ್ಯ ಇಲಾಖೆ ಒದಗಿಸಿದೆ. ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ಮೂಲಕವಾಗಿ ಸಸ್ಯ ಪ್ರಭೇದಗಳ ಆಯ್ಕೆಯ ಪ್ರಕ್ರಿಯೆಯಲ್ಲಿ ಸ್ಥಳೀಯ ಜನ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶ್ರಮಿಸಿದ ಕುಮಾರನಹಳ್ಳಿಯ ರೀಚ್ ಸಂಸ್ಥೆಯ ಶ್ರೀ ಸಿಂಹ ಅವರು "ಅರಣ್ಯ ಇಲಾಖೆಯ ಈ ವರ್ತನೆ ಸಹಭಾಗಿತ್ವ ತತ್ವಗಳಲ್ಲಿ ಅರಣ್ಯ ಇಲಾಖೆಯ ನಂಬಿಕೆ ಕೇವಲ ತೋರಿಕೆಗೆ ಮಾತ್ರವೇನೋ ಎಂಬ ಅನುಮಾನವನ್ನುಂಟು ಮಾಡುತ್ತದೆ"[7] ಎನ್ನುತ್ತಾರೆ.

ಸ್ಥಳೀಯ ಸಮುದಾಯದ ಜೀವದ್ರವ್ಯ ಅಗತ್ಯಗಳ ಅಂದಾಜು ಮಾಡಿ, ಸಸ್ಯ ಪ್ರಭೇದಗಳ ಆಯ್ಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರಣ್ಯ ಇಲಾಖೆ, ಅಂತಹ ಸಸ್ಯ ಪ್ರಭೇದಗಳನ್ನು ಒದಗಿಸುವುದರಲ್ಲಿ ಆಸಕ್ತಿ ತೋರುವುದಿಲ್ಲವೇಕೆ ಎಂಬ ಪ್ರಶ್ನೆಗೆ ಎರಡು ಉತ್ತರಗಳು ಗೋಚರಿಸುತ್ತವೆ. ಮೊದಲನೆಯದಾಗಿ, ಗ್ರಾಮ ಅರಣ್ಯ ಸಮಿತಿಗೆ ಯಾವ ಸಸ್ಯ ಪ್ರಭೇದಗಳು ದೊರೆಯುತ್ತವೆ ಎಂಬುದು "ಇಲಾಖೆಯ ನರ್ಸರಿಗಳಲ್ಲಿ ಯಾವ ಸಸಿಗಳಿವೆ ಮತ್ತು ನರ್ಸರಿಗಳಲ್ಲಿ ಹೊಸ ಸಸಿಗಳನ್ನು ಬೆಳೆಸಲು ಎಷ್ಟು ಹಣ ಲಭ್ಯವಿದೆ ಎಂಬುದರ ಮೇಲೆ ಮಾತ್ರ ಅವಲಂಬಿತವಾಗಿದೆ."[8] ಎರಡನೆಯದು "ಜಂಟೀ ಅರಣ್ಯ ಯೋಜನೆಯಲ್ಲೇ ಅಡಕವಾಗಿರುವ ಹಣಕಾಸಿನ ಲಾಭ"ಕ್ಕೆ ಸಂಬಂಧಿಸಿದೆ. ಜಂಟೀ ಅರಣ್ಯ ಯೋಜನೆಯಲ್ಲಿ "ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವಿನ ಸಂಬಂಧ ಬೆಳೆಯುವುದೇ ಯೋಜನೆಯಿಂದ ದೊರೆಯುವ ಪ್ರಯೋಜನಗಳ ಪಟ್ಟಿಯಿಂದ. ಇದರಲ್ಲಿ ಗಮನ ಕೇಂದ್ರೀಕೃತವಾಗಿರುವುದು ಅಂತಿಮ ಹಂಚಿಕೆಯ ಸಂದರ್ಭದಲ್ಲಿ ನೆಡುತೋಪಿನಿಂದ ದೊರೆಯುವ ಆರ್ಥಿಕ ಆದಾಯದ ಮೇಲೆ. ಈ ಆದಾಯದ ನಿರೀಕ್ಷೆಯೇ ಬಹಳ ದೊಡ್ಡ ಆಮಿಷ. ಹೀಗಾಗಿ ನೆಡುತೋಪುಗಳು ಹಾಗೂ ನೆಡುತೋಪಿನ ಸಸ್ಯ ಪ್ರಭೇದಗಳ ಮೇಲೆ ಅರಣ್ಯ ಇಲಾಖೆ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆಯೇ ಹೊರತಾಗಿ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಗಳಲ್ಲಿ ಕಂಡುಬರುವ ಸಸ್ಯ ಪ್ರಭೇದಗಳ ಮೇಲಲ್ಲ. ಇದು ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೂ ಗೊತ್ತು. ಅವರೂ ಈ ಬಗ್ಗೆ ಪ್ರಶ್ನಿಸುವುದಿಲ್ಲ".[9] "ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಲ್ಲಿ ಕಂಡುಬರುವ ಸಸ್ಯ ಪ್ರಭೇದಗಳನ್ನು ಅರಣ್ಯ ಇಲಾಖೆ ನರ್ಸರಿಗಳಲ್ಲಿ ಬೆಳೆಸಿಲ್ಲವೆಂದು ಇದುವರೆವಿಗೂ ನಮ್ಮನ್ನು ಯಾರೂ ದೂರಿಲ್ಲ. ಜಂಟೀ ಅರಣ್ಯ ಯೋಜನೆಯ ವ್ಯಾಪ್ತಿಯಲ್ಲಿರುವ 52 ಹೆಕ್ಟೇರ್ ನೀಲಗಿರಿಯ ನೆಡುತೋಪಿನಿಂದ ಪ್ರತಿ ವರ್ಷ ಜನವರಿಯಲ್ಲಿ ಗ್ರಾಮ ಅರಣ್ಯ ಸಮಿತಿಗೆ ದೊರೆಯುವ ಆದಾಯವೇ ದೊಡ್ಡ ಆಕರ್ಷಣೆ. ಸಮಿತಿಯ ಸದಸ್ಯರಿಗೆ ಈ ಹಣ ಮುಖ್ಯವೇ ಹೊರತಾಗಿ ಸಸ್ಯ ಪ್ರಭೇದಗಳಲ್ಲ"[10] ಎನ್ನುತ್ತಾರೆ ಉದ್ದೂರು ವಲಯ ಅರಣ್ಯಾಧಿಕಾರಿ. ಇದೇ ರೀತಿ ಹನಿಯಾದ ಗ್ರಾಮ ಅರಣ್ಯ ಸಮಿತಿಯ ಏಕೈಕ

ಆಕರ್ಷಣೆಯೆಂದರೆ ಗೇರು ನೆಡುತೋಪು ಹಾಗೂ ಅದರಿಂದ ದೊರೆಯುವ ಹೆಚ್ಚಿನ ಮೌಲ್ಯದ ಆರ್ಥಿಕ ಉತ್ಪನ್ನಗಳು. ಹೀಗಾಗಿ ಇಲ್ಲಿ ಕೂಡ ಅರಣ್ಯ ಇಲಾಖೆ ವಿವಿಧ ಸಸ್ಯ ಪ್ರಭೇದಗಳನ್ನು ಬೆಳೆಸಿಲ್ಲವೆಂದು ಗ್ರಾಮ ಅರಣ್ಯ ಸಮಿತಿ ದೂರಿಲ್ಲ.

ಹನಿಯಾ, ಉದ್ದೂರು, ಮುಕುಂದೂರುಗಳ ಗ್ರಾಮ ಅರಣ್ಯ ಸಮಿತಿಯ ನಿಲುವೇ ಎಲ್ಲ ಕಡೆಯೂ ಇದೆ ಎನ್ನುವಂತಿಲ್ಲ. ಮರಡವಳ್ಳಿ ಈ ದೃಷ್ಟಿಯಲ್ಲಿ ಸ್ವಲ್ಪ ಭಿನ್ನ. ಮರಡವಳ್ಳಿಯಲ್ಲಿ ನಡೆದ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಲ್ಲಿ ಸ್ಥಳೀಯ ಅಗತ್ಯಗಳನ್ನು ಪೂರೈಸಲು ಅಗತ್ಯವಾದ 22 ಸಸ್ಯಪ್ರಭೇದಗಳನ್ನು ಪಟ್ಟಿ ಮಾಡಲಾಯಿತು. ಆರು ತಿಂಗಳ ಅವಧಿಯಲ್ಲಿ ಈ 22 ಪ್ರಭೇದಗಳಲ್ಲಿ 17 ಪ್ರಭೇದಗಳನ್ನು (77%) ನರ್ಸರಿಗಳಲ್ಲಿ ಬೆಳೆಸಿದ ಅರಣ್ಯ ಇಲಾಖೆ, ಗ್ರಾಮ ಅರಣ್ಯ ಸಮಿತಿಗೆ ಒದಗಿಸಿತು.

ಜಾಗದ ಆಯ್ಕೆ

ಮರಗಿಡಗಳನ್ನು ಬೆಳೆಸುವ ಜಾಗದ ಆಯ್ಕೆಗೆ ಸಂಬಂಧಿಸಿದಂತೆ ಹನಿಯಾ, ಉದ್ದೂರು ಮತ್ತು ಮುಕುಂದೂರುಗಳಲ್ಲಿ ಅರಣ್ಯ ಇಲಾಖೆಯೇ ನಿರ್ಧಾರ ಕೈಗೊಂಡಿದೆ. ಗ್ರಾಮ ಅರಣ್ಯ ಸಮಿತಿಯೊಡನೆ ಯಾವ ಸಮಾಲೋಚನೆಯೂ ಈ ಜಾಗಗಳಲ್ಲಿ ನಡೆದಿಲ್ಲ. ಉದ್ದೂರು, ಮುಕುಂದೂರುಗಳಲ್ಲಿ ಬೇರೆ ಜಾಗವೇ ಇಲ್ಲದಿರುವುದರಿಂದ ಆಯ್ಕೆಯ ಪ್ರಶ್ನೆಯೇ ಬರುವುದಿಲ್ಲ. ಹೀಗಾಗಿ ಸಮಾಲೋಚನೆ ಅನಗತ್ಯವೆಂಬುದು ಅರಣ್ಯ ಇಲಾಖೆಯ ಧೋರಣೆ. ಉದ್ದೂರು ಗ್ರಾಮ ಅರಣ್ಯ ಸಮಿತಿ ಈ ಬಗ್ಗೆ ತಲೆ ಕೆಡಿಸಿಕೊಳ್ಳದಿದ್ದರೂ, ಮುಕುಂದೂರಿನ ಭೂರಹಿತರು ಮತ್ತು ಸಣ್ಣ ರೈತರಲ್ಲಿ ಈ ಬಗ್ಗೆ ಅಸಮಾಧಾನವಿದೆ. ಜಂಟೀ ಅರಣ್ಯ ಯೋಜನೆಯ ವ್ಯಾಪ್ತಿಗೆ ತಂದಿರುವ ಮುಕುಂದೂರಿನ ಗುಂಡು ತೋಪು, ಅರಣ್ಯ ಇಲಾಖೆಯ ದೃಷ್ಟಿಯಲ್ಲಿ 'ಮುಕ್ತ ಬಳಕೆಗಾಗಿ ತೆರೆದಿಟ್ಟಿರುವ ಭೂಮಿ'(ಓಪನ್ ಆಕ್ಸಸ್ ಲ್ಯಾಂಡ್). ಇದರಿಂದ ಗುಂಡುತೋಪು ಹಾಳಾಗಿ ಹೋಗಿದ್ದು ಅದರಿಂದ ಏನೂ ಪ್ರಯೋಜನವಿಲ್ಲ. ಆದರೆ ಕ್ಷೇತ್ರಕಾರ್ಯದಲ್ಲಿ ಸಂದರ್ಶಿಸಿದ ಭೂರಹಿತರು ಮತ್ತು ಅತಿ ಸಣ್ಣ ರೈತರಲ್ಲಿ ಶೇಕಡಾ 78 ಹಾಗೂ 45 ಮಂದಿ ಈ ಗುಂಡುತೋಪಿನಿಂದ ದೊರೆಯುತ್ತಿದ್ದ ಅಲ್ಪಸ್ವಲ್ಪ ಜೀವದ್ರವ್ಯಗಳಿಗೂ ಈಗ ಸಂಚಕಾರ ಬಂದಿದೆ ಎನ್ನುತ್ತಾರೆ. ಜಂಟೀ ಅರಣ್ಯ ಯೋಜನೆ ಜಾರಿಯಾದ ನಂತರ ಗುಂಡು ತೋಪಿಗೆ ಬೇಲಿ ಹಾಕಿದ ನಂತರವೂ ಅದರಲ್ಲಿ ಏನನ್ನೂ ಬೆಳೆಸದಿರುವುದು ಈ ಗುಂಪಿನ ಜನರ ಅಸಮಾಧಾನವನ್ನು ಮತ್ತಷ್ಟು ಹೆಚ್ಚಿಸಿದೆ. ಹನಿಯಾದಲ್ಲಿ ಕೂಡ, ಗ್ರಾಮ ಅರಣ್ಯ ಸಮಿತಿಯೊಡನೆ ಸಮಾಲೋಚನೆ ಮಾಡದೆ ಊರೊಟ್ಟಿನ ಭೂಮಿಯಾದ ಗೋಮಾಳದಲ್ಲಿ ಮರಗಿಡಗಳನ್ನು ಬೆಳೆಸಲಾಗುತ್ತಿದೆ.

ಕುಮಾರನಹಳ್ಳಿಯಲ್ಲಿ ಮರಗಿಡಗಳನ್ನು ಬೆಳೆಸಬೇಕಾದ ಜಾಗವನ್ನು ಸಂಪೂರ್ಣವಾಗಿ ಗ್ರಾಮ ಅರಣ್ಯ ಸಮಿತಿಯೇ ನಿರ್ಧರಿಸಿದ್ದು, ಅದಕ್ಕೆ ಅರಣ್ಯ ಇಲಾಖೆ ಯಾವ ವಿರೋಧವನ್ನೂ ತೋರಿಲ್ಲ.

ಆದರೆ ಊರಿಗೆ ಸಮೀಪವಾಗಿಯೇ ಇರುವ ನೀಲಗಿರಿ ನೆಡುತೋಪಿನ ಸುತ್ತ ಬೇಲಿಯನ್ನು ನಿರ್ಮಿಸುವಾಗ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ಘರ್ಷಣೆಯಾಗಿದೆ. ಗ್ರಾಮ ಅರಣ್ಯ ಸಮಿತಿಯೊಡನೆ ಸಮಾಲೋಚನೆ ಮಾಡದೆ ಅರಣ್ಯ ಇಲಾಖೆ ಬೇಲಿಯನ್ನು ನಿರ್ಮಿಸಿತು. ದನಕರುಗಳು ಊರಿನಿಂದ ಹೊರಹೋಗುವ ದಾರಿಗೆ ಈ ಬೇಲಿ ಅಡ್ಡ ಬಂದಿದ್ದರಿಂದ ಅದನ್ನು ತೆಗೆಯುವಂತೆ ಸಮಿತಿ ಇಲಾಖೆಗೆ ಮನವಿ ಮಾಡಿತು. ಇಲಾಖೆ ತೆಗೆಯಲಿಲ್ಲ. ಬೇಲಿಯನ್ನು ತೆಗೆಯದಿದ್ದರೆ ನಿರ್ದಿಷ್ಟ ದಿನದಂದು ಊರಿನ ಎಲ್ಲ ದನಕರುಗಳನ್ನು ಬೇಲಿಯ ಮೂಲಕವಾಗಿಯೇ ನುಗ್ಗಿಸುವುದಾಗಿ ಗ್ರಾಮ ಅರಣ್ಯ ಸಮಿತಿ ಇಲಾಖೆಗೆ ನೋಟೀಸು ನೀಡಿತು. ಅನಂತರ ಇಲಾಖೆ ಬೇಲಿಯ ಜಾಗವನ್ನು ಬದಲಿಸಿತು. ಅರಣ್ಯ ಇಲಾಖೆ, ಅರಣ್ಯ ಸಮಿತಿಯೊಡನೆ ಸಮಾಲೋಚನೆ ನಡೆಸಿದ್ದರೆ ಈ ತಿಕ್ಕಾಟ ಉಂಟಾಗುತ್ತಿರಲಿಲ್ಲ. ಈ ಪರಿಸ್ಥಿತಿಗೆ ತೀರಾ ವಿರುದ್ಧವಾಗಿ ಮರಡವಳ್ಳಿಯಲ್ಲಿ ಮರಗಿಡಗಳನ್ನು ಬೆಳೆಸಬೇಕಾದ ಜಾಗದ ಬಗ್ಗೆ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ನಿರಂತರವಾದ ಸಮಾಲೋಚನೆ ನಡೆದಿದೆ.

ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿ ಜಾಗದ ಆಯ್ಕೆಯ ಪ್ರಕ್ರಿಯೆಯನ್ನು ಗಮನಿಸಿದಾಗ ಅರಣ್ಯ ಇಲಾಖೆಯ ನಿಲುವಿನಲ್ಲಿ ಎರಡು ಸ್ಪಷ್ಟ ವ್ಯತ್ಯಾಸಗಳನ್ನು ಗುರುತಿಸಬಹುದು. ಮೊದಲನೆಯದು ನೆಡುತೋಪಿಗೆ ಸಂಬಂಧಪಟ್ಟದ್ದು, ಎರಡನೆಯದು ನೆಡುತೋಪಿನ ಹೊರಗಿರುವ ಪ್ರದೇಶಕ್ಕೆ ಸಂಬಂಧಪಟ್ಟದ್ದು. ನೆಡುತೋಪಿಗಾಗಿ ಆಯ್ಕೆ ಮಾಡುವ ಜಾಗ, ಅಲ್ಲಿ ಬೆಳೆಸಬೇಕಾದ ಸಸ್ಯ ಪ್ರಭೇದಗಳ ಬಗ್ಗೆ ಅರಣ್ಯ ಇಲಾಖೆ ಸಮಾಲೋಚನೆ ನಡೆಸುವುದಿಲ್ಲ. ಅದು ಸಂಧಾನ, ಸಮಾಲೋಚನೆಗಳಿಂದ ಹೊರಗಿರುವ ವಿಷಯ. ಅದಕ್ಕೆ ಸಂಬಂಧಪಟ್ಟ ಎಲ್ಲ ನಿರ್ಧಾರಗಳನ್ನೂ ಸಂಪೂರ್ಣವಾಗಿಯೇ ಅರಣ್ಯ ಇಲಾಖೆಯೇ ಕೈಗೊಳ್ಳುತ್ತದೆ. ಉದಾಹರಣೆಗೆ ಕುಮಾರನಹಳ್ಳಿಯನ್ನು ಗಮನಿಸೋಣ. ಅಲ್ಲಿ ಗ್ರಾಮ ಅರಣ್ಯ ಸಮಿತಿ ಅಸ್ತಿತ್ವಕ್ಕೆ ಬಂದದ್ದು 23.3.19994ರಲ್ಲಿ. ಅಲ್ಲಿಂದಾಚೆಗೆ ಕುಮಾರನಹಳ್ಳಿ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿ ಬಂದ ಎಲ್ಲ ನೆಡುತೋಪುಗಳ ಬಗೆಗೂ ತಾತ್ವಿಕವಾಗಿ ಅರಣ್ಯ ಇಲಾಖೆ, ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿಯೊಡನೆ ಸಮಾಲೋಚಿಸಬೇಕು. 1994-95, 96-97 ಮತ್ತು 97-98ರಲ್ಲಿ ಜಾಜಿಕಲ್ಲು ಗುಡ್ಡದಲ್ಲಿ ಒಟ್ಟು 154 ಹೆಕ್ಟೇರ್ ಪ್ರದೇಶದಲ್ಲಿ ಜಂಟೀ ಅರಣ್ಯ ಯೋಜನೆಯಡಿಯಲ್ಲಿಯೇ ನೆಡುತೋಪುಗಳನ್ನು ನಿರ್ಮಿಸಿದೆ. ಆದರೆ ಇದರ ಬಗ್ಗೆ ಗ್ರಾಮ ಅರಣ್ಯ ಸಮಿತಿಯೊಡನೆ ಯಾವ ಸಮಾಲೋಚನೆಯನ್ನೂ ನಡೆಸಿಲ್ಲ. ಮರಡವಳ್ಳಿಯ ನಾಡಮಳ್ಳದಲ್ಲಿ ಜಂಟೀ ಅರಣ್ಯ ಯೋಜನೆಯಡಿಯಲ್ಲಿ ನೆಡುತೋಪನ್ನು ನಿರ್ಮಿಸುವಾಗಲೂ ಇದೇ ಧೋರಣೆಯನ್ನು ಕಾಣಬಹುದು. ಹನಿಯಾದಲ್ಲಿ 1998-99, 99-2000, 2000-2001ನೇ ಸಾಲಿನಲ್ಲಿ ನೆಡುತೋಪುಗಳನ್ನು ನಿರ್ಮಿಸುವಾಗ ಯಾವ ಸಮಾಲೋಚನೆಯೂ ನಡೆದಿಲ್ಲ. ಜಂಟೀ ಅರಣ್ಯ ಯೋಜನೆಯ ವ್ಯಾಪ್ತಿಯ ಪ್ರದೇಶದಲ್ಲಿ ನಡೆಯುವ ಯಾವುದೇ ಅರಣ್ಯ ಸಂಬಂಧಿತ ಕೆಲಸ, ಸ್ಥಳೀಯ ಸಮುದಾಯದ ಸಹಭಾಗಿತ್ವದಿಂದಲೇ ನಡೆಯಬೇಕಲ್ಲವೇ ಎಂಬ

ಪ್ರಶ್ನೆಗೆ ಹಿರಿಯ ಅರಣ್ಯಾಧಿಕಾರಿಗಳು ಬೇರೆ ಉತ್ತರವನ್ನೇ ನೀಡುತ್ತಾರೆ. 'ನೆಡುತೋಪು ಬೆಳೆಸುವುದು ಸಂಪೂರ್ಣವಾಗಿ ತಾಂತ್ರಿಕ ಜ್ಞಾನ ಅಗತ್ಯವಾದ ಪರಿಣಿತರ ಕೆಲಸ. ಅರಣ್ಯ ಇಲಾಖೆಯ ಸಿಬ್ಬಂದಿಗೆ ಅಂತಹ ಪರಿಣಿತಿಯಿದೆ. ಆ ಬಗ್ಗೆ ಏನೂ ತಿಳಿಯದ ಗ್ರಾಮ ಅರಣ್ಯ ಸಮಿತಿಯೊಂದಿಗೆ ನಾವೇಕೆ ಚರ್ಚಿಸಬೇಕು? ಅಂತಹ ತಾಂತ್ರಿಕ ಜ್ಞಾನವನ್ನು ಅವರಿಗೆ ತರಬೇತಿಯ ಮೂಲಕ ಒದಗಿಸಿ, ಅವರ ಸಾಮರ್ಥ್ಯವನ್ನು ಹೆಚ್ಚಿಸಿ, ಅನಂತರ ಅವರೊಡನೆ ಚರ್ಚಿಸಬೇಕಾದ ಅಗತ್ಯವೇನಿದೆ? ಇದರಿಂದ ಸಮಯ ವ್ಯರ್ಥವಾಗುವುದಿಲ್ಲವೇ? ನೆಡುತೋಪು ಬೆಳೆದನಂತರ, ಅದು ಜಂಟೀ ಅರಣ್ಯ ಯೋಜನೆಯಲ್ಲಿಯೇ ಇರುವುದರಿಂದ ಅದರ ರಕ್ಷಣೆಯಲ್ಲಿ ಸ್ಥಳೀಯರನ್ನು ಸೇರಿಸಿಕೊಳ್ಳುತ್ತೇವೆ. ಅದರಿಂದ ದೊರೆಯುವ ಲಾಭದಲ್ಲಿ ಅವರಿಗೂ ಪಾಲಿದೆ. ಇದಕ್ಕಿಂತ ಹೆಚ್ಚಾಗಿ ಅವರಿಗೇನು ಬೇಕು?[11] ಅರಣ್ಯ ಇಲಾಖೆಯ "ಐ ಮ್ಯಾನೇಜ್, ಯೂ ಪಾರ್ಟಿಸಿಪೇಟ್" ಎಂಬ ಈ ಧೋರಣೆಯನ್ನು ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿ ಮಾತ್ರ ಪ್ರಶ್ನಿಸಿದೆ. ನೆಡುತೋಪು ಬೆಳೆಸಲು ಅಂತಹ ಹೆಚ್ಚಿನ ತಾಂತ್ರಿಕ ಜ್ಞಾನವೇನೂ ಬೇಕಿಲ್ಲ. ಅದಕ್ಕೆ ಅಗತ್ಯವಾದ ಜ್ಞಾನ ಗ್ರಾಮ ಅರಣ್ಯ ಸಮಿತಿ ತರಬೇತಿಯ ಮೂಲಕ ಪಡೆದುಕೊಳ್ಳಲಾಗದಂಥದ್ದೇನೂ ಅಲ್ಲ ಎಂಬ ನಿಲುವು ತಳೆದ ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿ ದೇವಾಸದ 15 ಹೆಕ್ಟೇರ್ ಪ್ರದೇಶದಲ್ಲಿ ಮಿಶ್ರ ಪ್ರಭೇದಗಳ ನೆಡುತೋಪನ್ನು ಅರಣ್ಯ ಇಲಾಖೆಯ ತಾಂತ್ರಿಕ ನೆರವು ಪಡೆಯದೆಯೇ ಬೆಳೆಸಿ ತೋರಿಸಿದೆ.

ನೆಡುತೋಪಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಈ ಬಿಗಿ ನಿಲುವು ಅದರ ಹೊರಗಡೆಯ ಜಾಗದ ಆಯ್ಕೆಯ ಸಮಯದಲ್ಲಿ ಸಡಿಲಗೊಳ್ಳುತ್ತದೆ. ಆದರೆ ಇದು ಏಕಪ್ರಕಾರವಾಗಿ ನಡೆಯುವುದಿಲ್ಲ. ಮರಡವಳ್ಳಿಯಲ್ಲಿ ಅತ್ಯುತ್ತಮ ಮಟ್ಟದ ಸಮಾಲೋಚನೆ ನಡೆದು, ಅನುಷ್ಠಾನಗೊಂಡಿದ್ದರೆ ಕುಮಾರನಹಳ್ಳಿಯಲ್ಲಿ ಪರಿಸ್ಥಿತಿ ಸಾಧಾರಣವಾಗಿದೆ. ಗ್ರಾಮ ಅರಣ್ಯ ಸಮಿತಿ ಆಯ್ಕೆ ಮಾಡಿದ ಜಾಗಗಳಿಗೆ ಅರಣ್ಯ ಇಲಾಖೆ ಒಪ್ಪಿಗೆ ನೀಡಿದೆ. ಹನಿಯಾದ ಪರಿಸ್ಥಿತಿ ತದ್ವಿರುದ್ಧ. ಅಗತ್ಯವಾದಾಗ ಮಾತ್ರ ಅರಣ್ಯ ಇಲಾಖೆ, ಗ್ರಾಮ ಅರಣ್ಯ ಸಮಿತಿಯೊಂದಿಗೆ ಚರ್ಚಿಸುತ್ತದೆ, ನಿರ್ದೇಶನ ನೀಡುತ್ತದೆ. ಉಳಿದಂತೆ ಇಲಾಖೆ ಗ್ರಾಮ ಅರಣ್ಯ ಸಮಿತಿಗಾಗಲೀ ನಿರ್ವಹಣಾ ಸಮಿತಿಗಾಗಲೀ ಯಾವ ಗೌರವವನ್ನೂ ತೋರುವುದಿಲ್ಲ. ಗ್ರಾಮ ಅರಣ್ಯ ಸಮಿತಿಯೂ ಇಲಾಖೆಯನ್ನು ಸಂಪೂರ್ಣವಾಗಿ ಉದಾಸೀನ ಮಾಡಿದೆ. ಉದ್ದೂರು, ಮುಕುಂದೂರುಗಳ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ.

ಸಸ್ಯ ಪ್ರಭೇದಗಳು ಹಾಗೂ ಅವುಗಳನ್ನು ಬೆಳೆಸಬೇಕಾದ ಜಾಗದ ಆಯ್ಕೆ ಜಂಟೀ ಅರಣ್ಯ ಯೋಜನೆಯ ಅನುಷ್ಠಾನದಲ್ಲಿ ಬಹಳ ಮುಖ್ಯವಾದ ಹಂತ. ಸ್ಥಳೀಯ ಸಮುದಾಯಕ್ಕೆ, ತನ್ನ ಜೀವದ್ರವ್ಯ ಅಗತ್ಯ, ಆದ್ಯತೆಗಳನ್ನು ಸೂಚಿಸುವ, ಅವುಗಳಿಗೆ ತಕ್ಕಂತೆ ಯೋಜನೆಯನ್ನು ರೂಪಿಸುವ, ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಈ ಹಂತದಲ್ಲಿ ದೊರೆಯುತ್ತದೆ.

ಆದರೆ ತಾತ್ವಿಕವಾಗಿ ಇಂತಹ ಅವಕಾಶಗಳಿದ್ದರೂ ವಾಸ್ತವದಲ್ಲಿ, ಬಹುತೇಕ ಸಂದರ್ಭಗಳಲ್ಲಿ ಅರಣ್ಯ ಇಲಾಖೆಯೇ ಹೇಗೆ ಮತ್ತು ಏಕೆ ಈ ಆಯ್ಕೆಗಳನ್ನು ತಾನೇ ಮಾಡುತ್ತದೆ, ಈ ಆಯ್ಕೆಯ ಪ್ರಕ್ರಿಯೆ ಹೇಗೆ ಅನುಷ್ಠಾನಕ್ಕೆ ಬರದ ಕೇವಲ ಮಾಮೂಲಿ ಆಚರಣೆಯಾಗಿದೆ ಎಂಬುದನ್ನು ಕ್ಷೇತ್ರಾಧ್ಯಯನಗಳು ತೋರಿಸಿ ಕೊಟ್ಟಿವೆ. ಅರಣ್ಯ ಇಲಾಖೆಯ ಗಮನವಿರುವುದು ಅಂತಿಮ ಹಂತದಲ್ಲಿ ಅರಣ್ಯ ಸಮಿತಿಯ ಸದಸ್ಯರಿಗೆ ಆರ್ಥಿಕ ಆದಾಯವನ್ನೊದಗಿಸುವ ನೆಡುತೋಪುಗಳ ಮೇಲೇ ವಿನಃ ಗ್ರಾಮಸ್ಥರ ಜೀವದ್ರವ್ಯ ಅಗತ್ಯಗಳ ಪೂರೈಕೆಯ ಮೇಲಲ್ಲ ಎಂಬ ವಿಷಯ ಇಡೀ ಯೋಜನೆಯ ಮೂಲಭೂತ ಉದ್ದೇಶವನ್ನೇ ಪ್ರಶ್ನಿಸುವಂತೆ ಮಾಡುತ್ತದೆ. ಜಂಟೀ ಅರಣ್ಯ ಯೋಜನೆಯ ಈ ಮುಖ್ಯವಾದ ಹಂತದಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶಗಳಿದ್ದು, ಜನ ಸಕ್ರಿಯವಾಗಿ ಭಾಗವಹಿಸಿದರೂ, ಅದರಿಂದ ಗ್ರಾಮಸ್ಥರ ಅಗತ್ಯಗಳನ್ನು ಪೂರೈಸುವಂತಹ ಪ್ರಯೋಜನಗಳು ದೊರೆಯುವ ಸಾಧ್ಯತೆ ಬಹಳ ಕಡಿಮೆ ಎನ್ನುವ ವಾಸ್ತವ ಸಂಗತಿ, ಭಾಗವಹಿಸುವವರ ಸಂಖ್ಯೆಯನ್ನಾಗಲೀ, ಭಾಗವಹಿಸುವಿಕೆಯ ಗುಣಮಟ್ಟವನ್ನಾಗಲೀ ಹೆಚ್ಚಿಸಲು ನೆರವಾಗುವುದಿಲ್ಲ.

ನಿಯಮ ಪಾಲನೆ-ನಿಯಮ ಉಲ್ಲಂಘನೆ

ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಅರಣ್ಯವನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಜನರೇ ವಹಿಸಿಕೊಂಡು, ಅರಣ್ಯ ಉತ್ಪನ್ನಗಳಲ್ಲಿ ಪಾಲು ಗಳಿಸುವ ಹಕ್ಕನ್ನು ಪಡೆದುಕೊಳ್ಳುತ್ತಾರೆ. ಸ್ಥಳೀಯ ಅರಣ್ಯ ಸಂಪನ್ಮೂಲಗಳ ರಕ್ಷಣೆ, ಬಳಕೆಗೆ ಅಗತ್ಯವಾದ ನಿಯಮಗಳನ್ನು ಗ್ರಾಮ ಅರಣ್ಯ ಸಮಿತಿ ಮಾಡುತ್ತದೆ. ಮರಗಳನ್ನು ಕಡಿಯುವುದು, ಕಳ್ಳಸಾಗಾಣಿಕೆ, ಪ್ರಾಣಿಗಳ ಬೇಟೆ, ಅರಣ್ಯ ಸಂಪನ್ಮೂಲ ಗಳ ಅತಿ ಬಳಕೆ, ಒತ್ತುವರಿ, ದನಕರುಗಳನ್ನು ಮೇಯಿಸುವುದು ಮುಂತಾದವುಗಳಿಗೆ ಸಂಬಂಧಿಸಿದಂತೆ ಸ್ಥಳೀಯವಾಗಿಯೇ ರೂಪಿಸಿದ ನಿಯಮಗಳನ್ನು ಎಲ್ಲರ ಸಹಕಾರದಿಂದ ಅರಣ್ಯ ಸಮಿತಿ ಜಾರಿಗೆ ತರುತ್ತದೆ. ಗ್ರಾಮದಲ್ಲಿ ಎಲ್ಲ ಜನರ ಭಾಗವಹಿಸುವಿಕೆಯಿಂದ, ಎಲ್ಲರ ಅನುಮೋದನೆ ಯಿಂದ ಈ ನಿಯಮಗಳು ರೂಪುಗೊಂಡಿದಲ್ಲಿ ಸಾಮಾನ್ಯವಾಗಿ ಅವು ಉಲ್ಲಂಘನೆಯಾಗುವುದಿಲ್ಲ. ಉಲ್ಲಂಘನೆಯಾದ ಸಂದರ್ಭಗಳಲ್ಲಿ ಕಟ್ಟುನಿಟ್ಟಾಗಿ ದಂಡ ವಿಧಿಸುವುದರಿಂದ ಉಲ್ಲಂಘನೆಗಳಾಗ ದಂತೆ ತಡೆಯಬಹುದು. ಹೀಗಾಗಿ ನಿಯಮ ಪಾಲನೆ, ನಿಯಮ ಉಲ್ಲಂಘನೆ ಹಾಗೂ ದಂಡ ವಿಧಿಸಿರುವ ಪ್ರಕರಣಗಳನ್ನು ಸಹಭಾಗಿತ್ವದ ಪ್ರಮಾಣಾತ್ಮಕ ಸೂಚ್ಯಂಕವಾಗಿ ಪರಿಗಣಿಸಬಹುದು.

ಕ್ಷೇತ್ರಕಾರ್ಯದ ಎಲ್ಲ ಗ್ರಾಮ ಅರಣ್ಯ ಸಮಿತಿಗಳೂ ನಿಯಮಗಳನ್ನು ರೂಪಿಸಿವೆ. ಈ ಎಲ್ಲ ಗ್ರಾಮಗಳಲ್ಲಿ ಏಕ ಪ್ರಕಾರವಾಗಿ ಕಂಡುಬಂದಿರುವ ನಿಯಮಗಳೆಂದರೆ ನೆಡುತೋಪು ಹಾಗೂ ಯೋಜನೆಯಡಿಯಲ್ಲಿರುವ ಪ್ರದೇಶಗಳಲ್ಲಿ ದನಕರುಗಳನ್ನು ಮೇಯಿಸಬಾರದು, ಮರಗಳನ್ನು ಕಡಿಯಬಾರದು, ಕಿರು ಅರಣ್ಯ ಉತ್ಪನ್ನಗಳನ್ನು ಹೊರತುಪಡಿಸಿ ಇನ್ನಿತರ ಸಂಪನ್ಮೂಲಗಳನ್ನು

ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಿಂದ ತೆಗೆಯಬಾರದು, ಸ್ವಂತ ಉಪಯೋಗಕ್ಕಾಗಿ ಅರಣ್ಯ ಸಮಿತಿಯ ಅನುಮತಿ ಪಡೆದು ಮರ ಕಡಿಯಬಹುದು, ಸ್ವಂತ ಬಳಕೆಗಾಗಿ ಒಂದು ತಲೆ ಹೊರೆ ಸೌದೆಯನ್ನು ಅರಣ್ಯದಿಂದ ತರಬಹುದು ಇತ್ಯಾದಿ.

ಗ್ರಾಮ ಅರಣ್ಯ ಸಮಿತಿಗಳು ರೂಪಿಸಿ ಅನುಷ್ಠಾನಕ್ಕೆ ತಂದಿರುವ ಈ ಕಟ್ಟುಪಾಡುಗಳು ಎಷ್ಟರ ಮಟ್ಟಿಗೆ ಪಾಲನೆಯಾಗುತ್ತಿದೆ. ಉಲ್ಲಂಘನೆಯ ಎಷ್ಟು ಪ್ರಕರಣಗಳಿವೆ, ಉಲ್ಲಂಘನೆಗೆ ಕಾರಣಗಳೇನು, ಎಷ್ಟು ಪ್ರಕರಣಗಳಲ್ಲಿ ದಂಡ ವಿಧಿಸಲಾಗಿದೆ ಮುಂತಾದ ಮಾಹಿತಿಗಳನ್ನು ಕ್ಷೇತ್ರಾಧ್ಯಯನ ಸಂದರ್ಶನಗಳಿಂದ ಹಾಗೂ ಗ್ರಾಮ ಅರಣ್ಯ ಸಮಿತಿಯ ನಡಾವಳಿ ದಾಖಲೆಗಳಿಂದ ಪಡೆಯಲಾಗಿದೆ (ಕೋಷ್ಟಕ 15).

ಕ್ಷೇತ್ರಾಧ್ಯಯನದ ಎರಡು ವರ್ಷಗಳ ಅವಧಿಯಲ್ಲಿ ಕುಮಾರನಹಳ್ಳಿಯಲ್ಲಿ ನೆಡುತೋಪಿನಲ್ಲಿ ಕುರಿ ಮೇಯಿಸಿದ ಎರಡು ಪ್ರಕರಣಗಳು ಹಾಗೂ ಹಳ್ಳದಿಂದ ಮರಳು ತೆಗೆದ ಒಂದು ಪ್ರಕರಣ ದಾಖಲಾಗಿದೆ. ಕುರಿ ಮೇಯಿಸಿದ ಎರಡೂ ಪ್ರಕರಣಗಳಲ್ಲಿ ಕುರಿಗಳು ಪಕ್ಕದ ದೇವಲ ತಿಮ್ಮಾಪುರದವು. ಎರಡು ಬಾರಿಯೂ ದಂಡವನ್ನು ಹಾಕಲಾಗಿದೆ. ಮೂರನೆಯ ಪ್ರಕರಣದಲ್ಲಿ ಮರಳು ತೆಗೆದವರು ಹರಪನಹಳ್ಳಿಯವರು. ಮರಳು ಸಾಗಿಸಲು ಬಳಸಿದ ಟ್ರ್ಯಾಕ್ಟರನ್ನು ಮರಳಿನ ಸಮೇತ ಗ್ರಾಮ ಅರಣ್ಯ ಸಮಿತಿ ಹಿಡಿದು ನಿಲ್ಲಿಸಿತು. ಟ್ರ್ಯಾಕ್ಟರು ಜಿಲ್ಲೆಯ ವರಿಷ್ಠ ರಾಜಕಾರಣಿಯ ಕುಟುಂಬದವರದು. ಟ್ರ್ಯಾಕ್ಟರನ್ನು ಬಿಡುವಂತೆ ಬಂದ ಒತ್ತಾಯಕ್ಕೆ ಮಣಿಯದ ಗ್ರಾಮ ಅರಣ್ಯ ಸಮಿತಿ 2000/-ರೂ.ಗಳ ದಂಡ ಹಾಕಿ ವಸೂಲಿ ಮಾಡಿತು. ಮರಡವಳ್ಳಿಯ ನಾಲ್ಕು ಪ್ರಕರಣಗಳಲ್ಲಿ ನೆಡುತೋಪಿನಲ್ಲಿ ದನ ಮೇಯಿಸಿದ ಎರಡು ಕುಟುಂಬಗಳಿಗೆ ತಲಾ 100/- ರೂ.ದಂಡ ವಿಧಿಸಲಾಗಿದೆ. ಉಳಿದ ಎರಡು ಪ್ರಕರಣಗಳೂ ದನ ಮೇಯಿಸಿದ್ದೇ. ಆ ಇಬ್ಬರೂ ಆ ಹಳ್ಳಿಯವರೇ. ಮೊದಲನೆಯ ಉಲ್ಲಂಘನೆ. ಹೀಗಾಗಿ ಆ ಇಬ್ಬರನ್ನೂ ಅರಣ್ಯ ಸಮಿತಿಯ ಸಭೆಗೆ ಕರೆಸಿ ಎಚ್ಚರಿಸಲಾಗಿದೆ. ಹನಿಯಾದಲ್ಲಿ ಈ ಪ್ರಕರಣಗಳಿಗೆ ಸಂಬಂಧಿಸಿದ ಯಾವ ದಾಖಲೆಗಳೂ ಲಭ್ಯವಿಲ್ಲ. ಆದರೆ ಸಂದರ್ಶನದ ಸಮಯದಲ್ಲಿ ದೊರೆತ ಮಾಹಿತಿಯಂತೆ ಮಾರಾಟಕ್ಕಾಗಿ ತೆಗೆಯುವ ತಲೆ ಹೊರೆ ಉರುವಲಿನದು. ಮುಖ್ಯ ಸಮಸ್ಯೆಯಾಗಿದೆ. ಹನಿಯಾ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲೇ ಇರುವ ಕಾರ್ಗಡಿಯಲ್ಲಿ ನೆಲೆಸಿರುವ 60 ಕೂಲಿ ಕೆಲಸದ ಕುಟುಂಬಗಳು ಪ್ರತಿ ನಿತ್ಯವೂ ಕಾಡಿನಿಂದ ತಲೆ ಹೊರೆ ಸೌದೆ ತಂದು ಮಾರಾಟ ಮಾಡುತ್ತವೆ. ಇದು ಅರಣ್ಯ ಸಮಿತಿ ರೂಪಿಸಿರುವ ಕಾನೂನಿಗೆ ವಿರುದ್ಧವಾದುದು. ''ನಾವು ತಡೆದರೆ, ಅವರು ಬೇರೆಡೆಯಿಂದ ತರುತ್ತಾರೆ, ಇರಲಿ ಬಿಡಿ'' ಎಂಬ ಧೋರಣೆ ಇಲ್ಲಿನ ಅರಣ್ಯ ಸಮಿತಿಯದು. ಇದಕ್ಕೆ ಬೇರೆ ವ್ಯವಸ್ಥೆ ಮಾಡುವ, ಅವರ ಬೇಡಿಕೆಗಳನ್ನು ಕಿರುಯೋಜನೆಯಲ್ಲಿ ಪ್ರತಿನಿಧಿಸುವ ಕೆಲಸವನ್ನು ಇಲ್ಲಿನ ಅರಣ್ಯ ಸಮಿತಿ ಮಾಡಿಲ್ಲ. ಉದ್ದೂರು ಮತ್ತು ಮುಕುಂದೂರುಗಳಲ್ಲಿ ಅನುಕ್ರಮವಾಗಿ 17 ಮತ್ತು 22 ಉಲ್ಲಂಘನೆಯ ಪ್ರಸಂಗಗಳಿವೆ.

ಉದ್ದೂರಿನಲ್ಲಿ ರಾತ್ರಿಯಲ್ಲಿ ನೀಲಗಿರಿ ತೋಪುಗಳಿಂದ ಮರ ಕಡಿದು ಸಾಗಿಸುವುದು ಬಹು ಸಾಮಾನ್ಯ. ಮುಕುಂದೂರಿನಲ್ಲಿ ಜಂಟೀ ಅರಣ್ಯ ಯೋಜನೆಯಡಿಯಲ್ಲಿರುವ ಎಲ್ಲ ಪ್ರದೇಶಗಳಲ್ಲೂ ದನಕರುಗಳನ್ನು ಮೇಯಿಸುವುದು ಸಾಮಾನ್ಯ. ಎರಡೂ ಹಳ್ಳಿಗಳಲ್ಲಿ ದಂಡ ಹಾಕಿರುವುದು ಒಂದೊಂದೇ ಪ್ರಕರಣದಲ್ಲಿ. ಮರ ಕಡಿದವರು ಯಾರೆಂದು ತಿಳಿದರೆ ದಂಡ ಹಾಕಬಹುದು. ಇಲ್ಲದಿದ್ದರೆ ನಾವೇನು ಮಾಡಬೇಕು ಎನ್ನುವುದು ಅಧ್ಯಕ್ಷರವಾದ. 'ಸತ್ಯ ಅಧ್ಯಕ್ಷರಿಗೂ ತಿಳಿದಿದೆ, ಊರಿನವರಿಗೂ ತಿಳಿದಿದೆ' ಎನ್ನುವುದು ಉದ್ದೂರಿನಲ್ಲಿ ಸಂದರ್ಶನದಲ್ಲಿ ಕೇಳಿಬಂದ ಮಾತು. ಮುಕುಂದೂರಿನಲ್ಲಿ ಗೋಮಾಳದಲ್ಲಿ ಮೇಯಲು ಬಿಟ್ಟ ಎಲ್ಲ ದನಗಳೂ ಊರಿನವೇ. ಆದರೂ ದಂಡವಿಲ್ಲ.

ಉಲ್ಲಂಘನೆಯ ಪ್ರಕರಣ ಅದೇ ಹಳ್ಳಿಯವರಿಂದ ಆಗಬಹುದು. ಬೇರೆ ಹಳ್ಳಿಯವರಿಂದ ಆಗಬಹುದು ಅಥವಾ ಅರಣ್ಯ ಸಿಬ್ಬಂದಿಯವರಿಂದಲೂ ಆಗಬಹುದು. ಕುಮಾರನಹಳ್ಳಿಯಲ್ಲಿ ಊರಿನಿಂದ ದೂರವಿರುವ ನೆಡುತೋಪಿನಲ್ಲಿ ಕುರಿಯೊಂದಕ್ಕೆ 5/-ರೂ.ಗಳಂತೆ ವಸೂಲು ಮಾಡಿ ಮೇಯಲು ಬಿಟ್ಟ ಅರಣ್ಯ ರಕ್ಷಕನಿಗೆ ಅರಣ್ಯ ಸಮಿತಿ 1500/-ರೂ.ಗಳ ದಂಡ ವಿಧಿಸಿ ವಸೂಲಿ ಮಾಡಿತು. ಇಂತಹ ಪ್ರಕರಣಗಳು ಬೇರೆಲ್ಲೂ ಕಾಣುವುದಿಲ್ಲ. ಉಲ್ಲಂಘಿಸಿದವರು ಯಾರೇ ಆದರೂ ದಂಡ ಕಟ್ಟಲೇ ಬೇಕೆಂಬ ನಿಯಮವನ್ನು ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿ ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬಂದಿದೆ. ಸಂರಕ್ಷಣೆಯ ನಿಯಮಗಳನ್ನು ಸಮಿತಿಯ ಸಭೆಯಲ್ಲಿ ವಿಷದವಾಗಿ ಚರ್ಚಿಸಿದ ನಂತರ ಮಾತ್ರವೇ ಜಾರಿಗೆ ತರಲಾಗಿದೆ. ಆದ್ದರಿಂದ ಅಲ್ಲಿ ಉಲ್ಲಂಘನೆಯ ಪ್ರಕರಣಗಳು ಕಡಿಮೆ. ಈ ಮಾತು ಮರಡವಳ್ಳಿಗೂ ಅನ್ವಯಿಸುತ್ತದೆ. ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಉಲ್ಲಂಘಿಸಿದರೂ ಶಿಕ್ಷೆಯಾಗುವುದಿಲ್ಲವೆಂಬುದು ಬಹುತೇಕ ಖಾತರಿಯಾಗಿರುವುದರಿಂದ ಉಲ್ಲಂಘನೆಯ ಪ್ರಕರಣಗಳು ಏರುತ್ತಿವೆ.

ಒತ್ತುವರಿ ಕೂಡ ಅಪರಾಧವೇ. ಆದರೆ ಒತ್ತುವರಿಯನ್ನು ತೆರವುಗೊಳಿಸಲು ಅರಣ್ಯ ಇಲಾಖೆಯ ಸಂಪೂರ್ಣ ಬೆಂಬಲ ಬೇಕು. ಕುಮಾರನಹಳ್ಳಿ, ಮರಡವಳ್ಳಿ ಮತ್ತು ಮುಕುಂದೂರುಗಳಲ್ಲಿ, ಒತ್ತುವರಿಯನ್ನು ತೆರವುಗೊಳಿಸುವಂತೆ ಮೊದಲ ಎರಡು ಗ್ರಾಮ ಅರಣ್ಯ ಸಮಿತಿಗಳು ಇಲಾಖೆಯ ಮೇಲೆ ಒತ್ತಡ ತಂದಿವೆ. ಉದ್ದೂರಿನಲ್ಲಿ ಒತ್ತುವರಿಯ ದಾಖಲೆಯಿಲ್ಲ. ಹನಿಯಾದಲ್ಲಿ ಒತ್ತುವರಿಯ ಅನೇಕ ಪ್ರಕರಣಗಳಿದ್ದರೂ ಗ್ರಾಮ ಅರಣ್ಯ ಸಮಿತಿ ಅದರ ಬಗ್ಗೆ ಮಾತಾಡುವುದಿಲ್ಲ. ಏಕೆಂದರೆ, ಹನಿಯಾ ಗ್ರಾಮದ ಶೇಕಡಾ 72 ಕುಟುಂಬಗಳು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿವೆ.

ಕ್ಷೇತ್ರ ಕಾರ್ಯದ ಹಳ್ಳಿಗಳಲ್ಲಿ ನಿಯಮ ಪಾಲನೆ, ನಿಯಮ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಕಂಡುಬಂದ ಪರಿಸ್ಥಿತಿಗೆ ನಾಲ್ಕು ಮುಖ್ಯ ಕಾರಣಗಳನ್ನು ನೀಡಬಹುದು. ಇವುಗಳೆಂದರೆ ಪರಸ್ಪರ ಅಪನಂಬಿಕೆ, ಭವಿಷ್ಯದಲ್ಲಿ ದೊರೆಯುವ ಪ್ರಯೋಜನಗಳ ಬಗ್ಗೆ ತೀವ್ರ ಅನುಮಾನ, ಭೂ ಬಳಕೆಯ ಬಗೆಗಿರುವ ಅಸಮಾಧಾನ ಮತ್ತು ತಕ್ಷಣದ ಲಾಭದ ಆಮಿಷ.

ಊರೊಟ್ಟಿನ ಸಂಪನ್ಮೂಲದ ಸಾಮೂಹಿಕ ಸಂರಕ್ಷಣೆಯ ಯಶಸ್ಸು ಸಮುದಾಯದ ಸದಸ್ಯರಲ್ಲಿನ ಪರಸ್ಪರ ನಂಬಿಕೆಯ ಮೇಲೆ ಅವಲಂಬಿತವಾಗಿದೆ. ಇತರರೂ ನಿಯಮಗಳನ್ನು ಪಾಲಿಸುತ್ತಾರೆ ಎಂಬ ಭರವಸೆ, ನಂಬಿಕೆಗಳಿದ್ದಾಗ ಮಾತ್ರ ವ್ಯಕ್ತಿ ತಾನೂ ನಿಯಮವನ್ನು ಪಾಲಿಸುತ್ತಾನೆ. ಬೇರೆಯವರು ನಿಯಮವನ್ನು ಪಾಲಿಸದ ಸನ್ನಿವೇಶದಲ್ಲಿ ನಿಯಮವನ್ನು ಪಾಲಿಸುವ ವ್ಯಕ್ತಿ ಕಷ್ಟ ಶೋಷಣೆಗಳಿಗೊಳಗಾಗುತ್ತಾನೆ. ಅಂತಹ ವ್ಯಕ್ತಿಗೆ ಅಲ್ಪಾವಧಿ ಹಾಗೂ ದೀರ್ಘಾವಧಿಗಳೆರಡರ ಪ್ರಯೋಜನವೂ ದೊರೆಯುವುದಿಲ್ಲ. ಉದ್ದೂರಿನಲ್ಲಿ ಈ ಪರಸ್ಪರ ಅಪನಂಬಿಕೆ ಎದ್ದು ಕಾಣುತ್ತದೆ. ಉದ್ದೂರಿನಲ್ಲಿ ನೀಲಗಿರಿ ಎಣ್ಣೆಯಿಂದ ಪ್ರತಿ ವರ್ಷವೂ ಗ್ರಾಮ ಅರಣ್ಯ ಸಮಿತಿಗೆ ಸುಮಾರು ಒಂದು ಲಕ್ಷ ರೂ.ಗಳಷ್ಟು ಆದಾಯವಿದೆ. ಆದರೆ ಈ ಆದಾಯದಲ್ಲಿ ಸದಸ್ಯರಿಗೆ ಪಾಲು ಬಂದಿಲ್ಲ. ಹಣ ಏನಾಗಿದೆಯೆಂಬುದೂ ಗೊತ್ತಿಲ್ಲ. ಇದೇ ಕಾರಣದಿಂದ ನೆಡುತೋಪಿನ ಅಂತಿಮ ಕಟಾವಿನ ನಂತರ ತಮ್ಮ ಪಾಲು ದೊರೆಯುವುದೆಂಬ ನಂಬಿಕೆಯೂ ಸದಸ್ಯರಿಗಿಲ್ಲ.

ಉದ್ದೂರು ಮತ್ತು ಮುಕುಂದೂರುಗಳಲ್ಲಿ ಕೆರೆ ಅಂಗಳ, ಗೋಮಾಳ ಮತ್ತು ಗುಂಡು ತೋಪುಗಳನ್ನು ಜಂಟೀ ಅರಣ್ಯ ಯೋಜನೆಯಡಿಯಲ್ಲಿ ತಂದಿದ್ದು, ಅಲ್ಲಿ ವಿವಿಧ ಸಸ್ಯ ಪ್ರಭೇದಗಳನ್ನು ಬೆಳೆಸುವ ಯೋಜನೆ ನಡೆದಿದ್ದರೂ, ಅಲ್ಲಿ ಬೆಳೆಯುವ ಸಸ್ಯಗಳು ದೊಡ್ಡದಾಗುತ್ತವೆ, ಕಟಾವಿಗೆ ಬರುತ್ತವೆ ಉತ್ಪನ್ನಗಳಲ್ಲಿ ಪಾಲು ದೊರೆಯುತ್ತದೆ ಎಂಬುದನ್ನು ನಂಬುವವರ ಸಂಖ್ಯೆ ಬಹಳ ಕಡಿಮೆ. ಅವು ದೊಡ್ಡದಾಗುವ ಮುಂಚೆಯೇ ಅವನ್ನು ಯಾರಾದರೂ ಕಡಿಯುತ್ತಾರೆ ಎಂಬ ಭಾವನೆಯೇ ಹೆಚ್ಚು. ಒಂದು ವೇಳೆ ಕಟಾವಿಗೆ ಬಂದರೂ ಅದರಲ್ಲಿ ಸಿಂಹಪಾಲು ಸ್ಥಳೀಯ ರಾಜಕೀಯ ಧುರೀಣರಿಗೆ, ಅವರ ಸಂಬಂಧಿಗಳಿಗೆ ಮೀಸಲು ಎಂಬ ಭಾವನೆ ವ್ಯಾಪಕವಾಗಿದೆ.

ಉದ್ದೂರು, ಮುಕುಂದೂರು ಹಾಗೂ ಸ್ವಲ್ಪ ಮಟ್ಟಿಗೆ ಹನಿಯಾಗಳಲ್ಲಿ ಜಂಟೀ ಯೋಜನೆಯಡಿಯಲ್ಲಿ ತಂದಿರುವ ಭೂಮಿಯ ಬಗೆಗೂ ತೀವ್ರ ಅಸಮಾಧಾನಗಳಿವೆ. ಉದ್ದೂರು, ಮುಂಕುದೂರುಗಳ ಕೆರೆಯಂಗಳ, ಗೋಮಾಳ, ಗುಂಡು ತೋಪುಗಳಿಂದ ಭೂರಹಿತರು ಹಾಗೂ ಅತಿ ಸಣ್ಣ ರೈತರು ತಮ್ಮ ಜೀವದ್ರವ್ಯ ಅಗತ್ಯಗಳ ಸ್ವಲ್ಪ ಭಾಗವನ್ನಾದರೂ ಈ ಮೂಲಗಳಿಂದ ಪೂರೈಸಿಕೊಳ್ಳುತ್ತಿದ್ದುದನ್ನು ನಾವು ನೋಡಿದ್ದೇವೆ. ಈಗ ಅದಕ್ಕೂ ಸಂಚಕಾರ ಬಂದಿದೆ. ಜಂಟೀ ಅರಣ್ಯ ಯೋಜನೆಗೆ ಈ ಭೂಮಿಯೇ ಬೇಕಿತ್ತೇ, ಒತ್ತುವರಿ ಮಾಡಿಕೊಂಡಿರುವ ಭೂಮಿಯನ್ನು ತೆರವುಗೊಳಿಸಿ ಅಲ್ಲಿ ಜಂಟೀ ಅರಣ್ಯ ಯೋಜನೆಯನ್ನು ಜಾರಿಗೆ ತರಬಹುದಿತ್ತಲ್ಲವೇ ಎಲ್ಲಕ್ಕೂ ಬಡವರ ಭೂಮಿಯೇ ಬೇಕೇ ಎಂಬುದು ಅಸಮಾಧಾನಕ್ಕೆ ಕಾರಣ.

ಭವಿಷ್ಯದಲ್ಲಿ ದೊರೆಯುವ ಪ್ರಯೋಜನಗಳ ಬಗ್ಗೆ ಯಾವ ಖಚಿತ ಭರವಸೆಯೂ ಇಲ್ಲದ ಪರಿಸ್ಥಿತಿಯಲ್ಲಿ ತಕ್ಷಣದಲ್ಲಿ ಸಿಕ್ಕಿದ್ದನ್ನು ಬಾಚಿಕೊಳ್ಳುವವನು ಜಾಣನಾಗುತ್ತಾನೆ. ಎಂಟು ವರ್ಷಗಳ ನಂತರ ಸಾವಿರ ರೂಪಾಯಿಗಳನ್ನು ಪಡೆಯುವುದರ ಬದಲಿಗೆ(ಹಣ ದೊರೆಯುತ್ತದೆಂಬ ಯಾವ

ಗ್ಯಾರಂಟಿಯೂ ಇಲ್ಲದಿರುವಾಗ) ತಕ್ಷಣದಲ್ಲಿ ಮರ ಕಡಿದು ಇನ್ನೂರು ರೂಪಾಯಿ ಪಡೆಯುವುದೇ ಹೆಚ್ಚು ಆಕರ್ಷಕವೆನ್ನಿಸುತ್ತದೆ. ನಿಯಮ ಉಲ್ಲಂಘಿಸಿದಾಗ ದಂಡವಿಲ್ಲದ ಅಥವಾ ದೊರೆಯುವ ಲಾಭಕ್ಕಿಂತ ತೆರಬೇಕಾದ ದಂಡ ಅತಿ ಕಡಿಮೆಯಾದಾಗ ನಿಯಮ ಉಲ್ಲಂಘನೆ ಮತ್ತಷ್ಟು ಹೆಚ್ಚುತ್ತದೆ.

ಮೇಲೆ ಹೇಳಿದ ಪರಿಸ್ಥಿತಿಗೆ ವಿರುದ್ಧವಾಗಿ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಸದಸ್ಯರ ನಡುವೆ ಹಾಗೂ ಗ್ರಾಮ ಅರಣ್ಯ ಸಮಿತಿ ಮತ್ತು ಅರಣ್ಯ ಇಲಾಖೆಯ ನಡುವೆ ಅಗತ್ಯವಾದ ಮಟ್ಟದ ಪರಸ್ಪರ ನಂಬಿಕೆಯಿದೆ. ಭವಿಷ್ಯದಲ್ಲಿ ದೊರೆಯುವ ಪ್ರಯೋಜನಗಳ ಬಗ್ಗೆ ಸಾಕಷ್ಟು ಭರವಸೆಯಿದೆ. ನಿಯಮ ಉಲ್ಲಂಘನೆ ಮಾಡಿದ ಯಾರಿಗೇ ಆಗಲಿ ದಂಡ ತಪ್ಪಿದ್ದಲ್ಲ ಎಂಬುದು ಖಚಿತವಾಗಿದೆ. ದಂಡ ನೀಡುವುದರೊಡನೆ ಸಾಮಾಜಿಕ ಛೀಮಾರಿಗೆ ಒಳಗಾಗಬಹುದೆಂಬ ಅಂಜಿಕೆಯಿದೆ. ಗ್ರಾಮ ಅರಣ್ಯ ಸಮಿತಿಯ ನಾಯಕತ್ವದಲ್ಲಿ, ನಾಯಕರ ಪ್ರಮಾಣಿಕತೆಯಲ್ಲಿ ವಿಶ್ವಾಸವಿದೆ. ಈ ಎಲ್ಲ ಕಾರಣಗಳಿಂದಾಗಿ ಈ ಹಳ್ಳಿಗಳಲ್ಲಿ ನಿಯಮ ಉಲ್ಲಂಘನೆಯ ಪ್ರಕರಣಗಳ ಸಂಖ್ಯೆ ಕನಿಷ್ಟವಾಗಿವೆ.

ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಅರಣ್ಯ ಹಾಗೂ ನೆಡುತೋಪುಗಳ ಸಂರಕ್ಷಣೆ ಮತ್ತು ಸಂವರ್ಧನೆಗೆ, ಗ್ರಾಮ ಅರಣ್ಯ ಸಮಿತಿ ನೀತಿ, ನಿಯಮಗಳನ್ನು ರೂಪಿಸಿ, ಜಾರಿಗೆ ತಂದಾಗ ಅದರಿಂದ ಅನೇಕರಿಗೆ ತಾತ್ಕಾಲಿಕವಾಗಿಯಾದರೂ ತೊಂದರೆಯುಂಟಾಗುತ್ತದೆ. ಇಂತಹ ಸಂದರ್ಭದಲ್ಲಿ ತೊಂದರೆಗಳನ್ನು ಪರಿಹರಿಸಿಕೊಳ್ಳಲು ನಿಯಮಗಳನ್ನು ಉಲ್ಲಂಘಿಸುವ ಪ್ರಕರಣಗಳು ಕಂಡುಬರುತ್ತವೆ. ಆದರೆ ಸ್ಥಳೀಯ ಸಮುದಾಯದಲ್ಲಿ ಇಂತಹ ನಡವಳಿಕೆ ಕಂಡುಬರದಿದ್ದಾಗ, ಅದು ಹಲವಾರು ಸಾಧ್ಯತೆಗಳನ್ನು ಸೂಚಿಸುತ್ತವೆ. ನಿಯಮಗಳನ್ನು ಒಪ್ಪಿಕೊಂಡು, ಪಾಲಿಸುವ ಜನರು ಈಡಾಗುವ ತೊಂದರೆಗಳನ್ನು ಪರಿಹರಿಸಲು ಅರಣ್ಯ ಸಮಿತಿ ವಿಶೇಷ ಕ್ರಮಗಳನ್ನು ಕೈಗೊಂಡಿರಬಹುದು. ಇಡೀ ಸಮುದಾಯದ ಹಿತದೃಷ್ಟಿಯಿಂದ ತೊಂದರೆಗೊಳಗಾದ ಈ ಜನ ಈ ತೊಂದರೆಗಳನ್ನು ಸಹಿಸಿಕೊಂಡಿರಬಹುದು. ನಿಯಮಗಳನ್ನು ಉಲ್ಲಂಘಿಸಿದವರಿಗೆ ದಂಡನೆ ತಪ್ಪಿದ್ದಲ್ಲ ಎಂಬ ಹೆದರಿಕೆಯಿರಬಹುದು. ಈ ಎಲ್ಲವೂ ಗ್ರಾಮ ಅರಣ್ಯ ಸಮಿತಿಯ ಕಾಳಜಿ ಮತ್ತು ಸದಸ್ಯರ ನಾಗರಿಕ ನಡವಳಿಕೆಗಳನ್ನು ಸೂಚಿಸುತ್ತವೆ. ಗ್ರಾಮ ಅರಣ್ಯ ಸಮಿತಿಯ ಎಲ್ಲರೂ ಒಟ್ಟಿಗೆ ಸೇರಿ, ಒಮ್ಮತದಿಂದ ನೀತಿ, ನಿಯಮಗಳನ್ನು ರೂಪಿಸಿ, ಪಾಲಿಸಿದಾಗ ಉಲ್ಲಂಘನೆಯ ಪ್ರಕರಣಗಳು ಕಡಿಮೆಯಾಗುತ್ತವೆ ಎಂಬುದನ್ನು ಕ್ಷೇತ್ರಕಾರ್ಯದ ಹಳ್ಳಿಗಳು ತೋರಿಸಿವೆ. ಇದೇ ಆಧಾರದ ಮೇಲೆ ಉಲ್ಲಂಘನೆಯ ಪ್ರಕರಣಗಳು ಕಡಿಮೆಯಾದಷ್ಟೂ ಜನರ ಭಾಗವಹಿಸುವಿಕೆಯ ಪ್ರಮಾಣ ಹಾಗೂ ಗುಣಮಟ್ಟ ಉತ್ತಮವಾಗಿದೆಯೆಂದು ಭಾವಿಸಬಹುದು.

ಮಹಿಳೆಯರ ಭಾಗವಹಿಸುವಿಕೆ

ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಅರಣ್ಯ ಸಂರಕ್ಷಣೆಯಲ್ಲಿ ಮಹಿಳೆಯರಿಗೂ ಪಾತ್ರವಿದೆ. ಅರಣ್ಯದ ಮೇಲೆ ಹೆಚ್ಚಿನ ಅವಲಂಬನೆಯಿರುವ ಸಮುದಾಯದಲ್ಲಿ ಅರಣ್ಯ ಉತ್ಪನ್ನಗಳನ್ನು

ಸಂಗ್ರಹಿಸುವ, ಸಂಸ್ಕರಿಸುವ ಕೆಲಸಗಳನ್ನು ಬಹುಮಟ್ಟಿಗೆ ಮಹಿಳೆಯರೇ ಮಾಡುತ್ತಾರೆ. ಈ ಕಾರಣದಿಂದಲೇ 'ಅರಣ್ಯಕ್ಕೂ, ಮಹಿಳೆಯರಿಗೂ ಹೆಚ್ಚಿನ ನಿಕಟ ಸಂಬಂಧವಿದೆ' ಯೆಂಬ ಅಭಿಪ್ರಾಯ ವಿದೆ. ಹೀಗಾಗಿ, ಅರಣ್ಯ ಸಂರಕ್ಷಣೆ, ಅರಣ್ಯ ಸಂಪನ್ಮೂಲಗಳ ಬಳಕೆ, ನಿರ್ವಹಣೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಅವರ ಅಭಿಪ್ರಾಯ, ಆದ್ಯತೆ, ಸಲಹೆ, ಸೂಚನೆಗಳನ್ನು ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಲು ಜಂಟೀ ಅರಣ್ಯ ಯೋಜನೆಯಲ್ಲಿ ಅವರ ಭಾಗವಹಿಸುವಿಕೆ ಬಹಳ ಮುಖ್ಯ ವಾಗುತ್ತದೆ. ಇದು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ಎಂಬುದು ಪ್ರಸ್ತುತದ ಪ್ರಶ್ನೆ.

ಪ್ರಾರಂಭಕ್ಕೆ ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವವನ್ನು ಪರಿಶೀಲಿಸೋಣ. ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿಯ ಒಟ್ಟು 98 ಸದಸ್ಯರಲ್ಲಿ 33 ಮಹಿಳಾ ಸದಸ್ಯರಿದ್ದಾರೆ(34%). ಮರಡವಳ್ಳಿಯ 173 ಸದಸ್ಯರಲ್ಲಿ ಮಹಿಳೆಯರ ಸಂಖ್ಯೆ 20(12%) ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಈ ಪ್ರಮಾಣ ಶೇಕಡಾ 7 ರಿಂದ 8ರಷ್ಟಿದೆ(ಕೋಷ್ಟಕ 16).

ಗ್ರಾಮ ಅರಣ್ಯ ಸಮಿತಿಯ ದಿನನಿತ್ಯದ ಕೆಲಸಕಾರ್ಯಗಳನ್ನು ನಿರ್ವಹಣಾ ಸಮಿತಿ ನೋಡಿಕೊಳ್ಳುತ್ತದೆ. ಈ ಸಮಿತಿಯಲ್ಲಿ ಹನ್ನೊಂದು ಚುನಾಯಿತ ಸದಸ್ಯರಿದ್ದು ಅವರಲ್ಲಿ ಇಬ್ಬರು ಮಹಿಳೆಯರು ಇರಲೇಬೇಕು. ಎಲ್ಲ ನಿರ್ವಹಣಾ ಸಮಿತಿಗಳಲ್ಲೂ ಇದನ್ನು ಪಾಲಿಸಲಾಗಿದೆ. ಕುಮಾರನಹಳ್ಳಿ, ಮರಡವಳ್ಳಿ ಮತ್ತು ಹನಿಯಾಗಳಲ್ಲಿ ಕಡ್ಡಾಯ ಅಗತ್ಯಕ್ಕಿಂತ ಮಹಿಳೆಯರ ಸಂಖ್ಯೆ ಸ್ವಲ್ಪ ಜಾಸ್ತಿಯಾಗಿಯೇ ಇದೆ(ಕೋಷ್ಟಕ 17). ಆದರೆ ಕುಮಾರನಹಳ್ಳಿಯನ್ನು ಬಿಟ್ಟರೆ ಉಳಿದ ನಾಲ್ಕೂ ನಿರ್ವಹಣಾ ಸಮಿತಿಗಳಲ್ಲಿ ಮಹಿಳಾ ಸದಸ್ಯರು ಮುಂದುವರೆದ ಜಾತಿಗೆ ಸೇರಿದವರು.

ಸಭೆಗಳಲ್ಲಿನ ಹಾಜರಾತಿ ಭಾಗವಹಿಸುವಿಕೆಯ ಒಂದು ಪ್ರಮಾಣಾತ್ಮಕ ಸೂಚ್ಯಂಕವೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಕುಮಾರನಹಳ್ಳಿಯಲ್ಲಿ ಒಬ್ಬ ಮಹಿಳೆ ಮತ್ತು ಮರಡವಳ್ಳಿಯಲ್ಲಿ ಇಬ್ಬರು ಮಹಿಳೆಯರು ನಿರ್ವಹಣಾ ಸಮಿತಿಯ ಎಲ್ಲ ಸಭೆಗಳಲ್ಲಿಯೂ ತಪ್ಪದೇ ಭಾಗವಹಿಸಿದ್ದಾರೆ. ಉಳಿದ ಮೂರು ಗ್ರಾಮಗಳಲ್ಲಿ ತಪ್ಪದೇ ಭಾಗವಹಿಸುವ ಮಹಿಳಾ ಸದಸ್ಯರೇ ಇಲ್ಲ. ಇದೇ ಮಾದರಿಯನ್ನು ತರಬೇತಿ ಶಿಬಿರಗಳಲ್ಲೂ ನೋಡಬಹುದು. ಕುಮಾರನಹಳ್ಳಿಯ ತರಬೇತಿ ಶಿಬಿರ ಗಳಲ್ಲಿ ಭಾಗವಹಿಸಿದ 26 ಸದಸ್ಯರಲ್ಲಿ 7 ಮಹಿಳೆಯರಿದ್ದರೆ(27%), ಮರಡವಳ್ಳಿಯ ಸರಾಸರಿ 20ರಲ್ಲಿ 5 ಮಹಿಳೆಯರಿದ್ದಾರೆ(25%). ಹನಿಯಾ, ಉದ್ದೂರು, ಮುಕುಂದೂರುಗಳ ತರಬೇತಿ ಶಿಬಿರದಲ್ಲಿ ಮಹಿಳೆಯರು ಭಾಗವಹಿಸಿಲ್ಲ(ಕೋಷ್ಟಕ 18).

ನಿರ್ವಹಣಾ ಸಮಿತಿಯ ಸಭೆಯಲ್ಲಿ ಮಹಿಳಾ ಸದಸ್ಯರ ಹಾಜರಾತಿ ಭಾಗವಹಿಸುವಿಕೆಯನ್ನು ಸೂಚಿಸುತ್ತದೆಯೇ ಹೊರತಾಗಿ, ಭಾಗವಹಿಸುವಿಕೆಯ ಗುಣಮಟ್ಟವನ್ನಲ್ಲ. ಸಭೆಯಲ್ಲಿನ ಮಹಿಳಾ ಸದಸ್ಯರು ಎಷ್ಟರಮಟ್ಟಿಗೆ ಅರಣ್ಯ ಸಂಪನ್ಮೂಲಗಳಿಗೆ ಸಂಬಂಧಿಸಿದ ಮಹಿಳೆಯರ ಸಮಸ್ಯೆಗಳನ್ನು ಸಭೆಯಲ್ಲಿ ಚರ್ಚಿಸಿದ್ದಾರೆ, ಅಂತಹ ಸಮಸ್ಯೆಗಳ ಪರಿಹಾರಕ್ಕೆ ಎಂತಹ ಆದ್ಯತೆ ದೊರೆತಿದೆ ಎನ್ನುವುದು ಭಾಗವಹಿಸುವಿಕೆಯ ಗುಣಮಟ್ಟದ ಮೇಲೆ ಬೆಳಕು ಚೆಲ್ಲುತ್ತದೆ.

ಕುಮಾರನಹಳ್ಳಿಯ ಎಲ್ಲ ಭೂರಹಿತ ಕುಟುಂಬಗಳೂ ಸ್ಥಳೀಯ ಅರಣ್ಯಗಳಿಂದ ಬೀಡಿ ಎಲೆಯನ್ನು ಸಂಗ್ರಹಿಸುತ್ತವೆ. ಈ ಸಂಗ್ರಹಣೆಯ ಶೇಕಡಾ 60ಭಾಗ ನಡೆಯುವುದು ಮಹಿಳೆಯರಿಂದ. ತಂದ ಎಲೆಗಳನ್ನು 'ಪಿಂಡಿ'ಗಳನ್ನಾಗಿ ಮಾಡಿ ಮಾರಾಟ ಮಾಡುತ್ತಾರೆ. ಪಿಂಡಿಗಳನ್ನಾಗಿ ಮಾಡಿ, ಮಾರಾಟಕ್ಕೆ ಸಿದ್ಧಪಡಿಸುವ ಕೆಲಸವನ್ನು ಸಂಪೂರ್ಣವಾಗಿ ಹೆಂಗಸರೇ ಮಾಡುತ್ತಾರೆ. 100 ಪಿಂಡಿಗಳಿಗೆ 18 ರಿಂದ 20ರೂ.ಗಳು ದೊರೆಯುತ್ತದೆ. ಒಂದು ತಲೆ ಹೊರೆಯಿಂದ ಸುಮಾರು 200ಪಿಂಡಿಗಳನ್ನು ಮಾಡಬಹುದು. ಒಂದು ಕುಟುಂಬ ದಿನಕ್ಕೆ ಒಂದು ತಲೆ ಹೊರೆಯಷ್ಟು ಎಲೆಗಳನ್ನು ತರಬಹುದಾದ್ದರಿಂದ ಪ್ರತಿ ಕುಟುಂಬಕ್ಕೆ ಬೀಡಿ ಎಲೆಗಳ ಮಾರಾಟದಿಂದ ದಿನಕ್ಕೆ ಗರಿಷ್ಠ 40 ರೂ.ಗಳಷ್ಟು ಸಂಪಾದನೆಯಿದೆ. ಈ ವ್ಯವಹಾರ ಸರಿಯಾಗಿ ನಡೆದರೆ ಪರವಾಗಿಲ್ಲ. ಆದರೆ ಅರಣ್ಯ ಗುತ್ತಿಗೆದಾರ ಯೂನಸ್ ತನ್ನ ಕೈ ಚಳಕ ತೋರುತ್ತಾನೆ. ಮಾಲು ಕೊಟ್ಟವರಿಗೆ ಕೂಡಲೇ ಹಣ ಕೊಡುವುದಿಲ್ಲ. ಮಾರುಕಟ್ಟೆಯಲ್ಲಿ ಬೇಡಿಕೆಯೇ ಇಲ್ಲವೆಂದು 100 ಪಿಂಡಿಗಳಿಗೆ 10ರೂ.ಗಳನ್ನು ಕೊಡುವುದೂ ಉಂಟು. ಅನೇಕ ದಿನಗಳ ಕಾಲ ಬರದೇ, ಬೇಕೆಂದೇ 'ಬಂದಷ್ಟು ಬೆಲೆ'ಗೆ ಮಾರಾಟ ಮಾಡುವ ಸನ್ನಿವೇಶವನ್ನೂ ಸೃಷ್ಟಿಸುತ್ತಾನೆ. ಇದರಿಂದ ತೀವ್ರ ತೊಂದರೆಯಾಗುತ್ತಿರುವುದು ಮಹಿಳೆಯರಿಗೆ. ನಿರ್ವಹಣಾ ಸಮಿತಿಯ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಮಹಿಳಾ ಸದಸ್ಯರು ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಒತ್ತಾಯಿಸಿದ್ದಾರೆ. ಇದು ಸಭೆಯ ನಡಾವಳಿಯಲ್ಲಿ ದಾಖಲೆಯಾಗಿದೆ. ಮುಂದಿನ ಎರಡು ಸಭೆಗಳಲ್ಲಿ ಮತ್ತೆ ಇದೇ ವಿಷಯ ಚರ್ಚೆಯಾಗಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ನಿರ್ವಹಣಾ ಸಮಿತಿ, ಸಮಾಜ ಪರಿವರ್ತನಾ ಸಮುದಾಯ ಹಾಗೂ ರೀಚ್ ಸಂಸ್ಥೆಗಳೊಡನೆ ಸೇರಿ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಪ್ರಾಮಾಣಿಕ ಪ್ರಯತ್ನ ಮಾಡಿದೆ. ಬೀಡಿ ಎಲೆಯ ಪಿಂಡಿಗಳನ್ನು ನೇರವಾಗಿ ಗ್ರಾಮ ಅರಣ್ಯ ಸಮಿತಿಯೇ ಕೊಂಡು, ಅದನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಬಳಕೆಗೆ ತಂದಿದೆ. ಕೊಂಡ 100 ಪಿಂಡಿಗಳಿಗೆ 22/-ರೂ.ಗಳಂತೆ ಹಣ ನೀಡಿದೆ. ಆದರೆ ಮಾರಾಟ, ಅರಣ್ಯ ಸಮಿತಿಗೆ ಹೊಸ ಅನುಭವ. ಇದಕ್ಕಾಗಿ ಸಮಾಜ ಪರಿವರ್ತನಾ ಸಮುದಾಯ ತರಬೇತಿಯನ್ನು ಏರ್ಪಡಿಸಿದೆ. ಮಹಿಳಾ ಸದಸ್ಯರೊಬ್ಬರೂ ಸೇರಿದಂತೆ ಮೂರು ಜನರನ್ನು ರಾಣಿಬೆನ್ನೂರಿಗೆ ವಿಶೇಷ ತರಬೇತಿಗಾಗಿ ಕಳುಹಿಸಿದೆ. ಬೀಡಿ ಎಲೆಯ ಪಿಂಡಿಗಳಿಗೆ ಧಾರಣೆ ಕುಸಿದಾಗ ಅದನ್ನು ಮಾರಾಟ ಮಾಡದಂತೆ ಶೇಖರಿಸಿಟ್ಟು ಬೆಲೆ ಬಂದಾಗ ಮಾರುವ ಪ್ರಯತ್ನ ಮಾಡಿದೆ. ಗ್ರಾಮ ಅರಣ್ಯ ಸಮಿತಿಗೆ ಬಂದ ಡಾ.ಶಿವರಾಮ ಕಾರಂತ ಪ್ರಶಸ್ತಿಯ ಹಣವನ್ನು (12,000/-) ಈ ಮಾರಾಟದ ವ್ಯವಸ್ಥೆಯನ್ನು ಉತ್ತಮಗೊಳಿಸಲೆಂದೇ ಖರ್ಚುಮಾಡುವ ನಿರ್ಧಾರ ಮಾಡಿದೆ. ಈ ಎಲ್ಲ ಪ್ರಕ್ರಿಯೆಗಳಲ್ಲೂ ಭಾಗವಹಿಸಿದ ಮಹಿಳೆಯರು, ಮಾರಾಟ ಮಾಡುವುದರಲ್ಲಿ, ಚೌಕಾಶಿ ಮಾಡುವುದರಲ್ಲಿ ಮುಖ್ಯವಾದ ಪಾಠಗಳನ್ನು ಕಲಿತಿದ್ದಾರೆ. ಗ್ರಾಮ ಅರಣ್ಯ ಸಮಿತಿಯೊಂದಿಗೇ ಚೌಕಾಶಿ ಮಾಡಿರುವ

ಉದಾಹರಣೆಗಳೂ ಇವೆ. ನಿರ್ವಹಣಾ ಸಮಿತಿಯಲ್ಲಿ ಚರ್ಚಿಸಬೇಕಾದ ಕೆಲವು ವಿಷಯಗಳನ್ನು, ಸಭೆಗೆ ಮುಂಚಿತವಾಗಿ ಸಣ್ಣ ಗುಂಪಿನಲ್ಲಿ ಚರ್ಚಿಸಿ, ಅಭಿಪ್ರಾಯ ಸಂಗ್ರಹಿಸುವ ಪದ್ಧತಿಯನ್ನು ಮಹಿಳೆಯರು ಪ್ರಾರಂಭಿಸಿದ್ದಾರೆ. ಗ್ರಾಮ ಅರಣ್ಯ ಸಮಿತಿ ಈ ಪ್ರವೃತ್ತಿಗೆ ಬೆಂಬಲ ನೀಡಿ ಬೆಳೆಸುತ್ತಿದೆ.

ಮಹಿಳೆಯರ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಇದು ಒಳ್ಳೆಯ ಬೆಳವಣಿಗೆಯಾದರೂ ಇದಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ ಭಾಗವಹಿಸಿದವರು ಕೇವಲ ಇಬ್ಬರು ಮಹಿಳಾ ಸದಸ್ಯರು- ಶಾಂತಮ್ಮ ಮತ್ತು ಬಸಮ್ಮ. ಈ ಇಬ್ಬರನ್ನು ಬಿಟ್ಟರೆ ಉಳಿದ ಯಾವ ಮಹಿಳಾ ಸದಸ್ಯರೂ ಸಭೆಯಲ್ಲಿ ಮಾತಾಡುವುದಿಲ್ಲ. ಈ ಸದಸ್ಯರು ಬರುವ ತನಕ ಮಹಿಳೆಯರಿಗೆ ಸಂಬಂಧಿಸಿದ ವಿಷಯ ಗಳನ್ನು ನಿರ್ವಹಣಾ ಸಮಿತಿ ಚರ್ಚಿಸುವುದಿಲ್ಲ.

ಕುಮಾರನಹಳ್ಳಿಯಲ್ಲಿ 'ಸ್ವ ಸಹಾಯ ಗುಂಪು'ಗಳಿಲ್ಲ. ಆದರೆ ಆರು ಮಂದಿ ಮಹಿಳೆಯರು ಸೇರಿ ಇಂತಹ ಸ್ವಸಹಾಯ ಗುಂಪನ್ನು ಸ್ಥಾಪಿಸಿದರೂ ಅದು ಬಹಳ ಕಾಲ ನಡೆಯಲಿಲ್ಲ. ಇದರಲ್ಲಿನ ತೊಂದರೆಗಳನ್ನು ಪರಿಹರಿಸಲು ಈ ಗುಂಪಿಗೆ ಮಾರ್ಗದರ್ಶನ ಬೇಕು. ಆದರೆ ಮಹಿಳೆಯರ ಗುಂಪು ಈ ರೀತಿಯ ನೆರವನ್ನು ಯಾಚಿಸಿದರೂ, ಗ್ರಾಮ ಅರಣ್ಯ ಸಮಿತಿಯ ಕಡೆಯಿಂದಾಗಲೀ, ಸರ್ಕಾರೇತರ ಸಂಸ್ಥೆಗಳ ಕಡೆಯಿಂದಾಗಲೀ, ಯಾವ ಮಾರ್ಗದರ್ಶನವೂ ದೊರೆತಿಲ್ಲ. ಗ್ರಾಮ ಅರಣ್ಯ ಸಮಿತಿಯ ಹೊರಗಿನ ಯಾವ ಸಂಘಟನೆಗಳಿಗೂ ಇಲ್ಲಿ ಬೆಂಬಲ ದೊರಕುವುದಿಲ್ಲ ಎಂಬುದು ಸ್ವಸಹಾಯ ಗುಂಪನ್ನು ಸಂಘಟಿಸಿದ ಮಹಿಳೆಯರ ದೂರು. ಆದರೆ ಮರಡವಳ್ಳಿಯಲ್ಲಿ ಇದಕ್ಕೆ ವಿರುದ್ಧವಾದ ಪರಿಸ್ಥಿತಿಯಿದೆ. ಮಹಿಳೆಯರೇ ಇರುವ ಸ್ವಸಹಾಯಗುಂಪಿನ ಸಂಘಟನೆ, ಕಾರ್ಯಾಚರಣೆಗಳಿಗೆ ಗ್ರಾಮ ಅರಣ್ಯ ಸಮಿತಿ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಈ ಗುಂಪಿನ ಮಹಿಳೆಯರಿಗೆ ವಿಶೇಷ ತರಬೇತಿಗಳನ್ನು ಏರ್ಪಡಿಸಿದೆ. ಜಂಟೀ ಅರಣ್ಯ ಯೋಜನೆಯಿಂದ ದೊರೆಯುವ ಪ್ರತಿಫಲಗಳಿಗೆ ಸಾಕಷ್ಟು ಕಾಯಬೇಕಾಗಿರುವುದರಿಂದ ಆ ಅವಧಿಯಲ್ಲಿ ಸ್ವಸಹಾಯ ಗುಂಪಿನ ಚಟುವಟಿಕೆಗಳು ಕುಟುಂಬದ ಆದಾಯವನ್ನು ಹೆಚ್ಚಿಸಲು ನೆರವಾಗುತ್ತದೆ ಎಂಬುದು ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿಯ ನಿಲುವು.

ಮರಡವಳ್ಳಿಯ ಅರಣ್ಯ ಸಮಿತಿಯಲ್ಲಿರುವ ಮತ್ತೊಂದು ಉತ್ತಮ ಆಚರಣೆಯೆಂದರೆ, ತಾಲ್ಲೂಕು ಕೇಂದ್ರವಾದ ಸಾಗರದಲ್ಲಿನ ಅರಣ್ಯ ಇಲಾಖೆಯ ಎಲ್ಲ ಸಭೆಗಳಿಗೆ ನಿರ್ವಹಣಾ ಸಮಿತಿಯ ಇಬ್ಬರು ಮಹಿಳೆಯರನ್ನೇ ಕಳುಹಿಸುವುದು. ನಿರ್ವಹಣಾ ಸಮಿತಿಯ ಸದಸ್ಯರಾದ ಜಯಮ್ಮ ಮತ್ತು ಶಾಂತಮ್ಮ ಈ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಎರಡು ವರ್ಷಗಳ ಅವಧಿಯಲ್ಲಿನ ಅನುಭವದಿಂದ ನುರಿತ ಈ ಮಹಿಳೆಯರು ಅರಣ್ಯ ಸಮಿತಿಯ ಎಲ್ಲ ಕೆಲಸ ಕಾರ್ಯಗಳನ್ನೂ ಆತ್ಮವಿಶ್ವಾಸದಿಂದ ನಿರ್ವಹಿಸಬಲ್ಲರು. ಇದೊಂದು ಅಪರೂಪದ ವಿಷಯ. ದೇವಾಸದ ಮಿಶ್ರ ನೆಡು ತೋಪಿನಲ್ಲಿ ಮನೆಗೆ ಅಗತ್ಯವಾದ ಉಪ್ಪಾಗೆ, ಹುಳಿಮುರುಗಲು, ವಾಟೆ ಮರಗಳನ್ನು

ಹಾಕುವ ಕೆಲಸದಲ್ಲಿ ಮಹಿಳೆಯರೇ ಮುಂದಾಳತ್ವ ವಹಿಸಿದ್ದಾರೆ. ಈ ಮಹಿಳೆಯರಿಗೆ ಅರಣ್ಯ ಸಮಿತಿಯಿಂದ ದೊರೆತಷ್ಟೇ ಪ್ರೋತ್ಸಾಹ, ಉತ್ತೇಜನಗಳು ಅರಣ್ಯ ಇಲಾಖೆಯ ಕಡೆಯಿಂದಲೂ ದೊರೆತಿದೆ.

ಹನಿಯಾ, ಉದ್ದೂರು ಮತ್ತು ಮುಕುಂದೂರುಗಳಲ್ಲಿ ಕ್ಷೇತ್ರಾಧ್ಯಯನದ ಅವಧಿಯಲ್ಲಿ ಕ್ರಮವಾಗಿ 9,13 ಮತ್ತು 7 ನಿರ್ವಹಣಾ ಸಮಿತಿಯ ಸಭೆಗಳು ನಡೆದಿವೆ. ಈ ಸಭೆಗಳ ನಡಾವಳಿ ಪುಸ್ತಕದಲ್ಲಿ ಸಭೆಗೆ ಹಾಜರಾದ ಮಹಿಳಾ ಸದಸ್ಯರು ಸಹಿ ಮಾಡಿದ್ದಾರೆ. ಹನಿಯಾದ 9 ಸಭೆಗಳಲ್ಲಿ ಮಹಿಳಾ ಸದಸ್ಯರು ಭಾಗವಹಿಸಿರುವುದು 2 ಸಭೆಗಳಲ್ಲಿ ಮಾತ್ರ(ಈ ಎರಡೂ ಸಭೆಗಳು ಅಧ್ಯಕ್ಷರ ಮನೆಯಲ್ಲಿಯೇ ನಡೆದಿದೆ). ಉದ್ದೂರಿನ 13 ಸಭೆಗಳಲ್ಲಿ, 2ರಲ್ಲಿ ಮಾತ್ರ ಒಬ್ಬೊಬ್ಬ ಮಹಿಳಾ ಸದಸ್ಯರಿದ್ದಾರೆ. ಮುಕುಂದೂರಿನ 7 ಸಭೆಗಳಲ್ಲಿ ಒಬ್ಬ ಮಹಿಳೆ ಒಂದು ಸಭೆಯಲ್ಲಿ ಭಾಗವಹಿಸಿದ್ದಾಳೆ. ಆದರೆ ಮಹಿಳೆಯರು ಭಾಗವಹಿಸಿರುವ ಸಭೆಗಳೂ ಸೇರಿದಂತೆ ಯಾವ ಸಭೆಗಳಲ್ಲಿಯೂ ಅವರ ಅಗತ್ಯಗಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚೆಯಾಗಿಲ್ಲ.

ಅರಣ್ಯಕ್ಕೆ ಸಮೀಪವಾಗಿರುವ ಸಮುದಾಯದಲ್ಲಿ ಮಹಿಳೆಯರ ದಿನ ನಿತ್ಯದ ಅರಣ್ಯಾಧಾರಿತ ಅಗತ್ಯಗಳನ್ನು ಗಮನಿಸಿರುವ ನೀತಿ ನಿರೂಪಕರು, ಜಂಟೀ ಅರಣ್ಯ ಯೋಜನೆಯಲ್ಲಿ ಮಹಿಳೆಯರ "ಸಂಪೂರ್ಣ ಸಹಭಾಗಿತ್ವ"ಕ್ಕೆ ಅವಕಾಶಗಳನ್ನು ಕಲ್ಪಿಸಬೇಕೆಂದು ಮೊದಲಿನಿಂದಲೂ ಹೇಳುತ್ತ ಬಂದಿದ್ದಾರೆ. ಸರ್ಕಾರ, ಸಾಗರೋತ್ತರ ಅಭಿವೃದ್ಧಿ ಸಂಸ್ಥೆ, ನೆರವು ನೀಡಿಕೆಯ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಮುಖ್ಯವಾಗಿ ಎರಡು ವಿಷಯಗಳಿಗೆ ಒತ್ತು ನೀಡಿವೆ. ಮೊದಲನೆಯದು ಗ್ರಾಮ ಅರಣ್ಯ ಸಮಿತಿ, ನಿರ್ವಹಣಾ ಸಮಿತಿಗಳಲ್ಲಿ ಕಾನೂನು ಬದ್ಧವಾಗಿ ನಿರ್ದಿಷ್ಟ ಸ್ಥಾನಗಳನ್ನು ಮಹಿಳೆಯರಿಗೆ ಕಾದಿರಿಸಿರುವುದು. ಎರಡನೆಯದು ಅರಣ್ಯ ಸಂಪನ್ಮೂಲಗಳ ಬಳಕೆಗೆ ಸಂಬಂಧಪಟ್ಟಂತೆ ಮಹಿಳೆಯರ ವಿಶೇಷ ಜ್ಞಾನವನ್ನು ಯೋಜನೆಯಲ್ಲಿ ಬಳಸಿಕೊಳ್ಳುವುದು.

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ತತ್ವಗಳನ್ನು ಸೂತ್ರೀಕರಿಸುವ ಸಮಯದಲ್ಲಿ ಮಹಿಳೆಯರನ್ನು ಯೋಜನೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸುವಂತೆ ಮಾಡಲು ವಿಶೇಷ ಕಾರ್ಯತಂತ್ರಗಳನ್ನು ರೂಪಿಸಬೇಕೆಂಬ ತೀವ್ರ ಒತ್ತಾಯವಿದ್ದರೂ ಸಹ, ಅಂತಿಮವಾಗಿ ಜಾರಿಗೆ ಬಂದ ಒಪ್ಪಂದದಲ್ಲಿ ಅಂತಹ ಯಾವ ಕ್ರಮಗಳೂ ಇರಲಿಲ್ಲ. ಕಾನೂನು ಬದ್ಧವಾಗಿ ಮಹಿಳೆಯರಿಗೆ ಜಾಗ ಕಾದಿರಿಸಿ, ಸ್ಥಳೀಯ ಸಂಸ್ಥೆಯಲ್ಲಿ ಅವರನ್ನು ಸದಸ್ಯರನ್ನಾಗಿ ಮಾಡಿದರೆ ಭಾಗವಹಿಸುವಿಕೆ ಯಶಸ್ವಿಯಾಗಿ ಸಾಧ್ಯವಾಗುತ್ತದೆ ಎಂದು ಯೋಚಿಸಲಾಯಿತು. ಗ್ರಾಮ ಅರಣ್ಯ ಸಮಿತಿಗೆ ಕುಟುಂಬದಿಂದ ಒಬ್ಬರು ಸದಸ್ಯರಾಗಬಹುದು ಎಂಬ ನಿಯಮ, ಬಹಳಷ್ಟು ಸಂದರ್ಭಗಳಲ್ಲಿ ಮಹಿಳೆಯರನ್ನು ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವದಿಂದ ಹೊರಗಿಟ್ಟಿತು. ಈ ನಿಯಮಕ್ಕೆ ತಿದ್ದುಪಡಿ ಬಂದರೂ ಅದರಿಂದ ಯಾವ ಬದಲಾವಣೆಗಳೂ ಆಗದಿರುವುದನ್ನು ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ನೋಡಿದ್ದೇವೆ.

ಮಹಿಳೆಯರಿಗೆ ನಿರ್ವಹಣಾ ಸಮಿತಿಯಲ್ಲಿ ಸ್ಥಾನಕೊಡುವುದು ಕೇವಲ ಸಂವಿಧಾನಾತ್ಮಕ ಅಗತ್ಯವಾಗಿದೆಯೇ ಹೊರತಾಗಿ ಅದರಿಂದ ಯಾವ ಹೆಚ್ಚಿನ ಪ್ರಯೋಜನಗಳೂ ಆಗಿಲ್ಲವೆಂಬುದನ್ನು ಹನಿಯಾ, ಉದ್ದೂರು, ಮುಕುಂದೂರು ಅರಣ್ಯ ಸಮಿತಿಗಳು ತೋರಿಸಿಕೊಟ್ಟಿವೆ.

'ಅರಣ್ಯ ಸಂಪನ್ಮೂಲಗಳ ಬಗ್ಗೆ ಮಹಿಳೆಯರಿಗೆ ವಿಶೇಷ ಜ್ಞಾನ, ಪರಿಣಿತಿಗಳಿವೆ' ಎಂದು ಭಾವಿಸುವ ಜಂಟೀ ಅರಣ್ಯ ಯೋಜನೆ, ಈ ಪರಿಣಿತಿಯನ್ನು ವ್ಯಕ್ತಪಡಿಸುವ ಯಾವುದೇ ವಿಶೇಷ ಅವಕಾಶವನ್ನೂ ಅವರಿಗೆ ಒದಗಿಸುವುದಿಲ್ಲ. ಕಿರುಯೋಜನೆಯನ್ನು ತಯಾರಿಸುವ ಸಂದರ್ಭದಲ್ಲಿ ಇದನ್ನು ಸ್ಪಷ್ಟವಾಗಿ ಗಮನಿಸಬಹುದು. ಕಿರುಯೋಜನೆಯನ್ನು ಸಿದ್ಧಪಡಿಸಲು ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಿಂದ ಸಂಗ್ರಹಿಸುವ ಮಾಹಿತಿಯ ಪಟ್ಟಿಯನ್ನು ನೋಡೋಣ (ಅಧ್ಯಾಯ 5, ಕೋಷ್ಟಕ 5). ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಲ್ಲಿ ಭಾಗವಹಿಸುವವರನ್ನು ವಿವಿಧ ಗುಂಪುಗಳನ್ನಾಗಿ ಮಾಡಿ, ಪ್ರತಿ ಗುಂಪಿಗೂ ಒಂದು ನಿರ್ದಿಷ್ಟ ಮಾಹಿತಿಯನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ನೀಡಲಾಗುತ್ತದೆ. ಈ ಗುಂಪಿನಲ್ಲಿ ಮಹಿಳೆಯರೂ ಇರುವುದುಂಟು. ಮಹಿಳೆಯರು ಯಾವ ಗುಂಪಿನಲ್ಲಿ ಇರಬೇಕು ಎಂಬುದನ್ನು ಸಮೀಕ್ಷೆಯನ್ನು ನಡೆಸುವವರು ನಿರ್ಧರಿಸುತ್ತಾರೆ. ಇಲ್ಲಿಯೂ ಇದೇ ಸಮಸ್ಯೆ ಬರುತ್ತದೆ. ಆರು ಜನರಿರುವ ಗುಂಪಿನಲ್ಲಿ ಒಬ್ಬಳೇ ಮಹಿಳೆ ಇರುತ್ತಾಳೆ. ಯಥಾಪ್ರಕಾರ ಇಲ್ಲಿ ಕೂಡ ಅವಳು ಮಾತನಾಡುವುದಿಲ್ಲ. ನಿರ್ವಹಣಾ ಸಮಿತಿಯ ಸಭೆಯಲ್ಲಿ ಕಂಡುಬರುವ ಸಮಸ್ಯೆಗಳೇ ಇಲ್ಲಿಯೂ ಎದುರಾಗುತ್ತದೆ. ಅರಣ್ಯ ಸಂಪನ್ಮೂಲಗಳ ಬಳಕೆ, ಕಿರು ಅರಣ್ಯ ಉತ್ಪನ್ನಗಳು, ಮನೆಗೆ ಉಪಯೋಗ ವಾಗುವ ಸಸ್ಯ ಪ್ರಭೇದಗಳ ಬಗ್ಗೆ ಮಹಿಳೆಯರಿಗೆ ಹೆಚ್ಚಿನ ಅರಿವಿದೆ ಎಂಬ ಗ್ರಹಿಕೆಯಿದೆ. ಇದಕ್ಕೆ ಸಂಬಂಧಿಸಿದ ಗುಂಪಿನಲ್ಲಿ ಮಹಿಳೆಯನ್ನು ಸೇರಿಸಿದರೆ ಉಪಯೋಗವಾಗುತ್ತದೆ. ಆದರೆ ಅನೇಕ ಬಾರಿ ಹೀಗಾಗುವುದಿಲ್ಲ. ಯಾವುದೋ ಒಂದು ಗುಂಪಿನಲ್ಲಿ ಮಹಿಳಾ ಪ್ರತಿನಿಧಿ ಇದ್ದರಾಯಿತು ಎಂಬ ಧೋರಣೆಯೇ ಸಾಮಾನ್ಯ. ಅರಣ್ಯ ಸಂಪನ್ಮೂಲದ ಮೇಲೆ ಮಹಿಳೆಯರ ಅವಲಂಬನೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಲ್ಲಿ ಮಹಿಳೆಯದೇ ಒಂದು ಪ್ರತ್ಯೇಕ ಗುಂಪು ಮಾಡಬಾರದೇಕೆ? ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಲ್ಲಿ ಭಾಗವಹಿಸುವವರಿಗೆ ತರಬೇತಿ ನೀಡುವ ಸ್ವಯಂಸೇವಾ ಸಂಸ್ಥೆಗಳಿಗೆ ಈ ಪ್ರತ್ಯೇಕವಾದ ಮಹಿಳೆಯರ ಗುಂಪಿಗೆ ತರಬೇತಿ ನೀಡುವುದು ಕಷ್ಟವಾದ ವಿಷಯವೇನಲ್ಲ. ಗುಂಪಿನಲ್ಲಿ ಮಹಿಳೆಯರೇ ಇರುವುದರಿಂದ ಯಾವುದೇ ಸಂಕೋಚ, ಹಿಂಜರಿಕೆಗಳಿಲ್ಲದೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ಸಾಧ್ಯತೆ ಅಲ್ಲಿರುತ್ತದೆ. ಆದರೆ ಈ ಪ್ರಯತ್ನ ಯಾವ ಅರಣ್ಯ ಸಮಿತಿಯಲ್ಲೂ ಕಂಡುಬರುವುದಿಲ್ಲ.

ಜಂಟೀ ಅರಣ್ಯ ಯೋಜನೆಯಲ್ಲಿ ಮಹಿಳೆಯರ ಸಹಭಾಗಿತ್ವಕ್ಕೆ ತಾತ್ವಿಕವಾಗಿ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಕುಟುಂಬದಲ್ಲಿರುವ ಸ್ತ್ರೀ ಪುರುಷ ಅಸಮಾನತೆ, ಪುರುಷ ಪ್ರಾಬಲ್ಯಗಳೇ

ಗ್ರಾಮ ಅರಣ್ಯ ಸಮಿತಿಗಳಲ್ಲೂ ವ್ಯಕ್ತವಾಗಿ ಅವರನ್ನು ಅಂಚಿಗೆ ದೂಡಿದೆ. ಗ್ರಾಮ ಅರಣ್ಯ ಸಮಿತಿ, ಅರಣ್ಯಾಧಾರಿತ ಅಗತ್ಯಗಳಿಗೆ ಸಂಬಂಧಿಸಿದಂತೆ ಮಹಿಳೆಯರ ಸಮಸ್ಯೆಗಳಿಗೆ ವಿಶೇಷ ಗಮನ ನೀಡಿ, ಅದನ್ನು ಪರಿಹರಿಸುವ ಪ್ರಕ್ರಿಯೆಯಲ್ಲಿ ಮಹಿಳೆಯರು ಭಾಗವಹಿಸುವಂತೆ ಮಾಡಲು ವಿಶೇಷ ಕ್ರಮಗಳನ್ನು ಕೈಗೊಂಡ ಹೊರತೂ ಹೆಚ್ಚಿನದೇನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಇಂತಹ ಕೆಲವು ಪ್ರಾರಂಭದ ಕ್ರಮಗಳನ್ನು ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ನಾವು ನೋಡ ಬಹುದು. ಗ್ರಾಮ ಅರಣ್ಯ ಸಮಿತಿ, ನಿರ್ವಹಣಾ ಸಮಿತಿಗಳಲ್ಲಿ ಮಹಿಳೆಯರಿಗೆ ಸಂವಿಧಾನಾತ್ಮಕ ಪ್ರಾತಿನಿಧ್ಯ ನೀಡಿದ ಮಾತ್ರಕ್ಕೆ, ಅವರ ಭಾಗವಹಿಸುವಿಕೆಯಾಗಲೀ, ಸಹಭಾಗಿತ್ವದ ಗುಣಮಟ್ಟ ವಾಗಲೀ ಹೆಚ್ಚಾಗುವುದಿಲ್ಲ ಎಂಬುದನ್ನು ಹನಿಯಾ, ಉದ್ದೂರು ಮತ್ತು ಮುಕುಂದೂರು ಗಳ ಪ್ರಕರಣಗಳು ತಿಳಿಸುತ್ತವೆ.

ಹನಿಯಾ, ಉದ್ದೂರು ಮತ್ತು ಮುಕುಂದೂರುಗಳ ನಿರ್ವಹಣಾ ಸಮಿತಿಯ ಮಹಿಳಾ ಸದಸ್ಯರನ್ನು, ಸಭೆಯಲ್ಲಿ ಅವರ ಗೈರು ಹಾಜರಿಯ ಬಗ್ಗೆ, ಸೀಮಿತ ಪಾತ್ರದ ಬಗ್ಗೆ ಪ್ರಶ್ನಿಸಿದಾಗ ಹಲವಾರು ವಿಷಯಗಳು ಹಾಗೂ ಅಭಿಪ್ರಾಯಗಳು ಹೊರ ಬಂದವು.

- ಹನಿಯಾದಲ್ಲಿ ಅಧ್ಯಕ್ಷರ ಕುಟುಂಬದ ಹೆಣ್ಣುಮಕ್ಕಳೇ ನಿರ್ವಹಣಾ ಸಮಿತಿಯ ಸದಸ್ಯರೂ ಆಗಿದ್ದಾರೆ.
- ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಈ ಶ್ರೀಮಂತ ಹೆಣ್ಣುಮಕ್ಕಳು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಭೂರಹಿತ ಕೂಲಿ ಕಾರ್ಮಿಕರ ಜೊತೆಗೆ ಸಭೆಯಲ್ಲಿ ಕುಳಿತು ಮಾತನಾಡುವುದು ಸಾಧ್ಯವಿಲ್ಲ. ಒಂದು ವೇಳೆ ಸಭೆಗೆ ಬಂದರೂ ಕುಟುಂಬದ ಹಿರಿಯರೆದುರಿಗೆ ಮಾತಾಡುವುದು ಅಸಾಧ್ಯ.
- ಕಾಡಿನಲ್ಲಿ ತಲೆ ಹೊರೆ ಸೌದೆ, ಹಸಿರು ಗೊಬ್ಬರ ಹಾಗೂ ಇನ್ನಿತರ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಮಹಿಳೆಯರ ಅಗತ್ಯಗಳ ಬಗ್ಗೆ, ಕಾಳಜಿಯ ಬಗ್ಗೆ ಹೆಚ್ಚಿನ ವಿಷಯಗಳು ತಿಳಿದಿಲ್ಲದಿರುವಾಗ ಮಾತಾನಾಡುವುದು ಹೇಗೆ?
- ಎಲ್ಲವನ್ನೂ ತಿಳಿದವರು ನಡೆಸಿಕೊಂಡು ಹೋಗುತ್ತಾರೆ. ಮಧ್ಯೆ ನಾವೇಕೆ ಮಾತಾಡಬೇಕು?
- ರಾಜಕೀಯ ನಾಯಕರಾಗಿರುವುದೇ ಹಳ್ಳಿಯಲ್ಲಿ ಪಾರ್ಟಿ ರಾಜಕಾರಣ ಮಾಡಿ, ಹಳ್ಳಿಯನ್ನು ಎರಡು ಭಾಗವಾಗಿ ಮಾಡಿದ ನಂತರ. ಅಂಥವರ ಮುಂದ ನಾವು ಮಾತಾಡುವುದುಂಟೇ?
- ಅಧ್ಯಕ್ಷರು ಹೇಳಿದ್ದು ಸರಿ ಎಂದು ನಾವು ಹೇಳುತ್ತೇವಲ್ಲ, ಅದು ಮಾತಾಡಿದಂತಲ್ಲವೇ? ಅವರು ಹೇಳಿದ್ದನ್ನು ವಿರೋಧಿಸಿದರೆ ಮಾತ್ರ ಮಾತಾಡಿದಂತೆಯೇ?

- ಸಭೆಯ ಪುಸ್ತಕದಲ್ಲಿ ಸಹಿ ಹಾಕಿದರಾಯಿತು. ನಮಗೇಕೆ ಇಲ್ಲದ ಉಸಾಬರಿ?
- ನಾವು ಹೇಳಬೇಕಾದ್ದು ಬೇಕಾದಷ್ಟಿದೆ. ಆದರೆ ನಮ್ಮ ಮಾತನ್ನು ಯಾರು ಕೇಳ್ತಾರೆ?

ಈ ಮೂರು ಅರಣ್ಯ ಸಮಿತಿಗಳ ಮಹಿಳಾ ಸದಸ್ಯರ ಸಂಕ್ಷಿಪ್ತ ಹೇಳಿಕೆಗಳು, ಅವರು ಹೇಳದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ಮಹಿಳಾ ಸದಸ್ಯರಲ್ಲಿ ಯಾರೂ ಚುನಾಯಿತರಾದವರಲ್ಲ, ಸರ್ವಾನುಮತದಿಂದ ಆಯ್ಕೆಯಾದವರು. ಹಳ್ಳಿಯ ಮುಖ್ಯಸ್ಥರು, ರಾಜಕೀಯ ನಾಯಕರು, ಪ್ರಬಲ ಪಂಗಡದ ಹಿರಿಯರು ಹೆಸರುಗಳನ್ನು ಸೂಚಿಸಿ, ಅರಣ್ಯ ಇಲಾಖೆಯ ನೇರ ಬೆಂಬಲವೂ ಈ ಮಹಿಳೆಯರಿಗೆ ಇರುವಾಗ ಸರ್ವಾನುಮತದ ಆಯ್ಕೆ ಅನಿವಾರ್ಯವಾಗುತ್ತದೆ. ಒಂದು ವೇಳೆ ನಿರ್ವಹಣಾ ಸಮಿತಿಯ ಮಹಿಳಾ ಸದಸ್ಯರ ಜಾಗಕ್ಕೆ ಚುನಾವಣೆ ನಡೆದಿದ್ದರೆ ಇವರೇ ಆರಿಸಿ ಬರುತ್ತಿದ್ದರೋ ಇಲ್ಲವೋ ತಿಳಿಯದು.

ಈ ಅಧ್ಯಾಯದಲ್ಲಿ ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ಇರುವ ಅವಕಾಶಗಳನ್ನು ಪರಿಶೀಲಿಸುವುದರ ಜೊತೆಗೆ ಆಯ್ದ ಸೂಚ್ಯಂಕಗಳ ಸಹಾಯದಿಂದ ಭಾಗವಹಿಸುವಿಕೆಯ ವ್ಯಾಪ್ತಿ ಮತ್ತು ಪ್ರಮಾಣಗಳ ಮಾಪನ ಮಾಡಿದ್ದೇವೆ. ಸದಸ್ಯತ್ವ, ಹಾಜರಾತಿ, ನಿಯತಕಾಲಿಕವಾಗಿ ನಡೆಯುವ ಸಭೆಗಳು ಉತ್ತಮ ಭಾಗವಹಿಸುವಿಕೆಯನ್ನು ಸೂಚಿಸಿದರೆ, ತರಬೇತಿ ಭಾಗವಹಿಸುವಿಕೆಯ ಕೌಶಲವನ್ನು ಹೆಚ್ಚಿಸುತ್ತದೆ. ಸಸ್ಯ ಪ್ರಭೇದಗಳ ಹಾಗೂ ಅದನ್ನು ನೆಡಬೇಕಾದ ಜಾಗಗಳ ಆಯ್ಕೆ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಮೇಲೆ ಗ್ರಾಮ ಅರಣ್ಯ ಸಮಿತಿಗಿರುವ ಅಧಿಕಾರವನ್ನು ಸೂಚಿಸುತ್ತದೆ. ನಿಯಮಪಾಲನೆ, ಸದಸ್ಯರಿಗೆ ಯೋಜನೆಯಲ್ಲಿ ಹಾಗೂ ನಾಯಕತ್ವದಲ್ಲಿರುವ ನಂಬಿಕೆ ಹಾಗೂ ಕಟ್ಟುನಿಟ್ಟಾದ ನಿಗಾವಣೆ ವ್ಯವಸ್ಥೆಯನ್ನು ತೋರಿದರೆ, ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಲಿಂಗಾಧಾರಿತ ಅಸಮಾನತೆಯನ್ನು ತೊಡೆದು ಹಾಕುವ ಪ್ರಯತ್ನಗಳ ಫಲವನ್ನು ತೋರಿಸುತ್ತದೆ. ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಈ ಸೂಚ್ಯಂಕಗಳು ಒದಗಿಸಿರುವ ಭಾಗವಹಿಸುವಿಕೆಯ ಸ್ವರೂಪವನ್ನು ಸೂಕ್ಷ್ಮವಾಗಿ ಗಮನಿಸುವುದರ ಜೊತೆಗೆ, ಅವುಗಳ ವಸ್ತುಸ್ಥಿತಿಗೆ ಕಾರಣಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನೂ ಈ ಅಧ್ಯಾಯದಲ್ಲಿ ಮಾಡಿ, ಮುಂದಿನ ಅಧ್ಯಾಯದಲ್ಲಿ ಭಾಗವಹಿಸುವಿಕೆಯ ಗುಣಮಟ್ಟವನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕೋಷ್ಟಕ 1

ಕ್ಷೇತ್ರಕಾರ್ಯ ಮಾಡಿದ ಹಳ್ಳಿಗಳ ಕೆಲವು ಮಾಹಿತಿಗಳು

ಸಂಖ್ಯೆ	ವಿವರಗಳು	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1	ಕುಟುಂಬಗಳ ಸಂಖ್ಯೆ	110	222	67	250	150
2	ಜನಸಂಖ್ಯೆ	840	920	403	1300	1500
3	ಅಕ್ಷರಸ್ಥರ ಸಂಖ್ಯೆ	493	183	363	600	800
	ಪ್ರಮಾಣ	58%	20%	90%	46%	53%
4	ಭೂರಹಿತ ಕುಟುಂಬಗಳ ಸಂಖ್ಯೆ	25	48	18	32	18
	ಪ್ರಮಾಣ	23%	22%	27%	13%	12%
5	ಭೌಗೋಳಿಕ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	1198	2815	352	544	910
6	ಅರಣ್ಯದ ವಿಸ್ತೀರ್ಣ (ಕಾಯ್ದಿಟ್ಟ ಅರಣ್ಯ, ಕಿರು ಅರಣ್ಯ, ಕಂದಾಯ ಅರಣ್ಯ ಸೇರಿದಂತೆ)	140	2359	284	ಇಲ್ಲ	ಇಲ್ಲ
7	ಕೃಷಿಭೂಮಿಯ ವಿಸ್ತೀರ್ಣ	138	588	52	323	538

ಮೂಲ : ಸಂಬಂಧಿಸಿದ ಗ್ರಾಮ ಪಂಚಾಯಿತಿ ಕಚೇರಿ ಹಾಗೂ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿನ ದಾಖಲೆಗಳು.

ಕೋಷ್ಟಕ 2

ಮನೆಗಳ ಸ್ವರೂಪ

ಸಂಖ್ಯೆ	ಹಳ್ಳಿಗಳು/ಮನೆಗಳು	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1	ಒಟ್ಟುಮನೆಗಳು	110	222	67	250	150
2	ತಾರಸಿ ಮನೆಗಳು (ಆರ್‌ಸಿಸಿ)	--	8	8	36	27
3	ಹೆಂಚಿನ ಮನೆಗಳು	77	122	53	174	74
4	ಹುಲ್ಲಿನ ಮನೆಗಳು	33	92	6	40	49

ಮೂಲ : ಆಯಾ ಗ್ರಾಮ ಪಂಚಾಯಿತಿ ಕಚೇರಿ ಹಾಗೂ ಗ್ರಾಮ ಅರಣ್ಯ ಸಮಿತಿಗಳ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ದಾಖಲೆಗಳು.

ಕೋಷ್ಟಕ 3

ಕೃಷಿ ಆಧಾರಿತ ಕುಟುಂಬಗಳು

ಸಂಖ್ಯೆ	ವಿವರಗಳು	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1	ಒಟ್ಟುಕುಟುಂಬಗಳು	110	222	67	250	150
2	ಕೃಷಿ ಆಧಾರಿತ ಕುಟುಂಬಗಳು	85	148	50	168	96
3	ಶೇಕಡಾವಾರು ಪ್ರಮಾಣ	77	67	75	67	64

ಮೂಲ : ಆಯಾ ಗ್ರಾಮ ಪಂಚಾಯಿತಿ ಕಚೇರಿಯಲ್ಲಿನ ದಾಖಲೆಗಳು

ಕೋಷ್ಟಕ 4

ಜಾನುವಾರುಗಳ ಸಂಖ್ಯೆ

ಸಂಖ್ಯೆ	ಹಳ್ಳಿ/ಜಾನುವಾರು	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1	ಒಟ್ಟುಜಾನುವಾರುಗಳು	2616	1951	607	1153	1116
2	ಹಸು	62	729	295	400	500
3	ಎಮ್ಮೆ	68	422	105	250	196
4	ಎತ್ತು	100	800	169	103	300
5	ಕುರಿ	1500	---	38	400	120
6	ಮೇಕೆ	486	---	---	---	---

ಮೂಲ : ಪ್ರಶ್ನಾವಳಿ ಆಧಾರಿತ ಕ್ಷೇತ್ರಕಾರ್ಯ ಸಂದರ್ಶನ ಮತ್ತು ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ದಾಖಲೆಗಳು

ಕೋಷ್ಟಕ 5

ಮೇವಿಗಾಗಿ ಅರಣ್ಯದ ಮೇಲಿನ ಅವಲಂಬನೆ

ಸಂಖ್ಯೆ	ಹಳ್ಳಿಗಳು/ಮೇವಿನ ಮೂಲ	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1	ಅರಣ್ಯದಿಂದ ಮೇವು ತರುವ ಕುಟುಂಬಗಳ ಶೇಕಡಾವಾರು	7	36	19	--	--
2	ಹೊಲದಿಂದ ಮೇವು ತರುವ ಕುಟುಂಬಗಳ ಶೇಕಡವಾರು	65	20	16	39	40

3	ಎರಡು ಮೂಲಗಳಿಂದಲೂ ಮೇವು ತರುವ ಕುಟುಂಬಗಳ ಶೇಕಡಾವಾರು	7	32	42	--	--
4	ಹಣಕೊಟ್ಟು ಮೇವು ಕೊಳ್ಳುವ ಕುಟುಂಬಗಳ ಶೇಕಡವಾರು	--	10	14	27	31
5	ಮೇವು ತರದಿರುವ ಕುಟುಂಬಗಳ ಶೇಕಡಾ ವಾರು	21	2	9	34	29

ಮೂಲ : ಕ್ಷೇತ್ರಕಾರ್ಯದ ಪ್ರಶ್ನಾವಳಿ ಆಧಾರಿತ ಸಂದರ್ಶನಗಳು

- ಅರಣ್ಯಗಳಿಂದಾಗಲೀ, ಹೊಲದಿಂದಾಗಲೀ ಯಾವುದೇ ಕಾರಣದಿಂದ ಮೇವು ದೊರೆಯದಿದ್ದಾಗ ಅಥವಾ ಮೇವಿನ ಪ್ರಮಾಣ ಕಡಿಮೆಯಾದಾಗ, ಹಣವಿರುವವರು ಅದನ್ನು ದುಡ್ಡುಕೊಟ್ಟು ಹೊರಗಿನಿಂದ ತರಿಸಿಕೊಳ್ಳಬಲ್ಲರು. ಇಂತಹ ಪರಿಸ್ಥಿತಿಯಲ್ಲಿ ಮೊದಲು ತೊಂದರೆಗೊಳಗಾಗುವವರು ದುರ್ಬಲ ವರ್ಗದವರು. ಉದ್ದೂರು, ಮುಕುಂದೂರುಗಳೆರಡಲ್ಲೂ ಇಂಥ ಉದಾಹರಣೆಗಳಿವೆ.

ಕೋಷ್ಟಕ 6

ಅಡುಗೆಗೆ ಬಳಸುವ ಇಂಧನ

ಸಂಖ್ಯೆ	ಹಳ್ಳಿಗಳು/ಇಂಧನ	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1	ಉರುವಲು	76	58	39	84 ●	55 ●
2	ಅಸ್ತ್ರಒಲೆ	24	24	01	03	11
3	ಜೈವಿಕ ಅನಿಲ	--	18	45	10	25
4	ಅಡುಗೆ ಅನಿಲ	--	--	15	03	09
	ಒಟ್ಟು	100	100	100	100	100

ಮೂಲ : ಕ್ಷೇತ್ರಕಾರ್ಯದಿಂದ ದೊರೆತ ಕುಟುಂಬಗಳ ಶೇಕಡಾವಾರು

- ಉದ್ದೂರು ಮತ್ತು ಮುಕುಂದೂರುಗಳಲ್ಲಿ ಶೇಕಡಾ 84 ಮತ್ತು 55 ಕುಟುಂಬಗಳು ಅಡುಗೆಗಾಗಿ ಉರುವಲನ್ನು ಬಳಸಿದರೂ ಅದು ಊರ ಸಮೀಪದ ಅರಣ್ಯದಿಂದ ಬಂದದ್ದಲ್ಲ. ಗ್ರಾಮದಲ್ಲಿ ಅರಣ್ಯವಿಲ್ಲದಿರುವುದರಿಂದ ಉರುವಲಿಗಾಗಿ ಅರಣ್ಯದ ಮೇಲಿನ ಅವಲಂಬನೆ ಇಲ್ಲ.

ಕೋಷ್ಟಕ 7

ಕಿರು ಅರಣ್ಯ ಉತ್ಪನ್ನಗಳಿಗಾಗಿ ಅರಣ್ಯದ ಮೇಲಿನ ಅವಲಂಬನೆ

ಸಂಖ್ಯೆ	ಹಳ್ಳಿಗಳು/ಕುಟುಂಬಗಳು	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1	ಸಂಗ್ರಹಣೆಯಲ್ಲಿ ತೊಡಗಿರುವ ಕುಟುಂಬಗಳ ಶೇಕಡವಾರು	47	23	22	--	--

ಮೂಲ : ಕ್ಷೇತ್ರಕಾರ್ಯದಿಂದ ಬಂದ ಅಂಕಿ-ಅಂಶಗಳ ಶೇಕಡವಾರು

ಕೋಷ್ಟಕ 8

ಅರಣ್ಯದ ಮೇಲಿನ ಒಟ್ಟಾರೆ ವಾರ್ಷಿಕ ಅವಲಂಬನೆ

ಸಂಖ್ಯೆ	ವಸ್ತುಗಳು	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1	ಉರುವಲು	137.5ಮೆ.ಟ	988ಮೆ.ಟ	239ಮೆ.ಟ	--	--
2	ಮೇವು	30.5ಮೆ.ಟ	5000ಮೆ.ಟ	854ಮೆ.ಟ	--	--
3	ಹುಲ್ಲು(ಮನೆಯ ಛಾವಣಿಗೆ)	40ಮೆ.ಟ.	110ಮೆ.ಟ	6.5ಮೆ.ಟ	--	--
4	ಸೊಪ್ಪು	--	5321ಮೆ.ಟ	1640ಮೆ.ಟ	--	--
5	ಬೇಲಿಗೂಟಗಳು	1800ಮೆ.ಟ.	4000ಮೆ.ಟ.	3350ಮೆ.ಟ.	--	--
6	'ಗಳ'ಗಳು	700ಮೆ.ಟ.	4500ಮೆ.ಟ.	500ಮೆ.ಟ	--	--
7	ಕೃಷಿ ಉಪಕರಣ ಗಳಿಗೆ ಚೌಬೀನೆ	30ಘನ ಮೀ.	48 ಘ.ಮೀ.	17ಘ.ಮೀ	--	--
8.	ಕಿರು ಅರಣ್ಯ ಉತ್ಪನ್ನ	ಮುಖ್ಯವಾಗಿ ಬೀಡಿ ಎಲೆ 234ಮೆ.ಟ.	ದಾಲ್ಚಿನ್ನಿ, ಸೀಗೆ ಮತ್ತು ಅಂಟುವಾಳ 50ಕ್ವಿಂಟಲ್	ದಾಖಲೆ ಯಿಲ್ಲ	--	--

ಮೂಲ : ಕ್ಷೇತ್ರಕಾರ್ಯದ ಮತ್ತು ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ಅಂಕಿ-ಅಂಶಗಳು

ಕೋಷ್ಟಕ 9

ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ

ಹಳ್ಳಿ	ಒಟ್ಟು ಕುಟುಂಬಗಳು	ಸದಸ್ಯಕುಟುಂಬಗಳು	ಶೇಕಡವಾರು ಸದಸ್ಯತ್ವ
ಕುಮಾರನಹಳ್ಳಿ	110	98	89
ಮರಡವಳ್ಳಿ	222	178	80
ಹನಿಯಾ	67	55	82
ಉದ್ದೂರು	250	120	48
ಮುಕುಂದೂರು	150	128	85

ಮೂಲ : ಕ್ಷೇತ್ರಕಾರ್ಯದ ಅಂಕಿ ಅಂಶಗಳು

ಕೋಷ್ಟಕ 10

ನಿರ್ವಹಣಾ ಸಭೆಯಲ್ಲಿನ ಹಾಜರಾತಿ (1.1.2001-31.12.2002)

ಗ್ರಾಮ ಅರಣ್ಯ ಸಮಿತಿ	ತಪ್ಪದೇ ಭಾಗವಹಿಸುವವರು(ಶೇಕಡಾವಾರು)	ಕೆಲವೊಮ್ಮೆ ಭಾಗವಹಿಸುವವರು(ಶೇಕಡಾವಾರು)	ಭಾಗವಹಿಸದವರು (ಶೇಕಡಾವಾರು)
ಕುಮಾರನಹಳ್ಳಿ	63	22	15
ಮರಡವಳ್ಳಿ	69	13	18
ಹನಿಯಾ	26	12	62
ಉದ್ದೂರು	22	18	60
ಮುಕುಂದೂರು	28	23	49

ಮೂಲ : ಸಭೆಯ ನಡಾವಳಿ ಪುಸ್ತಕಗಳು

ಕೋಷ್ಟಕ 11

ನಿರ್ವಹಣಾ ಸಮಿತಿಯ ಸಭೆ: ಅರಣ್ಯ ಸಿಬ್ಬಂದಿಯ ಹಾಜರಾತಿ

(1.1.2001-31.12.2002)

ಗ್ರಾಮ ಅರಣ್ಯ ಸಮಿತಿ	ನಡೆದಿರುವ ಒಟ್ಟು ಸಭೆಗಳು	ಅರಣ್ಯಾಧಿಕಾರಿ ಹಾಜರಿದ್ದ ಸಭೆಗಳು	ಶೇಕಡವಾರು
ಕುಮಾರನಹಳ್ಳಿ	26	14	54
ಮರಡವಳ್ಳಿ	21	11	52
ಹನಿಯಾ	9	2	22
ಉದ್ದೂರು	13	10	77
ಮುಕುಂದೂರು	7	5	71

ಮೂಲ : ಸಭೆಯ ನಡಾವಳಿ ಪುಸ್ತಕಗಳು

ಕೋಷ್ಟಕ 12

ನಡೆದಿರುವ ಸಭೆಗಳು

(1.1.2001-31.12.2002)

ಗ್ರಾಮ ಅರಣ್ಯ ಸಮಿತಿ	ಮಹಾಸಭೆ	ನಿರ್ವಹಣಾ ಸಮಿತಿಯ ಸಭೆ
ಕುಮಾರನಹಳ್ಳಿ	2	26
ಮರಡವಳ್ಳಿ	2	21
ಹನಿಯಾ	–	9
ಉದ್ದೂರು	–	13
ಮುಕುಂದೂರು	1	7

ಮೂಲ : ಸಭೆಯ ನಡಾವಳಿ ಪುಸ್ತಕಗಳು

ಕೋಷ್ಟಕ 13

ತರಬೇತಿ

ಕ್ರ.ಸಂ.	ವಿಷಯ	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1.	ತರಬೇತಿ ಶಿಬಿರಗಳ ಸಂಖ್ಯೆ*	8	6	2	2	1
2.	ಪ್ರತಿಶಿಬಿರದಲ್ಲೂ ಭಾಗವಹಿಸಿದವರ ಸಂಖ್ಯೆ	26	20	13	9	17
3.	ತರಬೇತಿಯ ಅವಧಿ	2 ದಿನಗಳು	1 ದಿನ	1 ದಿನ	1/2 ದಿನ	1 ದಿನ
4.	ತರಬೇತಿ ನೀಡಿದವರು	ಸಮಾಜ ಪರಿವರ್ತನಾ ಸಮುದಾಯ, ರೀಚ್ ಸಂಸ್ಥೆ, ಮಣ್ಣು ರಕ್ಷಣಾ ಒಕ್ಕೂಟ ಮತ್ತು ಅರಣ್ಯ ಇಲಾಖೆ	ಸಾಂಘ್ವಿ ಸಂಸ್ಥೆ ಔಷಧ ಸಸ್ಯ ಪರಿಣಿತರು ಅರಣ್ಯ ಇಲಾಖೆ	ಅರಣ್ಯ ಇಲಾಖೆ	ಖಾಸಗೀ ಕೈಗಾರಿಕೆ	ಗಣಿ ಮತ್ತು ಭೂವಿಜ್ಞಾನ ಇಲಾಖೆ
5.	ತರಬೇತಿ ವಿಷಯ	ಸಸಿಗಳನ್ನು ಬೆಳೆಸುವುದು, ಅರಣ್ಯ ಉತ್ಪನ್ನ ಸಂಗ್ರಹ ಮತ್ತು ಮಾರಾಟ, ಮೇವಿನ ಉತ್ಪಾದನೆ, ಮಣ್ಣಿನ ಸಂರಕ್ಷಣೆ, ಜಲಾನಯನ ಪ್ರದೇಶ ಅಭಿವೃದ್ಧಿ	ಔಷಧ ಸಸ್ಯಗಳನ್ನು ಬೆಳೆಸುವುದು, ಮಣ್ಣಿನ ಸಂರಕ್ಷಣೆ, ಸ್ವಸಹಾಯ ಗುಂಪು, ನರ್ಸರಿ ಮಾಡುವುದು, ಸಮುದಾಯ ಸಂಘಟನೆ, ಹಣಕಾಸಿನ ಲೆಕ್ಕ	ಸಸಿಗಳ ಉತ್ಪಾದನೆ	ನೀಲಗಿರಿ ಎಣ್ಣೆ ತೆಗೆಯುವುದು. ಜಂಟಿ ಅರಣ್ಯ ಯೋಜನೆಯ ಉದ್ದೇಶಗಳು	ಮರಳಿನ ಸಂರಕ್ಷಣೆ

*ಕಿರು ಯೋಜನೆಯನ್ನು ಸಿದ್ಧಪಡಿಸಲು ನಡೆಸಿದ ತರಬೇತಿ ಶಿಬಿರಗಳನ್ನು ಇದರಲ್ಲಿ ಸೇರಿಸಿಲ್ಲ.

ಮೂಲ: ಗ್ರಾಮ ಅರಣ್ಯ ಸಮಿತಿಯ ನಡಾವಳಿ ಪುಸ್ತಕಗಳು

ಕೋಷ್ಟಕ 14

ಸಸ್ಯಪ್ರಭೇದಗಳು ಹಾಗೂ ಜಾಗದ ಆಯ್ಕೆ

ಕ್ರ.ಸಂ.	ವಿಷಯ	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
1.	ಮರಗಿಡಗಳನ್ನು ಬೆಳೆಸಬೇಕಾದ ಜಾಗ	ಭೂತನಗುಡ್ಡ ಹಿರೇಮರಡಿ ಗುಡ್ಡ ಮತ್ತು ಸ್ಮಶಾನ	ಗೋಮಾಳ, ಹುಲ್ಕೋಡು ಹಕ್ಕರೆ ರಸ್ತೆಬದಿ, ಬಾಳೆಗೆರೆ ಮತ್ತು ದೇವಾಸಗಳಲ್ಲಿರುವ ಸರ್ಕಾರೀ ಭೂಮಿ	ಹಳ್ಳಿಯಲ್ಲಿರುವ 5 ಗೋಮಾಳಗಳು	ಸರ್ಕಾರಿ ಖಾಲಿ ಪ್ರದೇಶ ಮತ್ತು ಕೆರೆಯಂಗಳ	ಸರ್ಕಾರೀ ಗುಂಡುತೋಪು
2	ಆಯ್ಕೆಯ ರೀತಿ	ಸಂಪೂರ್ಣವಾಗಿ ಗ್ರಾಮ ಅರಣ್ಯ ಸಮಿತಿ	ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಯ ನಡುವಿನ ಸಮಾಲೋಚನೆಯಿಂದ	ಸಂಪೂರ್ಣವಾಗಿ ಅರಣ್ಯ ಇಲಾಖೆ	ಸಂಪೂರ್ಣವಾಗಿ ಅರಣ್ಯ ಇಲಾಖೆ	ಸಂಪೂರ್ಣವಾಗಿ ಅರಣ್ಯ ಇಲಾಖೆ
3	ಆಯ್ಕೆ ಮಾಡಿದ ಸಸ್ಯ ಪ್ರಭೇದಗಳು	ಮಾವು, ಹೊಂಗೆ, ಸಿಸ್ಸು, ನೇರಿಳೆ, ಕೌಳೆ, ಕಮರ, ಕಾರೆ, ಹೊನ್ನರಿಕೆ, ಬೇವು, ತುಗ್ಗಲಿ, ಮಳಿಗೆ, ಬಳ್ಳಾರಿ, ಜಾಲಿ, ದಿಂಡಲ್	ನಂದಿ, ಹಲಸು, ಮತ್ತಿ ಹೊನ್ನೆ, ದುಗಾಲು, ನೆಲ್ಲಿ, ಮಾವು, ನೇರಿಳೆ, ಅಳಲೆ, ಬಿದಿರು, ಬಿಪ್ಪಾನಿ, ವಾಟೆ, ಹುಳಿಮುರುಗಲು, ಜಮ್ಮ, ಗುಳುಮಾವು, ಮಡ್ಡಿಧೂಪ, ಹರಳು,	ಹುನಾಲು, ಮತ್ತಿ, ನಂದಿ, ನೆಡಲು, ಹೊನ್ನೆ, ಹಲಸು, ಮಾವು, ಬಿದಿರು, ಅಂಟುವಾಳ, ನೆಲ್ಲಿ, ಭರಣಿ, ಬಿಲ್ವಾರ, ವಾಟೆ, ಬೀಟೆ,	ತೇಗ, ಹಲಸು, ನೇರಿಳೆ, ನೀಲಗಿರಿ, ಮಾವು, ಹುಣಿಸೆ, ಹೊಂಗೆ, ಆಲ, ಗೋಣಿ, ಬಸರಿ, ಅಂಟುವಾಳ, ನುಗ್ಗೆ, ಸೀಗೆ, ಅಕೇಶಿಯಾ,	ಸಾಗುವಾನಿ, ಮಾವು, ಬೇವು, ಹಲಸು, ಬಿದಿರು, ನೇರಳೆ, ತೆಂಗು, ಅಡಿಕೆ,

			ಧೂಪ, ಅಂಟುವಾಳ, ರಾಮಪತ್ರೆ, ಭಗನೆ, ಕಕ್ಕೆ	ಗಾಳಿ, ಗೇರು		
4	ಆಯ್ಕೆಯ ರೀತಿ	ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ ಮತ್ತು ಗ್ರಾಮ ಅರಣ್ಯ ಸಮಿತಿ ಸಭೆಯಲ್ಲಿನ ಸಮಾಲೋಚನೆಯ ಮೂಲಕ	ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ಮೂಲಕ	ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ	ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ	ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ
5	ಇಲಾಖೆ ಒದಗಿಸಿರುವ, ಬೆಳೆಸಿರುವ ಸಸ್ಯ ಪ್ರಭೇದಗಳು	ತೇಗ, ನೀಲಗಿರಿ, ಅಕೇಶಿಯಾ, ಸರ್ವೇಮರ	ಆಯ್ಕೆಯಾದ 22 ಪ್ರಭೇದಗಳಲ್ಲಿ 17 ಪ್ರಭೇದಗಳ ಸಸ್ಯಗಳನ್ನು ಇಲಾಖೆ ಒದಗಿಸಿದೆ. ನೀಲಗಿರಿ, ಅಕೇಶಿಯಾಗಳನ್ನು ಬೆಳೆಸಿದೆ.	ಅಕೇಶಿಯಾ, ಸಾಗವಾನಿ, ಗೇರು, ಬಿದಿರು ಮತ್ತು ಗಾಳಿಮರ	ನೀಲಗಿರಿ ಮಾತ್ರ	ಅಕೇಶಿಯಾ ಮತ್ತು ನೀಲಗಿರಿ. ಇಲಾಖೆ ನೆಟ್ಟಿದ್ದ ಕಸಿಮಾಡಿದ ಮಾವಿನ ಸಸಿಗಳನ್ನು ಕಿತ್ತು ಹಾಕಲಾಗಿದೆ

ಮೂಲ : ಕ್ಷೇತ್ರಕಾರ್ಯದ ಸಂದರ್ಶನಗಳು ಮತ್ತು ಆಯಾ ಗ್ರಾಮ ಅರಣ್ಯ ಸಮಿತಿಯ ಕಿರುಯೋಜನೆಯ ದಾಖಲೆಗಳು

ಕೋಷ್ಟಕ 15

ನಿಯಮ ಉಲ್ಲಂಘನೆಯ ಪ್ರಕರಣಗಳು

ಪ್ರಕರಣಗಳು	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
ಉಲ್ಲಂಘನೆಯ ಪ್ರಕರಣಗಳು	3	4	ದಾಖಲೆಯಿಲ್ಲ	17	22
ದಂಡ ಹಾಕಿರುವ ಪ್ರಕರಣಗಳು	3	2	--	1	1
ದಂಡದ ಮೊತ್ತ	2600/-	200/-	--	500/-	200/-

ಮೂಲ : ಕ್ಷೇತ್ರಕಾರ್ಯದ ಅಂಕಿ-ಅಂಶಗಳು ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡಾವಳಿ ಪುಸ್ತಕ

ಕೋಷ್ಟಕ 16

ಗ್ರಾಮ ಅರಣ್ಯ ಸಮಿತಿಯಲ್ಲಿ ಮಹಿಳೆಯರು

ಸದಸ್ಯರು/ಅರಣ್ಯ ಸಮಿತಿ	ಒಟ್ಟು ಸದಸ್ಯರು	ಮಹಿಳೆಯರು	ಶೇಕಡಾವಾರು
ಕುಮಾರನಹಳ್ಳಿ	98	33	34
ಮರಡವಳ್ಳಿ	173	20	12
ಹನಿಯಾ	55	4	7
ಉದ್ದೂರು	120	9	8
ಮುಕುಂದೂರು	145	11	8

ಮೂಲ : ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಪಟ್ಟಿ

ಕೋಷ್ಟಕ 17

ನಿರ್ವಹಣಾ ಸಮಿತಿಯಲ್ಲಿ ಮಹಿಳೆಯರು

ಸದಸ್ಯರು/ಅರಣ್ಯ ಸಮಿತಿ	ಒಟ್ಟು ಚುನಾಯಿತ ಸದಸ್ಯರು	ಇರಬೇಕಾದ ಮಹಿಳಾ ಸದಸ್ಯರು	ಇರುವ ಮಹಿಳಾ ಸದಸ್ಯರು
ಕುಮಾರನಹಳ್ಳಿ	11	2	4
ಮರಡವಳ್ಳಿ	11	2	3
ಹನಿಯಾ	11	2	3
ಉದ್ದೂರು	11	2	2
ಮುಕುಂದೂರು	11	2	2

ಮೂಲ : ಗ್ರಾಮ ಅರಣ್ಯ ಸಮಿತಿಯ ದಾಖಲೆ

ಟಿಪ್ಪಣಿಗಳು

1. ಮಧುಸರೀನ್, ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ : ದಿ ಹರ್‍ಯಾನ ಎಕ್ಸ್‌ಪೀರಿಯನ್ಸ್, ಅಹಮದಾಬಾದ್ : ಸೆಂಟರ್‌ಫಾರ್ ಎನ್‌ವೈರನ್‌ಮೆಂಟ್ ಎಜುಕೇಶನ್, 1999.

2. ಮಾರ್ಕ್‌ಪೋಫೆನ್ ಬರ್ಗರ್, "ದಿ ಸ್ಟ್ರಗಲ್ ಫಾರ್ ಫಾರೆಸ್ಟ್ ಕಂಟ್ರೋಲ್", ವಿಲೇಜ್ ವಾಯ್ಸಸ್, ಫಾರೆಸ್ಟ್ ಚಾಯ್ಸಸ್, ಮಾರ್ಕ್‌ಪೋಫೆನ್ ಬರ್ಗರ್ ಆಂಡ್ ಬೆಟ್ಸಿ ಮ್ಯಾಕ್‌ಗೀನ್(ಸಂ), ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1990

3. ಪಠಾನ್ ಎಸ್., "ಫಾರೆಸ್ಟ್ ಪ್ರೊಟೆಕ್ಷನ್ ಕಮಿಟೀಸ್ ಇನ್ ಗುಜರಾತ್", ಸಸ್ಟೈನಬಲ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ವರ್ಕಿಂಗ್ ಪೇಪರ್ ಸೀರೀಸ್ ನಂ.7, ನ್ಯೂಡೆಲ್ಲಿ : ಫೋರ್ಡ್‌ಫೌಂಡೇಶನ್, 1990.

4. ಅರಣ್ಯ ಸಂರಕ್ಷಣಾಧಿಕಾರಿಗಳು, ಕೆನರಾ ವೃತ್ತ, ಧಾರವಾಡ : ಕ್ಷೇತ್ರಕಾರ್ಯದ ಸಂದರ್ಶನ.

5. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ವಿಭಾಗ, ಸಾಗರ : ಕ್ಷೇತ್ರಕಾರ್ಯದ ಸಂದರ್ಶನ.

6. ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವೃತ್ತ, ಶಿವಮೊಗ್ಗ: ಕ್ಷೇತ್ರಕಾರ್ಯದ ಸಂದರ್ಶನ.

7. ಸಿಂಹ, ಕಾರ್ಯಕರ್ತರು, ರೀಚ್ ಸಂಸ್ಥೆ, ಕುಮಾರನಹಳ್ಳಿ : ಕ್ಷೇತ್ರಕಾರ್ಯದ ಸಂದರ್ಶನ.

8. ಮಾವಿನತೋಪ್, ಕಾರ್ಯಕರ್ತರು, ಸಮಾಜ ಪರಿವರ್ತನಾ ಸಮುದಾಯ, ಕುಮಾರನಹಳ್ಳಿ, ಕ್ಷೇತ್ರ ಕಾರ್ಯದ ಸಂದರ್ಶನ.

9. ಪರಮೇಶ್ವರಪ್ಪ ಎಸ್., ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು : ಕರ್ನಾಟಕ ಅರಣ್ಯ ಇಲಾಖೆ, ಕ್ಷೇತ್ರಕಾರ್ಯದ ಸಂದರ್ಶನ.

10. ವಲಯ ಅರಣ್ಯಾಧಿಕಾರಿಗಳು, ಹೊಳೇನರಸೀಪುರ ವಲಯ, ಹಾಸನ ಜಿಲ್ಲೆ, ಹಾಸನ : ಕ್ಷೇತ್ರಕಾರ್ಯದ ಸಂದರ್ಶನ.

11. ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವೃತ್ತ, ಶಿವಮೊಗ್ಗ: ಕ್ಷೇತ್ರಕಾರ್ಯದ ಸಂದರ್ಶನ.

ಅಧ್ಯಾಯ 5
ಸಹಭಾಗಿತ್ವ ಮತ್ತು ಕಾರ್ಯನಿರ್ವಹಣಾ ಕ್ಷಮತೆ

ಸಹಭಾಗಿತ್ವ ಮತ್ತು ಕಾರ್ಯನಿರ್ವಹಣಾ ಕ್ಷಮತೆ

ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಭಾಗವಹಿಸುವಿಕೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಭಾಗವಹಿಸುವಿಕೆಯ ಗುಣಮಟ್ಟ. ಗ್ರಾಮ ಅರಣ್ಯ ಸಮಿತಿಯಲ್ಲಿ ಗರಿಷ್ಠ ಹಾಜರಾತಿಯಿದ್ದರೆ ಭಾಗವಹಿಸುವಿಕೆ ಉತ್ತಮವಾಗಿದೆಯೆಂಬುದೇನೋ ನಿಜ. ಆದರೆ ಭಾಗವಹಿಸಿದವರಿಗೆ ಯೋಜನೆಯ ಬಗೆಗೆ ಅರಿವಿಲ್ಲದಿದ್ದರೆ, ಚರ್ಚೆಗೆ ಬರುವ ವಿಷಯಗಳ ಬಗೆಗೆ ಖಚಿತ ನಿಲುವು ತಾಳಿ ಮಾತಾಡಲಾಗದಿದ್ದರೆ ಅಂತಹ ಭಾಗವಹಿಸುವಿಕೆಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಗುಣಾತ್ಮಕ ಸೂಚ್ಯಂಕಗಳಿಂದ ಭಾಗವಹಿಸುವಿಕೆಯ ಗುಣಮಟ್ಟವನ್ನು ಅಳೆಯುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಪ್ರಮಾಣಾತ್ಮಕ ಹಾಗೂ ಗುಣಾತ್ಮಕ ಭಾಗವಹಿಸುವಿಕೆ ಗಳೆರಡಕ್ಕೂ ಸ್ಪಷ್ಟವಾದ ಅವಕಾಶಗಳಿರುವ ಕಿರುಯೋಜನೆಯನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದ ನಂತರ ಭಾಗವಹಿಸುವಿಕೆಯನ್ನು ಪ್ರೇರೇಪಿಸುವ, ಆರು ಅಂಶಗಳ ಮೇಲೆ ಆಧರಿತವಾದ TRAITS ಮಾನದಂಡದ ಅನ್ವಯದಿಂದ ಭಾಗವಹಿಸುವಿಕೆಯ ಗುಣಲಕ್ಷಣ ಗಳನ್ನು ವಿಶ್ಲೇಷಿಸಲಾಗಿದೆ. ಸಮುದಾಯದ ಸಹಭಾಗಿತ್ವ ಉತ್ತಮವಾಗಿರುವ ಯೋಜನೆಗಳು ಹೆಚ್ಚು ಯಶಸ್ವಿಯಾಗುತ್ತವೆ ಎಂಬ ಸಾಮಾನ್ಯವಾದ ಗ್ರಹಿಕೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸ ಲಾಗಿದೆ.ಅಧ್ಯಾಯದ ಕಡೆಯ ಭಾಗದಲ್ಲಿ ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಕಂಡುಬರುವ ಸಾಮ್ಯ ವ್ಯತ್ಯಯ, ಅನನ್ಯತೆಗಳನ್ನು ಸೈದ್ಧಾಂತಿಕವಾಗಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಗುಣಾತ್ಮಕ ಸೂಚ್ಯಂಕಗಳು

1. ಯೋಜನೆಯ ಬಗೆಗಿನ ಅರಿವು : ಸ್ಥಳೀಯ ಸಮುದಾಯ, ಗ್ರಾಮ ಅರಣ್ಯ ಸಮಿತಿಯ ಮೂಲಕವಾಗಿ ಅರಣ್ಯ ಸಂಪನ್ಮೂಲದ ಬಳಕೆ ಮತ್ತು ನಿರ್ವಹಣೆಯ ಮೇಲೆ ನಿಯಂತ್ರಣ ಪಡೆಯುತ್ತದೆ. ಇದು ಸಾಧ್ಯವಾಗಬೇಕಾದರೆ ಸದಸ್ಯರಿಗೆ ವೈಯಕ್ತಿಕವಾಗಿ ಗ್ರಾಮ ಅರಣ್ಯ ಸಮಿತಿಗೆ ನಿಯಮ, ಕಾನೂನುಗಳು, ಕಾರ್ಯನಿರ್ವಹಣೆಯ ವಿಧಿವಿಧಾನಗಳು, ಜಂಟೀ ಅರಣ್ಯ ಯೋಜನೆಯ

ಉದ್ದೇಶಗಳು, ಉತ್ಪನ್ನಗಳ ಹಂಚಿಕೆಯ ಸೂತ್ರಗಳ ಸ್ಪಷ್ಟ ಪರಿಚಯವಿರಬೇಕು. ಈ ಅರಿವು ಅರ್ಥಪೂರ್ಣ ಸಹಭಾಗಿತ್ವಕ್ಕೆ ಪೂರ್ವಾಪೇಕ್ಷಿತವಾಗುತ್ತದೆ. ಅಭಿವೃದ್ಧಿ ಸಾಹಿತ್ಯದಲ್ಲಿ ಜ್ಞಾನ ಹಾಗೂ ಅಧಿಕಾರಗಳ ನಡುವಿನ ಸಂಬಂಧ ಮತ್ತೆ ಮತ್ತೆ ಗೋಚರಿಸುತ್ತದೆ. ಅಧಿಕಾರ ದೊರೆಯ ಬೇಕಾದರೆ ಅದಕ್ಕೆ ಸಂಬಂಧಿಸಿದ ಜ್ಞಾನವಿರಬೇಕು. ಪ್ರಸ್ತುತ ಸಂದರ್ಭದಲ್ಲಿ ಅರಣ್ಯ ಸಂಪನ್ಮೂಲಗಳ ಲಭ್ಯತೆ ಹಾಗೂ ಅವುಗಳ ಮೇಲಿನ ನಿಯಂತ್ರಣಕ್ಕೆ ಗ್ರಾಮ ಅರಣ್ಯ ಸಮಿತಿಯ ವಿಧಿವಿಧಾನ, ಅರಣ್ಯ ಯೋಜನೆಯ ಸುಸಂಬದ್ಧ ತಿಳಿವಳಿಕೆಯೇ ಕೀಲಿಕೈ.

2. ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರ ಆಯ್ಕೆಯ ವಿಧಾನ : ಅಧ್ಯಕ್ಷರು ಹಾಗೂ ನಿರ್ವಹಣಾ ಸಮಿತಿಯ ಸದಸ್ಯರ ಆಯ್ಕೆ ಪ್ರಜಾಪ್ರಭುತ್ವದ ತತ್ವಗಳಿಗನುಸಾರವಾಗಿ ನಡೆಯಬೇಕೆಂದು ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ಸರ್ಕಾರಿ ಆದೇಶ ಸೂಚಿಸುತ್ತದೆ. ಆದರೆ ಈ ಆಯ್ಕೆ ಹೇಗೆ ನಡೆದಿದೆಯೆಂಬುದು ಸದಸ್ಯರ ಭಾಗವಹಿಸುವಿಕೆಯ ಮೇಲೆ ಪ್ರಭಾವ ಬೀರುತ್ತದೆ.

3. ಸಭೆಯಲ್ಲಿ ಚರ್ಚೆಗೆ ಬಂದಿರುವ ವಿಷಯಗಳು : ನಿರ್ವಹಣಾ ಸಮಿತಿಯ ಸಭೆಗಳಲ್ಲಿ ಚರ್ಚೆಗೆ ಬಂದಿರುವ ವಿಷಯಗಳು, ತೆಗೆದುಕೊಂಡಿರುವ ನಿರ್ಧಾರಗಳು ಗ್ರಾಮ ಅರಣ್ಯ ಸಮಿತಿಯ ಒಟ್ಟಾರೆ 'ವ್ಯಕ್ತಿತ್ವ', ಉದ್ದೇಶ-ಗುರಿಗಳತ್ತ ಇರುವ ಬದ್ಧತೆಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತದೆ.

4. ಅರಣ್ಯ ಇಲಾಖೆ ಮತ್ತು ಹಳ್ಳಿಯ ಜನರ ನಡುವಿನ ಸಂಬಂಧ : ಜಂಟೀ ಅರಣ್ಯ ಯೋಜನೆ, ಅರಣ್ಯ ಇಲಾಖೆ ಮತ್ತು ಗ್ರಾಮ ಸಮುದಾಯದ ನಡುವಿನ ಹೊಸ ಪಾಲುದಾರಿಕೆಯ, ಸಮಾನತೆಯ ಮೇಲೆ ಆಧಾರಿತವಾದ ಯೋಜನೆ. ಅರಣ್ಯ ಸಿಬ್ಬಂದಿ ಮತ್ತು ಹಳ್ಳಿಯ ಜನರ ದಿನನಿತ್ಯದ ಕಾರ್ಯ ಸಂಬಂಧದಲ್ಲಿ ಈ ಹೊಸ ಬೆಳವಣಿಗೆಯ ಪ್ರಭಾವ ಕಾಣಿಸಬೇಕು.

ಯೋಜನೆಯ ಬಗೆಗಿನ ಅರಿವು

ಅಭಿವೃದ್ಧಿ ಯೋಜನೆಯೊಂದರಲ್ಲಿ ಸ್ಥಳೀಯ ಸಮುದಾಯದ ಸಹಭಾಗಿತ್ವವನ್ನು ಪ್ರೇರೇಪಿಸುವ ಮುಖ್ಯವಾದ ಅಂಶಗಳಲ್ಲಿ ಒಂದೆಂದರೆ ಯೋಜನೆಯ ಬಗೆಗಿನ ಅರಿವು. ಅರಿವಿನ ಮಟ್ಟ ಹೆಚ್ಚಿದಂತೆ ಭಾಗವಹಿಸುವಿಕೆಯೂ ಹೆಚ್ಚುತ್ತದೆಂಬ ಸರಳ ಸಮೀಕರಣ ಸಾಧ್ಯವಿಲ್ಲವಾದರೂ, ಉತ್ತಮ ಭಾಗವಹಿಸುವಿಕೆ ಇರುವ ಕಡೆಗಳಲೆಲ್ಲ ಅರಿವಿನ ಮಟ್ಟ ಹೆಚ್ಚಾಗಿರುವುದು ಕಂಡುಬಂದಿದೆ. ಜಂಟೀ ಅರಣ್ಯ ಯೋಜನೆಯ ಬಗೆಗಿನ ಅರಿವನ್ನು ತಿಳಿಯಲು ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ಎಂಟು ಪ್ರಶ್ನೆಗಳನ್ನು ಕೇಳಲಾಗಿದೆ. ಇವು ಮುಕ್ತಾಂತ್ಯ(ಓಪನ್ ಎಂಡೆಡ್) ಪ್ರಶ್ನೆಗಳಾದ್ದರಿಂದ ಉತ್ತರಗಳು ವಿವರಣಾತ್ಮಕವಾಗಿದ್ದು ನಿಖರತೆ ಕಡಿಮೆಯಾಗುವ ಸಾಧ್ಯತೆಯಿದೆ. ಆದ್ದರಿಂದ ಕ್ಷೇತ್ರಕಾರ್ಯದ ಸಂದರ್ಶನದ ಸಮಯದಲ್ಲಿ ಬಂದ ಉತ್ತರಗಳಲ್ಲಿ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ

'ಮುಖ್ಯ ಪದಗಳು, ಮುಖ್ಯ ಹೇಳಿಕೆಗಳು'(ಕೀವರ್ಡ್ಸ್, ಕೀ ಸ್ಟೇಟ್‌ಮೆಂಟ್ಸ್) ಕಂಡುಬಂದಾಗ ಅವುಗಳ ಬಗ್ಗೆ ಮತ್ತೆ ಪ್ರಶ್ನಿಸಿ ಆ ಮೂಲಕವಾಗಿ ಅರಿವಿನ ಮಟ್ಟವನ್ನು ಅಳೆಯಲು ಪ್ರಯತ್ನಿಸಲಾಗಿದೆ. ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಭೂಹಿಡುವಳಿಯ ಆಧಾರದ ಮೇಲೆ ಮಾಡಲಾಗಿರುವ ನಾಲ್ಕು ಪ್ರತ್ಯೇಕ ಗುಂಪುಗಳ ಆಯ್ದ ಸದಸ್ಯರನ್ನು ಸಂದರ್ಶಿಸಿದ್ದರೂ, ಇವುಗಳ ಆಧಾರದ ಮೇಲೆ, ಕೋಷ್ಟಕದಲ್ಲಿ ಇಡೀ ಹಳ್ಳಿಗೆ ಸಂಬಂಧಿಸಿದಂತೆ ಪ್ರತಿ ಪ್ರಶ್ನೆಗೂ ಸರಿಯಾದ ಉತ್ತರ ನೀಡಿರುವವರ ಶೇಕಡಾವಾರು ಅಂಕಿಯನ್ನು ತೋರಿಸಲಾಗಿದೆ(ಕೋಷ್ಟಕ 1).

ಜಂಟೀ ಅರಣ್ಯ ಯೋಜನೆಯ ಉದ್ದೇಶ, ಗ್ರಾಮ ಅರಣ್ಯ ಸಮಿತಿ ರೂಪಿಸಿ ಜಾರಿಗೆ ತಂದಿರುವ ನಿಯಮಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪಾತ್ರಕ್ಕೆ ಸಂಬಂಧಿಸಿದಂತೆ ಕುಮಾರನಹಳ್ಳಿ ಮತ್ತು ಮರಡವಳ್ಳಿಯ ಶೇಕಡಾ 75ಕ್ಕೂ ಹೆಚ್ಚು ಸದಸ್ಯರಿಗೆ ತಿಳಿವಳಿಕೆಯಿದೆ. ಜಂಟೀ ಅರಣ್ಯ ಯೋಜನೆಯ ಉದ್ದೇಶದ ಬಗ್ಗೆ ಹನಿಯಾದ ಶೇಕಡಾ 41 ಸದಸ್ಯರಿಗೆ ಮಾಹಿತಿಯಿದ್ದರೆ ಉದ್ದೂರು, ಮುಕುಂದೂರುಗಳಲ್ಲಿ ಈ ಪ್ರಮಾಣ ಶೇಕಡಾ 19 ಮತ್ತು 24. ಗ್ರಾಮ ಅರಣ್ಯ ಸಮಿತಿ ರೂಪಿಸಿ, ಜಾರಿಗೆ ತಂದಿರುವ ನಿಯಮಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪಾತ್ರಕ್ಕೆ ಸಂಬಂಧಿಸಿದಂತೆ ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಸರಿಯಾದ ತಿಳಿವಳಿಕೆ ಇರುವವರ ಸಂಖ್ಯೆ ಶೇಕಡಾ 5 ರಿಂದ 18ರವರೆಗಿದೆ. ಈ ದೊಡ್ಡ ವ್ಯತ್ಯಾಸಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಮೊದಲನೆಯದು ಕುಮಾರನಹಳ್ಳಿ ಮತ್ತು ಮರಡವಳ್ಳಿಗಳೆರಡರಲ್ಲೂ ಗ್ರಾಮ ಅರಣ್ಯ ಸಮಿತಿಗೆ ಒತ್ತಾಸೆಯಾಗಿ ನಿಂತು, ಮಾರ್ಗದರ್ಶನ ಮಾಡಿ, ಜನರ ಸಹಭಾಗಿತ್ವಕ್ಕೆ ವಿಶೇಷ ಒತ್ತು ನೀಡುತ್ತಿರುವ ಸರ್ಕಾರೇತರ ಸಂಸ್ಥೆಗಳು. ಎರಡನೆಯದು ಅರಣ್ಯ ಸಂರಕ್ಷಣೆ, ಬಳಕೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವ ಹಂತದಲ್ಲಿ ಜನ ಸಕ್ರಿಯವಾಗಿ ಭಾಗವಹಿಸಿರುವುದು. ಈ ಎರಡು ಅಂಶಗಳ ಗೈರು ಹಾಜರಿಯೇ ಉದ್ದೂರು, ಮುಕುಂದೂರುಗಳ ಪರಿಸ್ಥಿತಿಗೆ ಕಾರಣ. ಹನಿಯಾದಲ್ಲಿ ಸರ್ಕಾರೇತರ ಸಂಸ್ಥೆಯೊಂದಿದ್ದರೂ ಅದರ ಆದ್ಯತೆಯೇ ಬೇರೆ.

ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಯೋಜನೆಯಿಂದ ದೊರಕುವ ಪ್ರಯೋಜನಗಳ ಬಗ್ಗೆ ಸರಿಯಾದ ಅರಿವಿರುವವರ ಸಂಖ್ಯೆ ಶೇಕಡಾ 45 ಮತ್ತು 53. ಯೋಜನೆಯ ಉದ್ದೇಶಗಳಿಗೆ ಹೋಲಿಸಿದರೆ ಈ ಪ್ರಮಾಣ ಕಡಿಮೆಯೆಂದೇ ಹೇಳಬೇಕು. ಈ ಎರಡೂ ಗ್ರಾಮ ಅರಣ್ಯ ಸಮಿತಿಗಳ ಪ್ರದೇಶದಲ್ಲಿರುವ ಯಾವುದೇ ನೆಡುತೋಪು ಅಂತಿಮ ಕಟಾವಿಗೆ ಒಳಗಾಗಿಲ್ಲ. ಉತ್ಪನ್ನಗಳ ಹಂಚಿಕೆಯೂ ಆಗಿಲ್ಲ. ಕುಮಾರನಹಳ್ಳಿಯ 12 ಕುಟುಂಬಗಳಿಗೆ ವರ್ಷದಲ್ಲಿ ಸುಮಾರು 50 ದಿನಗಳು ಮಾತ್ರ ಅರಣ್ಯ ಇಲಾಖೆಯ ಕಡೆಯಿಂದ ಕೂಲಿ ಕೆಲಸ ದೊರೆತಿದೆ. ಮರಡವಳ್ಳಿಯಲ್ಲಿ 17 ಕುಟುಂಬಗಳಿಗೆ 36 ದಿನಗಳು ದೊರೆತಿವೆ. ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಯೋಜನೆಯಿಂದ ಗಮನಾರ್ಹವಾದ ಯಾವುದೇ ನೇರವಾದ ಪ್ರಯೋಜನ ದೊರೆತಿಲ್ಲವಾದ ಕಾರಣ ಈ

ಬಗ್ಗೆ ಹೆಚ್ಚಿನ ಜನರಿಗೆ ತಿಳಿವಳಿಕೆ ಇಲ್ಲ. ಉದ್ದೂರಿನಲ್ಲಿ ಗ್ರಾಮ ಅರಣ್ಯ ಸಮಿತಿಗೆ ಪ್ರತಿ ವರ್ಷವೂ ಸುಮಾರು ಒಂದು ಲಕ್ಷ ರೂ.ಗಳ ಆದಾಯವಿದೆ. ಆದರೆ ಸದಸ್ಯರಿಗೆ ಇದರಿಂದ ಯಾವ ಪಾಲೂ ದೊರೆತಿಲ್ಲ. ಇದರಲ್ಲಿ ತಮಗೂ ಪಾಲಿದೆ ಎಂದು ತಿಳಿದಿರುವುದು ಶೇಕಡಾ 14 ಮಂದಿಗೆ ಮಾತ್ರ.

ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ, ಸದಸ್ಯರಾಗುವ ಬಗೆ, ಸದಸ್ಯರ ಕೆಲಸ, ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಅಧ್ಯಕ್ಷರ ಆಯ್ಕೆ, ಅಧಿಕಾರ ಅವಧಿ, ಅವರ ಕೆಲಸ ಮತ್ತು ಜವಾಬ್ದಾರಿಗಳು, ಪದನಿಮಿತ್ತ ಸದಸ್ಯರ ಬಗೆಗೆ ಕುಮಾರನಹಳ್ಳಿ ಮತ್ತು ಮರಡವಳ್ಳಿಯ ಸರಾಸರಿ ಶೇಕಡಾ 50 ಭಾಗಕ್ಕಿಂತ ಸ್ವಲ್ಪ ಹೆಚ್ಚಿನ ಜನರಿಗೆ ಸ್ಥೂಲ ಮಾಹಿತಿಯಿದೆ. ಹನಿಯಾದ ಶೇಕಡಾ 35 ಸದಸ್ಯರಿಗೆ ಈ ವಿಷಯ ತಿಳಿದಿದ್ದರೆ ಉದ್ದೂರು, ಮುಕುಂದೂರುಗಳಲ್ಲಿ ಈ ಪ್ರಮಾಣ ಶೇಕಡಾ 13 ರಿಂದ 18ರಷ್ಟಿದೆ. ಗ್ರಾಮ ಅರಣ್ಯ ಸಮಿತಿಯನ್ನು ಪ್ರಾರಂಭಿಸುವ ಸಮಯದಲ್ಲಿ ಹಳ್ಳಿಯಲ್ಲಿ ನಡೆದ ಸಭೆಯನ್ನು ಬಿಟ್ಟರೆ, ಉಳಿದಂತೆ ಯಾವ ಹಳ್ಳಿಯಲ್ಲಿಯೂ ಗ್ರಾಮ ಅರಣ್ಯ ಸಮಿತಿ, ನಿರ್ವಹಣಾ ಸಮಿತಿಗಳ ಸಂರಚನೆ, ವಿಧಿ-ವಿಧಾನಗಳ ಬಗ್ಗೆ ಸಾಮಾನ್ಯ ಸದಸ್ಯರಿಗೆ ಮಾಹಿತಿ ನೀಡುವ ಯಾವುದೇ ಕಾರ್ಯಕ್ರಮ ನಡೆದಿಲ್ಲ. ಸಭೆಗಳಲ್ಲಿ ಭಾಗವಹಿಸುವುದರ ಮೂಲಕವಾಗಿ ಮಾತ್ರ ಈಗಿರುವಷ್ಟು ಜನ ಮೇಲಿನ ವಿಷಯಗಳ ಬಗ್ಗೆ ತಿಳಿದುಕೊಂಡಿದ್ದಾರೆ.

ಕಿರುಯೋಜನೆಯ ತಯಾರಿಗೆ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಸಾಕಷ್ಟು ಪೂರ್ವ ಭಾವಿ ಸಿದ್ಧತೆಗಳು ನಡೆದು ಜನರ ಸಹಭಾಗಿತ್ವಕ್ಕೆ ಎಲ್ಲ ಪ್ರಯತ್ನಗಳೂ ನಡೆದಿರುವುದರಿಂದ, ಕಿರುಯೋಜನೆ ಹಾಗೂ ಅದರ ಉದ್ದೇಶಗಳ ಬಗ್ಗೆ ಶೇಕಡಾ 64 ಮತ್ತು 58 ಸದಸ್ಯರಿಗೆ ಸಾಕಷ್ಟು ತಿಳಿವಳಿಕೆಯಿದೆ. ಆದರೆ ಹನಿಯಾ(29%), ಉದ್ದೂರು(11%) ಮತ್ತು ಮುಕುಂದೂರುಗಳಲ್ಲಿ (10%) ಪರಿಸ್ಥಿತಿ ಉತ್ತಮವಾಗಿಲ್ಲ. ಕುಮಾರನಹಳ್ಳಿ ಮತ್ತು ಮರಡವಳ್ಳಿಯ ಶೇಕಡಾ 32 ಮತ್ತು 30 ಭಾಗದ ಸದಸ್ಯರಿಗೆ ಸೌಹಾರ್ದ ಒಡಂಬಡಿಕೆಯ ಬಗ್ಗೆ ತಿಳಿದಿದ್ದರೆ ಹನಿಯಾ, ಉದ್ದೂರು, ಮತ್ತು ಮುಕುಂದೂರುಗಳಲ್ಲಿ ಈ ಪ್ರಮಾಣ ಶೇಕಡಾ 18,6 ಮತ್ತು 10. ಈ ಪರಿಸ್ಥಿತಿಗೆ ಎರಡು ಕಾರಣಗಳಿವೆ. ಮೊದಲನೆಯದು ಕಿರುಯೋಜನೆಯ ತಯಾರಿಗೆ ನಡೆದಷ್ಟು ಸಿದ್ಧತೆ, ದೊರೆತಷ್ಟು ಪ್ರಚಾರ, ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ಆದ ಕಾನೂನುಬದ್ಧ ಸೌಹಾರ್ದ ಒಡಂಬಡಿಕೆ, ದೊರೆತಿಲ್ಲ. ಎರಡನೆಯದು ಸೌಹಾರ್ದ ಒಡಂಬಡಿಕೆಗೆ ನಿರ್ವಹಣಾ ಸಮಿತಿಯ ಸದಸ್ಯರು ಮಾತ್ರ ಸಹಿ ಹಾಕಿರುವುದರಿಂದ ಉಳಿದವರಿಗೆ ಈ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ.

ಕುಮಾರನಹಳ್ಳಿಯಲ್ಲಿ ಎದ್ದು ಕಾಣುವ ಒಂದು ಅಂಶವೆಂದರೆ, ಜಂಟೀ ಅರಣ್ಯ ಯೋಜನೆಯ ಉದ್ದೇಶ, ದೊರೆಯುವ ಪ್ರಯೋಜನ ಮತ್ತು ಅರಣ್ಯ ಸಂರಕ್ಷಣೆಗೆ ಜಾರಿಗೊಳಿಸಿರುವ ನಿಯಮಗಳ ಬಗ್ಗೆ ತಿಳಿದಿರುವ ಸದಸ್ಯರ ಸಂಖ್ಯೆ ಅತಿಸಣ್ಣ ಮತ್ತು ಸಣ್ಣ ರೈತರಿಗಿಂತ ಭೂರಹಿತರಲ್ಲಿಯೇ ಹೆಚ್ಚಾಗಿರುವುದು. ಇದಕ್ಕೆ ಮುಖ್ಯವಾದ ಕಾರಣವೆಂದರೆ ಅರಣ್ಯ ಉತ್ಪನ್ನಗಳ ಮೇಲೆ, ಅದರಲ್ಲೂ

ಮುಖ್ಯವಾಗಿ ಬೀಡಿ ಎಲೆಯ ಸಂಗ್ರಹಣೆಯ ಮೇಲೆ ಭೂರಹಿತ ಕುಟುಂಬಗಳ ಸಂಪೂರ್ಣ ಅವಲಂಬನೆ. ಗ್ರಾಮ ಅರಣ್ಯ ಸಮಿತಿ ರಚನೆಯಾದ ಮೇಲೆ ಈ ಸಂಗ್ರಹಣೆ ವ್ಯವಸ್ಥಿತವಾಗಿದೆ. ಸಂಗ್ರಹಿಸುವವರಿಗೆ ಗುರುತಿನ ಚೀಟಿ ನೀಡಲಾಗಿದೆ. ಗ್ರಾಮ ಅರಣ್ಯ ಸಮಿತಿಯೇ ಸಂಗ್ರಹಿಸುವವರಿಂದ ನೇರವಾಗಿ ಬೀಡಿ ಎಲೆಗಳನ್ನು ಕೊಳ್ಳುವ ವ್ಯವಸ್ಥೆಯನ್ನು ತರಲಾಗಿದೆ. ಈ ಪ್ರತಿಯೊಂದು ಹಂತದಲ್ಲೂ ಬೀಡಿ ಎಲೆಗಳನ್ನು ಸಂಗ್ರಹಿಸುವ ಎಲ್ಲ ಕುಟುಂಬಗಳನ್ನೂ ಒಳಗೊಳ್ಳಲಾಗಿದೆ. ಅರಣ್ಯ ಸಮಿತಿ ಅವರೊಡನೆ ಸಮಾಲೋಚನೆ ನಡೆಸಿದೆ. ಭೂರಹಿತರು ಹಾಗೂ ಅರಣ್ಯ ಸಮಿತಿಯ ನಡುವೆ ನಡೆದ/ನಡೆಯುತ್ತಿರುವ ನಿರಂತರ ವ್ಯವಹಾರದಿಂದಾಗಿ ಮೇಲೆ ಹೇಳಿರುವ ಅಂಶಗಳ ಬಗ್ಗೆ ಈ ಗುಂಪಿನ ಜನರ ತಿಳಿವಳಿಕೆ ಗಮನಾರ್ಹವಾಗಿ ಹೆಚ್ಚಿದೆ.

ಮರಡವಳ್ಳಿಯ ಭೂರಹಿತರಲ್ಲೂ ಇದೇ ಮಾದರಿಯನ್ನು ಕಾಣಬಹುದಾದರೂ ಕಾರಣಗಳು ಮಾತ್ರ ಬೇರೆ. ಇಲ್ಲಿನ 48 ಭೂರಹಿತ ಕುಟುಂಬಗಳಲ್ಲಿ 29 ಕುಟುಂಬಗಳು ಅರಣ್ಯ ಉತ್ಪನ್ನಗಳ ಸಂಗ್ರಹದಲ್ಲಿ ತೊಡಗಿವೆ. ಕುಮಾರನಹಳ್ಳಿಗೆ ಹೋಲಿಸಿದರೆ ಇಲ್ಲಿನ ಉತ್ಪನ್ನಗಳಲ್ಲಿ ವೈವಿಧ್ಯವಿದೆ. ಆದರೆ ಇಲ್ಲಿನ ಗ್ರಾಮ ಅರಣ್ಯ ಸಮಿತಿ ಈ ಉತ್ಪನ್ನಗಳ ಸಂಗ್ರಹಣೆ, ಮಾರಾಟಗಳನ್ನು ಸಂಘಟಿಸುವ ಪ್ರಯತ್ನವನ್ನು ಮಾಡಿಲ್ಲ. ಅದರ ಬದಲಿಗೆ ಈ ಜನರೇ ಸೇರಿ ಹಳ್ಳಿಯ 15 ಹೆಕ್ಟೇರ್ ಗೋಮಾಳ ಪ್ರದೇಶದಲ್ಲಿ ಮಿಶ್ರ ಪ್ರಭೇದಗಳ ನೆಡುತೋಪನ್ನು ಬೆಳೆಸುತ್ತಿದ್ದಾರೆ. ಬಾಳೆಗೆರೆಯ 50 ಹೆಕ್ಟೇರ್ ವಿಸ್ತೀರ್ಣದ ಔಷಧವನದ ನಿರ್ಮಾಣದಲ್ಲಿ 30 ಭೂರಹಿತ ಕುಟುಂಬಗಳ ಸೇವೆಯನ್ನು ಬಳಸಿಕೊಳ್ಳಲಾಗಿದೆ. ಔಷಧ ಸಸ್ಯಗಳ ನರ್ಸರಿಯೊಂದನ್ನು ಭೂರಹಿತರೇ ನಿರ್ವಹಿಸುತ್ತಿದ್ದಾರೆ. ಈ ಹಳ್ಳಿಯ ಭೂರಹಿತರನ್ನು ಉದ್ದೇಶ ಪೂರ್ವಕವಾಗಿ, ಜಂಟೀ ಅರಣ್ಯ ಯೋಜನೆಯಲ್ಲಿ ಸೇರಿಸಿಕೊಳ್ಳುವ ಗ್ರಾಮ ಅರಣ್ಯ ಸಮಿತಿಯ ಪ್ರಾಮಾಣಿಕ ಪ್ರಯತ್ನದ ಫಲವಾಗಿ ಜಂಟೀ ಅರಣ್ಯ ಯೋಜನೆಯ ಉದ್ದೇಶ, ಪ್ರಯೋಜನ, ರೂಪಿಸಿರುವ ನಿಯಮಗಳ ಬಗ್ಗೆ ತಿಳಿದಿರುವವರ ಪ್ರಮಾಣ ಹೆಚ್ಚಾಗಿದೆ.

ಜಂಟೀ ಅರಣ್ಯ ಯೋಜನೆಯ ಮುಖ್ಯ ವಿಷಯಗಳಿಗೆ ಸಂಬಂಧಿಸಿದಂತೆ, ಹನಿಯಾ, ಉದ್ದೂರು ಮತ್ತು ಮುಕುಂದೂರುಗಳ ಭೂರಹಿತ ಹಾಗೂ ಅತಿ ಸಣ್ಣ ರೈತರಲ್ಲಿ ಅತಿ ಹೆಚ್ಚಿನ ಜನರಿಗೆ ಅಜ್ಞಾನವಿದೆ. ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಈ ಬಗ್ಗೆ ಅರಿವು ನೀಡುವ, ಮಾಹಿತಿ ಒದಗಿಸುವ ಯಾವುದೇ ಕಾರ್ಯಕ್ರಮಗಳನ್ನೂ ಈ ಸಮಿತಿಗಳು ಮಾಡಿಲ್ಲ. ಹನಿಯಾದಲ್ಲಿರುವ ಗ್ರಾಮ ಭಾರತಿ ಟ್ರಸ್ಟ್, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಿಗೆ ಮಾತ್ರ ತನ್ನ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡಿದೆ. ಗ್ರಾಮ ಅರಣ್ಯ ಸಮಿತಿಯ ಕೆಲವು ಸದಸ್ಯರು 'ರಾಷ್ಟ್ರೋತ್ಥಾನ ಬಳಗ'ದಡಿಯಲ್ಲಿ ತಾಲ್ಲೂಕಿನ ಎಲ್ಲ ಪರಿಸರ ಸಮಸ್ಯೆಗಳ ವಿರುದ್ಧ ಜನರನ್ನು ಸಂಘಟಿಸಿ ಹೋರಾಟ ನಡೆಸುತ್ತಿದ್ದರೂ ಸಹ, ಆ ಹಳ್ಳಿಯಲ್ಲಿಯೇ ಇರುವ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಜಂಟೀ ಅರಣ್ಯ ಯೋಜನೆಯ ಬಗ್ಗೆ ಅರಿವು ಮೂಡಿಸುವ ಒಂದು ಪ್ರಯತ್ನವನ್ನೂ ಮಾಡಿಲ್ಲ.

ಉದ್ದೂರು, ಮುಕುಂದೂರುಗಳು ತೀವ್ರ ಸ್ವರೂಪದ ಪಾರ್ಟಿ ರಾಜಕೀಯವಿರುವ ಹಳ್ಳಿಗಳೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಗ್ರಾಮ ಅರಣ್ಯ ಸಮಿತಿಯೂ ಈ ರಾಜಕೀಯ ಪ್ರತಿಷ್ಠೆಯ ಕಣವಾಗಿದೆ. ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಅರಿವನ್ನು ಹೆಚ್ಚಿಸುವ, ಅವರನ್ನು ಕಾರ್ಯಕ್ರಮಗಳಲ್ಲಿ ಒಳಗೊಳ್ಳುವ ಯಾವ ಪ್ರಯತ್ನಗಳಿಗೂ ಇಲ್ಲಿನ ಅಧ್ಯಕ್ಷರಿಗೆ, ನಿರ್ವಹಣಾ ಸಮಿತಿಯ ಸದಸ್ಯರಿಗೆ ಹಾಗೂ ಅರಣ್ಯಾಧಿಕಾರಿಗಳಿಗೆ ಸಮಯವಿಲ್ಲ.

ಅಭಿವೃದ್ಧಿ ಯೋಜನೆಗಳಲ್ಲಿ ಸಮುದಾಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸುವ ಕ್ರಮಗಳಲ್ಲಿ ಯೋಜನೆಯ ಬಗೆಗಿನ ತಿಳಿವಳಿಕೆಗೆ ಮಹತ್ವದ ಸ್ಥಾನವಿದೆ. ಭಾಗವಹಿಸುವಿಕೆಯನ್ನೂ ಹಾಗೂ ಭಾಗವಹಿಸುವಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಸಮುದಾಯದ ಅರಿವಿನ ಮಟ್ಟವನ್ನು ಹೆಚ್ಚಿಸಬೇಕಾದುದು ಬಹುಮುಖ್ಯ. ಈ ಕೆಲಸವನ್ನು ಅರಣ್ಯ ಇಲಾಖೆ, ಸರ್ಕಾರೇತರ ಸಂಸ್ಥೆ ಮತ್ತು ನಿರ್ವಹಣಾ ಸಮಿತಿಗಳು ಮಾಡಬೇಕು. ಈ ಮೂವರಲ್ಲಿ ಅತಿ ಹೆಚ್ಚಿನ ಜವಾಬ್ದಾರಿ ಇರಬೇಕಾದುದು ಅರಣ್ಯ ಇಲಾಖೆಗೆ. ಗ್ರಾಮ ಅರಣ್ಯ ಸಮಿತಿಯನ್ನು ರೂಪಿಸುವ ಮೊಟ್ಟಮೊದಲ ಸಭೆಯನ್ನು ಬಿಟ್ಟರೆ ಉಳಿದಂತೆ, ಜಂಟೀ ಅರಣ್ಯ ಯೋಜನೆಗೆ ಸಂಬಂಧಪಟ್ಟಂತೆ ಸಮುದಾಯದ ಅರಿವನ್ನು ಬೆಳೆಸುವ ಕೆಲಸದಲ್ಲಿ ಅರಣ್ಯ ಇಲಾಖೆ ಆಸಕ್ತಿ ತೋರಿಲ್ಲ. ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಇಲಾಖೆಯ ತೀವ್ರ ನಿರಾಸಕ್ತಿ ಎದ್ದು ಕಾಣುತ್ತದೆ. ಇದು ಭಾಗವಹಿಸುವಿಕೆಯ ಮೇಲೆ ತೀವ್ರ ಪರಿಣಾಮ ಬೀರಿ ಅದನ್ನು ಕುಂಠಿತಗೊಳಿಸಿದೆ. ಅರಣ್ಯ ಇಲಾಖೆ ಆಸಕ್ತಿ ತೋರದ ಸಂದರ್ಭದಲ್ಲಿ ಮಾಹಿತಿ ನೀಡುವ ಕೆಲಸದಲ್ಲಿ ಸರ್ಕಾರೇತರ ಸಂಸ್ಥೆಗಳಿಗೆ ವಿಶೇಷ ಜವಾಬ್ದಾರಿ ಬರುತ್ತದೆ. ಕುಮಾರನಹಳ್ಳಿ, ಮರಡವಳ್ಳಿಗಳಲ್ಲಿ ಈ ರೀತಿಯ ಸರ್ಕಾರೇತರ ಸಂಸ್ಥೆಗಳ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು. ಮಾಹಿತಿ ನೀಡಿಕೆ, ತರಬೇತಿ, ಕೌಶಲ ವರ್ಧನೆಗಳಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡ ಸಂದರ್ಭಗಳಲ್ಲಿ, ಸಾಮಾನ್ಯವಾಗಿ ಆಸಕ್ತಿಯಿಲ್ಲದ ಅರಣ್ಯ ಸಿಬ್ಬಂದಿಯನ್ನೂ ಇವುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿರುವ ಸರ್ಕಾರೇತರ ಸಂಸ್ಥೆಗಳ ನಿದರ್ಶನಗಳು ಕುಮಾರನ ಹಳ್ಳಿ, ಮರಡವಳ್ಳಿಗಳಲ್ಲಿ ಕಾಣಸಿಗುತ್ತವೆ.

ಸಭೆಯಲ್ಲಿ ಚರ್ಚೆಗೆ ಬಂದಿರುವ ವಿಷಯಗಳು

ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ದಿನ ನಿತ್ಯದ ಕೆಲಸಕಾರ್ಯಗಳನ್ನು ನೋಡಿಕೊಳ್ಳುವ, ಜವಾಬ್ದಾರಿಯಿರುವ ನಿರ್ವಹಣಾ ಸಮಿತಿಯ ಸಭೆಗಳು ನಿಗದಿತ ಅವಧಿಗೊಮ್ಮೆ ನಡೆಯುವುದು ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾದುದು ಅಂತಹ ಸಭೆಗಳಲ್ಲಿ ಚರ್ಚೆಗೆ ಬರುವ ವಿಷಯಗಳು. ಈ ಸಭೆಗಳಲ್ಲಿ ಚರ್ಚೆಗೆ ಬಂದಿರುವ ವಿಷಯಗಳನ್ನು ಪರಿಶೀಲಿಸುವುದರ ಮೂಲಕವಾಗಿ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ನಿರ್ವಹಣಾ ಸಮಿತಿ ಮತ್ತು ಆ ಮೂಲಕವಾಗಿ ಆ

ಗ್ರಾಮದ ಜನರ ಆಸಕ್ತಿ, ಕಾಳಜಿ, ಬದ್ಧತೆ, ಕಾರ್ಯತತ್ಪರತೆ, ಪ್ರಾಮಾಣಿಕತೆಗಳ ಒಂದು ಸ್ಥೂಲ ಚಿತ್ರವನ್ನು ಪಡೆಯಬಹುದು.

ಸಂಶೋಧನೆಯ ಅವಧಿಯಲ್ಲಿ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ಒಟ್ಟು 33 ಮತ್ತು 27 ವಿವಿಧ ವಿಷಯಗಳು ಚರ್ಚೆಗೆ ಬಂದಿವೆ. ಹನಿಯಾದಲ್ಲಿ 13 ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆಗಳು ನಡೆದಿವೆ. ಉದ್ದೂರು ಮತ್ತು ಮುಕುಂದೂರುಗಳಲ್ಲಿ 12 ಹಾಗೂ 9 ವಿಷಯಗಳು ಚರ್ಚೆಗೊಳಗಾಗಿವೆ. ಈ ವಿಷಯಗಳನ್ನು ಪರಿಶೀಲಿಸಿದ ನಂತರ ಅವುಗಳನ್ನು ಸಂರಕ್ಷಣೆ, ಅರಿವು ಮತ್ತು ಕೌಶಲ, ಆದಾಯದ ಹೆಚ್ಚಳ, ವ್ಯವಹಾರ ಮತ್ತು ಪಾರದರ್ಶಕತೆ, ಮಹಿಳಾ ಸಂಘಟನೆ, ಸಶಕ್ತೀಕರಣ, ಅಭಿವೃದ್ಧಿ ಮತ್ತು ಪ್ರಶಸ್ತಿ-ಪುರಸ್ಕಾರಗಳೆಂದು ಎಂಟು ಗುಂಪುಗಳಾಗಿ ವಿಂಗಡಿಸಬಹುದು. ಈ ಪ್ರತಿಯೊಂದು ಶೀರ್ಷಿಕೆಯಡಿಯಲ್ಲಿಯೂ ಹಲವಾರು ಸಂಬಂಧಿತ ವಿಷಯಗಳಿವೆ. ಉದಾಹರಣೆಗೆ ಸಂರಕ್ಷಣೆಯಡಿಯಲ್ಲಿ ನೆಡುತೋಪು ಹಾಗೂ ಅರಣ್ಯಗಳ ರಕ್ಷಣೆ, ಅದಕ್ಕೆ ಸಂಬಂಧಿಸಿದ ನಿಯಮಗಳ ರಚನೆ, ಕಾವಲು ವ್ಯವಸ್ಥೆ, ಸಂಪನ್ಮೂಲಗಳ ಬಳಕೆ ಮತ್ತು ನಿರ್ವಹಣೆ ಮುಂತಾದ ವಿಷಯಗಳಿವೆ. ಆದಾಯ ಹೆಚ್ಚಳದ ಕ್ರಮಗಳಲ್ಲಿ ನರ್ಸರಿಗಳಲ್ಲಿ ಸಸಿಗಳನ್ನು ಬೆಳೆಸುವುದು, ಅರಣ್ಯ ಉತ್ಪನ್ನಗಳ ಸಂರಕ್ಷಣೆ ಮತ್ತು ಮೌಲ್ಯವರ್ಧನೆ, ಮಾರುಕಟ್ಟೆ ಮಾಹಿತಿ ಮತ್ತು ತರಬೇತಿ ಮುಂತಾದ ವಿಷಯಗಳಿವೆ.

ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಮೇಲಿನ ಎಂಟೂ ಗುಂಪುಗಳಿಗೆ ಸೇರಿದ ವಿಷಯಗಳ ಬಗ್ಗೆ ವ್ಯಾಪಕವಾದ ಚರ್ಚೆಗಳು ನಡೆದಿವೆ. ಅವುಗಳಿಗೆ ಸಂಬಂಧಪಟ್ಟಂತೆ ನಿರ್ಧಾರಗಳಾಗಿವೆ. ಈ ನಿರ್ಧಾರಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗಿದೆ. ಅನುಷ್ಠಾನದ ಹಂತದಲ್ಲಿ ಎದುರಾದ ಸಮಸ್ಯೆಗಳನ್ನು ಎದುರಿಸಲು ಮತ್ತೆ ಆ ವಿಷಯವನ್ನು ಸಭೆಗೆ ಕೊಂಡೊಯ್ಯಲಾಗಿದೆ. ನಿರ್ಧಾರ ಕೈಗೊಳ್ಳಲು ಜ್ಞಾನ ಸಾಲದು ಎನಿಸಿದಾಗ ತಜ್ಞರೊಡನೆ ಸಮಾಲೋಚನೆ ನಡೆಸಿ ಅವರ ನೆರವನ್ನು ಪಡೆಯಲಾಗಿದೆ. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣದ ಕೊರತೆ ಬಂದಾಗ (ಸಸ್ಯ ಕ್ಷೇತ್ರಗಳ ನಿರ್ಮಾಣ, ಬೀಡಿ ಎಲೆಗಳನ್ನು ಗ್ರಾಮ ಅರಣ್ಯ ಸಮಿತಿಯೇ ಕೊಳ್ಳುವ ನಿರ್ಧಾರ ಇತ್ಯಾದಿ) ಬೇರೆಯ ಸಂಸ್ಥೆಗಳಿಂದ ಸಾಲಪಡೆದಿವೆ. ಹಣಕಾಸು ವ್ಯವಹಾರದಲ್ಲಿ ಕಟ್ಟೆಚ್ಚರ ವಹಿಸಿವೆ. ಖರ್ಚು ವೆಚ್ಚಗಳ ವಿವರಗಳನ್ನು ಸಮಿತಿಗೆ ಒಪ್ಪಿಸಿವೆ. ಮಹಿಳೆಯರ ಸಂಘಟನೆಗೆ, ಭೂರಹಿತರ ಭಾಗವಹಿಸುವಿಕೆ ಹಾಗೂ ಅವರ ಆದಾಯ ಹೆಚ್ಚಳಕ್ಕೆ ವಿಶೇಷ ಗಮನ ನೀಡಿದೆ. ಮರಡವಳ್ಳಿಯ ಅರಣ್ಯ ಸಮಿತಿ ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಿದ ಔಷಧ ಸಸ್ಯವನ, ಬೇರೆಯವರಿಗೆ ಪರಭಾರೆಯಾಗುವುದನ್ನು ವಿರೋಧಿಸಲು ವಿಷದವಾಗಿ ಚರ್ಚೆನಡಿಸಿ. ಅಂತಿಮವಾಗಿ ನ್ಯಾಯಾಲಯಕ್ಕೆ ಮೊರೆ ಹೋಗಿದೆ. ಕುಮಾರನಹಳ್ಳಿಯ ಅರಣ್ಯ ಸಮಿತಿಗೆ ದೊರೆತ ಡಾ.ಶಿವರಾಮಕಾರಂತ ಪ್ರಶಸ್ತಿಯನ್ನು ಒಪ್ಪಿಕೊಳ್ಳಬೇಕೇ, ಬೇಡವೇ ಎಂಬುದರ ಬಗ್ಗೆ ನಿರ್ವಹಣಾ ಸಮಿತಿಯ ಎರಡು

ಸಭೆಗಳಲ್ಲಿ ಚರ್ಚೆ ನಡದಿದೆ. 'ಬೀಡಿ ಎಲೆಗಳ ಮಾರಾಟಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಲು ನಮಗೆ ಇನ್ನೂ ಸಾಧ್ಯವಾಗಿಲ್ಲ. ಆ ಸಮಸ್ಯೆಯನ್ನು ಬಗೆಹರಿಸಿದ ನಂತರ ನಮಗೆ ಪ್ರಶಸ್ತಿಯನ್ನು ಸ್ವೀಕರಿಸುವ ಅರ್ಹತೆ ಬರುತ್ತದೆ' ಎಂಬುದು ಒಂದು ನಿಲುವಾದರೆ, 'ಪ್ರಶಸ್ತಿಯ ಹಣವನ್ನು ಪಡೆದು, ಅದನ್ನು ಮಾರುಕಟ್ಟೆ ಮಾಹಿತಿ ಸಂಗ್ರಹಣೆ, ಮಾರಾಟದ ವ್ಯವಸ್ಥೆಗೆ ಬಳಸಬಹುದು. ಆದ್ದರಿಂದ ಪ್ರಶಸ್ತಿಯನ್ನು ಸ್ವೀಕರಿಸಬೇಕು' ಎಂಬುದು ಇನ್ನೊಂದು ಅಭಿಪ್ರಾಯ. ಎರಡು ಸಭೆಗಳ ಚರ್ಚೆಯ ನಂತರ ಅರಣ್ಯ ಸಮಿತಿ ಪ್ರಶಸ್ತಿಯನ್ನು ಸ್ವೀಕರಿಸಿದೆ.

ಕುಮಾರನಹಳ್ಳಿ ಮತ್ತು ಮರಡವಳ್ಳಿಯ ಅರಣ್ಯ ಸಮಿತಿಗಳು ಮೇಲೆ ಸೂಚಿಸಿರುವ ಎಲ್ಲ ಎಂಟು ಗುಂಪುಗಳ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದರೂ ಆ ಎಲ್ಲ ಎಂಟು ವಿಷಯಗಳಲ್ಲಿ ಯಶಸ್ವಿಯಾಗಿವೆ ಎಂದಲ್ಲ. ಅದು ಬಹುಶಃ ಸಾಧ್ಯವೂ ಇಲ್ಲ. ಆದರೆ ಈ ಎರಡೂ ಅರಣ್ಯ ಸಮಿತಿಗಳು ಯಾವ ಹಂತದಲ್ಲೂ ನಿರಾಸೆಯಿಂದ ಕೈಚೆಲ್ಲಿ ಕುಳಿತಿಲ್ಲ. ಸದಸ್ಯರ ಸಂಘಟನೆಯ ಮೂಲಕ, ಅವರ ತಿಳಿವಳಿಕೆಯನ್ನು ಹೆಚ್ಚಿಸುವ ಮೂಲಕ, ಅವರ ಅಭಿಪ್ರಾಯಗಳನ್ನು ಕೇಳಿ, ತಿಳಿದು ಅವರನ್ನು ಒಳಗೊಳ್ಳುವುದರ ಮೂಲಕವಾಗಿ ಸಮಸ್ಯೆಗಳನ್ನು ನಿರಂತರವಾಗಿ ಬಗೆಹರಿಸಿಕೊಳ್ಳುತ್ತ ಮುಂದುವರಿದಿವೆ. ಈ ಎರಡೂ ಅರಣ್ಯ ಸಮಿತಿಗಳಿಗೆ ಸಂಬಂಧಿಸಿದ ಮತ್ತೊಂದು ಮಹತ್ವದ ವಿಷಯವೆಂದರೆ ಜಂಟೀ ಅರಣ್ಯ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟ ಎಲ್ಲ ನಿರ್ಧಾರಗಳನ್ನೂ ನಿರ್ವಹಣಾ ಸಮಿತಿಯ ಸಭೆಯಲ್ಲಿಯೇ ಕೈಗೊಂಡಿರುವುದು. ಸಭೆಯನ್ನು ಹೊರತು ಪಡಿಸಿ, ಸದಸ್ಯರಿಗೆ ತಿಳಿಯದಂತೆ ನಿರ್ಧಾರ ಕೈಗೊಂಡ ಒಂದೇ ಒಂದು ಪ್ರಕರಣವೂ ಈ ಹಳ್ಳಿಗಳಲ್ಲಿ ಕಾಣುವುದಿಲ್ಲ.

ಹನಿಯಾ, ಉದ್ದೂರು ಮತ್ತು ಮುಕುಂದೂರುಗಳ ನಿರ್ವಹಣಾ ಸಮಿತಿಯಲ್ಲಿ ಚರ್ಚೆಗೆ ಬಂದಿರುವ ಒಂದೇ ಒಂದು ವಿಷಯವೆಂದರೆ ಸಂರಕ್ಷಣೆ. ಆ ಶೀರ್ಷಿಕೆಯಡಿಯಲ್ಲಿ ಅದಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ಚರ್ಚೆಯಾಗಿವೆ. ಹನಿಯಾದ ನಿರ್ವಹಣಾ ಸಮಿತಿ ತನ್ನ ವ್ಯಾಪ್ತಿಯಲ್ಲಿರುವ ಅರಣ್ಯದ ಸಂರಕ್ಷಣೆಯ ಬಗ್ಗೆ ಚರ್ಚಿಸಿಲ್ಲ. ಹನಿಯಾದಿಂದ 60 ಕಿ.ಮೀ. ದೂರದಲ್ಲಿರುವ ರಿಪ್ಪನ್ ಪೇಟೆಯಲ್ಲಿ ಶುಂಠಿ ಬೆಳೆಯುತ್ತಿರುವವರಿಂದ ಆಗುತ್ತಿರುವ ಅರಣ್ಯ ನಾಶದ ಬಗ್ಗೆ, ಅದರ ಸಂರಕ್ಷಣೆಯ ಬಗ್ಗೆ ಚರ್ಚಿಸಿದೆ. ನೆಡುತೋಪಿಗೆ ಬೆಂಕಿಬಿದ್ದಾಗ, ನಾಟಾ ಕಡಿದಾಗ ಇಲಾಖೆಗೆ ತಿಳಿಸಿ ಸುಮ್ಮನಾಗಿದೆ. ಉದ್ದೂರಿನಲ್ಲಿ ಎರಡು ವರ್ಷಗಳ ಅವಧಿಯಲ್ಲಿ ನಡೆದಿರುವ 13 ಸಭೆಗಳಲ್ಲಿ, 7ರಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ವಿಷಯವೆಂದರೆ ನೆಡುತೋಪಿನ ಕಾವಲುಗಾರನಿಗೆ ಸಂಬಳ ನೀಡುವುದು: ಗ್ರಾಮ ಅರಣ್ಯ ಸಮಿತಿಯಿಂದ ಸಂಬಳ ಪಡೆಯುವ ಕಾವಲುಗಾರ ಅಧ್ಯಕ್ಷರ ಮನೆಯಲ್ಲಿ ಕೆಲಸ ಮಾಡಬಹುದೇ ಎನ್ನುವುದು. ಉದ್ದೂರಿನ ನಿರ್ವಹಣಾ ಸಮಿತಿ, 3 ಸಭೆಗಳಲ್ಲಿ, 'ಚರ್ಚಿಸಲು ಯಾವುದೇ ವಿಷಯಗಳಿಲ್ಲ' ಎಂದು ನಡಾವಳಿ ಪುಸ್ತಕದಲ್ಲಿ

ದಾಖಲಿಸಿ ಸಭೆಯನ್ನು ಮುಂದೂಡಿರುವುದು ಗಮನ ಸೆಳೆಯುತ್ತದೆ. ಸಂರಕ್ಷಣೆಯನ್ನು ಹೊರತು ಪಡಿಸಿ ಉಳಿದ ಯಾವ ವಿಷಯಗಳೂ ಅರಿವು ಮತ್ತು ಕೌಶಲವನ್ನು ಬೆಳೆಸುವುದು, ಆದಾಯದ ಹೆಚ್ಚಳ, ವ್ಯವಹಾರ ಮತ್ತು ಪಾರದರ್ಶಕತೆ, ಮಹಿಳಾ ಸಂಘಟನೆ, ಸಶಕ್ತೀಕರಣ, ಅಭಿವೃದ್ಧಿ, ಪ್ರಶಸ್ತಿ-ಪುರಸ್ಕಾರಗಳು- ಈ ನಿರ್ವಹಣಾ ಸಮಿತಿಗಳಲ್ಲಿ ಚರ್ಚೆಗೆ ಬಂದಿಲ್ಲ. ಉದ್ದೂರು ಮತ್ತು ಮುಕುಂದೂರುಗಳಲ್ಲಿ ಅರಣ್ಯ ಸಮಿತಿಯ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳೂ ಸಭೆಯಿಂದ ಹೊರಗೆ, ಅಧ್ಯಕ್ಷರ ಹಾಗೂ ಅವರ ಆಪ್ತರ ಗೋಷ್ಠಿಯಲ್ಲಿ ನಿರ್ಧಾರವಾಗುತ್ತವೆ. ಉದ್ದೂರಿನ ಅಧ್ಯಕ್ಷರು, ಗ್ರಾಮ ಅರಣ್ಯ ಸಮಿತಿಯ ಒಪ್ಪಿಗೆ ಪಡೆಯದೆಯೇ, ನೀಲಗಿರಿ ತೋಪಿನಿಂದ ಬಂದ ಆದಾಯದಲ್ಲಿ ದೇವಸ್ಥಾನ ಕಟ್ಟಿಸುತ್ತಿದ್ದಾರೆ. ಮುಕುಂದೂರು ಅರಣ್ಯ ಸಮಿತಿ ತನ್ನ ಹಣವನ್ನು ಲೋಕಸಭಾ ಸದಸ್ಯರ ಚುನಾವಣೆಗಾಗಿ ಬಳಸಿದೆ.

ಸಭೆಯಲ್ಲಿ ಚರ್ಚೆಗೆ ಬಂದಿರುವ ವಿಷಯಗಳು, ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ಕುಮಾರನಹಳ್ಳಿ ಹಾಗೂ ಮರಡವಳ್ಳಿಯ ನಿರ್ವಹಣಾ ಸಮಿತಿಯ ಪ್ರಬುದ್ಧತೆ ಹಾಗೂ ಪ್ರಾಮಾಣಿಕ ಕಾರ್ಯತತ್ಪರತೆಗಳ ಮೇಲೆ ಬೆಳಕು ಚೆಲ್ಲಿದರೆ ಹನಿಯಾ, ಉದ್ದೂರು ಮತ್ತು ಮುಕುಂದೂರು ಅರಣ್ಯ ಸಮಿತಿಗಳ ನಿರಾಸಕ್ತಿ ಹಾಗೂ ಕಾಟಾಚಾರದ ಪ್ರವೃತ್ತಿಗಳನ್ನು ಸೂಚಿಸುತ್ತವೆ.

ನಿರ್ವಹಣಾ ಸಮಿತಿಯ ಸದಸ್ಯರ ಆಯ್ಕೆಯ ವಿಧಾನ

ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರನ್ನು, ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಆಯ್ಕೆ ಮಾಡುತ್ತಾರೆ. ಆಯ್ಕೆ ಯಾವ ರೀತಿ ನಡೆಯಬೇಕು ಎಂಬುದನ್ನೂ ಅವರೇ ನಿರ್ಧರಿಸುತ್ತಾರೆ. ಈ ನಿರ್ಧಾರ ಕೈಗೊಳ್ಳುವ ಹಾಗೂ ಆಯ್ಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮುಕ್ತ ಅವಕಾಶ ಅರಣ್ಯ ಸಮಿತಿಯ ಸದಸ್ಯರಿಗಿದೆ. ಆದ್ದರಿಂದ ಆಯ್ಕೆಯ ವಿಧಾನ ಹಾಗೂ ಅದಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಗಳನ್ನು ಪರಿಶೀಲಿಸುವುದರಿಂದ ಅದು ಎಷ್ಟರಮಟ್ಟಿಗೆ ಸದಸ್ಯರ ಸಹಭಾಗಿತ್ವದಿಂದ ನಡೆದಿದೆ ಎಂಬುದನ್ನು ತಿಳಿಯಬಹುದು. ಈ ಪ್ರಾರಂಭದ ಹಂತದಲ್ಲೇ ಸದಸ್ಯರ ಸಹಭಾಗಿತ್ವವಿಲ್ಲದಿದ್ದರೆ ಮುಂದೆ ಅದನ್ನು ನಿರೀಕ್ಷಿಸುವುದು ಕಷ್ಟವಾಗುತ್ತದೆ.

ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿ ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದ ಮಾಹಿತಿಗಳನ್ನು ಕೋಷ್ಟಕ 2ರಲ್ಲಿ ಕೊಡಲಾಗಿದೆ. ಸರ್ವಾನುಮತದ ಆಯ್ಕೆ ಅತ್ಯುತ್ತಮ. ಇಂತಹ ಆಯ್ಕೆ ಸಾಮಾನ್ಯವಾಗಿ, ಆಯ್ಕೆಯಾಗುವವರಲ್ಲಿ ಸದಸ್ಯರಿಗಿರುವ ನಂಬಿಕೆ, ವಿಶ್ವಾಸ, ಗೌರವಗಳನ್ನು ಸೂಚಿಸುತ್ತದೆ. ಇವು ಬಹಳ ಮುಖ್ಯವಾದ ಸೋಶಿಯಲ್ ಕ್ಯಾಪಿಟಲ್. ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯ ಸಮುದಾಯವನ್ನು ಭಾಗವಹಿಸುವಂತೆ ಪ್ರೇರೇಪಿಸಲು ಈ ಸೋಶಿಯಲ್ ಕ್ಯಾಪಿಟಲ್ ಅಗತ್ಯವಾಗುತ್ತದೆ. ಸರ್ವಾನುಮತದ ಆಯ್ಕೆ ಸಾಧ್ಯವಾಗದಿದ್ದಾಗ

ಎರಡನೆಯ ಸ್ಥಾನ ಬಹುಮತಕ್ಕೆ. ಇದಕ್ಕೆ ಚುನಾವಣೆ ಅಗತ್ಯ. ಚುನಾವಣೆ ಪ್ರಜಾಪ್ರಭುತ್ವದ ಪದ್ಧತಿಯಾಗಿದ್ದು ಎಲ್ಲ ಸದಸ್ಯರಿಗೂ ಸಮಾನ ಅವಕಾಶವನ್ನು ಒದಗಿಸಿ ಕೊಡುತ್ತದೆ. ಆದರೆ ಚುನಾವಣೆಗಳಿಂದ ಜಗಳ, ವೈಷಮ್ಯ, ಮನಸ್ತಾಪಗಳೂ ಉಂಟಾಗುತ್ತವೆ. ಕ್ಷೇತ್ರಕಾರ್ಯದ ನಾಲ್ಕು ಹಳ್ಳಿಗಳಲ್ಲಿ ಸರ್ವಾನುಮತದ ಆಯ್ಕೆ ನಡೆದಿದ್ದು, ಉದ್ದೂರಿನಲ್ಲಿ ಮಾತ್ರ ಚುನಾವಣೆ ನಡೆದಿದೆ. ಆದರೆ ಹೊರನೋಟಕ್ಕೆ ಆಯ್ಕೆ ಸರ್ವಾನುಮತದಿಂದ ನಡೆದಿದ್ದರೂ ಅದರಲ್ಲಿ ಅನೇಕ ಸೂಕ್ಷ್ಮ ವ್ಯತ್ಯಾಸಗಳಿವೆ.

ಕುಮಾರನಹಳ್ಳಿ, ಮರಡವಳ್ಳಿ ಮತ್ತು ಹನಿಯಾಗಳಲ್ಲಿ ಆಯ್ಕೆಯ ವಿಧಾನವನ್ನು ಗ್ರಾಮ ಅರಣ್ಯ ಸಮಿತಿಯ ಸದಸ್ಯರೇ ನಿರ್ಧರಿಸಿದ್ದು ಅದರಲ್ಲಿ ಅರಣ್ಯ ಇಲಾಖೆಯ ಪಾತ್ರವಿಲ್ಲ(ಕೋಷ್ಟಕ 2). ಈ ನಿರ್ಧಾರ ಕೈಗೊಳ್ಳುವ ಹಾಗೂ ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಅನುಕ್ರಮವಾಗಿ ಭಾಗವಹಿಸಿದ ಸದಸ್ಯರ ಸಂಖ್ಯೆ 88(90%), 148(83%) ಮತ್ತು 32(58%). ಕುಮಾರನಹಳ್ಳಿಯ ಎಲ್ಲ ಚಟುವಟಿಕೆಗಳ ಹಿಂದಿರುವ ಕೃಷಿ-ಕಾರ್ಮಿಕ ಯುವಕ ಮಂಡಳಿಯ ಮುಖ್ಯ ವ್ಯಕ್ತಿಗಳನ್ನೇ ನಿರ್ವಹಣಾ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ. ಮರಡವಳ್ಳಿಯಲ್ಲೂ ಇದೇ ಮಾದರಿಯನ್ನು ಕಾಣಬಹುದು. ಪರಿಸರ ಸಂರಕ್ಷಣೆ, ಮಹಿಳಾ ಮತ್ತು ಶಿಶುಕಲ್ಯಾಣ, ಕ್ರೀಡೆ, ಸಂಸ್ಕೃತಿ, ಶಿಕ್ಷಣ ಕ್ಷೇತ್ರಗಳಲ್ಲಿ ಸಕ್ರಿಯವಾಗಿರುವ ಶರಾವತಿ ವಲಯಾಭಿವೃದ್ಧಿ ಸಂಸ್ಥೆಯ ಮುಂಚೂಣಿಯಲ್ಲಿರುವವರನ್ನೇ ಗ್ರಾಮ ಅರಣ್ಯ ಸಮಿತಿಯ ಶೇಕಡಾ 83ರಷ್ಟು ಸದಸ್ಯರು (ಭಾಗವಹಿಸಿದ ಅಷ್ಟೂ ಸದಸ್ಯರು) ಸರ್ವಾನುಮತದಿಂದ ಆಯ್ಕೆ ಮಾಡಿದ್ದಾರೆ. ಆಯ್ಕೆಯಾದ ಸದಸ್ಯರ, ಅಧ್ಯಕ್ಷರ ಬಗ್ಗೆ ಈ ಎರಡೂ ಹಳ್ಳಿಗಳಲ್ಲಿ ಯಾವ ಭಿನ್ನಾಭಿಪ್ರಾಯವೂ ವ್ಯಕ್ತವಾಗಿಲ್ಲ. ಹನಿಯಾ ಗ್ರಾಮದ್ದು ನಾವು ಈಗಾಗಲೇ ನೋಡಿರುವಂತೆ ಸ್ವಲ್ಪ ಭಿನ್ನವಾದ ಪರಿಸ್ಥಿತಿ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜಂಟೀ ಅರಣ್ಯ ಯೋಜನೆಯ ಅನುಷ್ಠಾನವನ್ನೂ ಶಿವಮೊಗ್ಗ ಜಿಲ್ಲೆಗೆ ಯೋಜನೆಯ ಪ್ರವೇಶವನ್ನು ತೀವ್ರವಾಗಿ ವಿರೋಧಿಸಿದವರನ್ನೇ, ಅರಣ್ಯ ಸಮಿತಿಯ ಸದಸ್ಯರು ನಿರ್ವಹಣಾ ಸಮಿತಿಯ ಸದಸ್ಯರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿ, ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಅವರಿಗೆ ನೀಡಿದ್ದಾರೆ.

ಸಾರ್ವತ್ರಿಕ ಚುನಾವಣೆಯ ಎಲ್ಲ ಲಕ್ಷಣಗಳೂ ಕಂಡುಬಂದಿರುವುದು ಉದ್ದೂರಿನಲ್ಲಿ. ಸರ್ವಾನುಮತದ ಆಯ್ಕೆ ಸಾಧ್ಯವಾಗದಿದ್ದಾಗ ಅಲ್ಲಿ ಚುನಾವಣೆ ಅನಿವಾರ್ಯವಾಯಿತು. ಈ ಹಂತದವರೆಗೂ ಪ್ರಬಲ ಜಾತಿಗೆ ಸೇರಿದ ಅನುಕೂಲಸ್ಥ ನಾಯಕರ ಹಿಂದೆಯೇ ಇದ್ದ ಅರಣ್ಯ ಇಲಾಖೆ, ದೂರ ನಿಂತು ಚುನಾವಣೆ ನಡೆಯಲಿ ಎಂದಿತು. ಚುನಾವಣೆಯಲ್ಲಿ ಭಾಗವಹಿಸಿದವರು 43 ಸದಸ್ಯರು(36%). ಇದರಲ್ಲಿ 33 ಮತ ದೊರೆತ ಅರಣ್ಯ ಇಲಾಖೆಯ ಬೆಂಬಲವಿದ್ದ ನಾಯಕರು ಅರಣ್ಯ ಸಮಿತಿಯ ಅಧ್ಯಕ್ಷರಾದರು. ನಿರ್ವಹಣಾ ಸಮಿತಿಯ ಸದಸ್ಯರು, ಅಧ್ಯಕ್ಷರನ್ನು ಆರಿಸುವ ಸಭೆಯಲ್ಲಿ ಗ್ರಾಮ

ಅರಣ್ಯ ಸಮಿತಿಯ 77 ಸದಸ್ಯರು(64%) ಭಾಗವಹಿಸಿರಲಿಲ್ಲ ಎಂಬುದನ್ನು ಗಮನಿಸಬೇಕು. ಅಧ್ಯಕ್ಷರ ವಿರುದ್ಧ ಸೋತ ವ್ಯಕ್ತಿ ನಿರ್ವಹಣಾ ಸಮತಿಯ ಸದಸ್ಯರಾದರು. ಈ ಚುನಾವಣೆ ತೀವ್ರ ಸ್ವರೂಪದ ವೈಷಮ್ಯಕ್ಕೆ ಭಿನ್ನಾಬಿಪ್ರಾಯಗಳಿಗೆ ದಾರಿ ಮಾಡಿಕೊಟ್ಟಿತು. ಚುನಾವಣೆ ನಡೆದ ಎಂಟೇ ತಿಂಗಳ ಅವಧಿಯಲ್ಲಿ ಅಧ್ಯಕ್ಷರ ವಿರುದ್ಧ ಚುನಾವಣೆಗೆ ನಿಂತು ಸೋತ, ನಿರ್ವಹಣಾ ಸಮಿತಿಯ ಸದಸ್ಯನನ್ನು, ಸತತವಾಗಿ ಮೂರು ಸಭೆಗಳಿಗೆ ಬರಲಿಲ್ಲವೆಂಬ ಕಾರಣ ನೀಡಿ ನಿರ್ವಹಣಾ ಸಮಿತಿಯಿಂದ ಹೊರಗಟ್ಟಲಾಯಿತು. ಗ್ರಾಮ ಅರಣ್ಯ ಸಮಿತಿಯ ಸದಸ್ಯರಾಗಿ ಮುಂದುವರೆದಿರುವ ಈ ಸದಸ್ಯರು ಹಾಗೂ ಅಧ್ಯಕ್ಷರ ನಡುವೆ ಮುಸುಕಿನೊಳಗಿನ ಗುದ್ದಾಟ ಮುಂದುವರೆದಿದೆ.

ಮುಕುಂದೂರಿನಲ್ಲಿ ಆಯ್ಕೆ ಸರ್ವಾನುಮತದಿಂದ ನಡೆದಿದ್ದರೂ ಆಯ್ಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಸದಸ್ಯರ ಸಂಖ್ಯೆ 50(39%). ಹಳ್ಳಿಯ ಪ್ರಬಲ ರಾಜಕೀಯ ನಾಯಕರೇ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರಾಗಿ, ಅವರ ಅನುಯಾಯಿಗಳೇ ನಿರ್ವಹಣಾ ಸದಸ್ಯರಾಗಿ ಆಯ್ಕೆ ಯಾಗಿದ್ದಾರೆ.

ನಿರ್ವಹಣಾ ಸಮಿತಿಯ ಸದಸ್ಯರ ಹಾಗೂ ಅಧ್ಯಕ್ಷರ ಸರ್ವಾನುಮತದ ಆಯ್ಕೆ ಅತ್ಯುತ್ತಮ ಎಂಬ ಭಾವನೆಯಿದೆ. ಈ ರೀತಿಯ ಆಯ್ಕೆ ಹಳ್ಳಿಯ ಜನರಿಗೆ, ಅಂತಹ ವ್ಯಕ್ತಿಗಳಲ್ಲಿರುವ ಗೌರವ ನಂಬಿಕೆಗಳನ್ನು ಸೂಚಿಸುತ್ತದೆ. ಹೀಗೆ ಆಯ್ಕೆಯಾದ ವ್ಯಕ್ತಿ ಸ್ಥಳೀಯ ಜನರಿಗೆ ಜಂಟೀ ಅರಣ್ಯ ಯೋಜನೆಯಿಂದ ಗರಿಷ್ಠ ಪ್ರಯೋಜನಗಳನ್ನು ಕೊಡಿಸಿಕೊಡಬಲ್ಲ ಎಂಬ ನಂಬಿಕೆಯೂ ಇದೆ. ಆದರೆ ವಾಸ್ತವದಲ್ಲಿ ಈ ಅಭಿಪ್ರಾಯ ನಿಜವಾಗಬೇಕಾದ್ದಿಲ್ಲ. ಕುಮಾರನಹಳ್ಳಿ ಮತ್ತು ಮುಕುಂದೂರುಗಳೆರಡರಲ್ಲೂ ನಿರ್ವಹಣಾ ಸಮಿತಿಯ ಸದಸ್ಯರು ಮತ್ತು ಅಧ್ಯಕ್ಷರು ಸರ್ವಾನುಮತ ದಿಂದ ಆಯ್ಕೆಯಾದವರೇ. ಆದರೆ ಅವರ ನಡುವೆ ಆಜಗಜಾಂತರ ವ್ಯತ್ಯಾಸಗಳಿವೆ. ಕುಮಾರನ ಹಳ್ಳಿಯ ಅರಣ್ಯ ಸಮಿತಿಯ ಅಧ್ಯಕ್ಷರು ರಾಜಕೀಯ ವ್ಯಕ್ತಿಯಲ್ಲ. ಹಳ್ಳಿಗೆ ಒಳಿತಾಗುವ ಹಲವಾರು ಚಟುವಟಿಕೆಗಳಲ್ಲಿ ಮೊದಲಿನಿಂದಲೂ ಸಕ್ರಿಯವಾಗಿ ದುಡಿಯುತ್ತ ಬಂದವರು. ಆದರೆ ಮುಕುಂದೂರಿನ ಅರಣ್ಯ ಸಮಿತಿಯ ಅಧ್ಯಕ್ಷರು ರಾಜಕೀಯ ಮಹತ್ವಾಕಾಂಕ್ಷೆ ಉಳ್ಳವರು. ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರ ಪಟ್ಟ ಅವರ ಪಾಲಿಗೆ ರಾಜಕೀಯವಾಗಿ ಮೇಲೇರುವ ಮತ್ತೊಂದು ಮೆಟ್ಟಿಲು ಮಾತ್ರ. ನಿರ್ವಹಣಾ ಸಮಿತಿಯ ಬಹುತೇಕ ಸದಸ್ಯರು ರಾಜಕೀಯವಾಗಿ ಅಧ್ಯಕ್ಷರ ಹಿಂಬಾಲಕರು. ಇವರೆಲ್ಲರ ಪಾಲಿಗೆ ಜಂಟೀ ಅರಣ್ಯ ಯೋಜನೆ ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ರಾಜಕೀಯ ಕ್ಷೇತ್ರ ಮಾತ್ರ. ಸಮುದಾಯದ ಒಳಿತು ಅಲ್ಲಿ ಮುಖ್ಯವಲ್ಲ.

ನಿರ್ವಹಣಾ ಸಮಿತಿಯ ಸದಸ್ಯರ ಹಾಗೂ ಅಧ್ಯಕ್ಷರ ಆಯ್ಕೆಯನ್ನು ಸಂಪೂರ್ಣವಾಗಿ ಗ್ರಾಮ ಅರಣ್ಯ ಸಮಿತಿಗೆ ಬಿಡಬೇಕಾದುದು ಅಗತ್ಯ. ಅರಣ್ಯ ಇಲಾಖೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾರ್ಗದರ್ಶನ ನೀಡಬಹುದೇ ಹೊರತು ಮಧ್ಯ ಪ್ರವೇಶಿಸಬಾರದು. ಆದರೆ ವಾಸ್ತವದಲ್ಲಿ

ಹೀಗಾಗುವುದಿಲ್ಲ. ಉದ್ದೂರು, ಮುಕುಂದೂರುಗಳಲ್ಲಿ ಗ್ರಾಮ ಅರಣ್ಯ ಸಮಿತಿಯನ್ನು ರಚಿಸುವ ಸಂದರ್ಭದಲ್ಲಿ, ಅರಣ್ಯಾಧಿಕಾರಿಗಳು ಹಳ್ಳಿಯ ರಾಜಕೀಯ ಧುರೀಣರನ್ನೇ ಅರಣ್ಯ ಸಮಿತಿಯ ಅಧ್ಯಕ್ಷರಾಗಿ ತೋರಿಸಿದ್ದಾರೆ. ಹಳ್ಳಿಯವರಿಗೆ ಬಿಟ್ಟದ್ದರೆ ಈ ವ್ಯಕ್ತಿಗಳನ್ನೇ ಆಯ್ಕೆ ಮಾಡುತ್ತಿದ್ದರೋ ಇಲ್ಲವೋ ತಿಳಿಯದು. ಉದ್ದೂರಿನಲ್ಲಂತೂ ಬೇರೆಯ ವ್ಯಕ್ತಿ ಆಯ್ಕೆಯಾಗಬಹುದಿದ್ದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅರಣ್ಯ ಇಲಾಖೆಯ ಬೆಂಬಲ ಒಂದು ರಾಜಕೀಯ ಪಕ್ಷದ ಕಡೆ, ಅದರ ನಾಯಕರ ಕಡೆ ಇದೆಯೆಂಬ ಸೂಚನೆ ದೊರೆತ ಕೂಡಲೇ ಇನ್ನೊಂದು ಪಕ್ಷಕ್ಕೆ ಸೇರಿದ ಜನ ಜಂಟೀ ಅರಣ್ಯ ಯೋಜನೆಯಿಂದ ದೂರವೇ ಉಳಿದರು. ಜಂಟೀ ಅರಣ್ಯ ಯೋಜನೆಯಲ್ಲಿ ಇಡೀ ಸಮುದಾಯದ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಬೇಕಾದ ಅರಣ್ಯ ಇಲಾಖೆಯೇ ತನ್ನ ನಡವಳಿಕೆಯಿಂದ, ಭಾಗವಹಿಸುವಿಕೆಯನ್ನು ಒಂದು ರಾಜಕೀಯ ಪಕ್ಷಕ್ಕೆ ಸೇರಿದ ವ್ಯಕ್ತಿಗಳಿಗೆ ಮಾತ್ರ ಸೀಮಿತಗೊಳಿಸಿತು. ಅರಣ್ಯ ಇಲಾಖೆ ಮತ್ತು ಸ್ಥಳೀಯ ರಾಜಕೀಯ ಧುರೀಣರು ತಮ್ಮದೇ ಆದ ಕಾರಣಗಳಿಗೆ ಒಂದಾದಾಗ ಸಹಭಾಗಿತ್ವವೂ ಸೇರಿದಂತೆ ಜಂಟೀ ಅರಣ್ಯ ಯೋಜನೆಯ ಹಲವು ಧ್ಯೇಯೋದ್ದೇಶಗಳು ಹೇಗೆ ಕಮರಿಹೋಗುತ್ತವೆ ಎನ್ನುವುದಕ್ಕೆ ಉದ್ದೂರು, ಮುಕುಂದೂರುಗಳ ಗ್ರಾಮ ಅರಣ್ಯ ಸಮಿತಿಗಳು ಒಳ್ಳೆಯ ದೃಷ್ಟಾಂತವಾಗುತ್ತವೆ.

ಅರಣ್ಯ ಸಿಬ್ಬಂದಿ ಮತ್ತು ಸ್ಥಳೀಯ ಜನರ ನಡುವಿನ ಸಂಬಂಧ

ಜಂಟೀ ಅರಣ್ಯ ಯೋಜನೆ, ಅರಣ್ಯ ಇಲಾಖೆ ಮತ್ತು ಗ್ರಾಮ ಸಮುದಾಯದ ನಡುವಿನ ಪಾಲುದಾರಿಕೆ, ಸಹಭಾಗಿತ್ವ, ಸಮಾನತೆಗಳ ಮೇಲೆ ಆಧಾರಿತವಾದ ಯೋಜನೆ. ಅರಣ್ಯ ಸಿಬ್ಬಂದಿ ಹಾಗೂ ಹಳ್ಳಿಯ ಜನರ ದಿನನಿತ್ಯದ ವ್ಯವಹಾರದ ಸಂದರ್ಭದಲ್ಲಿ ಈ ಹೊಸ ಪರಿಕಲ್ಪನೆಗಳ ಪ್ರಭಾವ ಕಾಣಿಸಬೇಕು. ಪಾಲುದಾರಿಕೆ ಮತ್ತು ಸಮಾನತೆಯ ಮೇಲೆ ಆಧರಿತವಾದ ಸಹಭಾಗಿತ್ವ ಇಲಾಖೆ ಹಾಗೂ ಗ್ರಾಮ ಸಮುದಾಯದ ನಡುವಿನ ಸಂಬಂಧವನ್ನು ಉತ್ತಮಗೊಳಿಸುತ್ತದೆಂಬ ನಿರೀಕ್ಷೆಯಿದೆ. ಇದು ಸಾಧ್ಯವಾಗಿದ್ದಲ್ಲಿ ಭಾಗವಹಿಸುವಿಕೆಯ ಗುಣಮಟ್ಟವೂ ಉತ್ತಮಗೊಳ್ಳುತ್ತಿದೆ ಎನ್ನಲಡ್ಡಿಯಿಲ್ಲ.

ಅರಣ್ಯ ಇಲಾಖೆಯ ಕೆಳಹಂತದ ಕ್ಷೇತ್ರ ಸಿಬ್ಬಂದಿಯಾದ ಅರಣ್ಯ ರಕ್ಷಕ, ಅರಣ್ಯ ವೀಕ್ಷಕ, ಕಾವಲುಗಾರ ಮುಂತಾದವರು ದಿನನಿತ್ಯವೂ ಅರಣ್ಯಕ್ಕೆ ಸಮೀಪದ ಹಳ್ಳಿಯ ಜನರೊಡನೆ ವ್ಯವಹರಿಸಬೇಕಾಗುತ್ತದೆ. ಇಲಾಖೆಯ ಈ ಸಿಬ್ಬಂದಿಯೇ, ಈ ಹಿಂದೆ ಸ್ಥಳೀಯರು ಅರಣ್ಯ ಪ್ರವೇಶಿಸದಂತೆ, ಅರಣ್ಯ ಉತ್ಪನ್ನಗಳನ್ನು ಮಿತಿಮೀರಿ ಸಂಗ್ರಹಿಸದಿದ್ದಂತೆ, ಮರಗಿಡಗಳನ್ನು ಕಡಿಯದಂತೆ ನಿರ್ಬಂಧ ಹೇರುತ್ತಿದ್ದರು. ಹೀಗೆ ಮಾಡುವಾಗ ಹಳ್ಳಿಯ ಜನರೊಡನೆ ಘರ್ಷಣೆಯೂ ಸಂಭವಿಸುತ್ತಿತ್ತು. ಜಂಟೀ ಅರಣ್ಯ ಯೋಜನೆ ಅನುಷ್ಠಾನಕ್ಕೆ ಬಂದ ಮೇಲೆ ಅರಣ್ಯ ಸಿಬ್ಬಂದಿಯ ವರ್ತನೆಯಲ್ಲಿ ತಕ್ಕಮಟ್ಟಿನ ಬದಲಾವಣೆಗಳು ಕಂಡುಬಂದಿವೆಯೆಂದು ಕುಮಾರನಹಳ್ಳಿ, ಮರಡವಳ್ಳಿ

ಮತ್ತು ಮರಡವಳ್ಳಿಗಳ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಅಭಿಪ್ರಾಯ ಪಡುತ್ತಾರೆ. ದಿನನಿತ್ಯದ ಪ್ರಾಮಾಣಿಕ ಅಗತ್ಯಗಳ ಪೂರೈಕೆಗಾಗಿ ಅರಣ್ಯಕ್ಕೆ ಹೋಗುವುದರ ಮೇಲಿದ್ದ ನಿರ್ಬಂಧ ಕಡಿಮೆಯಾಗಿದೆ. ಮೊದಲಿದ್ದ ಕಿರುಕುಳದ ಪ್ರವೃತ್ತಿಯೂ ಕಡಿಮೆಯಾಗಿದೆ. "ಅರಣ್ಯ ಹಾಗೂ ನೆಡುತೋಪುಗಳನ್ನು ರಕ್ಷಿಸುವುದು, ಬೆಂಕಿ, ಕಳ್ಳಸಾಗಣೆಗಳ ವಿರುದ್ಧ ಎಚ್ಚರಿಕೆ ವಹಿಸಿ ಕಾಯುವುದು, ಒತ್ತುವರಿಯಾಗದಂತೆ ನೋಡಿಕೊಳ್ಳುವುದು ಮುಂತಾದ ಕೆಲಸಗಳನ್ನು ಅರಣ್ಯ ಸಮಿತಿಯ ಸದಸ್ಯರೇ ಮಾಡುತ್ತಿರುವುದರಿಂದ ಅರಣ್ಯ ಸಿಬ್ಬಂದಿಯ ಕೆಲಸ ಹಗುರವಾಗಿದೆ. ತಿಕ್ಕಾಟಗಳೂ ಕಡಿಮೆಯಾಗಿದೆ. ಈ ಬೆಳವಣಿಗೆಗಳ ಫಲವಾಗಿ ಇಲಾಖೆಯ ಸಿಬ್ಬಂದಿಯಲ್ಲೂ ಸೌಹಾರ್ದಯುತವಾದ ವರ್ತನೆ ಕಂಡುಬರುತ್ತಿದೆ" ಎಂಬುದು ನಿರ್ವಹಣಾ ಸಮಿತಿಯ ಸದಸ್ಯರ ಅಭಿಪ್ರಾಯ. ಗ್ರಾಮ ಅರಣ್ಯ ಸಮಿತಿ, ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ರೂಪಿಸಿದ ನಿಯಮಗಳನ್ನು ಅನುಷ್ಠಾನಗೊಳಿಸಿ ನಿಯಮವನ್ನು ಉಲ್ಲಂಘಿಸುವ ಪ್ರಕರಣಗಳು ಕಡಿಮೆಯಾದ ಹಾಗೆ, ಇಲಾಖೆಯ ಸಿಬ್ಬಂದಿಗೂ ಅರಣ್ಯ ಸಮಿತಿಯ ಸದಸ್ಯರಲ್ಲಿ ನಂಬಿಕೆ, ವಿಶ್ವಾಸಗಳು ಬೆಳೆಯುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ, ಇಲಾಖೆಯ ಸಿಬ್ಬಂದಿ ಹಾಗೂ ಸ್ಥಳೀಯ ಜನರ ನಡುವೆ ಉತ್ತಮ ಸಂಬಂಧವಿರುವ ಕುಮಾರನಹಳ್ಳಿ, ಮರಡವಳ್ಳಿಗಳಲ್ಲೂ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ಗ್ರಾಮ ಅರಣ್ಯ ಸಮಿತಿಗೆ ಇಲಾಖೆಯ ಬಗ್ಗೆ ಎದ್ದು ಕಾಣುವ ಅಸಮಾಧಾನವಿದೆ. ಮೊದಲನೆಯದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಿದ್ದರೆ ಎರಡನೆಯದು ಅಗತ್ಯವಾದ ಸಂದರ್ಭಗಳಲ್ಲಿ ನೆರವು ನೀಡದ ಇಲಾಖೆಯ ಧೋರಣೆಗೆ ಸಂಬಂಧಪಟ್ಟಿದೆ.

ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಇಲಾಖೆ ಖರ್ಚು ಮಾಡಿರುವ ಹಣದ ಬಗ್ಗೆ, ಗ್ರಾಮ ಅರಣ್ಯ ಸಮಿತಿಗೆ ಇಲಾಖೆ ಯಾವ ಮಾಹಿತಿಯನ್ನೂ ನೀಡುವುದಿಲ್ಲ. ಈ ಮಾಹಿತಿಯನ್ನು ಕೇಳಿದ ಎಲ್ಲ ಸಂದರ್ಭಗಳಲ್ಲೂ ಇಲಾಖೆ ಮೌನವಹಿಸುತ್ತದೆ. "ಹಣ ಸರ್ಕಾರದ್ದು. ಸರ್ಕಾರದ ನಿರ್ದೇಶನಕ್ಕೆ ಅನುಗುಣವಾಗಿ ಅದನ್ನು ಇಲಾಖೆ ಯೋಜನೆಗಾಗಿ ಖರ್ಚು ಮಾಡುತ್ತದೆ. ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಯೋಜನೆಯಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಬೇಕೇ ಹೊರತಾಗಿ ಹಣಕಾಸಿನ ವಿಷಯದ ಬಗ್ಗೆ ತಲೆ ಹಾಕಬಾರದು. ಗ್ರಾಮ ಅರಣ್ಯ ಸಮಿತಿಗೆ ನಾವೇಕೆ ಲೆಕ್ಕ ಒಪ್ಪಿಸಬೇಕು" ಎಂಬುದು ಇಲಾಖೆಯ ಧೋರಣೆ.

ಕುಮಾರನಹಳ್ಳಿಯಲ್ಲಿ, ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಒದಗಿಸುತ್ತಿರುವ ರಕ್ಷಣೆಯ ಫಲವಾಗಿ, ಜಂಟೀ ಅರಣ್ಯ ಯೋಜನೆಯಡಿಯ ನೆಡುತೋಪು ಉತ್ತಮವಾಗಿ ಬೆಳೆದಿದೆ. ಸುತ್ತಮುತ್ತಲಿನ ಹಳ್ಳಿಯ ಜನ, ಅದರಲ್ಲೂ ಮುಖ್ಯವಾಗಿ ಸಮೀಪದ ಹರಪನಹಳ್ಳಿಯವರು ರಾತ್ರಿಯಲ್ಲಿ ಈ ನೆಡುತೋಪಿನ ಮರಗಳನ್ನು ಕಡಿದು, ಕೊಂಡು ಹೋಗಿದ್ದಾರೆ. ಈ ರೀತಿಯ ಘಟನೆ ಮತ್ತೆ ಮತ್ತೆ ಸಂಭವಿಸಿದೆ. ಈ ಜನ ಯಾರೆಂಬುದು ಇಲಾಖೆಗೂ ಗೊತ್ತು. ಅವರ ವಿರುದ್ಧ

ಮೊಕದ್ದಮೆ ಹೂಡಿ, ಅಂತಹ ಜನರಿಗೆ ಪಾಠ ಕಲಿಸಬೇಕು ಎಂಬುದು ಗ್ರಾಮ ಅರಣ್ಯ ಸಮಿತಿಯ ಒತ್ತಾಯ. ಆದರೆ ಅರಣ್ಯ ಇಲಾಖೆ ಈ ಕೆಲಸ ಮಾಡಿಲ್ಲ. ಇಲಾಖೆಯ ಮೇಲೆ ಹರಪನಹಳ್ಳಿಯ ರಾಜಕಾರಣಿಗಳ ಒತ್ತಡವಿದೆ. ಹೀಗಾಗಿಯೇ ಅವರು ಇಂತಹ ಪ್ರಕರಣಗಳನ್ನು ನಿಲ್ಲಿಸಲು ಅರಣ್ಯ ಸಮಿತಿಗೆ ಬೆಂಬಲ ನೀಡುತ್ತಿಲ್ಲ ಎಂಬುದು ಅರಣ್ಯ ಸಮಿತಿಯ ಅಸಮಾಧಾನ. ಮರಡವಳ್ಳಿಯಲ್ಲಿಯೂ ಇಂತಹ ಪ್ರಕರಣಗಳಿವೆ.

ಹನಿಯಾದ ಕಥೆಯೇ ಬೇರೆ. ಜಂಟೀ ಅರಣ್ಯ ಯೋಜನೆ ಅನುಷ್ಠಾನಗೊಂಡ ನಂತರ, ಇಲಾಖೆ ಮತ್ತು ಸ್ಥಳೀಯ ಜನರ ನಡುವಿನ ಸಂಬಂಧ ಕ್ರಮೇಣ ಉತ್ತಮಗೊಂಡಿದ್ದು ನಿಜ. ಆದರೆ ಈಗಾಗಲೇ ತಿಳಿದಿರುವ ಕಾರಣದಿಂದಾಗಿ, ಹನಿಯಾದ ಅರಣ್ಯ ಸಮಿತಿ ಜಂಟೀ ಅರಣ್ಯ ಯೋಜನೆ ಯಲ್ಲಿ ಆಸಕ್ತಿಯನ್ನು ಕಳೆದುಕೊಂಡ ನಂತರ, ಇಲಾಖೆ ಹಾಗೂ ಸ್ಥಳೀಯ ಜನರ ಸಂಬಂಧ ಮುಂಚಿನಂತೆಯೇ ಶೀತಲವಾಗಿದೆ.

ಉದ್ದೂರು, ಮುಕುಂದೂರುಗಳಲ್ಲಿ ಅರಣ್ಯ ಇಲಾಖೆಯ ಸಂಬಂಧ ಏನಿದ್ದರೂ ಗ್ರಾಮದ ಪ್ರಮುಖ ರಾಜಕಾರಣಿಗಳಾದ, ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರ ಜೊತೆಗೆ. ಇಲಾಖೆಯ ಸಿಬ್ಬಂದಿ ಹಾಗೂ ಸ್ಥಳೀಯ ಜನರ ನಡುವೆ ಹೇಳಿಕೊಳ್ಳುವಂತಹ ಸಂಬಂಧವೇನಿಲ್ಲ. ಗ್ರಾಮಕ್ಕೆ ಸಮೀಪವಾಗಿ ಅರಣ್ಯವಿಲ್ಲದೇ, ಅರಣ್ಯದ ಮೇಲಿನ ಅವಲಂಬನೆ ಅತ್ಯಂತ ಕನಿಷ್ಠವಾಗಿರುವುದರಿಂದ ಈ ರೀತಿಯ ನಿರಾಸಕ್ತ ಸಂಬಂಧ ಸಹಜವೂ ಹೌದು. ಆದರೆ ಸದಾಕಾಲ ಪ್ರಬಲ ರಾಜಕಾರಣಿಗಳ ಹಿಂದೆಯೇ ಇರುವ ಅರಣ್ಯ ಇಲಾಖೆಯ ಬಗ್ಗೆ ಸ್ಥಳೀಯರಲ್ಲಿ ತೀವ್ರ ಅಸಮಾಧಾನ, ಅಪನಂಬಿಕೆ ಗಳಿವೆ. ಅರಣ್ಯ ಇಲಾಖೆಯ ಸಿಬ್ಬಂದಿ ಮತ್ತು ಸ್ಥಳೀಯ ರಾಜಕಾರಣಿಗಳು ಜೊತೆಯಾಗಿದ್ದರೂ ಈ ಇಬ್ಬರ ನಡುವಿನ ಸಂಬಂಧದಲ್ಲಿ ತೀವ್ರ ಅಪನಂಬಿಕೆ ಎದ್ದು ಕಾಣುತ್ತದೆ.

ಉದ್ದೂರಿನಲ್ಲಿರುವ ನೀಲಗಿರಿ ನೆಡುತೋಪಿನಿಂದ ಗ್ರಾಮ ಅರಣ್ಯ ಸಮಿತಿಗೆ ಪ್ರತಿ ವರ್ಷವೂ ಸುಮಾರು ಒಂದು ಲಕ್ಷ ರೂ.ಗಳಷ್ಟು ಆದಾಯವಿದೆಯೆಂಬುದನ್ನು ನಾವು ನೋಡಿದ್ದೇವೆ. ಈ ರೀತಿ ಎಣ್ಣೆ ತೆಗೆಯಲು ಟೆಂಡರ್‌ಗಳನ್ನು ಇಲಾಖೆಯೇ ಕರೆಯುತ್ತದೆ 'ಇದರಲ್ಲಿ ಸಾಕಷ್ಟು ಮೋಸ ನಡೆಯುತ್ತದೆ' ಎಂಬುದು ಉದ್ದೂರಿನ ಅರಣ್ಯ ಸಮಿತಿಯ ಅಧ್ಯಕ್ಷರ ದೂರು. 'ಟೆಂಡರನ್ನು ಕರೆಯುವ ಕೆಲಸವನ್ನು ಸಮಿತಿಗೆ ಬಿಡಬೇಕು' ಎಂಬ ಅಧ್ಯಕ್ಷರ ಕೋರಿಕೆಯನ್ನು ಇಲಾಖೆ ಒಪ್ಪಿಲ್ಲ. "ಎಣ್ಣೆ ತೆಗೆಯುವ ಕೆಲಸವನ್ನು ಗಮನಿಸಲು, ನಿಗಾವಣೆ ಮಾಡಲು ತಾಂತ್ರಿಕ ಜ್ಞಾನ ಬೇಕು, ಅದು ಅರಣ್ಯ ಸಮಿತಿಗಿಲ್ಲ. ಆದ್ದರಿಂದಲೇ ಆ ಕೆಲಸವನ್ನು ಇಲಾಖೆಯೇ ಮಾಡುತ್ತಿದೆ "ಎನ್ನುವುದು ವಲಯ ಅರಣ್ಯಾಧಿಕಾರಿಗಳ ಸಮಜಾಯಿಷಿ. ಆದರೆ ಗ್ರಾಮ ಅರಣ್ಯ ಸದಸ್ಯರ ಅಭಿಪ್ರಾಯವೇ ಬೇರೆ. "ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರು ಒಟ್ಟಿಗೆ ಸೇರಿ, ಗೋಲ್‌ಮಾಲ್ ಮಾಡಿ ಹಣ ಮಾಡುತ್ತಿದ್ದಾರೆ" ಎಂಬುದು ಕ್ಷೇತ್ರಕಾರ್ಯದ ಸಂದರ್ಶನದಲ್ಲಿ

ಕೇಳಿಬಂದ ಮಾತು. 'ನೀಲಗಿರಿ ನೆಡುತೋಪಿನಿಂದ ಬರುವ ಹಣದ ಸ್ವಲ್ಪ ಭಾಗವನ್ನು ಊರಿನಲ್ಲಿ ದೇವಸ್ಥಾನ ಕಟ್ಟಿಸಲು ಬಳಸುತ್ತಿರುವುದನ್ನು' ಅಧ್ಯಕ್ಷರು ಒಪ್ಪಿಕೊಳ್ಳುತ್ತಾರೆ. ಆದರೆ ಇದಕ್ಕೆ ಗ್ರಾಮ ಅರಣ್ಯ ಸಮಿತಿಯ ಒಪ್ಪಿಗೆ ಬೇಕಿಲ್ಲ. ಅಧ್ಯಕ್ಷರ ನಿರ್ಧಾರವೇ ಕಡೆಯದು ಎಂಬುದು ಅವರ ವಾದ. ಒಟ್ಟಿನಲ್ಲಿ ಉದ್ದೂರಿನಲ್ಲಿ ಅರಣ್ಯ ಇಲಾಖೆ, ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಹಾಗೂ ಅಧ್ಯಕ್ಷರ ನಡುವಿನ ದಿನನಿತ್ಯದ ವ್ಯವಹಾರದಲ್ಲಿ ಎದ್ದು ಕಾಣುವ ಅಂಶಗಳೆದರೆ ಅಪನಂಬಿಕೆ, ಅವಿಶ್ವಾಸ ಹಾಗೂ ಅಸಂತೋಷಗಳು.

ಉದ್ದೂರಿನಂತೆ, ಮುಕುಂದೂರಿನಲ್ಲಿಯೂ ಅರಣ್ಯ ಸಿಬ್ಬಂದಿ ಹಾಗೂ ಸ್ಥಳೀಯ ಜನರ ನಡುವೆ ನೇರವಾದ ಯಾವ ಸಂಬಂಧವೂ ಕಾಣುವುದಿಲ್ಲ. ಆದರೆ ಗೋಮಾಳವನ್ನು ಜಂಟೀ ಅರಣ್ಯ ಯೋಜನೆಯಡಿಯಲ್ಲಿ ತಂದ ಇಲಾಖೆಯ ಬಗ್ಗೆ ಭೂರಹಿತರಲ್ಲಿ ಅತೃಪ್ತಿಯಿದೆ. ಗ್ರಾಮ ಅರಣ್ಯ ಸಮಿತಿಯಲ್ಲಿ ಸಾಕಷ್ಟು ಹಣವಿದ್ದರೂ, (ಮರಳಿನ ಸಾಗಾಣಿಕೆಗೆ ದೊರೆತ ರಾಯಧನ) ಅದರಿಂದ ಒಂದಿಷ್ಟನ್ನೂ ಮರಗಿಡ ಬೆಳೆಸಲು, ಸಸ್ಯಕ್ಷೇತ್ರವನ್ನು ಬಳಸಿಲ್ಲ ಎಂಬುದು ಇಲಾಖೆಯ ಕೊರಗು. 'ಜಂಟೀ ಅರಣ್ಯ ಯೋಜನೆ ಸರ್ಕಾರದ್ದು. ಅದಕ್ಕೆ ಬೇಕಾದ ಹಣವನ್ನು ಸರ್ಕಾರವೇ ಒದಗಿಸಬೇಕು. ನಮ್ಮ ಹಣದ ಮೇಲೆ ಅದು ಕಣ್ಣು ಹಾಕಬಾರದು' ಎಂಬುದು ಅಧ್ಯಕ್ಷರ ಉತ್ತರ. ಇದರ ಪರಿಣಾಮವಾಗಿ ನಮ್ಮ ರಾಜ್ಯದಲ್ಲಿಯೇ ಅತ್ಯಂತ ಶ್ರೀಮಂತವಾದ ಮುಕುಂದೂರಿನ ಗ್ರಾಮ ಅರಣ್ಯ ಸಮಿತಿಯ ಕಡೆಯಿಂದ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದಂತೆ ನಡೆದಿರುವ ಕೆಲಸಗಳು ಅತ್ಯಲ್ಪ.

ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯ ಸಮುದಾಯದ ಸಹಭಾಗಿತ್ವಕ್ಕೆ ಇರುವ ಅವಕಾಶಗಳನ್ನು ಕ್ಷೇತ್ರಕಾರ್ಯದ ಐದು ಹಳ್ಳಿಗಳ ಜನ ಹೇಗೆ ಬಳಸಿಕೊಂಡಿದ್ದಾರೆ, ಯೋಜನೆಯಲ್ಲಿ ಹೇಗೆ ಭಾಗವಹಿಸಿದ್ದಾರೆ ಎಂಬುದನ್ನು ನೋಡಿದ್ದೇವೆ. ಭಾಗವಹಿಸುವಿಕೆಗೆ ಅವಕಾಶವಿರುವ ಜಂಟೀ ಅರಣ್ಯ ಯೋಜನೆಯ ವಿವಿಧ ಕ್ಷೇತ್ರಗಳಲ್ಲಿ-ಸದಸ್ಯತ್ವ, ಹಾಜರಾತಿ, ತರಬೇತಿ ಇತ್ಯಾದಿ- ಜನರ ಭಾಗವಹಿಸುವಿಕೆಯನ್ನು ಅಳೆಯಲು ಸೂಚ್ಯಂಕಗಳನ್ನು ಬಳಸಿಕೊಂಡಿದ್ದೇವೆ. ಈ ಪ್ರತಿಯೊಂದು ಸೂಚ್ಯಂಕವೂ ಆಯಾ ಕ್ಷೇತ್ರದಲ್ಲಿ ಸ್ಥಳೀಯ ಜನರ ಭಾಗವಹಿಸುವಿಕೆಯ ಒಂದು ಚಿತ್ರವನ್ನು ಒದಗಿಸುತ್ತದೆ. ಈ ಎಲ್ಲ ಸೂಚ್ಯಂಕಗಳನ್ನೂ ಸಮನ್ವಯಗೊಳಿಸಿದಾಗ ಇಡೀ ಯೋಜನೆಯಲ್ಲಿ ಸ್ಥಳೀಯ ಸಮುದಾಯದ ಸಹಭಾಗಿತ್ವದ ಒಟ್ಟಾರೆ ಚಿತ್ರ ದೊರೆಯುತ್ತದೆ. ಇದೇ ರೀತಿಯ ಸಮಗ್ರ ಚಿತ್ರ, ಹಾಜರಾತಿ, ತರಬೇತಿ, ಸಮಾಲೋಚನೆ, ಬೇಡಿಕೆ-ಪೂರೈಕೆಗಳಿಗೆ ಅನುಗುಣವಾದ ಯೋಜನೆಯ ವಿನ್ಯಾಸ, ಸಸ್ಯ ಪ್ರಭೇದಗಳ ಹಾಗೂ ಜಾಗದ ಆಯ್ಕೆ, ಮಹಿಳೆಯರ ಸಹಭಾಗಿತ್ವ ಮುಂತಾದವುಗಳನ್ನೊಳಗೊಂಡ ಕಿರು ಯೋಜನೆಯನ್ನು ಸಿದ್ಧಗೊಳಿಸುವ ಪ್ರಕ್ರಿಯೆಯಲ್ಲೂ ದೊರೆಯುತ್ತದೆ. ಆದ್ದರಿಂದ ಈ ಸಂಶೋಧನೆಯ ಅಂಗವಾಗಿ ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿ ಕಿರು ಯೋಜನೆಯನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ವಿಶೇಷವಾಗಿ ಅಧ್ಯಯನ ಮಾಡಲಾಗಿದೆ.

ಕಿರುಯೋಜನೆ

ಹಳ್ಳಿಯ ಮಟ್ಟದಲ್ಲಿ, ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಮತ್ತು ಅರಣ್ಯ ಸಿಬ್ಬಂದಿ ಜೊತೆಯಾಗಿ ಸೇರಿ, ಸಮಾಲೋಚನೆ ನಡೆಸಿ, ಅರಣ್ಯ ಸಂರಕ್ಷಣೆ, ಸ್ಥಳೀಯ ಬೇಡಿಕೆಗಳ ಪೂರೈಕೆಯ ದೃಷ್ಟಿಯಿಂದ ಅರಣ್ಯಾಭಿವೃದ್ಧಿ, ಉತ್ಪನ್ನಗಳ ಹಂಚಿಕೆ ಮುಂತಾದವುಗಳಿಗೆ ಸಂಬಂಧಿಸಿದಂತೆ 'ಕಿರು ಯೋಜನೆ' ಯೊಂದನ್ನು ಸಿದ್ಧಪಡಿಸುತ್ತಾರೆ. ಈ 'ಕಿರು ಯೋಜನೆ' ಒಂದು ಸಣ್ಣ ಪ್ರದೇಶದ ಸಂಪನ್ಮೂಲಗಳ ಬಳಕೆ, ನಿಯಂತ್ರಣ, ಅಭಿವೃದ್ಧಿ ಮತ್ತು ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಅದನ್ನು ಬಳಸುವವರ ಸಹಭಾಗಿತ್ವದಿಂದ ರೂಪಿಸಲಾಗುವ ನೀಲಿ ನಕ್ಷೆ. ಸಮುದಾಯದ ಸಹಭಾಗಿತ್ವದಿಂದ, ಅದರ ಮಧ್ಯದಿಂದಲೇ ರೂಪುಗೊಳ್ಳುವ ಈ ಪ್ರದೇಶ ನಿರ್ದಿಷ್ಟ ನಿರ್ವಹಣಾ ಯೋಜನೆ ಸ್ಥಳೀಯ ಅಗತ್ಯ, ಆದ್ಯತೆಗಳಿಗನುಸಾರವಾಗಿರುತ್ತದೆ. ಕಿರು ಯೋಜನೆಯ ಮುಖ್ಯ ಉದ್ದೇಶಗಳು ಹೀಗಿವೆ:

- ಸ್ಥಳೀಯ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜನ ಭಾಗವಹಿಸುವಂತೆ ಮಾಡುವುದು.
- ಸ್ಥಳೀಯ ಜನ ಸಮುದಾಯದ ಜೀವದ್ರವ್ಯ ಸಂಬಂಧಿತ ಅಗತ್ಯಗಳ ಅಂದಾಜು ಮಾಡಿ, ಅವುಗಳ ಪೂರೈಕೆಗೆ ಅಗತ್ಯವಾದ ಕ್ರಮಗಳನ್ನು ಗುರುತಿಸುವುದು.
- ಸ್ಥಳೀಯ ಆದ್ಯತೆಗಳನ್ನು ಗಮನದಲ್ಲಿಟ್ಟುಕೊಂಡು, ಲಭ್ಯವಿರುವ ಹಣಕಾಸಿಗೆ ತಕ್ಕಂತೆ ಸಂಪನ್ಮೂಲಗಳ ಅಭಿವೃದ್ಧಿ ನಿರ್ವಹಣೆಗೆ ಯೋಜನೆಯನ್ನು ಸಿದ್ಧಪಡಿಸಿ, ಕಾರ್ಯಗತಗೊಳಿಸುವುದು.
- ಯೋಜನೆಯ ಫಲ ಅದರಲ್ಲಿ ಭಾಗವಹಿಸುವವರಿಗೆ ಯಾವಾಗ, ಯಾವ ಪ್ರಮಾಣದಲ್ಲಿ, ಹೇಗೆ ಮುಟ್ಟಬೇಕೆಂಬುದನ್ನು ಸ್ಥಳೀಯ ಸಮುದಾಯದೊಡನೆ ಸಮಾಲೋಚಿಸಿ, ನಿರ್ಧರಿಸಿ ನಿರ್ವಹಿಸುವುದು.

ಕಿರು ಯೋಜನೆಯ ತಯಾರಿ

ಕಿರು ಯೋಜನೆಯನ್ನು ತಯಾರಿಸುವುದು ಒಂದು ಸಹಭಾಗಿತ್ವ ಪ್ರಕ್ರಿಯೆ. ಸ್ಥಳೀಯ ಅರಣ್ಯ ಸಿಬ್ಬಂದಿ ಮತ್ತು ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಜೊತೆಗೂಡಿ ಮಾಡಬೇಕಾದ ಕೆಲಸ. ಅರಣ್ಯ ಸಮಿತಿಯ ಸದಸ್ಯರಿಗೆ ಇದೊಂದು ಹೊಸ ಅನುಭವ. ಹೀಗಾಗಿ ಅದಕ್ಕೆ ಬೇಕಾದ ಮಾಹಿತಿ, ವಿಧಿ ವಿಧಾನಗಳನ್ನು ಅರಣ್ಯ ಇಲಾಖೆ ಒದಗಿಸಬೇಕಾಗುತ್ತದೆ. ಆದರೆ ಅರಣ್ಯ ಸಿಬ್ಬಂದಿಗಳೂ ಇದರಲ್ಲಿ ಪರಿಣಿತರೇನಲ್ಲ. 1992-98ರ ಅವಧಿಯಲ್ಲಿ ಜಂಟೀ ಅರಣ್ಯ ಯೋಜನೆಯ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ತರಬೇತಿ ಶಿಬಿರಗಳು ನಡೆದಿದ್ದರೂ (ಕೋಷ್ಟಕ 3) ತರಬೇತಿ ಪಡೆದ ವಲಯ ಅರಣ್ಯಾಧಿಕಾರಿಗಳು ಕ್ಷೇತ್ರಾಧ್ಯಯನದ ಹಳ್ಳಿಗಳಲ್ಲಿ ಲಭ್ಯವಿದ್ದುದು ಕುಮಾರನಹಳ್ಳಿ ಮತ್ತು

ಮರಡವಳ್ಳಿಗಳಲ್ಲಿ ಮಾತ್ರ. ಆದರೆ ತರಬೇತಿಯ ಸಮಯದಲ್ಲಿ ಬಳಸಲಾದ ಸಾಮಗ್ರಿಗಳು ಎಲ್ಲ ವಲಯಗಳಲ್ಲೂ ಲಭ್ಯವಿದ್ದು ಕಿರು ಯೋಜನೆಯ ತಯಾರಿಯಲ್ಲಿ ಬಳಕೆಯಾಗುತ್ತಿದೆ. ಬಳಕೆಯಾಗುತ್ತಿರುವ ರೀತಿಯಲ್ಲಿ ಮಾತ್ರ ಅಜಗಜಾಂತರ ವ್ಯತ್ಯಾಸಗಳಿವೆ. ಇಂತಹ ಪರಿಸ್ಥಿತಿಯಲ್ಲಿ ಆಸಕ್ತಿ, ಬದ್ಧತೆಗಳಿರುವ ಗ್ರಾಮ ಅರಣ್ಯ ಸಮಿತಿಗಳು ಕಿರು ಯೋಜನೆಯನ್ನು ತಯಾರಿಸುವುದರಲ್ಲಿ ಆ ಕ್ಷೇತ್ರದಲ್ಲಿ ಪರಿಣತಿಯಿರುವ ಸರ್ಕಾರೇತರ ಸಂಸ್ಥೆಗಳ ನೆರವನ್ನು ಪಡೆದಿವೆ. ಕುಮಾರನಹಳ್ಳಿ ಮತ್ತು ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಗಳು ಈ ಮಾರ್ಗವನ್ನು ಅನುಸರಿಸಿವೆ. ಸಮಾಜ ಪರಿವರ್ತನಾ ಸಮುದಾಯ ಮತ್ತು ರೀಚ್ ಸಂಸ್ಥೆಗಳು ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿಯ ಜೊತೆಗೂಡಿ ಕೆಲಸ ಮಾಡಿದರೆ, ಮರಡವಳ್ಳಿಯಲ್ಲಿ, ಶರಾವತಿ ವಲಯಾಭಿವೃದ್ಧಿ ಸಂಸ್ಥೆ, ಗ್ರಾಮ ಅರಣ್ಯ ಸಮಿತಿಯ ನಿರ್ವಹಣಾ ಸಮಿತಿಯ ಸದಸ್ಯರು ಕಿರು ಯೋಜನೆಯ ಬಗ್ಗೆ ಅಗತ್ಯ ಮಾಹಿತಿಗಳನ್ನು ಅರಣ್ಯ ಇಲಾಖೆಯಿಂದ ಪಡೆದು, ಅರಣ್ಯ ಸಮಿತಿಯ ಸದಸ್ಯರೊಂದಿಗೆ ವಿನಿಮಯ ಮಾಡಿಕೊಂಡು, ಕಿರು ಯೋಜನೆಯ ಅಗತ್ಯ, ಮಹತ್ವಗಳ ಮನವರಿಕೆ ಮಾಡಿ, ಸದಸ್ಯರು ಕಿರು ಯೋಜನೆಯನ್ನು ತಯಾರಿಸಲು ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದ್ದಾರೆ. ಎರಡನೆಯ ಹಂತದಲ್ಲಿ ಸರ್ಕಾರೇತರ ಸಂಸ್ಥೆಯ ನೆರವಿನಿಂದ ಕಿರು ಯೋಜನೆಗೆ ಅಗತ್ಯವಾದ ಮೂಲಭೂತ ಮಾಹಿತಿಗಳನ್ನು ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ಮೂಲಕವಾಗಿ ಸಂಗ್ರಹಿಸುವ ವಿಧಿ ವಿಧಾನಗಳ ಬಗ್ಗೆ ತರಬೇತಿಯನ್ನು ಏರ್ಪಡಿಸಿದ್ದಾರೆ. ಕಿರು ಯೋಜನೆಯನ್ನು ಸಿದ್ಧಪಡಿಸುವ ಮುಂಚಿನ ಎರಡು ತಿಂಗಳ ಅವಧಿಯಲ್ಲಿ ಒಟ್ಟು 13 ದಿನಗಳನ್ನು ಗ್ರಾಮ ಅರಣ್ಯ ಸಮಿತಿಯ ವಿಶೇಷ ಸಭೆ, ಇಲಾಖೆಯೊಡನೆ ಸಮಾಲೋಚನೆ, ಸರ್ಕಾರೇತರ ಸಂಸ್ಥೆಯೊಡನೆ ಮಾತುಕತೆ ಮತ್ತು ತರಬೇತಿಗಳಿಗಾಗಿ ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿ ವಿನಿಯೋಗಿಸಿದೆ. ಇದೇ ರೀತಿಯ ಕೆಲಸಕ್ಕಾಗಿ ಮರಡವಳ್ಳಿ ಗ್ರಾಮ ಅರಣ್ಯ ಸಮಿತಿ 11 ದಿನಗಳ ಸಿದ್ಧತೆ ಮಾಡಿದೆ. ಕುಮಾರನಹಳ್ಳಿಯಲ್ಲಿ ಸರ್ಕಾರೇತರ ಸಂಸ್ಥೆಯ ಕಡೆಯಿಂದ ನಡೆದ ತರಬೇತಿ ಶಿಬಿರಗಳಲ್ಲಿ ಅರಣ್ಯ ಸಿಬ್ಬಂದಿಯೂ ಭಾಗವಹಿಸಿರುವುದು ಒಂದು ವಿಶೇಷ. ಇದಕ್ಕೆ ವಿರುದ್ಧವಾಗಿ ಉದ್ದೂರು, ಮುಕುಂದೂರು ಮತ್ತು ಹನಿಯಾಗಳಲ್ಲಿ ಇಲಾಖೆಯ ಕಡೆಯಿಂದಾಗಲೀ, ಅರಣ್ಯ ಸಮಿತಿಯ ಕಡೆಯಿಂದಾಗಲೀ ಯಾವ ರೀತಿಯ ಪೂರ್ವಭಾವಿ ಸಿದ್ಧತೆಯೂ ಇಲ್ಲದೆ, ಒಂದೇ ಒಂದು ಸಭೆಯಲ್ಲಿ ಕಿರು ಯೋಜನೆಯ ಕೆಲಸ ಮುಗಿದಿದೆ(ಕೋಷ್ಟಕ 4).

ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ(ಸಗ್ರಾಸ)

ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಕಿರು ಯೋಜನೆಯನ್ನು ತಯಾರಿಸುವ ಪ್ರಕ್ರಿಯೆಯ ಮೊದಲ ಹೆಜ್ಜೆಯೆಂದರೆ ಅದಕ್ಕೆ ಅಗತ್ಯವಾದ ಮಾಹಿತಿಗಳ ಸಂಗ್ರಹಣೆ. ಈ ಮಾಹಿತಿಗಳನ್ನು 'ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ'ಯಿಂದ ಸಂಗ್ರಹಿಸಲಾಗುತ್ತದೆ.

ಗ್ರಾಮೀಣ ಸಮುದಾಯವೇ, ಗ್ರಾಮೀಣ ಸಮುದಾಯಕ್ಕಾಗಿ ಕೈಗೊಳ್ಳುವ ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆಯ ವಿವಿಧ ಮಾರ್ಗಗಳು ಮತ್ತು ವಿಧಾನಗಳಿಗೆ 'ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ' ಎನ್ನುವುದು ವಾಡಿಕೆ. ಜನರೊಡನೆ ಮಾತನಾಡಿ, ಅವರನ್ನು ಮಾತನಾಡಲು ಪ್ರೇರೇಪಿಸಿ, ಅವರು ನೀಡುವ ಮಾಹಿತಿಗಳಿಂದಲೇ ಸ್ಥಳೀಯ ಸಂಪನ್ಮೂಲಗಳ ಸ್ಥಿತಿಗತಿ, ಬಳಕೆಯ ಸ್ವರೂಪ, ಬೇಡಿಕೆಗಳು, ಸಮಸ್ಯೆಗಳಿಗೆ ಸಂಬಂಧಿಸಿದ ಒಟ್ಟಾರೆ ಚಿತ್ರವನ್ನು ಸಗ್ರಾಸ ಒದಗಿಸುತ್ತದೆ. ಗ್ರಾಮೀಣ ಸಮುದಾಯದ ಬೇಡಿಕೆಗಳನ್ನು ಅರ್ಥ ಮಾಡಿಕೊಂಡು ಅದನ್ನು ಪೂರೈಸಲು ಅಗತ್ಯವಾದ ಕಿರು ಯೋಜನೆಯನ್ನು ಸಿದ್ಧಪಡಿಸಲು ಇದು ಅಗತ್ಯ. ಅಧ್ಯಯನ ನಡೆಸಿರುವ 5 ಹಳ್ಳಿಗಳಲ್ಲಿ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಲ್ಲಿ ಭಾಗವಹಿಸಿರುವ ವಿವಿಧ ಗುಂಪುಗಳು ಹಾಗೂ ಸಂಗ್ರಹಿಸಬಹುದಾದ ಮತ್ತು ಸಂಗ್ರಹಿಸಿರುವ ಮಾಹಿತಿಗಳನ್ನು ಕೋಷ್ಠಕ 5 ಮತ್ತು 6ರಲ್ಲಿ ನೀಡಲಾಗಿದೆ.

ಕಿರು ಯೋಜನೆಯ ಸಿದ್ಧತೆಯಲ್ಲಿ ಜನ ಸಮುದಾಯಕ್ಕೆ ತರಬೇತಿ ಅಗತ್ಯ ಎಂಬುದನ್ನು ಗುರುತಿಸಿ, ಅದಕ್ಕಾಗಿ ಸರ್ಕಾರೇತರ ಸಂಸ್ಥೆಯೊಡನೆ ಸೇರಿ ತರಬೇತಿ ಶಿಬಿರಗಳನ್ನು ನಡೆಸಿರುವುದು ಕುಮಾರನಹಳ್ಳಿ ಮತ್ತು ಮರಡವಳ್ಳಿಯ ವೈಶಿಷ್ಟ್ಯ. ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚು ಅರ್ಥಪೂರ್ಣವನ್ನಾಗಿ ಮಾಡಲು ಜನ ಸಮುದಾಯದ ಸಬಲೀಕರಣದ ಪ್ರಯತ್ನಕ್ಕೆ ಇದೊಂದು ನಿದರ್ಶನ. ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯನ್ನು ನಡೆಸುವ ಮುಂಚೆಯೇ, ಅದರ ಅಗತ್ಯ, ಮಹತ್ವಗಳೊಡನೆ ಕಿರು ಯೋಜನೆಗೆ ಬೇಕಾದ ಅಗತ್ಯವಾದ ಮಾಹಿತಿಗಳು, ಅರಣ್ಯದ ಮೇಲಿನ ಅವಲಂಬನೆ, ಅರಣ್ಯ ಸಂಪನ್ಮೂಲಗಳಿಗಿರುವ ಬೇಡಿಕೆ, ಭೂ ಬಳಕೆಯ ಸ್ವರೂಪ, ಸಾಮಾಜಿಕ ನಕ್ಷೆ, ಸಂಪನ್ಮೂಲ ನಕ್ಷೆ, ಋತುಮಾನ ನಕ್ಷೆ, ಕಾಲಮಾನ ನಕ್ಷೆ ಮುಂತಾದವುಗಳನ್ನು ತಯಾರಿಸುವ ಕ್ರಮಗಳ ಬಗ್ಗೆ ಅಗತ್ಯ ಮಾಹಿತಿಗಳನ್ನು ತರಬೇತಿ ಶಿಬಿರದಲ್ಲಿ ಭಾಗವಹಿಸಿದವರಿಗೆ ನೀಡಿರುವುದು ಈ ಎರಡು ಅರಣ್ಯ ಸಮಿತಿಗಳ ಆಸಕ್ತಿ ಹಾಗೂ ಬದ್ಧತೆಗಳಿಗೆ ಸಾಕ್ಷಿಯಾಗಿದೆ. ಈ ತರಬೇತಿಗಳನ್ನು ಪಡೆದ ಮಾತ್ರಕ್ಕೆ ಅವರು ಈ ವಿಷಯದಲ್ಲಿ ಪರಿಣಿತರಾದರೆಂದಲ್ಲ. ಸಗ್ರಾಸ ಕೈಗೊಂಡ ದಿನದಂದು ತಾವೇನು ಮಾಡ ಹೊರಟಿದ್ದೇವೆ, ಅದು ಎಷ್ಟರ ಮಟ್ಟಿಗೆ ಅಗತ್ಯವೆಂಬುದು ಅವರಿಗೆ ಸ್ಪಷ್ಟವಾಗಿ ತಿಳಿದಿದೆಯೆಂಬುದೇ ಹೆಚ್ಚಿನ ಸಂಗತಿ. ಕುಮಾರನಹಳ್ಳಿ ಮತ್ತು ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ತಮ್ಮ ಹಳ್ಳಿಯ ಕಿರು ಯೋಜನೆಯ ಪರಿಚಯವಿದೆ. ಕಿರು ಯೋಜನೆಯ ದಾಖಲೆಯಲ್ಲಿ ತಾವು ಭಾಗವಹಿಸಿ, ಸಂಗ್ರಹಿಸಿದ ಮಾಹಿತಿಯನ್ನು ಅವರು ಗುರುತಿಸಬಲ್ಲರು. ಆದರೆ ಉದ್ದೂರು, ಮುಕುಂದೂರು, ಹನಿಯಾಗಳಲ್ಲಿ ಕಿರು ಯೋಜನೆಯ ದಾಖಲೆಯನ್ನು ಕಂಡವರು ಬಹು ಕಡಿಮೆ. ನಿರ್ವಹಣಾ ಸಮಿತಿಯ ಕೆಲವು ಸದಸ್ಯರನ್ನು ಬಿಟ್ಟರೆ ಉಳಿದವರಿಗೆ ಕಿರು ಯೋಜನೆಯ ಬಗ್ಗೆ ತಿಳಿದಿಲ್ಲ. ಜನರ ಸಹಭಾಗಿತ್ವವಿಲ್ಲದೆ, ಕಿರು ಯೋಜನೆಯನ್ನು ಸಿದ್ಧಪಡಿಸಲು ಅಗತ್ಯವಾದ ಮಾಹಿತಿಗಳನ್ನು ವ್ಯವಸ್ಥಿತ ರೂಪದಲ್ಲಿ ಪಡೆಯದೇ ಕಚೇರಿಯಲ್ಲಿಯೇ

ಕುಳಿತು ಸಿದ್ಧಪಡಿಸಿದ ಉದ್ದೂರು, ಮುಕುಂದೂರಿನ ಕಿರು ಯೋಜನೆಗಳು ಅಂಕಿ-ಅಂಶಗಳಿಗಾಗಿ ಮಾತ್ರ ಮಾಡಿದ ಯೋಜನೆಗಳಾಗಿವೆ.

ಗ್ರಾಮೀಣ ಸಮುದಾಯದಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗಿದ್ದಾಗ, ಅಭಿವೃದ್ಧಿ ಯೋಜನೆಯೊಂದರ ಬಗೆಗಿನ ತಿಳಿವಳಿಕೆಯೂ ಹೆಚ್ಚಿದ್ದು, ಜನರ ಭಾಗವಹಿಸುವಿಕೆಯೂ ಹೆಚ್ಚಾಗಿರುತ್ತದೆ ಎಂಬ ಸಾಮಾನ್ಯ ನಂಬಿಕೆಯೊಂದಿದೆ. ಆದರೆ ಅಕ್ಷರಸ್ಥರ ಪ್ರಮಾಣವೊಂದೇ ಭಾಗವಹಿಸುವಿಕೆಯನ್ನು ಹೆಚ್ಚಿಸುವುದಿಲ್ಲ ಎಂಬುದನ್ನು ಈ ಐದು ಹಳ್ಳಿಗಳು ತೋರಿಸುತ್ತದೆ. ಹನಿಯಾ ಗ್ರಾಮದಲ್ಲಿ ಅಕ್ಷರಸ್ಥರ ಪ್ರಮಾಣ ಶೇಕಡಾ 90ರಷ್ಟಿದೆ. ಆದರೆ ಪೂರ್ವಾಭಾವಿ ಸಿದ್ಧತೆಗಳಲ್ಲಾಗಲೀ, ಸಗ್ರಾಸದಲ್ಲಾಗಲೀ ಭಾಗವಹಿಸಿರುವವರ ಪ್ರಮಾಣ ಬಹು ಕಡಿಮೆ. ಇದಕ್ಕೆ ವ್ಯತಿರಿಕ್ತವಾಗಿ ಮರಡವಳ್ಳಿಯ ಸಾಕ್ಷರತೆ ಶೇಕಡಾ 19.89. ಆದರೆ ಭಾಗವಹಿಸುವಿಕೆ ಉತ್ತಮವಾಗಿದೆ. ಈ ಪರಿಸ್ಥಿತಿಗೆ ಮುಖ್ಯ ಕಾರಣವೆಂದರೆ ಜಂಟೀ ಅರಣ್ಯ ಯೋಜನೆಯಲ್ಲಿ, ವಿಕೇಂದ್ರೀಕೃತ ಆಡಳಿತದಲ್ಲಿ, ಆಸಕ್ತಿಯಿರುವ ಸರ್ಕಾರೇತರ ಸಂಸ್ಥೆಯ ಸಹಯೋಗ, ಮರಡವಳ್ಳಿಯಲ್ಲಿರುವ ಬಲಿಷ್ಠ ನಾಯಕತ್ವ ಮತ್ತು ನಿರ್ವಹಣಾ ಸಮಿತಿಯ ಸದಸ್ಯರ ಬದ್ಧತೆ. ಇವು ಹನಿಯಾದಲ್ಲಿಲ್ಲ; ಉದ್ದೂರು, ಮುಕುಂದೂರುಗಳಲ್ಲೂ ಇಲ್ಲ.

ಉತ್ತಮ ನಾಯಕತ್ವ ಜನರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಒಂದು ಮುಖ್ಯ ಅಂಶ. ಕುಮಾರನಹಳ್ಳಿ ಮತ್ತು ಮರಡವಳ್ಳಿಯಲ್ಲಿ ಇಂಥ ನಾಯಕತ್ವವಿದೆ. ಆದರೆ ಈ ನಾಯಕತ್ವ ಲಭಿಸಿರುವುದು ರಾಜಕೀಯ ಶಕ್ತಿಯಿಂದಲ್ಲ. ಈ ನಾಯಕತ್ವ ಯಾವುದೇ ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿಲ್ಲ. ಕುಮಾರನಹಳ್ಳಿಯಲ್ಲಿ ಈ ನಾಯಕತ್ವವಿರುವುದು 'ಕೃಷಿ ಕಾರ್ಮಿಕ ಯುವಕ ಸಂಘದ ಮುಂದಾಳು'ಗಳಲ್ಲಿ. ಈ ಯುವಕ ಸಂಘವೇ ಗ್ರಾಮ ಅರಣ್ಯ ಸಮಿತಿಯ ಪ್ರೇರಕ ಶಕ್ತಿ. ಇದೇ ರೀತಿ 'ಶರಾವತಿ ವಲಯಾಭಿವೃದ್ಧಿ ಸಂಸ್ಥೆ' ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಯ ಹಿಂದಿದೆ. ಹಳ್ಳಿಯ ಒಟ್ಟಾರೆ ಒಳಿತು, ಅಭಿವೃದ್ಧಿ ಯೋಜನೆಗಳಿಂದ ದೊರೆಯುವ ಫಲ ಎಲ್ಲರಿಗೂ ಸಮನಾಗಿ ದೊರೆಯಬೇಕೆಂಬ ಹಂಬಲ, ತಲೆದೋರುವ ಸಮಸ್ಯೆಗಳನ್ನು ಮಾತುಕತೆಗಳ ಮೂಲಕವಾಗಿ ಬಗೆಹರಿಸಿಕೊಳ್ಳುವ ಜಾಣತನ, ಮುಂತಾದವುಗಳನ್ನು ಎರಡೂ ಸಂಸ್ಥೆಗಳಲ್ಲಿ ಕಾಣಬಹುದು. ಉದ್ದೂರು ಮತ್ತು ಮುಕುಂದೂರುಗಳಲ್ಲಿ ಪರಿಸ್ಥಿತಿ ಇದಕ್ಕೆ ವ್ಯತಿರಿಕ್ತ. ಈ ಎರಡೂ ಗ್ರಾಮ ಅರಣ್ಯ ಸಮಿತಿಗಳ ಅಧ್ಯಕ್ಷರು ರಾಜಕೀಯ ವ್ಯಕ್ತಿಗಳು, ತತ್ತ್ವಕ್ಕಿಂತ ಹೆಚ್ಚಾಗಿ ರಾಜಕೀಯ ನಾಯಕರಿಗೆ ಬದ್ಧರಾಗಿರುವವರು. ಅರಣ್ಯ ಸಮಿತಿಗಳು ತೆಗೆದುಕೊಳ್ಳುವ ನಿರ್ಧಾರ ಜನರ, ಹಳ್ಳಿಯ ಹಿತಕ್ಕಿಂತ ರಾಜಕೀಯವಾಗಿ ಸರಿಯಾಗಿರಬೇಕೆಂಬುದೇ ಇವರ ಗುರಿ. ಅರಣ್ಯ ಇಲಾಖೆಯೂ ಇವರ ಮರ್ಜಿಯನ್ನೇ ಹಿಡಿದಿರುವುದರಿಂದ ಜನರಿಗೆ ಈ ಯೋಜನೆಯಲ್ಲಿ ಆಸಕ್ತಿಯಿಲ್ಲ. ಹೀಗಾಗಿ ಸ್ವಯಂ ಪ್ರೇರಿತ ಭಾಗವಹಿಸುವಿಕೆಗೆ ಅಗತ್ಯವಾದ ಪರಿಸರವೇ ಈ ಹಳ್ಳಿಗಳಲ್ಲಿಲ್ಲ.

ಮಹಿಳೆಯರು ಮತ್ತು ಭೂ ರಹಿತರ ಭಾಗವಹಿಸುವಿಕೆ

ಜಂಟೀ ಅರಣ್ಯ ಯೋಜನೆಯ ಒಂದು ಮುಖ್ಯ ಉದ್ದೇಶವೆಂದರೆ ಅರಣ್ಯಗಳ ಮೇಲೆ ಅವಲಂಬಿತವಾಗಿರುವ ಸ್ಥಳೀಯ ಜನ ಸಮುದಾಯದ ಉರುವಲು, ಮೇವು, ಸಣ್ಣ ಮರಮುಟ್ಟು ಹಾಗೂ ಕಿರು ಅರಣ್ಯ ಉತ್ಪನ್ನಗಳ ಬೇಡಿಕೆಯನ್ನು ಪೂರೈಸುವುದು. ಸಮುದಾಯದಲ್ಲಿರುವ ಎಲ್ಲ ಗುಂಪಿನ ಬೇಡಿಕೆಗಳೂ ತಿಳಿದಾಗ ಮಾತ್ರ ಅದರ ಪೂರೈಕೆಗೆ ರೂಪಿಸುವ ಯೋಜನೆ ಅರ್ಥಪೂರ್ಣವಾಗುತ್ತದೆ. ಈ ಬೇಡಿಕೆಯನ್ನು ಅಂದಾಜು ಮಾಡುವ ಸಗ್ರಾಸದಲ್ಲಿ ಅರಣ್ಯದ ಮೇಲೆ ಅವಲಂಬಿತವಾದ ಸಮುದಾಯದ ಎಲ್ಲ ಗುಂಪಿನ ಪ್ರತಿನಿಧಿಗಳೂ ಇರಬೇಕು. ಇದನ್ನು ಗ್ರಾಮ ಅರಣ್ಯ ಸಮಿತಿ ಮತ್ತು ಸ್ಥಳೀಯ ಅರಣ್ಯ ಸಿಬ್ಬಂದಿ ಮಾಡಬೇಕಾಗುತ್ತದೆ. ಹೀಗಾಗದಿದ್ದರೆ ಕಿರು ಯೋಜನೆ ಸಂಪೂರ್ಣವಾಗುವುದಿಲ್ಲ.

ಕ್ಷೇತ್ರಾಧ್ಯಯನ ನಡೆಸಿದ 5 ಹಳ್ಳಿಗಳಲ್ಲಿ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ ಹಾಗೂ ಕಿರು ಯೋಜನೆಯ ಕರಡನ್ನು ಬರೆಯುವ ಪ್ರಕ್ರಿಯೆಗಳಲ್ಲಿ ಭಾಗವಹಿಸಿದವರ ವಿವರಗಳನ್ನು ಕೋಷ್ಠಕ 5ರಲ್ಲಿ ತೋರಿಸಲಾಗಿದೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಯಲ್ಲಿ ಭಾಗವಹಿಸಿದ ಒಟ್ಟು ಜನರ ಸಂಖ್ಯೆ ಉಳಿದ ಮೂರು ಅರಣ್ಯ ಸಮಿತಿಗಳಿಗೆ ಹೋಲಿಸಿದರೆ 4 ರಿಂದ 5 ಪಾಲು ಹೆಚ್ಚಾಗಿದೆ. ಈ ಸಮೀಕ್ಷೆಯಲ್ಲಿ ಭಾಗವಹಿಸಿರುವ ಮಹಿಳೆಯರ ಪ್ರಮಾಣ ಈ ಎರಡೂ ಹಳ್ಳಿಗಳಲ್ಲಿ ಕ್ರಮವಾಗಿ ಶೇಕಡಾ 21 ಮತ್ತು ಶೇಕಡಾ 27. ಉದ್ದೂರು ಮತ್ತು ಮುಕುಂದೂರುಗಳಲ್ಲಿ ಮಹಿಳೆಯರು ಭಾಗವಹಿಸಿಯೇ ಇಲ್ಲ. ಕುಮಾರನಹಳ್ಳಿ ಮತ್ತು ಮರಡವಳ್ಳಿಯಲ್ಲಿ ಭೂ ರಹಿತರ ಭಾಗವಹಿಸುವಿಕೆ ಪ್ರಮಾಣ ಕ್ರಮವಾಗಿ ಶೇಕಡಾ 18 ಮತ್ತು 17. ಉದ್ದೂರಿನ್ನಲಿ ಭೂ ರಹಿತರು ಭಾಗವಹಿಸಿಲ್ಲ. ಮುಕುಂದೂರಿನಲ್ಲಿ ಒಬ್ಬರು ಭಾಗವಹಿಸಿದ್ದಾರೆ.

ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಲ್ಲಿ ಇಂತಿಷ್ಟು ಜನ ಭಾಗವಹಿಸಲೇಬೇಕೆಂಬ ನಿರ್ಬಂಧವೇನೂ ಇಲ್ಲ. ಆದರೆ ಭಾಗವಹಿಸಿದ ಜನ ಹಳ್ಳಿಯ ವಿವಿಧ ಆಸಕ್ತ ಗುಂಪುಗಳನ್ನು ಪ್ರತಿನಿಧಿಸುವಂತಿರಬೇಕು. ಮಹಿಳೆಯರು ಭೂ ರಹಿತರು ಹಾಗೂ ಇನ್ನಿತರ ದುರ್ಬಲ ವರ್ಗದವರು ಸಾಮಾನ್ಯವಾಗಿಯೇ ಸಭೆಗಳಲ್ಲಿ, ಸಮೀಕ್ಷೆಗಳಲ್ಲಿ ಭಾಗವಹಿಸಲು ಹಿಂತೆಗೆಯುತ್ತಾರೆ. ಭಾಗವ ಹಿಸಿದರೂ ಮಾತನಾಡಲು ಹಿಂಜರಿಯುತ್ತಾರೆ. ಹೀಗಾದಾಗ ಅವರ ಸಮಸ್ಯೆಗಳು, ಅರಣ್ಯ ಸಂಪನ್ಮೂಲಗಳ ಬಳಕೆಯ ಬಗೆಗಿನ ಅವರ ಯೋಚನೆಗಳ ಪ್ರತಿಪಾದನೆಗೆ ಕಿರುಯೋಜನೆಯಲ್ಲಿ ಅವಕಾಶವೇ ಇರುವುದಿಲ್ಲ. ಉದ್ದೂರು, ಮುಕುಂದೂರು ಮತ್ತು ಹನಿಯಾಗಳಲ್ಲಿ ಆಗಿರುವುದು ಇದೇ. ಈ ಮೂರು ಹಳ್ಳಿಗಳಲ್ಲಿ ಸ್ಥಳೀಯ ಅರಣ್ಯ ಸಿಬ್ಬಂದಿಯಾಗಲೀ, ನಿರ್ವಹಣಾ ಸಮಿತಿಯ ಸದಸ್ಯರಾಗಲೀ ಈ ಗುಂಪಿನ ಸದಸ್ಯರ ಭಾಗವಹಿಸುವಿಕೆಯ ಬಗೆಗೆ ಯಾವ ಆಸಕ್ತಿಯನ್ನೂ ತೋರಿಲ್ಲ. ಅವರಿಗೇನೂ ತಿಳಿಯುವುದಿಲ್ಲ. ಅವರ ಸಮಸ್ಯೆಯನ್ನು ನಾವೇ ಬಗೆಹರಿಸುತ್ತೇವೆ ಎನ್ನುವುದು ಈ

ಮೂರು ಅರಣ್ಯ ಸಮಿತಿಗಳ ಅಧ್ಯಕ್ಷರ ಅಭಿಪ್ರಾಯ. ಅರಣ್ಯ ಇಲಾಖೆಯ ಸಿಬ್ಬಂದಿಯೂ ಇದೇ ಧೋರಣೆಯನ್ನು ತಾಳಿರುವುದರಿಂದ ಈ ವರ್ಗದ ಜನ ಭಾಗವಹಿಸಲು ಅವಕಾಶಗಳೇ ಇಲ್ಲವಾಗಿದೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಯ ಪರಿಸ್ಥಿತಿಯೇ ಬೇರೆ. ಈ ಎರಡೂ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳು ಮತ್ತು ನಿರ್ವಹಣಾ ಸಮಿತಿಯ ಸದಸ್ಯರು ಮೊದಲಿನಿಂದಲೂ ಮಹಿಳೆಯರು ಮತ್ತು ದುರ್ಬಲ ವರ್ಗದವರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತ, ಗ್ರಾಮ ಅರಣ್ಯ ಸಮಿತಿಯ ಸಭೆಗಳನ್ನು ಪ್ರಜಾಸತ್ತಾತ್ಮಕ ವಾಗಿ ನಡೆಸುತ್ತ ಬಂದಿರುವುದರಿಂದ ಮಹಿಳೆಯರಿಗಾಗಲೀ, ಭೂ ರಹಿತರಿಗಾಗಲೀ ಇಂಥ ಸಮೀಕ್ಷೆಗಳಲ್ಲಿ ಭಾಗವಹಿಸುವುದರಲ್ಲಿ ಯಾವುದೇ ಹಿಂಜರಿತವಿಲ್ಲ. ಅಷ್ಟೇ ಅಲ್ಲ, ಕುಮಾರನಹಳ್ಳಿಯ ಶಾಂತಮ್ಮ ಪರ ಊರಿನಲ್ಲಿ ನಡೆಯುವ ಜಂಟೀ ಅರಣ್ಯ ಯೋಜನೆಯ ಕಾರ್ಯಾಗಾರದಲ್ಲಿ ಏಕಾಂಗಿಯಾಗಿ ಹೋಗಿ ಭಾಗವಹಿಸಿದರೆ, ಮರಡವಳ್ಳಿಯ ಜಯಮ್ಮ, ಶಾಂತಮ್ಮ ಮತ್ತು ಅಹಲ್ಯಾಬಾಯಿ, ಸಾಗರದಲ್ಲಿ ಅರಣ್ಯ ಇಲಾಖೆ ಕರೆಯುವ ಸಭೆಗಳಿಗೆ ಹೋಗಿ ಅರಣ್ಯ ಸಮಿತಿಯ ವ್ಯವಹಾರಗಳನ್ನು ನಡೆಸಿ ಬರುತ್ತಾರೆ. ಕಿರು ಯೋಜನೆಗಾಗಿ ನಡೆದಿರುವ ಪೂರ್ವಸಿದ್ಧತೆಗಳು ಹಾಗೂ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಲ್ಲಿ ಭಾಗವಹಿಸಿರುವವರ ವಿವರಗಳನ್ನು ನಾವು ಈಗಾಗಲೇ ನೋಡಿದ್ದೇವೆ(ಕೋಷ್ಠಕ 4 ಮತ್ತು 5). ಈ ಚಟುವಟಿಕೆಗಳಲ್ಲಿ ವಿವಿಧ ಗುಂಪುಗಳ ಹಾಜರಾತಿ, ಭಾಗವಹಿಸುವಿಕೆಯ ಒಂದು ಸೂಚಿಯಾದರೂ ಭಾಗವಹಿಸುವಿಕೆ ಎಷ್ಟು ಪರಿಣಾಮಕಾರಿ ಯಾಗಿತ್ತೆಂಬುದರ ಸೂಚನೆ ನಮಗೆ ಇಲ್ಲಿ ದೊರೆಯುವುದಿಲ್ಲ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಕಿರು ಯೋಜನೆಯ ತರಬೇತಿ ಶಿಬಿರಗಳಲ್ಲಿ ಭಾಗವಹಿಸಿದ ಮಹಿಳೆಯರು ಮತ್ತು ಭೂ ರಹಿತರು ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ ಹಾಗೂ ಕಿರುಯೋಜನೆಯ ಕರಡನ್ನು ಬರೆಯುವುದರಲ್ಲೂ ಭಾಗವಹಿಸಿರುವುದು ಈ ಜನರ ಮುಂದುವರೆದ ಆಸಕ್ತಿಯನ್ನು ತೋರಿಸುತ್ತದೆ.

ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ ಇಷ್ಟೇ ದಿನಗಳಲ್ಲಿ ಮುಗಿಯಬೇಕೆಂಬುದಿಲ್ಲ. ಭಾಗವಹಿಸುವ ವಿವಿಧ ತಂಡಗಳು ಹಾಗೂ ಸಂಗ್ರಹಿಸಬೇಕಾದ ಮಾಹಿತಿಗನುಸಾರವಾಗಿ ಸಾಮಾನ್ಯವಾಗಿ ಎರಡರಿಂದ ಮೂರು ದಿನಗಳಲ್ಲಿ ಮುಗಿಸುವುದು ಸಾಧ್ಯ. ಹನಿಯಾದಲ್ಲಿ ಈ ಪ್ರಕ್ರಿಯೆ ಒಂದು ದಿನದಲ್ಲಿ ಮುಗಿದಿದ್ದರೆ, ಮುಕುಂದೂರಿನಲ್ಲಿ ಅರ್ಧದಿನ, ಉದ್ರೂರಿನಲ್ಲಿ ಕೇವಲ 3 ಗಂಟೆಗಳಲ್ಲಿ ಮುಗಿದಿದೆ. ಕುಮಾರನಹಳ್ಳಿ ಮರಡವಳ್ಳಿಗಳಲ್ಲಿ 3 ದಿನ ನಡೆದಿದೆ. ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆ ಮತ್ತು ಕರಡು ಕಿರು ಯೋಜನೆಯನ್ನು ಬರೆಯುವುದು ಮುಂದಿನ ಹೆಜ್ಜೆಗಳು. ಈ ಕೆಲಸಗಳನ್ನು ಕುಮಾರನಹಳ್ಳಿ ಮತ್ತು ಮರಡವಳ್ಳಿಯಲ್ಲಿ, ಗ್ರಾಮೀಣ ಸಮೀಕ್ಷೆ ಮುಗಿದ ಎರಡೇ ದಿನಗಳಲ್ಲಿ, ಹಳ್ಳಿಯಲ್ಲಿ, ಸದಸ್ಯರ ಸಮ್ಮುಖದಲ್ಲಿ ಅವರೊಡನೆ ಚರ್ಚಿಸಿ ಬರೆಯಲಾಗಿದೆ. ಉದ್ರೂರು, ಮುಕುಂದೂರುಗಳಲ್ಲಿ ಈ ಕೆಲಸ ಎರಡು ತಿಂಗಳ ನಂತರ ನಡೆದರೆ, ಹನಿಯಾದಲ್ಲಿ ಒಂದು ವರ್ಷದ

ನಂತರ ನಡೆದಿದೆ. ಉದ್ದೂರು, ಮುಕುಂದೂರುಗಳಲ್ಲಿ ಕರಡು ಕಿರು ಯೋಜನೆಯನ್ನು ಬರೆಯುವ ಕೆಲಸದಲ್ಲಿ ಗ್ರಾಮ ಅರಣ್ಯ ಸಮಿತಿ ಯಾವುದೇ ರೀತಿಯಲ್ಲೂ ಭಾಗಿಯಾಗಿಲ್ಲ(ಕೋಷ್ಟಕ 7).

ಕಿರು ಯೋಜನೆಯ ಕರಡು ಸಿದ್ಧವಾದ ನಂತರ, ಅದನ್ನು ಗ್ರಾಮ ಅರಣ್ಯ ಸಮಿತಿಯ ಮಹಾಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು. ಇದಾದ ನಂತರ ಕಿರು ಯೋಜನೆಯಲ್ಲಿ ಸೂಚಿಸಿರುವ ನಿರ್ವಹಣಾ ಕ್ರಮಗಳಂತೆ ಜಂಟೀ ಅರಣ್ಯ ಯೋಜನೆಯ ಕೆಲಸ ಪ್ರಾರಂಭವಾಗುತ್ತದೆ. ಈ ಅಂತಿಮ ಹಂತದಲ್ಲಿಯೂ ಸ್ಥಳೀಯ ಸಮುದಾಯಕ್ಕೆ ಭಾಗವಹಿಸಿ, ನಿರ್ಧಾರ ಕೈಗೊಳ್ಳುವ ಅವಕಾಶವಿದೆ. ಕಿರು ಯೋಜನೆಯಲ್ಲಿರುವ ನಿರ್ವಹಣಾ ಕ್ರಮಗಳು ಎಷ್ಟರಮಟ್ಟಿಗೆ ಸ್ಥಳೀಯ ಬೇಡಿಕೆಗಳಿಗೆ ಅನುಗುಣವಾಗಿದೆ, ಎಷ್ಟರಮಟ್ಟಿಗೆ ಸ್ಥಳೀಯ ಸಂಪನ್ಮೂಲಗಳ ಸಮಸ್ಯೆಯನ್ನು ಅದು ಬಗೆಹರಿಸಬಲ್ಲದು ಎಂಬುದನ್ನು ಪರಿಶೀಲಿಸುವ ಅವಕಾಶ ಮಹಾಸಭೆಯ ಸದಸ್ಯರಿಗಿರುತ್ತದೆ. ಆದರೆ ಇಂತಹ ಪರಿಶೀಲನಾ ಸಾಮರ್ಥ್ಯವನ್ನು ಪ್ರಯತ್ನ ಪೂರ್ವಕವಾಗಿ ಮೊದಲಿನಿಂದ ಬೆಳೆಸಿದ ಹೊರತು ಅಂತಿಮ ಹಂತದಲ್ಲಿ ಕರಡು ಕಿರು ಯೋಜನೆಗಳಲ್ಲಿ ಬದಲಾವಣೆಗಳನ್ನು ತರುವುದು ಅಸಾಧ್ಯವಾಗುತ್ತದೆ. ಉದ್ದೂರು, ಮುಕುಂದೂರುಗಳಲ್ಲಿ ಗ್ರಾಮ ಅರಣ್ಯ ಸಮಿತಿಯ ಮಹಾಸಭೆಯ ಮುಂದೆ ಮಂಡನೆಯಾಗದೇ ಕಿರುಯೋಜನೆ ಜಾರಿಯಾಗಿದ್ದರೆ, ಹನಿಯಾದಲ್ಲಿ ಕಾಟಾಚಾರಕ್ಕೆ ಮಂಡನೆಯಾಗಿ ಒಪ್ಪಿಗೆ ಪಡೆದಿದೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಮಂಡನೆಯಾಗಿ ಚರ್ಚೆಯಾಗಿ ಬದಲಾವಣೆಗಳಿಲ್ಲದೆ ಅನುಮೋದನೆ ಪಡೆದಿದೆ.

ಪರಿಣಾಮಕಾರಿ ಕಿರು ಯೋಜನೆ

ಜನ ಸಮುದಾಯದ ಸಹಭಾಗಿತ್ವದಿಂದ ರೂಪುಗೊಂಡ ಕಿರು ಯೋಜನೆ, ಸ್ಥಳೀಯ ಜನರ ಬೇಡಿಕೆ, ಆದ್ಯತೆಗಳಿಗೆ ಎಷ್ಟರಮಟ್ಟಿಗೆ ಸ್ಪಂದಿಸಿದೆಯೆಂಬುದು ಪರಿಣಾಮಕಾರಿ ಕಿರು ಯೋಜನೆಯ ಅಳತೆಗೋಲಾಗುತ್ತದೆ. ಇಷ್ಟಾದರೆ ಸಾಲದು. ಇದಕ್ಕಿಂತ ಹೆಚ್ಚಾಗಿ ಯೋಜನೆಯಲ್ಲಿರುವ ಕ್ರಮಗಳು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಬಂದು, ಜಂಟೀ ಅರಣ್ಯ ಯೋಜನೆಯ ಉದ್ದೇಶಗಳನ್ನು ಪೂರೈಸುತ್ತದೆಂಬುದು ಮುಖ್ಯವಾಗುತ್ತದೆ. ಉದ್ದೂರು, ಮುಕುಂದೂರು, ಹನಿಯಾಗಳಲ್ಲಿ ಕಿರು ಯೋಜನೆಯನ್ನು ತಯಾರಿಸುವ ಪ್ರಕ್ರಿಯೆಯಲ್ಲಿಯೇ ಸಹಭಾಗಿತ್ವ ಪರಿಕಲ್ಪನೆಗೆ ಯಾವ ವಿಶೇಷ ಮಹತ್ವವನ್ನು ನೀಡಿಲ್ಲದಿರುವುದರಿಂದ, ಅಲ್ಲಿನ ಕಿರು ಯೋಜನೆಗಳು ಜನ ಸಮುದಾಯದ ಅಗತ್ಯಗಳಿಗೆ ಕಿರು ಯೋಜನೆಗಳು ಸ್ಪಂದಿಸುವ ಮಾತು ದೂರವೇ ಉಳಿಯಿತು. ಕುಮಾರನಹಳ್ಳಿ ಮತ್ತು ಮರಡವಳ್ಳಿಯ ಕಿರು ಯೋಜನೆಗಳ ತಯಾರಿ ಸಹಭಾಗಿತ್ವ ಪ್ರಕ್ರಿಯೆಯ ಪ್ರಾಮಾಣಿಕ ಪ್ರಯತ್ನವಾಗಿದ್ದರೂ, ಈ ಪ್ರಯತ್ನದಲ್ಲಿ ಭಾಗವಹಿಸಿದ್ದವರೇ ಕಿರು ಯೋಜನೆ ಜನರ ಅಗತ್ಯಗಳಿಗೆ ಸರಿಯಾಗಿ ಸ್ಪಂದಿಸಿಲ್ಲ ಎನ್ನುತ್ತಾರೆ. ಕುಮಾರನಹಳ್ಳಿಯ ಭೂರಹಿತರು ಮತ್ತು ಅತಿಸಣ್ಣ ರೈತರಲ್ಲಿ ಶೇಕಡಾ 30ರಷ್ಟು ಕುಟುಂಬಗಳು ಸ್ಥಳೀಯ ಅರಣ್ಯಗಳಿಂದ ಬೀಡಿ ಎಲೆ ಸಂಗ್ರಹಿಸಿ, ಮಾರಾಟ ಮಾಡುತ್ತವೆ. ಈ ಕಿರು

ಅರಣ್ಯ ಉತ್ಪನ್ನಕ್ಕೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳಿದ್ದರೂ ಇದರ ಬಗ್ಗೆ ಕಿರು ಯೋಜನೆಯಲ್ಲಿ ಒಂದು ಮಾತೂ ಇಲ್ಲ. ಅರ್ಥಾತ್ ಸ್ಥಳೀಯ ಅರಣ್ಯದ ಮೇಲೆ ಅವಲಂಬಿತ ವಾಗಿರುವ ಸಮುದಾಯದ ಒಂದು ಭಾಗದ ಬಗ್ಗೆ, ಅಂತಹ ಜನ ಕಿರು ಯೋಜನೆಯ ತಯಾರಿಯಲ್ಲಿ ಭಾಗವಹಿಸಿದ್ದರೂ, ಅರಣ್ಯ ಇಲಾಖೆ ಮೌನ ತಾಳಿದೆ. ಏಕೆ ಹೀಗೆ? ಬೀಡಿ ಎಲೆಗಳ ಸಂಗ್ರಹಣೆ ಮತ್ತು ಮಾರಾಟದ ಬಗ್ಗೆ ಗ್ರಾಮ ಅರಣ್ಯ ಸಮಿತಿ ಮತ್ತು ಸಮಾಜ ಪರಿವರ್ತನಾ ಸಮುದಾಯಗಳು ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಂಡು, ಅದರಲ್ಲಿ ಹಲವಾರು ಪ್ರಯೋಗಗಳನ್ನು ಮಾಡುತ್ತಿರುವುದರಿಂದ ಅದರಲ್ಲಿ ಅರಣ್ಯ ಇಲಾಖೆಯ ಮಧ್ಯ ಪ್ರವೇಶ ಬೇಡ, ಹೀಗಾಗಿ ಕಿರು ಯೋಜನೆಯಲ್ಲಿ ಅದರ ಪ್ರಸ್ತಾಪವಿಲ್ಲ ಎನ್ನುವುದು ಇಲಾಖೆಯ ಅಧಿಕಾರಿಗಳ ಅಭಿಪ್ರಾಯ. ಅರಣ್ಯ ಸಂಪನ್ಮೂಲಗಳ ನಿರ್ವಹಣೆಯನ್ನು ಗ್ರಾಮ ಅರಣ್ಯ ಸಮಿತಿಗೇ ಬಿಟ್ಟುಕೊಡುವ ದೃಷ್ಟಿಯಿಂದ ಈ ಅಭಿಪ್ರಾಯವನ್ನು ಒಪ್ಪಬಹುದಾದರೂ, ಸ್ಥಳೀಯವಾಗಿ ಅತಿ ಹೆಚ್ಚು ಮಹತ್ವ ಪಡೆದಿರುವ ಈ ಕಿರು ಅರಣ್ಯ ಉತ್ಪನ್ನದ ಬಗ್ಗೆ, ಅದರ ಸಂರಕ್ಷಣೆ, ಅಭಿವೃದ್ಧಿಗಳ ಬಗ್ಗೆ ಅರಣ್ಯ ಇಲಾಖೆ ನಿರ್ಲಕ್ಷ ಧೋರಣೆ ತಳೆದಿರುವುದರಿಂದ ಕಿರು ಯೋಜನೆ ಸಂಪೂರ್ಣವೆನಿಸುವುದಿಲ್ಲ. ಕುಮಾರನ ಹಳ್ಳಿಯ ಮಹಿಳೆಯರ ಮತ್ತೊಂದು ಬೇಡಿಕೆ ಹಣ್ಣಿನ ಮರಗಳಿಗೆ ಸಂಬಂಧಿಸಿದ್ದು. ಅದನ್ನೂ ಕಿರು ಯೋಜನೆಯಲ್ಲಿ ಕಡೆಗಣಿಸಲಾಗಿದೆ. ಮರಡವಳ್ಳಿಯಲ್ಲಿ ಇದೇ ರೀತಿಯ ಸಮಸ್ಯೆಗಳಿವೆ.

ಮರಡವಳ್ಳಿಯ ಜನ ಅಡಿಕೆ ತೋಟಗಳಿಗೆ ಸೊಪ್ಪನ್ನು ಬಳಸುತ್ತಾರೆ. ಎಕರೆಗೆ, ವರ್ಷಕ್ಕೆ 1000 ಹೊರೆಯಂತೆ (ಪ್ರತಿ ಹೊರೆ 15 ಕಿ.ಗ್ರಾಂ)ಮರಡವಳ್ಳಿಯ ವಾರ್ಷಿಕ ಸೊಪ್ಪಿನ ಬೇಡಿಕೆ 1500 ಟನ್‌ಗಳು. ಇದೇ ರೀತಿ ಜಾನುವಾರುಗಳಿಗೆ 120 ದಿನಗಳಿಗೆ 3721 ಟನ್‌ಗಳಷ್ಟು ಸೊಪ್ಪು ಬೇಕಾಗುತ್ತದೆ. ಇದು ಸ್ಥಳೀಯ ಜನರ ಬಹುಮುಖ್ಯ ಬೇಡಿಕೆ. ಕಿರು ಯೋಜನೆಯನ್ನು ಬರೆಯುವ ಸಂದರ್ಭದಲ್ಲಿ ಈ ಬೇಡಿಕೆ ಚರ್ಚೆಗೆ ಬಂದರೂ, ಮರಡವಳ್ಳಿಯ ಕಿರು ಯೋಜನೆಯಲ್ಲಿರುವ ಹೊಸ ಸಂಪನ್ಮೂಲಗಳ ನಿರ್ಮಾಣ ವಿಭಾಗದಲ್ಲಿ ಇದರ ಪ್ರಸ್ತಾಪವೇ ಇಲ್ಲ. ಸ್ಥಳೀಯ ಸಮುದಾಯದ ಅರಣ್ಯವನ್ನಾಧರಿಸಿದ ಎಲ್ಲ ಬೇಡಿಕೆಗಳ ಪೂರೈಕೆಗೂ ಯೋಜನೆಯನ್ನು ರೂಪಿಸಿ, ಕಾರ್ಯಗತಗೊಳಿಸುವಷ್ಟು ಹಣ ಇಲಾಖೆಯಲ್ಲಿಲ್ಲ ಎನ್ನುವುದು ಈ ಬಗ್ಗೆ ಇಲಾಖೆ ಕೊಡುವ ಸಮಜಾಯಿಷಿ, ಹಣದ ಕೊರತೆಯ ನೆಪವೊಡ್ಡಿ ಇಲಾಖೆಗೆ ಅನುಕೂಲವೆನಿಸಿದ ಹಲವಾರು ಸ್ಥಳೀಯ ಸಮುದಾಯದ ಬೇಡಿಕೆಗಳನ್ನು ಕೈಬಿಟ್ಟಿರುವ ಪ್ರಕರಣಗಳನ್ನು ಕಿರು ಯೋಜನೆಯ ದಾಖಲೆಗಳಲ್ಲಿ ಗುರುತಿಸಬಹುದು.

ಅರಣ್ಯ ಇಲಾಖೆ ಮತ್ತು ಜನಸಮುದಾಯ

ಅಧ್ಯಯನ ನಡೆಸಿದ ಐದೂ ಹಳ್ಳಿಗಳಿಂದ ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ, ಮಾಹಿತಿ ವಿಶ್ಲೇಷಣೆ ಹಾಗೂ ಕರಡು ಯೋಜನೆಯನ್ನು ಬರೆಯುವ ಪ್ರಕ್ರಿಯೆಗಳಲ್ಲಿ ಭಾಗವಹಿಸಿದವರ ವಿವರಗಳನ್ನು ಕೋಷ್ಟಕ 5ರಲ್ಲಿ ಈಗಾಗಲೇ ನೋಡಿದ್ದೇವೆ. ಅರಣ್ಯ ಸಿಬ್ಬಂದಿಯಲ್ಲಿ ಶೇಕಡ

79ರಷ್ಟು ಜನ "ಸ್ಥಳೀಯ ಅರಣ್ಯಗಳ ಸಂರಕ್ಷಣೆಯಲ್ಲಿ ಜನ ಸಕ್ರಿಯವಾಗಿ ಭಾಗವಹಿಸಲಿ, ಆದರೆ ಕಿರು ಯೋಜನೆಯ ತಯಾರಿಯಲ್ಲಿ ಅವರ ಭಾಗವಹಿಸುವಿಕೆ ಅನಗತ್ಯ" ಎನ್ನುತ್ತಾರೆ. "ಅವರಿಗೆ ತರಬೇತಿ ನೀಡಿ, ಅವರನ್ನು ಎಲ್ಲ ಹಂತಗಳಲ್ಲಿ ಭಾಗವಹಿಸುವಂತೆ ಮಾಡಲು ಸಾಕಷ್ಟು ಸಮಯ ಬೇಕು. ಇದರಿಂದ, ಇಡೀ ಯೋಜನೆಯೇ ಅತ್ಯಂತ ನಿಧಾನಗತಿಯಲ್ಲಿ ಸಾಗುತ್ತದೆ" ಎನ್ನುವುದು ಇವರ ಅಭಿಪ್ರಾಯ. ಶೇಕಡಾ 21ರಷ್ಟು ಸಿಬ್ಬಂದಿ ಮಾತ್ರ ಜನರ ಭಾಗವಹಿಸುವಿಕೆ ಮತ್ತು ಅದಕ್ಕೆ ಅಗತ್ಯವಾದ ತರಬೇತಿಯನ್ನು ಸಮುದಾಯದ ಸಶಕ್ತೀಕರಣ ಪ್ರಕ್ರಿಯೆಯಾಗಿ ನೋಡುತ್ತಾರೆ. ಕಿರು ಯೋಜನೆಯ ತಯಾರಿ ಹಾಗೂ ಅದರಲ್ಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಅಂತಿಮ ನಿರ್ಧಾರ ಅರಣ್ಯ ಇಲಾಖೆಯದೇ ಆಗಿರಬೇಕೆಂಬುದು ಶೇಕಡಾ 91ರಷ್ಟು ಅರಣ್ಯ ಸಿಬ್ಬಂದಿಯ ಅಭಿಮತ. "ಅರಣ್ಯ ನಿರ್ವಹಣೆ ತಾಂತ್ರಿಕ ವಿಷಯ; ಅದಕ್ಕೆ ಸಂಬಂಧಿಸಿದ ಪರಿಶ್ರಮವಿರುವುದು ಇಲಾಖೆಯ ಸಿಬ್ಬಂದಿಗಳಿಗೆ ಮಾತ್ರ. ಇದರ ಜೊತೆಗೆ ಈ ಯೋಜನೆಗೆ ಹಣ ಹೂಡುವುದು ಅರಣ್ಯ ಇಲಾಖೆ. ಈ ಪರಿಸ್ಥಿತಿಯಲ್ಲಿ ಅಂತಿಮ ನಿರ್ಧಾರ ಸಹಜವಾಗಿಯೇ ಅರಣ್ಯ ಸಿಬ್ಬಂದಿಗಿರಬೇಕು" ಎನ್ನುವುದು ಅವರ ನಿಲುವು. ಆದರೆ ಶೇಕಡಾ 65ರಷ್ಟು ನಿರ್ವಹಣಾ ಸಮಿತಿಯ ಸದಸ್ಯರು ಇದನ್ನು ಒಪ್ಪುವುದಿಲ್ಲ. ಕಿರುಯೋಜನೆ ಹಾಗೂ ಅದರಲ್ಲಿರುವ ನಿರ್ವಹಣಾ ಕ್ರಮಗಳು ಸ್ಥಳೀಯ ಜನ ಸಮುದಾಯದ ಅಗತ್ಯಕ್ಕೆ ತಕ್ಕಂತೆ ರೂಪುಗೊಳ್ಳಬೇಕು. ಇದು ಸಾಧ್ಯವಾಗಬೇಕಾದರೆ ಅಂತಿಮ ನಿರ್ಧಾರವೂ ಸೇರಿದಂತೆ ಎಲ್ಲ ಹಂತಗಳಲ್ಲಿ ಜನ ಭಾಗವಹಿಸಲೇಬೇಕು ಎನ್ನುತ್ತಾರೆ. ಗ್ರಾಮ ಅರಣ್ಯ ಸಮಿತಿಗಳಿಗೆ ಹಣ ಬಲವಿಲ್ಲದಿರುವುದರಿಂದ ನಮ್ಮ ಅಭಿಪ್ರಾಯಕ್ಕೆ ಅನೇಕ ಸಂದರ್ಭಗಳಲ್ಲಿ ಅರಣ್ಯ ಇಲಾಖೆ ಬೆಲೆ ನೀಡುವುದಿಲ್ಲ. ನಮಗೆ ಎಷ್ಟೇ ಅಗತ್ಯವೆನಿಸಿದರೂ ಅಂತಹ ಕ್ರಮಗಳನ್ನು ಇಲಾಖೆ ಕೈಗೊಳ್ಳುವುದಿಲ್ಲ. ಹೀಗಾಗಿ ಗ್ರಾಮೀಣ ಮಟ್ಟದಲ್ಲಿ ಅರಣ್ಯ ಸಂರಕ್ಷಣೆ, ಅರಣ್ಯಾಭಿವೃದ್ಧಿಗಳಿಗೆ ವೆಚ್ಚವಾಗುವ ಒಟ್ಟು ಹಣದ ಕನಿಷ್ಠ ಶೇಕಡಾ 50ರಷ್ಟನ್ನು ನೇರವಾಗಿ ಗ್ರಾಮ ಅರಣ್ಯ ಸಮಿತಿಗಳಿಗೆ ನೀಡಬೇಕೆನ್ನುವುದು ಶೇಕಡಾ 95ರಷ್ಟು ನಿರ್ವಹಣಾ ಸಮಿತಿಯ ಸದಸ್ಯರ ಒತ್ತಾಯ. ಕಿರುಯೋಜನೆಯನ್ನು ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಮಹಿಳೆಯರಲ್ಲಿ ಶೇಕಡಾ 30 ಮಂದಿಗೆ ಮಾತ್ರ ಅದೊಂದು ಅಗತ್ಯ ಪ್ರಯತ್ನ ಎನಿಸಿದೆ. "ಅರಣ್ಯ ಸಂಪನ್ಮೂಲಗಳ ಬಳಕೆ, ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹಿಳೆಯರ ಕಾಳಜಿಗಳನ್ನು ವ್ಯಕ್ತಪಡಿಸಿ, ಅವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಈ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಬೇರೆ ದಾರಿಯೇ ಇಲ್ಲ" ಎಂಬುದು ಇವರ ಮತ. ಈ ಕಾರಣಕ್ಕಾಗಿಯೇ ಇವರು ತರಬೇತಿ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇಲಾಖೆಯೊಡನೆ ಈ ಚರ್ಚೆಯನ್ನು ಸ್ವಾಗತಿಸುತ್ತಾರೆ. ಆದರೆ ಉಳಿದ ಶೇಕಡಾ 70ರಷ್ಟು ಮಹಿಳೆಯರಿಗೆ ಗ್ರಾಮ ಅರಣ್ಯ ಸಮಿತಿಯಿಂದಾಗಲೀ ಅರಣ್ಯ ಇಲಾಖೆ ಯಿಂದಾಗಲೀ ತಮ್ಮ ಸಮಸ್ಯೆಗಳು ಬಗೆಹರಿಯುತ್ತವೆಂಬ ನಂಬಿಕೆಯಿಲ್ಲ. ಉಳಿದವರ ಬಲವಂತಕ್ಕಾಗಿ ಕಿರುಯೋಜನೆಯ ತಯರಿಯಲ್ಲಿ ಭಾಗವಹಿಸಿದರೂ, ಅದರಿಂದ ಯಾವ ತಕ್ಷಣದ ಪ್ರಯೋಜನವೂ

ಇಲ್ಲವೆಂದೇ ಅವರು ಹೇಳುತ್ತಾರೆ. ಭೂ ರಹಿತರದ್ದೂ ಹೆಚ್ಚು ಕಡಿಮೆ ಇದೇ ನಿಲುವು. ಅರಣ್ಯ ಇಲಾಖೆಯ ಎಲ್ಲ ಯೋಜನೆಗಳಂತೆ, ಜಂಟೀ ಅರಣ್ಯ ಯೋಜನೆಯೂ ಭೂಮಿಯುಳ್ಳವರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಯೋಜನೆಯೆಂಬುದು ಶೇಕಡಾ 71ರಷ್ಟು ಭೂ ರಹಿತರ ಅಭಿಪ್ರಾಯ. ಕಿರು ಯೋಜನೆಯ ತಯಾರಿಕೆಗೆ ಸಂಬಂಧಪಟ್ಟ ಚಟುವಟಿಕೆಗಳಲ್ಲಿ ನಾಲ್ಕಾರು ದಿವಸಗಳು ಭಾಗವಹಿಸಬೇಕಾಗಿ ಬಂದಾಗ ನಮ್ಮ ದಿನಗೂಲಿಗೆ ಖೋತಾ ಆಗುತ್ತದೆ. ಈ ಬಗ್ಗೆ ಅರಣ್ಯ ಸಮಿತಿ ಯೋಚಿಸಬೇಕೆಂಬುದು ಅವರ ಕಳಕಳಿಯ ಮನವಿ. ಕಿರುಯೋಜನೆಯ ತಯಾರಿಯಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಅರಣ್ಯ ಇಲಾಖೆ ಅವಕಾಶ ಕಲ್ಪಿಸಿದೆ ನಿಜ. ಆದರೆ ಭಾಗವಹಿಸುವಂತೆ ಜನರನ್ನು ಪ್ರೇರೇಪಿಸುವುದರಲ್ಲಿ ಇಲಾಖೆಗೆ ಪ್ರಾಮಾಣಿಕ ಕಳಕಳಿಯಿಲ್ಲವೆಂಬುದು ಸರ್ಕಾರೇತರ ಸಂಸ್ಥೆಗಳ ಶೇಕಡಾ 60ರಷ್ಟು ಸದಸ್ಯರ ಅಭಿಮತ. ಜನರ ಸಹಭಾಗಿತ್ವದಲ್ಲಿ ಕಿರುಯೋಜನೆ ರೂಪುಗೊಳ್ಳುವುದರಿಂದ, ಇಡೀ ಪ್ರಕ್ರಿಯೆ ನಿಧಾನವಾಗುವು ದಾದರೂ, ಜನ ಸಮುದಾಯದ ಸಶಕ್ತೀಕರಣ, ಅರ್ಥಪೂರ್ಣ ಭಾಗವಹಿಸುವಿಕೆಗೆ ಇದು ಅಗತ್ಯವೆಂದು ನೂರಕ್ಕೆ ನೂರರಷ್ಟು ಸದಸ್ಯರು ಹೇಳುತ್ತಾರೆ. ಕಿರು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲಿ ಸಮುದಾಯಕ್ಕೆ ಸದ್ಯದಲ್ಲಿ ಹೆಚ್ಚಿನ ಪಾತ್ರವಿಲ್ಲದಿದ್ದರೂ, ಕಾಲಕ್ರಮೇಣ ಈ ಸಾಮರ್ಥ್ಯವೂ ಲಭಿಸುತ್ತದೆಂದು ಶೇಕಡಾ 78 ಸದಸ್ಯರು ಅಭಿಪ್ರಾಯಪಡುತ್ತಾರೆ.

ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಅಳೆಯಲು ನಾವು ಬಳಸಿದ ವಿವಿಧ ಸೂಚ್ಯಂಕಗಳು ಹಾಗೂ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಕಿರುಯೋಜನೆಯನ್ನು ಸಿದ್ಧಪಡಿಸುವ ಪ್ರಕ್ರಿಯೆಯ ವಿಷದ ಪರಿಶೀಲನೆ, ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಹಲವಾರು ವಿಷಯಗಳನ್ನು ಸ್ಪಷ್ಟ ಮಾಡುತ್ತವೆ. ಜಂಟೀ ಅರಣ್ಯ ಯೋಜನೆಯಲ್ಲಿ ಭಾಗವಹಿಸಲು ಸಾಕಷ್ಟು ಅವಕಾಶಗಳಿದ್ದರೂ, ಅವಕಾಶ ಒದಗಿಸಿದ ಮಾತ್ರಕ್ಕೆ ಜನ ಅದರಲ್ಲಿ ತಾವಾಗಿಯೇ ಭಾಗವಹಿಸುವುದಿಲ್ಲ. ಸ್ಥಳೀಯ ಸಮುದಾಯದ ಅರಣ್ಯಗಳ ಮೇಲಿನ ಅವಲಂಬನೆ, ಯೋಜನೆಯ ಬಗ್ಗೆ ಹಾಗೂ ಯೋಜನೆಯಲ್ಲಿ ಭಾಗವಹಿಸುವುದರಿಂದ ದೊರೆಯುವ ಪ್ರಯೋಜನಗಳ ಬಗೆಗಿನ ಅರಿವು, ಜನರ ಬದುಕಿಗೆ ಯೋಜನೆಯ ಪ್ರಸ್ತುತತೆ, ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯ ಸಮಿತಿಗಳ ಆಸಕ್ತಿ, ಸರ್ಕಾರೇತರ ಸಂಸ್ಥೆಗಳ ಸಹಯೋಗ, ಸ್ಥಳೀಯ ರಾಜಕೀಯ, ನಾಯಕತ್ವ, ವಿವಿಧ ಗುಂಪುಗಳ ನಡುವಿನ ಸಂಬಂಧ, ಸಂವಹನದ ಸ್ವರೂಪ ಮುಂತಾದವುಗಳು ಜನರ ಭಾಗವಹಿಸುವಿಕೆಯನ್ನು ಪ್ರಭಾವಿಸುತ್ತವೆ ಎಂಬುದನ್ನು ಕ್ಷೇತ್ರಕಾರ್ಯದಲ್ಲಿ ದೊರೆತ ಅನುಭವಾತ್ಮಕ ಪ್ರಮಾಣಗಳು ಸೂಚಿಸುತ್ತವೆ. ನಾನು ಪರಿಶೀಲಿಸಿರುವ ಹಳ್ಳಿಗಳಲ್ಲಿ, ಭಾಗವಹಿಸುವಿಕೆಯ ಸ್ವರೂಪಗಳಲ್ಲಿ ಎದ್ದು ಕಾಣುವ ವ್ಯತ್ಯಾಸಗಳಿವೆ. ಜಂಟೀ ಅರಣ್ಯ ಯೋಜನೆ, ಕುಮಾರನಹಳ್ಳಿ, ಮರಡವಳ್ಳಿ, ಹನಿಯಾಗಳಲ್ಲಿ ಪ್ರಸ್ತುತವಾದಷ್ಟು ಉದ್ರೂರು, ಮುಕುಂದೂರುಗಳಲ್ಲಿ ಆಗುವುದಿಲ್ಲ.

ಯೋಜನೆ ಹಾಗೂ ಅದರಿಂದ ದೊರೆಯುವ ಪ್ರಯೋಜನಗಳ ಬಗೆಗಿನ ಅರಿವು ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಅಧಿಕವಾಗಿದೆ. ಈ ಎರಡೂ ಹಳ್ಳಿಗಳಲ್ಲಿ ಕಾಣುವಷ್ಟು ಆಸಕ್ತಿ, ನಿಯಮ ಪಾಲನೆ, ಸರ್ಕಾರೇತರ ಸಂಸ್ಥೆಗಳ ಸಹಯೋಗ, ಪ್ರಭಾವಶಾಲೀ ನಾಯಕತ್ವ ಉಳಿದ ಕಡೆಗಳಲ್ಲಿ ಕಾಣುವುದಿಲ್ಲ. ಈ ಎಲ್ಲ ಕಾರಣಗಳಿಂದ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆ ಉತ್ತಮವಾಗಿದೆ ಎನ್ನಬಹುದು. ಉದ್ದೂರು, ಮುಕುಂದೂರುಗಳು ಇನ್ನೊಂದು ತುದಿಯಲ್ಲಿವೆ. ಈ ಎರಡು ಪರಿಮಿತಿಗಳ ನಡುವೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ.

ಸಂಪನ್ಮೂಲಗಳ ಸಂರಕ್ಷಣೆಗೆ ಸಾಮೂಹಿಕ ಕ್ರಮಗಳು

ಊರೊಟ್ಟಿನ ಸಂಪನ್ಮೂಲಗಳ ಸಂರಕ್ಷಣೆ ಮತ್ತು ನಿರ್ವಹಣೆಗೆ ಸ್ಥಳೀಯವಾಗಿ ಕೈಗೊಂಡ ಸಾಮೂಹಿಕ ಕ್ರಮಗಳು(ಕಲೆಕ್ಟಿವ್ ಆ್ಯಕ್ಷನ್) ಎಂತಹ ಸಂದರ್ಭಗಳಲ್ಲಿ ಯಶಸ್ವಿಯಾಗುತ್ತವೆ ಎಂಬ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಅನೇಕ ಅಧ್ಯಯನಗಳು ನಡೆದಿವೆ. ಈ ಪ್ರಯತ್ನಗಳ ಯಶಸ್ಸನ್ನು ಸಮಾಜ ವಿಜ್ಞಾನಿಗಳು 'ಸಾಮಾಜಿಕ ಕಟ್ಟುಪಾಡು' ಹಾಗೂ 'ನೀತಿ ಸಂಹಿತೆ'ಗಳ ಮೂಲಕವಾಗಿ ವಿವರಿಸಲು ಪ್ರಯತ್ನಿಸಿದರೆ, ಅರ್ಥಶಾಸ್ತ್ರಜ್ಞರು ಪ್ರೋತ್ಸಾಹಕಗಳು ಮತ್ತು ದಂಡನೆಗಳ ಆಧಾರದ ಮೇಲೆ ವಿವರಿಸುತ್ತಾರೆ. ಯಶಸ್ಸು ಅಥವಾ ವೈಫಲ್ಯಕ್ಕೆ ಆಂತರಿಕ ಹಾಗೂ ಬಾಹ್ಯ ಕಾರಣಗಳಿವೆಯೆಂದು ಓಸ್ಟ್ರಮ್ ಅಭಿಪ್ರಾಯಪಡುತ್ತಾರೆ. "ಆಂತರಿಕ ಕಾರಣಗಳಲ್ಲಿ ನಿರ್ಧಾರ ಕೈಗೊಳ್ಳುವವರ ಸಂಖ್ಯೆ, ಸಂರಕ್ಷಣೆಯಲ್ಲಿ ಪಾಲ್ಗೊಳ್ಳುತ್ತಿರುವವರ ನಡುವಿನ ಪರಸ್ಪರ ಅವಲಂಬನೆ ಹಾಗೂ ಸಂಪನ್ಮೂಲದ ಮೇಲಿನ ಅವಲಂಬನೆ, ಒಂದೇ ರೀತಿಯ ಆಸಕ್ತಿ, ನಿರೀಕ್ಷಿತ ಪ್ರಯೋಜನಗಳು ಹಾಗೂ ಅದಕ್ಕಾಗಿ ತೆರಬೇಕಾದ ಬೆಲೆಗಳ ಬಗೆಗಿನ ಅರಿವು, ಉತ್ತಮ ನಾಯಕತ್ವ ಮುಂತಾದವುಗಳು ಸೇರಿವೆ".[12] ಅರಣ್ಯ ಉತ್ಪನ್ನಗಳ ಮೇಲೆ ಅವಲಂಬಿತ ವಾಗಿರುವ ಸಣ್ಣದಾದ, ಒಂದೇ ಜಾತಿಗೆ ಸೇರಿದ, ಮಾರುಕಟ್ಟೆಯಿಂದ ದೂರವಿರುವ ಸಮುದಾಯ ಗಳು, ಸಂಘಟನೆಯಿಂದ ದೊರೆಯುವ ಪ್ರಯೋಜನಗಳು ಬಡವ-ಶ್ರೀಮಂತರಿಬ್ಬರಿಗೂ ಅಗತ್ಯವಾದ ಪರಿಸ್ಥಿತಿ, ಸ್ವಾರ್ಥ ರಹಿತ ನಾಯಕತ್ವಗಳು ಊರೊಟ್ಟಿನ ಸಂಪನ್ಮೂಲದ ಸಾಮೂಹಿಕ ಸಂರಕ್ಷಣೆ ಮತ್ತು ನಿರ್ವಹಣೆಗಳನ್ನು ಯಶಸ್ವಿಗೊಳಿಸುವ ಅಂಶಗಳಲ್ಲಿ ಮುಖ್ಯವಾದವು".[13] ಈ ಅಧ್ಯಯನಗಳನ್ನು ಪರಿಶೀಲಿಸಿದಾಗ, ಈ ಗುಣಲಕ್ಷಣಗಳೇ ಅಂತಹ ಸಾಮೂಹಿಕ ಕ್ರಮದಲ್ಲಿ ಜನರ ಸಹಭಾಗಿತ್ವವನ್ನು ಪ್ರೇರೇಪಿಸಿರುವುದು ಕಂಡುಬರುತ್ತದೆ. ಹೀಗಾಗಿ ಕ್ಷೇತ್ರಾಧ್ಯಯನದಲ್ಲಿ ದೊರೆತ ಅನುಭವಾತ್ಮಕ ಸಾಕ್ಷ್ಯಗಳು ಹಾಗೂ ಊರೊಟ್ಟಿನ ಸಂಪತ್ತಿನ ಸಾಮೂಹಿಕ ಸಂರಕ್ಷಣೆ ಮತ್ತು ನಿರ್ವಹಣೆಯ ಯಶಸ್ವಿ ಪ್ರಕರಣಗಳ ನೆರವಿನಿಂದ ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ವನ್ನು ಪ್ರೋತ್ಸಾಹಿಸುವ ಅಂಶಗಳನ್ನು ಹೀಗೆ ಪಟ್ಟಿ ಮಾಡಬಹುದು.

- ಅರಣ್ಯ ಸಂಪನ್ಮೂಲಗಳ ಮೇಲೆ ಸ್ಥಳೀಯ ಸಮುದಾಯದ ಅವಲಂಬನೆ. ಹಳ್ಳಿಯಲ್ಲಿನ ಎಲ್ಲ ವಿವಿಧ ಗುಂಪುಗಳೂ ಅವಲಂಬಿತರಾದಾಗ ಭಾಗವಹಿಸುವಿಕೆ ಹೆಚ್ಚುತ್ತದೆ.
- ಸಂಪನ್ಮೂಲದ ಪ್ರಸ್ತುತ ಸ್ಥಿತಿಗತಿಗಳ ಪರಿಚಯ.
- ಜಂಟೀ ಅರಣ್ಯ ಯೋಜನೆ ಹಾಗೂ ಅದರಿಂದ ದೊರೆಯುವ ಪ್ರಯೋಜನಗಳು, ಯೋಜನೆಯಲ್ಲಿ ಭಾಗವಹಿಸಲು ಇರುವ ಅವಕಾಶಗಳು, ಗ್ರಾಮ ಅರಣ್ಯ, ಸಮಿತಿ, ನಿರ್ವಹಣಾ ಸಮಿತಿಗಳ ಕಾರ್ಯಾಚರಣೆಯ ವಿಧಿವಿಧಾನಗಳು, ಸದಸ್ಯರ ಕರ್ತವ್ಯ, ಜವಾಬ್ದಾರಿಗಳ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ.
- ಅರಣ್ಯ ಸಂಪನ್ಮೂಲಗಳ ಸಂರಕ್ಷಣೆ, ಸಂವರ್ಧನೆಗಾಗಿ ರೂಪಿಸಿ, ಜಾರಿಗೊಳಿಸಿರುವ ನೀತಿ, ನಿಯಮಗಳ ಬಗೆಗಿನ ಅರಿವು.
- ಸಹಭಾಗಿತ್ವವನ್ನು ಪ್ರೋತ್ಸಾಹಿಸುವ, ವೇಗವರ್ಧಕವಾಗಿ ಕೆಲಸಮಾಡುವ ಸರ್ಕಾರೇತರ ಸಂಸ್ಥೆಗಳ ನೆರವು.
- ಒಮ್ಮತವನ್ನು ಮೂಡಿಸಬಲ್ಲ, ಸಮಸ್ಯೆಗಳನ್ನು ಪರಿಹರಿಸಬಲ್ಲ, ಸಮುದಾಯದ ಒಟ್ಟಾರೆ ಒಳಿತಿನ ಬಗ್ಗೆ ಬದ್ಧತೆಯುಳ್ಳ, ಅರಣ್ಯಾಧಿಕಾರಿಗಳೊಡನೆ ಸಮಾನತೆಯ ಆಧಾರದ ಮೇಲೆ ವ್ಯವಹರಿಸ ಬಲ್ಲ, ದೂರದರ್ಶಿತ್ವವುಳ್ಳ ನಾಯಕತ್ವ.

ಊರೊಟ್ಟಿನ ಸಂಪತ್ತಿನ ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಸ್ಥಳೀಯ ಸಂಸ್ಥೆಗಳ ಪಾತ್ರದ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ 'ವಿಕ್ರಮ್ ಸಾರಾಭಾಯ್ ಸೆಂಟರ್ ಫಾರ್ ಡೆವಲಪ್‌ಮೆಂಟ್ ಇಂಟರ್‍ಯಾಕ್ಷನ್'(ವಿಕ್‌ಸ್ಯಾಟ್), ಯಶಸ್ವೀ ಸ್ಥಳೀಯ ಸಂಸ್ಥೆಗಳ ಗುಣಲಕ್ಷಣಗಳನ್ನು ಗುರುತಿಸಲು ಆರು ಅಂಶಗಳ ಮಾನದಂಡವನ್ನು ಅಭಿವೃದ್ಧಿಗೊಳಿಸಿದೆ. ಈ ಆರು ಅಂಶಗಳೆಂದರೆ "Transparency, Rules, Awareness, Initiative and Interdepedndence, Tenure, Satisfaction"[3] 'TRAITS' ಮಾನದಂಡ, ಸ್ಥಳೀಯ ಸಂಸ್ಥೆಗಳ ಕಾರ್ಯಕ್ಷಮತೆಯ ಒಂದು ಸ್ಥೂಲ ಚಿತ್ರವನ್ನು ನೀಡುತ್ತದೆ. TRAITS ಮಾನದಂಡದಲ್ಲಿರುವ ಆರು ಅಂಶಗಳಿಗೂ, ಸಮುದಾಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸುವ ಅಂಶಗಳಿಗೂ(ನಾವು ಈ ಹಿಂದೆ ಪಟ್ಟಿ ಮಾಡಿದಂತೆ) ತೀರಾ ಹತ್ತಿರದ ಸಾಮ್ಯವಿದೆ. ಹೀಗಾಗಿ ಇದೇ 'TRAITS' ಮಾನದಂಡವನ್ನು ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಅಳೆಯುವ ಮಾನದಂಡವನ್ನಾಗಿ ಬಳಸಬಹುದು. ಜಂಟೀ ಅರಣ್ಯ ಯೋಜನೆಯ ಸಂದರ್ಭದಲ್ಲಿ ಈ ಮಾನದಂಡದಲ್ಲಿರುವ ಆರು ಅಂಶಗಳ ಮಹತ್ವ ಹೀಗಿದೆ.

ಪಾರದರ್ಶಕತೆ (ಟ್ರಾನ್ಸ್‌ಪೆರೆನ್ಸಿ)

ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ, ದಾಖಲೆಗಳ ಲಭ್ಯತೆ, ಹಣಕಾಸಿನ ವ್ಯವಹಾರ ಮುಂತಾದವುಗಳಲ್ಲಿನ ಮುಕ್ತವಾದ, ಮುಚ್ಚುಮರೆಯಿಲ್ಲದ ಪರಿಸ್ಥಿತಿಯನ್ನು ಪಾರದರ್ಶಕತೆ ಸೂಚಿಸುತ್ತದೆ. ಜಂಟೀ ಅರಣ್ಯ ಯೋಜನೆಯಲ್ಲಿ, ನಿರ್ವಹಣಾ ಸಮಿತಿ ಮತ್ತು ಇತರ ಸದಸ್ಯರು ಹಾಗೂ ಅರಣ್ಯ ಸಮಿತಿ ಮತ್ತು ಅರಣ್ಯ ಇಲಾಖೆ-ಹೀಗೆ ಎರಡು ಹಂತಗಳಲ್ಲಿ ಪಾರದರ್ಶಕತೆಯಿರಬೇಕು.

ನಿಯಮಗಳು(ರೂಲ್ಸ್)

ಅರಣ್ಯ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಬಳಕೆಗೆ ಸಂಬಂಧಪಟ್ಟಂತೆ ಎಲ್ಲರ ಒಪ್ಪಿಗೆ ಪಡೆದಿರುವ ಎಲ್ಲ ಸದಸ್ಯರಿಗೂ ತಿಳಿದಿರುವ, ಸುಲಭವಾಗಿ ಅನುಷ್ಠಾನಕ್ಕೆ ತರಬಲ್ಲ, ಸರಳ ನಿಯಮಗಳು.

ತಿಳಿವಳಿಕೆ(ಅವೇರ್‌ನೆಸ್)

ಜಂಟೀ ಅರಣ್ಯ ಯೋಜನೆಯ ವಿವರಗಳು, ಅದರಿಂದ ದೊರೆಯುವ ಪ್ರಯೋಜನ, ಅರಣ್ಯ ಸಂಪನ್ಮೂಲಗಳ ಬಳಕೆ, ಸಂರಕ್ಷಣೆಗಳಿಗೆ ಸಂಬಂಧಿಸಿದ ನೀತಿ-ನಿಲುವುಗಳು, ಅರಣ್ಯ ಸಮಿತಿಯ ಕೆಲಸದ ರೀತಿ, ನೀತಿಗಳು, ಸದಸ್ಯರ ಕರ್ತವ್ಯ-ಜವಾಬ್ದಾರಿಗಳ ಬಗ್ಗೆ ಸ್ಪಷ್ಟಮಾಹಿತಿ.

ಪ್ರವರ್ತನೆ ಮತ್ತು ಸ್ವಾತಂತ್ರ್ಯ(ಇನಿಷಿಯೇಟಿವ್ ಅಂಡ್ ಇಂಡಿಪೆಂಡೆನ್ಸ್)

ಅಗತ್ಯವಾದ ಕ್ರಮಗಳನ್ನು ತಾನಾಗಿಯೇ ಕೈಗೊಳ್ಳಬಲ್ಲ ಸಾಮರ್ಥ್ಯ. ಅರಣ್ಯ ಇಲಾಖೆಯ ಮೇಲಾಗಲೀ, ಸರ್ಕಾರೇತರ ಸಂಸ್ಥೆಗಳ ಮೇಲಾಗಲೀ ಅನಗತ್ಯವಾಗಿ ಅವಲಂಬಿತರಾಗದಂತಹ ಸ್ವತಂತ್ರ ಮನೋಭಾವ.

ಅನುಭೋಗದ ಅವಧಿ(ಟೆನ್ಯೂರ್)

ಯೋಜನೆಯಿಂದ ಪ್ರಯೋಜನಗಳು ಯಾವಾಗ ದೊರೆಯುತ್ತದೆ, ಎಷ್ಟು ದೊರೆಯುತ್ತದೆ, ಎಲ್ಲಿಯವರೆಗೆ ದೊರೆಯುತ್ತದೆ, ಯಾವ ಅವಧಿಯವರಗೆ ಪ್ರಯೋಜನಗಳನ್ನು ಪಡೆಯಬಹುದು ಎಂಬುದರ ಬಗ್ಗೆ ಅನುಮಾನವಿಲ್ಲದ ಸ್ಪಷ್ಟಕಲ್ಪನೆ. ಇದು ಯೋಜನೆಯಲ್ಲಿ ಭಾಗವಹಿಸುವವರಿಗೆ, ಯೋಜನೆಯನ್ನು ತಮ್ಮದೆಂದು ಭಾವಿಸಲು ನೆರವಾಗುತ್ತದೆ.

ತೃಪ್ತಿ(ಸ್ಯಾಟಿಸ್‌ಫಾಕ್ಷನ್)

ಸಂರಕ್ಷಣೆಯಿಂದ ದೊರೆಯುವ ಪ್ರಯೋಜನಗಳು ಎಲ್ಲರಿಗೂ ದೊರೆಯಬೇಕು. ಜನರ ದಿನನಿತ್ಯದ ಬದುಕಿನ ಅಗತ್ಯಗಳನ್ನು ಪೂರೈಸಬೇಕು. ಪ್ರಯೋಜನ ದೊರೆಯುವುದು ಖಚಿತವಾಗಿದ್ದು, ಪ್ರಯೋಜನಗಳ ಹಂಚಿಕೆ ಸಮಾನತೆಯ ಆಧಾರದ ಮೇಲೆ ನಡೆಯಬೇಕು.

'TRAITS' ಮಾನದಂಡದ ಆರು ಅಂಶಗಳನ್ನು ಈಗ ಕ್ಷೇತ್ರಕಾರ್ಯದ ಐದು ಗ್ರಾಮ ಅರಣ್ಯ ಸಮಿತಿಗಳಿಗೆ ಅನ್ವಯಿಸಿ ನೋಡೋಣ.

ಪಾರದರ್ಶಕತೆ

ಪಾರದರ್ಶಕತೆಯನ್ನು ಎರಡುಮಟ್ಟಗಳಲ್ಲಿ ಪರಿಶೀಲಿಸಬೇಕು. ನಿರ್ವಹಣಾ ಸಮಿತಿಯ ದಿನನಿತ್ಯದ ವ್ಯವಹಾರದಲ್ಲಿ; ಗ್ರಾಮ ಅರಣ್ಯ ಸಮಿತಿ ಮತ್ತು ಅರಣ್ಯ ಇಲಾಖೆಗಳ ನಡುವಿನ ಸಂಬಂಧದಲ್ಲಿ. ಕುಮಾರನಹಳ್ಳಿ, ಮರಡವಳ್ಳಿಗಳಲ್ಲಿ ಮೊದಲನೆಯ ಹಂತದಲ್ಲಿ ಪಾರದರ್ಶಕತೆ ಯಿದೆ. ನಿರ್ವಹಣಾ ಸಮಿತಿಯ ವ್ಯವಹಾರಗಳಿಗೆ ಸಂಬಂಧಿಸಿದ ಎಲ್ಲ ದಾಖಲೆಗಳೂ ಸುಲಭವಾಗಿ ಲಭ್ಯವಾಗುತ್ತವೆ. ಪ್ರತಿ ಸಭೆಯಲ್ಲೂ ಅಂದಿನವರೆಗಿನ ಲೆಕ್ಕಾಚಾರವನ್ನು ಮಂಡಿಸಲಾಗುತ್ತದೆ. ಸದಸ್ಯರ ಅನುಮಾನಗಳಿಗೆ ಉತ್ತರ ನೀಡಲಾಗುತ್ತದೆ. ಎಲ್ಲ ನಿರ್ಧಾರಗಳನ್ನೂ ಸಭೆಯಲ್ಲಿಯೇ ತೆಗೆದುಕೊಳ್ಳಲಾಗುತ್ತದೆ. ಸಭೆ ಎಲ್ಲರಿಗೂ ಗೊತ್ತಾದ ದಿನದಂದು ನಡೆಯುತ್ತದೆ. ಒಟ್ಟಾರೆಯಾಗಿ ಯಾವುದೇ ಮುಚ್ಚುಮರೆಯೂ ಇಲ್ಲಿ ಕಾಣಿಸುವುದಿಲ್ಲ. ಹನಿಯಾದಲ್ಲಿ, ಮೊದಲ ಒಂದು ವರ್ಷ, ಅರಣ್ಯ ಸಮಿತಿ ಕ್ರಿಯಾಶೀಲವಾಗಿದ್ದಾಗ, ಅಲ್ಲಿಯೂ ಇದೇ ಪರಿಸ್ಥಿತಿಯಿತ್ತು. ಆದರೆ ಉದ್ದೂರು, ಮುಕುಂದೂರುಗಳಲ್ಲಿ ಈ ಪರಿಸ್ಥಿತಿಯಿಲ್ಲ. ಅಧ್ಯಯನದ ಅವಧಿಯಲ್ಲಿ ಇಲ್ಲಿ ನಡೆದಿರುವ 13 ಮತ್ತು 7 ಸಭೆಗಳಲ್ಲಿ ಒಂದರಲ್ಲೂ ಹಣಕಾಸಿನ ವಿಷಯ ಚರ್ಚೆಗೆ ಬಂದಿಲ್ಲ. ಉದ್ದೂರಿನಲ್ಲಿ ಗ್ರಾಮ ಅರಣ್ಯ ಸಮಿತಿಗೆ, ಎಣ್ಣೆ ತೆಗೆಯುವುದರಿಂದ ಎಷ್ಟು ಹಣ ಬರುತ್ತದೆಂಬ ವಿಷಯ ನಿರ್ವಹಣಾ ಸಮಿತಿಯ ಮೂರು ಮಂದಿಗೆ ಬಿಟ್ಟರೆ ಉಳಿದ ಯಾರಿಗೂ ತಿಳಿದಿಲ್ಲ. ಅರಣ್ಯ ಸಮಿತಿಗೆ ಬಂದ ಹಣದ ದಾಖಲೆ ನಡಾವಳಿ ಪುಸ್ತಕದಲ್ಲಿ ಇಲ್ಲ. ಆ ಮಾಹಿತಿಯನ್ನೂ ಸಭೆಗೆ ನೀಡಲಾಗಿಲ್ಲ. ಈ ವಿವರಗಳನ್ನು ಕೇಳಿದ ನಿರ್ವಹಣಾ ಸಮಿತಿಯ ಸದಸ್ಯರನ್ನು(ಅಧ್ಯಕ್ಷರ ವಿರುದ್ಧ, ಅರಣ್ಯ ಸಮಿತಿಯ ಅಧ್ಯಕ್ಷರ ಸ್ಥಾನಕ್ಕೆ ನಿಂತು ಸೋತವರು)ಜಾಣತನದಿಂದ ನಿರ್ವಹಣಾ ಸಮಿತಿಯಿಂದ ಹೊರಗಟ್ಟಲಾಗಿದೆ. ನೀಲಗಿರಿ ಎಣ್ಣೆಯಿಂದ ಬಂದ ಹಣದ ಸ್ವಲ್ಪಭಾಗವನ್ನು ದೇವಸ್ಥಾನ ಕಟ್ಟಲು ಬಳಸಲಾಗುತ್ತಿದೆ. ಇದು ಅಧ್ಯಕ್ಷರ ಸ್ವಂತ ನಿರ್ಧಾರ. ಇದು ಸಭೆಯಲ್ಲಿ ಚರ್ಚೆಗೆ ಬಂದಿಲ್ಲ, ದಾಖಲೆಯಲ್ಲೂ ಇಲ್ಲ. ನೆಡುತೋಪು ಕಾಯಲು ಅರಣ್ಯ ಸಮಿತಿಯಿಂದ ಸಂಬಳ ಪಡೆಯುವ ಕಾವಲುಗಾರ ಅಧ್ಯಕ್ಷರ ಮನೆಯಲ್ಲಿ ಬಿಟ್ಟಿ ಕೆಲಸ ಮಾಡುತ್ತಾನೆ. ಮುಕುಂದೂರಿನ ಪರಿಸ್ಥಿತಿಯೂ ಹೀಗೆ. ಹಣಕಾಸಿಗೆ ಸಂಬಂಧಿಸಿದ ಎಲ್ಲ ನಿರ್ಧಾರಗಳೂ ಸಭೆಯ ಹೊರಗೆ ಆಗಿದೆ. ಒಂದು ಬಾರಿಯೂ ಸಭೆಯಲ್ಲಿ ಯಾರೂ ಲೆಕ್ಕದ ಬಗ್ಗೆ ಕೇಳಿಲ್ಲ, ಮಂಡಿಸಿಯೂ ಇಲ್ಲ. ಅಧ್ಯಕ್ಷರನ್ನು ಲೆಕ್ಕ ಕೇಳುವ ಧೈರ್ಯ ಯಾರಿಗೂ ಇಲ್ಲ.

ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವಿನ ಹಣಕಾಸಿನ ವ್ಯವಹಾರದಲ್ಲಿ ಮಾತ್ರ, ಎಲ್ಲ ಹಳ್ಳಿಗಳ ಪರಿಸ್ಥಿತಿಯೂ ಒಂದೇ ರೀತಿಯಲ್ಲಿದೆ. ಈ ಐದೂ ಹಳ್ಳಿಗಳಲ್ಲಿ ಅರಣ್ಯ

ಇಲಾಖೆಯಿಂದ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಡಿಯಲ್ಲಿ ನೆಡುತೋಪುಗಳ ನಿರ್ಮಾಣ, ನಿರ್ವಹಣೆಗಳಿಗೆ ಆಯ-ವ್ಯಯದಲ್ಲಿ ಮಂಜೂರಾಗಿರುವ ಹಣ, ವೆಚ್ಚವಾಗಿರುವ ಹಣ ಮುಂತಾದವುಗಳಿಗೆ ಸಂಬಂಧಿಸಿದಂತೆ ಒಂದಿಷ್ಟೂ ಮಾಹಿತಿಯನ್ನು ಗ್ರಾಮ ಅರಣ್ಯ ಸಮಿತಿಗೆ ಕೊಟ್ಟಿಲ್ಲ. ಉದಾಹರಣೆಗೆ ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಯ ಕಿರು ಯೋಜನೆಯಲ್ಲಿ, ಹೊಸ ಸಂಪನ್ಮೂಲಗಳ ನಿರ್ಮಾಣದ ಭಾಗದಲ್ಲಿ 2001-2002ನೇ ಸಾಲಿನಲ್ಲಿ ನೆಡುತೋಪುಗಳ ನಿರ್ಮಾಣ, ನಿರ್ವಹಣೆಗಳಿಗೆಂದು ಆಯ-ವ್ಯಯದಲ್ಲಿ 11,63,851ರೂ.ಗಳನ್ನು ಕೇಳಲಾಗಿತ್ತು. ಇದರ ಭಾಗವಾಗಿ 11,375 ಮಾನವದಿನಗಳಷ್ಟು ಕೂಲಿ ಕೆಲಸ ಲಭ್ಯವಾಗಿ ಮರಡವಳ್ಳಿಯ ಜನರಿಗೆ ಆ ವರ್ಷದಲ್ಲಿ 7,62,520ರೂ.ಗಳಷ್ಟು ಕೂಲಿ ದೊರೆಯಬೇಕಿತ್ತು. ಆದರೆ ಇದರ ಅರ್ಧದಷ್ಟೂ ದೊರೆಯಲಿಲ್ಲ. ನೆಡುತೋಪುಗಳಿಗಾಗಿ ದೊರೆತ ಹಣ, ಖರ್ಚಾದ ಹಣ, ನೀಡಿದ ಕೂಲಿಯ ಮೊತ್ತ ಮುಂತಾದ ಮಾಹಿತಿಗಳಿಗಾಗಿ ಅರಣ್ಯ ಇಲಾಖೆಯನ್ನು ಕೇಳಿತಾದರೂ ಯಾವ ವಿವರಗಳೂ ಲಭಿಸಲಿಲ್ಲ. ದಾಖಲೆಗಳನ್ನೂ ನೋಡಲಾಗಲಿಲ್ಲ. ಕುಮಾರನಹಳ್ಳಿಯ ಕಥೆಯೂ ಇದೇ. 1997-98ರಲ್ಲಿ 104 ಹೆಕ್ಟೇರ್ ಪ್ರದೇಶದಲ್ಲಿನ ನೆಡುತೋಪಿನ ನಿರ್ಮಾಣ, ನಿರ್ವಹಣೆಗಳಿಗಾಗಿ ಒಟ್ಟು 20.85 ಲಕ್ಷ ರೂ.ಗಳ ಅಂದಾಜನ್ನು ಕೊಡಲಾಗಿತ್ತು. ಇದರ ಬಗೆಗೂ ವಿವರಗಳು ಲಭಿಸಲಿಲ್ಲ. ಹನಿಯಾ, ಉದ್ದೂರು, ಮುಕುಂದೂರುಗಳ ಕಿರು ಯೋಜನೆಗಳಲ್ಲಿ ನೆಡುತೋಪು ಬೆಳೆಸುವ ಪ್ರಸ್ತಾಪವಿದ್ದರೂ ಅದರ ಖರ್ಚುವೆಚ್ಚದ ಅಂದಾಜಿನ ಬಗ್ಗೆ ಯಾವ ಅಂಕಿ ಅಂಶಗಳನ್ನೂ ನೀಡಲಾಗಿಲ್ಲ. ಈ ಮೂರು ಅರಣ್ಯ ಸಮಿತಿಗಳು ಯಾವ ಹಂತದಲ್ಲೂ ಅರಣ್ಯ ಇಲಾಖೆಯಿಂದ ಹಣಕಾಸಿನ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನಾಗಲೀ, ದಾಖಲೆಗಳನ್ನಾಗಲೀ ಕೇಳಿಲ್ಲ.

ನಿಯಮಗಳು

ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಕ್ಷೇತ್ರಕಾರ್ಯದ ಐದೂ ಗ್ರಾಮ ಅರಣ್ಯ ಸಮಿತಿಗಳು ಅರಣ್ಯ ಹಾಗೂ ನೆಡುತೋಪುಗಳ ಸಂರಕ್ಷಣೆ, ಅರಣ್ಯ ಸಂಪನ್ಮೂಲಗಳ ಮಿತಬಳಕೆ ಮುಂತಾದವುಗಳಿಗೆ ಸಂಬಂಧಪಟ್ಟಂತೆ ನಿಯಮಗಳನ್ನು ರೂಪಿಸಿವೆ. ಮರಗಿಡಗಳನ್ನು ಕಡಿಯುವುದು, ಕಳ್ಳಸಾಗಣೆ, ಜಾನುವಾರುಗಳನ್ನು ಮೇಯಿಸುವುದು, ಬೆಂಕಿ ಒತ್ತುವರಿಗಳನ್ನು ತಡೆಯಲು ಹಾಗೂ ಅರಣ್ಯ ಉತ್ಪನ್ನಗಳ ಸಂಗ್ರಹಣೆಯನ್ನು ನಿಯಂತ್ರಿಸಲು ರೂಪಿಸಿರುವ ನಿಯಮಗಳು ಸರಳವಾಗಿವೆ. ಈ ನಿಯಮಗಳನ್ನು ಸುಲಭವಾಗಿ ಅನುಷ್ಠಾನಕ್ಕೆ ತರಬಹುದಾದರೂ, ಅದರ ನಿಗಾವಣೆ ಮಾಡಲು ವಿಶೇಷ ಶ್ರಮ ಅಗತ್ಯವಾಗುತ್ತದೆ. ಹಳ್ಳಿಗೆ ಹತ್ತಿರವಾಗಿರುವ ಅರಣ್ಯ ಮತ್ತು ನೆಡುತೋಪುಗಳಲ್ಲಿ, ಅದರಲ್ಲೂ ಹಳ್ಳಿಯಿಂದಲೇ ಎದ್ದು ಕಾಣುವಂತಹ ಭಾಗಗಳಲ್ಲಿ ನಿಗಾವಣೆ ಸುಲಭ. ಕುಮಾರನಹಳ್ಳಿ, ಮರಡವಳ್ಳಿ, ಉದ್ದೂರುಗಳಲ್ಲಿ ನೆಡುತೋಪುಗಳು ಹಳ್ಳಿಯಿಂದ ದೂರವಿದೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಗ್ರಾಮ ಅರಣ್ಯ ಸಮಿತಿಯ ಸದಸ್ಯರೇ ಪಾಳಿಯಲ್ಲಿ ಕಾವಲು ಕಾಯುತ್ತಾರೆ.

ಉದ್ದೂರಿನಲ್ಲಿ ನೆಡುತೋಪನ್ನು ಕಾಯಲು ಕಾವಲುಗಾರನನ್ನು ಅರಣ್ಯ ಸಮಿತಿ ನೇಮಿಸಿದೆ. ಹನಿಯಾದಲ್ಲಿ ಬೇಲಿ ಹಾಕಲಾಗಿದೆ.

ನಿಯಮಗಳು ಎಷ್ಟೇ ಸರಳವಾಗಿದ್ದರೂ, ಎಷ್ಟೇ ಸುಲಭವಾಗಿ ಅನುಷ್ಠಾನಗೊಳಿಸುವಂತಿದ್ದರೂ ಗ್ರಾಮ ಅರಣ್ಯ ಸಮಿತಿಯ ಸದಸ್ಯರೆಲ್ಲರೂ ಯೋಜನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಹೊರತು ನಿಯಮಪಾಲನೆ ಅಸಾಧ್ಯವೆಂಬ ವಿಷಯವನ್ನು, ನಾವು ಈಗಾಗಲೇ ಚರ್ಚಿಸಿರುವ 'ನಿಯಮಪಾಲನೆ-ನಿಯಮ ಉಲ್ಲಂಘನೆ'ಯ ಪ್ರಕರಣಗಳಲ್ಲಿ ನೋಡಿದ್ದೇವೆ.

ಅರಿವು

ಯೋಜನೆಯ ಬಗೆಗಿನ ಅರಿವು, ಅರಣ್ಯ ಸಂಪನ್ಮೂಲಗಳ ಸಂರಕ್ಷಣೆ, ಬಳಕೆಗೆ ಸಂಬಂಧಿಸಿದ ನಿಯಮಗಳು, ಅರಣ್ಯ ಸಮಿತಿಗಳ ಕಾರ್ಯವಿಧಾನ, ಸದಸ್ಯರ ಜವಾಬ್ದಾರಿ, ಕರ್ತವ್ಯಗಳು ಮುಂತಾದವುಗಳ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ ಸ್ಥಳೀಯ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆಯೆಂಬ ಅಭಿಪ್ರಾಯವಿದೆ. ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿ ಈ ವಿಷಯಗಳ ಬಗ್ಗೆ ಅರಿವಿರುವವರ ಪ್ರಮಾಣವನ್ನು ನಾವೂ ಈಗಾಗಲೇ ಪರಿಶೀಲಿಸಿ, ಚರ್ಚಿಸಿದ್ದೇವೆ(ಕೋಷ್ಟಕ 1).

ಪ್ರವರ್ತನಶಕ್ತಿ ಮತ್ತು ಸ್ವಾವಲಂಬನೆ

ಅರಣ್ಯ ಸಂರಕ್ಷಣೆಯ ಅಗತ್ಯ ಮತ್ತು ಮಹತ್ವವನ್ನು ಮನಗಂಡು, ತಾವಾಗಿಯೇ ಅರಣ್ಯ ಇಲಾಖೆಯನ್ನು ಸಂಪರ್ಕಿಸಿ, ಜಂಟೀ ಅರಣ್ಯ ಯೋಜನೆಯನ್ನು ತಮ್ಮ ಹಳ್ಳಿಗೆ ತಂದ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳ ಸ್ಥಳೀಯ ಸಮುದಾಯದಲ್ಲಿ ಈ ಪ್ರವರ್ತನ ಶಕ್ತಿ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಹನಿಯಾದಲ್ಲಿ ಪ್ರಾರಂಭದಲ್ಲಿ ಕಂಡುಬಂದ ಈ ಕ್ರಿಯಾಪಟುತ್ವ ಬಹಳ ಕಾಲ ಉಳಿಯಲಿಲ್ಲವೆಂಬುದನ್ನೂ, ಅದಕ್ಕೆ ಕಾರಣಗಳನ್ನೂ ನಾವು ಈಗಾಗಲೇ ಪರಿಶೀಲಿಸಿದ್ದೇವೆ. ಪ್ರವರ್ತನ ಶಕ್ತಿಗೆ ಸಂಬಂಧಿಸಿದಂತೆ ಉದ್ದೂರು, ಮುಕುಂದೂರುಗಳು ಇನ್ನೊಂದು ತುದಿಯಲ್ಲಿವೆ. ಬಡವರು, ಭೂರಹಿತರು, ಮಹಿಳೆಯರನ್ನು ಯೋಜನೆಯಲ್ಲಿ ಒಳಗೊಳ್ಳಲು ಹಾಗೂ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನಗಳಲ್ಲಿ, ನಾವೂ ಈಗಾಗಲೇ ನೋಡಿರುವಂತೆ, ಕುಮಾರನಹಳ್ಳಿ ಮತ್ತು ಮರಡವಳ್ಳಿಗಳ ಗ್ರಾಮ ಅರಣ್ಯ ಸಮಿತಿಗಳು ಉತ್ಸಾಹದಿಂದ ಕೆಲಸ ಮಾಡಿವೆ. ತರಬೇತಿ, ಕೌಶಲವರ್ಧನೆ, ಮಾಹಿತಿ ನೀಡಿಕೆ, ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಶೈಕ್ಷಣಿಕ ಪ್ರವಾಸ, ಕಿರು ಅರಣ್ಯ ಉತ್ಪನ್ನಗಳ ಮಾರಾಟದ ವ್ಯವಸ್ಥೆ ಮುಂತಾದ ಸಂಬಂಧಿತ ಚಟುವಟಿಕೆಗಳಲ್ಲಿ ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿ ಉತ್ತಮವಾದ ಕಾರ್ಯಶೀಲತೆಯನ್ನು ತೋರಿದೆ. ಈ ಮಾತು ಮರಡವಳ್ಳಿಗೂ ಅನ್ವಯಿಸುತ್ತದೆ. ಆದರೆ ಉಳಿದ ಮೂರು ಗ್ರಾಮ ಅರಣ್ಯ ಸಮಿತಿಗಳ ಬಗ್ಗೆ ಪ್ರವರ್ತನ ಶಕ್ತಿಗೆ ಸಂಬಂಧಿಸಿದಂತೆ ಹೇಳುವಂತಹದೇನೂ ಇಲ್ಲ.

ಗ್ರಾಮ ಅರಣ್ಯ ಸಮಿತಿ ಸ್ವತಂತ್ರವಾಗಿ ಕೆಲಸ ಮಾಡಬೇಕಾದ ಸಂಸ್ಥೆ. ಅದು ಅರಣ್ಯ ಇಲಾಖೆಯ ಮೇಲಾಗಲೀ, ಸರ್ಕಾರೇತರ ಸಂಸ್ಥೆಗಳ ಮೇಲಾಗಲೀ ಅತಿ ಹೆಚ್ಚಾಗಿ ಅವಲಂಬಿತವಾಗಬಾರದು. ಪ್ರಾರಂಭದಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ಮಾರ್ಗದರ್ಶನ ಪಡೆದರೂ ಕಾಲಕ್ರಮೇಣ ತನ್ನ ಸ್ವಂತ ಅಸ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಇದು ಕಾಣುವುದಿಲ್ಲ. ಈ ಎರಡೂ ಗ್ರಾಮ ಅರಣ್ಯ ಸಮಿತಿಗಳು ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ಮೇಲೆ ಅತಿ ಹೆಚ್ಚಾಗಿ ಅವಲಂಬಿತವಾಗಿವೆ. ಗ್ರಾಮ ಅರಣ್ಯ ಸಮಿತಿ ಕೈಗೊಂಡ ಎಲ್ಲ ಸಂರಕ್ಷಣಾ ಹಾಗೂ ಮಿತಬಳಕೆಯ ಕ್ರಮಗಳಲ್ಲಿ, ಯೋಜನೆಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಲ್ಲಿ ಸರ್ಕಾರೇತರ ಸಂಸ್ಥೆಗಳ ಮುಖ್ಯ ಪಾತ್ರವನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದರಿಂದಾಗಿ ಈ ಎರಡೂ ಹಳ್ಳಿಗಳಲ್ಲಿ, ಸರ್ಕಾರೇತರ ಸಂಸ್ಥೆಗಳ ಸಹಕಾರವಿಲ್ಲದೇ, ತಾವಾಗಿಯೇ ಚಿಂತಿಸಿ, ಸಮಾಲೋಚಿಸಿ, ನಿರ್ಧಾರ ಕೈಗೊಳ್ಳುವ ಪ್ರಬುದ್ಧತೆ ಗ್ರಾಮ ಅರಣ್ಯ ಸಮಿತಿಗಳಲ್ಲಿ ಕಾಣುವುದಿಲ್ಲ. ಹನಿಯಾದ ಗ್ರಾಮ ಅರಣ್ಯ ಸಮಿತಿ, ಸರ್ಕಾರೇತರ ಸಂಸ್ಥೆಯ ಮೇಲೂ ಅವಲಂಬಿತವಾಗಿಲ್ಲ, ಅರಣ್ಯ ಇಲಾಖೆಯ ಮೇಲೂ ಅವಲಂಬಿತವಾಗಿಲ್ಲ; ಯಾವ ಕೆಲಸವನ್ನೂ ಮಾಡುತ್ತಿಲ್ಲ. ಉದ್ದೂರು, ಮುಕುಂದೂರುಗಳಲ್ಲಿ ಸರ್ಕಾರೇತರ ಸಂಸ್ಥೆಗಳಿಲ್ಲ. ಈ ಎರಡೂ ಹಳ್ಳಿಗಳಲ್ಲಿ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ಅಧ್ಯಕ್ಷರ ನಡುವೆ ಪರಸ್ಪರ ಅವಲಂಬನೆಯಿದೆ. ಆದರೆ ಈ ಅವಲಂಬನೆಯಿಂದ ಸ್ಥಳೀಯ ಸಮುದಾಯಕ್ಕೆ ಯಾವ ಪ್ರಯೋಜನವೂ ಆಗಿಲ್ಲ.

ಅನುಭೋಗದ ಅವಧಿ

ಜಂಟೀ ಅರಣ್ಯ ಯೋಜನೆಯ ಚಟುವಟಿಕೆಗಳು ನಡೆಯುವುದು, ಅರಣ್ಯ ಇಲಾಖೆಗೆ ಸೇರಿದ ಅವನತಿ ಹೊಂದಿದ ಭೂಮಿಯಲ್ಲಿ. ಯೋಜನೆ ಪ್ರಾರಂಭವಾದ ನಂತರವೂ ಈ ಭೂಮಿಯ ಒಡೆತನ ಅರಣ್ಯ ಇಲಾಖೆಯಲ್ಲಿಯೇ ಇರುತ್ತದೆ. ಈ ಭೂಮಿಯಲ್ಲಿ, ಸಮುದಾಯದ ಸಹಭಾಗಿತ್ವದಿಂದ ಸಂರಕ್ಷಣೆ ಮತ್ತು ಅಭಿವೃದ್ಧಿಯ ಕೆಲಸಗಳು ನಡೆಯುತ್ತವೆ. ಇದರಿಂದ ದೊರೆಯುವ ಪ್ರಯೋಜನಗಳಲ್ಲಿ ತಮಗೂ ಸಮನಾದ ಪಾಲಿದೆ ಎಂಬ ಕಾರಣದಿಂದ ಇಲಾಖೆಯ ಒಡೆತನದ ಭೂಮಿಯನ್ನು ಸಮುದಾಯದ ಸದಸ್ಯರು ರಕ್ಷಿಸುತ್ತಾರೆ. ಈ ಭೂಮಿಯಿಂದ, ಅದರಲ್ಲಿ ನಡೆಯುವ ಚಟುವಟಿಕೆಗಳಿಂದ ತಮಗೂ ಪ್ರಯೋಜನವಿದೆ, ಪಾಲಿದೆ ಎಂಬ ವಿಷಯ ಸ್ಪಷ್ಟವಾಗಿ ತಿಳಿದಿದ್ದಾಗ ಮಾತ್ರ ಭೂಮಿಯ ಮೇಲಿನ ಒಡೆತನದ ಭಾವನೆ ಸಮುದಾಯಕ್ಕೂ ಬರುತ್ತದೆ. ಇಂತಹ ಭಾವನೆ ಇಲ್ಲವಾದ ಕಡೆಗಳಲ್ಲಿ ಸಮುದಾಯದ ಸಹಭಾಗಿತ್ವವಾಗಲೀ, ಸಂರಕ್ಷಣೆಯಾಗಲೀ ಸಾಧ್ಯವಿಲ್ಲ.

ಸಮುದಾಯಗಳಿಗೆ ಅರಣ್ಯ ಸಂಪನ್ಮೂಲವನ್ನು ಸಂರಕ್ಷಿಸಿ, ನಿರ್ವಹಿಸಲು ಆತ್ಮವಿಶ್ವಾಸ ಹಾಗೂ ಅಧಿಕಾರಗಳು ಬೇಕು. ಅರಣ್ಯ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಸಮುದಾಯದ ಹಕ್ಕು,

ಸವಲತ್ತುಗಳನ್ನು ಅರಣ್ಯ ಇಲಾಖೆ ಸ್ಪಷ್ಟಪಡಿಸಬೇಕು. ಜಂಟೀ ಅರಣ್ಯ ಯೋಜನೆಯನ್ನು ಅನುಷ್ಠಾನಗೊಳಿಸುವಾಗ, ಆಯಾ ಪ್ರದೇಶದಲ್ಲಿ (ಉದಾ: ಮರಡವಳ್ಳಿ ಮತ್ತು ಹನಿಯಾ) ತಲತಲಾಂತರಗಳಿಂದ ಸ್ಥಳೀಯ ಜನ ಅನುಭವಿಸಿಕೊಂಡುಬಂದಿರುವ ಹಕ್ಕು, ಸವಲತ್ತುಗಳು ಏನಾಗುತ್ತದೆಂಬುದನ್ನು ಯೋಜನೆ ಪ್ರಾರಂಭಿಸುವ ಮುಂಚೆಯೇ ಸ್ಪಷ್ಟಪಡಿಸಬೇಕು.

ಕುಮಾರನಹಳ್ಳಿಯ ಜನ ಉರುವಲು, ಬಾಧೆಹುಲ್ಲು, ಬೀಡಿ ಎಲೆಗಳನ್ನು ಜತ್ತಿನಕಟ್ಟೆ ಮತ್ತು ಅಡವಿಮಲ್ಲಾಪುರ ಅರಣ್ಯಗಳಿಂದ ಸಂಗ್ರಹಿಸುತ್ತಾರೆ. ಆದರೆ ಇದೇ ಅರಣ್ಯ ಪ್ರದೇಶಕ್ಕೆ ಕಂಬಾಟರಹಳ್ಳಿ, ಅಡವಿಹಳ್ಳಿ, ನಿಚ್ಚವನಹಳ್ಳಿಗಳ ಜನರೂ ಬರುತ್ತಾರೆ. ಇದರಿಂದ ಆಗಾಗ ತಿಕ್ಕಾಟ, ಘರ್ಷಣೆಗಳು ಸಂಭವಿಸುತ್ತವೆ. ಅರಣ್ಯ ಇಲಾಖೆ, ಗ್ರಾಮ ಅರಣ್ಯ ಸಮಿತಿಗೆ ಸ್ಥಳೀಯ ಅರಣ್ಯದ ಸಂರಕ್ಷಣೆಯ ಜವಾಬ್ದಾರಿಯನ್ನು ವಹಿಸಿದಾಗ, ಅರಣ್ಯ ಸಮಿತಿಯ "ಹಕ್ಕು ಹಾಗೂ ಸರಹದ್ದನ್ನು ನಿಗದಿಪಡಿಸಿ ಜವಾಬ್ದಾರಿಯನ್ನು ಖಚಿತಪಡಿಸಬೇಕಾಗುತ್ತದೆ"(ರೈಟ್ಸ್ ಅಂಡ್ ಟೆರಿಟೋರಿಯಲ್ ರೆಸ್ಪಾನ್ಸಿಬಿಲಿಟಿ). ಕ್ಷೇತ್ರಕಾರ್ಯದ ಯಾವ ಹಳ್ಳಿಯಲ್ಲಿಯೂ ಇದು ಕಾಣುವುದಿಲ್ಲ.

ಜಂಟೀ ಅರಣ್ಯ ಯೋಜನೆಯಿಂದ ದೊರೆಯುವ ಪ್ರಯೋಜನಗಳ ಹಂಚಿಕೆಯನ್ನು ಗಮನಿಸೋಣ. ಕರ್ನಾಟಕ ಸರ್ಕಾರದ 12.4.1993ರ ಆದೇಶ ಅಂತಿಮ ಕೊಯ್ಲಿನ ಉತ್ಪನ್ನಗಳು ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ 50:50 ಪ್ರಮಾಣದಲ್ಲಿ ಹಂಚಿಕೆಯಾಗುತ್ತವೆ" ಎನ್ನುತ್ತದೆ. ಆದರೆ ಈ ಅಂತಿಮ ಕೊಯ್ಲು ಯಾವಾಗ ನಡೆಯುತ್ತದೆ ಎಂಬುದನ್ನು ಸಂಪೂರ್ಣವಾಗಿ ಇಲಾಖೆಯೇ ನಿರ್ಧರಿಸುತ್ತದೆ. ಗ್ರಾಮ ಅರಣ್ಯ ಸಮಿತಿಗಳಿಗೆ ಈ ನಿರ್ಧಾರದಲ್ಲಿ ಭಾಗವಹಿಸುವ ಸ್ವಾತಂತ್ರ್ಯವೂ ಇಲ್ಲ, ಆ ಬಗ್ಗೆ ಮಾಹಿತಿಯೂ ಇಲ್ಲ. ಕ್ಷೇತ್ರಕಾರ್ಯದ ಕುಮಾರನಹಳ್ಳಿಯಲ್ಲಿ, ಜಾಜಿಕಲ್ಲುಗುಡ್ಡದಲ್ಲಿ 20ಹೆಕ್ಟೇರುಗಳ ನೀಲಗಿರಿ ನೆಡುತೋಪಿದೆ. ಇದು ಪ್ರಾರಂಭವಾದದ್ದು 1994-95ರಲ್ಲಿ. ಇದರ ಅಂತಿಮ ಕೊಯ್ಲು ಯಾವಾಗ ಎಂಬ ಪ್ರಶ್ನೆಯನ್ನು ಇಲಾಖೆ ಉತ್ತರಿಸುವುದಿಲ್ಲ. ಉದ್ದೂರಿನಲ್ಲಿ 1982ರಲ್ಲಿ ಬೆಳೆಸಲು ಪ್ರಾರಂಭಿಸಿದ 52ಹೆಕ್ಟೇರ್ ವಿಸ್ತೀರ್ಣದ ನೀಲಗಿರಿ ನೆಡುತೋಪಿದೆ. ಇದರ ಅಂತಿಮ ಕೊಯ್ಲಿಗಾಗಿ ಅರಣ್ಯ ಸಮಿತಿ ಇಲಾಖೆಯನ್ನು ಒತ್ತಾಯಿಸುತ್ತಿದೆ. ಆದರೆ ಅರಣ್ಯ ಇಲಾಖೆ ಈ ಬಗ್ಗೆ ಗ್ರಾಮ ಅರಣ್ಯ ಸಮಿತಿಗೆ ಯಾವ ಪ್ರತಿಕ್ರಿಯೆಯನ್ನೂ ತೋರಿಲ್ಲ. "ನೆಡುತೋಪನ್ನು ಅಂತಿಮ ಕೊಯ್ಲಿಗೆ ಒಳಪಡಿಸಿದ ನಂತರ, ಅಷ್ಟೂ ಪ್ರದೇಶವನ್ನು ಉದ್ದೂರಿನ ಜನ ಒತ್ತುವರಿ ಮಾಡಿಕೊಳ್ಳುತ್ತಾರೆ. ಆ ಭೂಮಿ ಇಲಾಖೆಯ ಕೈ ತಪ್ಪುತ್ತದೆ. ಆ ಸಮಸ್ಯೆಯೇ ಬೇಡ, ಆದಷ್ಟು ಸಮಯ ಅಂತಿಮ ಕೊಯ್ಲನ್ನು ಮುಂದೂಡುತ್ತೇವೆ"[4] ಎಂಬುದು ಇಲಾಖೆ ತಳೆದ ನಿಲುವು.

ಒಟ್ಟಾರೆಯಾಗಿ ಜಂಟೀ ಅರಣ್ಯ ಯೋಜನೆ ಜಾರಿಯಲ್ಲಿರುವ ಕ್ಷೇತ್ರಕಾರ್ಯದ ಎಲ್ಲ ಹಳ್ಳಿಗಳಲ್ಲಿ ಅಂತಿಮ ಕಟಾವಿನಿಂದ ಯಾವಾಗ ಪ್ರಯೋಜನಗಳು ದೊರೆಯುತ್ತವೆ, ಈ ಪ್ರಯೋಜನಗಳಿಗಾಗಿ

ಎಷ್ಟು ಕಾಲಕಾಯಬೇಕು ಎಂಬುದು ಉತ್ತರ ದೊರೆಯದ ಪ್ರಶ್ನೆಯಾಗಿಯೇ ಉಳಿದಿದೆ. ಇಂತಹ ಅನಿಶ್ಚಿತತೆ, ಸಮುದಾಯದ ಸಹಭಾಗಿತ್ವವನ್ನು ಪ್ರೇರೇಪಿಸುವುದಿಲ್ಲ.

ಇದೇ ರೀತಿಯ ಅನಿಶ್ಚತತೆಯ ಮತ್ತೊಂದು ಮುಖವನ್ನು ನಾವು ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿರುವ ಬಾಳೆಗೆರೆಯ ಔಷಧ ವನದಲ್ಲಿ ಕಾಣಬಹುದು. ಬಾಳೆಗೆರೆಯಲ್ಲಿ ಲಿಂಗನಮಕ್ಕಿ ಜಲಾಶಯದ ಹಿನ್ನೀರಿನ ಅಂಚಿನಲ್ಲಿ 50 ಹೆಕ್ಟೇರ್ ಪ್ರದೇಶವನ್ನು ಅರಣ್ಯ ಇಲಾಖೆ ಜಂಟೀ ಅರಣ್ಯ ಯೋಜನೆಯಡಿಯಲ್ಲಿ ತಂದು, ಔಷಧ ವನ ಬೆಳೆಸಲು ಗ್ರಾಮ ಅರಣ್ಯ ಸಮಿತಿಗೆ ನೀಡಿತು. ಈ ಪ್ರದೇಶದಲ್ಲಿ ಇಂದು 200 ಸಸ್ಯ ಪ್ರಭೇದಗಳಿರುವ ಅತ್ಯುತ್ತಮ ಔಷಧ ಸಸ್ಯ ವನವಿದೆ. ಇದನ್ನು ಸಂಪೂರ್ಣವಾಗಿ ಮರಡವಳ್ಳಿಯ ಭೂರಹಿತರೇ ನಿರ್ವಹಿಸುತ್ತಿದ್ದು, ಔಷಧ ಸಸ್ಯಗಳ ವಿವಿಧ ಭಾಗಗಳನ್ನು ಸಂಸ್ಕರಿಸಿ, ಮೌಲ್ಯವರ್ಧಿಸಿ, ವ್ಯವಸ್ಥಿತವಾಗಿ ಮಾರಾಟ ಮಾಡುವ ಪ್ರಯತ್ನಗಳು ನಡೆದಿವೆ. ಈ ಔಷಧವನ, ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಯ ಹೆಮ್ಮೆಯ ಆಸ್ತಿ. ಆದರೆ ಸಾಗರದ ಮೂಲಿಕಾಭಿವೃದ್ಧಿ ಪ್ರತಿಷ್ಠಾನ, ಇದೇ 50 ಹೆಕ್ಟೇರ್ ಭೂಮಿಯನ್ನು ತನಗೆ ನೀಡಬೇಕೆಂದು ಸರ್ಕಾರಕ್ಕೆ ಅರ್ಜಿಸಲ್ಲಿಸಿದ್ದು, ಕಂದಾಯ ಇಲಾಖೆಯ ಸಿಬ್ಬಂದಿ ಈ ಜಾಗಕ್ಕೆ ಬಂದು ಭೂಮಿ ಅಳೆದು, ಸಮೀಕ್ಷೆ ಮಾಡಿದ್ದಾರೆ. ಬಾಳೆಗೆರೆಯ ಈ ಭೂಮಿ ಕಂದಾಯ ಇಲಾಖೆಗೆ ಸೇರಿದ್ದು, ಅದರ ಮೇಲೆ ಅರಣ್ಯ ಇಲಾಖೆಗೆ ಸಂಪೂರ್ಣ ಹಕ್ಕು ಇಲ್ಲವೆಂಬ ವಿಷಯ ಇದೀಗ ತಿಳಿದುಬಂದಿದೆ. ತನಗೆ ಸೇರಿರದ, ತನ್ನ ಹಕ್ಕು ಇಲ್ಲದ ಭೂಮಿಯನ್ನು ಜಂಟೀ ಅರಣ್ಯ ಯೋಜನೆಯಡಿಯಲ್ಲಿ ತಂದು, ಅದರಲ್ಲಿ ಔಷಧವನ ಬೆಳೆಸುವಂತೆ ಅರಣ್ಯ ಸಮಿತಿಯನ್ನು ಪ್ರೋತ್ಸಾಹಿಸಿದ ಇಲಾಖೆಯ ಬಗ್ಗೆ ಅರಣ್ಯ ಸಮಿತಿಯ ಸದಸ್ಯರಿಗೆ ಸ್ವಲ್ಪ ಅಸಮಧಾನವಿದ್ದರೂ, ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯ ಸಮತಿಗಳೆರಡೂ ಸೇರಿ ಈ ಭೂಮಿ ಕೈಬಿಟ್ಟು ಹೋಗದಂತೆ ಹೋರಾಟ ನಡೆಸಿವೆ. ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿ, ಈ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟಿನಲ್ಲಿ ಕೇವಿಯಟ್ ಅರ್ಜಿಯನ್ನೂ ಸಲ್ಲಿಸಿದೆ. ಈ ಘಟನೆಯಿಂದ ಸಾಕಷ್ಟು ಚಿಂತಿತವಾಗಿರುವ ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿ ಅನುಭೋಗದ ಹಕ್ಕು, ಅವಧಿಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಪ್ರಶ್ನೆಗಳನ್ನೆತ್ತಿದೆ.

- ಜಂಟೀ ಅರಣ್ಯ ಯೋಜನೆಯಡಿಯಲ್ಲಿ ತಂದಿರುವ ಹಾಗೂ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿರುವ ಭೂಮಿ ಯಾವುದೇ ಹಂತದಲ್ಲಿ ಬೇರೆಯವರಿಗೆ ಪರಭಾರೆ ಆಗುವುದಿಲ್ಲ ಎಂಬ ಖಾತರಿಯಿದೆಯೇ?

- ಉಪ ಅರಣ್ಯ ಸಂರಕ್ಷಣಾಧಿಕಾರಿ, ಗ್ರಾಮ ಅರಣ್ಯ ಸಮಿತಿಗೆ ನೋಟೀಸು ನೀಡಿ ವಿಚಾರಣೆ ನಡೆಸಿದ ನಂತರ ನಿರ್ವಹಣಾ ಸಮಿತಿಯನ್ನು ರದ್ದು ಮಾಡಿ, ಸಮಿತಿಯನ್ನು ವಿಸರ್ಜಿಸಬಹುದು. ಈ ರೀತಿ ಆದ ಸಂದರ್ಭದಲ್ಲಿ ಅಲ್ಲಿಯವರೆಗೆ ಸದಸ್ಯರು ಪಟ್ಟ ಶ್ರಮಕ್ಕೆ ಪ್ರತಿಫಲವೇನು?

- ನೆಡುತೋಪುಗಳು ಮಾತ್ರ ಇರುವಂತಹ ಹಳ್ಳಿಗಳಲ್ಲಿ(ಉದ್ದೂರು, ಮುಕುಂದೂರು), ಅರಣ್ಯ ಇಲಾಖೆಯೊಡನೆ ಸ್ಥಳೀಯ ಸಮುದಾಯದ ಸಹಭಾಗಿತ್ವ, ನೆಡುತೋಪುಗಳು ಅಂತಿಮ ಕಟಾವಿಗೆ ಒಳಗಾಗುವವರೆಗೆ ಮಾತ್ರ. ಆ ನಂತರ ಗ್ರಾಮ ಅರಣ್ಯ ಸಮಿತಿ ಸ್ಥಾನಮಾನಗಳೇನು?
- ಸೌಹಾರ್ದ ಒಡಂಬಡಿಕೆ 10ವರ್ಷಗಳ ಕಾಲ ಊರ್ಜಿತದಲ್ಲಿರುತ್ತದೆ. ಆದರೆ ಈ ಒಪ್ಪಂದದ ಜೀವಮಾನದಲ್ಲಿ ನೆಡುತೋಪು ಅಂತಿಮ ಕಟಾವಿಗೆ ಬರದಿದ್ದರೆ(ಕಟಾವು ಮಾಡುವ ನಿರ್ಧಾರ ಸಂಪೂರ್ಣವಾಗಿ ಅರಣ್ಯ ಇಲಾಖೆಯದೇ) ಉತ್ಪನ್ನಗಳ ಹಂಚಿಕೆ ಏನಾಗುತ್ತದೆ?

ಈ ಯಾವ ಪ್ರಶ್ನೆಗಳಿಗೂ ಸರ್ಕಾರೀ ಆದೇಶಗಳಲ್ಲಾಗಲೀ, ಅರಣ್ಯ ಇಲಾಖೆಯ ಸುತ್ತೋಲೆಗಳಲ್ಲಾಗಲೀ, ಹಿರಿಯ ಅಧಿಕಾರಿಗಳಲ್ಲಾಗಲೀ ಖಚಿತವಾದ, ವಿಶ್ವಾಸರ್ಹವಾದ ಉತ್ತರಗಳಿಲ್ಲ. ಈ ಅನಿಶ್ಚಿತತೆಗಳೇ ಅಪನಂಬಿಕೆಗಳಿಗೂ ಕಾರಣವಾಗಿರುವ ದೃಷ್ಟಾಂತಗಳು ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಕಂಡುಬರುತ್ತವೆ. ಯೋಜನೆಯಿಂದ ಯಾವಾಗ ಪ್ರಯೋಜನಗಳು ದೊರೆಯುತ್ತವೆ, ಯಾವ ಅವಧಿಯವರೆಗೆ ದೊರೆಯುತ್ತವೆ, ದೊರೆಯುತ್ತದೆಂಬ ಖಾತರಿಯೇನು ಮುಂತಾದ ಖಚಿತ ಉತ್ತರವಿಲ್ಲದ ಅನುಭೋಗದ ಪ್ರಶ್ನೆಗಳು, ಸಮುದಾಯದ ಸಹಭಾಗಿತ್ವದ ಮೇಲೆ, ಸ್ಥಳೀಯ ಸಂಸ್ಥೆಗಳ ಕಾರ್ಯಕ್ಷಮತೆಯ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡುತ್ತವೆ.

ಅಗತ್ಯಗಳ ಪೂರೈಕೆಯ ಬಗೆಗೆ ತೃಪ್ತಿ

ಸ್ಥಳೀಯ ಸಮುದಾಯದ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸುವುದು ಜಂಟೀ ಅರಣ್ಯ ಯೋಜನೆಯ ಮುಖ್ಯ ಉದ್ದೇಶಗಳಲ್ಲೊಂದು. ಈ ಬೇಡಿಕೆಗಳು ಪೂರೈಕೆಯಾಗಿ, ಜನರ ನಿರೀಕ್ಷೆಗಳು ಈಡೇರಿದರೆ, ಯೋಜನೆಯಲ್ಲಿ ಜನರ ನಂಬಿಕೆ ಹೆಚ್ಚಾಗಿ, ಹೆಚ್ಚಿನ ಜನ ಹೆಚ್ಚು ಸಕ್ರಿಯವಾಗಿ ಯೋಜನೆಯಲ್ಲಿ ಭಾಗವಹಿಸುತ್ತಾರೆಂಬುದು ಸಾಮಾನ್ಯವಾದ ಗ್ರಹಿಸಿಕೆ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಎಷ್ಟರಮಟ್ಟಿಗೆ ಈ ಬೇಡಿಕೆ ಈಡೇರಿದೆಯೆಂಬುದು ನಮ್ಮ ಮುಂದಿರುವ ಪ್ರಶ್ನೆ.

ಕುಮಾರನಹಳ್ಳಿಯಲ್ಲಿ 31.12.2002ರಂತೆ ಜಂಟೀ ಅರಣ್ಯ ಯೋಜನೆ ಒಂಭತ್ತು ವರ್ಷಗಳಿಂದ ಅನುಷ್ಠಾನದಲ್ಲಿದ್ದರೆ, ಮರಡವಳ್ಳಿಯಲ್ಲಿ ನಾಲ್ಕು ವರ್ಷಗಳಿಂದಿದೆ. ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಸರಿಸುಮಾರು 5 ವರ್ಷಗಳಿಂದ ಯೋಜನೆ ಜಾರಿಯಲ್ಲಿದೆ. ಕುಮಾರನಹಳ್ಳಿಯನ್ನು ಬಿಟ್ಟರೆ, ಉಳಿದ ಸ್ಥಳಗಳಲ್ಲಿ ಯೋಜನೆಯಿಂದ ಸ್ಥಳೀಯ ಸಮುದಾಯದ ಅಗತ್ಯಗಳಿಗೆ ಸಂಬಂಧಿಸಿದಂತೆ ಖಚಿತ ಫಲಿತಾಂಶಗಳನ್ನು ನಿರೀಕ್ಷಿಸುವುದು ಸ್ವಲ್ಪಮಟ್ಟಿಗೆ ಆತುರದ ಕ್ರಮವೆನ್ನಿಸಬಹುದಾದರೂ, ಈ ದಿಕ್ಕಿನಲ್ಲಿ ನಡೆದಿರುವ ಪ್ರಯತ್ನಗಳು ಭವಿಷ್ಯದ ಮೇಲೆ ಬೆಳಕು ಚೆಲ್ಲುತ್ತವೆ. ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವದ ಮೌಲ್ಯ ನಿರ್ಧರಣೆಯ ಸಂದರ್ಭದಲ್ಲಿ ಗಮನಿಸಿದ ವಿಷಯಗಳು, ಸಮುದಾಯದ ಅಗತ್ಯಗಳ ಪೂರೈಕೆಗೆ ಸಂಬಂಧಿಸಿದಂತೆ ಈ ಕೆಳಕಂಡ ಚಿತ್ರವನ್ನು ಒದಗಿಸುತ್ತವೆ.

- ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳು ಜೊತೆಗೂಡಿ, ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯ ಮೂಲಕವಾಗಿ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಜೀವ ದ್ರವ್ಯಗಳ ವಾರ್ಷಿಕ ಬೇಡಿಕೆಯನ್ನು ಅಂದಾಜು ಮಾಡಿವೆ(ಅಧ್ಯಾಯ 4, ಕೋಷ್ಟಕ 8).
- ಈ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಅಗತ್ಯವಾದ ವಿವಿಧ ಸಸ್ಯ ಪ್ರಭೇದಗಳನ್ನು ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳು ಜೊತೆಗೂಡಿ ಆಯ್ಕೆ ಮಾಡಿವೆ.
- ಈ ಸಸ್ಯ ಪ್ರಭೇದಗಳನ್ನು ಅರಣ್ಯ ಇಲಾಖೆ ಪೂರೈಸಬೇಕು. ಕುಮಾರನಹಳ್ಳಿ ಮತ್ತು ಮುಕುಂದೂರುಗಳಲ್ಲಿ ಆಯ್ಕೆ ಮಾಡಿದ 14 ಹಾಗೂ 8 ಪ್ರಭೇದಗಳಲ್ಲಿ ಅರಣ್ಯ ಇಲಾಖೆ ಯಾವ ಪ್ರಭೇದವನ್ನೂ ಪೂರೈಸಿಲ್ಲ(0%) ಉದ್ದೂರು ಮತ್ತು ಹನಿಯಾಗಳಲ್ಲಿ ಶೇಕಡಾ 7 ಮತ್ತು 19ರಷ್ಟು ಪ್ರಭೇದಗಳನ್ನು ಪೂರೈಸಲಾಗಿದೆ. ಆದರೆ ಮರಡವಳ್ಳಿಯಲ್ಲಿ ಮಾತ್ರ ಆಯ್ಕೆ ಮಾಡಿದ ಶೇಕಡಾ 77ರಷ್ಟು ಪ್ರಭೇದಗಳನ್ನು ಪೂರೈಸಲಾಗಿದೆ.
- ಸಮುದಾಯದ ಅಗತ್ಯವನ್ನು ಪೂರೈಸಲು ಮತ್ತು ಅಂತಿಮ ಕಟಾವಿನ ಸಮಯದಲ್ಲಿ ಆರ್ಥಿಕ ಪ್ರಯೋಜನಗಳನ್ನು ಒದಗಿಸಲು ಕುಮಾರನಹಳ್ಳಿ, ಮರಡವಳ್ಳಿ, ಹನಿಯಾಗಳಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ. ಉದ್ದೂರಿನಲ್ಲಿ ಬೆಳೆದ ನೆಡುತೋಪನ್ನು ಯೋಜನೆಯಡಿಯಲ್ಲಿ ತರಲಾಗಿದೆ. ಆದರೆ ಮರಡವಳ್ಳಿಯ ದೇವಾಸ ಮತ್ತು ಹನಿಯಾದಲ್ಲಿನ ಒಂದು ಮಿಶ್ರ ಪ್ರಭೇದದ ನೆಡುತೋಪನ್ನು ಬಿಟ್ಟರೆ ಉಳಿದವು ಉರುವಲು ಹಾಗೂ ಕೈಗಾರಿಕೆಗಳ ದೃಷ್ಟಿಯಿಂದ ಬೆಳೆಸಿದ ನೆಡುತೋಪುಗಳು. ಸಮುದಾಯದ ವಿವಿಧ ಬೇಡಿಕೆಗಳು ಇವುಗಳಿಂದ ಪೂರೈಕೆಯಾಗುವುದಿಲ್ಲ.
- ಮೂರು ವರ್ಷಗಳು ತುಂಬಿರುವ ಈ ಎಲ್ಲ ನೆಡುತೋಪುಗಳಿಂದ, ಒಣಗಿದ ಎಲೆಗಳು, ಪುರುಳೆಗಳು, ಕೆಳಗೆ ಬಿದ್ದ ರೆಂಬೆ, ಕೊಂಬೆಗಳನ್ನು ಸಂಗ್ರಹಿಸುವುದರ ಜೊತೆಗೆ, ದನಕರುಗಳನ್ನೂ ಮೇಯಿಸಲಾಗುತ್ತಿದೆ.
- ಜಂಟೀ ಅರಣ್ಯ ಯೋಜನೆಯ ಅನುಷ್ಠಾನದ ಭಾಗವಾಗಿ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳ 24 ಕುಟುಂಬಗಳಿಗೆ ಇಲಾಖೆಯ ಕಡೆಯಿಂದ ಸುಧಾರಿತ ಅಸ್ತ್ರ ಒಲೆಗಳು ದೊರೆತಿವೆ.

ಕುಮಾರನಹಳ್ಳಿ, ಮರಡವಳ್ಳಿ, ಹನಿಯಾ ಮತ್ತು ಉದ್ದೂರುಗಳಲ್ಲಿ ಅರಣ್ಯ ಇಲಾಖೆಯ ಗಮನ ಸಂಪೂರ್ಣವಾಗಿ ಏಕ ಪ್ರಭೇದದ ನೆಡುತೋಪುಗಳ ಮೇಲಿವೆ. ಈ ನೆಡುತೋಪುಗಳು ಸ್ಥಳೀಯ ಸಮುದಾಯದ ವೈವಿಧ್ಯ ಬೇಡಿಕೆಗಳನ್ನು ಪೂರೈಸುವುದಿಲ್ಲ. ಮುಕುಂದೂರಿನಲ್ಲಿ ಗೋಮಾಳದಲ್ಲಿದ್ದ ವಿವಿಧ ಪ್ರಭೇದಗಳನ್ನು ಕಡಿದು ಹಾಕಿದ ನಂತರ ಆ ಜಾಗದಲ್ಲಿ ಏನನ್ನೂ ಬೆಳೆಸಿಲ್ಲ. ಸ್ಥಳೀಯ ಸಮುದಾಯದ ಜೀವದ್ರವ್ಯ ಅಗತ್ಯಗಳ ಬಗ್ಗೆ, ಅರಣ್ಯ ಇಲಾಖೆ ಒಂದಿಷ್ಟು

ಗಮನವನ್ನೂ ನೀಡದಿರುವುದರಿಂದ, ಇದಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಯಾವ ಬದಲಾವಣೆಗಳೂ ಆಗಿಲ್ಲ. ಆದರ ಬದಲಿಗೆ ಯೋಜನೆ ಜಾರಿಗೆ ಬಂದನಂತರ ಕುಮಾರನಹಳ್ಳಿ, ಉದ್ದೂರು, ಮುಕುಂದೂರುಗಳ ಭೂರಹಿತರಿಗೆ ಜೀವದ್ರವ್ಯ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಮತ್ತಷ್ಟು ಕಷ್ಟವಾಗಿದೆ. ಉಳಿದವರು ತಮ್ಮ ಅಗತ್ಯಗಳನ್ನು ಈ ಮುಂಚಿನಂತೆಯೇ ಪೂರೈಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಜಂಟೀ ಅರಣ್ಯ ಯೋಜನೆಯ ಅಡಿಯಲ್ಲಿ ಸಂರಕ್ಷಣೆಗೊಳಗಾದ ಅರಣ್ಯದಿಂದ ಜೀವದ್ರವ್ಯಗಳನ್ನು ಸಂಗ್ರಹಿಸುವುದರಲ್ಲಿ ನಿರ್ಬಂಧ, ನಿಯಂತ್ರಣಗಳಿರುವುದರಿಂದ, ಸಮೀಪದಲ್ಲಿಯೇ ಇರುವ ಬೇರೆಯ ಅರಣ್ಯದಿಂದ ಅಥವಾ ಅರಣ್ಯದ ಬೇರೆ ಭಾಗಗಳಿಂದ ಸಂಗ್ರಹಿಸುತ್ತಿದ್ದಾರೆ. ಇದರ ಪರಿಣಾಮವಾಗಿ ಜೀವಿಜನ್ಯ ಒತ್ತಡ ಬೇರೊಂದು ಭಾಗಕ್ಕೆ ವರ್ಗಾವಣೆಯಾಗಿದೆ. ಗ್ರಾಮ ಅರಣ್ಯ ಸಮಿತಿಯ ಅನುಮತಿಯಿಂದ ತಮ್ಮ ಪ್ರಾಮಾಣಿಕ ಅಗತ್ಯಗಳನ್ನು, ಅರಣ್ಯ ಸಿಬ್ಬಂದಿಗೆ ಹೆದರದೇ, ಸುಲಭವಾಗಿ ಪೂರೈಸಿಕೊಳ್ಳಬಹುದಾದ್ದರಿಂದ, ಜಂಟೀ ಅರಣ್ಯ ಯೋಜನೆಯಿಂದ ನೇರ ಪ್ರಯೋಜನಗಳು ಇನ್ನೂ ದೊರೆಯದಿದ್ದರೂ ಅದರ ಬಗ್ಗೆ ತೀವ್ರ ಅಸಮಾಧಾನ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಕಾಣುವುದಿಲ್ಲ.

ಪಾರದರ್ಶಕತೆ, ನಿಯಮಗಳು, ತಿಳಿವಳಿಕೆ, ಪ್ರವರ್ತನಾಶಕ್ತಿ ಮತ್ತು ಸ್ವಾವಲಂಬನೆ, ಅನುಭೋಗದ ಅವಧಿ ಮತ್ತು ತೃಪ್ತಿ- ಈ ಆರು ಅಂಶಗಳ ಮಾನದಂಡದಲ್ಲಿ ಕ್ಷೇತ್ರಕಾರ್ಯದ ಯಾವ ಒಂದು ಗ್ರಾಮ ಅರಣ್ಯ ಸಮಿತಿಯೂ ಪರಿಪೂರ್ಣ ಎನ್ನಿಸಿಕೊಳ್ಳುವುದಿಲ್ಲ. ಈ ದಿಕ್ಕಿನ ಪಯಣದಲ್ಲಿ ಹನಿಯ, ಉದ್ದೂರು, ಮುಕುಂದೂರುಗಳು ಇನ್ನೂ ಪ್ರಾರಂಭಾವಸ್ಥೆಯಲ್ಲಿಯೇ ಯಿದ್ದು, ಕುಮಾರನಹಳ್ಳಿ, ಮರಡವಳ್ಳಿಗಳು ಅವುಗಳಿಗಿಂತ ಬಹಳ ಮುಂದಿವೆ. ನಿರ್ವಹಣಾ ಸಮಿತಿ ಮತ್ತು ಇತರ ಸದಸ್ಯರ ನಡುವಿನ ವ್ಯವಹಾರದಲ್ಲಿನ ಪಾರದರ್ಶಕತೆಗೆ ಸಂಬಂಧಿಸಿದಂತೆ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳು ಪ್ರತ್ಯೇಕವಾಗಿ, ಎತ್ತರವಾಗಿ ಎದ್ದು ನಿಲ್ಲುತ್ತವೆ. ರೂಪಿಸಿರುವ ನಿಯಮಗಳಲ್ಲಿ ಎಲ್ಲ ಹಳ್ಳಿಗಳಲ್ಲೂ ಏಕರೂಪತೆಯಿದ್ದರೂ, ನಿಯಮ ಪಾಲನೆಯಲ್ಲಿ ಕುಮಾರನಹಳ್ಳಿ, ಮರಡವಳ್ಳಿಗಳು ದಾಖಲೆ ಸೃಷ್ಟಿಸಿವೆ. ಈ ಎರಡು ಹಳ್ಳಿಗಳಲ್ಲಿ ತಿಳಿವಳಿಕೆಯ ಮಟ್ಟವೂ ಉಳಿದವುಗಳಿಗಿಂತ ಉತ್ತಮವಾಗಿದೆ.

ಪ್ರವರ್ತನ ಶಕ್ತಿಯಲ್ಲೂ ಇದೇ ಮಾದರಿ ಕಂಡುಬರುತ್ತದೆ. ಆದರೆ ಈ ಎರಡೂ ಗ್ರಾಮ ಅರಣ್ಯ ಸಮಿತಿಗಳು ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿವೆ. ಇದೇ ಮಾನದಂಡದಲ್ಲಿ ಅರಣ್ಯ ಇಲಾಖೆಯ ಕೊರೆತೆಗಳು ಎದ್ದು ಕಾಣುತ್ತವೆ. ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವಿನ ವ್ಯವಹಾರದಲ್ಲಿ ಒಂದಿಷ್ಟು ಪಾರದರ್ಶಕತೆಯಿಲ್ಲ. ಅನುಭೋಗದ ಅವಧಿಗೆ ಸಂಬಂಧಿಸಿದ ಅನುಮಾನಗಳಿಗೆ, ಅನಿಶ್ಚಿತತೆಗಳಿಗೆ ಅರಣ್ಯ ಇಲಾಖೆಯೇ ಉತ್ತರ ನೀಡಬೇಕು. ಸಮುದಾಯದ ಜೀವದ್ರವ್ಯ ಅಗತ್ಯಗಳ ಪೂರೈಕೆ ಇಲಾಖೆಯ ಆದ್ಯತೆ ಅಲ್ಲವೆಂಬುದು ಕ್ಷೇತ್ರಕಾರ್ಯಗಳಿಂದ ಸ್ಪಷ್ಟವಾಗುತ್ತದೆ.

ಅಭಿವೃದ್ಧಿಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸುವ ಅಂಶಗಳಿಗೂ, TRAITS ಮಾನದಂಡದ ಅಂಶಗಳಿಗೂ ತೀರಾ ಹತ್ತಿರದ ಸಾಮ್ಯವಿರುವುದನ್ನು ನಾವು ಈಗಾಗಲೇ ನೋಡಿದ್ದೇವೆ. TRAITS ಮಾನದಂಡದಲ್ಲಿ, ಹನಿಯಾ, ಉದ್ದೂರು, ಮುಕುಂದೂರುಗಳಿಗಿಂತ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳು ಬಹಳ ಮೇಲೆ ನಿಲ್ಲುತ್ತವೆ. ಆದ್ದರಿಂದ ಈ ಎರಡೂ ಹಳ್ಳಿಗಳಲ್ಲಿ, ಸಮುದಾಯದ ಸಹಭಾಗಿತ್ವ ಹನಿಯಾ, ಉದ್ದೂರು, ಮುಕುಂದೂರುಗಳಿಗಿಂತ ಉತ್ತಮವಾಗಿರಬೇಕು. ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಅಳೆಯಲು ನಾವು ಬಳಸಿದ ವಿವಿಧ ಸೂಚ್ಯಂಕಗಳು ಇದನ್ನೇ ಸೂಚಿಸಿವೆ ಯೆಂಬುದನ್ನು ನಾವು ಗಮನಿಸಬೇಕು.

ಸಮುದಾಯದ ಸಹಭಾಗಿತ್ವ ಮತ್ತು ಜಂಟೀ ಅರಣ್ಯ ಯೋಜನೆಯ ಯಶಸ್ಸು

ಜಂಟೀ ಅರಣ್ಯ ಯೋಜನೆಯ ಯಶಸ್ಸು ಅಥವಾ ವೈಫಲ್ಯಗಳನ್ನು ಅಳೆಯುವುದು ಈ ಮಹಾ ಪ್ರಬಂಧದ ಮೂಲಭೂತ ಉದ್ದೇಶವಲ್ಲ. ಈ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ಇರುವ ಅವಕಾಶಗಳು, ಅವುಗಳಲ್ಲಿ ಎಷ್ಟು ಪ್ರಾಮಾಣಿಕ ಎಷ್ಟು ಕೇವಲ ತೋರಿಕೆಯವು, ಸಮುದಾಯ ಈ ಅವಕಾಶಗಳನ್ನು ಬಳಸಿಕೊಂಡಿರುವ ರೀತಿ, ಸಹಭಾಗಿತ್ವದ ಸ್ವರೂಪ ಮುಂತಾದವುಗಳನ್ನು ಅರ್ಥಮಾಡಿಕೊಳ್ಳುವುದು ಈ ಸಂಶೋಧನೆಯ ಗುರಿ.

ಅಭಿವೃದ್ಧಿಯೋಜನೆಗಳಲ್ಲಿ ಸ್ಥಳೀಯ ಸಮುದಾಯವನ್ನು ಸಕ್ರಿಯವಾಗಿ ಒಳಗೊಳ್ಳುವುದರಿಂದ ಅಭಿವೃದ್ಧಿ ಚಟುವಟಿಕೆಗಳು ಹೆಚ್ಚು ಪ್ರಸ್ತುತವಾಗಿ, ಕಾರ್ಯಕ್ಷಮತೆ ಹೆಚ್ಚುತ್ತದೆಂಬ ಗ್ರಹಿಕೆಯಿದೆ. "ಸಮುದಾಯದ ಸಹಭಾಗಿತ್ವ ಯೋಜನೆಯನ್ನು ಸ್ಥಳೀಯ ಅಗತ್ಯಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸುವಂತೆ ಮಾಡಿ, ಸಮಸ್ಯೆಗಳ ಪರಿಹಾರಕ್ಕೆ ಅಗತ್ಯವಾದ ಸಾಮರ್ಥ್ಯಗಳನ್ನು ಅವರಲ್ಲಿ ಬೆಳೆಸಿ, ಬಡವರಿಗೆ ಮತ್ತು ದುರ್ಬಲವರ್ಗದವರಿಗೆ ಯೋಜನೆಯ ಫಲಗಳು ಖಚಿತವಾಗಿ ಮುಟ್ಟುವಂತೆ ಮಾಡುವ ಸಾಮರ್ಥ್ಯ ಭಾಗವಹಿಸುವಿಕೆಗಿದೆ".[5] ಮೊದಲನೆಯ ಅಧ್ಯಾಯದಲ್ಲಿ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಯ ಉಗಮ ಮತ್ತು ವಿಕಾಸಗಳನ್ನು ಪರಿಶೀಲಿಸುವಾಗ ಈ ಅಭಿಪ್ರಾಯಗಳನ್ನು ವಿವರ ವಾಗಿ ಗಮನಿಸಿದ್ದೇವೆ. ಒಟ್ಟಾರೆಯಾಗಿ ಈ ಅಭಿಪ್ರಾಯಗಳು, ಸಮುದಾಯದ ಸಹಭಾಗಿತ್ವ ಉತ್ತಮವಾಗಿರುವ ಯೋಜನೆಗಳು ಹೆಚ್ಚು ಯಶಸ್ವಿಯಾಗುತ್ತವೆ ಎಂಬ ಅಂಶವನ್ನು ಮುಂದಿಡುತ್ತವೆ. ಇದರ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಅವಕಾಶವನ್ನು ಕುಮಾರನಹಳ್ಳಿ ಹಾಗೂ ಮರಡವಳ್ಳಿಗಳು ಒದಗಿಸಿಕೊಟ್ಟಿವೆ. ಉತ್ತಮ ಸಹಭಾಗಿತ್ವವಿರುವ ಈ ಎರಡೂ ಹಳ್ಳಿಗಳಲ್ಲಿ, ಮೇಲಿನ ವಾದ ನಿಜವಾದರೆ, ಜಂಟೀ ಅರಣ್ಯ ಯೋಜನೆಯೂ ಉಳಿದವುಗಳಿಗಿಂತ ಹೆಚ್ಚು ಯಶಸ್ವಿಯಾಗಿರಬೇಕು. ಈ ಪ್ರಶ್ನೆಯನ್ನು ಮುಂದಿನ ಭಾಗ ಪರಿಶೀಲಿಸುತ್ತದೆ.

ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಸಮುದಾಯದ ಸಹಭಾಗಿತ್ವವನ್ನು ಮಾಪನ ಮಾಡುವ ಉದ್ದೇಶದಿಂದ ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ, ಸಭೆಗಳಲ್ಲಿನ ಹಾಜರಾತಿ, ನಿಯತಕಾಲಿಕ

ಸಭೆಗಳು, ತರಬೇತಿಗಳು, ಸಸ್ಯಪ್ರಭೇದಗಳು ಹಾಗೂ ಅವುಗಳನ್ನು ನೆಡುವ ಜಾಗದ ಆಯ್ಕೆ, ನಿಯಮ ಪಾಲನೆ, ನಿಯಮ ಉಲ್ಲಂಘನೆ ಹಾಗೂ ಮಹಿಳೆಯರ ಭಾಗವಹಿಸುವಿಕೆಯನ್ನು ಸೂಚ್ಯಂಕಗಳಾಗಿ ಬಳಸಿದ್ದೇವೆ. ಇವು ಪ್ರಮಾಣಾತ್ಮಕ ಸೂಚ್ಯಂಕಗಳಾಗಿದ್ದು ಭಾಗವಹಿಸುವಿಕೆಯ ಪ್ರಮಾಣವನ್ನು ಸೂಚಿಸುತ್ತವೆ. ಇದೇ ರೀತಿ ಭಾಗವಹಿಸುವಿಕೆಯ ಗುಣಮಟ್ಟವನ್ನು ಅಳೆಯಲು ಅರಿವಿನ ಮಟ್ಟ, ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರ ಆಯ್ಕೆಯ ವಿಧಾನ ಹಾಗೂ ಸಭೆಯಲ್ಲಿ ಚರ್ಚೆಗೆ ಬಂದಿರುವ ವಿಷಯಗಳನ್ನು ಗುಣಾತ್ಮಕ ಸೂಚ್ಯಂಕಗಳಾಗಿ ಬಳಸಿಕೊಳ್ಳಲಾಗಿದೆ. ಪ್ರಮಾಣಾತ್ಮಕ, ಗುಣಾತ್ಮಕ ಸೂಚ್ಯಂಕಗಳೆರಡೂ, ಕುಮಾರನ ಹಳ್ಳಿ ಮತ್ತು ಮರಡವಳ್ಳಿಗಳ ಗ್ರಾಮ ಅರಣ್ಯ ಸಮಿತಿಗಳು ಸಮುದಾಯದ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಉಳಿದವುಗಳಿಗೆ ಹೋಲಿಸಿದರೆ ಎದ್ದು ಕಾಣುವಂತೆ ಪ್ರತ್ಯೇಕವಾಗಿ ನಿಲ್ಲುತ್ತ ದೆಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಭಾಗವಹಿಸುವಿಕೆಯ ಎಲ್ಲ ಆಯಾಮ ಗಳಲ್ಲಿ ಈ ಎರಡು ಸಮಿತಿಗಳು ಉತ್ತಮ ಮಟ್ಟಕ್ಕೇರಿವೆ.

ಅರಣ್ಯಗಳಿಗೆ ಸಮೀಪವಾಗಿ ವಾಸಿಸುವ ಜನಸಮುದಾಯವನ್ನು, ಅರಣ್ಯಗಳ ರಕ್ಷಣೆ ಮತ್ತು ಪುನರುಜ್ಜೀವನ ಕೆಲಸಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡಿ, ಅವರ ದಿನನಿತ್ಯದ ಅರಣ್ಯಾಧಾರಿತ ಜೀವದ್ರವ್ಯ ಅಗತ್ಯಗಳನ್ನು ಪೂರೈಸುವುದು ಜಂಟೀ ಅರಣ್ಯ ಯೋಜನೆಯ ಮುಖ್ಯ ಉದ್ದೇಶ. ಇದು ಸಾಧ್ಯವಾಗಿದ್ದರೆ ಆ ಮಟ್ಟಿಗೆ ಯೋಜನೆ ಯಶಸ್ವಿಯಾಗಿದೆಯೆನ್ನಬಹುದು. ಆದರೆ ಇದಕ್ಕೆ ಹಲವಾರು ವರ್ಷಗಳೇ ಬೇಕು. ಈ ನಡುವಿನ ಅವಧಿಯಲ್ಲಿ ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳು ಈ ಉದ್ದೇಶ ಸಾಧನೆಗೆ ಕೈಗೊಂಡಿರುವ ಕ್ರಮಗಳು, ಇಟ್ಟಿರುವ ಹೆಜ್ಜೆಗಳು ಯೋಜನೆಯ ಯಶಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ಯೋಜನೆಯ ಯಶಸ್ಸನ್ನು ಅಳೆಯುವ ಮಾರ್ಗವನ್ನು ಸೂಚಿಸುತ್ತದೆ.

ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಜಂಟೀ ಅರಣ್ಯ ಯೋಜನೆಯ ಯಶಸ್ಸನ್ನು ಅಳೆಯಲು ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ಸಂಬಂಧಿತ ಕೆಲಸಗಳನ್ನು ಅಗತ್ಯ ಪೂರೈಕೆಯ ಕ್ರಮಗಳು ಹಾಗೂ ರಕ್ಷಣೆಯ ಕ್ರಮಗಳೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಈ ಎರಡೂ ಭಾಗಗಳಡಿಯಲ್ಲಿ ತಲಾ ಮೂರು ಸೂಚ್ಯಂಕಗಳನ್ನು ಬಳಸಿ ಜಂಟೀ ಅರಣ್ಯ ಯೋಜನೆಯ ಯಶಸ್ಸನ್ನು ಅಳೆಯಲಾಗಿದೆ. ಸೂಚ್ಯಂಕಗಳ ವಿವರಗಳು ಹೀಗಿವೆ.

ಅಗತ್ಯ ಪೂರೈಕೆಯ ಕ್ರಮಗಳು

1. ನಿರ್ಮಿಸಿದ ನೆಡುತೋಪುಗಳು : ಜಂಟೀ ಅರಣ್ಯ ಯೋಜನೆಯಡಿಯಲ್ಲಿ ನಿರ್ಮಿಸಿದ ನೆಡುತೋಪುಗಳ ವಿಸ್ತೀರ್ಣ ಹೆಚ್ಚಾದಷ್ಟೂ ಅಂತಿಮವಾಗಿ ಗ್ರಾಮ ಅರಣ್ಯ ಸಮಿತಿಗೆ ದೊರಕುವ ಆದಾಯವೂ ಹೆಚ್ಚುತ್ತದೆ. ನೆಡುತೋಪಿನ ಜಾಗ ಹಾಗೂ ಪ್ರಭೇದಗಳ ಆಯ್ಕೆಯಲ್ಲಿ ಗ್ರಾಮ ಅರಣ್ಯ ಸಮಿತಿ ಎಂತಹ ಪಾತ್ರ ವಹಿಸಿದೆಯೆಂಬುದನ್ನು ಇಲ್ಲಿ ಪರಿಗಣಿಸಬೇಕು.

2. ಪುನರುಜ್ಜೀವನ ಪ್ರಯತ್ನಗಳು : ಅವನತಿ ಹೊಂದಿದ ಅರಣ್ಯ ಭೂಮಿಯ ಪುನರುಜ್ಜೀವನ ಪ್ರಯತ್ನಗಳು ಸ್ಥಳೀಯ ಸಮುದಾಯದ ವಿವಿಧ ಜೀವದ್ರವ್ಯ ಬೇಡಿಕೆಗಳನ್ನು ಪೂರೈಸಲು ನೆರವಾಗುತ್ತವೆ. ಪುನರುಜ್ಜೀವನ ಪ್ರಯತ್ನಗಳು ಯಶಸ್ವಿಯಾದಷ್ಟೂ, ಜೀವದ್ರವ್ಯಗಳ ಪೂರೈಕೆಯ ಪ್ರಮಾಣವೂ ಹೆಚ್ಚಾಗುತ್ತದೆ.

3. ಬೇಡಿಕೆ ಇಳಿಸುವ ಪ್ರಯತ್ನಗಳು : ಅರಣ್ಯದ ಮೇಲೆ ಜೀವದ್ರವ್ಯಗಳಿಗಾಗಿ ಇರುವ ಒತ್ತಡ ಹಾಗೂ ಬೇಡಿಕೆಗಳನ್ನು ಇಳಿಸುವ ಕ್ರಮಗಳು ಅರಣ್ಯದ ಗುಣಮಟ್ಟವನ್ನು ಸುಧಾರಿಸುವುದರಿಂದ, ಈ ಕ್ರಮಗಳಿಗೆ ಜಂಟೀ ಅರಣ್ಯ ಯೋಜನೆಯಲ್ಲಿ ಹೆಚ್ಚಿನ ಮಹತ್ವವಿದೆ.

ರಕ್ಷಣೆಯ ಕ್ರಮಗಳು

1. ಜಾರಿಗೊಳಿಸಿರುವ ನಿಯಮಗಳು : ಅರಣ್ಯ ಸಂಪನ್ಮೂಲಗಳ ರಕ್ಷಣೆ, ಮಿತ ಬಳಕೆಗಳಿಗಾಗಿ ಗ್ರಾಮ ಅರಣ್ಯ ಸಮಿತಿ ರೂಪಿಸಿ, ಜಾರಿಗೊಳಿಸಿರುವ ನಿಯಮಗಳು ಹಾಗೂ ಅವುಗಳ ಅನುಷ್ಠಾನ ಯೋಜನೆಯ ಯಶಸ್ಸಿಗೆ ಕಾರಣವಾಗುತ್ತದೆ.

2. ನಿಗಾವಣೆಯ ವ್ಯವಸ್ಥೆ : ಜಾರಿಗೆ ತಂದ ನಿಯಮಗಳು ಎಷ್ಟರಮಟ್ಟಿಗೆ ಪಾಲನೆಯಾಗುತ್ತಿದೆ ಎಂಬುದರ ನಿಗಾವಣೆಯ ವ್ಯವಸ್ಥೆಗೆ ಜಂಟೀ ಅರಣ್ಯ ಯೋಜನೆಯಲ್ಲಿ ಮಹತ್ವವಿದೆ. ಕಟ್ಟುನಿಟ್ಟಾದ ನಿಗಾವಣೆ ಯೋಜನೆಯ ಯಶಸ್ಸಿನ ಮೇಲೆ ಪ್ರಭಾವ ಬೀರುತ್ತದೆ.

3. ಮರ ಕಡಿದಿರುವ ಪ್ರಸಂಗಗಳು, ವಿಧ್ವಂಸಕ ಕೃತ್ಯಗಳು : ಯೋಜನೆ ಹಾಗೂ ಅದರಿಂದ ದೊರೆಯುವ ಪ್ರಯೋಜನೆಗಳಲ್ಲಿ ಭರವಸೆ, ಸ್ಥಳೀಯ ನಾಯಕತ್ವದಲ್ಲಿ ನಂಬಿಕೆ ಮುಂತಾದವು ಇಂತಹ ಪ್ರಕರಣಗಳನ್ನು ಕಡಿಮೆ ಮಾಡಿ ಯೋಜನೆಯ ಯಶಸ್ಸನ್ನು ಹೆಚ್ಚಿಸುತ್ತದೆ.

ಈ ಮೇಲಿನ ಸೂಚ್ಯಂಕಗಳನ್ನೇ ಅಲ್ಲದೆ ಗ್ರಾಮ ಅರಣ್ಯ ಸಮಿತಿಗೆ ದೊರೆತಿರುವ ಆದಾಯವನ್ನೂ ಜಂಟೀ ಅರಣ್ಯ ಯೋಜನೆಯ ಯಶಸ್ಸಿನ ಸೂಚ್ಯಂಕವಾಗಿ ಬಳಸಿಕೊಳ್ಳಲಾಗಿದೆ.

ಅಗತ್ಯ ಪೂರೈಕೆಯ ಕ್ರಮಗಳು

1. ಬೆಳೆಸಿರುವ ನೆಡುತೋಪುಗಳು : ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಅರಣ್ಯ ಇಲಾಖೆ ಕೈಗೊಂಡಿರುವ ಮುಖ್ಯ ಕೆಲಸವೆಂದರೆ ನೆಡುತೋಪುಗಳನ್ನು ಬೆಳೆಸುವುದು. ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಈ ಚಟುವಟಿಕೆಗೆ ಸಂಬಂಧಪಟ್ಟ ವಿವರಗಳನ್ನು ಕೋಷ್ಟಕ 8ರಲ್ಲಿ ಕೊಡಲಾಗಿದೆ. ಕುಮಾರನಹಳ್ಳಿಯಲ್ಲಿ 1994-95 ರಿಂದ 1997-98ರ ಅವಧಿಯಲ್ಲಿ ಒಟ್ಟು 154 ಹೆಕ್ಟೇರುಗಳಲ್ಲಿ ಏಕ ಪ್ರಭೇದದ ನೆಡುತೋಪುಗಳನ್ನು ಬೆಳೆಸಲಾಗಿದೆ. ಮರಡವಳ್ಳಿಯಲ್ಲಿ 1998-99 ಹಾಗೂ 1999-2000ದ ಅವಧಿಯಲ್ಲಿ ಅರಣ್ಯ ಇಲಾಖೆ 35 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನು ಬೆಳೆಸಿದ್ದರೆ, ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಸಂಪೂರ್ಣ ಸ್ವಪ್ರಯತ್ನದಿಂದ 15 ಹೆಕ್ಟೇರುಗಳಲ್ಲಿ

ಮಿಶ್ರ ಪ್ರಭೇಧಗಳ ನೆಡುತೋಪನ್ನೂ, 50 ಹೆಕ್ಟೇರ್ ಪ್ರದೇಶದಲ್ಲಿ ಔಷಧ ಸಸ್ಯಗಳ ವನವನ್ನೂ ಪ್ರಾರಂಭಿಸಿದ್ದಾರೆ. ಹನಿಯಾದಲ್ಲಿ 1997-98ರ ಅವಧಿಯಲ್ಲಿ 35ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳು ತಲೆಯೆತ್ತಿವೆ. ಆದರೆ ಈ ನೆಡುತೋಪುಗಳನ್ನು ಬೆಳೆಸುವ ಯಾವ ಹಂತದಲ್ಲೂ-ಜಾಗದ ಆಯ್ಕೆ, ಪ್ರಭೇದದ ಆಯ್ಕೆ ಇತ್ಯಾದಿ-ಅರಣ್ಯ ಇಲಾಖೆ ಗ್ರಾಮ ಅರಣ್ಯ ಸಮಿತಿಯೊಡನೆ ಸಮಾಲೋಚನೆ ನಡೆಸಿಲ್ಲ; ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ.

ಸಮುದಾಯದ ಜೀವದ್ರವ್ಯ ಅಗತ್ಯಗಳನ್ನು ಪೂರೈಸುವ ದೃಷ್ಟಿಯಿಂದ, ನೆಡುತೋಪುಗಳನ್ನು ಬೆಳೆಸುವುದಕ್ಕಿಂತ, ನೈಸರ್ಗಿಕ ಅರಣ್ಯಗಳ ಪುನರುಜ್ಜೀವನವೇ ಹೆಚ್ಚು ಪರಿಣಾಮಕಾರಿಯಾದ ಮಾರ್ಗ. ನೆಡುತೋಪುಗಳು ಸುಮಾರು ಎಂಟರಿಂದ ಹತ್ತು ವರ್ಷಗಳಲ್ಲಿ ಒಂದೇ ಬಾರಿ ಚೌಬೀನೆ ಅಥವಾ ಉರುವಲನ್ನು ಒದಗಿಸುತ್ತದೆಯೇ ಹೊರತಾಗಿ ದಿನನಿತ್ಯದ ಅಗತ್ಯಗಳನ್ನಲ್ಲ. ಮೇವಿನ ಸಮಸ್ಯೆಗೂ ನೆಡುತೋಪುಗಳ ಪರಿಹಾರ ಒದಗಿಸುವುದಿಲ್ಲ. ಅರಣ್ಯಕ್ಕೆ ಸಮೀಪವಾಗಿ ವಾಸಿಸುವ ಸಮುದಾಯದ ವಿವಿಧ ಬೇಡಿಕೆಗಳನ್ನು ನೈಸರ್ಗಿಕ ಅರಣ್ಯ ಮಾತ್ರ ಪೂರೈಸಬಲ್ಲದು. ಇವೆಲ್ಲಕ್ಕಿಂತ ಹೆಚ್ಚಾಗಿ "ನೆಡುತೋಪನ್ನು ಬೆಳೆಸುವುದಕ್ಕಿಂತ, ನೈಸರ್ಗಿಕ ಅರಣ್ಯಗಳ ಪುನರುಜ್ಜೀವನವೇ ಖರ್ಚುವೆಚ್ಚಗಳ ದೃಷ್ಟಿಯಿಂದ ಪರಿಣಾಮಕಾರಿಯಾದ, ಅಪೇಕ್ಷಣೀಯವಾದ ಆಸ್ತಿ ನಿರ್ಮಾಣದ ಮಾರ್ಗವಾಗುತ್ತದೆ".[6] ಆದರೆ ಅರಣ್ಯ ಇಲಾಖೆ 'ಯಾವ ಜಾಗದಲ್ಲಿ ಏನು ಬೆಳೆಸಬೇಕೆಂಬ ತಾಂತ್ರಿಕ ಜ್ಞಾನ ತನಗೆ ಮಾತ್ರ ಇದೆ' ಎಂಬ ನಿಲುವು ತಳೆದಿದೆ. ಅಂತಿಮ ಹಂಚಿಕೆಯ ಸಂದರ್ಭದಲ್ಲಿ, ನೆಡುತೋಪಿನಿಂದ ಮಾತ್ರ ಹೆಚ್ಚಿನ ಆರ್ಥಿಕ ಲಾಭ, ಆದಾಯಗಳು ದೊರೆಯುವುದರಿಂದ ಯೋಜನೆಯ ಯಶಸ್ಸಿಗೆ ನೆಡುತೋಪನ್ನು ಬೆಳೆಸದೇ ಬೇರೆ ಮಾರ್ಗವೇ ಇಲ್ಲವೆಂಬುದು ಇಲಾಖೆಯ ಅಭಿಪ್ರಾಯ. ಕ್ಷೇತ್ರಕಾರ್ಯದ ಯಾವ ಹಳ್ಳಿಯಲ್ಲೂ ನೆಡುತೋಪುಗಳ ಕಟಾವು ಆಗಿಲ್ಲ. ಆದರೆ ಮೂರು ವರ್ಷ ತುಂಬಿರುವ ನೆಡುತೋಪುಗಳಲ್ಲಿ ದನಕರುಗಳನ್ನು ಮೇಯಿಸುವುದು ಹಾಗೂ ನೆಲಕ್ಕೆ ಬಿದ್ದ ಅಷ್ಟಿಷ್ಟು ಎಲೆ, ಕಡ್ಡಿಗಳನ್ನು ಸಂಗ್ರಹಿಸುವುದನ್ನು ಬಿಟ್ಟರೆ ಈ ನೆಡುತೋಪುಗಳಿಂದ ಯಾವ ಪ್ರಯೋಜನಗಳೂ ದೊರೆತಿಲ್ಲವೆಂಬುದು ಸಂದರ್ಶನ ಸಂದರ್ಭದಲ್ಲಿ ಕಂಡುಬಂದ ಸ್ಪಷ್ಟ ಅಭಿಪ್ರಾಯ. ದೇವಾಸದ ಮಿಶ್ರ ನೆಡುತೋಪು ಹಾಗೂ ಬಾಳೆಗೆರೆಯ ಔಷಧ ಸಸ್ಯ ವನಗಳು ಮರಡವಳ್ಳಿ ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಜೀವದ್ರವ್ಯ ಮತ್ತು ಕಿರು ಅರಣ್ಯ ಉತ್ಪನ್ನಗಳ ಬೇಡಿಕೆಯನ್ನು ಪೂರೈಸಿ ಗ್ರಾಮ ಅರಣ್ಯ ಸಮಿತಿಯ ಆದಾಯವನ್ನು ಹೆಚ್ಚಿಸುವುದೆಂಬ ನಿರೀಕ್ಷೆ, ವಿಶ್ವಾಸಗಳು ಎಲ್ಲ ಸದಸ್ಯರಲ್ಲಿ ಕಂಡುಬರುತ್ತದೆ.

ಜಂಟೀ ಅರಣ್ಯ ಯೋಜನೆಯಲ್ಲಿ ಜೀವದ್ರವ್ಯ ಅಗತ್ಯಗಳನ್ನು ಪೂರೈಸಲು ಸ್ಥೂಲವಾಗಿ ಎರಡು ಕಾರ್ಯತಂತ್ರಗಳಿವೆ : ಮೊದಲನೆಯದು ನೆಡುತೋಪುಗಳನ್ನು ಬೆಳೆಸುವುದು. ಎರಡನೆಯದು ಪುನರುಜ್ಜೀವನಕ್ಕೆ ಅವಕಾಶ ಕಲ್ಪಿಸುವುದು, ಆದರೆ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಇಲಾಖೆಯ

ಗಮನ ನೆಡುತೋಪುಗಳನ್ನು ಬೆಳೆಸುವುದರತ್ತ ಮಾತ್ರ ಸೀಮಿತವಾಗಿದೆ. ನೀಲಗಿರಿ, ಅಕೇಶಿಯಾ, ಗಾಳಿ ಮರಗಳ ಈ ನೆಡುತೋಪುಗಳು ಸ್ಥಳೀಯ ಸಮುದಾಯದ ವೈವಿಧ್ಯ ಜೀವದ್ರವ್ಯ ಅಗತ್ಯಗಳನ್ನು ಪೂರೈಸುವುದಿಲ್ಲ. ಮರಡವಳ್ಳಿಯನ್ನು ಬಿಟ್ಟರೆ ಉಳಿದ ಯಾವ ಗ್ರಾಮಗಳಲ್ಲೂ ಉರುವಲು, ಮೇವು, ಹಸಿರು ಗೊಬ್ಬರ, ಸಣ್ಣ ಮರಮಟ್ಟುಗಳನ್ನು ಪೂರೈಸುವಂತಹ ಆಯ್ಕೆ ಮಾಡಿದ ಸಸ್ಯ ಪ್ರಭೇದಗಳನ್ನು ಅರಣ್ಯ ಇಲಾಖೆ ಒದಗಿಸಿಲ್ಲ. ಕುಮಾರನ ಹಳ್ಳಿಯ ಪುನರುಜ್ಜೀವನ ಕ್ರಮಗಳು ಮತ್ತು ದೇವಾಸದ ಮಿಶ್ರ ನೆಡುತೋಪುಗಳಿಂದ ಜೀವದ್ರವ್ಯ ಉತ್ಪನ್ನಗಳು ದೊರೆಯಲು ಇನ್ನೂ ಸಾಕಷ್ಟು ಕಾಲ ಕಾಯಬೇಕು. ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿ ತತ್ವಗಳನ್ನು ಸೂತ್ರೀಕರಿಸಿ, ಸಮನ್ವಯಗೊಳಿಸುವ ಪ್ರಕ್ರಿಯೆಯನ್ನು ಮೂರನೆಯ ಅಧ್ಯಾಯದಲ್ಲಿ ವಿಶ್ಲೇಷಿಸುವಾಗ, ಬಡಜನರ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸಲು ಬೇಕಾದ ಯಾವುದೇ ಸ್ಪಷ್ಟ ಕ್ರಮಗಳೂ ಯೋಜನೆಯಲ್ಲಿಲ್ಲ ಎಂಬುದನ್ನು ನೋಡಿದ್ದೇವೆ. ಕ್ಷೇತ್ರ ಕಾರ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಈ ಸತ್ಯ ನಮಗೆ ಎದುರಾಗುತ್ತದೆ. ಇದೇ ಅಧ್ಯಾಯದಲ್ಲಿ ಮಾನದಂಡದಲ್ಲಿ ಅಗತ್ಯಗಳ ಪೂರೈಕೆಯ ಬಗೆಗೆ ತೃಪ್ತಿ ಭಾಗದಲ್ಲಿ ವಿವರವಾಗಿ ಚರ್ಚಿಸಿರುವಂತೆ, ಜಂಟೀ ಅರಣ್ಯ ಯೋಜನೆಯ ಫಲವಾಗಿ, ಈ ಗ್ರಾಮಗಳಲ್ಲಿ ಜೀವದ್ರವ್ಯ ಅಗತ್ಯಗಳ ಪೂರೈಕೆಯಲ್ಲಿ ಎದ್ದು ಕಾಣುವ ಯಾವುದೇ ಬದಲಾವಣೆಗಳು ಆಗದಿರುವುದನ್ನು ಕ್ಷೇತ್ರಕಾರ್ಯದ ಅಧ್ಯಯನಗಳು ಖಚಿತಪಡಿಸುತ್ತವೆ.

2. ಪುನರುಜ್ಜೀವನ ಪ್ರಯತ್ನಗಳು : ಜಂಟೀ ಅರಣ್ಯ ಯೋಜನೆಯ ಕಾರ್ಯತಂತ್ರಗಳಲ್ಲಿ ನೆಡುತೋಪಿನ ಮಾದರಿ ಹಾಗೂ ಪುನರುಜ್ಜೀವನ ಮಾದರಿಗಳೆರಡಕ್ಕೂ ಸಮನಾದ ಪ್ರಾಮುಖ್ಯತೆಯಿದ್ದರೂ, ಅರಣ್ಯ ಇಲಾಖೆಯ ಗಮನ ಸಾಂಪ್ರದಾಯಿಕವಾದ, ದುಬಾರಿಯಾದ ನೆಡುತೋಪಿನ ಮಾದರಿಯ ಮೇಲೆ ಕೇಂದ್ರೀಕೃತವಾಗಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಇದರೊಡನೆ ಕ್ಷೇತ್ರಕಾರ್ಯದ ಎಲ್ಲ ಹಳ್ಳಿಗಳಲ್ಲಿ ಪುನರುಜ್ಜೀವನ ಪ್ರಯತ್ನಗಳಲ್ಲಿ ಅರಣ್ಯ ಇಲಾಖೆ ಯಾವ ಆಸಕ್ತಿಯನ್ನು ತೋರದೆ, ಅದನ್ನು ಸಂಪೂರ್ಣವಾಗಿ ಗ್ರಾಮ ಅರಣ್ಯ ಸಮಿತಿಗೇ ಬಿಟ್ಟಿರುವುದು ಕಂಡುಬರುತ್ತದೆ.

ನೆಡುತೋಪಿನ ನಿರ್ಮಾಣ ಮತ್ತು ಅವನತಿ ಹೊಂದಿದ ಅರಣ್ಯದ ಪುನರುಜ್ಜೀವನ ಈ ಎರಡರಲ್ಲಿ ಸ್ಥಳೀಯ ಸಮುದಾಯದ ಸಂಪೂರ್ಣ ಭಾಗವಹಿಸುವಿಕೆಗೆ ಅವಕಾಶವಿರುವುದು ಎರಡನೆಯದರಲ್ಲಿ ಮಾತ್ರ. ಆದರೂ ಅರಣ್ಯ ಇಲಾಖೆ ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ.

ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಪುನರುಜ್ಜೀವನ ಪ್ರಯತ್ನದ ವಿವರಗಳನ್ನು ಕೋಷ್ಟಕ 9ರಲ್ಲಿ ನೀಡಲಾಗಿದೆ. ಕುಮಾರನಹಳ್ಳಿಯಲ್ಲಿ 75ಹೆಕ್ಟೇರ್ ಪ್ರದೇಶದ ಅವನತಿ ಹೊಂದಿ ಅರಣ್ಯಭೂಮಿಯಲ್ಲಿ ಪುನರುಜ್ಜೀವನದ ಕ್ರಮಗಳನ್ನು ಅಳವಡಿಸಿದ್ದರೆ, ಮರಡವಳ್ಳಿಯಲ್ಲಿ ಇದರ ಪ್ರಮಾಣ 40ಹೆಕ್ಟೇರುಗಳ. ಕುಮಾರನಹಳ್ಳಿಯ ಹಿರೇಮರಡಿಗುಡ್ಡದ 2 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ಬೇಲಿ

ಹಾಕಿ, ಅಲ್ಲಿ ಜೀವದ್ರವ್ಯ ಮತ್ತು ಕಿರು ಅರಣ್ಯ ಉತ್ಪನ್ನಗಳನ್ನು ಒದಗಿಸುವ 16 ಪ್ರಭೇದಗಳ ಸಸಿಗಳನ್ನು ಹಾಕಲಾಗಿದೆ. ಉಳಿದ ಪ್ರದೇಶದಲ್ಲಿ ದನಕರುಗಳನ್ನು ಮೇಯಿಸುವುದು, ಮರಗಳನ್ನು ಕಡಿಯುವುದು, ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವುದು ಮುಂತಾದವುಗಳನ್ನು ನಿಯಂತ್ರಿಸುವುದರ ಮೂಲಕವಾಗಿ 'ಸಾಮಾಜಿಕ ಬೇಲಿ'ಯನ್ನು ನಿರ್ಮಿಸಲಾಗಿದೆ. ಪುನರುಜ್ಜೀವನ ಪ್ರಕ್ರಿಯೆಗೆ ಅಗತ್ಯವಾದ ತೇವಾಂಶದ ಸಂರಕ್ಷಣೆ, ಮೇಲ್ಮಣ್ಣಿನ ಸಂರಕ್ಷಣೆಗಳಿಗೆ ಅಗತ್ಯವಾದ ಸಾಲ್ಬರಂಡಿಗಳ ನಿರ್ಮಾಣ, ಸಸ್ಯಗಳ ಬದು, ಕೊರಕಲು ಅಡ್ಡಕಟ್ಟೆಗಳು, ಕೊರಕಲು ತಡೆಗಳು ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕ್ಷೇತ್ರಕಾರ್ಯದ ಸಂದರ್ಶನಗಳಲ್ಲಿ ಈ ಪ್ರಯತ್ನಗಳ ಫಲವಾಗಿ ಕಂಡುಬಂದಿರುವ ಬದಲಾವಣೆಗಳನ್ನು ಜನ ಹೆಮ್ಮೆಯಿಂದ ವಿವರಿಸುತ್ತಾರೆ''. ಮೂರು ವರ್ಷಗಳಿಂದ ನಡೆಯುತ್ತಿರುವ ಈ ಪ್ರಯತ್ನಗಳ ಫಲವಾಗಿ ಹುಲ್ಲು, ಪೊದರು ಹೊದರುಗಳ ಸಸ್ಯ ಸಮೂಹ ಎದ್ದು ಕಾಣುವಂತೆ ಬೆಳೆದಿದೆ. ಬೇಲಿ ಹಾಕಿರುವ ಎರಡು ಹೆಕ್ಟೇರ್ ಪ್ರದೇಶದಲ್ಲಿ ಎಲ್ಲ ಸಸಿಗಳೂ ಬೆಳೆಯುತ್ತಿವೆ. ಪುನರುಜ್ಜೀವನದ ಪ್ರದೇಶದಲ್ಲಿ ಕವಳಿ, ಬಿಕ್ಕಿ, ನಕ್ರಿಗಳಂತಹ ಹಣ್ಣುಗಳು ಹೆಚ್ಚಾಗಿ ದೊರೆಯುತ್ತಿವೆ. ಈ ಪ್ರದೇಶದ ಮೂರು ಕಡೆಗಳಲ್ಲಿ ಸ್ಟೈಲೋ ಎಮೋಟ ಪ್ರಭೇದದ ಹುಲ್ಲನ್ನು ಮೇವಿಗಾಗಿ ಬೆಳೆಸುವ ಪ್ರಯತ್ನಗಳು ಉತ್ತಮ ಫಲಿತಾಂಶ ನೀಡಿವೆ. ಈ ಎಲ್ಲದಕ್ಕಿಂತ ಮುಖ್ಯವಾಗಿ ಈ ಅರಣ್ಯಗಳಲ್ಲಿರುವ ಎರಡು ಸಣ್ಣಹಳ್ಳಿಗಳಲ್ಲಿ ಮೇ ತಿಂಗಳ ಮಧ್ಯಭಾಗದದವರೆಗೂ ದನಕರುಗಳಿಗೆ ನೀರು ದೊರೆಯುತ್ತಿದೆ. ಪುನರುಜ್ಜೀವನದ ಕ್ರಮಗಳಿಂದ ಭವಿಷ್ಯದಲ್ಲಿ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬಹುದೆಂಬ ನಂಬಿಕೆ, ವಿಶ್ವಾಸಗಳು ಜನರಲ್ಲಿ ಕಾಣುತ್ತದೆ.

ಕುಮಾರನಹಳ್ಳಿಗೆ ಹೋಲಿಸಿದರೆ ಮರಡವಳ್ಳಿಯ ಪುನರುಜ್ಜೀವನ ಚಟುವಟಿಕೆಗಳು ಎದ್ದು ಕಾಣವುದಿಲ್ಲ. ಪುನರುಜ್ಜೀವನ ಕ್ರಮಕ್ಕೆ ಒಳಪಡಿಸಿರುವ 40 ಹೆಕ್ಟೇರ್ ಪ್ರದೇಶದಲ್ಲಿ ಸಾಮಾಜಿಕ ಬೇಲಿಯಿದ್ದು, ಆ ಪ್ರದೇಶದಲ್ಲಿ ಅಲ್ಪಪ್ರಮಾಣದಲ್ಲಿ (ನಾಲ್ಕು ಪ್ರಭೇದಗಳಿಗೆ ಸೇರಿದ 60 ಸಸಿಗಳು) ಎನ್‌ರಿಚ್‌ಮೆಂಟ್ ಪ್ಲಾಂಟಿಂಗ್ ಮಾಡಲಾಗಿದೆ. ಈ ಪರಿಸ್ಥಿತಿಗೆ ಮುಖ್ಯ ಕಾರಣವೆಂದರೆ ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿಯ ಗಮನ ಸಂಪೂರ್ಣವಾಗಿ ದೇವಾಸದ ಮಿಶ್ರ ನೆಡುತೋಪು ಹಾಗೂ ಬಾಳೆಗೆರೆಯ ಔಷಧವನಗಳ ಮೇಲಿರುವುದು. ಈ ಎರಡೂ ಜಾಗಗಳಲ್ಲಿ ಸ್ಥಳೀಯ ಸಮುದಾಯದ ಸಹಭಾಗಿತ್ವದಿಂದ ಉತ್ತಮ ಕೆಲಸ ಮಾಡಿರುವ ಗ್ರಾಮ ಅರಣ್ಯ ಸಮಿತಿ ಜನರ ಜೀವದ್ರವ್ಯ ಅಗತ್ಯ ಹಾಗೂ ಕಿರು ಅರಣ್ಯ ಉತ್ಪನ್ನಗಳ ಬೇಡಿಕೆಯನ್ನು ಪೂರೈಸುವ ವಿಶ್ವಾಸ ಹೊಂದಿದೆ. ಜನರಲ್ಲಿ ಈ ಬಗ್ಗೆ ಭರವಸೆಯಿದೆ.

ಹನಿಯಾ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿ 20ಹೆಕ್ಟೇರ್ ಪ್ರದೇಶವನ್ನು ಪುನರುಜ್ಜೀವನ ಪ್ರದೇಶವೆಂದು ಗುರುತಿಸಲಾಗಿದೆಯಾದರೂ ಅದು ಹೆಸರಿಗೆ ಮಾತ್ರ ಉದ್ದೂರು, ಮುಕುಂದೂರುಗಳ ಸಮೀಪದಲ್ಲಿ ಅವನತಿ ಹೊಂದಿದ ಅರಣ್ಯ ಭೂಮಿ ಇಲ್ಲದಿರುವುದರಿಂದ ಅರಣ್ಯ ಭೂಮಿಯ ಪುನರುಜ್ಜೀವನದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

3. ಬೇಡಿಕೆ ಇಳಿಸುವ ಪ್ರಯತ್ನಗಳು : ಉರುವಲು, ಮೇವು, ಹಸಿರು ಗೊಬ್ಬರ, ಸಣ್ಣಮರಮಟ್ಟು ಗಳಿಗಾಗಿ ಸ್ಥಳೀಯ ಸಮುದಾಯ ಅರಣ್ಯಗಳ ಮೇಲೆ ಅವಲಂಬಿತವಾಗಿರುತ್ತದೆ. ಜಂಟೀ ಅರಣ್ಯ ಯೋಜನೆಯಲ್ಲಿನ ನೆಡುತೋಪಿನ ನಿರ್ಮಾಣ, ಪುನರುಜ್ಜೀವನ ಮುಂತಾದ ಕ್ರಮಗಳು ಈ ಬೇಡಿಕೆಯನ್ನು ಪೂರೈಸಲು ಪ್ರಯತ್ನಿಸುತ್ತವೆ. ಇವುಗಳೊಡನೆ ಈ ಬೇಡಿಕೆಗಳ ಒತ್ತಡವನ್ನು ಇಳಿಸುವ, ಕಡಿಮೆ ಮಾಡುವ ಕ್ರಮಗಳಿಗೂ ಯೋಜನೆಯಲ್ಲಿ ಅಷ್ಟೇ ಮಹತ್ವವಿದೆ. ಸುಧಾರಿತ ಒಲೆಗಳು, ಜೈವಿಕ ಅನಿಲ ಸ್ಥಾವರಗಳು ಉರುವಲಿನ ಬೇಡಿಕೆಯನ್ನು ಇಳಿಸುತ್ತವೆ. ಮೇವಿನ ಉತ್ಪಾದನೆ, ಮೇವಿಗಾಗಿ ಮರಗಿಡಗಳಿಂದ ಸೊಪ್ಪು ಕಡಿಯುವುದನ್ನು ಕಡಿಮೆ ಮಾಡುತ್ತದೆ. ಬೇರೆಯ ಮೂಲಗಳಿಂದ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಸಾಧ್ಯವಾದರೆ ಆ ಮಟ್ಟಿಗೆ ಅರಣ್ಯದ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಜಂಟೀ ಅರಣ್ಯ ಯೋಜನೆ ಯಶಸ್ವಿಯಾಗಬೇಕಾದರೆ ಈ ಕ್ರಮಗಳಿಗೂ ಗಮನ ಅತ್ಯವಶ್ಯಕ.

ಕೋಷ್ಟಕ 10ರಲ್ಲಿ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ ಬೇಡಿಕೆ ಇಳಿಸುವ ಕಾರ್ಯಕ್ರಮಗಳ ವಿವರಗಳಿವೆ. ಕುಮಾರನಹಳ್ಳಿಯಲ್ಲಿ ಆದಾಯ ಹೆಚ್ಚಿಸುವ ಪರ್ಯಾಯ ಮಾರ್ಗಗಳಾಗಿ ನಾಲ್ಕು ಕಾರ್ಯಕ್ರಮ ಗಳಿವೆ. ಆದರೆ ಇದರಲ್ಲಿ ನರ್ಸರಿ ಸಸಿಗಳ ಉತ್ಪಾದನೆ ಎರಡು ಬಾರಿ ವಿಫಲವಾಗಿದೆ. ಗ್ರಾಮ ಅರಣ್ಯ ಸಮಿತಿ ಇದಕ್ಕಾಗಿ ವಿಶೇಷ ತರಬೇತಿಯನ್ನು ಏರ್ಪಡಿಸಿದೆ. ಉಳಿದ ಮೂರು ಚಟುವಟಿಕೆಗಳಾದ ಕೋಳಿಸಾಕಣೆ, ಕುರಿಸಾಕಣೆ ಹಾಗೂ ಹೈನುಗಾರಿಕೆಗಳಿಗೆ ಗ್ರಾಮ ಅರಣ್ಯ ಸಮಿತಿ ಪ್ರೋತ್ಸಾಹ ನೀಡಿ ಅದಕ್ಕೆ ಅಗತ್ಯವಾದ ಸಾಲ, ತರಬೇತಿ, ಆರೋಗ್ಯ ರಕ್ಷಣೆಯ ವ್ಯವಸ್ಥೆಗಳನ್ನು ನಿಗದಿತ ಅಂತರದಲ್ಲಿ ಮಾಡುತ್ತಿದೆ. ಹೈನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳು ತಮ್ಮ ದನಗಳನ್ನು ಅರಣ್ಯದಲ್ಲಿ ಮೇಯಿಸುವಂತಿಲ್ಲ, ಕಟ್ಟಿ ಹಾಕಿಯೇ ಮೇವು ಒದಗಿಸಬೇಕು. ಕುರಿಗಳನ್ನು ನಿರ್ದಿಷ್ಟ ಜಾಗಗಳಲ್ಲಿ ಮಾತ್ರ ಮೇಯಿಸಬಹುದು. ಮರಡವಳ್ಳಿಯಲ್ಲಿ ಮಹಿಳೆಯರು ಒಟ್ಟಾಗಿ ಸೇರಿ ಸ್ವಸಹಾಯ ಸಂಘವನ್ನು ನಡೆಸುತ್ತಿದ್ದಾರೆ. ಗ್ರಾಮ ಅರಣ್ಯ ಸಮಿತಿ ಇದಕ್ಕೆ ಸಂಬಂಧಿಸಿದ ವಿವಿಧ ತರಬೇತಿಗಳ ವ್ಯವಸ್ಥೆ ಮಾಡಿದೆ. ಔಷಧವನದ 25 ಪ್ರಭೇದಗಳಿಗೆ ಸೇರಿದ ಗಿಡಮೂಲಿಕೆಗಳು ಬಳಕೆಯ ಹಂತವನ್ನು ತಲುಪಿದ್ದು ಅವುಗಳ ಸಂಸ್ಕರಣೆ, ಮಾರಾಟಕ್ಕೆ ಸಂಬಂಧಿಸಿದ ಮಾತುಕತೆಗಳು ನಡೆಯುತ್ತಿದ್ದು ಭೂ ರಹಿತರಿಗೆ ಇದರಿಂದ ನೇರ ಪ್ರಯೋಜನ ದೊರೆಯಲಿದೆ ಗ್ರಾಮ ಅರಣ್ಯ ಸಮಿತಿಗೂ ಆದಾಯ ಲಭಸಲಿದೆ.

ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಪ್ರಾರಂಭಿಕ ಪ್ರೋತ್ಸಾಹಕವಾಗಿ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ತಲಾ 24 ಸುಧಾರಿತ ಅಸ್ತ್ರ ಒಲೆಗಳನ್ನು ಅರಣ್ಯ ಇಲಾಖೆ ಕಟ್ಟಿಸಿ ಕೊಟ್ಟಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಒಲೆಗಳಲ್ಲಿ ಅನುಕ್ರಮವಾಗಿ 9 ಮತ್ತು 13 ಒಲೆಗಳು ಕೆಟ್ಟಿದ್ದವು. ಈ ಒಲೆಗಳನ್ನು ಬಳಸುತ್ತಿದ್ದ 15 ಕುಟುಂಬಗಳು ತಮ್ಮ ಉರುವಲಿನ

ಬೇಡಿಕೆಯಲ್ಲಿ ಸರಿಸುಮಾರು ಅರ್ಧದಷ್ಟು ಕಡಿಮೆಯಾಗಿದೆಯೆಂದು ಅಭಿಪ್ರಾಯಪಟ್ಟರೂ ಎರಡು ದಿನಗಳಿಗೊಮ್ಮೆ ಒಂದು ತಲೆ ಹೊರೆ ಸೌದೆಯನ್ನು ತರುವುದು ಮಾತ್ರ ನಿಂತಿರಲಿಲ್ಲ. ಅಸ್ತ್ರ ಒಲೆ ಇರುವವರ ಮೇಲೆ ಉರುವಲಿಗೆ ಸಂಬಂಧಿಸಿದಂತೆ ಹೆಚ್ಚಿನ ನಿಯಂತ್ರಣವನ್ನು ಹಾಕಬೇಕೆಂಬ ಪ್ರಸ್ತಾಪಕ್ಕೆ ಕುಮಾರನಹಳ್ಳಿಯ ನಿರ್ವಹಣಾ ಸಮಿತಿಯಲ್ಲಿ ಬೆಂಬಲ ದೊರೆತಿಲ್ಲ.

ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಬೇಡಿಕೆ ಇಳಿಸುವ, ಆದಾಯ ಹೆಚ್ಚಿಸುವ ಯಾವ ಕ್ರಮಗಳನ್ನೂ ಗ್ರಾಮ ಅರಣ್ಯ ಸಮಿತಿಗಳು ಕೈಗೊಂಡಿಲ್ಲ. ಮುಕುಂದೂರಿನಲ್ಲಿ 11 ಸುಧಾರಿತ ಒಲೆಗಳಿದ್ದರೂ ಅದು ಅರಣ್ಯ ಇಲಾಖೆ ಕೊಟ್ಟಿದ್ದಲ್ಲ. ಇದೇ ರೀತಿ ಮರಡವಳ್ಳಿ, ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿರುವ ಜೈವಿಕ ಅನಿಲ ಸ್ಥಾವರಗಳು ಸ್ಥಳೀಯರೇ ನಿರ್ಮಿಸಿ ಕೊಂಡಂಥವು.

ರಕ್ಷಣೆಯ ಕ್ರಮಗಳು

ಜಂಟೀ ಅರಣ್ಯ ಯೋಜನೆಯಲ್ಲಿ ಅಗತ್ಯ ಪೂರೈಕೆಯ ವಿವಿಧ ಕ್ರಮಗಳಿಗಿರುವಷ್ಟೇ ಮಹತ್ವ ಅರಣ್ಯ ಸಂಪನ್ಮೂಲಗಳ ರಕ್ಷಣೆಗೂ ಇದೆ. ರಕ್ಷಣಾ ಕ್ರಮಗಳು ಮತ್ತು ಅವುಗಳ ಪರಿಣಾಮಪನ್ನು ಜಾರಿಗೊಳಿಸಿರುವ ನಿಯಮಗಳು, ನಿಗಾವಣೆಯ ವ್ಯವಸ್ಥೆ ಹಾಗೂ ಮರಕಡಿಯುವ, ವಿಧ್ವಂಸಕ ಪ್ರಕರಣಗಳ ಮೂಲಕ ಅಳೆಯಲು ಪ್ರಯತ್ನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಕೋಷ್ಟಕ 11ರಲ್ಲಿ ಕೊಡಲಾಗಿದೆ.

1. ಜಾರಿಗೊಳಿಸಿರುವ ನಿಯಮಗಳು : ಅರಣ್ಯ ಸಂಪನ್ಮೂಲಗಳ ರಕ್ಷಣೆ ಹಾಗೂ ಅರಣ್ಯ ಉತ್ಪನ್ನಗಳ ಬಳಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಎಲ್ಲ ಅರಣ್ಯ ಸಮಿತಿಗಳೂ ನಿಯಮಗಳನ್ನು ರೂಪಿಸಿ, ಜಾರಿಗೊಳಿಸಿವೆ. ಅರಣ್ಯ ಸಂಪನ್ಮೂಲಗಳ ಮೇಲೆ ಹೆಚ್ಚಿನ ಅವಲಂಬನೆ ಯಿರುವ ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಈ ನಿಯಮಗಳು ಸಮುದಾಯದಿಂದ ನಿರೀಕ್ಷಿಸುವ ನಡವಳಿಕೆಯನ್ನು ಅನುಮಾನಕ್ಕೆ ಆಸ್ಪದವೇ ಇಲ್ಲದಂತೆ ಸ್ಪಷ್ಟವಾಗಿ ನಿರೂಪಿಸಿವೆ. ಈ ನಿಯಮಗಳಿಗೆ ಸಂಬಂಧಿಸಿದಂತೆ, ಅವುಗಳ ಅನುಷ್ಠಾನದಲ್ಲಿ ವ್ಯತ್ಯಾಸಗಳು ಎದ್ದು ಕಾಣುತ್ತವೆ. ಈ ವ್ಯತ್ಯಾಸಗಳನ್ನು, ಹಿಂದಿನ ಅಧ್ಯಾಯದ 'ನಿಯಮಪಾಲನೆ-ನಿಯಮ ಉಲ್ಲಂಘನೆ' ಭಾಗದಲ್ಲಿ ಈಗಾಗಲೇ ಚರ್ಚಿಸಲಾಗಿದೆ.

2. ನಿಗಾವಣೆಯ ವ್ಯವಸ್ಥೆ : ನಿಯಮಗಳನ್ನು ರೂಪಿಸಿ, ಅನುಷ್ಠಾನಗೊಳಿಸಿದ ನಂತರ, ಆ ನಿಯಮಗಳು ಎಷ್ಟರಮಟ್ಟಿಗೆ ಪಾಲನೆಯಾಗುತ್ತಿದೆ ಎಂಬುದನ್ನು ನಿರಂತರವಾಗಿ ಗಮನಿಸಿ, ಅಗತ್ಯವಾದೆಡೆಗಳಲ್ಲಿ ನಿರ್ವಹಣಾ ಸಮಿತಿ ಮಧ್ಯ ಪ್ರವೇಶ ಮಾಡಬೇಕಾಗುತ್ತದೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಇಂತಹ ವ್ಯವಸ್ಥೆಯಿದೆ. ಅರಣ್ಯ ಮತ್ತು ನೆಡುತೋಪಿನ ಕಾವಲಿನಲ್ಲಿ

ಎಲ್ಲ ಕುಟುಂಬಗಳೂ ಸರದಿಯ ಪ್ರಕಾರ ಭಾಗವಹಿಸುತ್ತಾರೆ. ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಯ ಮೇಲ್ವಿಚಾರಣೆ, ಬೇಸಿಗೆಯಲ್ಲಿ ಬೆಂಕಿ ಆರಿಸುವ ಕೆಲಸಗಳಿಗೆ ವಿಶೇಷ ತಂಡಗಳಿವೆ. ಗ್ರಾಮ ಅರಣ್ಯ ಸಮಿತಿಯ ಎಲ್ಲ ಸದಸ್ಯರೂ ಅರಣ್ಯ ಸಂಪನ್ಮೂಲಗಳನ್ನು ಎಚ್ಚರಿಕೆಯಿಂದ ಗಮನಿಸಿ, ಉಲ್ಲಂಘನೆಯ ಪ್ರಕರಣಗಳನ್ನು ಸಮಿತಿಯ ಗಮನಕ್ಕೆ ತರುತ್ತಾರೆ. ಆದರೆ ಹನಿಯಾದಲ್ಲಿ ಕಾವಲಿಗಾಗಲೀ, ಮೇಲ್ವಿಚಾರಣೆಗಾಗಲೀ ಯಾವ ವ್ಯವಸ್ಥೆಯೂ ಇಲ್ಲ. ಉದ್ದೂರು, ಮುಕುಂದೂರುಗಳಲ್ಲಿ ಅರಣ್ಯ ಸಮಿತಿ ಸಂಬಳಕೊಟ್ಟು ಕಾವಲುಗಾರರನ್ನು ನೇಮಿಸಿದೆ. ಉಳಿದ ಯಾವ ಸದಸ್ಯರಿಗೂ ಸಂಪನ್ಮೂಲಗಳ ಬಗ್ಗೆ ಯಾವ ಜವಾಬ್ದಾರಿಯೂ ಇಲ್ಲ.

3. ಮರಕಡಿದಿರುವ ಪ್ರಸಂಗಗಳು, ವಿಧ್ವಂಸಕ ಕೃತ್ಯಗಳು : ಕುಮಾರನಹಳ್ಳಿಯ ವ್ಯಾಪ್ತಿಯಲ್ಲಿರುವ ನೆಡುತೋಪಿನಲ್ಲಿ ನೀಲಗಿರಿ ಮರಗಳನ್ನು ಕಳ್ಳತನದಿಂದ ಕಡಿದುಕೊಂಡು ಹೋಗಿರುವ ಒಂದೇ ಒಂದು ಪ್ರಸಂಗವಿದೆ. ಮರಗಳನ್ನು ಕಡಿದವರು ಕುಮಾರನಹಳ್ಳಿಯವರಲ್ಲ, ಸಮೀಪದ ಹರಪನಹಳ್ಳಿ ಯವರು. ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿ ಈ ಪ್ರಕರಣವನ್ನು ಇಲಾಖೆಯ ಗಮನಕ್ಕೆ ತಂದಿದೆ. ಇಂಥ ಪ್ರಕರಣಗಳನ್ನು ತಪ್ಪಿಸಲು ಹಳ್ಳಿಯಿಂದ ಸ್ವಲ್ಪ ದೂರದಲ್ಲಿರುವ ನೆಡುತೋಪುಗಳಿಗೆ ರಾತ್ರಿಯ ಗಸ್ತು ಏರ್ಪಡಿಸಿದೆ. ಮರಡವಳ್ಳಿಯಲ್ಲಿ ಇದೇ ರೀತಿ ನಾಟಾಕಡಿದ ಒಂದು ಪ್ರಸಂಗವಿದೆ. ಹನಿಯಾದಲ್ಲಿ ಈ ರೀತಿಯ ನಾಲ್ಕು ಪ್ರಕರಣಗಳಾಗಿರುವುದು ಸಂದರ್ಶನದ ಸಮಯದಲ್ಲಿ ತಿಳಿದುಬಂದರೂ ಅರಣ್ಯ ಸಮಿತಿಯ ನಡಾವಳಿ ಪುಸ್ತಕದಲ್ಲಿ ಅವು ಕಾಣಿಸುವುದಿಲ್ಲ. ಉದ್ದೂರಿನಲ್ಲಿ ಅಧ್ಯಯನ ಅವಧಿಯಲ್ಲಿ ಮರಕಡಿದು ಸಾಗಿಸಿರುವ 17 ಪ್ರಕರಣಗಳು ನಡೆದಿವೆ. ಮುಕುಂದೂರಿನಲ್ಲಿ ಅರಣ್ಯವಿಲ್ಲದಿದ್ದರೂ, ಊರ ಬಾಗಿಲಿನಲ್ಲಿರುವ 1.6ಹೆಕ್ಟೇರುಗಳ ವಿಸ್ತೀರ್ಣದ ಮಿಶ್ರಪ್ರಭೇದಗಳ ತೋಪಿನಲ್ಲಿ ಮರಗಳನ್ನು ಕಡಿದಿರುವ, ದನಗಳನ್ನು ಮೇಯಿಸಿರುವ, 22 ಪ್ರಕರಣಗಳಿವೆ.

1998ರ ಲೋಕಸಭಾ ಚುನಾವಣೆಯ ಸಮಯದಲ್ಲಿ ಹಾಸನ ಜಿಲ್ಲೆಯ ರಾಜಕೀಯದ ಬಿಸಿ ಮುಕುಂದೂರಿಗೂ ಮುಟ್ಟಿತು. ಅಲ್ಲಿ ಮೂರು ಪಕ್ಷಗಳಿದ್ದವು. ದಳ, ಕಾಂಗ್ರೆಸ್ ಮತ್ತು ಬಿಜೆಪಿ. ದಳ-ಕಾಂಗ್ರೆಸ್‌ಗಳ ನಡುವೆ ನೇರ ಸೆಣಸಾಟ. ಗ್ರಾಮ ಅರಣ್ಯ ಸಮಿತಿಯಲ್ಲಿದ್ದವರಲ್ಲಿ ದಳದವರೇ ಹೆಚ್ಚು. ಇನ್ನೊಂದು ಪಾರ್ಟಿಯವರು ಗುಂಡುತೋಪಿನ ಬೇಲಿಯನ್ನು ಕಿತ್ತು ಹಾಕಿದರು, ದನಗಳನ್ನು ಹಾಯಿಸಿದರು. ಅಳಿದುಳಿದ ಮರಗಳನ್ನು ಕತ್ತರಿಸಿ ಹಾಕಿದರು. ಒಂದೇ ವಾರದಲ್ಲಿ 1.6 ಹೆಕ್ಟೇರುಗಳ ಗೋಮಾಳದಲ್ಲಿ ನೆಟ್ಟಿದ್ದ 600 ಮಾವಿನ ಸಸಿಗಳೂ 500 ನೀಲಗಿರಿ 300 ಸರ್ವೆ ಹಾಗೂ 1000 ಬಿದಿರಿನ ಸಸಿಗಳು ನಿರ್ನಾಮವಾಯಿತು. ಗ್ರಾಮ ಅರಣ್ಯ ಸಮಿತಿಯಲ್ಲಿ ಈ ಬಗ್ಗೆ ಚಕಾರವಿಲ್ಲ. ಮಾತಾಡಿದರೆ ಜಗಳ, ಹೊಡೆದಾಟ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ವಿನಾಶಕ ಕೃತ್ಯ ಮಾಡಿದವರು ಎನ್ನಲಾದವರನ್ನು ಸಂದರ್ಶಿಸಿ ಇದರ ಬಗ್ಗೆ ಕೇಳಿದಾಗ ದೊರೆತ ಉತ್ತರ ಇದು.

"ಗ್ರಾಮ ಅರಣ್ಯ ಸಮಿತಿ ತನ್ನ ಕೆಲಸವನ್ನು ತಾನು ಮಾಡಿದ್ದರೆ ಮಾವಿನ ಸಸಿಗಳು ಬೆಳೆದು ಮರವಾಗುತ್ತಿದ್ದವು. ಗ್ರಾಮ ಅರಣ್ಯ ಸಮಿತಿಯ ಹಣದಿಂದ ಲೋಕಸಭೆಗೆ ಚುನಾವಣೆಗೆ ನಿಂತ ಅಭ್ಯರ್ಥಿಯ ಪರ ಪ್ರಚಾರಕ್ಕೆ ಪೋಸ್ಟರುಗಳನ್ನು ಹಾಕಿಸಿದ್ದು ನ್ಯಾಯವೇ? ಅರಣ್ಯ ಸಮಿತಿಯ ಹಣವನ್ನು ರಾಜಕೀಯ ಚುನಾವಣೆಗೆ ಬಳಸಬಹುದೇ? ಈ ಅನ್ಯಾಯವೇ ಮಾವಿನ ಸಸಿಗಳ ವಿನಾಶಕ್ಕೆ ಕಾರಣ".

ಜಂಟೀ ಅರಣ್ಯ ಯೋಜನೆಯ ಅಂಗವಾಗಿ, ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿ ನಿರ್ಮಿಸಿರುವ ನೆಡುತೋಪಾಗಲೀ, ಪುನರುಜ್ಜೀವನ ಕ್ರಮಗಳಿಂದ ಉತ್ತಮಗೊಳ್ಳುತ್ತಿರುವ ಅರಣ್ಯವಾಗಲೀ, ನಮ್ಮದು, ನಮ್ಮ ಸಮುದಾಯದ ಆಸ್ತಿ ಎಂಬ ಭಾವನೆಯಿರುವ ಕಡೆಗಳಲ್ಲಿ, ನಿಯಮ ಉಲ್ಲಂಘಿಸಿದರೆ ಶಿಕ್ಷೆ ತಪ್ಪಿದ್ದಲ್ಲ ಎಂಬ ಭೀತಿ ಇರುವ ಕಡೆಗಳಲ್ಲಿ ಕಳ್ಳತನದಿಂದ ಮರಕಡಿಯುವ ಪ್ರಸಂಗಗಳು ಬಹಳ ಅಪರೂಪವಾಗುತ್ತವೆ. ಇಂತಹ ಮನೋಭಾವ ಯೋಜನೆಯ ಯಶಸ್ಸಿಗೆ ಕಾರಣವಾಗುತ್ತದೆ. ಕುಮಾರನಹಳ್ಳಿ, ಮರಡವಳ್ಳಿಗಳಲ್ಲಿ ಈ ಮನೋಧರ್ಮವನ್ನು ಸ್ಪಷ್ಟವಾಗಿ ಗುರುತಿಸಬಹುದು.

ಗ್ರಾಮ ಅರಣ್ಯ ಸಮಿತಿಗಳಿಗೆ ಬಂದಿರುವ ಆದಾಯ

ಜಂಟೀ ಅರಣ್ಯ ಯೋಜನೆಯ ನಿರೀಕ್ಷಿತ ಆರ್ಥಿಕ ಪರಿಣಾಮಗಳಲ್ಲಿ ಮುಖ್ಯವಾದುದೆಂದರೆ ಗ್ರಾಮ ಅರಣ್ಯ ಸಮಿತಿಗೆ ದೊರೆಯುವ ಆದಾಯ. ಯೋಜನೆಯಡಿಯಲ್ಲಿನ ನೆಡುತೋಪು ಅಂತಿಮ ಕಟಾವಿಗೆ ಒಳಗಾದಾಗ ಅದರಿಂದ ದೊರೆಯುವ ಆದಾಯ, ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ಸಮಪ್ರಮಾಣದಲ್ಲಿ ಹಂಚಿಕೆಯಾಗಬೇಕು. ಹೀಗೆ ದೊರೆತ ಆದಾಯದಲ್ಲಿ ಗ್ರಾಮ ಅರಣ್ಯ ಸಮಿತಿ ಅರ್ಧಭಾಗವನ್ನು(ಒಟ್ಟು ಆದಾಯದ ಶೇಕಡಾ 25 ಭಾಗ) ಗ್ರಾಮ ಅರಣ್ಯ ಅಭಿವೃದ್ಧಿ ನಿಧಿಗೆ ನೀಡಿ, ಉಳಿದ ಅರ್ಧ ಭಾಗವನ್ನು ಸದಸ್ಯ ಕುಟುಂಬಗಳಿಗೆ ಹಂಚಬೇಕು. ಆದರೆ ಉದ್ದೂರನ್ನು ಬಿಟ್ಟರೆ, ಕ್ಷೇತ್ರ ಕಾರ್ಯದ ಯಾವ ಹಳ್ಳಿಗಳಲ್ಲೂ ನೆಡುತೋಪು ಈ ಹಂತವನ್ನು ತಲುಪಿಲ್ಲ.(ಯಾವಾಗ ಕಟಾವು ಮಾಡಬೇಕು ಎಂಬ ನಿರ್ಧಾರದಲ್ಲಿ ಗ್ರಾಮ ಅರಣ್ಯ ಸಮಿತಿಗೆ ಪಾತ್ರವಿಲ್ಲ) ಉದ್ದೂರಿನ ಗ್ರಾಮ ಅರಣ್ಯ ಸಮಿತಿಗೆ ಮಾತ್ರ, ನೀಲಗಿರಿ ಎಣ್ಣೆ ತೆಗೆಯುವುದರಿಂದ ಪ್ರತಿವರ್ಷವೂ ಸುಮಾರು 60000 ರೂ.ಗಳು ದೊರೆಯುತ್ತಿದ್ದರೂ ಅದರಲ್ಲಿ ಸದಸ್ಯ ಕುಟುಂಬಗಳಿಗೆ ಪಾಲು ದೊರೆತಿಲ್ಲ; 'ಗ್ರಾಮ ಅರಣ್ಯ ಅಭಿವೃದ್ಧಿ ನಿಧಿ'ಯನ್ನೂ ಸ್ಥಾಪಿಸಿಲ್ಲ. ಈ ವ್ಯವಹಾರದಲ್ಲಿ ಪಾರದರ್ಶಕತೆಯೇ ಇಲ್ಲ.

ಗ್ರಾಮ ಅರಣ್ಯ ಸಮಿತಿಯ ಆದಾಯದ ವಿವರಗಳನ್ನು ಕೋಷ್ಟಕ 12ರಲ್ಲಿ ತೋರಿಸಲಾಗಿದೆ ಎಲ್ಲ ಗ್ರಾಮ ಅರಣ್ಯ ಸಮಿತಿಗಳಿಗೂ ಅರಣ್ಯ ಇಲಾಖೆಯ ಕಡೆಯಿಂದ ಮೂಲಧನವಾಗಿ 5000 ರೂಗಳು ದೊರೆತಿವೆ. ಕುಮಾರನ ಹಳ್ಳಿಯ ಗ್ರಾಮ ಅರಣ್ಯ ಸಮಿತಿಗೆ ಉತ್ತಮ ಕೆಲಸಕ್ಕಾಗಿ, ರಾಜ್ಯ

ಸರ್ಕಾರದ ಪ್ರಶಸ್ತಿಯೂ ಸೇರಿದಂತೆ ಎರಡು ಪ್ರಶಸ್ತಿಗಳು ದೊರೆತಿದ್ದು ಅದರ ಭಾಗವಾಗಿ 17000 ರೂ.ಗಳು ದೊರೆತಿವೆ. ಇದೇ ರೀತಿ ಮರಡವಳ್ಳಿಯ ಅರಣ್ಯ ಸಮಿತಿಗೆ ದೊರೆತ ಪ್ರಶಸ್ತಿಯ ಭಾಗವಾಗಿ 15000 ರೂ.ಗಳು ಲಭಿಸಿದೆ. ಗ್ರಾಮ ಅರಣ್ಯ ಸಮಿತಿಗಳ ಆದಾಯದ ಮತ್ತೊಂದು ಮೂಲವೆಂದರೆ ನಿಯಮ ಉಲ್ಲಂಘನೆಗಳಿಗೆ ಹಾಕಿದ ದಂಡದ ಹಣ. ದಂಡ ಹೆಚ್ಚಿದರೆ ಆದಾಯ ಹೆಚ್ಚುತ್ತದೆಂಬುದು ನಿಜವಾದರೂ, ನಿಯಮ ಉಲ್ಲಂಘನೆಯ ಪ್ರಕರಣಗಳು ಹೆಚ್ಚಿದಷ್ಟು, ಅದು ಜನರ ಅವಿಶ್ವಾಸ, ಅಪನಂಬಿಕೆಗಳನ್ನು ಸೂಚಿಸುತ್ತದೆಂಬುದೂ ನಿಜ. ಕುಮಾರನಹಳ್ಳಿ 21,000 ರೂ.ಗಳ ಅತಿಹೆಚ್ಚಿನ ದಂಡವನ್ನು ವಸೂಲಿ ಮಾಡಿದೆ. ಆದರೆ ಇದು ವಸೂಲಿಯಾದದ್ದು ಪ್ರಾರಂಭದ ಮೂರು ವರ್ಷಗಳಲ್ಲಿ ಮಾತ್ರ. ದಂಡ ಕೊಟ್ಟವರಲ್ಲಿ ಯಾರೂ ಕುಮಾರನ ಹಳ್ಳಿಯವರಲ್ಲ, ಅಕ್ಕಪಕ್ಕದ ಊರಿನವರು. ಅರಣ್ಯ ಇಲಾಖೆಯಿಂದಲೂ ದಂಡ ವಸೂಲಿ ಮಾಡಿರುವ ಏಕೈಕ ಪ್ರಕರಣ ಕುಮಾರನ ಹಳ್ಳಿಯಲ್ಲಿದೆ. ಮರಡವಳ್ಳಿಯಲ್ಲಿ ಉಲ್ಲಂಘನೆಗಳು ಅತ್ಯಂತ ಕಡಿಮೆ. ಉದ್ದೂರು, ಮುಕುಂದೂರುಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಉಲ್ಲಂಘನೆಗಳಿದ್ದರೂ ದಂಡ ಹಾಕಿರುವ, ವಸೂಲು ಮಾಡಿರುವ ಪ್ರಕರಣಗಳು ಬಹಳ ಅಪರೂಪ.

ಗ್ರಾಮ ಅರಣ್ಯಸಮಿತಿಯ ಆದಾಯದ ಮುಖ್ಯಮೂಲವೆಂದರೆ ನೆಡುತೋಪುಗಳಿಂದ ಬರುವ ಹಣ. ಆದರೆ ಇದಕ್ಕೆ ಕನಿಷ್ಠ 8-10 ವರ್ಷಗಳವರೆಗೆ ಕಾಯಬೇಕು. ಯಾವ ಆದಾಯವೂ ದೊರೆಯದ ಈ ಅವಧಿಯಲ್ಲಿ, ಯೋಜನೆಯಲ್ಲಿ ಸಮುದಾಯದ ಸದಸ್ಯರ ಆಸಕ್ತಿಯನ್ನು ಕುಗ್ಗದಂತೆ ಉಳಿಸಿಕೊಂಡು ಹೋಗುವುದು ಬಹಳ ದೊಡ್ಡ ಸವಾಲು. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಈ ಸವಾಲಿನ ಅರಿವಿರುವ ಅರಣ್ಯ ಇಲಾಖೆ, ಗ್ರಾಮ ಅರಣ್ಯ ಸಮಿತಿಗಳಿಗೆ ಬೇರೆಯ ಮೂಲಗಳಿಂದ ಆದಾಯ ಒದಗಿಸುವ ಕ್ರಮಗಳನ್ನು ಕೈಗೊಂಡಿದೆ. ಹರಪನಹಳ್ಳಿ ತಾಲ್ಲೂಕಿನ ಬೇರೆಡೆಗಳಲ್ಲಿ ಬೇರೆಯ ಪ್ರದೇಶದಲ್ಲಿ ನೆಡುತೋಪಿನ ಕೆಲಸವಿದ್ದಾಗ, ಕುಮಾರನ ಹಳ್ಳಿಯ ಜನರನ್ನೇ ಕರೆದುಕೊಂಡು ಹೋಗಿದೆ. ನೆಡುತೋಪಿನ ಕಟಾವಾಗಿರುವ ಸಂದರ್ಭಗಳಲ್ಲಿ ಕೂಲಿಯನ್ನು ನೀಡುವುದರೊಡನೆ, ಕೆಲಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ನೀಲಗಿರಿಯ ಎರಡು ಕಂಬಗಳನ್ನು ನೀಡಿದೆ. ಗ್ರಾಮ ಅರಣ್ಯ ಸಮಿತಿಯ ಸಹಕಾರಕ್ಕಾಗಿ 2500 ರೂ.ಗಳ ಗೌರವಧನ ನೀಡಿದೆ. ಗ್ರಾಮದ ವ್ಯಾಪ್ತಿಯಲ್ಲಿರುವ ಹುಣಿಸೇ ಮರಗಳ ಉತ್ಪನ್ನವನ್ನು ಹರಾಜು ಹಾಕುವ ಅಧಿಕಾರವನ್ನು ಗ್ರಾಮ ಅರಣ್ಯ ಸಮಿತಿಗೇ ನೀಡಿದೆ. ಮರಡವಳ್ಳಿಯಲ್ಲೂ ಇದೇ ಪ್ರವೃತ್ತಿಯನ್ನು ನೋಡಬಹುದು. ನೆಡುತೋಪಿನಲ್ಲಿ ಮಾಡಿದ ಶ್ರಮದಾನಕ್ಕೆ ಅರಣ್ಯ ಇಲಾಖೆ ಗ್ರಾಮ ಅರಣ್ಯ ಸಮಿತಿಗೆ 5000ರೂ.ಗಳನ್ನು ನೀಡಿದೆ. ವಿವಿಧ ಜಾಗಗಳಲ್ಲಿ ನಡೆದ ಕಟಾವಿನಲ್ಲಿ ಭಾಗವಹಿಸಿದವರಿಗೆ ಅಲ್ಪ ಪ್ರಮಾಣದಲ್ಲಿ ಮರಮಟ್ಟುಗಳನ್ನು ನೀಡಿದೆ. ಆದರೆ ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿ ಇಂತಹ ಯಾವ ಕ್ರಮಗಳೂ ಕಾಣಿಸುವುದಿಲ್ಲ.

ನೆಡುತೋಪಿನಿಂದ ಆದಾಯ ದೊರೆಯುವದೆಂಬ ಪ್ರಾಮಾಣಿಕ ನಿರೀಕ್ಷೆಯಿಂದ ಅವುಗಳ ರಕ್ಷಣೆ, ಸ್ಥಳೀಯ ಸಮುದಾಯಗಳ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸುವ ದೃಷ್ಟಿಯಿಂದ ಪ್ರಾರಂಭಿಸಿರುವ ಪುನರುಜ್ಜೀವನದ ಕ್ರಮಗಳು, ಗ್ರಾಮಸ್ಥರ ಸಂಪೂರ್ಣ ಸಹಭಾಗಿತ್ವ, ಸ್ವಪ್ರಯತ್ನಗಳ ಫಲವಾಗಿಯೇ ರೂಪುಗೊಂಡಿರುವ ಕಿರು ಅರಣ್ಯ ಉತ್ಪನ್ನಗಳ ನೆಡುತೋಪು, ದುರ್ಬಲ ವರ್ಗಗಳ ಆದಾಯ ಹೆಚ್ಚಳ ಉದ್ದೇಶಕ್ಕಾಗಿ ರೂಪುಗೊಂಡಿರುವ ಔಷಧವನ, ಬೇಡಿಕೆ ಇಳಿಸುವ ಕ್ರಮಗಳು, ಆದಾಯ ಗಳಿಕೆಯ ಪರ್ಯಾಯ ಮಾರ್ಗಗಳು, ಸಧ್ಯದಲ್ಲಿ ಕೈಗೊಂಡ ಕ್ರಮಗಳಲ್ಲಿ ಸಂಪೂರ್ಣ ಭರವಸೆ, ಖಚಿತವಾದ ನೀತಿ ನಿಯಮಗಳು, ಸಮರ್ಥವಾದ ನಿಗಾವಣೆ ವ್ಯವಸ್ಥೆ, ತೀರಾ ಅಪರೂಪವಾದ ನಿಯಮ ಉಲ್ಲಂಘನೆಯ ಪ್ರಕರಣಗಳು ಯೋಜನೆಯಲ್ಲಿನ ಆಸಕ್ತಿಯನ್ನು ಉಳಿಸಿಕೊಂಡು ಹೋಗುವಲ್ಲಿ ಅರಣ್ಯ ಇಲಾಖೆಯ ಪ್ರಾಮಾಣಿಕ ನೆರವು - ಈ ಎಲ್ಲವೂ ಭಾಗವಹಿಸುವಿಕೆ ಉತ್ತಮ ಮಟ್ಟದಲ್ಲಿರುವ ಕುಮಾರನ ಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಜಂಟೀ ಅರಣ್ಯಯೋಜನೆ, ಅಡೆ-ತಡೆಗಳಿದ್ದರೂ ನಿಧಾನವಾಗಿ ಯಶಸ್ವಿಯಾಗುವ ಸ್ಪಷ್ಟ ಸೂಚನೆಗಳನ್ನು ನೀಡುತ್ತವೆ. ಈ ಯಾವ ಲಕ್ಷಣಗಳೂ ಕಾಣದ ಹನಿಯಾ, ಉದ್ಘಾರು ಮುಕುಂದೂರುಗಳಲ್ಲಿ ಜಂಟೀ ಅರಣ್ಯ ಯೋಜನೆ ಯಶಸ್ವಿಯಾಗುವುದು ಅಸಂಭವವೆನ್ನಿಸುತ್ತದೆ.

ಸಹಭಾಗಿತ್ವದ ವರ್ಗೀಕರಣ

ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಯ ಉಗಮ, ವಿಕಾಸಗಳನ್ನು ಕೂಲಂಕಷವಾಗಿ ಪರೀಕ್ಷಿಸಿದ ಮೊದಲನೆಯ ಅಧ್ಯಾಯದಲ್ಲಿ ಭಾಗವಹಿಸುವಿಕೆಯ ವಿವಿಧ ರೀತಿಗಳನ್ನೂ, ವಿವಿಧ ಹಂತಗಳನ್ನೂ ಗಮನಿಸಿದ್ದೇವೆ. ಅದರ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿನ ಸಹಭಾಗಿತ್ವವನ್ನು ವರ್ಗೀಕರಿಸುವುದು ಸಾಧ್ಯವಾಗುತ್ತದೆ.

ಸಾಧನವಾಗಿ ಭಾಗವಹಿಸುವಿಕೆ(ಪಾರ್ಟಿಸಿಪೇಶನ್ ಆ್ಯಸ್ ಎ ಮೀನ್ಸ್) ಮತ್ತು ಗುರಿಯಾಗಿ ಭಾಗವಹಿಸುವಿಕೆ(ಪಾರ್ಟಿಸಿಪೇಶನ್ ಆ್ಯಸ್ ಆನ್ ಎಂಡ್), ಭಾಗವಹಿಸುವಿಕೆಯ ಎರಡು ಪ್ರಕಾರಗಳು ಸಾಧನವಾಗಿ ಭಾಗವಹಿಸುವಿಕೆಯಲ್ಲಿ ಹೊರಗಿನಿಂದ ಬಂದ ಯೋಜನೆಗೆ ಸ್ಥಳೀಯರ ಬೆಂಬಲ ಒದಗಿಸುವ ತಂತ್ರವಾಗಿ ಮಾತ್ರ ಭಾಗವಹಿಸುವಿಕೆ ಕೆಲಸ ಮಾಡುತ್ತದೆ. ಸಮುದಾಯದ ಸಶಕ್ತೀಕರಣಕ್ಕೆ ಇಲ್ಲಿ ಪ್ರಾಮುಖ್ಯತೆಯಿಲ್ಲ. ಹನಿಯಾ, ಉದ್ಘಾರು, ಮುಕುಂದೂರುಗಳಲ್ಲಿ ಇದು ಗೋಚರಿಸುತ್ತದೆ. ಗುರಿಯಾಗಿ ಭಾಗವಹಿಸುವಿಕೆಯಲ್ಲಿ, ಸಹಭಾಗಿತ್ವ ಪರಿವರ್ತನೆಯ ಸಾಧನವಾಗುತ್ತದೆ. ಯೋಜನೆಯಲ್ಲಿ ಭಾಗವಹಿಸುತ್ತಲೇ ಸ್ಥಳೀಯ ಜನತೆ ತಮ್ಮ ಅಭ್ಯುದಯಕ್ಕೆ ಅಗತ್ಯವಾದ ಅರಿವು, ಕೌಶಲ, ಅನುಭವಗಳನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ವರ್ಧಿಸಿಕೊಳ್ಳುವ, ಸಶಕ್ತರಾಗುವ ಅವಕಾಶಗಳಿಗೆ ಪ್ರಾಮುಖ್ಯತೆಯಿದೆ. ಈ ರೀತಿಯ ಭಾಗವಹಿಸುವಿಕೆಯಲ್ಲಿ ಸ್ಥಳೀಯ ಜನ ಸಂಘಟಿತರಾಗುತ್ತಾರೆ. ಅಭಿವೃದ್ಧಿ ಯೋಜನೆಗಳಲ್ಲಿ ಸರಿಸಮವಾದ ಪಾಲನ್ನು

ಪಡೆಯಲು ಅಗತ್ಯವಾದ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾರೆ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಈ ಬೆಳವಣಿಗೆಯನ್ನು ಸ್ಪಷ್ಟವಾಗಿ ಗುರುತಿಸಬಹುದು.

ವಿಶ್ವರಾಷ್ಟ್ರ ಸಂಸ್ಥೆಯ ಬಂಡವಾಳ ಅಭಿವೃದ್ಧಿ ನಿಧಿ, ಭಾಗವಹಿಸುವಿಕೆಯನ್ನು ಎಂಟು ಹಂತಗಳ ಮೂಲಕವಾಗಿ ಸಾಗುವ ಪ್ರಕ್ರಿಯೆಯಾಗಿ ಪರಿಭಾವಿಸುತ್ತದೆ ಎಂಬುದನ್ನು ಮೊದಲನೆಯ ಅಧ್ಯಾಯದಲ್ಲಿ ನೋಡಿದ್ದೇವೆ. ಇದರಲ್ಲಿ ಭಾಗವಹಿಸುವಿಕೆಯನ್ನು ಜಾರಿಗೊಳಿಸದೇ, ಭಾಗವಹಿಸುವಿಕೆ ಇದೆಯೆಂಬ ಭ್ರಮೆಯನ್ನು ಮೂಡಿಸುವ 'ಮ್ಯಾನಿಪುಲೇಶನ್' ಮೊದಲನೆಯ ಹಂತ. ಸರ್ಕಾರದಿಂದ ಸಮುದಾಯದತ್ತ ಏಕಮುಖವಾಗಿ ಸಾಗುವ ಮಾಹಿತಿ ಪ್ರಸರಣ ಎರಡನೆಯ ಹಂತ. ಉದ್ದೂರು ಮತ್ತು ಮುಕುಂದೂರುಗಳು ಈ ಹಂತದಲ್ಲಿಯೇ ಉಳಿದು ಹೋಗಿವೆ. ಹನಿಯಾದ ಅರಣ್ಯ ಸಮಿತಿಗೆ, ಸಮುದಾಯಕ್ಕೆ ಈ ಎರಡು ಹಂತಗಳನ್ನು ದಾಟಿ ಮುಂದೆ ಸಾಗುವ ಸಾಮರ್ಥ್ಯವಿದ್ದರೂ, ಗೇರು ನೆಡುತೋಪಿನಿಂದ ಆದಾಯ ಹಾಗೂ ಒತ್ತುವರಿ ಮಾಡಿಕೊಂಡಿರುವ ಭೂಮಿಯನ್ನು ಉಳಿಸಿಕೊಳ್ಳುವ ಎರಡೇ ಉದ್ದೇಶಗಳಿಂದ ಕಾರ್ಯಶೀಲವಾದ್ದರಿಂದ ಅವು ಪ್ರಾರಂಭದ ಎರಡು ಹಂತಗಳನ್ನು ದಾಟಿಯೇ ಇಲ್ಲ. ಭಾಗವಹಿಸುವಿಕೆಯ ಮುಂದಿನ ಹಂತಗಳಾದ ಸಮಾಲೋಚನೆ, ಒಮ್ಮತ ನಿರ್ಮಾಣ, ನಿರ್ಧಾರ ಕೈಗೊಳ್ಳುವಿಕೆ, ಪಾಲುದಾರಿಕೆಗಳನ್ನು ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಕಾಣಬಹುದು. ಸ್ವಯಂ ನಿರ್ವಹಣೆ ಭಾಗವಹಿಸುವಿಕೆಯ ಅಂತಿಮ ಹಂತ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳ ಗ್ರಾಮ ಅರಣ್ಯ ಸಮಿತಿಗಳು ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ಮೇಲೆ ಅತಿ ಹೆಚ್ಚಾಗಿ ಅವಲಂಬಿತ ವಾಗಿರುವುದರಿಂದ ಸ್ವಯಂ ನಿರ್ವಹಣೆಯ ಹಂತ ತಲುಪಲು ಇನ್ನೂ ಸಾಕಷ್ಟು ಕಾಲಾವಕಾಶಬೇಕು.

ಅರ್ನ್‌ಸ್ಟೀನ್, ಭಾಗವಹಿಸುವಿಕೆಯ ನಿಚ್ಚಣಿಕೆಯೊಂದನ್ನು (ಪಾರ್ಟಿಸಿಪೇಶನ್ ಲ್ಯಾಡರ್) ರೂಪಿಸಿರುವುದನ್ನು ಮೊದಲನೆಯ ಅಧ್ಯಾಯದಲ್ಲಿ ನೋಡಿದ್ದೇವೆ. ಈ ನಿಚ್ಚಣಿಕೆಯಲ್ಲಿ ಎಂಟು ಸೋಪಾನಗಳಿವೆ. ಹನಿಯಾ, ಉದ್ದೂರು, ಮುಕುಂದೂರುಗಳಲ್ಲಿನ ಭಾಗವಹಿಸುವಿಕೆ ಮೊದಲ ಮೂರು ಸೋಪಾನಗಳಿಗಿಂತ ಮೇಲೇರುವುದಿಲ್ಲ. ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಸಹಭಾಗಿತ್ವ, ಕುಶಲ ನಿರ್ವಹಣೆ, ಚಿಕಿತ್ಸೆ, ಮಾಹಿತಿ ನೀಡಿಕೆ, ಸಮಾಲೋಚನೆ, ಸಮಾಧಾನ ಹೇಳಿಕೆ, ಪಾಲುದಾರಿಕೆಗಳ ಆರು ಮೆಟ್ಟಿಲುಗಳನ್ನೇರುತ್ತದೆ. ಅಧಿಕಾರದ ನಿಯೋಜನೆ, ನಾಗರಿಕ ನಿಯಂತ್ರಣ ಕಡೆಯ ಎರಡು ಮೆಟ್ಟಿಲುಗಳು. ಅಧಿಕಾರದ ನಿಯೋಜನೆ ಎರಡು ರೀತಿಗಳಲ್ಲಿ ಆಗಬೇಕು. ಅರಣ್ಯ ಇಲಾಖೆಯಿಂದ ಗ್ರಾಮ ಅರಣ್ಯ ಸಮಿತಿಗೆ ಮತ್ತು ಗ್ರಾಮ ಅರಣ್ಯ ಸಮಿತಿಯಿಂದ ಸಮತಲರೂಪಿಯಾಗಿ ಸಮಿತಿಯ ಎಲ್ಲ ಜಾತಿ-ವರ್ಗ-ಲಿಂಗಗಳ ಸದಸ್ಯರಿಗೆ. ಜಂಟೀ ಅರಣ್ಯ ಯೋಜನೆಯಲ್ಲಿ ಅಧಿಕಾರದ ನಿಯೋಜನೆಯ ಪರಿಕಲ್ಪನೆಯಿದ್ದರೂ ಅನುಷ್ಠಾನದಲ್ಲಿ ಅನೇಕ ಕುಂದು ಕೊರತೆಗಳಿವೆ. ಇವು ನಿವಾರಣೆಯಾದ ಹೊರತು ಭಾಗವಹಿಸುವಿಕೆ ಕಡೆಯ ಎರಡು ಹಂತಗಳನ್ನು ಮುಟ್ಟುವುದಿಲ್ಲ.

ಕರ್ನಾಟಕ ಸರ್ಕಾರದ ಆದೇಶದಂತೆ ಜಂಟೀ ಅರಣ್ಯ ಯೋಜನೆ ಕ್ಷೇತ್ರಕಾರ್ಯದ ಐದೂ ಹಳ್ಳಿಗಳಿಗೆ ಏಕ ಪ್ರಕಾರವಾಗಿ ಅನ್ವಯವಾಗಿದೆ. ಇದರಲ್ಲಿ ವ್ಯತ್ಯಾಸಗಳಿಲ್ಲ. ವ್ಯತ್ಯಾಸಗಳಿರುವುದು ಗ್ರಾಮ ಅರಣ್ಯ ಸಮಿತಿಗಳಲ್ಲಿ, ಅದರ ಸದಸ್ಯರಲ್ಲಿ, ಅರಣ್ಯ ಅಧಿಕಾರಿ, ಸಿಬ್ಬಂದಿಗಳಲ್ಲಿ, ಸಮುದಾಯದ ಸದಸ್ಯರು-ಅರಣ್ಯ ಸಿಬ್ಬಂದಿಗಳ ನಡುವಿನ ಪ್ರತಿವರ್ತನೆಯಲ್ಲಿ, ಕಾರ್ಯವಿಧಾನ ಗಳಲ್ಲಿ, ಅರಿವಿನ ಮಟ್ಟ, ಆಸಕ್ತಿ, ನಾಯಕತ್ವ, ಪ್ರಾಮಾಣಿಕತೆ, ಪಾರದರ್ಶಕತೆಗಳಲ್ಲಿ. ಇವುಗಳ ಪರಿಣಾಮವಾಗಿ ಸಹಭಾಗಿತ್ವದ ಸ್ವರೂಪದಲ್ಲಿ ವ್ಯತ್ಯಾಸಗಳು ಗೋಚರಿಸುತ್ತವೆ. ಇವುಗಳನ್ನು ಸೈದ್ಧಾಂತಿಕವಾಗಿ ವಿವರಿಸುವ ಪ್ರಯತ್ನವನ್ನು ಮುಂದಿನ ಭಾಗದಲ್ಲಿ ಮಾಡಲಾಗಿದೆ.

ಸಹಭಾಗಿತ್ವದ ಸ್ವರೂಪ : ಸೈದ್ಧಾಂತಿಕ ವಿಶ್ಲೇಷಣೆ

"ಊರೊಟ್ಟಿನ ಸಂಪನ್ಮೂಲಗಳ ನಿರ್ವಹಣೆಗೆ, ಸಮುದಾಯ ಆಧರಿತ ವ್ಯವಸ್ಥೆ ಒಂದು ಕಾರ್ಯ ಸಾಧ್ಯವಾದ ಮಾರ್ಗವೆಂಬುದನ್ನು ಆ ವಿಷಯಕ್ಕೆ ಸಂಬಂಧಪಟ್ಟಂತೆ ನಡೆದಿರುವ ಹಲವಾರು ಸಂಶೋಧನೆಗಳು ತೋರಿಸಿಕೊಟ್ಟಿವೆ"[7] ಈ ರೀತಿಯ ನಿರ್ವಹಣೆಯಲ್ಲಿ ಬಳಕೆದಾರರು ತಾವೇ ಕಟ್ಟು ಪಾಡುಗಳನ್ನು ರೂಪಿಸಿಕೊಂಡು, ಅದಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತಾರೆ. ಸಂಪನ್ಮೂಲದ ಬಳಕೆಗೆ ಸಂಬಂಧಿಸಿದ ಈ ಸಹಕಾರದ ನಡವಳಿಕೆ ಕ್ಷೇತ್ರಾಧ್ಯಯನಗಳಿಂದ ಗೋಚರಿಸಿರುವ ವಾಸ್ತವತೆ. ಇಂತಹ ಸಮುದಾಯ ಆಧರಿತ ವ್ಯವಸ್ಥೆಯಲ್ಲಿ ಸಂಪನ್ಮೂಲವನ್ನು ಬಳಸುವ ಅವಕಾಶ ಹಾಗೂ ಬಳಕೆಯ ಪ್ರಮಾಣಗಳನ್ನು ಸ್ಪಷ್ಟವಾಗಿ ಗೊತ್ತುಪಡಿಸಿಕೊಂಡಿರುವ, ಸಂಘಟಿತರಾದ ಬಳಕೆದಾರರ ಗುಂಪನ್ನು ನೋಡಬಹುದು. ಈ ಗುಂಪಿನ ಸದಸ್ಯರಲ್ಲದವರಿಗೆ ಸಂಪನ್ಮೂಲವನ್ನು ಬಳಸಲು ಅವಕಾಶವಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ಇದಕ್ಕೆ ರಿಯಾಯಿತಿ ತೋರಿ ಸೀಮಿತ ಹಕ್ಕುಗಳನ್ನು ನೀಡಲಾಗುತ್ತದೆ. ಈ ಗುಂಪಿನ ಸದಸ್ಯರು ಚರ್ಚೆ, ಸಮಾಲೋಚನೆಗಳ ಮೂಲಕವಾಗಿ ನಿರ್ವಹಣೆಯ ನೀತಿ, ನಿಯಮಗಳು, ನಿಗಾವಣೆಯ ವ್ಯವಸ್ಥೆ, ಶಿಕ್ಷೆ, ದಂಡನೆಗಳನ್ನು ಕಾರ್ಯಗತ ಗೊಳಿಸುತ್ತಾರೆ.

ಊರೊಟ್ಟಿನ ಸಂಪನ್ಮೂಲಗಳ ಸಮುದಾಯ ಆಧರಿತ ನಿರ್ವಹಣೆ ಸಾಧ್ಯವೆಂಬುದನ್ನು ಕ್ಷೇತ್ರಾಧ್ಯಯನಗಳು ತೋರಿಸಿಕೊಟ್ಟ ಸಮಯದಲ್ಲೇ ಅಂತಹ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆಂಬುದನ್ನು ಸೈದ್ಧಾಂತಿಕವಾಗಿ ವಿವರಿಸುವ ಪ್ರಯತ್ನಗಳೂ ಪ್ರಾರಂಭವಾದವು. ಗಾರ್ಡನ್ ಮತ್ತು ಹಾರ್ಡಿನ್ ಅವರ ಪ್ರಾರಂಭಿಕ ಸಂಶೋಧನೆಗಳು ಇಂತಹ ವ್ಯವಸ್ಥೆಯ ಬಗ್ಗೆ ನಿರಾಶಾದಾಯಕ ಚಿತ್ರವನ್ನು ನೀಡಿದವು. "ಊರೊಟ್ಟಿನ ಸಂಪನ್ಮೂಲವನ್ನು ಪ್ರತಿಯೊಬ್ಬರೂ ಅತಿ ಬಳಕೆಗೆ ಒಳಪಡಿಸಿ, ಸಂಪನ್ಮೂಲದ ರಕ್ಷಣೆ ಮತ್ತು ನಿರ್ವಹಣೆಯನ್ನು ಮಾತ್ರ ಬೇರೆಯವರು ಮಾಡಬೇಕೆಂದು ನಿರೀಕ್ಷಿಸುತ್ತಾರೆ".[8] "ಬಳಸುವವರು ನಾವು, ಸಂರಕ್ಷಿಸಬೇಕಾದವರು ಬೇರೆಯವರು" ಎಂಬ ಈ 'ಫ್ರೀಲೋಡಿಂಗ್' ನಡವಳಿಕೆಯನ್ನು ಮೊದಲನೆಯ ಅಧ್ಯಾಯದಲ್ಲಿ ನಾವು ಪರೀಕ್ಷಿಸಿದ್ದೇವೆ.

ಇದಕ್ಕೆ ಪರಿಹಾರವಾಗಿ ಬಂದ ಎರಡು ಸೂಚನೆಗಳೆಂದರೆ ಊರೊಟ್ಟಿನ ಸಂಪತ್ತನ್ನು ಖಾಸಗೀಕರಣ ಗೊಳಿಸುವುದು ಅಥವಾ ಸರ್ಕಾರದ ನಿಯಂತ್ರಣಕ್ಕೆ ಒಳಪಡಿಸುವುದು. ಆದರೆ ಈ ಸೈದ್ಧಾಂತಿಕ ನಿಲುವು ಕ್ಷೇತ್ರಾಧ್ಯಯನದಲ್ಲಿ ಪ್ರತ್ಯಕ್ಷವಾಗಿ ಕಂಡುಬಂದ ಸಮುದಾಯ ಆಧರಿತ ನಿರ್ವಹಣೆಯ ಯಶಸ್ವಿ ನಿದರ್ಶನಗಳಿಗೆ ವ್ಯತಿರಿಕ್ತವಾಗಿದ್ದವು. ಅನಂತರದ ಅಧ್ಯಯನಗಳಲ್ಲಿ ಈ ಫ್ರೀಲೋಡಿಂಗ್ ಸಮಸ್ಯೆ "ನಿಯಂತ್ರಣಕ್ಕೆ ಒಳಪಡದ ಊರೊಟ್ಟಿನ ಸಂಪನ್ಮೂಲದ ಅಥವಾ ಮುಕ್ತ ಬಳಕೆಗಾಗಿ ತೆರೆದಿಟ್ಟ 'ಓಪನ್ ಆ್ಯಕ್ಸೆಸ್' ಸಂಪನ್ಮೂಲದ ಗುಣಲಕ್ಷಣವೇ ಹೊರತಾಗಿ ಸಮುದಾಯ ಆಧರಿತ ನಿರ್ವಹಣೆಗೆ ಒಳಪಟ್ಟದ್ದಲ್ಲ ವೆಂದು ವಿವರಿಸಲಾಯಿತು"[9] "ಪ್ರಚಲಿತ ಅಧ್ಯಯನಗಳು ವೈಯಕ್ತಿಕ ಖಾಸಗೀ ಆಸ್ತಿಯಿಂದ ಹಿಡಿದು ರಾಷ್ಟ್ರೀಕೃತ ಸರ್ಕಾರೀ ಆಸ್ತಿಯವರೆಗಿನ, ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಗಳ ನಿರಂತರತೆಯ ಬಗ್ಗೆ ಚಿಂತಿಸುವ ಅಗತ್ಯವನ್ನು ಒತ್ತಿ ಹೇಳುತ್ತದೆ. ಇದರೊಡನೆ ಸಮುದಾಯದ ಸದಸ್ಯರು ತಮ್ಮ ಕೆಲಸಕಾರ್ಯಗಳನ್ನು ಪರಸ್ಪರವಾಗಿ ಸಂಯೋಜಿಸಿಕೊಂಡು, ಸಂಪನ್ಮೂಲ ಸಂರಕ್ಷಣೆಯ ಸಾಮುದಾಯಿಕ ಆಡಳಿತದಲ್ಲಿ ಭಾಗವಹಿಸುವುದು ಸಾಧ್ಯವೆಂಬುದನ್ನು ಸೈದ್ಧಾಂತಿಕ ವಾಗಿ ಒಪ್ಪಿಕೊಳ್ಳಲಾಗಿದೆ".[10] ಮ್ಯಾಕ್‌ಕೀನ್ ಅವರು ಎಂತಹ ಸಂದರ್ಭಗಳಲ್ಲಿ ಜನರ ಸಹಭಾಗಿತ್ವ ಉತ್ತಮವಾಗಿ, ಸಂಪನ್ಮೂಲದ ನಿರ್ವಹಣೆ ಯಶಸ್ವಿಯಾಗಬಹುದೆಂಬುದನ್ನು ಕೆಳಕಂಡಂತೆ ಪಟ್ಟಿಮಾಡಿದ್ದಾರೆ.[11]

- ಪರಸ್ಪರ ಸಹಕಾರದಿಂದ ದೊರೆಯುವ ಪ್ರಯೋಜನಗಳ ಬಗೆಗಿನ ಅರಿವು.
- ಸಂಪನ್ಮೂಲಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾಗಿ ಗೊತ್ತುಪಡಿಸಿದ ಎಲ್ಲೆಗಳು ಹಾಗೂ ಅನುಭೋಗದ ಹಕ್ಕುಗಳು.
- ಬಳಕೆದಾರರ ಸಣ್ಣ ಗುಂಪು
- ಸಮುದಾಯದ ವಿವಿಧ ಸ್ತರಗಳಲ್ಲಿನ ಜನರ ನಡುವೆ ದೀರ್ಘಕಾಲದಿಂದ ನಡೆದುಬಂದಿರುವ ಒಡನಾಟ.
- ಸರಳವಾದ ನಿಯಮಗಳು.
- ವಿವಿಧ ಅಪರಾಧಗಳಿಗೆ ಅನುರೂಪವಾದ ದಂಡನೆ
- ಸುಲಭ ಸಾಧ್ಯವಾದ ನಿಗಾವಣೆ ವ್ಯವಸ್ಥೆ ಹಾಗೂ ಉತ್ತರದಾಯಿತ್ವ.
- ಹೊರಗಿನ ರಾಜಕೀಯ, ಆರ್ಥಿಕ ವಲಯಗಳ ಪ್ರಭಾವ.

ಈ ಮೇಲಿನ ಅಂಶಗಳಲ್ಲಿ ಸಮುದಾಯದ ಸದಸ್ಯರಿಗೆ ಸಂಬಂಧಪಟ್ಟಂತಾಗಲೀ, ಸಂಪನ್ಮೂಲದ ಪ್ರಚಲಿತ ಪರಿಸ್ಥಿತಿಗೆ ಸಂಬಂಧಪಟ್ಟಂತಾಗಲೀ ಬದಲಾವಣೆಗಳನ್ನು ತರುವುದು ಸುಲಭವಲ್ಲ. ಆದರೆ ನೀತಿ, ನಿಯಮ, ನಿಗಾವಣೆ, ದಂಡನೆ ಮುಂತಾದವುಗಳನ್ನೊಳಗೊಂಡ ಸಾಂಸ್ಥಿಕ ಏರ್ಪಾಟು

ಗಳಲ್ಲಿ ಬದಲಾವಣೆಗಳನ್ನು ತರಬಹುದು. ಆದ್ದರಿಂದ, ಸಂಪನ್ಮೂಲಗಳು ಹಾಗೂ ಅದನ್ನು ಬಳಸುವ ಗುಂಪುಗಳ ಗುಣಲಕ್ಷಣಗಳನ್ನು ಗಮನದಲ್ಲಿಸಿಕೊಂಡು ಸಾಂಸ್ಥಿಕ ಏರ್ಪಾಟುಗಳಲ್ಲಿ ಬದಲಾವಣೆಗಳನ್ನು ತರಲು ಸರ್ಕಾರ ಪ್ರಯತ್ನಿಸುತ್ತದೆ. ಜಂಟೀ ಅರಣ್ಯ ಯೋಜನೆಯಲ್ಲಿನ 'ಗ್ರಾಮ ಅರಣ್ಯ ಸಮಿತಿ' ಇಂತಹ ಒಂದು ಪ್ರಯತ್ನ.

ಮ್ಯಾಕ್‌ಕೀನ್ ನೀಡಿರುವ ಸಮುದಾಯ ಆಧರಿತ ನಿರ್ವಹಣಾ ವ್ಯವಸ್ಥೆ ಯಶಸ್ವಿಯಾಗುವ ಸಂದರ್ಭಗಳ ಪಟ್ಟಿ ಗ್ರಾಮ ಅರಣ್ಯ ಸಮಿತಿಗಳ ನಿರ್ದಿಷ್ಟ ಸಾಮಾಜಿಕ ಲಕ್ಷಣಗಳನ್ನು ಗುರುತಿಸಲು ನೆರವಾಗುತ್ತದೆ. ಕ್ಷೇತ್ರ ಕಾರ್ಯದ ಹಳ್ಳಿಗಳಲ್ಲಿನ ಗ್ರಾಮ ಅರಣ್ಯ ಸಮಿತಿಯ ಮೂರು ಮುಖ್ಯ ಲಕ್ಷಣಗಳೆಂದರೆ ಗುಂಪಿನ ಗಾತ್ರ, ಸಾಮಾಜಿಕ ಪ್ರತಿವರ್ತನೆಯ ವ್ಯಾಪ್ತಿ(ಎಕ್ಸ್ಟೆಂಟ್ ಆಫ್ ಸೋಶಿಯಲ್ ಇಂಟರಾಕ್ಷನ್) ಮತ್ತು ಭಿನ್ನತೆಯ ಪ್ರಮಾಣ(ಡಿಗ್ರಿ ಆಫ್ ಹೆಟೆರೋ ಜೀನಿಟಿ) "ಬಳಕೆದಾರರ ಗುಂಪು ಸಣ್ಣದಾದಷ್ಟೂ, ಅವು ಭರಿಸಬೇಕಾದ ವಹಿವಾಟಿನ ಹಾಗೂ ನಿಗಾವಣೆಯ ವೆಚ್ಚಗಳು ಕಡಿಮೆಯಾಗುತ್ತವೆ. ಪರಸ್ಪರವಾಗಿ ಪ್ರಯೋಜನಕಾರಿಯಾದ ಒಪ್ಪಂದಗಳನ್ನು ರೂಪಿಸಿಕೊಳ್ಳುವುದು ಸುಲಭವಾಗುತ್ತದೆ".[12] ಇದರೊಂದಿಗೆ ಸಣ್ಣಗಾತ್ರದ ಸಮುದಾಯ ಸಂಪನ್ಮೂಲದ ಧಾರಣಾ ಸಾಮರ್ಥ್ಯಕ್ಕೆ (ಕ್ಯಾರಿಯಿಂಗ್ ಕೆಪಾಸಿಟಿ) ಮೀರಿದ ಒತ್ತಡವನ್ನು ಅದರ ಮೇಲೆ ಹೇರುವುದಿಲ್ಲ. ಬಳಕೆದಾರರ ಗುಂಪಿನ ಗಾತ್ರ ಹೆಚ್ಚಾದಷ್ಟೂ ಸಂಪನ್ಮೂಲ ನಿರ್ವಹಣೆಯ ವ್ಯವಸ್ಥೆಯ ಮೇಲೆ ಸಾಮಾಜಿಕ ಮತ್ತು ಜೀವಿ ಪರಿಸ್ಥಿತಿ ಒತ್ತಡಗಳು ಹೆಚ್ಚಾಗಿ, ಬಳಕೆದಾರರು ಪರಸ್ಪರ ಸಹಕಾರದ ನಡವಳಿಕೆಯನ್ನು ಉಳಿಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ಆದರೆ ಎಲ್ಲ ಸಂದರ್ಭಗಳಿಗೂ ಅನ್ವಯವಾಗುವಂತೆ ಅತಿ ಪ್ರಶಸ್ತವಾದ ಗುಂಪಿನ ಗಾತ್ರ ಯಾವುದು ಎಂಬುದನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಸಮುದಾಯದ ಅಥವಾ ಬಳಕೆದಾರರ ಗುಂಪಿನ ಗಾತ್ರ ವಿವಿಧ ಸಮುದಾಯಗಳನ್ನು ಪ್ರತ್ಯೇಕಿಸಲು ನೆರವಾಗುವುದಿಲ್ಲ.

ಸಣ್ಣಗುಂಪುಗಳಲ್ಲಿ, ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪರಸ್ಪರ ಪ್ರತಿವರ್ತನೆಗಳಿಗೆ ಹೆಚ್ಚಿನ ಅವಕಾಶಗಳಿದ್ದು, ಇದರ ಪರಿಣಾಮವಾಗಿ ಸಮುದಾಯ ಅನನ್ಯತೆಯ ಭಾವನೆ ಹೆಚ್ಚಿ, 'ಸೋಶಿಯಲ್ ಕ್ಯಾಪಿಟಲ್' ವೃದ್ಧಿಸುತ್ತದೆ. "ಆದರೆ ದೀರ್ಘಾವಧಿಯವರಗೆ ಮತ್ತೆ ಮತ್ತೆ ನಡೆಯುವ ಪ್ರತಿವರ್ತನೆಗಳು ಎಲ್ಲ ಸಂದರ್ಭಗಳಲ್ಲೂ ಸಾಮರಸ್ಯದ ಸಂಬಂಧವನ್ನು ಬೆಳೆಸಬೇಕೆಂಬುದೇನೂ ಇಲ್ಲ".[13] ಹೆಚ್ಚಿನ ಸಂಬದ್ಧತೆಯಿರುವ ಸಾಮಾಜಿಕ ಘಟಕಗಳಲ್ಲಿ ಪುನರಾವರ್ತಿತ ಪ್ರತಿವರ್ತನೆಗಳು ಪರಸ್ಪರ ಸಹಕಾರವನ್ನು ಬೆಳೆಸುವ ರೀತಿಯಲ್ಲಿಯೇ ವಿಭಜನೆಗೊಂಡಿರುವ ಸಮುದಾಯಗಳಲ್ಲಿ ಪುನರಾವರ್ತಿತ ಪ್ರತಿವರ್ತನೆಗಳು ದ್ವೇಷ, ವೈಷಮ್ಯಗಳನ್ನು ಮತ್ತಷ್ಟು ಬಲಗೊಳಿಸುತ್ತವೆ. ಗ್ರಾಮಾಂತರ ಪ್ರದೇಶದ ಸಂಪನ್ಮೂಲಗಳ ನಿರ್ವಹಣೆಯ ಸಂದರ್ಭದಲ್ಲಿ ಗುಂಪಿನಿಂದ ಹೊರ ಹೋಗುವ ಸಾಧ್ಯತೆ ಬಹಳ ಕಡಿಮೆಯಿದ್ದಾಗ ಪರಸ್ಪರ ಸಹಕಾರ ಸಂಬಂಧಗಳು ದೀರ್ಘಾವಧಿ

ಪ್ರಬಲವಾಗಿರುವ ಜಾತಿಗಳೂ ಇವೆ. ಇವು ಹಲವಾರು ಕಾರಣಗಳಿಂದಾಗಿ ಆಂತರಿಕ ಅಸಮಾಧಾನ, ಘರ್ಷಣೆಗಳನ್ನೂ ತರುತ್ತವೆ. ಇಂತಹ ಸಮುದಾಯದಲ್ಲಿ ಸಾಮೂಹಿಕ ಪ್ರಯತ್ನಗಳ ಬಗ್ಗೆ ಏಕಪ್ರಕಾರವಾದ ಆಸಕ್ತಿಯನ್ನು ಬೆಳೆಸುವುದಷ್ಟೇ ಅಲ್ಲದೇ, ಅಂತಹ ಆಸಕ್ತಿ ಜಾತಿ ಮತ್ತು ಬುಡಕಟ್ಟುಗಳು ತರುವ ಆಂತರಿಕ ಸಮಸ್ಯೆಗಳನ್ನು ಮೀರಿ ಬೆಳೆಯುವಂತೆ ಮಾಡುವುದು ಸಾಧ್ಯವಾದರೆ ಮಾತ್ರ ಜನರ ಸಹಭಾಗಿತ್ವವನ್ನು ನಿರೀಕ್ಷಿಸಬಹುದು. ಮರಡವಳ್ಳಿಯಲ್ಲಿ ಇದು ಸಾಧ್ಯವಾಗಿದೆ. ಸಂಪನ್ಮೂಲದ ಸಂರಕ್ಷಣೆ ಮತ್ತು ಬಳಕೆಗಾಗಿ ಸಾಮೂಹಿಕ ಪ್ರಯತ್ನಗಳ ಬಗ್ಗೆ ಏಕಪ್ರಕಾರವಾದ ಆಸಕ್ತಿಯನ್ನು ಬೆಳೆಸುವುದರಲ್ಲಿ ಎರಡೂ ಜಾಗಗಳಲ್ಲಿ ಸರ್ಕಾರೇತರ ಸಂಸ್ಥೆಗಳು ಉತ್ತಮ ಕೆಲಸ ಮಾಡಿವೆ. ಆದರೆ ಭಿನ್ನಜಾತಿಗಳ ಸಮುದಾಯವಿರುವ ಮರಡವಳ್ಳಿಯಲ್ಲಿ ಸ್ಥಳೀಯ ಸರ್ಕಾರೇತರ ಸಂಸ್ಥೆಯ ಕೆಲಸ ಹೆಚ್ಚು ಕಷ್ಟಕಾರಿಯಾದದ್ದು. ಹನಿಯಾ, ಉದ್ದೂರು, ಮುಕುಂದೂರುಗಳದೂ ಇದೇ ರೀತಿಯ ಭಿನ್ನಜಾತಿಗಳ ಸಮುದಾಯಗಳು. ಆದರೆ ಈ ಹಳ್ಳಿಗಳ ಆಂತರಿಕ ಘರ್ಷಣೆಗಳು, ರಾಜಕೀಯ ವೈಷಮ್ಯಗಳನ್ನು ಮೀರಿನಿಂತು, ಸಂಪನ್ಮೂಲಗಳ ಸಂರಕ್ಷಣೆಗೆ ಸಾಮೂಹಿಕ ಪ್ರಯತ್ನವನ್ನು ಪ್ರೇರೇಪಿಸುವಂತಹ ಸರ್ಕಾರೇತರ ಸಂಸ್ಥೆಗಳಾಗಲೀ, ನಾಯಕರಾಗಲೀ ಇಲ್ಲದಿರುವುದರಿಂದ ಜನರ ಸಹಭಾಗಿತ್ವ ನಿರಾಶಾದಾಯಕವಾಗಿದೆ.

ಸಂಪನ್ಮೂಲದ ಸಂರಕ್ಷಣೆಯಲ್ಲಿ ಸಮಾನ ಆಸಕ್ತಿಯಿದ್ದರೂ, ಆರ್ಥಿಕ ಪರಿಸ್ಥಿತಿ, ಕೌಶಲ ಮುಂತಾದವುಗಳಲ್ಲಿನ ವ್ಯತ್ಯಾಸದಿಂದ ಉಂಟಾಗುವ ಭಿನ್ನತೆಯನ್ನು ಪರಿಗಣಿಸೋಣ. ಇಂತಹ ಸಮುದಾಯದಲ್ಲಿ, ಸಂಪನ್ಮೂಲವನ್ನು ಬಳಸಿಕೊಳ್ಳಲು ಎಲ್ಲರಿಗೂ ಸಮಾನ ಅವಕಾಶವಿದ್ದಲ್ಲಿ, ಅಲ್ಲಿಯ ಜನರನ್ನು ಸಂಪನ್ಮೂಲದ ಸಂರಕ್ಷಣೆಯ ಸಾಮೂಹಿಕ ಪ್ರಯತ್ನದಲ್ಲಿ ಭಾಗವಹಿಸುವಂತೆ ಮಾಡುವುದರಲ್ಲಿ ಸ್ಥಳೀಯ ನಾಯಕತ್ವ ಅತ್ಯಂತ ಮುಖ್ಯ ಪಾತ್ರವಹಿಸುತ್ತದೆ. ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರು ಹಾಗೂ ಮೂರು ಸದಸ್ಯರಲ್ಲಿ ಇಂತಹ ಅಪರೂಪದ ನಾಯಕತ್ವವಿದೆ. ಮೇಲೆ ನೋಡಿದಂತಹ ಭಿನ್ನತೆಗಳು ಇರುವ ಸಮುದಾಯದಲ್ಲಿ "ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸಮಾನ ಅವಕಾಶಗಳು ಇಲ್ಲದಿದ್ದರೂ, ಅಂತಹ ಸಮುದಾಯದಲ್ಲಿ ಶ್ರೀಮಂತರು, ಪ್ರತಿಷ್ಠಿತ ವರ್ಗದವರು, ಸಂಪನ್ಮೂಲಗಳ ನಿರ್ವಹಣೆಗಾಗಿ ಬಡಜನರ ಮೇಲೆ ಅವಲಂಬಿತವಾಗಿದ್ದರೆ, ಅಂತಹ ಸಮುದಾಯದಲ್ಲೂ ಜನರ ಸಹಭಾಗಿತ್ವ ಹಾಗೂ ಸಂಪನ್ಮೂಲದ ಸಂರಕ್ಷಣೆಗೆ ಸಾಧ್ಯವಾಗುತ್ತದೆ."[16] ಹನಿಯಾ, ಉದ್ದೂರು ಮತ್ತು ಮುಕುಂದೂರುಗಳಲ್ಲಿ ಸಂಪನ್ಮೂಲಗಳ ಬಳಕೆಗೆ ಸಮಾನ ಅವಕಾಶಗಳಿಲ್ಲ. ಈ ಮೂರು ಹಳ್ಳಿಗಳ ಶ್ರೀಮಂತರು, ಪ್ರತಿಷ್ಠಿತ ವರ್ಗದವರು, ಸ್ಥಳೀಯವಾಗಿ ಬಡವರು, ದುರ್ಬಲವರ್ಗದವರ ಮೇಲೆ ಅವಲಂಬಿತವಾಗಿದ್ದರೂ ಅದು ತಮ್ಮ ವೈಯಕ್ತಿಕ ಸಂಪತ್ತಿನ ನಿರ್ವಹಣೆಗೇ ವಿನಾ ಊರೊಟ್ಟಿನ ಸಂಪನ್ಮೂಲದ ಸಂರಕ್ಷಣೆಗಲ್ಲ. ಹೀಗಾಗಿ ಈ ಮೂರು ಹಳ್ಳಿಗಳಲ್ಲಿ ಸಹಭಾಗಿತ್ವದ ಪ್ರಮಾಣ ಅತ್ಯಂತ ಕಡಿಮೆ.

ಒಟ್ಟಾರೆಯಾಗಿ ಸೈದ್ಧಾಂತಿಕ ಹಾಗೂ ಅನುಭವ ಜನ್ಯ ಅಧ್ಯಯನಗಳು ಸಮುದಾಯ ಆಧರಿತ ಅರಣ್ಯ ನಿರ್ವಹಣೆಯ ನಿದರ್ಶನಗಳಿರುವುದು ಸಾಧ್ಯವೆಂಬುದನ್ನು ತೋರಿಸುವುದರ ಜೊತೆಗೆ, ಅದು ಎಲ್ಲ ಸಂದರ್ಭಗಳಲ್ಲೂ ಯಶಸ್ವಿಯಾಗಲೇಬೇಕೆಂಬುದೇನೂ ಇಲ್ಲವೆಂಬುದನ್ನು ಸೂಚಿಸುತ್ತದೆ. ಬಳಕೆಯಲ್ಲಿರುವ ನಿರ್ವಹಣೆಯ ಪದ್ಧತಿಗಳು, ಜೀವಿ-ಪರಿಸ್ಥಿತಿ ಸನ್ನಿವೇಷದಲ್ಲಿನ ಬದಲಾವಣೆಗಳು, ಜನಸಂಖ್ಯೆಯ ಹೆಚ್ಚಳ, ನಿರ್ವಹಣೆಗೆ ಬೆಂಬಲವೊದಗಿಸುವ ಕಾನೂನಿನ ಹಾಗೂ ಸಾಂಸ್ಥಿಕ ಸಂರಚನೆಯಲ್ಲಿನ ಬದಲಾವಣೆಗಳು, ಹೊರಗಿನ ಬಳಕೆದಾರರ ಬೇಡಿಕೆಯಲ್ಲಿನ ಬದಲಾವಣೆಗಳು, ಹೊರಗಿನ ಬಳಕೆದಾರರ ಬೇಡಿಕೆಯಲ್ಲಿನ ಏರಿಳಿತಗಳು ಮುಂತಾದ ಹೊಸ ಒತ್ತಡಗಳು ಬಂದ ಸಂದರ್ಭಗಳಲ್ಲಿ ಸಮುದಾಯ ಆಧರಿತ ಸಂಪನ್ಮೂಲ ಪದ್ಧತಿಗಳು ಅಪಾಯಕ್ಕೀಡಾಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಮತ್ತು ಅರಣ್ಯಾಡಳಿತಗಳು ಅಗತ್ಯವಾದ ಬೆಂಬಲವನ್ನು ಒದಗಿಸಿದಲ್ಲಿ, ಈ ಒತ್ತಡಗಳನ್ನು ನಿಭಾಯಿಸಬಹುದು. ಜಂಟೀ ಅರಣ್ಯ ಯೋಜನೆಯ ಹಿಂದೆ ಈ ತತ್ವವೇ ಕೆಲಸ ಮಾಡುತ್ತಿದೆ. ಈ ಮಾದರಿಯಲ್ಲಿ ಅರಣ್ಯ ಇಲಾಖೆಯ ಶಕ್ತಿ ಸಾಮರ್ಥ್ಯಗಳು ಮತ್ತು ಅಧಿಕಾರ ವರ್ಗದ ಜ್ಞಾನ, ಸ್ಥಳೀಯ ಸಮುದಾಯದ ಅನುಭವ ಹಾಗೂ ಕೌಶಲಗಳೊಂದಿಗೆ ಕೈ ಜೋಡಿಸುತ್ತವೆ. ಹೀಗಾಗಿ ಜಂಟೀ ಅರಣ್ಯ ಯೋಜನೆ ಸಾಂಪ್ರದಾಯಿಕವಾದ ಸಮುದಾಯ ಆಧರಿತ ನಿರ್ವಹಣಾ ಪದ್ಧತಿಯನ್ನು ವಿಸ್ತಾರಗೊಳಿಸಿ ಅದರ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನ ವಾಗುತ್ತದೆ.

ಸಹಭಾಗಿತ್ವ ಮತ್ತು ಅರಣ್ಯ ಇಲಾಖೆ

ಸಹಭಾಗಿತ್ವದ ಪರಿಕಲ್ಪನೆಯಿರುವ ಜಂಟೀ ಅರಣ್ಯ ಯೋಜನೆಯಲ್ಲಿ, ಅರಣ್ಯ ಇಲಾಖೆ ಸ್ಥಳೀಯ ಸಮುದಾಯದ ಪ್ರಾರಂಭದ ಪ್ರಯತ್ನಗಳನ್ನು ಪ್ರೇರೇಪಿಸಿ, ಬೆಂಬಲ ನೀಡಿ, ನಿರ್ವಹಣೆಯ ಜವಾಬ್ದಾರಿಯನ್ನು ಸಮುದಾಯದೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ. ಸಮುದಾಯದ ಸಹಭಾಗಿತ್ವ ವನ್ನು ಪ್ರೇರೇಪಿಸುವ ಪ್ರಯತ್ನದಲ್ಲಿ ಅರಣ್ಯಾಧಿಕಾರಿಗಳ, ಅದರಲ್ಲೂ ಮುಖ್ಯವಾಗಿ ತಾಲ್ಲೂಕು ಮತ್ತು ಗ್ರಾಮದ ಹಂತದ ಅರಣ್ಯ ಸಿಬ್ಬಂದಿಗಳ ಮನೋಭಾವ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಅರಣ್ಯ ಸಿಬ್ಬಂದಿ ಮತ್ತು ಗ್ರಾಮ ಅರಣ್ಯ ಸಮಿತಿಯ ಸದಸ್ಯರ ನಡುವಿನ ಸೌಹಾರ್ದಯುತ ಸಂಬಂಧದ ಜೊತೆಗೆ, ಅರಣ್ಯ ಸಿಬ್ಬಂದಿಯೇ ಸಹಭಾಗಿತ್ವದ ಪರಿಕಲ್ಪನೆಗೆ ಯಾವ ರೀತಿ ಪ್ರತಿಕ್ರಿಯಿ ಸುತ್ತಾರೆ ಎಂಬುದು ಬಹಳ ಮುಖ್ಯವಾಗುತ್ತದೆ. ಇದನ್ನು ಅನೇಕ ಅಂಶಗಳು ಪ್ರಭಾವಿಸುತ್ತವೆ.

ಆಡಳಿತದ ದೃಷ್ಟಿಯಿಂದ, ಅರಣ್ಯ ಇಲಾಖೆಯಲ್ಲಿ, ಅರಣ್ಯ ವಿಭಾಗ(ಫಾರೆಸ್ಟ್ ಡಿವಿಶನ್) ಮುಖ್ಯವಾದ ಘಟಕ. ಯಾವುದೇ ಹೊಸನೀತಿ, ಯೋಜನೆಗಳನ್ನು ಅನುಷ್ಠಾನಗೊಳ್ಳಿಸುವ ಕೆಲಸ ಈ ಹಂತದಿಂದ ಕೆಳಗೆ ನಡೆಯುತ್ತದೆ. ಈ ಘಟಕದ ಕ್ಷೇತ್ರ ಅಧಿಕಾರಿ ಮತ್ತು ಸಿಬ್ಬಂದಿಗಳು (ಉಪ

ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ, ಫಾರೆಸ್ಟರ್, ಅರಣ್ಯ ರಕ್ಷಕ, ಅರಣ್ಯ ವೀಕ್ಷಕ), ಸಮುದಾಯದ ಸದಸ್ಯರೊಂದಿಗೆ, ನಾಯಕರೊಂದಿಗೆ, ಸರ್ಕಾರೇತರ ಸಂಸ್ಥೆಗಳೊಂದಿಗೆ ಪ್ರತಿನಿತ್ಯ ವ್ಯವಹರಿಸುತ್ತಾರೆ. ಫಾರೆಸ್ಟರ್, ಅರಣ್ಯ ರಕ್ಷಕ, ವೀಕ್ಷಕರಂತ ಸಿಬ್ಬಂದಿ ಪ್ರತಿನಿತ್ಯ ಸ್ಥಳೀಯ ಸಮುದಾಯದೊಂದಿಗೆ ಬೆರೆಯುತ್ತಾರೆ. ಸ್ಥಳೀಯ ಸಮುದಾಯ ಮತ್ತು ಅರಣ್ಯ ಆಡಳಿತಶಾಹಿಗಳ ನಡುವಿನ ಸಂಬಂಧ ಈ ದಿನಿನಿತ್ಯದ ವ್ಯವಹಾರ ಗಳಿಂದಲೇ ರೂಪುಗೊಳ್ಳುತ್ತದೆ. "ಸ್ಥಳೀಯ ಸಮುದಾಯ, ಅರಣ್ಯಾಡಳಿತವನ್ನು ಹೇಗೆ ಗ್ರಹಿಸುತ್ತದೆ. ಆದರ ಬಗ್ಗೆ ಎಂತಹ ಭಾವನೆಯನ್ನು ಬೆಳೆಸಿಕೊಳ್ಳುತ್ತದೆಯೆಂಬುದನ್ನು ಈ ದಿನನಿತ್ಯದ ವ್ಯವಹಾರಗಳು ಪ್ರಭಾವಿಸುತ್ತವೆ".[17] ಅರಣ್ಯ ಇಲಾಖೆಯ 150 ವರ್ಷಗಳ ಇತಿಹಾಸದಲ್ಲಿ ಈ ಸಿಬ್ಬಂದಿ ಅರಣ್ಯ ಸಂಪನ್ಮೂಲದ ರಕ್ಷಕರಾಗಿ, ನಿಯಂತ್ರಕರಾಗಿ, ಪೋಲೀಸರಾಗಿ, ಸ್ಥಳೀಯ ಸಮುದಾಯವನ್ನು ಕಾಯ್ದಿಟ್ಟ ಅರಣ್ಯಗಳಿಂದ ಹೊರಗಿಟ್ಟದ್ದರು. ಆದರೆ ಜಂಟೀ ಅರಣ್ಯ ಯೋಜನೆ ಬಂದನಂತರ ಅರಣ್ಯ ಸಿಬ್ಬಂದಿಯ ಪಾತ್ರ ಸಂಪೂರ್ಣವಾಗಿ ಬದಲಾಗಿ, ಅರಣ್ಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯವನ್ನು ಭಾಗವಹಿಸುವಂತೆ ಪ್ರೇರೇಪಿಸಬೇಕಾದ ಜವಾಬ್ದಾರಿ ಅವರ ಪಾಲಿಗೆ ಬಂದಿತು. ಈ ಪರಿವರ್ತನೆ ಸುಲಭವಲ್ಲ. ಏಕೆಂದರೆ ಇಂತಹ ಪರಿವರ್ತನೆಯನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಅರಣ್ಯ ಸಿಬ್ಬಂದಿ ತಮ್ಮ ಸೇವಾವಧಿಯ ಉದ್ದಕ್ಕೂ ಚಲಾಯಿಸಿಕೊಂಡು ಬಂದಿದ್ದ ಅಧಿಕಾರವನ್ನು ಸಮುದಾಯದೊಡನೆ ಹಂಚಿಕೊಳ್ಳ ಬೇಕಾಗುತ್ತದೆ. ಇದರಿಂದ ತಮ್ಮ ಸ್ಥಾನಕ್ಕೆ, ತಮ್ಮ ಮಹತ್ವಕ್ಕೆ ಕುಂದಾಗುತ್ತದೆಂಬ ಭಾವನೆಯುಳ್ಳ ಸಿಬ್ಬಂದಿಗಳಿಗೆ ಅರಣ್ಯ ಇಲಾಖೆಯಲ್ಲಿ ಕೊರತೆಯಿಲ್ಲ. ಸಹಭಾಗಿತ್ವವನ್ನು ಆಚರಣೆಗೆ ತರುವ ಕಾರ್ಯಪಡೆಯ ಮುಂಚೂಣಿಯಲ್ಲಿರುವ ಕ್ಷೇತ್ರ ಸಿಬ್ಬಂದಿಗಳು ಹಾಗೂ ನೀತಿ ನಿಯಮಗಳನ್ನು ರೂಪಿಸುವ ಹಿರಿಯ ಅಧಿಕಾರಗಳು ಈ ಇಬ್ಬರಲ್ಲೂ ಸಹಭಾಗಿತ್ವಕ್ಕೆ ಬದ್ಧತೆಯಿದ್ದಾಗ ಮಾತ್ರ ಸಮುದಾಯದ ಹಂತದಲ್ಲಿ ಉತ್ತಮ ಫಲಿತಾಂಶಗಳನ್ನು ನಿರೀಕ್ಷಿಸಬಹುದು.

"ಅರಣ್ಯ ಇಲಾಖೆ ಸಂಪ್ರದಾಯಪಾಲಕರಾದ, ತಾಂತ್ರಿಕ ಪರಿಣಿತಿಯುಳ್ಳ, 'ಟಾಪ್-ಡೌನ್' ಯೋಜನೆಗಳಲ್ಲಿ ಕೌಶಲವುಳ್ಳ ಅಧಿಕಾರಶಾಹಿಯ ಆಡಳಿತಕ್ಕೊಳಪಟ್ಟದೆ. ಇಂತಹ ಇಲಾಖೆ, ಸಹಭಾಗಿತ್ವವನ್ನು ಜಾರಿಗೆ ತರಬೇಕಾದಲ್ಲಿ ಬಿಗಿಯಾದ ಸಂರಚನೆಯಿಂದ ದೂರವಾಗಿ, ಜನಾಭಿಮುಖ ವಾದ, ಜನರೊಂದಿಗೆ ಹೊಂದಿಕೊಳ್ಳಬಲ್ಲ, ಸಮುದಾಯದ ಒಡನಾಟದಲ್ಲಿ ಹೊಸತನ್ನು ಕಲಿಯ ಬಲ್ಲ ಸಾಮರ್ಥ್ಯವುಳ್ಳ ಸಂಸ್ಥೆಯಾಗಿ ಬದಲಾಗಬೇಕಾಗುತ್ತದೆ".[18] ಇಲಾಖೆಯ ಆಡಳಿತ ವ್ಯವಸ್ಥೆಯ ಬಗ್ಗೆ ಬಂದಿರುವ ವ್ಯಾಖ್ಯಾನಗಳು "ಇಲಾಖೆಯ ಕೇಂದ್ರೀಕೃತ ಯೋಜನೆ ರೂಪಣೆ, ನಿರ್ಧಾರ ಕೈಗೊಳ್ಳುವ ವ್ಯವಸ್ಥೆಗಳು ಹಾಗೂ ಬಿಗಿಯಾದ, ಶ್ರೇಣಿ ವ್ಯವಸ್ಥೆಯನ್ನು ಎತ್ತಿ ತೋರಿಸವೆ."[19] ಇಂತಹ ವ್ಯವಸ್ಥೆಯಲ್ಲಿ, ಸ್ಥಳೀಯ ಸಮುದಾಯದ ಹಂತದಲ್ಲಿ ಹೊಸಪರಿಕಲ್ಪನೆಗಳನ್ನು ಅಳವಡಿಸುವ, ನೂತನ ಪ್ರಯೋಗಗಳನ್ನು ಮಾಡುವ ಯಾವುದೇ ಕೆಲಸವನ್ನು ಹಿರಿಯ ಅಧಿಕಾರಿಗಳು

ಪ್ರೋತ್ಸಾಹಿಸುವುದಿಲ್ಲ. "ಈ ಹಂತದಲ್ಲಿನ ಅಧಿಕಾರಿಗಳು, ಹಿರಿಯ ಅಧಿಕಾರಿಗಳು ತೆಗೆದುಕೊಂಡ ನಿರ್ಧಾರಗಳನ್ನು ಜಾರಿಗೊಳಿಸುವುದಷ್ಟೇ ತಮ್ಮ ಜವಾಬ್ದಾರಿಯೇ ಹೊರತಾಗಿ ಹೊಸ ಪ್ರಯೋಗಗಳನ್ನು ಮಾಡುವುದಲ್ಲ ಎಂದು ಭಾವಿಸುತ್ತಾರೆ".[20] "ಸ್ಥಳೀಯ ಸ್ವಪ್ರಯತ್ನಗಳು ಹಾಗೂ ಹೊಸ ಪ್ರಯೋಗಗಳಿಗಿಂತ, ದಿನನಿತ್ಯದ ಕೆಲಸಗಳು ಹಾಗೂ ಸಂಪ್ರದಾಯಗಳಿಗೆ ಮಹತ್ವ ನೀಡುವ ವೃತ್ತಿನಿರತ ಪೂರ್ವಾಚಾರ ಪ್ರಿಯತೆಗಳೇ ಅರಣ್ಯ ಇಲಾಖೆಯಲ್ಲಿ ರೂಢಿಗತ ನಿಯಮಗಳು".[21]

ಅರಣ್ಯ ಇಲಾಖೆಯ ಸಾಂಸ್ಥಿಕ ಸಂರಚನೆ, ಕ್ಷೇತ್ರ ಹಂತದಲ್ಲಿ ಯಾವುದೇ ರೀತಿಯ ಹೊಸ ಪರಿವರ್ತನೆಗಳನ್ನು ಪ್ರೋತ್ಸಾಹಿಸದಿದ್ದರೂ, ಹೊಸ ಪ್ರಯೋಗಗಳಲ್ಲಿ ವೈಯಕ್ತಿಕವಾಗಿ ಆಸಕ್ತಿಯಿರುವ ಅಧಿಕಾರಿ, ಸಿಬ್ಬಂದಿಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತವೆ. ಈ ವಿಚಿತ್ರ ಪರಿಸ್ಥಿತಿಗೆ ಕಾರಣವೆಂದರೆ ಅರಣ್ಯ ಇಲಾಖೆಯ ಆಡಳಿತದಲ್ಲಿ ನಿಗಾವಣೆಗಿರುವ ದುರ್ಬಲಸ್ಥಾನ. "ಕ್ಷೇತ್ರ ಹಂತದಲ್ಲಿ ಅರಣ್ಯಾಧಿಕಾರಿಗಳು ಏನು ಮಾಡುತ್ತಾರೆ, ಏನು ಮಾಡುವುದಿಲ್ಲ, ಅದರ ಪರಿಣಾಮಗಳೇನು ಎಂಬುದನ್ನು ನಿಖರವಾಗಿ ಗುರುತಿಸಲು ಸಾಧ್ಯವಿಲ್ಲ".[22] ಜಂಟೀ ಅರಣ್ಯ ಯೋಜನೆಗೆ ಉತ್ತೇಜನ ದೊರತದ್ದೇ, ಪಶ್ಚಿಮ ಬಂಗಾಳದ ಅರಾಬರಿಯಲ್ಲಿ ಸ್ಥಳೀಯ ಅರಣ್ಯಾಧಿಕಾರಿ ರೂಢಿಗತ ಹಾದಿಯನ್ನು ಬಿಟ್ಟು ನಡೆಸಿದ ಪ್ರಯೋಗದಿಂದ ಎಂಬುದನ್ನು ಎರಡನೆಯ ಅಧ್ಯಾಯದಲ್ಲಿ ನೋಡಿದ್ದೇವೆ. ನಿಗಾವಣೆಗೆ ದುರ್ಬಲಸ್ಥಾನವಿರುವ ಇಂತಹ ಸಂರಚನೆಯನ್ನು, ಚೇಂಬರ್ಸ್ "ಸೆಲ್ಫ್ ಡಿಫೀಟಿಂಗ್ ಸ್ಟೇಟ್"ನ ಪ್ರತಿನಿಧಿಯೆಂದು ವಿವರಿಸುತ್ತಾರೆ. ಈ ರೀತಿಯ "ಸ್ವಯಂ ವಂಚನೆಯ ಪ್ರಭುತ್ವದ" ಒಂದು ಲಕ್ಷಣವೆಂದರೆ "ಹಿರಿಯ ಅಧಿಕಾರಿಗಳು ಹಾಗೂ ನೀತಿ ನಿರೂಪಕರು ನಿಗದಿಪಡಿಸುವ ಸಾಧಿಸಲಾಗದ ಟಾರ್ಗೆಟ್ಟುಗಳನ್ನು ಮುಟ್ಟಲಾಗಿದೆಯೆಂದು ಕ್ಷೇತ್ರ ಹಂತದ ಸಿಬ್ಬಂದಿ ಕಳುಹಿಸುವ ವರದಿಗಳನ್ನು ಉನ್ನತಾಧಿಕಾರಿಗಳು ಒಪ್ಪಿಕೊಳ್ಳುವುದು".[23] "ವೈಫಲ್ಯಗಳ ಬಗ್ಗೆ ಯಾರೂ ವರದಿಗಳನ್ನು ಕಳುಹಿಸುವುದಿಲ್ಲ. ವೈಫಲ್ಯಗಳನ್ನು ಒಪ್ಪಿಕೊಳ್ಳುವ ಪ್ರಶ್ನೆಯೇ ವ್ಯವಸ್ಥೆಯಲ್ಲಿರದಿರು ವುದರಿಂದ, ಅಂತಹ ವೈಫಲ್ಯಗಳು ಹಿರಿಯ ಅಧಿಕಾರಿಗಳ ಕಣ್ಣಿಗೆ ಬೀಳುವುದೇ ಇಲ್ಲ".[24] ಇಂತಹ ವ್ಯವಸ್ಥೆಯಲ್ಲಿ ಕೆಲವು ಬಾರಿ "ಸ್ಥಳೀಯ ಪರಿಸ್ಥಿತಿಗಳಿಗೆ, ಅಗತ್ಯಗಳಿಗೆ ಅನುಗುಣವಾಗಿ ಅನುಷ್ಠಾನದ ಕಾರ್ಯತಂತ್ರ, ಉದ್ದೇಶಗಳು ಬದಲಾಗುತ್ತವೆ. ಇಂತಹ ಬದಲಾವಣೆ ಸ್ಥಳೀಯ ಸಮುದಾಯಕ್ಕೆ ಅನುಕೂಲಕರವಾದಾಗ ಸಹಭಾಗಿತ್ವ ಗಮನಾರ್ಹವಾಗಿ ಹೆಚ್ಚುತ್ತದೆ".[25] ಕುಮಾರನಹಳ್ಳಿ ಮತ್ತು ಮರಡವಳ್ಳಿಗಳಲ್ಲಿ ಇಂತಹ ಅನೇಕ ನಿದರ್ಶನಗಳು ಕಂಡುಬರುತ್ತವೆ. ಅರಣ್ಯ ಇಲಾಖೆಯ ನೀತಿ ನಿಯಮಗಳನ್ನು ಸಡಿಲಗೊಳಿಸಿ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಮಾರಾಟಗಳಲ್ಲಿ ರಿಯಾಯತಿ, ಬೇರೆ ಮೂಲಗಳಿಂದ ಸಣ್ಣ ಮರಮಟ್ಟು, ಗ್ರಾಮ ಅರಣ್ಯ ಸಮಿತಿಗೆ ಆದಾಯ, ಅರಣ್ಯ ಇಲಾಖೆಯ ಕಾರ್ಯಕ್ಷೇತ್ರದಿಂದ ಹೊರಗಿರುವ ವಿಷಯಗಳಲ್ಲೂ ಹಳ್ಳಿಯ ಅಭಿವೃದ್ಧಿಗೆ ಬೆಂಬಲ ಮುಂತಾದ ಕ್ರಮಗಳು ಸಮುದಾಯದ ಹೆಚ್ಚಿನ ಸಹಭಾಗಿತ್ವಕ್ಕೆ ನೆರವಾಗಿವೆ. ಇದಕ್ಕೆ ವಿರುದ್ಧವಾದ ನಡವಳಿಕೆಯನ್ನು ಉದ್ದೂರು, ಮುಕುಂದೂರುಗಳಲ್ಲಿ ನೋಡಬಹುದು.

ಮರಗಳ ಅಕ್ರಮ ಕಡಿತ, ವಿಧ್ವಂಸಕ ಕೃತ್ಯಗಳು, ಗ್ರಾಮ ಅರಣ್ಯ ಸಮಿತಿ ಹಣವನ್ನು ರಾಜಕೀಯ ಚುನಾವಣೆಗೆ ಬಳಸಿದ ಪ್ರಕರಣ, ಹೆಚ್ಚಿನ ಆದಾಯವಿದ್ದರೂ ಸದಸ್ಯರಿಗೆ ಹಂಚದ ಗ್ರಾಮ ಅರಣ್ಯ ಸಮಿತಿ, ಈ ಎಲ್ಲವನ್ನೂ ನೋಡಿಯೂ ನೋಡದಂತೆ ಕುಳಿತ ಅರಣ್ಯಾಧಿಕಾರಿಗಳು ಮುಂತಾದವು ಈ ಎರಡು ಹಳ್ಳಿಗಳಲ್ಲಿ ಸಹಭಾಗಿತ್ವವನ್ನು ತೀವ್ರವಾಗಿ ಹಿಮ್ಮೆಟ್ಟಿಸಿವೆ.

ಜಂಟೀ ಅರಣ್ಯ ಯೋಜನೆಯಲ್ಲಿನ ಸಮುದಾಯದ ಸಹಭಾಗಿತ್ವ, ಅರಣ್ಯ ಸಿಬ್ಬಂದಿ ಸಹಭಾಗಿತ್ವದ ಪರಿಕಲ್ಪನೆಗೆ ಯಾವ ರೀತಿ ಪ್ರತಿಕ್ರಿಯಿಸುತ್ತಾರೆ ಎನ್ನುವುದರ ಮೇಲೂ ಅವಲಂಬಿತವಾಗಿದೆ. ಸ್ಥಳೀಯ ಅರಣ್ಯ ಸಿಬ್ಬಂದಿ ಸಮುದಾಯದ ಸಹಭಾಗಿತ್ವವನ್ನು ಒಪ್ಪಿಕೊಂಡು, ಸ್ವಾಗತಿಸಿದರೆ ಸಹಭಾಗಿತ್ವ ಹೆಚ್ಚುತ್ತದೆ. ಪರಿಣಾಮಕಾರಿಯಾಗುತ್ತದೆ. ಇದಕ್ಕೆ ವಿರುದ್ಧವಾಗಿ ಸಹಭಾಗಿತ್ವವನ್ನು ವಿರೋಧಿಸಿದರೆ ಅಥವಾ ನಿರ್ಲಕ್ಷಿಸಿದರೆ ಆ ಮಟ್ಟಿಗೆ ಭಾಗವಹಿಸುವಿಕೆ ಕುಂಠಿತವಾಗುತ್ತದೆ. ಸ್ಥಳೀಯವಾಗಿ ಘರ್ಷಣೆಯ ಪ್ರಕರಣಗಳಲ್ಲಿ ಇಳಿತ, ಹೆಚ್ಚಿನ ಅರಣ್ಯ ಭೂಮಿಯ ಮೇಲಿನ ನಿಯಂತ್ರಣ, ಅವನತಿ ಹೊಂದಿ ಅರಣ್ಯ ಭೂಮಿಯ ಪುನರುಜ್ಜೀವನ, ಸಮುದಾಯದಿಂದ ದೊರೆಯುವ ಪ್ರೀತಿ, ವಿಶ್ವಾಸ, ಗೌರವಗಳು ಸ್ಥಳೀಯ ಅರಣ್ಯ ಸಿಬ್ಬಂದಿ ಸಮುದಾಯದ ಸಹಭಾಗಿತ್ವವನ್ನು ಸ್ವಾಗತಿಸುವಂತೆ ಮಾಡುತ್ತದೆ. ಅಲ್ಪಸ್ವಲ್ಪ ಅಸಮಾಧಾನಗಳಿದ್ದರೂ ಕುಮಾರನ ಹಳ್ಳಿ ಮತ್ತು ಮರಡವಳ್ಳಿಗಳಲ್ಲಿ, ಅರಣ್ಯ ಸಿಬ್ಬಂದಿ ಸಮುದಾಯದ ಸಹಭಾಗಿತ್ವವನ್ನು ಸ್ವಾಗತಿಸುವಂತೆ ಮಾಡುವ ಈ ಎಲ್ಲ ಅಂಶಗಳೂ ಇರುವುದನ್ನು ನಾವು ಈಗಾಗಲೇ ನೋಡಿದ್ದೇವೆ. ಈ ಪರಿಸ್ಥಿತಿಗೆ ವ್ಯತಿರಿಕ್ತವಾಗಿ ಅರಣ್ಯ ಸಿಬ್ಬಂದಿ ಮತ್ತು ಗ್ರಾಮಸ್ಥರ ನಡುವೆ ಪರಸ್ಪರ ಅಪನಂಬಿಕೆ, ಸಹಭಾಗಿತ್ವ ಅಧಿಕಾರವನ್ನು ಮೊಟಕು ಮಾಡುತ್ತದೆಂಬ ಭಾವನೆ, ಹೆಚ್ಚಿದ ಉತ್ತರದಾಯಿತ್ವದಿಂದ ಭ್ರಷ್ಟಾಚಾರಕ್ಕಿರುವ ಅವಕಾಶಗಳಲ್ಲಿ ತೀವ್ರ ಕಡಿತ, ಸ್ಥಳೀಯ ಮುಖ್ಯಸ್ಥರೊಂದಿಗೆ ಪರಸ್ಪರ ಲಾಭದಾಯಕವಾದ ಹೊಂದಾಣಿಕೆ, ಅರಣ್ಯಸಿಬ್ಬಂದಿ ಸಮುದಾಯದ ಸಹಭಾಗಿತ್ವವನ್ನು ವಿರೋಧಿಸು ವಂತೆ ಅಥವಾ ನಿರ್ಲಕ್ಷಿಸುವಂತೆ ಮಾಡುತ್ತದೆ. ಹನಿಯಾ, ಉದ್ದೂರು, ಮುಕುಂದೂರು ಗಳಲ್ಲಿ ಈ ಅಂಶಗಳನ್ನು ಸಮರ್ಥಿಸುವ ಉದಾಹರಣೆಗಳನ್ನು ಈಗಾಗಲೇ ಪರಿಶೀಲಿಸಿದ್ದೇವೆ.

ಕ್ಷೇತ್ರಕಾರ್ಯದ ಐದು ಹಳ್ಳಿಗಳಲ್ಲಿ ನಡೆಸಿದ ಅಧ್ಯಯನದಿಂದ ದೊರೆತ ಮಾಹಿತಿಗಳನ್ನು ವಿಶ್ಲೇಷಿಸಿ, ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವದ ಸ್ವರೂಪವನ್ನು ಈ ಅಧ್ಯಾಯದಲ್ಲಿ ಗುರುತಿಸಿದ್ದೇನೆ. ಗ್ರಾಮ ಅರಣ್ಯ ಸಮಿತಿಯ ಸದಸ್ಯತ್ವ, ಸಸ್ಯ ಪ್ರಭೇದಗಳ ಹಾಗೂ ಅವುಗಳನ್ನು ನೆಡಬೇಕಾದ ಜಾಗದ ಆಯ್ಕೆ, ಕಿರು ಯೋಜನೆಯ ವಿವಿಧ ಹಂತಗಳಲ್ಲಿ ಭಾಗವಹಿಸಲು ಇರುವ ಅವಕಾಶಗಳು, ಸಮುದಾಯ ಈ ಅವಕಾಶಗಳನ್ನು ಬಳಸಿಕೊಂಡಿರುವ ರೀತಿಯನ್ನು ವಿಷದವಾಗಿ ಪರೀಕ್ಷಿಸಿದ್ದೇನೆ. ಇವುಗಳಿಗೆ ಸಂಬಂಧಿಸಿದ ಸೂಚ್ಯಂಕಗಳು ಒದಗಿಸಿದ ಚಿತ್ರದ ವಿಶ್ಲೇಷಣೆ ಈ ಅವಕಾಶಗಳಲ್ಲಿನ ತೀವ್ರ ಇತಿಮಿತಿಗಳನ್ನು ಎತ್ತಿ ತೋರಿದೆ. ಎಲ್ಲ ಚಟುವಟಿಕೆಗಳಲ್ಲಿನ ಭಾಗವಹಿಸು

ವಿಕೆಯೂ ಅರಣ್ಯ ಇಲಾಖೆಯ ನೇರ ಕಣ್ಗಾವಲಿನಲ್ಲಿ, ಅದರ ನಿಯಂತ್ರಣದಲ್ಲಿ ನಡೆಯಬೇಕಿರುವ ಪರಿಸ್ಥಿತಿಯನ್ನೂ ಅಧ್ಯಯನ ತೋರಿಸಿದೆ. ಅರಣ್ಯ ಸಂಪನ್ಮೂಲದ ಮೇಲಿನ ಅವಲಂಬನೆ, ಯೋಜನೆಯ ವಿವಿಧ ಅಂಶಗಳ ಬಗ್ಗೆ ತಿಳುವಳಿಕೆ, ಸ್ಥಳೀಯ ಸಮುದಾಯಕ್ಕೆ ಯೋಜನೆಯ ಪ್ರಸಕ್ತತೆ, ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯ ಸಮಿತಿಗಳ ಆಸಕ್ತಿ, ಸರ್ಕಾರೇತರ ಸಂಸ್ಥೆಗಳ ಸಹಯೋಗ, ಉತ್ತಮ ನಾಯಕತ್ವಗಳು ಸಮುದಾಯದ ಸಹಭಾಗಿತ್ವವನ್ನು ಹೇಗೆ ಪ್ರಭಾವಿಸುತ್ತವೆಂಬುದು ಈ ಅಧ್ಯಯನದಿಂದ ಸ್ಪಷ್ಟವಾಗಿದೆ. TRAITSಮಾನದಂಡ ಹಾಗೂ ಆರ್ನ್‌ಸ್ಟೀನ್ ಭಾಗವಹಿ ಸುವಿಕೆಯ ನಿಚ್ಚಣಿಕೆಯಲ್ಲಿ ಕ್ಷೇತ್ರಕಾರ್ಯದ ಐದು ಹಳ್ಳಿಗಳು ಯಾವ ಮಟ್ಟದಲ್ಲಿ ನಿಲ್ಲುತ್ತವೆ. ಯಾವ ಹಂತಕ್ಕೇರುತ್ತವೆ ಎಂಬುದನ್ನು ಸೂಚಿಸಲಾಗಿದೆ. ಇದು ಭಾಗವಹಿಸುವಿಕೆಯಲ್ಲಿನ ಕುಂದು ಕೊರತೆಗಳ ಮೇಲೆ ಬೆಳಕು ಚೆಲ್ಲುವುದರ ಜೊತೆಗೆ, ಸಹಭಾಗಿತ್ವವನ್ನು ಉತ್ತಮಗೊಳಿಸಲು ಯಾವ ವಿಷಯಕ್ಕೆ ಸಂಬಂಧಪಟ್ಟಂತೆ, ಎಂತಹ ಮಧ್ಯಪ್ರವೇಶ ಅವಶ್ಯಕವೆಂಬುನ್ನು ಸೂಚಿಸುತ್ತದೆ. ಕ್ಷೇತ್ರಕಾರ್ಯದ ಮಾಹಿತಿಗಳ ವಿಶ್ಲೇಷಣೆಯಿಂದ ಮೂಡಿಬಂದ ಮುಖ್ಯ ತೀರ್ಮಾನಗಳು ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ಸಮುದಾಯದ ಸಹಭಾಗಿತ್ವವನ್ನು ಉತ್ತಮಗೊಳಿಸಲು ಅಗತ್ಯವಾದ ಸಲಹೆ ಸೂಚನೆಗಳನ್ನು ಮುಂದಿನ ಹಾಗೂ ಕಡೆಯ ಅಧ್ಯಾಯದಲ್ಲಿ ನೀಡಲಾಗಿದೆ.

ಕೋಷ್ಟಕ 1

ಜಂಟೀ ಅರಣ್ಯ ಯೋಜನೆಯ ಬಗ್ಗೆ ಅರಿವು ಇರುವವರ ಶೇಕಡವಾರು ಸಂಖ್ಯೆ

ವಿಷಯ	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ದೂರು	ಮುಕುಂದೂರು
ಜಂಟೀ ಅರಣ್ಯ ಯೋಜನೆಯ ಉದ್ದೇಶ	78	75	41	19	24
ಯೋಜನೆಯಿಂದ ದೊರೆಯುವ ಪ್ರಯೋಜನಗಳು	45	53	29	14	13
ಗ್ರಾಮ ಅರಣ್ಯ ಸಮಿತಿ ಹಾಗೂ ಸದಸ್ಯರ ಕೆಲಸಗಳು	59	48	35	17	18
ನಿರ್ವಹಣಾ ಸಮಿತಿ ಹಾಗೂ ಸದಸ್ಯರ ಕೆಲಸಗಳು	50	51	35	13	13
ರೂಪಿಸಿ, ಜಾರಿಗೊಳಿಸುವ ನಿಯಮಗಳು	90	77	18	11	8
ಕಿರು ಯೋಜನೆಯ ಉದ್ದೇಶ ವಿವರಗಳು	64	58	29	11	10
ಸೌಹಾರ್ದ ಒಡಂಬಡಿಕೆ	32	30	18	6	10
ಸ್ವಯಂ ಸೇವಾ ಸಂಸ್ಥೆಗಳ ಪಾತ್ರ	82	88	12	5	8

ಮೂಲ : ಕ್ಷೇತ್ರಕಾರ್ಯದ ಸಂದರ್ಶನಗಳು

ಕೋಷ್ಟಕ 2

ನಿರ್ವಹಣಾ ಸಮಿತಿಯ ಸದಸ್ಯರು, ಅಧ್ಯಕ್ಷರ ಆಯ್ಕೆ

ಗ್ರಾಮ ಅರಣ್ಯ ಸಮಿತಿ	ಆಯ್ಕೆಯ ವಿಧಾನ	ವಿಧಾನವನ್ನು ನಿರ್ಧರಿಸಿದವರು	ಗ್ರಾಮ ಅರಣ್ಯ ಸಮಿತಿಯ ಒಟ್ಟು ಸದಸ್ಯರು	ಆಯ್ಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸಿದವರ ಸಂಖ್ಯೆ
ಕುಮಾರನಹಳ್ಳಿ	ಸರ್ವಾನುಮತ	ಗ್ರಾಮ ಅರಣ್ಯ ಸಮಿತಿಯ ಸದಸ್ಯರು	98	88(90%)
ಮರಡವಳ್ಳಿ	ಸರ್ವಾನುಮತ	ಗ್ರಾಮ ಅರಣ್ಯ ಸಮಿತಿಯ ಸದಸ್ಯರು	178	148(83%)
ಹನಿಯಾ	ಸರ್ವಾನುಮತ	ಗ್ರಾಮ ಅರಣ್ಯ ಸಮಿತಿಯ ಸದಸ್ಯರು	55	32(58%)
ಉದ್ದೂರು	ಚುನಾವಣೆ	ಅರಣ್ಯ ಇಲಾಖೆ	120	43(36%)
ಮುಕುಂದೂರು	ಸರ್ವಾನುಮತ	ಗ್ರಾಮ ಅರಣ್ಯ ಸಮಿತಿಯ ಸದಸ್ಯರು	128	50(39%)

ಮೂಲ : ಕ್ಷೇತ್ರ ಸಂದರ್ಶನ ಮತ್ತು ಸಭೆಯ ನಡಾವಳಿ ಪುಸ್ತಕಗಳು

ಕೋಷ್ಟಕ 3

1992-98ರ ಅವಧಿಯಲ್ಲಿ ಜಂಟೀ ಅರಣ್ಯ ಯೋಜನೆಗೆ ಸಂಬಂಧಪಟ್ಟಂತೆ ತರಬೇತಿ ಪಡೆದವರ ಸಂಖ್ಯೆ

ವಲಯ ಅರಣ್ಯಾಧಿಕಾರಿಗಳು	1865
ಅರಣ್ಯ ರಕ್ಷಕರು	2345
ಇನ್ನಿತರ ಅರಣ್ಯ ಸಿಬ್ಬಂದಿ	1805
ಗ್ರಾಮ ಅರಣ್ಯ ಸಮಿತಿ ಮತ್ತು ಸರ್ಕಾರೇತರ ಸಂಸ್ಥೆಗಳ ಸದಸ್ಯರು	5780
ಒಟ್ಟು	11795

ಮೂಲ : ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಬೆಂಗಳೂರು

ಕೋಷ್ಟಕ 4

ಕಿರುಯೋಜನೆಯ ತಯಾರಿಗೆ ಪೂರ್ವಸಿದ್ಧತೆಗಾಗಿ ನಡೆದಿರುವ ಸಭೆಗಳು

ಗ್ರಾಮ ಅರಣ್ಯ ಸಮಿತಿ	ಗ್ರಾಮ ಅರಣ್ಯ ಸಮಿತಿಯ ಸಭೆಗಳ ಸಂಖ್ಯೆ ಮತ್ತು ಸಭೆಗಳಲ್ಲಿ ಸರಾಸರಿ ಹಾಜರಾತಿ	ಇಲಾಖೆಯೊಡನೆ ನಡೆಸಿರುವ ಸಮಾಲೋಚನೆಗಳ ಸಂಖ್ಯೆ ಮತ್ತು ಆ ಸಂದರ್ಭದಲ್ಲಿ ಸರಾಸರಿ ಹಾಜರಾತಿ	ಸರ್ಕಾರೇತರ ಸಂಸ್ಥೆಯೊಡನೆ ಸಮಾಲೋಚನೆಗಳ ಸಂಖ್ಯೆ ಮತ್ತು ಆ ಸಂದರ್ಭದಲ್ಲಿ ಸರಾಸರಿ ಹಾಜರಾತಿ	ಕಿರು ಯೋಜನೆಗಾಗಿ ತರಬೇತಿ ನಡೆದಿರುವ ತರಬೇತಿ ಶಿಬಿರಗಳ ಸಂಖ್ಯೆ ಮತ್ತು ಶಿಬಿರಗಳಲ್ಲಿ ಸರಾಸರಿ ಹಾಜರಾತಿ
	5	3	3	2 ಶಿಬಿರಗಳು(6 ದಿನ)
ಕುಮಾರನಹಳ್ಳಿ	ಇಲಾಖೆಯ ಸಿಬ್ಬಂದಿ : 2 ಸರ್ಕಾರೇತರ ಸಂಸ್ಥೆಗಳ ಸಿಬ್ಬಂದಿ(ಸ.ಸಂ.ಸಿ) : 2 ಮಹಿಳೆಯರು : 4 ಭೂರಹಿತರು : 3 ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಇತರರು : 12 ಒಟ್ಟು 23	ಇಲಾಖೆ ಸಿಬ್ಬಂದಿ : 4 ಸ.ಸಂ.ಸಿ. : 2 ಮಹಿಳೆಯರು : 2 ಭೂ ರಹಿತರು : 1 ನಿ.ಸ.ಸ.ಹಾಗೂ ಇತರರು : 4 ಒಟ್ಟು 13	ಇಲಾಖೆ ಸಿಬ್ಬಂದಿ : ಇಲ್ಲ ಸ.ಸಂ.ಸಿ. : 4 ಮಹಿಳೆಯರು : 2 ಭೂ ರಹಿತರು : 2 ನಿ.ಸ.ಸ.ಹಾಗೂ ಇತರರು : 4 ಒಟ್ಟು 12	ಇಲಾಖೆ ಸಿಬ್ಬಂದಿ : 3 ಸ.ಸಂ.ಸಿ : 6 ಮಹಿಳೆಯರು : 4 ಭೂ ರಹಿತರು : 4 ನಿ.ಸ.ಸ.ಹಾಗೂ ಇತರರು : 9 ಒಟ್ಟು 26
ಉದ್ದೂರು	------	----1--- ಇಲಾಖೆ ಸಿಬ್ಬಂದಿ : 2 ಸ.ಸಂ.ಸಿ : ಇಲ್ಲ ಮಹಿಳೆಯರು : ಇಲ್ಲ ಭೂರಹಿತರು : ಇಲ್ಲ ನಿ.ಸ.ಸ. : 2 ಒಟ್ಟು : 4	-----	-----

ಮುಕುಂದೂರು	------	----1--- ಇಲಾಖೆ ಸಿಬ್ಬಂದಿ : 3 ಸ.ಸಂ.ಸಿ : ಇಲ್ಲ ಮಹಿಳೆಯರು : ಇಲ್ಲ ಭೂರಹಿತರು : ಇಲ್ಲ ನಿ.ಸ.ಸ. : 5 ಒಟ್ಟು : 8	------	------
ಮರಡವಳ್ಳಿ	---3--- ಇಲಾಖೆಯ ಸಿಬ್ಬಂದಿ : 1 ಸ.ಸಂ.ಸಿ : 3 ಮಹಿಳೆಯರು : 3 ಭೂ ರಹಿತರು : 2 ನಿ.ಸ.ಸ.ಹಾಗೂ ಇತರರು : 7 ಒಟ್ಟು : 16	---2--- ಇಲಾಖೆ ಸಿಬ್ಬಂದಿ : 4 ಸ.ಸಂ.ಸಿ : 3 ಮಹಿಳೆಯರು : 3 ಭೂ ರಹಿತರು : 2 ನಿ.ಸ.ಸ.ಹಾಗೂ ಇತರರು : 4 ಒಟ್ಟು : 16	---4--- ಇಲಾಖೆ ಸಿಬ್ಬಂದಿ : 1 ಸ.ಸಂ.ಸಿ. : 6 ಮಹಿಳೆಯರು : 4 ಭೂ ರಹಿತರು : 1 ನಿಸಸ ಹಾಗೂ ಇತರರು : 3 ಒಟ್ಟು : 15	2 ಶಿಬಿರಗಳು(4 ದಿನ) ಇಲಾಖೆ ಸಿಬ್ಬಂದಿ : 4 ಸ.ಸಂ.ಸಿ : 6 ಮಹಿಳೆಯರು : 4 ಭೂ ರಹಿತರು : 3 ನಿ.ಸ.ಸ.ಹಾಗೂ ಇತರರು : 10 ಒಟ್ಟು : 27
ಹನಿಯಾ	------	---1--- ಇಲಾಖೆ ಸಿಬ್ಬಂದಿ : 3 ಸ.ಸಂ.ಸಿ : ಇಲ್ಲ ಮಹಿಳೆಯರು : ಇಲ್ಲ ಭೂರಹಿತರು : ಇಲ್ಲ ನಿ.ಸ.ಸ. : 3 ಒಟ್ಟು : 6	----	----

ಮೂಲ : ಗ್ರಾಮ ಅರಣ್ಯ ಸಮಿತಿಗಳ ಸಭೆಯ ನಡಾವಳಿ ಪುಸ್ತಕ

ಕೋಷ್ಠಕ 5

ಸಹಭಾಗಿತ್ವ ಗ್ರಾಮೀಣ ಸಮೀಕ್ಷೆ ಹಾಗೂ ಕರಡು ಕಿರುಯೋಜನೆಯನ್ನು ಸಿದ್ಧಪಡಿಸುವುದರಲ್ಲಿ ಭಾಗವಹಿಸಿದವರ ವಿವರಗಳು

ಭಾಗವಹಿಸಿದವರು	ಕುಮಾರನಹಳ್ಳಿ	ಉದ್ದೂರು	ಮುಕುಂದೂರು	ಮರಡವಳ್ಳಿ	ಹನಿಯಾ
ಅರಣ್ಯ ಇಲಾಖೆಯ ಸಿಬ್ಬಂದಿ	9(27%)	3(50%)	2(29%)	5(17%)	2(29%)
ನಿರ್ವಹಣಾ ಸಮಿತಿಯ ಸದಸ್ಯರು	5(15%)	3(50%)	4(57%)	7(22%)	4(57%)
ಮಹಿಳೆಯರು	7(22%)	0 --	0 --	8(27%)	0(0%)
ಭೂ ರಹಿತರು	6(18%)	0 --	1(14%)	5(17%)	1(14%)
ಸರ್ಕಾರೇತರ ಸಂಸ್ಥೆಯ ಸದಸ್ಯರು	6(18%)	0 --	0 --	5(17%)	0(0%)
ಒಟ್ಟು	33(100%)	6(100%)	7(100%)	30(100%)	7(100%)

ಮೂಲ : ಗ್ರಾಮ ಅರಣ್ಯ ಸಮಿತಿಗಳ ಸಭೆಯ ನಡಾವಳಿ ಪುಸ್ತಕ

ಕೋಷ್ಠಕ 6

ಕಿರುಯೋಜನೆಯನ್ನು ತಯಾರಿಸಲು ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಯಿಂದ ಪಡೆದಿರುವ ಮಾಹಿತಿಗಳು

ಮಾಹಿತಿಗಳು	ಕುಮಾರನಹಳ್ಳಿ	ಉದ್ದೂರು	ಮುಕುಂದೂರು	ಮರಡವಳ್ಳಿ	ಹನಿಯಾ
ಸಾಮಾಜಿಕ, ಆರ್ಥಿಕ ಹಾಗೂ ಜನಾಂಗೀಯ	ಸಂಪೂರ್ಣ	ಆಂಶಿಕ	ಆಂಶಿಕ	ಸಂಪೂರ್ಣ	ಸಂಪೂರ್ಣ
ಅರಣ್ಯದ ಮೇಲೆ ಅವಲಂಬಿತವಾಗಿರುವ ಗುಂಪುಗಳು, ಬಳಕೆಯ ಸ್ವರೂಪ, ಬೇಡಿಕೆ, ಪೂರೈಕೆ ಪರಿಸ್ಥಿತಿ, ಔಪಚಾರಿಕ ಹಕ್ಕುಗಳು	ಸಂಪೂರ್ಣ ಮಾಹಿತಿ	ಇಲ್ಲ	ಇಲ್ಲ	ಸಂಪೂರ್ಣ	ಇಲ್ಲ
ಭೂ ಬಳಕೆಯ ಸ್ವರೂಪ, ಹಳ್ಳಿಯ ವಿವಿಧ ಆವಾಸ, ಮಣ್ಣಿನ ಗುಣ ಬಳಕೆಯ ರೀತಿ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ
ಸಂಪನ್ಮೂಲ ನಕ್ಷೆ (ನೀರು ನೆಲ)	ಇದೆ	ಇಲ್ಲ	ಇಲ್ಲ	ಇದೆ	ಇದೆ

ಋತುಮಾನ ನಕ್ಷೆ ಋತುಮಾನಗಳಿಗೆ ಅನುಸಾರವಾಗಿ ಹಳ್ಳಿಯಲ್ಲಿ ನಡೆಯುವ ಚಟುವಟಿಕೆಗಳು	ಇದೆ	ಇದೆ	ಇದೆ	ಇದೆ	ಇದೆ
ಕಾಲಮಾನ ನಕ್ಷೆ, ಹಳ್ಳಿಯಲ್ಲಿ ನಡೆದಿರುವ ಮಹತ್ವದ ಘಟನೆಗಳ ಕಾಲಾನುಕ್ರಮದ ದಾಖಲೆ	ಇಲ್ಲ	ಇಲ್ಲ	ಇಲ್ಲ	ಇದೆ	ಇದೆ
ಹಳ್ಳಿಯಿಂದ ಹೊರಗೆ ಹೋಗುವ ಒಳಗೆ ಬರುವ ಸಂಪನ್ಮೂಲಗಳ ಹರಿಯುವಿಕೆ	ಇದೆ	ಇಲ್ಲ	ಇಲ್ಲ	ಇದೆ	ಇದೆ

ಕೋಷ್ಟಕ 7

ಕಿರುಯೋಜನೆಯ ತಯಾರಿಯ ವಿವರಗಳು

ಕಿರು ಯೋಜನೆಗಳ ಕೆಲಸಗಳು	ಕುಮಾರನಹಳ್ಳಿ	ಉದ್ದೂರು	ಮುಕುಂದೂರು	ಮರಡವಳ್ಳಿ	ಹನಿಯಾ
ಸ.ಗ್ರಾ.ಸ.ನಡೆದ ದಿನಾಂಕ	28.4.2000 06.5.2000 07.5.2000	14.3.1998 3ಗಂಟೆಗಳು	3.2.1998 ಅರ್ಧದಿನ	4.4.1998 08.1.2000 28.1.2000 29.1.2000	25.12.1996
ಮಾಹಿತಿ ವಿಶ್ಲೇಷಣೆ	08.5.2000	22.5.1998	28.4.1998	29.1.2000	02.02.1998
ಕಿರುಯೋಜನೆ ರೂಪಿಸಿದ ದಿನಾಂಕ	08.5.2000	13.6.1998	11.6.1998	29.1.2000	02.01.1998
ಕಿರುಯೋಜನೆಯನ್ನು ಸಿದ್ಧಪಡಿಸಿದವರು	ಅರಣ್ಯ ಸಿಬ್ಬಂದಿ, ಗ್ರಾಮ ಅರಣ್ಯ ಸಮಿತಿ ಸದಸ್ಯರು ಮತ್ತು ಸರ್ಕಾರೇತರ ಸಂಸ್ಥೆಯ ಸದಸ್ಯರು: ಹಳ್ಳಿಯಲ್ಲಿ	ಅರಣ್ಯ ಸಿಬ್ಬಂದಿ ಇಲಾಖೆಯ ಕಚೇರಿಯಲ್ಲಿ	ಅರಣ್ಯ ಇಲಾಖೆಯ ಸಿಬ್ಬಂದಿ, ಇಲಾಖೆಯಲ್ಲಿ ಕಚೇರಿಯಲ್ಲಿ	ಅರಣ್ಯ ಇಲಾಖೆ ಸಿಬ್ಬಂದಿ ಗ್ರಾ.ಅ.ಸ.ಸದಸ್ಯರು, ಸರ್ಕಾರೇತರ ಸಂಸ್ಥೆಯ ಸದಸ್ಯರು : ಹಳ್ಳಿಯ ದೇವಸ್ಥಾನದಲ್ಲಿ	ಅರಣ್ಯ ಇಲಾಖೆ ಸಿಬ್ಬಂದಿ, ಹಳ್ಳಿಯಲ್ಲಿ
ಕರಡು ಕಿರುಯೋಜನೆ ಗ್ರಾಮ ಅರಣ್ಯ ಸಮಿತಿಯಲ್ಲಿ ಚರ್ಚೆಯಾಗಿ ಅನುಮೋದನೆ ಪಡೆದ ದಿನಾಂಕ	09.5.2000	ಚರ್ಚೆಯೂ ಇಲ್ಲ, ಅನುಮೋದನೆಯೂ ಇಲ್ಲ	ಚರ್ಚೆಯೂ ಇಲ್ಲ, ಅನುಮೋದನೆಯೂ ಇಲ್ಲ	29.1.2000	5.2.1998 ಚರ್ಚೆಯಿಲ್ಲದೆ ಅನುಮೋದನೆ

ಕೋಷ್ಟಕ 8

ಯೋಜನೆಯಡಿಯಲ್ಲಿ ಬೆಳೆಸಿದ ನೆಡುತೋಪುಗಳು

ಕ್ರ. ಸಂ.	ಗ್ರಾಮ ಅರಣ್ಯ ಸಮಿತಿ	ಪ್ರಾರಂಭಿಸಿದ ವರ್ಷ	ವಿಸ್ತೀರ್ಣ ಹೆಕ್ಟೇರುಗಳಲ್ಲಿ	ಪ್ರಭೇದಗಳು
1.	ಕುಮಾರನಹಳ್ಳಿ	1994-95	20	ನೀಲಗಿರಿ
		1996-97	30	ನೀಲಗಿರಿ
		1997-98	15	ಅಕೇಶಿಯಾ
		1997-98	15	ಅಕೇಶಿಯಾ
		1997-98	74	ನೀಲಗಿರಿ
2.	ಮರಡವಳ್ಳಿ	1998-99	25	ನೀಲಗಿರಿ
		1999-00	10	ಅಕೇಶಿಯಾ
		1999-00	15*1	22 ಪ್ರಭೇದಗಳ ಮಿಶ್ರ ನೆಡುತೋಪು
		1999-00	50*2	200ಪ್ರಭೇದಗಳ ಔಷಧವನ
3.	ಹನಿಯಾ	1997-98	20	8 ಪ್ರಭೇದಗಳ ಮಿಶ್ರ ನೆಡುತೋಪು. ಇದರಲ್ಲಿ ಗೇರಿನ ಗಿಡಗಳು ಶೇಕಡಾ 80
4.	ಉದ್ದೂರು	1982-83	52*3	ನೀಲಗಿರಿ
5.	ಮುಕುಂದೂರು	1993-94	1.6	14 ಮಿಶ್ರ ಪ್ರಭೇದ ಗಳು
		1996-97	1.6*4	20 ಮಿಶ್ರ ಪ್ರಭೇದ ಗಳು
			1.6*5	ಮಾವಿನತೋಪು

ಮೂಲ : ಆಯಾ ವಲಯ ಅರಣ್ಯಾಧಿಕಾರಿಗಳ ಕಚೇರಿಯ ದಾಖಲೆಗಳು

1* ಸಂಪೂರ್ಣವಾಗಿ ಮರಡವಳ್ಳಿಯ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಬೆಳೆಸಿರುವ ನೆಡುತೋಪು

2* ಸಂಪೂರ್ಣವಾಗಿ ಗ್ರಾಮ ಅರಣ್ಯ ಸಮಿತಿಯ ಸದಸ್ಯರೇ ಬೆಳೆಸಿರುವ ಔಷಧವನ

3* 1982ರಲ್ಲಿ ಬೆಳೆಸಿದ ನೆಡುತೋಪನ್ನು ಯೋಜನೆಯಡಿಯಲ್ಲಿ ತರಲಾಗಿದೆ.

4* 1998ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಇಲ್ಲಿನ ಎಲ್ಲ ಮರಗಿಡಗಳನ್ನೂ ಕಡಿದು ಹಾಕಲಾಗಿದೆ.

5* ಇದು 50ವರ್ಷದ ಹಿಂದಿನ ತೋಪು. ಈಗ ಯೋಜನೆಯಡಿಯಲ್ಲಿ ತರಲಾಗಿದೆ.

ಕೋಷ್ಟಕ 9

ಅವನತಿ ಹೊಂದಿದ ಅರಣ್ಯದ ಪುನರುಜ್ಜೀವನ

ಕ್ರ. ಸಂ.	ಗ್ರಾಮ ಅರಣ್ಯ ಸಮಿತಿ	ಪುನರುಜ್ಜೀವನಕ್ಕೆ ಒಳಪಡಿಸಿರುವ ಅರಣ್ಯದ ವಿಸ್ತೀರ್ಣ ಹೆಕ್ಟೇರುಗಳಲ್ಲಿ	ರಕ್ಷಣೆಯ ಕ್ರಮಗಳು	ಪುನರುಜ್ಜೀವನಕ್ಕೆ ವಿಶೇಷ ಪ್ರಯತ್ನ ಗಳು
1.	ಕುಮಾರನಹಳ್ಳಿ	75	ಎರಡು ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ಬೇಲಿ	ಸಾಲ್ಗರಂಡಿ ನಿರ್ಮಾಣ, ಸಸ್ಯಗಳಿಂದಾದ ಬದು, ಕೊರಕಲು ಅಡ್ಡಕಟ್ಟೆ ಗಳು, ಕೊರಕಲು ತಡೆ ಗಳು, ಎನ್‌ರಿಚ್‌ಮೆಂಟ್ ಪ್ಲಾಂಟಿಂಗ್
2.	ಮರಡವಳ್ಳಿ	40	-	ಎನ್‌ರಿಚ್‌ಮೆಂಟ್ ಪ್ಲಾಂಟಿಂಗ್
3.	ಹನಿಯಾ	20	-	-
4.	ಉದ್ದೂರು	-	-	-
5.	ಮುಕುಂದೂರು	-	-	-

ಮೂಲ : ಆಯಾ ವಲಯ ಅರಣ್ಯಾಧಿಕಾರಿಗಳ ಕಚೇರಿ ಮತ್ತು ಕ್ಷೇತ್ರಕಾರ್ಯದಲ್ಲಿನ ಅವಲೋಕನ

ಕೋಷ್ಟಕ 10

ಬೇಡಿಕೆ ಇಳಿಸುವ ಕಾರ್ಯತಂತ್ರಗಳು

ಕ್ರ.ಸಂ.	ವಿವರಗಳು	ಕುಮಾರನಹಳ್ಳಿ	ಮರಡವಳ್ಳಿ	ಹನಿಯಾ	ಉದ್ಗರೂ	ಮುಳುಂದೂರು
1.	ಆದಾಯ ಹೆಚ್ಚಿಸುವ ಪರ್ಯಾಯ ಮಾರ್ಗಗಳು	● ನರ್ಸರಿಗಳಲ್ಲಿ ಸಸಿಗಳ ಉತ್ಪಾದನೆ ● ಕೋಳಿ ಸಾಕಣೆ ● ಕುರಿ ಸಾಕಣೆ ● ಹೈನುಗಾರಿಕೆ	● ಸ್ವಸಹಾಯ ಗುಂಪಿನಿಂದ ಸಾಲ ವಿತರಣೆ, ನಿರ್ವಹಣೆ ● ಔಷಧ ಸಸ್ಯಗಳ ನರ್ಸರಿ	-	-	-
2.	ಸುಧಾರಿತ ಒಲೆಗಳ ಬಳಕೆ	24	24	1	3	11
3.	ಜೈವಿಕ ಅನಿಲ ಸ್ಥಾವರ	--	18	45	10	25
4.	ಜಾನುವಾರು ನಿರ್ವಹಣೆ	● ಕೊಟ್ಟಿಗೆಯಲ್ಲಿ ಕಟ್ಟಿ ಮೇಯಿಸುವ ಪದ್ಧತಿ ● ಮೇವಿನ ಉತ್ಪಾದನೆ	-	-	-	-

ಮೂಲ : ಕ್ಷೇತ್ರಕಾರ್ಯದ ಅಂಕಿ-ಅಂಶಗಳು

ಕೋಷ್ಟಕ 11

ರಕ್ಷಣೆಯ ಕ್ರಮಗಳು

ಕ್ರ. ಸಂ.	ಗ್ರಾಮ ಅರಣ್ಯ ಸಮಿತಿ	ಜಾರಿಗೊಳಿಸಿರುವ ನಿಯಮಗಳು	ನಿಗಾವಣೆಯ ವ್ಯವಸ್ಥೆ	ಮರಗಳನ್ನು ಕಡಿದಿರುವ ಪ್ರಸಂಗಗಳು ಉದ್ದೇಶಪೂರ್ವಕ ಹಾಗೂ ವಿಧ್ವಂಸಕ ಕೃತ್ಯ
01	ಕುಮಾರನಪಳ್ಳಿ	ಅ. ನೆಡುತೋಪು, ಅರಣ್ಯಗಳಲ್ಲಿ ಒಣಗಿ ಬಿದ್ದ ಎಲೆ, ಕಡ್ಡಿ, ಟೊಂಗೆಗಳನ್ನು ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಸಂಗ್ರಹಿಸಬಹುದು ಆ. ಮೂರು ವರ್ಷಕ್ಕೆ ಮೇಲ್ಪಟ್ಟ ನೆಡುತೋಪುಗಳಲ್ಲಿ ದನಗಳನ್ನು ಮೇಯಿಸಬಹುದು. ಇ. ಒಂದು ಕುಟುಂಬಕ್ಕೆ, ಎರಡು ದಿನಗಳಿಗೊಮ್ಮೆಯಂತೆ ತಲೆ ಹೊರೆ ಸೌದೆಯನ್ನು ತರಬಹುದು ಈ. ಪುನರುಜ್ಜೀವನಗೊಳ್ಳುತ್ತಿರುವ ಅರಣ್ಯ ಭೂಮಿಯಲ್ಲಿ ದನಕರುಗಳನ್ನು ಮೇಯಿಸಬಾರದು. ಉ. ಕಾವಲು ವ್ಯವಸ್ಥೆಯಲ್ಲಿ ಎಲ್ಲ ಸದಸ್ಯರೂ ಭಾಗವಹಿಸಬೇಕು. ಊ. ಗುರುತಿನ ಚೀಟಿ ಪಡೆದವರು ಮಾತ್ರ ಬೀಡಿ ಎಲೆ ಮತ್ತು ಅಂಟನ್ನು ಸಂಗ್ರಹಿಸಬಹುದು. ಋ. ಬೀಡಿ ಎಲೆ ಮತ್ತು ಅಂಟುಗಳನ್ನು	ಅ. ನೆಡುತೋಪಿನ ರಕ್ಷಣೆಗೆ ಸರದಿಯ ಪ್ರಕಾರ ಕಾವಲು ಆ. ರಾತ್ರಿಯ ವೇಳೆಯಲ್ಲಿ ಆರು ಜನರ ತಂಡದಿಂದ ವಿಶೇಷ ಕಾವಲು ಇ. ಕಾಡಿಗೆ ಬೆಂಕಿ ಬೀಳುವ ಬೇಸಿಗೆಯ ಸಮಯದಲ್ಲಿ ಬೆಂಕಿ ಆರಿಸಲು ವಿಶೇಷ ದಳ. ಈ. ದನಕರು, ಕುರಿಗಳನ್ನು ಮೇಯಿಸುವವರು, ಅರಣ್ಯ ಉತ್ಪನ್ನಗಳ ಸಂಗ್ರಹಣೆಗೆ ಅರಣ್ಯಕ್ಕೆ ಹೋಗುವವರು ಎಚ್ಚರದಿಂದಿದ್ದು ಅನುಮಾನ ಬಂದಲ್ಲಿ ಅರಣ್ಯ ಸಮಿತಿಗೆ ತಿಳಿಸಬೇಕು.	ನೆಡುತೋಪಿನಲ್ಲಿ ಮರಕಡಿದಿರುವ ಒಂದು ಪ್ರಸಂಗವಿದೆ. ವಿಧ್ವಂಸಕ ಕೃತ್ಯವಿಲ್ಲ.

		ಗ್ರಾಮ ಅರಣ್ಯ ಸಮಿತಿಗೆ ಮಾರಬೇಕು		
2.	ಮರಡವಳ್ಳಿ	ಅ,ಆ, ಈ ಮತ್ತು ಉ ಕುಮಾರನಹಳ್ಳಿ ಯಂತೆಯೇ, ಇದರೊಂದಿಗೆ 4 ಕಿ.ಮೀ ಉದ್ದದ ರಸ್ತೆಯ ಎರಡು ಬದಿಯಲ್ಲಿ ನೆಟ್ಟಿರುವ ಮರಗಳಲ್ಲಿ ಪ್ರತಿ ಕುಟುಂಬವೂ 5 ಮರಗಳನ್ನು ಸಂಪೂರ್ಣವಾಗಿ ರಕ್ಷಿಸಬೇಕು	ಅ. ನೆಡುತೋಪು ಹಾಗೂ ಅರಣ್ಯಗಳ ರಕ್ಷಣೆಗೆ ಸದಸ್ಯರದೇ ಸರದಿಯ ಪ್ರಕಾರ ಕಾವಲು. ಅರಣ್ಯ ಸಮಿತಿಯ ಕಡೆಯಿಂದ ಸಂಬಳಕೊಟ್ಟು ಕಾವಲುಗಾರರನ್ನು ನೇಮಿಸ ಬಾರದು. ಆ. ಬೇಸಿಗೆಯಲ್ಲಿ ಬೆಂಕಿಯಿಂದ ರಕ್ಷಣೆಗೆ ವಿಶೇಷ ತಂಡ.	ನಾಟಗಳನ್ನು ಕಡಿದಿರುವ ಒಂದು ಪ್ರಸಂಗವಿದೆ. ವಿಧ್ವಂಸಕ ಕೃತ್ಯವಿಲ್ಲ
3.	ಹನಿಯಾ	ಅ,ಆ,ಈ ಮತ್ತು ಉ ಮೇಲಿನಂತೆಯೇ	ಯಾವ ಕ್ರಮಗಳೂ ಇಲ್ಲ	ದಾಖಲೆಗಳು ಲಭ್ಯವಿಲ್ಲ. ಆದರೆ ಸಂದರ್ಶನದ ಸಮಯದಲ್ಲಿ ಮರ ಕಡಿದಿರುವ ನಾಲ್ಕು ಪ್ರಕರಣಗಳಿರು ವುದು ಕಂಡುಬರುತ್ತದೆ. ವಿಧ್ವಂಸಕ ಕೃತ್ಯವಿಲ್ಲ.
4.	ಉದ್ದೂರು	ಅ. ನೆಡುತೋಪಿನಲ್ಲಿ ನೆಲಕ್ಕೆ ಬಿದ್ದ ಕಡ್ಡಿ, ಎಲೆ, ಟೊಂಗೆಗಳನ್ನು ಸಂಗ್ರಹಿ ಸಬಹುದು, ದನಗಳನ್ನು ಮೇಯಿಸ ಬಹುದು.	ನಿಗಾವಹಣೆಯಲ್ಲಿ ಜನರು ಭಾಗವಹಿಸು ವುದಿಲ್ಲ. ಗ್ರಾಮ ಅರಣ್ಯ ಸಮಿತಿ ಕಾವಲುಗಾರನನ್ನು ನೇಮಿಸಿದೆ.	ಮರಗಳನ್ನು ಕಡಿದು ಸಾಗಿಸಿರುವ 17 ಪ್ರಕರಣಗಳಿವೆ. ವಿಧ್ವಂಸಕ ಕೃತ್ಯವಿಲ್ಲ.
5.	ಮುಕುಂದೂರು	ಊರಮುಂದಿನ ಗೋಮಾಳದಲ್ಲಿರುವ ಮಿಶ್ರ ತೋಪಿನಲ್ಲಿ ನೆಲಕ್ಕೆ ಬಿದ್ದ ವಸ್ತುಗಳನ್ನು ಸಂಗ್ರಹಿಸಬಹುದು. ಆದರೆ ದನಗಳನ್ನು ಮೇಯಿಸು ವಂತಿಲ್ಲ.	ನಿಗಾವಹಣೆಯಲ್ಲಿ ಸದಸ್ಯರು ಭಾಗವಹಿ ಸುವುದಿಲ್ಲ. ಗ್ರಾಮ ಅರಣ್ಯ ಸಮಿತಿ ನೇಮಿಸಿದ ಕಾವಲುಗಾರನಿದ್ದಾನೆ.	ನದಿಯ ಅಂಚಿನಲ್ಲಿರುವ ಗೋಮಾಳ ದಲ್ಲಿ ಬೆಳೆಸಿದ್ದ ವಿವಿಧ ಪ್ರಭೇದಗಳ ಎಲ್ಲ ಮರಗಿಡಗಳನ್ನು ರಾಜಕೀಯ ದ್ವೇಷದಿಂದ ಕಡಿದು ಹಾಕಿರುವ ವಿಧ್ವಂಸಕ ಪ್ರಕರಣವಿದೆ.

ಮೂಲ : ಗ್ರಾಮ ಅರಣ್ಯ ಸಮಿತಿಗಳ ನಡಾವಳಿ ಪುಸ್ತಕ ಮತ್ತು ಕ್ಷೇತ್ರಕಾರ್ಯದ ಸಂದರ್ಶನಗಳು

ಕೋಷ್ಟಕ 12

ಗ್ರಾಮ ಅರಣ್ಯ ಸಮಿತಿಗಳಿಗೆ ಬಂದಿರುವ ಆದಾಯ
(ಯೋಜನೆ ಪ್ರಾರಂಭವಾದಾಗನಿಂದ)

ಕ್ರ.ಸಂ.	ವಿವರಗಳು	ಕುಮಾರನಹಳ್ಳಿ	ಮರಚವಳ್ಳಿ	ಹನಿಯಾ	ಉದ್ದರೂ	ಮುಕುಂದೂರು
1.	ಮೂಲಧನ(ಅರಣ್ಯ ಇಲಾಖೆಯಿಂದ ಬಂದ ಸೀಡ್‌ಮನಿ)	5000-00	5000-00	5000-00	5000-00	5000-00
2.	ಪ್ರಶಸ್ತಿ/ಫೆಲೋಶಿಫ್	ಕರ್ನಾಟಕ ರಾಜ್ಯ ಸರ್ಕಾರದ ವನಮಿತ್ರ ಪ್ರಶಸ್ತಿ, 5000-00 ಡಾ.ಶಿವರಾಮ ಕಾರಂತ ಫೆಲೋಶಿಫ್ 12,000-00	ಸಾಂಖ್ವಿ ಸಂಸ್ಥೆಯ ಪ್ರಶಸ್ತಿ 15,000-00	--	--	--
3.	ದಂಡ ವಸೂಲಿ	21,000-00	200-00	ದಾಖಲೆಯಿಲ್ಲ	500-00	200-00
4.	ನೆಡುತೋಪಿನ ನಿರ್ವಹಣೆ ಕಟಾವು, ಅಂತಿಮ ಹಂಚಿಕೆ	--	--	--	1,87.500-00	--
5.	ಇನ್ನಿತರೆ	ಜಂಟೀ ಅರಣ್ಯ ಯೋಜನೆಯ ಹೊರಗಿರುವ ನೆಡುತೋಪಿನಲ್ಲಿ ಮಾಡಿದ ಕೆಲಸಕ್ಕೆ 2500-00	ನೆಡುತೋಪಿನಲ್ಲಿ ಮಾಡಿದ ಶ್ರಮ ದಾನಕ್ಕೆ 5000-00	--	--	--

ಮೂಲ : ಕ್ಷೇತ್ರ ಕಾರ್ಯದ ಅಂಕಿ-ಅಂಶಗಳು

ಟಿಪ್ಪಣಿಗಳು

1. ಓಸ್ಟ್ರಮ್ ಇ., ಗವರ್ನಿಂಗ್ ದಿ ಕಾಮನ್ಸ್: ದಿ ಎವಿಲ್ಯೂಶನ್ ಆಫ್ ಇನ್ಸಿಟಟ್ಯೂಶನ್ಸ್ ಫಾರ್ ಕಲೆಕ್ಟಿವ್ ಆಕ್ಷನ್, ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, 1990

2. ಮಾರ್ಕ್‌ಪೋಫೆನ್ ಬರ್ಗರ್, 'ಕಮ್ಯೂನಿಟೀಸ್ ಸಸ್ಟೈನಿಂಗ್ ಇಂಡಿಯಾಸ್ ಫಾರೆಸ್ಟ್ಸ್ ಇನ್ ಟ್ವೆಂಟಿಫಸ್ಟ್ ಸೆಂಚುರಿ' ವಿಲೇಜ್ ವಾಯ್ಸಸ್, ಫಾರೆಸ್ಟ್ ಚಾಯ್ಸಸ್, ಮಾರ್ಕ್‌ಪೋಫೆನ್ ಬರ್ಗರ್ ಮತ್ತು ಬೆಟ್ಸಿ ಮ್ಯಾಕ್‌ಗೀನ್(ಸಂ), ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ದೆಹಲಿ, 1990.

3. ರಾಜು ಜಿ., ವಗೇಲಾ, ಆರ್ ಅಂಡ್ ರಾಜು ಎಮ್. ಎಸ್., ಡೆವಲಪ್‌ಮೆಂಟ್ ಆಫ್ ಪೀಪಲ್ಸ್ ಇನ್ಸಿಟಟ್ಯೂಷನ್ ಫಾರ್ ಮ್ಯಾನೇಜ್‌ಮೆಂಟ್ ಆಫ್ ಫಾರೆಸ್ಟ್, ಅಹಮದಾಬಾದ್ : ವಿಕ್‌ಸ್ಯಾಟ್, 1994

4. ವಲಯ ಅರಣ್ಯಾಧಿಕಾರಿಗಳು, ಹೊಳೇನರಸೀಪುರ ವಲಯ, ಹಾಸನ ಜಿಲ್ಲೆ, ಹಾಸನ : ಕ್ಷೇತ್ರಕಾರ್ಯದ ಸಂದರ್ಶನ.

5. ಯುಎನ್‌ಡಿಪಿ, ಯುಎನ್‌ಡಿಪಿ ಗೈಡ್‌ಬುಕ್ ಆನ್ ಪಾರ್ಟಿಸಿಪೇಶನ್, ನೈರೋಬಿ : ಯುನೈಟೆಡ್ ನೇಶನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್, 1992

6. ಸಕ್ಸೇನಾ ಎನ್.ಸಿ. ಆಂಡ್ ಮಧು ಸರೀನ್ "ದಿ ವೆಸ್ಟರ್ನ್ ಘಾಟ್ ಫಾರೆಸ್ಟ್ರಿ ಆಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಇನ್ ಕರ್ನಾಟಕ", ಎ ನ್ಯೂಮಾರಲ್ ಇಕಾನಮಿ ಫಾರ್ ಇಂಡಿಯಾಸ್ ಫಾರೆಸ್ಟ್, ನಂದಿನಿ ಸುಂದರ್ ಮತ್ತು ರೋಜರ್ ಜೆಫ್ರಿ(ಸಂ), ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, 1999.

7. ಬೆಲಾಂಡ್, ಜೆ. ಎಂ. ಆಂಡ್ ಪ್ಲೆಟೋವ್ ಜೆ.ಪಿ., ಹಾಲ್ಟಿಂಗ್ ಡಿಗ್ರಡೇಶನ್ ಆಫ್ ನ್ಯಾಷನಲ್ ರಿಸೋರ್ಸಸ್ : ಈಸದೇರ್ ಎ ರೋಲ್ ಫಾರ್ ರೂರಲ್ ಕಮ್ಯೂನಿಟೀಸ್, ಆಕ್ಸ್‌ಫರ್ಡ್ : ಕ್ಲಾರೆಂಡಾನ್ ಪ್ರೆಸ್, 1996.

8. ಮಾಂಕರ್ ಓಲ್ಸನ್, ದಿ ಲಾಜಿಕ್ ಆಫ್ ಕಲೆಕ್ಟಿವ್ ಆ್ಯಕ್ಷನ್ ಹಾರ್ವಡ್, ಕೇಂಬ್ರಿಡ್ಜ್ : ಯೂನಿವರ್ಸಿಟಿ ಪ್ರೆಸ್, 1965.

9. ಸಿರಿಯಾಸಿ-ವಾನ್ಟ್ರಪ್ ಅಂಡ್ ಬಿಷಪ್ ಆರ್.ಸಿ., "ಕಾಮನ್ ಪ್ರಾಪರ್ಟಿ ಆಸ್ ಎ ಕಾನ್ಸೆಪ್ಟ್ ಇನ್ ನ್ಯಾಚುರಲ್ ರಿಸೋರ್ಸ್‌ಪಾಲಿಸಿ", ನ್ಯಾಚುರಲ್ ರಿಸೋರ್ಸಸ್ ಜರ್ನಲ್, ಸಂ.15, ನಂ.6, 1973 ಪು.713-727

10. ಬೆಲಾಂಡ್ ಜೆ. ಎಂ. ಆಂಡ್ ಪ್ಲೆಟೋವ್ ಜೆ.ಪಿ., ಹಾಲ್ಟಿಂಗ್ ಡಿ ಗ್ರಡೇಶನ್ ಆಫ್ ನ್ಯಾಚುರಲ್ ರಿಸೋರ್ಸಸ್, ಪು.44

11. ಮ್ಯಾಕಗೀನ್ ಎಂ.ಎ., "ಮ್ಯಾನೇಜ್‌ಮೆಂಟ್ ಆಫ್ ಟ್ರಡಿಶನಲ್ ಕಾಮನ್ ಲ್ಯಾಂಡ್ಸ್ ಇನ್ ಜಪಾನ್" ಮೇಕಿಂಗ್ ದಿ ಕಾಮನ್ಸ್ ವರ್ಕ್ ಥಿಯರಿ ಪ್ರಾಕ್ಟೀಸ್ ಅಂಡ್ ಪಾಲಿಸಿ, ಡಿ.ಡಬ್ಲ್ಯುಯು ಬ್ರೊಮ್ಲಿ(ಸಂ), ಸಾನ್‌ಫ್ರಾನ್‌ಸಿಸ್ಕೊ : ಐಸಿಎಸ್ ಪ್ರೆಸ್, 1992.

12. ಮಾಂಕರ್ ಓಲ್ಸನ್, ದಿ ಲಾಜಿಕ್ ಆಫ್ ಕಲೆಕ್ಟಿವ್ ಆಕ್ಶನ್, ಪು.24

13. ಸೀಬ್ರೆಟ್ ಪಿ., "ಮ್ಯಾನೇಜಿಂಗ್ ಲೋಕಲ್ ಕಾಮನ್ಸ್ : ಥಿಯರಿಟಿಕಲ್ ಇಶ್ಯೂಸ್ ಇನ್ ಇನಸೆಂಟಿವ್ ಡಿಸೈನ್", ಜರ್ನಲ್ ಆಫ್ ಇಕನಾಮಿಕ ಪರ್ಸ್ಪೆಕ್ಟಿವ್ಸ್, ಸಂ.7, ನಂ.4, 1993, ಪು.64-81

14. ಬೆಲಾಂಡ್, ಜೆ.ಎಮ್. ಅಂಡ್ ಪ್ಲೆಟೋವಾ ಜೆ.ಪಿ., ಹಾಲ್ಟಿಂಗ್ ದಿ ಡಿಗ್ರಡೇಶನ್ ಆಫ್ ನ್ಯಾಚುರಲ್ ರಿಸೋರ್ಸಸ್, ಪು.305

15. ಬೆಲಾಂಡ್, ಜೆ.ಎಮ್. ಅಂಡ್ ಪ್ಲೆಟೋವಾ ಜೆ.ಪಿ., ಹಾಲ್ಟಿಂಗ್ ದಿ ಡಿಗ್ರಡೇಶನ್ ಆಫ್ ನ್ಯಾಚುರಲ್ ರಿಸೋರ್ಸಸ್, ಪು.311

16. ಬೆಲಾಂಡ್, ಜೆ.ಎಮ್. ಅಂಡ್ ಪ್ಲೆಟೋವಾ ಜೆ.ಪಿ., ಹಾಲ್ಟಿಂಗ್ ದಿ ಡಿಗ್ರಡೇಶನ್ ಆಫ್ ನ್ಯಾಚುರಲ್ ರಿಸೋರ್ಸಸ್, ಪು.312

17. ಮಾರ್ಕ್‌ಪೋಫೆನ್ ಬರ್ಗರ್, "ಫೆಸಿಲಿಟೇಟಿಂಗ್ ಚೇಂಜ್ ಇನ್ ಫಾರೆಸ್ಟ್ ಬ್ಯೂರಾಕ್ರಸೀಸ್" ಕೀಪರ್ಸ್ ಆಫ್ ದಿ ಫಾರೆಸ್ಟ್, ಮಾರ್ಕಪೋಫೆನ್ ಬರ್ಗರ್(ಸಂ), ವೆಸ್ಟ್ ಹಾರ್ಟ್‌ಫೋರ್ಡ್ : ಕುಮೇರಿಯನ್ ಪ್ರೆಸ್, 1990.

18. ಥಾಂಪ್ಸನ್, ಜೆ., "ಪಾರ್ಟಿಸಿಪೇಟರಿ ಅಪ್ರೋಚಸ್ ಇನ್ ಗವರ್ನಮೆಂಟ್ ಬ್ಯೂರಾಕ್ರಸೀಸ್: ಫೆಸಿಲಿಟೇಟಿಂಗ್ ದಿ ಪ್ರೋಸೆಸ್ ಆಫ್ ಇನ್ಸಿಟಟ್ಯೂಶನಲ್ ಚೇಂಜ್", ವರ್ಲ್ಡ್ ಡೆವಲಪ್‌ಮೆಂಟ್ ಸಂ.15, ನಂ.9, 1993, ಪು.1521-54.

19. ಬಹುಗುಣ, ವಿ.ಕೆ., "ಡೀಸೆಂಟ್ರಲೈಸ್ಡ್ ಪ್ಲಾನಿಂಗ್ ಇನ್ ಫಾರೆಸ್ಟ್ರಿ ಸೆಕ್ಟರ್ ಫಾರ್ ಪೀಪಲ್ಸ್ ಪಾರ್ಟಿಸಿಪೇಶನ್" ಪೇಪರ್ ಪ್ರಸೆಂಟೆಡ್ ಟು ದಿ ನ್ಯಾಷನಲ್ ಸೆಮಿನಾರ್ ಆನ್ ಫಾರೆಸ್ಟ್ರಿ ಸೆಕ್ಟರ್ ಅಡ್ಮಿನಿಸ್ಟ್ರೇಶನ್ ಡೆವಲಪಮೆಂಟ್, ನ್ಯೂಡೆಲ್ಲಿ: 1992

20. ಸಿಂಗ್ ಆರ್.ವಿ., "ಅಡ್ಮಿನಿಸ್ಟ್ರೇಟಿವ್ ಚೇಂಜಸ್ ಟು ಮೀಟ್ ಎಮರ್ಜಿಂಗ್ ರಿಕ್ವೈರ್‌ಮೆಂಟ್ಸ್ ಇನ್ ಇಂಡಿಯನ್ ಫಾರೆಸ್ಟ್ರಿ ಸೆಕ್ಟರ್". ಪೇಪರ್ ಪ್ರಸೆಂಟೆಡ್ ಟುದಿ ನ್ಯಾಷನಲ್ ಸೆಮಿನಾರ್ ಆನ್ ಫಾರೆಸ್ಟ್ರಿ ಸೆಕ್ಟರ್ ಅಡ್ಮಿನಿಸ್ಟ್ರೇಶನ್ ಡೆವಲಪ್‌ಮೆಂಟ್, ನ್ಯೂಡೆಲ್ಲಿ: 1992.

21. ಚೇಂಬರ್ಸ್ ಆರ್, "ದಿ ಸೆಲ್ಫ್ ಡಿಸೀವಿಂಗ್ ಸ್ಟೇಟ್", ಐಡಿಎಸ್ ಬುಲೆಟಿನ್, ಸಂ.23, ನಂ.9, 1992, ಪು.31-42

22. ವೇಡ್ ಆರ್., "ಹೌಟು ಮೇಕ ಸ್ಟೀಟ್ ಲೆವೆಲ್ ಬ್ಯೂರಾಕ್ರಸೀಸ್ ವರ್ಕ್‌ಬೆಟರ್" ಐಡಿಸ್‌ಬುಲೆಟಿನ್ ಸಂ.23, ನಂ.9, 1992, ಪು.51-54

23. ಚೇಂಬರ್ಸ್ ಆರ್., ದಿ ಸೆಲ್ಫ್ ಡಿಸೀವಿಂಗ್ ಸ್ಟೇಟ್, ಪು.37

24. ಸಿಂಗ್, ಆರ್.ವಿ., "ಅಡ್ಮಿನಿಸ್ಟ್ರೇಟಿವ್ ಚೇಂಜಸ್ ಟು ಮೀಟ್ ಎಮರ್ಜಿಂಗ್ ರಿಕ್ವೈರ್‌ಮೆಂಟ್ಸ್ ಇನ್ ಇಂಡಿಯನ್ ಫಾರೆಸ್ಟ್ರಿ ಸೆಕ್ಟರ್", ಪು.15

25. ಮಾರ್ಕ್‌ಪ್ರೋಫೆನ್ ಬರ್ಗರ್, "ಫೆಸಿಲಿಟೇಟಿಂಗ್ ಚೇಂಜ್ ಇನ್ ಫಾರೆಸ್ಟ್ ಬ್ಯೂರಾಕ್ರಸೀಸ್", ಪು.113

ಅಧ್ಯಾಯ 6

ಉಪಸಂಹಾರ

ಉಪಸಂಹಾರ

ಭಾರತದಲ್ಲಿ ಅರಣ್ಯ ನಿರ್ವಹಣೆಯ ವ್ಯವಸ್ಥೆ, ಇಂದು ಪರಿವರ್ತನೆಗಳ ಸಂಧಿಕಾಲದಲ್ಲಿದೆ. ಬ್ರಿಟಿಷ್ ಆಳ್ವಿಕೆಯಲ್ಲಿ ಮತ್ತು ಸ್ವಾತಂತ್ರ್ಯ ಬಂದ ನಂತರದ ಮೂರು ದಶಕಗಳಲ್ಲಿ ವಾಣಿಜ್ಯೋದ್ಯಮ ದೃಷ್ಟಿಯ ಉತ್ಪಾದನೆಯೇ ಅರಣ್ಯ ನೀತಿಯ ಮೂಲ ಮಂತ್ರವಾಗಿತ್ತು. ಈ ನೀತಿಗೆ ವ್ಯಕ್ತವಾದ ತೀವ್ರ ವಿರೋಧ ಮತ್ತು ಪ್ರತಿಭಟನೆಗಳ ಫಲವಾಗಿ ಅನಂತರದಲ್ಲಿ ಪರಿವರ್ತನೆಗಳು ಪ್ರಾರಂಭವಾದವು. 1980ರ ಅರಣ್ಯ ಸಂರಕ್ಷಣಾ ಅಧಿನಿಯಮ ವಾಣಿಜ್ಯೋದ್ದೇಶದಿಂದ ಅರಣ್ಯಗಳನ್ನು ಕಡಿಯುವುದರ ಮೇಲೆ ನಿಯಂತ್ರಣವನ್ನು ತಂದರೆ, 1988ರ ಅರಣ್ಯ ನೀತಿ, ಮೊದಲಿನ ಆದ್ಯತೆಗಳನ್ನು ಸಂಪೂರ್ಣವಾಗಿ ಬದಲಿಸಿ ಜೀವಿ ಪರಿಸ್ಥಿತಿ ಸಮತೋಲನ ಹಾಗೂ ಸಂರಕ್ಷಣೆಗಳಿಗೆ ಒತ್ತು ನೀಡಿತು. ಈ ಹೊಸ ಅರಣ್ಯ ನೀತಿಯ ಅನುಷ್ಠಾನದಿಂದ, ಬೃಹತ್ ಕೈಗಾರಿಕೆಗಳಿಗೆ, ನೈಸರ್ಗಿಕ ಅರಣ್ಯಗಳಿಂದ ಅತ್ಯಂತ ಕಡಿಮೆಯ ದರದಲ್ಲಿ ದೊರೆಯುತ್ತಿದ್ದ ಕಚ್ಚಾ ವಸ್ತುಗಳ ಮೇಲೆ ಬಿಗಿ ನಿಯಂತ್ರಣಗಳು ಬಂದು, ಈ ಕೈಗಾರಿಕೆಗಳು ತಮ್ಮ ಬೇಡಿಕೆಗಳನ್ನು ಖಾಸಗೀ ಭೂಮಿಯಲ್ಲಿನ ನೆಡುತೋಪುಗಳಿಂದ ಅಥವಾ ಹೊರದೇಶಗಳಿಂದ ಆಮದು ಮಾಡಿಕೊಳ್ಳುವುದರಿಂದ ಪೂರೈಸಿಕೊಳ್ಳಬೇಕಾದ ಪರಿಸ್ಥಿತಿ ಉದ್ಭವಿಸಿತು. ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸಲು ಬಳಕೆಯಾದ ನೈಸರ್ಗಿಕ ಅರಣ್ಯಗಳು ಅವನತಿಗೀಡಾದವು. ಇಂತಹ ಕುರುಚಲು ಕಾಡುಗಳನ್ನು ಪುನರುಜ್ಜೀವನಗೊಳಿಸುವ ಸಮಸ್ಯೆಗಳು ಎದುರಾದವು.

1988ರ ಹೊಸ ಅರಣ್ಯ ನೀತಿ ಜಾರಿಗೆ ಬಂದ ನಂತರ, ರಾಷ್ಟ್ರಮಟ್ಟದ ಗೊತ್ತುವಳಿಗಳು ಹಾಗೂ ರಾಜ್ಯಸರ್ಕಾರಗಳ ಆದೇಶಗಳು, ಸ್ಥಳೀಯರ ಬೃಹತ್ ಪ್ರಮಾಣದ ಸಹಭಾಗಿತ್ವದಿಂದ, ಅರಣ್ಯಗಳನ್ನು ಸಂರಕ್ಷಿಸುವ, ಅವನತಿಗೀಡಾದ ಅರಣ್ಯ ಭೂಮಿಯನ್ನು ಪುನರುಜ್ಜೀವನ ಗೊಳಿಸುವತ್ತ ಎಲ್ಲರ ಗಮನ ಸೆಳೆದವು. ಅದುವರೆವಿಗೂ ಖಾಸಗೀ ಹಾಗೂ ಊರೊಟ್ಟಿನ ಭೂಮಿಯಲ್ಲಿ ಸಾಮಾಜಿಕ ಅರಣ್ಯಕ್ಕೆ ನೀಡಿದ ಆದ್ಯತೆ ಹಾಗೂ ಹೂಡಿದ ವಿದೇಶೀ ನೆರವಿನ ಬಂಡವಾಳಗಳಲ್ಲಿ ಬದಲಾವಣೆಗಳು ಕಂಡುಬಂದು, ಸರ್ಕಾರೀ ಅರಣ್ಯ ಭೂಮಿಯ ಸಾಮುದಾಯಿಕ ರಕ್ಷಣೆಗೆ ಜಂಟೀ ಅರಣ್ಯ ಯೋಜನೆಯ ಹೊಸ ಪರ್ಯಾಯ ಮಾರ್ಗ ಕಾಣಿಸಿಕೊಂಡಿತು.

ಸಾಮಾಜಿಕ ಅರಣ್ಯ ಯೋಜನೆಯ ಗಮನವಿದ್ದುದು ಹೊರಗಿನಿಂದ ಬಂದ, ತ್ವರಿತಗತಿಯಲ್ಲಿ ಬೆಳೆಯುವ ಪ್ರಭೇದಗಳ ನೆಡುತೋಪುಗಳನ್ನು ಬೆಳೆಸುವುದರ ಮೇಲೆ. ದೇಶದಾದ್ಯಂತ ಲಕ್ಷಾಂತರ ಹೆಕ್ಟೇರುಗಳ ಪ್ರದೇಶದಲ್ಲಿ ಇಂತಹ ನೆಡುತೋಪುಗಳನ್ನು ಬೆಳೆಸುವುದರಲ್ಲಿ ಯೋಜನೆ ಯಶಸ್ವಿಯಾಯಿತಾದರೂ, ಸಮುದಾಯಗಳು ತಮ್ಮ ಸಂಪನ್ಮೂಲಗಳನ್ನು ತಾವೇ ನಿರ್ವಹಿಸಿಕೊಳ್ಳಲು ಅಗತ್ಯವಾದ ಪ್ರೇರಣೆಯನ್ನು ಈ ಯೋಜನೆ ಒದಗಿಸಲಿಲ್ಲ. ಸಶಕ್ತೀಕರಣ ಹಾಗೂ ಬಡತನ ನಿರ್ಮೂಲನಾ ಅಂಶಗಳಿದ್ದರೂ ಅವು ಕಾರ್ಯಗತವಾಗಲಿಲ್ಲ. ನೈಸರ್ಗಿಕ ಅರಣ್ಯಗಳ ಪರಿಸ್ಥಿತಿಯೂ ಉತ್ತಮವಾಗಲಿಲ್ಲ.

ಸಾಮಾಜಿಕ ಅರಣ್ಯ ಯೋಜನೆಗಿಂತ ಭಿನ್ನವಾಗಿ ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಶಕ್ತೀಕರಣದೊಂದಿಗೆ, ತಮ್ಮ ಗ್ರಾಮದ ವ್ಯಾಪ್ತಿಯಲ್ಲಿರುವ ಸರ್ಕಾರೀ ಅರಣ್ಯವನ್ನು ರಕ್ಷಿಸುವ ಜವಾಬ್ದಾರಿ ಸಮುದಾಯಕ್ಕೆ ಬರುತ್ತದೆ. ಜಂಟೀ ಅರಣ್ಯ ಯೋಜನೆಯಲ್ಲಿ ಅರಣ್ಯ ನಿರ್ವಹಣೆ ವಿಕೇಂದ್ರೀಕರಣಗೊಳ್ಳುತ್ತದೆ. ಅರಣ್ಯ ಇಲಾಖೆ ಮತ್ತು ಸ್ಥಳೀಯ ಸಮುದಾಯದ ನಡುವೆ ಉತ್ತಮ ಸಂವಹನವೇರ್ಪಟ್ಟು, ಅರಣ್ಯ ಪ್ರದೇಶದ ಮೇಲಿನ ಸಮುದಾಯದ ಅಧಿಕಾರ, ಅನುಭೋಗದ ಹಕ್ಕುಗಳು ಸ್ಪಷ್ಟಗೊಂಡು, ಹಕ್ಕು ಮತ್ತು ಜವಾಬ್ದಾರಿಗಳಿಗೆ ಸಂಬಂಧಿಸಿದ ಒಪ್ಪಂದಗಳು, ವ್ಯಾಜ್ಯ ಪರಿಹಾರ ವ್ಯವಸ್ಥೆಗಳು ರೂಪುಗೊಂಡು, ಅನುಷ್ಠಾನಕ್ಕೆ ಬರುತ್ತವೆ. ಒಟ್ಟಾರೆಯಾಗಿ ಭಾರತದ ನೂರ ಐವತ್ತು ವರ್ಷಗಳ ಅರಣ್ಯ ಇತಿಹಾಸದಲ್ಲಿ ಜಂಟೀ ಅರಣ್ಯ ಯೋಜನೆ, ಸರ್ಕಾರಿ ಅರಣ್ಯದ ಮೇಲಿನ ನಿಯಂತ್ರಣವನ್ನು ಸಮುದಾಯದೊಂದಿಗೆ ಹಂಚಿಕೊಳ್ಳುವ ಅತ್ಯಂತ ಮುಖ್ಯವಾದ ಐತಿಹಾಸಿಕ ಘಟ್ಟವೆಂಬುದರಲ್ಲಿ ಅನುಮಾನವಿಲ್ಲ.

ಸಾಮಾಜಿಕ ಅರಣ್ಯ ಯೋಜನೆ ಸಾಂಪ್ರದಾಯಿಕವಾದ ಅಭಿವೃದ್ಧಿಯ ಪರಿಕಲ್ಪನೆಯನ್ನು ಆಧರಿಸಿದ ಯೋಜನೆ. ಆರ್ಥಿಕ ಬಂಡವಾಳ ಹಾಗೂ ಆಧುನಿಕ ತಂತ್ರಜ್ಞಾನಗಳಿಗೆ ಇಲ್ಲಿ ಅತಿ ಹೆಚ್ಚಿನ ಪ್ರಾಶಸ್ತ್ಯ. ಬಂಡವಾಳ ಮತ್ತು ತಂತ್ರಜ್ಞಾನಗಳು ಬಡತನವನ್ನು ನಿವಾರಿಸಿ, ಅರಣ್ಯ ಕ್ಷೇತ್ರದಲ್ಲಿನ ಗೊಂದಲ, ಘರ್ಷಣೆ, ಅಶಾಂತಿಗಳನ್ನು ತಹಬದಿಗೆ ತಂದು, ಅರಣ್ಯ ಸಂಪನ್ಮೂಲಗಳ ಒತ್ತಡವನ್ನು ಕಡಿಮೆ ಮಾಡಿ, ಅರಣ್ಯಗಳ ಉತ್ಪಾದಕತೆಯನ್ನು ಹೆಚ್ಚಿಸುತ್ತದೆಂಬ ನಿರೀಕ್ಷೆ ಸಾಮಾಜಿಕ ಅರಣ್ಯ ಯೋಜನೆಯಲ್ಲಿತ್ತು. ಆದರೆ ಹಲವಾರು ಕಾರಣಗಳಿಂದ ಇದು ಸಾಧ್ಯವಾಗಲಿಲ್ಲ. ಈ ವೈಫಲ್ಯಗಳ ಹಿನ್ನೆಲೆಯಲ್ಲಿ, ಅವುಗಳನ್ನು ಸರಿಪಡಿಸುವ ಉದ್ದೇಶದಿಂದ ಜಂಟೀ ಅರಣ್ಯ ಯೋಜನೆ ರೂಪುಗೊಂಡಿತು. ಜಂಟೀ ಅರಣ್ಯ ಯೋಜನೆ ಸಾಂಪ್ರದಾಯಿಕ ಅಭಿವೃದ್ಧಿ ಮಾದರಿಗಳಿಗಿಂತ ಭಿನ್ನವಾಗಿದೆ. ಇಲ್ಲಿ ಸಮುದಾಯದ ಸಹಭಾಗಿತ್ವವಿದೆ. ವಿಕೇಂದ್ರೀಕರಣವಿದೆ, ಸಶಕ್ತೀಕರಣವಿದೆ, ಪ್ರಜಾಪ್ರಭುತ್ವ ಮತ್ತು ಸಮಾನತೆಯ ತತ್ವಗಳಿವೆ. ಇಂತಹ ಒಂದು ಸಾಂಪ್ರದಾಯಿಕ ಅಭಿವೃದ್ಧಿ

ಮಾದರಿಗಳಿಂದ ಭಿನ್ನವಾದ ಸಹಭಾಗಿತ್ವ ಅಭಿವೃದ್ಧಿ ಮಾದರಿಗೆ ಬೆಂಬಲ ನೀಡಿ, ಬೆಳೆಸುವ ಸಾಮರ್ಥ್ಯ, ಪ್ರಾಮಾಣಿಕತೆಗಳು ಸರ್ಕಾರ ಮತ್ತು ನೆರವು ನೀಡುವ ಅಂತಾರಾಷ್ಟ್ರೀಯ ಸಂಸ್ಥೆಗಳಿಗಿವೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಸಮುದಾಯದ ಸಹಭಾಗಿತ್ವವಿರುವ ಜಂಟೀ ಅರಣ್ಯ ಯೋಜನೆ ಕರ್ನಾಟಕದ ಸಂದರ್ಭದಲ್ಲಿ ಜಾರಿಗೊಂಡದ್ದು ಪಶ್ಚಿಮಘಟ್ಟ ಪರಿಸರ ಮತ್ತು ಅರಣ್ಯ ಯೋಜನೆಯ ಮೂಲಕ. ಕರ್ನಾಟಕ ಅರಣ್ಯ ಇಲಾಖೆ ರೂಪಿಸಿದ ಈ ಯೋಜನೆಯ ಮೂಲ ರೂಪದಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ಯಾವ ಅವಕಾಶವೂ ಇರಲಿಲ್ಲ. ಹಾಗೆ ನೋಡಿದರೆ ಅರಣ್ಯ ಇಲಾಖೆಯ 150 ವರ್ಷಗಳ ನೀತಿಯನ್ನೇ ಮುಂದುವರಿಸಿಕೊಂಡು ಸಮುದಾಯವನ್ನು ಅರಣ್ಯಗಳಿಂದ ಹೊರಗಿಟ್ಟು ಬೃಹತ್ ಪ್ರಮಾಣದ ಅರಣ್ಯೀಕರಣವನ್ನು ಕೈಗೊಳ್ಳುವುದು ಅರಣ್ಯ ಇಲಾಖೆಯ ಉದ್ದೇಶವಾಗಿತ್ತು. ಆದರೆ ಯೋಜನೆಗೆ ನೆರವು ಒದಗಿಸಿದ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಇಲಾಖೆ, ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್ಟಿಟ್ಯೂಟ್, ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ಹಾಗೂ ಎಲ್ಲದಕ್ಕಿಂತ ಹೆಚ್ಚಾಗಿ ಕರ್ನಾಟಕದಲ್ಲಿನ ಸರ್ಕಾರೇತರ ಸಂಸ್ಥೆಗಳ ಸಂಘಟನೆಯಾದ ಫೆವಾರ್ಡ್ ಕೆ ಗಳ ಒತ್ತಾಯದಿಂದ ನೆಪಮಾತ್ರಕ್ಕೆ ತೋರಿಕೆಗೆ ಕೇವಲ ಒಂದು ತಂತ್ರವಾಗಿ ಸಹಭಾಗಿತ್ವದ ಪರಿಕಲ್ಪನೆ ಯೋಜನೆಯಲ್ಲಿ ಸೇರ್ಪಡೆಯಾಯಿತು. ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ಹಾಗೂ ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ಇಲಾಖೆಗಳ ನಡುವೆ 1988-92ರ ನಡುವೆ ನಾಲ್ಕು ವರ್ಷಗಳ ಕಾಲ ಸಮಾಲೋಚನೆಗಳು ನಡೆದರೂ ಯೋಜನೆಯ ಮೂಲಭೂತ ಉದ್ದೇಶ, ಸಮುದಾಯದ ಸಹಭಾಗಿತ್ವದ ರೀತಿ, ಸ್ಥಳೀಯ ಸಮುದಾಯಕ್ಕೆ ನೀಡಬೇಕಾದ ಪ್ರಾಶಸ್ತ್ಯ, ಸಮುದಾಯದೊಡನೆ ನಡೆಸಬೇಕಾದ ಸಮಾಲೋಚನೆ, ನೀಡಬೇಕಾದ ಮಾಹಿತಿಗಳು, ಸಮುದಾಯ ಸಾಮರ್ಥ್ಯ ನಿರ್ಮಾಣಕ್ಕೆ ನೀಡಬೇಕಾದ ಮಹತ್ವ, ಜೀವದ್ರವ್ಯಗಳ ಲಭ್ಯತೆ, ಜನಾಂದೋಳನಗಳನ್ನು ಬಳಸಿಕೊಳ್ಳಬೇಕಾದ ರೀತಿ, ಅರಣ್ಯ ಇಲಾಖೆ ಮಾಡಬೇಕಾದ ಸಮುದಾಯ ಸಂಘಟನೆಯ ಕೆಲಸಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ಇದ್ದ ಭಿನ್ನಾಭಿಪ್ರಾಯಗಳು ಹಾಗೆಯೇ ಉಳಿದವು. ಈ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಯಾವುದೇ ಸಹಮತ ಮೂಡಿಬರದಿದ್ದರೂ ಸಹಭಾಗಿತ್ವ ಅಭಿವೃದ್ಧಿಯ ತತ್ವಗಳನ್ನೊಳಗೊಂಡ, ಜಂಟೀ ಅರಣ್ಯ ಯೋಜನೆ ಕಾರ್ಯಗತವಾಯಿತು. ಯೋಜನೆ ಅನುಷ್ಠಾನಗೊಂಡ ನಂತರವೂ ಸಮುದಾಯಕ್ಕೆ ನೀಡಬೇಕಾದ ಸಮಾನತೆಯ ಸ್ಥಾನ, ಸಮುದಾಯದ ಭಾಗವಹಿಸುವಿಕೆಗೆ ಕಲ್ಪಿಸಬೇಕಾದ ಅರ್ಥಪೂರ್ಣ ಅವಕಾಶಗಳು, ಕಾರ್ಯಯೋಜನೆ ಹಾಗೂ ಕಿರು ಯೋಜನೆಗಳ ಸಮನ್ವಯ, ಸಂಪರ್ಕಸಂಸ್ಥೆಗಳ ಸ್ಥಾಪನೆ, ದುರ್ಬಲ ವರ್ಗಗಳ ಅರಣ್ಯಾಧಾರಿತ ಅಗತ್ಯಗಳ ಪೂರೈಕೆ, ನಿಗಾವಣೆ ಮತ್ತು ಹಿಮ್ಮಾಹಿತಿ ವ್ಯವಸ್ಥೆ ಹಾಗೂ ಸೂಕ್ತವಾದ ಸಾಂಸ್ಥಿಕ ಏರ್ಪಾಟುಗಳನ್ನು ತರಲು ಸರ್ಕಾರೇತರ ಸಂಸ್ಥೆಗಳು ಮಾಡಿದ ಎಲ್ಲ ಪ್ರಯತ್ನಗಳನ್ನೂ ಅರಣ್ಯ

ಇಲಾಖೆ ವ್ಯವಸ್ಥಿತವಾಗಿ ನಿಷ್ಪಲಗೊಳಿಸಿತು. ಇವುಗಳಿಗೆ ಮುಕುಟಪ್ರಾಯವಾಗಿ ಈ ಹಿಂದೆ ಸಾಮಾಜಿಕ ಅರಣ್ಯ ಯೋಜನೆಯ ಸಂದರ್ಭದಲ್ಲಿ ಸಮುದಾಯದ ಸಹಭಾಗಿತ್ವವನ್ನು ವಿರೋಧಿಸಿದ್ದ ಅರಣ್ಯ ಇಲಾಖೆಯ ಟೆರಿಟೋರಿಯಲ್ ಅಧಿಕಾರಿಗಳಿಗೇ ಸಹಭಾಗಿತ್ವ ಪರಿಕಲ್ಪನೆಯ ಮೇಲೆ ಆಧರಿತವಾಗಿರುವ ಜಂಟೀ ಅರಣ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ನೀಡಿತು. ಕರ್ನಾಟಕದ ಸಂದರ್ಭದಲ್ಲಿ ಜಂಟೀ ಅರಣ್ಯ ಯೋಜನೆಗೆ ಸಂಬಂಧಪಟ್ಟಂತೆ ನಡೆದಿರುವ ಯಾವ ಅಧ್ಯಯನಗಳೂ ಯೋಜನೆಯ ಮೂಲದಲ್ಲೇ ಇರುವ, ಯೋಜನೆಯಲ್ಲಿ ಅಂತರ್ಗತ ವಾಗಿರುವ ಈ ಸಂರಚನೆಯ ದೌರ್ಬಲ್ಯಗಳನ್ನು ಪರಿಗಣಿಸಿಲ್ಲ. ಇವುಗಳನ್ನು ಎತ್ತಿ ತೋರಿರುವ ಪ್ರಸ್ತುತದ ಅಧ್ಯಯನ ಈ ದೃಷ್ಟಿಯಿಂದ ಮಹತ್ವಪೂರ್ಣವಾಗುತ್ತದೆ.

ಪ್ರಸ್ತುತ ಸಂಶೋಧನೆಯ ಮುಖ್ಯ ತೀರ್ಮಾನಗಳನ್ನು ನಿರೂಪಿಸುವ ಮುನ್ನ, ಈಗಾಗಲೇ ನಡೆದಿರುವ ಸಂಶೋಧನೆ, ಅಧ್ಯಯನಗಳಿಂದ ದೊರೆತಿರುವ ಮುಖ್ಯ ಅಂಶಗಳೊಡನೆ ಈ ಅಧ್ಯಯನದ ತೀರ್ಮಾನಗಳನ್ನು ಹೋಲಿಸಿ ನೋಡುವುದು ಅಗತ್ಯವಾಗುತ್ತದೆ. ಆದರೆ ಇಲ್ಲಿ ಒಂದು ವಿಷಯವನ್ನು ನೆನಪಿನಲ್ಲಿಡಬೇಕು. ಈ ಮುಂಚಿನ ಯಾವ ಅಧ್ಯಯನಗಳೂ, ತಮ್ಮ ಗಮನವನ್ನು ಸಂಪೂರ್ಣವಾಗಿ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಯ ಮೇಲೆ ಕೇಂದ್ರೀಕರಿಸಿಲ್ಲ. ಅವುಗಳ ಗಮನವಿರುವುದು ಜಂಟೀ ಅರಣ್ಯ ಯೋಜನೆಯ ಯಶಸ್ಸು ಹಾಗೂ ಅದನ್ನು ಅಳೆಯುವುದರ ಮೇಲೆ. ಆದರೆ ಪ್ರಸ್ತುತ ಅಧ್ಯಯನದ ವಸ್ತು ಜಂಟೀ ಅರಣ್ಯ ಯೋಜನೆಯ ಮೂಲಕವಾಗಿ ಸಾಧ್ಯವಾಗುವ ಸಹಭಾಗಿತ್ವ ಅಭಿವೃದ್ಧಿ. ಆದ್ದರಿಂದ ಈ ಎರಡೂ ಅಧ್ಯಯನಗಳ ನಡುವಿನ ಹೋಲಿಕೆ, ಈ ಎರಡೂ ಅಧ್ಯಯನಗಳ ವ್ಯಾಪ್ತಿಯಲ್ಲಿ ಬರುವ ವಿಷಯಗಳಿಗೆ ಮಾತ್ರ ಸೀಮಿತವಾಗಿದೆ.

ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಕೋರಿಕೆಯ ಮೇರೆಗೆ, ಟಾಟಾ ಎನರ್ಜಿ ರಿಸರ್ಚ್ ಇನ್ಸ್‌ಟಿಟ್ಯೂಟ್ ಕೈಗೊಂಡ ಅಧ್ಯಯನ ಜಂಟೀ ಅರಣ್ಯ ಯೋಜನೆಗೆ ಸಂಬಂಧ ಪಟ್ಟಂತೆ ನಡೆದಿರುವ ಪೂರ್ಣ ಪ್ರಮಾಣದ ಸಂಶೋಧನೆಗಳಲ್ಲೊಂದು. ಈ ಅಧ್ಯಯನದ ಮುಖ್ಯ ತೀರ್ಮಾನಗಳಲ್ಲಿ ಒಂದು ಅರಣ್ಯ ಯೋಜನೆಯಡಿಯಲ್ಲಿ ಜಾರಿಯಾಗಿರುವ ಜೀವಿಜನ್ಯ ಒತ್ತಡಗಳ ನಿಯಂತ್ರಣಾ ಕ್ರಮಗಳ ಫಲವಾಗಿ ಅಧ್ಯಯನಕ್ಕೆ ಒಳಗಾದ ಶೇಕಡಾ 40ರಷ್ಟು ಪ್ರದೇಶದಲ್ಲಿ ಅರಣ್ಯದ ಪುನರುಜ್ಜೀವನ ಸಾಧ್ಯವಾಗಿದೆಯೆಂದು ಈ ಅಧ್ಯಯನ ತಿಳಿಸುತ್ತದೆ. ಆದರೆ ಈ ಪುನರುಜ್ಜೀವನ ಸಾಧ್ಯವಾಗಿರುವುದು ಗ್ರಾಮ ಅರಣ್ಯ ಸಮಿತಿಗಳಿಂದಲೇ, ಅರಣ್ಯ ಇಲಾಖೆಯಿಂದಲೇ ಅಥವಾ ಈ ಎರಡರ ಸಹಭಾಗಿತ್ವದಿಂದಲೇ ಎಂಬ ಖಚಿತವಾದ ಮಾಹಿತಿಗಳು ದೊರೆಯುವುದಿಲ್ಲ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದ ಹಳ್ಳಿಗಳಲ್ಲಿ, ಜೀವಿ ಜನ್ಯ ಒತ್ತಡಗಳ ನಿಯಂತ್ರಣ ಹಾಗೂ ಅವನತಿ ಹೊಂದಿದ ಅರಣ್ಯ ಭೂಮಿಯ ಪುನರುಜ್ಜೀವನಕ್ಕೆ ಒಟ್ಟು 135 ಹೆಕ್ಟೇರುಗಳಷ್ಟು

ಪ್ರದೇಶವನ್ನು ಒಳಪಡಿಸಿದ್ದರೂ, ಪುನರುಜ್ಜೀವನ ಸಾಧ್ಯವಾಗಿರುವುದು ಕೇವಲ 2 ಹೆಕ್ಟೇರುಗಳಲ್ಲಿ (1.4%). ಇದರೊಂದಿಗೆ ಈ ಪುನರುಜ್ಜೀವನ ಸಾಧ್ಯವಾಗಿರುವುದು ಸಂಪೂರ್ಣವಾಗಿ ಗ್ರಾಮ ಅರಣ್ಯ ಸಮಿತಿ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದಿಂದಾಗಿಯೇ ಹೊರತು ಅರಣ್ಯ ಇಲಾಖೆಯಿಂದಲ್ಲ. ಅರಣ್ಯ ಇಲಾಖೆಗೆ ಪುನರುಜ್ಜೀವನ ಕಾರ್ಯಕ್ರಮದಲ್ಲಿ ಒಂದಿಷ್ಟೂ ಆಸಕ್ತಿಯಿಲ್ಲ.

ಉತ್ಪನ್ನಗಳ ಹಂಚಿಕೆ, ಟಾಟಾ ಎನರ್ಜಿ ರಿಸರ್ಚ್ ಇನ್ಸ್ಟಿಟ್ಯೂಟ್ ಕೈಗೊಂಡ ಅಧ್ಯಯನದ ಮತ್ತೊಂದು ಮುಖ್ಯ ವಿಷಯ. ವಿವಿಧ ರಾಜ್ಯಗಳಲ್ಲಿ ಉತ್ಪನ್ನಗಳ ಹಂಚಿಕೆಯ ಸ್ವರೂಪವನ್ನು ತುಲನಾತ್ಮಕವಾಗಿ ನೋಡುವ ಈ ಅಧ್ಯಯನ ಅದರಲ್ಲಿರುವ ಮೂಲಭೂತ ವಿಪರ್ಯಾಸಗಳ ಬಗ್ಗೆ ಗಮನಹರಿಸುವುದಿಲ್ಲ. ಆದರೆ ಪ್ರಸ್ತುತದ ಅಧ್ಯಯನ ಈ ಮೂಲಭೂತ ವಿಪರ್ಯಾಸ, ಭಾಗವಹಿಸುವಿಕೆಗೆ ಹೇಗೆ ತಡೆಯೊಡ್ಡುತ್ತದೆ ಎಂಬುದನ್ನು ತೋರಿಸಿದೆ.

ಯೋಜನೆ ಆಯೋಗದ ಕಾರ್ಯದರ್ಶಿ ಎನ್.ಸಿ.ಸಕ್ಸೇನಾ ಹಾಗೂ ಸೊಸೈಟಿ ಫಾರ್ ಪ್ರಮೋಶನ್ ಆಫ್ ವೇಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್ ಸಂಸ್ಥೆಯ ಮಧುಸರೀನ ಅವರ ನೇತೃತ್ವದಲ್ಲಿ ಉತ್ತರ ಕನ್ನಡದ 21 ಗ್ರಾಮ ಅರಣ್ಯ ಸಮಿತಿಗಳನ್ನೊಳಗೊಂಡ ಅಧ್ಯಯನ "ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಮಾರಾಟಗಳಲ್ಲಿ ಗ್ರಾಮ ಅರಣ್ಯ ಸಮಿತಿಗೆ ಹೆಚ್ಚಿನ ಪಾತ್ರವನ್ನು ನೀಡಬೇಕು, ಗುತ್ತಿಗೆದಾರರನ್ನು ಪ್ರಯತ್ನಪೂರ್ವಕವಾಗಿ ದೂರವಿಡಬೇಕು" ಎಂಬ ಶಿಫಾರಸು ಮಾಡುತ್ತದೆ. ಆದರೆ ಈ ಕ್ರಮಗಳನ್ನು ಜಾರಿಗೆ ತರುವ ಪ್ರಕ್ರಿಯೆಯಲ್ಲಿನ ತೊಂದರೆಗಳ ಬಗ್ಗೆ ಅದು ವಿಸ್ತರಿಸಿ ಹೇಳುವುದಿಲ್ಲ. ಅಂತಹ ಯಾವ ಪ್ರಯತ್ನಗಳನ್ನೂ ತೋರಿಸುವುದಿಲ್ಲ. ಪ್ರಸ್ತುತ ಅಧ್ಯಯನ, ಕುಮಾರನಹಳ್ಳಿ ಗ್ರಾಮ ಅರಣ್ಯ ಸಮಿತಿ, ಅವಿರತ ಪ್ರಯತ್ನಗಳ ಮೂಲಕವಾಗಿ ಇದನ್ನು ಸಾಧಿಸಲು ನಡೆಸಿರುವ ಹೋರಾಟವನ್ನು ವಿಮರ್ಶಾತ್ಮಕವಾಗಿ ದಾಖಲಿಸಿದೆ. ಈ ಪ್ರಯತ್ನದಲ್ಲಿ ಸರ್ಕಾರೇತರ ಸಂಸ್ಥೆಗಳ ಸಹಯೋಗ ಎಷ್ಟು ಮಹತ್ವಪೂರ್ಣವಾದದ್ದೆಂಬುದನ್ನು ತೋರಿಸಿದೆ. ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ, ಮಾರಾಟಗಳು ಯಶಸ್ವಿಯಾಗಬೇಕಾದರೆ ಗ್ರಾಮ ಅರಣ್ಯ ಸಮಿತಿ, ಅರಣ್ಯ ಇಲಾಖೆ ಮತ್ತು ಸ್ಥಳೀಯ ಸರ್ಕಾರೇತರ ಸಂಸ್ಥೆಗಳು ಒಟ್ಟಾಗಿ ಸೇರಿ ಶ್ರಮಿಸುವುದು ಅಗತ್ಯವಾಗುತ್ತದೆ.

"ದಿ ನ್ಯಾಷನಲ್ ಸಪೋರ್ಟ್ ಗ್ರೂಪ್ ಆನ್ ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್"ಗೆ ಸೇರಿದ ಇಕಾಲಜಿ ಅಂಡ್ ಇಕನಾಮಿಕ ರಿಸರ್ಚ್‌ನೆಟ್‌ವರ್ಕ್ ಕೈಗೊಂಡ ವ್ಯಾಪಕವಾದ ಅಧ್ಯಯನ ಜಂಟೀ ಅರಣ್ಯ ಯೋಜನೆಗೆ ಒಳಪಟ್ಟಿರುವ ಬಹುತೇಕ ಪ್ರದೇಶಗಳಲ್ಲಿ ಅರಣ್ಯ ಉತ್ಪನ್ನಗಳ

ಸಂಗ್ರಹದ ಮೇಲೆ ಯಾವುದೇ ನಿರ್ಬಂಧವಿಲ್ಲದಿರುವುದು ಕಳವಳಕಾರಿ ಎಂದು ಅಭಿಪ್ರಾಯಪಟ್ಟು ಗ್ರಾಮ ಅರಣ್ಯ ಸಮಿತಿಗಳೇ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿಯಮಗಳನ್ನು ರೂಪಿಸಿಕೊಳ್ಳಬೇಕು" ಎನ್ನುತ್ತದೆ.

ಈ ಅಭಿಪ್ರಾಯ ಒಟ್ಟಾರೆಯಾಗಿ ಸರಿಯಾದರೂ, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹದ ಮೇಲೆ ಯಾಕೆ ನಿರ್ಬಂಧಗಳಿಲ್ಲ ಎಂಬುದನ್ನೂ ಗಮನಿಸಬೇಕಾಗುತ್ತದೆ. ಕುಮಾರನಹಳ್ಳಿಯ ಮುಖ್ಯವಾದ ಕಿರು ಅರಣ್ಯ ಉತ್ಪನ್ನ ಬೀಡಿ ಕಟ್ಟುವ ಎಲೆಗಳು. ಈ ಹಳ್ಳಿಯ ಶೇಕಡಾ 47 ಕುಟುಂಬಗಳು ಬೀಡಿ ಎಲೆಯನ್ನು ಸಂಗ್ರಹಿಸುತ್ತವೆ. ಇದು ಕುಟುಂಬದ ಆದಾಯದ ಮೂಲಗಳಲ್ಲಿ ಒಂದು. ಜಂಟೀ ಅರಣ್ಯ ಯೋಜನೆಯ ಯಶಸ್ಸಿಗೆ ಈ ಕುಟುಂಬಗಳ ಸಹಭಾಗಿತ್ವ ಬಹಳ ಮುಖ್ಯ. ಈ ಕುಟುಂಬಗಳನ್ನು ಯೋಜನೆಯಲ್ಲಿ ಉಳಿಸಿಕೊಳ್ಳುವ ಏಕಮಾತ್ರ ಉದ್ದೇಶದಿಂದ ಅರಣ್ಯ ಇಲಾಖೆಯಾಗಲೀ, ನಿರ್ವಹಣಾ ಸಮಿತಿಯಾಗಲೀ ಪ್ರಾರಂಭದಲ್ಲಿ ಬೀಡಿ ಎಲೆಯ ಸಂಗ್ರಹಣೆಯ ಮೇಲೆ ನಿರ್ಬಂಧ ಹೇರಲಿಲ್ಲ. ಆದರೆ ಗ್ರಾಮ ಅರಣ್ಯ ಸಮಿತಿಗಳ ಸಭೆಯಲ್ಲಿ ಚರ್ಚೆಗಳು ನಡೆದ ನಂತರ ಎಲ್ಲರ ಒಪ್ಪಿಗೆಯ ಮೇರೆಗೆ ಅನಂತರ ನಿರ್ಬಂಧಗಳನ್ನು ಜಾರಿಗೊಳಿಸಲಾಯಿತು. ಹೀಗಾಗಿ ಪ್ರಾರಂಭದಲ್ಲಿ ನಿರ್ಬಂಧ ಹೇರದೇ, ಸಹಭಾಗಿತ್ವವನ್ನು ಸಾಧಿಸಲು ಅದನ್ನು ಪ್ರೋತ್ಸಾಹಕವನ್ನಾಗಿ ಬಳಸಿಕೊಂಡು, ಅನಂತರ ಸರ್ವ ಸಮ್ಮತಿಯಿಂದ ನಿಯಂತ್ರಣಗಳನ್ನು ರೂಪಿಸಿಕೊಳ್ಳುವ ಜಾಣ್ಮೆ, ಪ್ರಬುದ್ಧತೆಗಳನ್ನು ಕುಮಾರನಹಳ್ಳಿಯ ಗ್ರಾಮ ಅರಣ್ಯ ಸಮಿತಿ ತೋರಿದೆ. ಪ್ರಸ್ತುತ ಅಧ್ಯಯನ ಈ ವಿಶಿಷ್ಟ ಮಾದರಿಯನ್ನು ಬೆಳಕಿಗೆ ತಂದಿದೆ.

ಪಶ್ಚಿಮ ಘಟ್ಟ ಯೋಜನೆಯ ಮೂಲಕ ಕಾರ್ಯಗತವಾದ ಜಂಟೀ ಅರಣ್ಯ ಯೋಜನೆಯ ಪ್ರಾಥಮಿಕ ಪಾಲುದಾರರ ಜೀವನೋಪಾಯ ಹಾಗೂ ಯೋಗಕ್ಷೇಮದ ಮೇಲೆ ಯೋಜನೆಯ ಪರಿಣಾಮವನ್ನು ಅಧ್ಯಯನ ಮಾಡುವುದು, ಶಿವಮೊಗ್ಗ ಮತ್ತು ಕೆನರಾ ವೃತ್ತದ 18 ಹಳ್ಳಿಗಳಲ್ಲಿ ಐದು ತಿಂಗಳ ಕಾಲ, ಔಟ್‌ರೀಚ್ ಕಡೆಯಿಂದ ನಡೆದ ಅಧ್ಯಯನದ ಮುಖ್ಯ ಉದ್ದೇಶ. ಆದರೆ ಈ ಯೋಜನೆಯ ಪ್ರಾಥಮಿಕ ಪಾಲುದಾರರಲ್ಲಿ ಮುಖ್ಯ ಭಾಗವಾದ ಭೂರಹಿತರು ಹಾಗೂ ದುರ್ಬಲ ವರ್ಗದವರ ಅರಣ್ಯಾಧಾರಿತ ಅಗತ್ಯಗಳು ಹಾಗೂ ಅವುಗಳ ಪೂರೈಕೆಯ ಬಗ್ಗೆ ಈ ಅಧ್ಯಯನ ಕೇವಲ ಪ್ರಾಸಂಗಿಕವಾಗಿ ಕೆಲವು ಮಾತುಗಳನ್ನು ಹೇಳುತ್ತದೆ. ಯೋಜನೆಯಿಂದ ಅವರ ದಿನನಿತ್ಯದ ಬದುಕಿನ ಮೇಲೆ ಆಗಿರುವ ಪರಿಣಾಮದ ವಿಮರ್ಶೆ ನಮಗೆ ದೊರೆಯುವುದಿಲ್ಲ. ಈ ಕೊರತೆಯನ್ನು ಪ್ರಸ್ತುತ ಅಧ್ಯಯನ ತುಂಬಿಕೊಟ್ಟಿದೆ. ದುರ್ಬಲ ವರ್ಗಗಳ ಅರಣ್ಯಾಧಾರಿತ ಬೇಡಿಕೆಗಳ ಪೂರೈಕೆ ಹಾಗೂ ಅವರ ಜೀವನೋಪಾಯ ಮಾರ್ಗಗಳ ರಕ್ಷಣೆ, ಜಂಟೀ ಅರಣ್ಯ ಯೋಜನೆಯ ಆದ್ಯತೆಯ ವಿಷಯವೇ ಅಲ್ಲವೆಂಬುದನ್ನು ತೋರಿಸಿರುವ ಪ್ರಸ್ತುತ ಅಧ್ಯಯನ, ಯೋಜನೆಯ ಅನುಷ್ಠಾನದಿಂದ ದುರ್ಬಲ ವರ್ಗಗಳ ಮೇಲೆ ಆಗಿರುವ ಪರಿಣಾಮವನ್ನು ದಾಖಲಿಸಿದೆ.

ನಾವು ಪರಿಗಣಿಸಿರುವ ಯಾವ ಅಧ್ಯಯನಗಳೂ ಜಂಟೀ ಅರಣ್ಯ ಯೋಜನೆಗಾಗಿ ಹಳ್ಳಿಯನ್ನು ಆಯ್ಕೆ ಮಾಡಬೇಕಾದಾಗ ವಹಿಸಬೇಕಾದ ಎಚ್ಚರಿಕೆಯ ಬಗೆಗಾಗಲೀ, ಆಯ್ಕೆಗಾಗಿ ಮಾನದಂಡವೊಂದನ್ನು ರೂಪಿಸುವ ಅಗತ್ಯದ ಬಗೆಗಾಗಲೀ ಗಮನಹರಿಸಿಲ್ಲ. ಇಂತಹ ಮಾನ ದಂಡದ ಬಳಕೆ ಮತ್ತು ಆ ಮೂಲಕ ಮಾಡುವ ಆಯ್ಕೆ ಯೋಜನೆಯ ಯಶಸ್ಸಿನ ಸಾಧ್ಯತೆಯನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ. ಈ ರೀತಿಯ ಮಾನದಂಡದ ಮುಖ್ಯ ಅಂಶಗಳ ಮೇಲೆ ಈ ಅಧ್ಯಯನ ಬೆಳಕು ಚೆಲ್ಲಿದೆ.

ಈಗ ಪ್ರಸ್ತುತ ಸಂಶೋಧನೆಯಿಂದ ಬೆಳಕಿಗೆ ಬಂದಿರುವ ಮುಖ್ಯ ವಿಷಯಗಳತ್ತ ಗಮನಹರಿಸೋಣ.

ಜಂಟೀ ಅರಣ್ಯ ಯೋಜನೆಯಲ್ಲಿ ಅರಣ್ಯ ಇಲಾಖೆ ಮತ್ತು ಸ್ಥಳೀಯ ಸಮುದಾಯಗಳ ನಡುವಿನ ಸಂಬಂಧ ಸಮಾನತೆಯ ತತ್ವಗಳ ಮೇಲೆ ಆಧರಿತವಾಗಿದೆ. ಅಧಿಕಾರದಲ್ಲಿ ಪಾಲು, ಜವಾಬ್ದಾರಿಯಲ್ಲಿ ಪಾಲು, ಪ್ರಯೋಜನಗಳಲ್ಲೂ ಪಾಲು ಇದು ಯೋಜನೆಯ ಮೂಲಭೂತ ತತ್ವ. ಸಮಾನತೆಯ ಮೇಲೆ ಆಧರಿತವಾದ ಇಂತಹ ಯೋಜನೆ ಜನತೆಯ ಸಹಭಾಗಿತ್ವವನ್ನು ಪ್ರೇರೇಪಿಸುತ್ತದೆ ಎಂಬ ಗ್ರಹಿಕೆಯಿದೆ. ಆದರೆ ಈ ಸಮಾನತೆ ಎಷ್ಟರ ಮಟ್ಟಿಗೆ ಪ್ರಾಮಾಣಿಕ, ಎಷ್ಟರ ಮಟ್ಟಿಗೆ ಆಚರಣೆಯಲ್ಲಿ ಬಂದಿದೆಯೆನ್ನುವುದು ಮುಖ್ಯವಾಗುತ್ತದೆ. ಜಂಟೀ ಅರಣ್ಯ ಯೋಜನೆಯ ಮುಖ್ಯ ಕಾರ್ಯಘಟಕ ಗ್ರಾಮ ಅರಣ್ಯ ಸಮಿತಿ. ಇದು ಸ್ವತಂತ್ರವಾದ, ಸ್ವಯಂ ಆಡಳಿತ ನಡೆಸಬಲ್ಲ, ಆರ್ಥಿಕವಾಗಿ ಸ್ವಯಂಪೂರ್ಣವಾಗಿ ಬೆಳೆಯಬಲ್ಲ ಸಾಮರ್ಥ್ಯವಿರುವ ಗ್ರಾಮೀಣ ಸಂಘಟನೆ. ಸಮುದಾಯದ ಸಹಭಾಗಿತ್ವ ಸಾಧ್ಯವಾಗುವುದು ಈ ಸಮಿತಿಯ ಮೂಲಕವಾಗಿ. ಆದರೆ ಆಚರಣೆಯಲ್ಲಿ ಇವು ಎಷ್ಟರಮಟ್ಟಿಗೆ ಸಾಧ್ಯವಾಗಿವೆ?

ಗ್ರಾಮ ಅರಣ್ಯ ಸಮಿತಿಗಳಿಗೆ ಕಾನೂನು ಬದ್ಧವಾದ ಯಾವುದೇ ಸ್ಥಾನಮಾನವೂ ಇಲ್ಲ. ಅವು ನೋಂದಣಿಯಾಗಿರುವುದು ಅರಣ್ಯ ಇಲಾಖೆಯಲ್ಲಿ ಮಾತ್ರ. ಸಹಕಾರಿ ಸಂಘಗಳ ಅಧಿನಿಯಮದಡಿ ಯಲ್ಲಿ ನೋಂದಣಿಗೆ ಅವಕಾಶವಿದ್ದರೂ, ಕರ್ನಾಟಕದ ಯಾವ ಗ್ರಾಮ ಅರಣ್ಯ ಸಮಿತಿಯೂ ಈ ಅಧಿನಿಯಮದಡಿಯಲ್ಲಿ ನೋಂದಣಿಯನ್ನು ಪಡೆದಿಲ್ಲ. ಸದಸ್ಯತ್ವದ ನಿಯಮಗಳು, ಗ್ರಾಮ ಅರಣ್ಯ ಸಮಿತಿಯನ್ನು ಸ್ಥಾಪಿಸಬೇಕಾದ ಹಳ್ಳಿಗಳ ಆಯ್ಕೆ, ಜಂಟೀ ಅರಣ್ಯ ಯೋಜನೆಯಡಿಯಲ್ಲಿ ತರಬೇಕಾದ ಜಾಗಗಳ ಆಯ್ಕೆ ಈ ಯಾವುದರಲ್ಲೂ ಗ್ರಾಮ ಅರಣ್ಯ ಸಮಿತಿಗೆ ಸ್ವಾತಂತ್ರ್ಯವಿಲ್ಲ. ಈ ಎಲ್ಲವನ್ನೂ ಸಂಪೂರ್ಣವಾಗಿ ಅರಣ್ಯ ಇಲಾಖೆಯೇ ನಿರ್ಧರಿಸು ತ್ತದೆ. ಇಷ್ಟೇ ಅಲ್ಲ. ಅರಣ್ಯ ಇಲಾಖೆ, ಗ್ರಾಮ ಅರಣ್ಯ ಸಮಿತಿಗೆ ಅಂತಿಮವಾಗಿ ಉತ್ಪನ್ನಗಳಲ್ಲಿ ಬರುವ ಪಾಲನ್ನು ತಡೆಹಿಡಿಯಬಹುದು, ಕೊಡದೆಯೇ ಇರಬಹುದು, ಸಮಿತಿಯನ್ನು ರದ್ದುಪಡಿಸಬಹುದು. ಗ್ರಾಮ

ಅರಣ್ಯ ಸಮಿತಿಯ ಶ್ರಮದ ಫಲವಾಗಿ ಪುನರುಜ್ಜೀವನಗೊಂಡ ಅರಣ್ಯವನ್ನು, ಜಂಟೀ ಅರಣ್ಯ ಯೋಜನೆಯ ವ್ಯಾಪ್ತಿಯಿಂದ ಹೊರಗೆ ತರಬಹುದು. ಒಟ್ಟಿನಲ್ಲಿ ಜಂಟೀ ಅರಣ್ಯ ಯೋಜನೆಯಲ್ಲಿ ಯಾರು ಭಾಗವಹಿಸಬೇಕು, ಹೇಗೆ ಭಾಗವಹಿಸಬೇಕು, ಎಲ್ಲಿ ಭಾಗವಹಿಸಬೇಕು ಎಂಬುದೆಲ್ಲವನ್ನೂ ಸಂಪೂರ್ಣವಾಗಿ ಅರಣ್ಯ ಇಲಾಖೆಯೇ ನಿರ್ಧರಿಸುತ್ತದೆ. ಎಲ್ಲ ರೀತಿಯ ಭಾಗವಹಿಸುವಿಕೆಯೂ ಅರಣ್ಯ ಇಲಾಖೆಯ ಕಣ್ಗಾವಲಿನಲ್ಲಿಯೇ ನಡೆಯುತ್ತದೆ.

ಸರ್ಕಾರದ ಆದೇಶಗಳಿಗನುಸಾರವಾಗಿ ಗ್ರಾಮ ಅರಣ್ಯ ಸಮಿತಿಗಳಿಗೆ ದೊರೆತಿರುವ ಅಧಿಕಾರ ಸೀಮಿತವಾದುದು. ಈ ಸಮಿತಿಗಳು, ಅತಿಕ್ರಮ ಪ್ರವೇಶ, ಒತ್ತುವರಿ, ಅತಿಮೇಯಾಟ, ಕಳ್ಳಸಾಗಣೆ, ಬೆಂಕಿ ಮುಂತಾದವುಗಳನ್ನು ತಡೆಯಲು ಅರಣ್ಯ ಇಲಾಖೆಗೆ ನೆರವು ನೀಡಬೇಕು. ಆದರೆ ಇವುಗಳನ್ನು ಉಲ್ಲಂಘಿಸಿದವರನ್ನು ಶಿಕ್ಷಿಸುವ, ಶಿಕ್ಷೆಯ ಪ್ರಮಾಣವನ್ನು ನಿರ್ಧರಿಸುವ ಅಧಿಕಾರ ಸಮಿತಿಗಿಲ್ಲ (ಕೆಲವು ಅರಣ್ಯ ಸಮಿತಿಗಳು ಸಂರಕ್ಷಣೆಯ ದೃಷ್ಟಿಯಿಂದ ಅಗತ್ಯವಾದ ಇಂತಹ ಅಧಿಕಾರವನ್ನು ತಾವೇ ಚಲಾಯಿಸುತ್ತಿವೆ). ಅರಣ್ಯೀಕರಣ, ಅರಣ್ಯಾಭಿವೃದ್ಧಿಗಳಿಗೆ ಸಂಬಂಧಿಸಿದ ಕೆಲಸಗಳನ್ನು ಸರಿಯಾದ ಸಮಯದಲ್ಲಿ ನಿರ್ವಹಿಸಲು ಅರಣ್ಯ ಇಲಾಖೆಗೆ ಸಹಾಯ ಮಾಡಬೇಕು. ಸಸ್ಯ ಪ್ರಭೇದಗಳ ಆಯ್ಕೆಯಲ್ಲಿ ಇಲಾಖೆಯೊಡನೆ ಸಹಕರಿಸಬೇಕು. ಆದರೆ ಈ ಯಾವ ಕೆಲಸಗಳನ್ನೂ ಗ್ರಾಮ ಅರಣ್ಯ ಸಮಿತಿ ಸ್ವತಂತ್ರವಾಗಿ ತಾನೇ ಮಾಡುವಂತಿಲ್ಲ. ಸಭೆಯನ್ನು ಸಂಘಟಿಸುವುದು, ನಿರ್ವಹಣಾ ಯೋಜನೆಯನ್ನು ತಯಾರಿಸುವುದು, ವ್ಯಾಜ್ಯ ಪರಿಹಾರ, ಅಪೀಲಿನ ವಿಚಾರಣೆ ಎಲ್ಲವೂ ಅರಣ್ಯ ಇಲಾಖೆಯ ಜವಾಬ್ದಾರಿ. ಗ್ರಾಮ ಅರಣ್ಯ ಸಮಿತಿಗೆ ಇವುಗಳಲ್ಲಿ ಯಾವ ಪಾತ್ರವೂ ಇಲ್ಲ. ಗ್ರಾಮ ಅರಣ್ಯ ಸಮಿತಿಗೆ ಅಧಿಕಾರೇತರ ಸದಸ್ಯರ ಹಾಗೂ ಸರ್ಕಾರೇತರ ಸಂಸ್ಥೆಗಳ ನಾಮಕರಣದಲ್ಲಿ ವಿಭಾಗೀಯ ಅರಣ್ಯಾಧಿಕಾರಿಯ ನಿರ್ಧಾರವೇ ಅಂತಿಮವಾದುದು. ಗ್ರಾಮ ಅರಣ್ಯ ಸಮಿತಿಯ ಮಹಾಸಭೆಗೆ ಮಾತ್ರ ಉತ್ತರದಾಯಿಯಾಗಿರಬೇಕಾದ, ಜವಾಬ್ದಾರಿಯಿಂದ ಪ್ರಜಾಪ್ರಭುತ್ವದ ತತ್ವಗಳಿಗೆ ಅನುಸಾರವಾಗಿ ಕೆಲಸಮಾಡಬೇಕಾದ ನಿರ್ವಹಣಾ ಸಮಿತಿ, ಅರಣ್ಯ ಇಲಾಖೆಗೆ ಉತ್ತರದಾಯಿಯಾಗಿರುವ ಅನೇಕ ನಿದರ್ಶನಗಳಿವೆ. ಸಹಭಾಗಿತ್ವಕ್ಕೆ ಬದ್ಧತೆಯುಳ್ಳ, ಸತ್ವಶಾಲಿಯಾದ ಸರ್ಕಾರೇತರ ಸಂಸ್ಥೆಗಳ ಸಹಯೋಗವಿರುವ ಗ್ರಾಮ ಅರಣ್ಯ ಸಮಿತಿಗಳು ಸ್ವತಂತ್ರ ಮನೋಭಾವವನ್ನು ತೋರಿವೆಯೇ ಹೊರತಾಗಿ ಉಳಿದಂತೆ ಅರಣ್ಯ ಇಲಾಖೆಯ ಬಿಗಿ ನಿಯಂತ್ರಣ ಸಹಭಾಗಿತ್ವದ ಪರಿಕಲ್ಪನೆಗೆ ಮಾರಕವಾಗಿದೆ.

ಅರಣ್ಯ ಸಂಪನ್ಮೂಲಗಳ ಮೇಲೆ ಸ್ಥಳೀಯ ಸಮುದಾಯದ ಅವಲಂಬನೆ, ಜಂಟೀ ಅರಣ್ಯ ಯೋಜನೆಗಾಗಿ ಹಳ್ಳಿಗಳನ್ನು ಆಯ್ಕೆಮಾಡುವ ಪ್ರಕ್ರಿಯೆಯ ಮೊದಲ ಮಾನದಂಡವಾಗಬೇಕು. ಸಮುದಾಯ ಸಂಘಟನೆಯ ದೃಷ್ಟಾಂತಗಳು, ಸಹಕಾರಿ ಯೋಜನೆಗಳ ಯಶಸ್ಸಿನ ನಿದರ್ಶನಗಳು, ಉತ್ತಮ ನಾಯಕತ್ವ ಮುಂತಾದವುಗಳನ್ನೂ ಪರಿಶೀಲಿಸಬೇಕು. ಈ ಯಾವ ಗುಣಲಕ್ಷಣಗಳೂ

ಇಲ್ಲದ ಸಮುದಾಯದಲ್ಲಿ ಜಂಟೀ ಅರಣ್ಯ ಯೋಜನೆಯಂತಹ ಸಹಭಾಗಿತ್ವ ಕಾರ್ಯಕ್ರಮವೊಂದು ಯಶಸ್ವಿಯಾಗುವುದು ಅತ್ಯಂತ ಕಷ್ಟ ಸಾಧ್ಯವೆಂಬ ಸರಳ ಸತ್ಯವನ್ನು ಅರ್ಥಮಾಡಿಕೊಳ್ಳಬೇಕು. ಆದರೆ ಜಂಟೀ ಅರಣ್ಯ ಯೋಜನೆಗಾಗಿ ಮಾಡಿರುವ ಹಳ್ಳಿಗಳ ಆಯ್ಕೆಯಲ್ಲಿ ಈ ಪ್ರಯತ್ನ ಕಾಣುವುದಿಲ್ಲ. ಅರಣ್ಯಗಳೂ ಇಲ್ಲದ, ಅವಲಂಬನೆಯೂ ಇಲ್ಲದ ಉದ್ದೂರು, ಮುಕುಂದೂರುಗಳಂತಹ ಹಳ್ಳಿಗಳಲ್ಲಿ ಕೇವಲ ರಾಜಕೀಯ ಕಾರಣಗಳಿಂದ ಯೋಜನೆಯನ್ನು ಜಾರಿಗೆ ತಂದಲ್ಲಿ ಅದು ವ್ಯರ್ಥವಾಗುತ್ತದೆ. ಗ್ರಾಮ ಅರಣ್ಯ ಸಮಿತಿಯನ್ನು ಪ್ರಾರಂಭಿಸುವ ಹಂತದಲ್ಲಿ, ಅರಣ್ಯ ಇಲಾಖೆ, ಹಳ್ಳಿಯ ಜನರ ನಂಬಿಕೆ, ವಿಶ್ವಾಸಗಳಿಗೆ ಪಾತ್ರರಾಗಿರುವಂತಹ ನಾಯಕರೊಡನೆ ಸಮಾಲೋಚಿಸಬೇಕು. ಒಂದು ಜಾತಿಗೆ, ಒಂದು ರಾಜಕೀಯ ಪಕ್ಷಕ್ಕೆ ಸೇರಿದ ನಾಯಕರೊಡನೆ ಮಾತ್ರ ಅರಣ್ಯಾಧಿಕಾರಿಗಳು ಸಂಪರ್ಕಬೆಳೆಸಿದಲ್ಲಿ ಅದು ಯೋಜನೆಯ ಮೇಲೆ ಎಂತಹ ಮಾರಕ ಪರಿಣಾಮಗಳನ್ನು ಬೀರುತ್ತದೆಂಬುದನ್ನು ಉದ್ದೂರು, ಮುಕುಂದೂರುಗಳು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ.

ಅರಣ್ಯ ಪ್ರದೇಶವೊಂದು ಜಂಟೀ ಅರಣ್ಯ ಯೋಜನೆಯಡಿಯಲ್ಲಿ ಬಂದಾಗ ಹಲವಾರು ಕಟ್ಟುಪಾಡುಗಳು ಜಾರಿಗೆ ಬರುತ್ತವೆ. ಸ್ಥಳೀಯ ಸಮುದಾಯದ ಸದಸ್ಯರು ತಲೆಹೊರೆ ಉರುವಲನ್ನು ತರುವಂತಿಲ್ಲ, ದನಕರುಗಳನ್ನು ಮೇಯಿಸುವಂತಿಲ್ಲ, ಮರಮಟ್ಟುಗಳಿಗಾಗಿ ಅರಣ್ಯಕ್ಕೆ ಹೋಗುವಂತಿಲ್ಲ. ಅರಣ್ಯದ ಮೇಲೆ ಅವಲಂಬಿತವಾಗಿರುವ ಸಮುದಾಯದಲ್ಲಿನ ದುರ್ಬಲ ವರ್ಗಕ್ಕೆ ಸೇರಿದ ಜನರ ಮೇಲೆ ಈ ನಿಯಮಗಳು ತೀವ್ರ ಪರಿಣಾಮ ಬಿರುತ್ತವೆ. ಕ್ಷೇತ್ರಕಾರ್ಯದ ಹಳ್ಳಿಗಳು ಇದನ್ನು ತೋರಿಸಿವೆ. ಇಡೀ ಯೋಜನೆಯಲ್ಲಿ ಅತಿ ಹೆಚ್ಚಿನ ನಷ್ಟವನ್ನು ಕಷ್ಟವನ್ನು ಈ ವರ್ಗದ ಜನ ಭರಿಸಬೇಕಾಗುತ್ತದೆ. ತಮ್ಮ ಅಗತ್ಯಗಳನ್ನು ಬೇರೆಯ ಅರಣ್ಯಗಳಿಂದ, ಅರಣ್ಯದ ಬೇರೆ ಭಾಗಗಳಿಂದ, ಬೇರೆಯ ಮೂಲಗಳಿಂದ ಪೂರೈಸಿಕೊಳ್ಳಬೇಕಾದ ಈ ಜನ ಉರುವಲಿಗಾಗಿ ಎಲೆ, ತೊಗಟೆ, ಕಳೆ, ಪೊದೆ, ಹೊದರುಗಳನ್ನು ಬಳಸಲು ಪ್ರಾರಂಭಿಸುತ್ತಾರೆ. ಇಂತಹ ಉರುವಲನ್ನು ಸಂಗ್ರಹಿಸಲು ಹೆಚ್ಚು ಸಮಯ, ಶ್ರಮಗಳು ಬೇಕಾಗುತ್ತವೆ. ಒಟ್ಟಾರೆಯಾಗಿ ತಮ್ಮ ದಿನನಿತ್ಯದ ಅಗತ್ಯಗಳಿಗೆ, ಜೀವನೋಪಾಯಕ್ಕೆ ಮಾರಕವಾಗುವ ಇಂತಹ ಯೋಜನೆಯಲ್ಲಿ ಅದರಿಂದ ತೊಂದರೆಗೀಡಾದವರು ಸಕ್ರಿಯವಾಗಿ ಭಾಗವಹಿಸುವುದಾದರೂ ಹೇಗೆ?

ಬಡವರು ಮತ್ತು ದುರ್ಬಲ ವರ್ಗದವರ ಈ ಸಮಸ್ಯೆ ಅನಿರೀಕ್ಷಿತವೇನಲ್ಲ. ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವದ ಪರಿಕಲ್ಪನೆಯನ್ನು ಅಳವಡಿಸುತ್ತಿದ್ದ ಸಮಯದಲ್ಲಿ ಇದನ್ನು ನಿರೀಕ್ಷಿಸಿದ ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ಸಮುದಾಯದ ಅಂಗವಾದ, ದುರ್ಬಲವರ್ಗಗಳ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸಲು ವಿಶೇಷ ಕ್ರಮಗಳನ್ನು ಕೈಗೊಂಡ ಹೊರತು ಅವರ ಜೀವನ ಮಟ್ಟ ಮತ್ತಷ್ಟು ಕುಸಿಯುತ್ತದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸಿದ್ದವು. ಆದರೆ ಯೋಜನೆ

ಅನುಷ್ಠಾನಗೊಂಡ ನಂತರವೂ ಇಂತಹ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸುವ ಯಾವುದೇ ನಿಖರವಾದ ಕಾರ್ಯತಂತ್ರಗಳೂ ರೂಪುಗೊಳ್ಳಲಿಲ್ಲ. ಇದೇ ಕಾರಣದಿಂದ ಈ ವರ್ಗಗಳ ಅರ್ಥಪೂರ್ಣ ಸಹಭಾಗಿತ್ವ ಅಸಾಧ್ಯವಾಗಿದೆ. ಗ್ರಾಮ ಅರಣ್ಯ ಸಮಿತಿಗೆ ಸರ್ಕಾರೇತರ ಸಂಸ್ಥೆಗಳ ಸಹಯೋಗವಿರುವ ಕಡೆಗಳಲ್ಲಿ ಅಥವಾ ಗ್ರಾಮ ಅರಣ್ಯ ಸಮಿತಿಯೇ ದುರ್ಬಲ ವರ್ಗಗಳ ಬಗ್ಗೆ ವಿಶೇಷ ಕಾಳಜಿವಹಿಸಿ, ಅವರ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸುವ, ಪರ್ಯಾಯ ಮಾರ್ಗಗಳಿಂದ ಅರಣ್ಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ, ಆದಾಯವನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಂಡಾಗ ಅವರ ಭಾಗವಹಿಸುವಿಕೆ ಸುಧಾರಿಸಿರುವುದು ಕಂಡುಬಂದಿದೆ.

ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯ ಸಮುದಾಯ ಅರ್ಥಪೂರ್ಣವಾಗಿ ಭಾಗವಹಿಸ ಬೇಕಾದಲ್ಲಿ ಕೆಳಕಂಡ ಎರಡು ಮುಖ್ಯ ಪೂರ್ವ ಷರತ್ತುಗಳು ಪೂರ್ಣವಾಗಬೇಕು.

- ಅರಣ್ಯ ಸಂರಕ್ಷಣೆಗೆ ಪ್ರತಿಫಲವಾಗಿ ಸ್ಥಳೀಯ ಜನರ ಸಮಯ, ಶ್ರಮಗಳಿಗೆ ತಕ್ಕಂತೆ ಕಾಲದಿಂದ ಕಾಲಕ್ಕೆ, ಅವರಿಗೆ ಸೂಕ್ತ ಪ್ರತಿಫಲ, ಪ್ರಯೋಜನಗಳು ದೊರೆಯಬೇಕು.
- ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಗೆ ಸಂಬಂಧಿಸಿದ ಹಕ್ಕು ಹಾಗೂ ಅಂತಿಮ ಇಳುವರಿಯಲ್ಲಿ ದೊರೆಯುವ ಪಾಲಿನ ಬಗ್ಗೆ ಖಚಿತವಾದ, ಲಿಖಿತ ಮಾಹಿತಿ ಲಭ್ಯವಿದ್ದು ಇದು ಯೋಜನೆಯಲ್ಲಿ ಭಾಗವಹಿಸುವ ಎಲ್ಲರಿಗೂ ತಿಳಿದಿರಬೇಕು.

ಜಂಟೀ ಅರಣ್ಯ ಯೋಜನೆಯಲ್ಲಿ ಅರಣ್ಯ ಇಲಾಖೆಯ ಗಮನ ಸಂಪೂರ್ಣವಾಗಿ ನೆಡುತೋಪುಗಳ ಮೇಲೆ ಹಾಗೂ ಅದರಿಂದ ದೊರೆಯುವ ಆದಾಯದ ಮೇಲಿದೆ. ಅವನತಿ ಹೊಂದಿದ ಅರಣ್ಯಭೂಮಿಯ ಪುನರುಜ್ಜೀವನ ಅದರ ಆದ್ಯತೆಯಲ್ಲ. ಅರಣ್ಯಾಧಾರಿತ ಸಮುದಾಯಗಳ ದಿನನಿತ್ಯದ ಅಗತ್ಯಗಳನ್ನು ನೆಡುತೋಪುಗಳು ಪೂರೈಸುವುದಿಲ್ಲ. ನೆಡುತೋಪು ಗಳಿಂದ ಅಂತಿಮ ಆದಾಯವನ್ನು ನಿರೀಕ್ಷಿಸಬಹುದೇ ಹೊರತಾಗಿ ಕಾಲದಿಂದ ಕಾಲಕ್ಕೆ ಅಗತ್ಯವಾದ ಜೀವದ್ರವ್ಯ ಗಳನ್ನಲ್ಲ. ಸಮುದಾಯದ ಭಾಗವಹಿಸುವಿಕೆಗೆ ಹೆಚ್ಚಿನ ಅವಕಾಶಗಳಿರುವುದು ಪುನರುಜ್ಜೀವನ ದಲ್ಲಿಯೇ ಹೊರತು ನೆಡುತೋಪುಗಳ ನಿರ್ಮಾಣದಲ್ಲಲ್ಲ. ನೆಡುತೋಪುಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಅತೀವ ಆಸಕ್ತಿ, ಸಮುದಾಯದ ಸಹಭಾಗಿತ್ವವನ್ನು ಕುಂಠಿತಗೊಳಿಸಿದೆ.

ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ಕರ್ನಾಟಕ ಸರ್ಕಾರದ ಆದೇಶದಂತೆ, ಯೋಜನೆಯ ವ್ಯಾಪ್ತಿಯ ಪ್ರದೇಶದಲ್ಲಿ ಅರಣ್ಯದಿಂದ ಕಿರು ಅರಣ್ಯ ಉತ್ಪನ್ನಗಳನ್ನು ಉಚಿತವಾಗಿ ಸಂಗ್ರಹಿಸು ವಂತಿಲ್ಲ. ಅದರಿಂದ ದೊರೆಯುವ ಆದಾಯದಲ್ಲಿ ಶೇಕಡಾ 50ರಷ್ಟು ಇಲಾಖೆಗೆ ಸೇರಬೇಕು. ಈ ಉತ್ಪನ್ನಗಳನ್ನು ಸಂಗ್ರಹಿಸುವುದರಲ್ಲಿ ಭೂರಹಿತ ಕುಟುಂಬಗಳದ್ದೇ ಹೆಚ್ಚಿನ ಪಾತ್ರ. ಇಂತಹವರ ಆದಾಯದಲ್ಲೂ ಶೇಕಡಾ 50ರಷ್ಟನ್ನು ಇಲಾಖೆಗೆ ಕೊಡಬೇಕಾದ ಪರಿಸ್ಥಿತಿ ಭಾಗವಹಿಸುವಿಕೆಯನ್ನು

ಪ್ರೋತ್ಸಾಹಿಸುವುದಿಲ್ಲ. ಆದರೆ ಕುಮಾರನಹಳ್ಳಿ, ಮರಡವಳ್ಳಿಗಳಲ್ಲಿ ಅರಣ್ಯ ಇಲಾಖೆ ಈ ನಿಯಮವನ್ನು ಜಾರಿಗೆ ತರದೇ, ಮುಕ್ತ ಸಂಗ್ರಹಣೆ, ಮಾರಾಟಕ್ಕೆ ಅವಕಾಶ ನೀಡಿ, ಅದನ್ನು ಸಮುದಾಯದ ಭಾಗವಹಿಸುವಿಕೆಗೆ ಪ್ರೋತ್ಸಾಹಕವಾಗಿ ಬಳಸಿಕೊಂಡಿದೆ. ಈ ಎರಡು ಹಳ್ಳಿಗಳಲ್ಲಿ ಭಾಗವಹಿಸುವಿಕೆ ಉತ್ತಮವಾಗಿರಲು ಇದೂ ಒಂದು ಮುಖ್ಯ ಕಾರಣವಾಗಿದೆ.

ಅಂತಿಮ ಕಟಾವಿನಿಂದ ದೊರೆಯುವ ಆದಾಯದ ಹಂಚಿಕೆಯಲ್ಲೂ ತೀವ್ರವಾದ ವಿರೋಧಾಭಾಸಗಳಿವೆ. ನೆಡುತೋಪಿನ ಅಂತಿಮ ಕಟಾವಿನಿಂದ ದೊರೆಯುವ ಆದಾಯದಲ್ಲಿ ಅರಣ್ಯ ಸಮಿತಿಗೆ ಶೇಕಡಾ 50ರಷ್ಟು ಭಾಗ ದೊರೆತು, ಉಳಿದ ಭಾಗ ಅರಣ್ಯ ಇಲಾಖೆಗೆ ಸೇರುತ್ತದೆ. ಗ್ರಾಮ ಅರಣ್ಯ ಸಮಿತಿಗೆ ದೊರೆತ ಶೇಕಡಾ 50 ಭಾಗದಲ್ಲಿ, ಅರ್ಧದಷ್ಟು ಎಲ್ಲ ಸದಸ್ಯರಿಗೆ ಹಂಚಿಕೆಯಾದರೆ, ಉಳಿದ ಅರ್ಧಭಾಗ ಗ್ರಾಮ ಅರಣ್ಯ ಸಮಿತಿ ಮತ್ತೆ ಮರಗಿಡಗಳನ್ನು ಬೆಳೆಸಲು ಬಳಸಬೇಕು. ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು, ಉರುವಲು ಹಾಗೂ ಸಣ್ಣ ಮರಮುಟ್ಟು ಇತ್ಯಾದಿಗಳನ್ನು ಅರಣ್ಯಾಧಿಕಾರಿಗಳು ನಿಗದಿಪಡಿಸಿದ ದರದಲ್ಲಿ ಗ್ರಾಮಸ್ಥರು ಹಣ ಕೊಟ್ಟು ಕೊಳ್ಳಬಹುದು. ಈ ವ್ಯವಸ್ಥೆಯಲ್ಲಿ ಅಂತಿಮ ಕಟಾವಿನಿಂದ ಹಣ ದೊರೆಯುತ್ತದೆಯೇ ಹೊರತಾಗಿ ಅರಣ್ಯ ಉತ್ಪನ್ನಗಳಲ್ಲ.

ನೆಡುತೋಪು ಅಂತಿಮ ಕಟಾವಿಗೆ ಒಳಗಾದ ನಂತರ ಆ ಜಾಗದಲ್ಲಿ ಮತ್ತೆ ಮರಗಿಡಗಳನ್ನು ಬೆಳೆಸಲು, ಗ್ರಾಮ ಅರಣ್ಯ ಅಭಿವೃದ್ಧಿ ನಿಧಿಯ ಹಣವನ್ನು ಬಳಸಬೇಕಾಗುತ್ತದೆ. ಆದರೆ ಅಂತಿಮ ಆದಾಯದ ಶೇಕಡಾ 25 ಭಾಗದ ಹಣ ಇದಕ್ಕೆ ಸಾಕಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನೆಡುತೋಪನ್ನು ಬೆಳೆಸಬೇಕಾದರೆ ಗ್ರಾಮಸ್ಥರು ಶ್ರಮದಾನ ಮಾಡಬೇಕು. ಶ್ರಮದಾನದಿಂದ ಬೆಳೆಸಿದ ನೆಡುತೋಪಿನ ಅಂತಿಮ ಕಟಾವಿನಲ್ಲೂ ಅರಣ್ಯ ಇಲಾಖೆ ಸಮಪಾಲನ್ನು ನಿರೀಕ್ಷಿಸುತ್ತದೆ. ಹೀಗಾಗಿ ಸರ್ಕಾರದ ಬೊಕ್ಕಸ ತುಂಬಲು ಗ್ರಾಮ ಅರಣ್ಯ ಸಮಿತಿಯ ಸದಸ್ಯರು ನಿರಂತರವಾಗಿ ಶ್ರಮದಾನ ಮಾಡಬೇಕಾಗುತ್ತದೆ. ಇದು ಸಮುದಾಯದ ಸಹಭಾಗಿತ್ವವನ್ನು ಖಂಡಿತವಾಗಿ ಪ್ರೋತ್ಸಾಹಿಸು ವುದಿಲ್ಲ.

ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ಸರ್ಕಾರದ ಆದೇಶದಂತೆ ಒಳ್ಳೆಯ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗೆ ಯೋಜನೆಯಲ್ಲಿ ಸ್ಥಾನವಿದೆ. ಗ್ರಾಮ ಅರಣ್ಯ ಸಮಿತಿಯ ಕೆಲಸಗಳಲ್ಲಿ ದೊಡ್ಡ ಸರ್ಕಾರೇತರ ಸಂಸ್ಥೆಗಳಿಗಿಂತ, ಸ್ಥಳೀಯವಾದ, ಅಭಿವೃದ್ಧಿಯಲ್ಲಿ ಬದ್ಧತೆಯಿರುವ ಸಣ್ಣ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಬಲ್ಲದೆಂಬುದನ್ನು ಈ ಅಧ್ಯಯನ ತೋರಿಸಿಕೊಟ್ಟಿದೆ. ಈ ಸಣ್ಣ, ಸ್ಥಳೀಯ ಸರ್ಕಾರೇತರ ಸಂಸ್ಥೆಗಳು ಯೋಜನೆಗೆ ಸಂಬಂಧಿಸಿದ ಮಾಹಿತಿಗಳ ಕೇಂದ್ರವಾಗಿ, ಸಮುದಾಯದ ಸಹಭಾಗಿತ್ವಕ್ಕೆ ಪ್ರೇರಕಶಕ್ತಿಯಾಗಿ, ಜನರನ್ನು ಸಂಘಟಿಸಿ, ಭಾಗವಹಿಸಲು ಬೇಕಾದ ವಿವಿಧ ಸಾಮರ್ಥ್ಯ, ಕೌಶಲಗಳನ್ನು ಬೆಳೆಸುವ ಪ್ರಾಮಾಣಿಕ ಪ್ರಯತ್ನ

ಮಾಡಿವೆ. ತಾವೇ ಸ್ವತಃ ಗ್ರಾಮ ಅರಣ್ಯ ಸಮಿತಿಗಳಲ್ಲಿ ಎದ್ದು ಕಾಣುವಂತೆ ಭಾಗವಹಿಸದಿದ್ದರೂ, ಸಾಮಾನ್ಯವಾಗಿ ಭಾಗವಹಿಸದೇ ಹಿಂಜರಿಕೆಯಿಂದ ಹಿಂದುಳಿಯುವ, ಮಹಿಳೆಯರು, ದುರ್ಬಲ ವರ್ಗದವರನ್ನು ಸಂಘಟಿಸಿ, ಉತ್ತೇಜನ ನೀಡಿ ಭಾಗವಹಿಸುವಂತೆ ಮಾಡುವಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ಆದರೆ ಸರ್ಕಾರೇತರ ಸಂಸ್ಥೆಗಳು ಸ್ಥಳೀಯ ಸಮುದಾಯದ ಸಹಭಾಗಿತ್ವಕ್ಕೆ ವೇಗವರ್ಧಕಗಳಾಗಬೇಕೇ ಅಲ್ಲದೇ ಗ್ರಾಮ ಅರಣ್ಯ ಸಮಿತಿಗಳ ಊರುಗೋಲಾಗಬಾರದು. ಸರ್ಕಾರೇತರ ಸಂಸ್ಥೆಗಳು ಹಿಂದೆ ಸರಿದ ಮೇಲೆ, ಗ್ರಾಮ ಅರಣ್ಯ ಸಮಿತಿಗಳು ತಮ್ಮ ಜವಾಬ್ದಾರಿಯನ್ನು ಸ್ವತಂತ್ರವಾಗಿ ನಿರ್ವಹಿಸಬಲ್ಲ ಸಾಮರ್ಥ್ಯವನ್ನು ಬೆಳೆಸುವುದು ಸರ್ಕಾರೇತರ ಸಂಸ್ಥೆಗಳ ಗುರಿಯಾಗಬೇಕು. ಇದು ಸಾಧ್ಯವಾಗಿಲ್ಲದಿರುವುದು ಆತಂಕದ ವಿಷಯ.

ಜಂಟೀ ಅರಣ್ಯ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ಕರ್ನಾಟಕ ಸರ್ಕಾರದ ಆದೇಶ ಚೌಕಟ್ಟೊಂದನ್ನು ಒದಗಿಸಿದೆ. ಆದರೆ ಒಂದೇ ಆದೇಶದಡಿಯಲ್ಲಿ ಕೆಲಸ ಮಾಡುತ್ತಿರುವ ಗ್ರಾಮ ಅರಣ್ಯ ಸಮಿತಿಗಳಲ್ಲಿ, ಸಮುದಾಯದ ಸಹಭಾಗಿತ್ವದ ಸ್ವರೂಪದಲ್ಲಿ ಅನೇಕ ಅನನ್ಯತೆಗಳೂ, ವ್ಯತ್ಯಾಸಗಳೂ ಕಂಡುಬರುತ್ತವೆ. ಅರಣ್ಯದ ಮೇಲಿನ ಅವಲಂಬನೆ, ಯೋಜನೆಯ ಬಗೆಗಿನ ತಿಳಿವಳಿಕೆ, ಜನರ ಬದುಕಿಗೆ ಯೋಜನೆಯ ಪ್ರಸ್ತುತತೆ, ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಯ ಕಾಳಜಿಗಳು, ಸರ್ಕಾರೇತರ ಸಂಸ್ಥೆಗಳ ಸಹಯೋಗ, ಸ್ಥಳೀಯ ರಾಜಕೀಯ, ನಾಯಕತ್ವ, ಹಳ್ಳಿಯಲ್ಲಿನ ವಿವಿಧ ಗುಂಪುಗಳು ಹಾಗೂ ಅವುಗಳ ನಡುವಿನ ಸಂಬಂಧ ಮುಂತಾದವುಗಳ ಒಟ್ಟಾರೆ ಪರಿಣಾಮ ಸಮುದಾಯದ ಸಹಭಾಗಿತ್ವವನ್ನು ಪ್ರಭಾವಿಸುತ್ತದೆ.

ಸಂಶೋಧನೆಯ ಮುಖ್ಯ ತೀರ್ಮಾನಗಳು

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಗೆ ಸಂಬಂಧಿಸಿದ ಸಂಶೋಧನೆಯಿಂದ ಕಂಡುಬಂದಿರುವ ಮುಖ್ಯವಾದ ಅಂಶಗಳು ಕೆಳಕಂಡಂತಿವೆ.

- ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಯಲ್ಲಿ ಜಂಟೀ ಅರಣ್ಯ ಯೋಜನೆಯ ಮೂಲಕವಾಗಿ, ಸಮುದಾಯದ ಸಹಭಾಗಿತ್ವಕ್ಕೆ ಅವಕಾಶಕಲ್ಪಿಸುವ ಪ್ರಕ್ರಿಯೆ ಕರ್ನಾಟಕ ಅರಣ್ಯ ಇಲಾಖೆಯ ಮೇಲೆ ಬಲವಂತದ ಹೇರಿಕೆಯಾಯಿತೇ ವಿನಃ ಸ್ವಾಗತಾರ್ಹವಾದ ಪರಿವರ್ತನೆಯಾಗಲಿಲ್ಲ.

- ಸಹಭಾಗಿತ್ವ ಅಭಿವೃದ್ಧಿಯ ಮೂಲ ಪರಿಕರಗಳಾದ ಸಮುದಾಯಕ್ಕೆ ನೀಡಬೇಕಾದ ಸಮಾನತೆಯ ಸ್ಥಾನ, ಸಮುದಾಯದೊಂದಿಗೆ ಸಮಾಲೋಚನೆ, ಮಾಹಿತಿ ವಿತರಣೆ, ಸಮುದಾಯದ ಸಂಘಟನೆ, ಜೀವದ್ರವ್ಯಗಳ ಪೂರೈಕೆ, ಸಂಪರ್ಕ ಸಂಸ್ಥೆಗಳ ಸ್ಥಾಪನೆ, ದುರ್ಬಲ ವರ್ಗಗಳ ಅರಣ್ಯಾಧಾರಿತ ಅಗತ್ಯಗಳ ಪೂರೈಕೆ, ನಿಗಾವಣೆ ಮತ್ತು ಹಿಮ್ಮಾಹಿತಿ ವ್ಯವಸ್ಥೆ ಮುಂತಾದವು ಗಳನ್ನು ಅರಣ್ಯ

ಇಲಾಖೆ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಸಮುದಾಯದ ಸಶಕ್ತೀಕರಣಕ್ಕೆ ಅರಣ್ಯ ಇಲಾಖೆ ಮುಸುಕಿನೊಳಗೇ ತೋರಿದ ವಿರೋಧ, ಅಸಹಕಾರ, ಔದಾಸೀನ್ಯಗಳ ಫಲವಾಗಿ, ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆ, ಕರ್ನಾಟಕದ ಸಂದರ್ಭದಲ್ಲಿ ಜಂಟೀ ಅರಣ್ಯ ಯೋಜನೆಗೆ ತೇಪೆ ಹಾಕಿ ಸೇರಿಸಿದಂತಾಯಿತೇ ವಿನಃ ಅದರಲ್ಲಿ ಅಂತರ್ಗತ ಗೊಂಡು ಯೋಜನೆಯನ್ನು ಅರ್ಥಪೂರ್ಣ ಗೊಳಿಸುವ, ಸತ್ವಪೂರ್ಣಗೊಳಿಸುವ ಶಕ್ತಿಯಾಗಲಿಲ್ಲ.

- ಜಂಟೀ ಅರಣ್ಯಯೋಜನೆಯ ವಿವಿಧ ಹಂತಗಳಾದ ಯೋಜನೆಯ ರೂಪು-ರೇಷೆಗಳ ತಯಾರಿ, ನೀತಿ-ನಿಲುವುಗಳ ನಿಷ್ಕರ್ಷೆ, ಅನುಷ್ಠಾನ, ಮೌಲ್ಯಮಾಪನ ಮುಂತಾದವುಗಳಲ್ಲಿ ಭಾಗವಹಿಸುವ ಹಾಗೂ ನಿರ್ಧಾರ ಕೈಗೊಳ್ಳುವ ಅವಕಾಶಗಳು ತಾತ್ವಿಕಯಾಗಿಯಾದರೂ ಸಮುದಾಯಕ್ಕಿದೆ. ಆದರೆ ಯೋಜನೆಯಲ್ಲಿ ಭಾಗವಹಿಸುವ ಅವಕಾಶ ಒದಗಿಸಿದ ಮಾತ್ರಕ್ಕೆ ಜನ ಅದರಲ್ಲಿ ಭಾಗವಹಿಸುವುದಿಲ್ಲ. ಜಂಟೀ ಅರಣ್ಯ ಯೋಜನೆಯ ಸಂದರ್ಭದಲ್ಲಿ, ಸ್ಥಳೀಯ ಸಮುದಾಯದ ಅರಣ್ಯಗಳ ಮೇಲಿನ ಅವಲಂಬನೆ, ಯೋಜನೆಯ ಬಗೆಗಿನ ಅರಿವು, ಜನರ ಬದುಕಿಗೆ ಯೋಜನೆಯ ಪ್ರಸ್ತುತತೆ, ಅರಣ್ಯ ಇಲಾಖೆ ಹಾಗೂ ಗ್ರಾಮ ಅರಣ್ಯ ಸಮಿತಿಗಳ ಆಸಕ್ತಿ, ಸರ್ಕಾರೇತರ ಸಂಸ್ಥೆಗಳ ಸಹಯೋಗ, ಸ್ಥಳೀಯ ನಾಯಕತ್ವ ಮುಂತಾದವು ಸಮುದಾಯದ ಸಹಭಾಗಿತ್ವವನ್ನು ಪ್ರಭಾವಿಸಿ, ಅನುಷ್ಠಾನಗೊಂಡ ಯೋಜನೆ ಯಶಸ್ವಿಯಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ.
- ಜಂಟೀ ಅರಣ್ಯ ಯೋಜನೆಯ ಮುಖ್ಯ ಕಾರ್ಯ ಘಟಕವಾದ ಗ್ರಾಮ ಅರಣ್ಯಸಮಿತಿಗೆ, ದಿನನಿತ್ಯದ ವ್ಯವಹಾರಗಳನ್ನು ನೋಡಿಕೊಳ್ಳುವ ನಿರ್ವಹಣಾ ಸಮಿತಿಗೆ ಕಾನೂನು ಬದ್ಧವಾದ ಯಾವುದೇ ಸ್ಥಾನಮಾನವೂ ಇಲ್ಲ. ಸರ್ಕಾರೀ ಆದೇಶಗಳು ಗ್ರಾಮ ಅರಣ್ಯ ಸಮಿತಿಗೆ ನೀಡಿರುವ ಅಧಿಕಾರ ಅತ್ಯಲ್ಪ. ಸದಸ್ಯತ್ವದ ನಿಯಮಗಳು, ಹಳ್ಳಿಗಳ ಆಯ್ಕೆ, ಯೋಜನೆಯಡಿಯಲ್ಲಿ ತರಬೇಕಾದ ಜಾಗಗಳ ಆಯ್ಕೆ, ಸಸ್ಯ ಪ್ರಭೇದಗಳ ಆಯ್ಕೆ, ಅಂತಿಮ ಹಂಚಿಕೆ ಈ ಯಾವುದರಲ್ಲೂ ಗ್ರಾಮ ಅರಣ್ಯ ಸಮಿತಿಗೆ ಸ್ವಾತಂತ್ರ್ಯವಿಲ್ಲ. ಗ್ರಾಮ ಅರಣ್ಯ ಸಮಿತಿಯ ಮೂಲಕವಾಗಿ ನಡೆಯಬೇಕಾದ ಸಮುದಾಯದ ಸಹಭಾಗಿತ್ವ ಇಲಾಖೆಯ ಕಣ್ಗಾವಲಿನಲ್ಲಿಯೇ ನಡೆಯುತ್ತದೆ. ಸತ್ವಶಾಲಿಯಾದ ಸರ್ಕಾರೇತರ ಸಂಸ್ಥೆಗಳ ಬೆಂಬಲವಿರುವ ಕಡೆಗಳಲ್ಲಿ ಮಾತ್ರ ಗ್ರಾಮ ಅರಣ್ಯ ಸಮಿತಿಗಳು ಸಮಾನತೆಯ ಆಧಾರದ ಮೇಲೆ ಸ್ವಯಂ ಆಡಳಿತ ನಡೆಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿವೆ. ಉಳಿದೆಡೆಗಳಲ್ಲಿ ಗ್ರಾಮ ಅರಣ್ಯಸಮಿತಿ, ಅರಣ್ಯ ಇಲಾಖೆಯ ವಿಸ್ತರಣಾ ವಿಭಾಗವಾಗಿ ಕೆಲಸ ಮಾಡಿದೆ.
- ಜಂಟೀ ಅರಣ್ಯ ಯೋಜನೆಯ ಅನುಷ್ಠಾನಕ್ಕೆ ಹಳ್ಳಿಗಳನ್ನು ಆಯ್ಕೆ ಮಾಡುವಾಗ ಅರಣ್ಯ ಇಲಾಖೆ ವೈಜ್ಞಾನಿಕವಾದ ಯಾವುದೇ ಮಾನದಂಡವನ್ನೂ ಬಳಸಿಲ್ಲ. ಅರಣ್ಯದ ಮೇಲಿನ ಅವಲಂಬನೆ,

ಜಾತಿಯ ದೃಷ್ಟಿಯಿಂದ ಕಡಿಮೆಯ ಭಿನ್ನತೆ, ಸಮುದಾಯ ಸಂಘಟನೆ ಮತ್ತು ಸಹಕಾರಿ ಯೋಜನೆಗಳ ನಿದರ್ಶನ, ಉತ್ತಮ ನಾಯಕತ್ವ, ಸರ್ಕಾರೇತರ ಸಂಸ್ಥೆಗಳ ಸಹಯೋಗ ಮುಂತಾದವು ಮಾನದಂಡದ ಮುಖ್ಯ ಅಂಶಗಳಾಗಬೇಕು. ಆದರೆ ಈ ಯಾವ ಗುಣಲಕ್ಷಣಗಳೂ ಇಲ್ಲದ ಹಳ್ಳಿಗಳನ್ನು ಕೇವಲ ರಾಜಕೀಯ ಕಾರಣಗಳಿಗಾಗಿ ಆಯ್ಕೆ ಮಾಡಲಾಗಿದೆ.

- ಕಿರು ಯೋಜನೆಯ ತಯಾರಿ, ಸಸ್ಯ ಪ್ರಭೇದಗಳು ಹಾಗೂ ಅವುಗಳನ್ನು ನೆಡಬೇಕಾದ ಜಾಗಗಳ ಆಯ್ಕೆ, ಸಮುದಾಯದ ಸಕ್ರಿಯ ಭಾಗವಹಿಸುವಿಕೆಗೆ ಅವಕಾಶ ಒದಗಿಸುವ ಜಂಟೀ ಅರಣ್ಯ ಯೋಜನೆಯ ಮುಖ್ಯ ಕಾರ್ಯಚಟುವಟಿಕೆಗಳು. ಮಾಹಿತಿ ನೀಡಿಕೆ, ಸಮಾಲೋಚನೆ, ಸಮುದಾಯದ ಅಗತ್ಯಗಳನ್ನು ಗುರುತಿಸುವುದು, ಒಮ್ಮತ ನಿರ್ಮಾಣ, ಅನುಷ್ಠಾನ, ಹೊಣೆಗಾರಿಕೆ, ಪಾಲುದಾರಿಕೆ ಮುಂತಾದ ಭಾಗವಹಿಸುವಿಕೆಯ ಎಲ್ಲ ಆಯಾಮಗಳಿಗೂ ಇಲ್ಲಿ ಸ್ಥಾನವಿದೆ. ಆದರೆ ಸಹಭಾಗಿತ್ವಕ್ಕೆ ಬದ್ಧತೆಯಿಲ್ಲದ ಅರಣ್ಯ ಇಲಾಖೆ, ಈ ಎಲ್ಲವನ್ನೂ ಕೇವಲ ಕಾರ್ಯವಿಧಾನದ ಒಂದು ಅನಿವಾರ್ಯ ಆಚರಣೆಯಾಗಿ, ಕಾಟಾಚಾರಕ್ಕೆ, ಒಂದೇ ದಿನದಲ್ಲಿ ಮಾಡಿ ಮುಗಿಸಿ ಸಮುದಾಯದ ಭಾಗವಹಿಸುವಿಕೆಯನ್ನು ಅರ್ಥಹೀನವನ್ನಾಗಿ ಮಾಡಿದೆ. ಆದರೆ ಇದೇ ಪರಿಸ್ಥಿತಿಯಲ್ಲಿ, ಗ್ರಾಮ ಅರಣ್ಯ ಸಮಿತಿಗೆ ಸಹಭಾಗಿತ್ವ ಅಭಿವೃದ್ಧಿಯ ತತ್ವ, ಆಚರಣೆಗಳಲ್ಲಿ ನಂಬಿಕೆಯಿರುವ ಸರ್ಕಾರೇತರ ಸಂಸ್ಥೆಗಳ ಸಹಯೋಗ ದೊರೆತಾಗ, ಇಡೀ ಯೋಜನೆ ನಿಧಾನವಾಗಿಯಾದರೂ ಸರಿಯಾದ, ಅರ್ಥಪೂರ್ಣವಾದ ದಾರಿಯಲ್ಲಿ ಸಾಗಬಲ್ಲದು.

- ಅಭಿವೃದ್ಧಿ ಯೋಜನೆಗಳಲ್ಲಿ ದುರ್ಬಲ ವರ್ಗಗಳ ಸಹಭಾಗಿತ್ವದ ಬಗ್ಗೆ ಕಾಳಜಿ ವ್ಯಕ್ತಪಡಿಸುವ ಸರ್ಕಾರ, ಜಂಟೀ ಅರಣ್ಯ ಯೋಜನೆಯಿಂದ ಅವರ ಜೀವನ ಮತ್ತಷ್ಟು ದುರ್ಭರವಾದರೂ, ಅವರ ಅರಣ್ಯಾಧಾರಿತ ಅಗತ್ಯಗಳನ್ನು ಪೂರೈಸಲು ಯಾವುದೇ ನಿರ್ದಿಷ್ಟ ಕಾರ್ಯತಂತ್ರವನ್ನೂ ಯೋಜನೆಯಲ್ಲಿ ಅಳವಡಿಸಿಲ್ಲ. ಇದು ದುರ್ಬಲ ವರ್ಗಗಳ ಸಹಭಾಗಿತ್ವವನ್ನು ತೀವ್ರವಾಗಿ ಹಿಮ್ಮೆಟ್ಟಿಸಿದೆ.

- ಯೋಜನೆಯ ಯಶಸ್ಸು ಫಲಾನುಭವಿಗಳ ಭಾಗವಹಿಸುವಿಕೆಯ ಮೇಲೆ ಅವಲಂಬಿತವಾಗಿರುವ ಸಂದರ್ಭಗಳಲ್ಲಿ, ಸಾಮಾಜಿಕ ಸಮಸ್ಯೆಗಳ ಪ್ರಾಬಲ್ಯ ಅಧಿಕವಾಗಿರುವ ಪರಿಸರದಲ್ಲಿ, ಯೋಜನೆ ಯೊಂದರ ವಿನ್ಯಾಸ, ಅನುಷ್ಠಾನ, ನಿಗಾವಣೆ ಮತ್ತು ಮೌಲ್ಯ ಮಾಪನಗಳಿಗೆ ಸಂಬಂಧಿಸಿದಂತೆ ಸಮುದಾಯದ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶವಿರುವ ಕಡೆಗಳಲ್ಲಿ ಪ್ರಕ್ರಿಯಾ ಯೋಜನೆ (ಪ್ರೋಸೆಸ್ ಪ್ರಾಜೆಕ್ಟ್) ಹೆಚ್ಚು ಪರಿಣಾಮಕಾರಿಯಾಗುತ್ತದೆ. ಅವನತಿ ಹೊಂದಿದ ಅರಣ್ಯಗಳ ಪುನರುಜ್ಜೀವನ ಕಾರ್ಯಕ್ರಮದಲ್ಲಿ ಈ ಪ್ರಕ್ರಿಯಾ ಯೋಜನೆಗೆ ಮುಖ್ಯ ಪಾತ್ರವಿದೆ. ಆದರೆ ಅರಣ್ಯ ಇಲಾಖೆಗೆ ಅವನತಿ ಹೊಂದಿದ ಅರಣ್ಯಗಳ ಪುನರುಜ್ಜೀವನದಲ್ಲಿ, ಆ ಮೂಲಕವಾಗಿ ಪ್ರಕ್ರಿಯಾ ಯೋಜನೆಗಳಲ್ಲಿ ಯಾವುದೇ ಆಸಕ್ತಿಯೂ ಇಲ್ಲ. ಎಲ್ಲ ಹಳ್ಳಿಗಳಲ್ಲಿ, ಜಂಟೀ ಅರಣ್ಯ

ಯೋಜನೆ ಪ್ರಕ್ರಿಯಾ ಯೋಜನೆಯ ಪರಿಕಲ್ಪನೆಗಳಿಂದ, ಆ ಮೂಲಕವಾಗಿ ಸಹಭಾಗಿತ್ವ ಅಭಿವೃದ್ಧಿಯ ತತ್ವಗಳಿಂದ ದೂರವಾಗಿ, ವರ್ಷಕ್ಕೆ ಇಂತಿಷ್ಟು ಹೆಕ್ಟೇರುಗಳಂತೆ ನೆಡು ತೋಪುಗಳನ್ನು ಬೆಳೆಸುವ ಟಾರ್ಗೆಟ್ ಯೋಜನೆಗಳಾಗಿ ಪರಿವರ್ತನೆ ಹೊಂದಿ ಸಮುದಾಯದ ಭಾಗವಹಿಸುವಿಕೆಯನ್ನು ಹಿಮ್ಮೆಟ್ಟಿಸಿದೆ.

ಸಲಹೆಗಳು

ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿ ಪರಿಕಲ್ಪನೆಗೆ ಸಂಬಂಧಿಸಿದಂತೆ ನಡೆಸಿದ ಸಂಶೋಧನೆಯ ಫಲಿತಾಂಶಗಳನ್ನು ಆಧರಿಸಿ, ಸಮುದಾಯದ ಸಹಭಾಗಿತ್ವವನ್ನು ಉತ್ತಮಪಡಿಸಲು, ಹೆಚ್ಚು ಅರ್ಥಪೂರ್ಣವನ್ನಾಗಿ ಮಾಡಲು ಈ ಕೆಳಕಂಡ ಸಲಹೆಗಳನ್ನು ಮಾಡಲಾಗಿದೆ.

- ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ, ಸ್ಥಳೀಯ ಅರಣ್ಯ ಸಂಪನ್ಮೂಲಗಳ ರಕ್ಷಣೆ, ಬಳಕೆ, ನಿಯಂತ್ರಣ, ಪುನರುಜ್ಜೀವನಗಳಿಗೆ ಸಂಬಂಧಿಸಿದಂತೆ ಅಧಿಕಾರದಲ್ಲಿ ತೀವ್ರ ಅಸಮತೋಲನಗಳಿವೆ. ಇದನ್ನು ನಿವಾರಿಸಲು ಅಧಿಕಾರದ ಮರು ಹಂಚಿಕೆಯಾಗಬೇಕು. ಇದಕ್ಕೆ ಅಗತ್ಯವಾದ ಸಾಂಸ್ಥಿಕ ಬದಲಾವಣೆಗಳನ್ನು ತರಬೇಕು.
- ಅರಣ್ಯಾಭಿವೃದ್ಧಿಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರದಲ್ಲಿ ಗ್ರಾಮ ಅರಣ್ಯ ಸಮಿತಿಗೆ ಯಾವುದೇ ಪಾತ್ರವಿಲ್ಲ. ಈ ಪರಿಸ್ಥಿತಿಯನ್ನು ಬದಲಿಸಲು ಸ್ಥಳೀಯ ಹಂತದಲ್ಲಿ, ಅರಣ್ಯಾಭಿವೃದ್ಧಿಗೆ ಮೀಸಲಾದ ಹಣದಲ್ಲಿ ಶೇಕಡಾ 50 ಭಾಗವನ್ನು ನೇರವಾಗಿ ಆಯ್ದ ಗ್ರಾಮ ಅರಣ್ಯ ಸಮಿತಿಗಳಿಗೇ ನೀಡಬೇಕು. ಸಹಭಾಗಿತ್ವಕ್ಕೆ ಇದು ಉತ್ತಮ ಪ್ರೋತ್ಸಾಹಕವಾಗುತ್ತದೆ.
- ನೆಡುತೋಪುಗಳಿಂದ ಬರುವ ಒಟ್ಟು ಆದಾಯದ ಶೇಕಡಾ 25 ಭಾಗ ಮಾತ್ರ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಹಂಚಿಕೆಯಾಗುತ್ತದೆ. ಇದಕ್ಕಾಗಿ ಎಂಟು ಹತ್ತು ವರ್ಷಗಳು ಕಾಯಬೇಕು. ಇದು ತೀರಾ ಅನಾಕರ್ಷಕ. ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಇದರ ಮರು ಪರಿಶೀಲನೆ ಅವಶ್ಯಕ.
- ಸಮುದಾಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸುವಂತಹ ಗುಣಲಕ್ಷಣಗಳಿರುವ ಹಳ್ಳಿಗಳನ್ನು ಕಟ್ಟುನಿಟ್ಟಾಗಿ ಆಯ್ಕೆ ಮಾಡಿ ಅಂತಹ ಜಾಗಗಳಲ್ಲಿ ಮಾತ್ರ ಯೋಜನೆಯನ್ನು ಜಾರಿಗೆ ತರಬೇಕು.
- ದುರ್ಬಲ ವರ್ಗಗಳ ಭಾಗವಹಿಸುವಿಕೆಯನ್ನು ಪ್ರೇರೇಪಿಸುವ ಉದ್ದೇಶದಿಂದ ಯೋಜನೆಯನ್ನು ಜಾರಿಗೆ ತರುವ ಮೊದಲೇ, ಅದರಿಂದ ದುರ್ಬಲವರ್ಗಗಳ ಮೇಲೆ ಆಗುವ ದುರ್ಭರ

ಪರಿಣಾಮಗಳನ್ನು ಗುರುತಿಸಿ, ಅದನ್ನು ತಡೆಗಟ್ಟಲು ಅಗತ್ಯವಾದ ಕ್ರಮಗಳನ್ನು ಕೈಗೊಂಡ ನಂತರವೇ ಯೋಜನೆಯನ್ನು ಜಾರಿಗೊಳಿಸಬೇಕು.

- ಅರಣ್ಯ ಸಂಪನ್ಮೂಲಗಳ ಮೇಲೆ ಅವಲಂಬಿತರಾಗಿರುವ ಸ್ಥಳೀಯ ಜನರನ್ನು ಸಂಘಟಿಸಿ, ಅವರನ್ನು ಯೋಜನೆಯಲ್ಲಿ ಭಾಗವಹಿಸುವಂತೆ ಮಾಡುವ ಜವಾಬ್ದಾರಿ ಅರಣ್ಯ ಇಲಾಖೆಯ ಮೇಲಿದೆ. ಆದರೆ ಸಮುದಾಯದ ಸಂಘಟನೆಗೆ ಅಗತ್ಯವಾದ ತರಬೇತಿ, ಪರಿಣತಿ, ಕೌಶಲ, ಅನುಭವಗಳು ಅರಣ್ಯ ಸಿಬ್ಬಂದಿಗಿಲ್ಲ. ಈ ಕೊರತೆಯನ್ನು ನೀಗುವ ಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಈ ಕ್ಷೇತ್ರದಲ್ಲಿ ಆಸಕ್ತಿ, ಬದ್ಧತೆ, ಅನುಭವಗಳಿರುವ ಸ್ಥಳೀಯ ಸರ್ಕಾರೇತರ ಸಂಸ್ಥೆಗಳಿಗೆ ಈ ಜವಾಬ್ದಾರಿಯನ್ನು ವಹಿಸಿಕೊಡುವುದು ಹೆಚ್ಚು ಸೂಕ್ತ.
- ಇಡೀ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಕೇವಲ ಸಾಂಕೇತಿಕ ಸ್ಥಾನವಿದೆ. ಅವರ ಭಾಗವಹಿಸುವಿಕೆಯನ್ನು ಪ್ರಾಮಾಣಿಕವಾಗಿ ಪ್ರೋತ್ಸಾಹಿಸಲು ಮಹಿಳೆಯರ ಅರಣ್ಯಾಧಾರಿತ ಜೀವದ್ರವ್ಯ ಅಗತ್ಯಗಳ ಪೂರೈಕೆಗೆ ವಿಶೇಷ ಗಮನ ನೀಡಬೇಕು. ಗ್ರಾಮ ಅರಣ್ಯ ಸಮಿತಿ ಹಂತದಲ್ಲಿ ಅವರು ಬಂದ ನಂತರವೇ ಸಭೆಯನ್ನು ಪ್ರಾರಂಭಿಸುವುದು, ಅವರ ಅಭಿಪ್ರಾಯ ಗಳನ್ನು ಪಡೆಯದೇ ಚರ್ಚೆಯನ್ನು ಮುಗಿಸದೇ, ನಿರ್ಧಾರಗಳನ್ನು ಕೈಗೊಳ್ಳದಿರುವುದು, ಅವರ ಅಭಿಪ್ರಾಯಗಳನ್ನು ಪ್ರತ್ಯೇಕವಾಗಿ ದಾಖಲಿಸುವುದು, ಸಭೆಗೆ ಮುಂಚೆ ಮಹಿಳೆಯರೇ ಪ್ರತ್ಯೇಕವಾಗಿ ಸೇರಿ ಚರ್ಚಿಸಿ, ಅವರ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವ ಪ್ರಯತ್ನವನ್ನು ಪ್ರೋತ್ಸಾಹಿಸುವುದು, ಕಿರು ಯೋಜನೆಯ ತಯಾರಿ, ಸಹಭಾಗಿತ್ವ ಗ್ರಾಮೀಣ ಸಮೀಕ್ಷೆಗಳಲ್ಲಿ ಮಹಿಳೆಯರದೇ ಪ್ರತ್ಯೇಕ ಗುಂಪು ಮಾಡಿ ಅವರ ಅಭಿಪ್ರಾಯಗಳನ್ನು ಪಡೆಯುವುದು, ಮುಂತಾದ ಸಣ್ಣ ಸಣ್ಣ ಕ್ರಮಗಳಿಂದ ಮಹಿಳೆಯರ ಭಾಗವಹಿಸುವಿಕೆಗೆ ಬೆಂಬಲ ನೀಡಬಹುದು.
- ನೆಡುತೋಪುಗಳ ನಿರ್ಮಾಣಕ್ಕೆ ನೀಡಿರುವಷ್ಟೇ ಗಮನವನ್ನು ಸ್ಥಳೀಯ ಸಮುದಾಯದ ವಿವಿಧ ಜೀವದ್ರವ್ಯ ಅಗತ್ಯಗಳನ್ನು ಪೂರೈಸುವ ಸಮುದಾಯದ ಸಹಭಾಗಿತ್ವಕ್ಕೆ ಹೆಚ್ಚಿನ ಅವಕಾಶ ಗಳನ್ನೊದಗಿಸುವ ಅವನತಿ ಹೊಂದಿದ ಅರಣ್ಯಗಳ ಪುನರುಜ್ಜೀವನ ಕೆಲಸಕ್ಕೂ ನೀಡಬೇಕು.
- ಗ್ರಾಮೀಣ ಅಭಿವೃದ್ಧಿಯ ವಿವಿಧ ಯೋಜನೆಗಳ ಅಡಿಯಲ್ಲಿ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳುವ, ಸಾಮರ್ಥ್ಯವನ್ನು ಬೆಳೆಸುವ, ಕೌಶಲ ವರ್ಧಿಸುವ ಎಲ್ಲ ಅವಕಾಶಗಳನ್ನೂ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಬಳಸಿಕೊಂಡು ಅರಣ್ಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಪ್ರೋತ್ಸಾಹಿಸಬೇಕು.
- ಅಭಿವೃದ್ಧಿ ಯೋಜನೆಗಳಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ಸಕ್ರಿಯವಾಗಿ ಸೇರಿಸಿಕೊಳ್ಳುವ ನೀತಿಯನ್ನು ಅಧಿಕೃತವಾಗಿ ಸಾಂಸ್ಥೀಕರಣಗೊಳಿಸಬೇಕು.

ಜಂಟೀ ಅರಣ್ಯ ಯೋಜನೆಯ ಅಂತಿಮ ಗುರಿ, ಸ್ಥಳೀಯ ಅರಣ್ಯ ಸಂಪನ್ಮೂಲಗಳ ಸಂಪೂರ್ಣ ನಿಯಂತ್ರಣ ಹಾಗೂ ನಿರ್ವಹಣೆಗಳ ಅಧಿಕಾರವನ್ನು ಸಮುದಾಯಕ್ಕೆ ವರ್ಗಾಯಿಸುವುದು. ಕಳೆದ ಮೂರು ದಶಕಗಳಿಂದ ಭಾರತದಲ್ಲಿನ ಅರಣ್ಯ ನಿರ್ವಹಣೆಯ ಪದ್ಧತಿಗಳನ್ನು ವಿಶೇಷ ಮುತುವರ್ಜಿಯಿಂದ ಅಧ್ಯಯನ ಮಾಡುತ್ತಿರುವ ಪರಿಣಿತರು, ಮುಂದಿನ 20-25 ವರ್ಷಗಳಲ್ಲಿ ಸ್ಥಳೀಯ ಅರಣ್ಯ ಸಂಪನ್ಮೂಲಗಳ ಮೇಲೆ ಸಮುದಾಯದ ಅಧಿಕಾರ ಗರಿಷ್ಠ ಮಟ್ಟ ಮುಟ್ಟಲಿದ್ದು, ಅರಣ್ಯ ಇಲಾಖೆ ನಿರ್ವಹಣೆಗೆ ಅಗತ್ಯವಾದ ತಾಂತ್ರಿಕ ನೆರವನ್ನು ಒದಗಿಸುವ ವಿಶೇಷ ಪರಿಣಿತಿಯ ವಿಸ್ತರಣಾ ಅಂಗವಾಗಿ ಕೆಲಸ ನಿರ್ವಹಿಸಲಿದೆಯೆಂದು ಅಭಿಪ್ರಾಯ ಪಡುತ್ತಾರೆ. ಅದು ಹೇಗೇ ಇರಲಿ, ಈ ದೀರ್ಘಾವಧಿಯಲ್ಲಿ ಅರಣ್ಯ ಇಲಾಖೆ ಹಾಗೂ ಸ್ಥಳೀಯ ಸಮುದಾಯಗಳೆರಡೂ ಕಲಿಯಬೇಕಾದ ವಿಷಯಗಳು, ಪಡೆದುಕೊಳ್ಳಬೇಕಾದ ಸಾಮರ್ಥ್ಯಗಳು ಅಗಾಧವಾಗಿವೆ ಎನ್ನುವುದರಲ್ಲಿ ಸಂಶಯ ವಿಲ್ಲ. ಈ ಅಧಿಕಾರ ಹಸ್ತಾಂತರದ ದೀರ್ಘಾವಧಿ ಯೋಜನೆಯ ಒಂದು ನಿರ್ದಿಷ್ಟ ಕಾಲಘಟ್ಟದ ಬೆಳವಣಿಗೆಗಳನ್ನು ಮಾತ್ರ ಈ ಸಂಶೋಧನೆ ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಿದೆ.

ಗ್ರಂಥಋಣ

ಗ್ರಂಥಋಣ

01. ಅಗರವಾಲ್ ಎ.(ಸಂ), ಪ್ರೈಸ್ ಆಫ್ ಫಾರೆಸ್ಟ್ಸ್, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಷನ್ಸ್, 1992.

02. ಅಗ್ನಿಹೋತ್ರಿ, ಐ. "ಚೇಂಜಿಂಗ್ ಟರ್ಮ್ಸ್ ಆಫ್ ಪೊಲಿಟಿಕಲ್ ಡಿಸ್ಕೋರ್ಸ್ : ವಿಮೆನ್ಸ್ ಮೂವ್‌ಮೆಂಟ್ ಇನ್ ಇಂಡಿಯಾ 1970-1990", ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಸಂ.22 ಜುಲೈ 1995, ಪು.1869-1878.

03. ಅರ್ನ್‌ಸ್ಟೈನ್, ಎಸ್., "ಲ್ಯಾಡರ್ ಆಫ್ ಸಿಟಿಜನ್ ಪಾರ್ಟಿಸಿಪೇಷನ್" ಜರ್ನಲ್ ಆಫ್ ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾನರ್ಸ್, ಸಂ.35, ನಂ.7, 1969, ಪು.38-49.

04. ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್‌ಟಿಟ್ಯೂಟ್, ವೆಸ್ಟರ್ನ್ ಘಾಟ್ಸ್ ಫಾರೆಸ್ಟ್ರಿ ಅಂಡ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ರಿಪೋರ್ಟ್ ಆನ್ ಪ್ರಾಜೆಕ್ಟ್ ಆಪ್ಷನ್ಸ್, ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್‌ಟಿಟ್ಯೂಟ್, 1989.

05. ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್‌ಟಿಟ್ಯೂಟ್, ರಿವೈಸ್ಡ್ ಪ್ರಾಜೆಕ್ಟ್ ರಿಪೋರ್ಟ್, ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್ಸ್‌ಟಿಟ್ಯೂಟ್, 1990.

06. ಆ್ಯಡಮ್ಸ್, ಡಬ್ಲ್ಯು. ಎಮ್., *ಗ್ರೀನ್* ಡೆವಲಪ್‌ಮೆಂಟ್, ಲಂಡನ್ ಅಂಡ್ ನ್ಯೂಯಾರ್ಕ್ : ರೌಟ್‌ಲೆಡ್ಜ್, 1990.

07. ಇಕಿನ್ಸ್ ಪಿ. ಮತ್ತು ಎಂ.ಮ್ಯಾಕ್ಸ್‌ನೀಫ್(ಸಂ), ರಿಯಲ್ ಲೈಫ್ ಇಕನಾಮಿಕ್ಸ್; ಅಂಡರ್ ಸ್ಟಾಂಡಿಂಗ್ ವೆಲ್ತ್ ಕ್ರಿಯೇಶನ್ಸ್ ಲಂಡನ್: ಜೆಡ್ ಬುಕ್ಸ್, 1992.

08. ಎಕಿನ್ಸ್.ಪಿ., ಎ ನ್ಯೂ ವರ್ಲ್ಡ್ ಆರ್ಡರ್ : ಗ್ರಾಸ್ ರೂಟ್ ಮೂವ್‌ಮೆಂಟ್ಸ್ ಫಾರ್ ಗ್ಲೋಬಲ್ ಚೇಂಜ್, ಲಂಡನ್ ಮತ್ತು ನ್ಯೂಯಾರ್ಕ್ : ರೌಟ್ ಲೆಡ್ಜ್, 1992.

09. ಐ.ಸಿ.ಐ.ಡಿ.ಸಿ. ನಾರ್ತ್-ಸೌತ್ : ಎ ಪ್ರೋಗಾಮ್ ಫಾರ್ ಸರ್ವೈವಲ್, ಲಂಡನ್ : ಪ್ಯಾನ್ ಬುಕ್ಸ್, 1980.

10. ಓಕ್ಲಿ,ಪಿ. ಪ್ರಾಜೆಕ್ಟ್ಸ್ ವಿತ್ ಪೀಪಲ್ : ದಿ ಪ್ರಾಕ್ಟೀಸ್ ಆಫ್ ಪಾರ್ಟಿಸಿಪೇಶನ್ ಇನ್ ರೂರಲ್ ಡೆವಲಪ್‌ಮೆಂಟ್, ಜನೀವಾ : ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಸೇಷನ್, 1991.

11. ಓಸ್ಟ್ರಮ್, ಇ. *ಗವರ್ನಿಂಗ್ ದಿ ಕಾಮನ್ಸ್ : ದಿ ಎವಲ್ಯೂಷನ್ ಆಫ್ ಇನ್ಸ್‌ಟಿಟ್ಯೂಷನ್ಸ್ ಫಾರ್ ಕಲೆಕ್ಟಿವ್ ಆಕ್ಷನ್*, ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರಿಸ್, 1990.

12. ಔಟ್ ರೀಚ್, *ಸೋಶಿಯಲ್ ಇಂಪಾಕ್ಟ್ ಸ್ಟಡಿ ಫಾರ್ ಡಿಪಾರ್ಟ್‌ಮೆಂಟ್ ಆಫ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಅಂಡ್ ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಆನ್ ವೆಸ್ಟರ್ನ್‌ಘಾಟ್ ಜೆಎಫ್‌ಪಿಎಮ್ ಪ್ರೋಗ್ರಾಮ್ ಇನ್ ಕರ್ನಾಟಕ*, ಬೆಂಗಳೂರು : ಔಟ್‌ರೀಚ್, 1998.

13. ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್(ಕೆ.ಎಫ್.ಡಿ), *ಪ್ರಾಜೆಕ್ಟ್ ರಿಪೋರ್ಟ್ ಆಫ್ ಇಂಟೆಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಫಾರೆಸ್ಟ್ಸ್ ಇನ್ ವೆಸ್ಟರ್ನ್ ಘಾಟ್ಸ್*, ಬೆಂಗಳೂರು : ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್, 1988

14. ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್(ಕೆ.ಎಫ್.ಡಿ.), *ವೆಸ್ಟರ್ನ್ ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ ಪ್ರಪೋಸಲ್ ಡಾಕ್ಯುಮೆಂಟ್*, ಬೆಂಗಳೂರು : ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್, 1991.

15. ಕೆರ್,ಸಿ., ಡನ್‌ಲಪ್, ಜೆ. ಇಂಡಸ್ಟ್ರಿಯಲಿಸಂ ಅಂಡ್ ಇಂಡಸ್ಟ್ರಿಯಲ್ ಮ್ಯಾನ್, ಲಂಡನ್ : ಹೈನೆಮಾನ್, 1962.

16. ಕೇಟ್‌ಯಂಗ್, *ವಿಮೆನ್ ಅಂಡ್ ಇಕನಾಮಿಕ್ ಡೆವಲಪ್‌ಮೆಂಟ್: ಲೋಕಲ್, ರೀಜನಲ್ ಅಂಡ್ ನ್ಯಾಷನಲ್ ಪ್ಲಾನಿಂಗ್ ಸ್ಟ್ರಾಟೆಜೀಸ್*, ಆಕ್ಸ್‌ಫರ್ಡ್ : ಬರ್ಗ್ ಪಬ್ಲಿಷರ್ಸ್, 1988.

17. *ಗಾರ್ಡನ್ ಕ್ರಾಫೋರ್ಡ್ , ಅಸೆಸಿಂಗ್ ಏಡ್ : ವಾಟ್ ವರ್ಕ್ಸ್, ವಾಟ್ ಡಸಂಟ್ ಅಂಡ ವೈ?* ವಾಷಿಂಗಟನ್ : ವರ್ಲ್ಡ್‌ಬ್ಯಾಂಕ್, 1998.

18. ಘಾಯ್,ಡಿ., *ಪಾರ್ಟಿಸಿಪೇಷನ್ ಇನ್ ಡೆವಲಪ್‌ಮೆಂಟ್ :ಸಮ್ ಪರ್‌ಸ್ಪೆಕ್ಟಿವ್ಸ್ ಫ್ರಮ್ ಗ್ರಾಸ್‌ರೂಟ್ ಎಕ್ಸ್‌ಪೀರಿಯನ್ಸಸ್*, ಜನೀವ : ಯುನೈಟೆಡ್ ನೇಶನ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಫಾರ್ ಸೋಶಿಯಲ್ ಡೆವಲಪ್‌ಮೆಂಟ್, 1988.

19. ಚೇಂಬರ್ಸ್ ಆರ್., *ರೂರಲ್ ಡೆವಲಪ್‌ಮೆಂಟ್ : ಪುಟಿಂಗ್ ದಿ ಲಾಸ್ಟ್ ಫಸ್ಟ್*, ಹಾರ್‌ಲೋ : ಲಾಂಗ್‌ಮನ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್, 1983.

20. ಚೇಂಬರ್ಸ್ ಆರ್, "ದಿ ಸೆಲ್ಫ್ ಡಿಸೀವಿಂಗ್ ಸ್ಟೇಟ್", ಐಡಿಎಸ್ ಬುಲೆಟಿನ್, ಸಂ.23, ನಂ.9, 1992, ಪು.31-42

21. ಚೋಪ್ರಾ, ಕೆ. ಕಡೆಕೋಡಿ, ಜಿ.ಕೆ. ಅಂಡ್ ಎಂ. ಎಸ್. ಮೂರ್ತಿ, ಪಾರ್ಟಿಸಿಪೇಟರಿ ಡೆವಲಪ್‌ಮೆಂಟ್ : ಪೀಪಲ್ ಅಂಡ್ ಕಾಮನ್ ಪ್ರಾಪರ್ಟಿ ರಿಸೋರ್ಸಸ್, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಷನ್ಸ್, 1990.

22. ಟಾಟಾ ಎನರ್ಜಿ ರಿಸರ್ಚ್ ಇನ್‌ಸ್ಟಿಟ್ಯೂಟ್, ನ್ಯಾಷನಲ್ ಸ್ಟಡೀ ಆನ್ ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಅಂಡ್ ಕಮ್ಯೂನಿಟಿ ಫಾರೆಸ್ಟ್ರಿ ಇನ್ ಇಂಡಿಯಾ, ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಎನ್‌ವೈರನ್‌ಮೆಂಟ್ ಆಂಡ್ ಫಾರೆಸ್ಟ್, 1995.

23. ಟಾರ್ಪ್‌ಮಿನ್ ಅಂಡ್ ಪೀಟರ್ಸ್(ಸಂ), ಫಾರಿನ್ ಏಡ್ ಅಂಡ್ ಡೆವಲಪ್‌ಮೆಂಟ್, ಲಂಡನ್ ಅಂಡ್ ನ್ಯೂಯಾರ್ಕ್ : ರೌಟ್‌ಲೆಡ್ಜ್, 2000.

24. ಟೋನಿ ಕಿಲ್ಲಿಕ್, "ಪ್ರಿನ್ಸಿಪಲ್ಸ್, ಏಜೆಂಟ್ಸ್ ಅಂಡ್ ಫೈಲಿಂಗ್ಸ್ ಆಫ್ ಕಂಡೀಶನಾಲಿಟಿ", ಜರ್ನಲ್ ಆಫ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್, ಸಂ.14, ನಂ.6, 1997, ಪು.320-338

25. ಟೋನಿ ಕಿಲ್ಲಿಕ್, ಏಡ್ ಅಂಡ್ ಪೊಲಿಟಿಕಲ್ ಇಕಾನಮಿ ಆಫ್ ಪಾಲಿಸಿ ಜೇಂಜ್, ಲಂಡನ್ : ರೌಟ್‌ಲೆಡ್ಜ್ ಅಂಡ್ ಓವರ್‌ಸೀಸ್ ಡೆವಲಪ್‌ಮೆಂಟ್ ಇನ್ಸಿಟಿಟ್ಯೂಟ್, 1998.

26. ಠಾಕೂರ್ ದಾಸ್,ಪಿ. ಮೆಮೊರಾಂಡಮ್ ಔಟ್ ಲೈನಿಂಗ್ ಎ ಪ್ಲಾನ್ ಆಫ್ ಇಕನಾಮಿಕ್ ಡೆವಲಪ್‌ಮೆಂಟ್ ಫಾರ್ ಇಂಡಿಯಾ ಲಂಡನ್ : ಪೆಂಗ್ವಿನ್, 1944.

27. ಡಡ್ಲೀ, ಈ, ದಿ ಕ್ರಿಟಿಕಲ್ ವಿಲೇಜರ್, ಲಂಡನ್ : ರೌಟ್‌ಲೆಡ್ಜ್, 1993.

28. ಡೇವಿಡ್ ರೀಡ್, ಸಸ್ಟೈನಬಲ್ ಡೆವಲಪ್‌ಮೆಂಟ್ : ಆನ್ ಇಂಟ್ರೋಡಕ್ಟರಿ ಗೈಡ್, ಲಂಡನ್: ಅರ್ತ್‌ಸ್ಕ್ಯಾನ್, 1995.

29. ಥಾಂಪ್ಸನ್, ಜೆ., "ಪಾರ್ಟಿಸಿಪೇಟರಿ ಆಪ್ರೋಚಸ್ ಇನ್ ಗವರ್ನ್‌ಮೆಂಟ್ ಬ್ಯೂರಾಕ್ರಸೀಸ್: ಫೆಸಿಲಿಟೇಟಿಂಗ್ ದಿ ಪ್ರೋಸೆಸ್ ಆಫ್ ಇನ್ಸಿಟಿಟ್ಯೂಷನಲ್ ಚೇಂಜ್", ವರ್ಲ್ಡ್ ಡೆವಲಪ್‌ಮೆಂಟ್ ಸಂ.15, ನಂ.9, 1993, ಪು.1521-54.

30. ನಂದಿನಿ ಸುಂದರ್ ಮತ್ತು ರೋಜರ್ ಜೆಫ್ರಿ(ಸಂ), ಎ ನ್ಯೂಮಾರಲ್ ಇಕಾನಮಿ ಫಾರ್ ಇಂಡಿಯಾಸ್ ಫಾರೆಸ್ಟ್?, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಷನ್ಸ್, 1999.

31. ನೇಗಿ, ಎಸ್., ಇಂಡಿಯನ್ ಫಾರೆಸ್ಟ್ರಿ ತ್ರೂ ದಿ ಏಜಸ್, ಡೆಲ್ಲಿ: ಇಂಡಸ್ ಪಬ್ಲಿಷಿಂಗ್ ಕಂಪನಿ, 1994.

32. ಪಠಾನ್ ಎಸ್., "ಫಾರೆಸ್ಟ್ ಪ್ರೊಟೆಕ್ಷನ್ ಕಮಿಟೀಸ್ ಇನ್ ಗುಜರಾತ್", ಸಸ್ಟೈನಬಲ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ವರ್ಕಿಂಗ್ ಪೇಪರ್ ಸೀರೀಸ್ ನಂ.7, ನ್ಯೂಡೆಲ್ಲಿ : ಫೋರ್ಡ್‌ಫೌಂಡೇಷನ್, 1990.

33. ಪಿಯರ್ಸ್, ಡಿ., ಬ್ಲೂಪ್ರಿಂಟ್ ಫಾರ್ ಎ ಗ್ರೀನ್ ಇಕಾನಮಿ, ಲಂಡನ್ : ಅರ್ತ್‌ಸ್ಕಾನ್. 1989.

34. ಪೆರೀರಾ, ಡಬ್ಲ್ಯೂ ಅಂಡ್ ಸೀಬ್ರೂಕ್,ಜೆ., ಆಸ್ಕಿಂಗ್ ದಿ ಅರ್ತ್ :ಫಾರಮ್ಸ್ ಫಾರೆಸ್ಟ್ರಿ ಅಂಡ್ ಸರ್ವೈವಲ್ ಇನ್ ಇಂಡಿಯಾ, ಲಂಡನ್ : ಅರ್ತಸ್ಕಾನ್, 1990.

35. ಫೀನಿ, ಪಿ., ದಿ ವರ್ಲ್ಡ್ ಬ್ಯಾಂಕ್ ಫಾರೆಸ್ಟ್ರಿ ಪಾಲಿಸಿ : ಆ್ಯನ್ ಆಕ್ಸ್‌ಫಾಮ್ ರೆಸ್ಪಾನ್ಸ್, ಆಕ್ಸ್‌ಫರ್ಡ್: ಆಕ್ಸ್‌ಫಾಮ್ ಡೆವಲಪ್‌ಮೆಂಟ್ ಪಾಲಿಸಿ ಯೂನಿಟ್, 1991.

36. ಫೆವಾರ್ಡ್ ಕೆ., ರೆಸ್ಪಾನ್ಸ್ ಟು ವೆಸ್ಟರ್ನ್ ಘಾಟ್ಸ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್, ಬೆಂಗಳೂರು : ಫೆಡರೇಶನ್ ಆಫ್ ವಾಲಿಂಟರಿ ಆರ್ಗನೈಸೇಸನ್ಸ್ ಫಾರ್ ರೂರಲ್ ಡೆವಲಪ್‌ಮೆಂಟ್ ಆಫ್ ಕರ್ನಾಟಕ(ಫೆವಾರ್ಡ್-ಕೆ), 1990.

37. ಫ್ರಾಂಕ್, ಎ.ಜಿ., ಕ್ರೈಸಿಸ್ ಇನ್ ವರ್ಲ್ಡ್ ಇಕಾನಮಿ, ಲಂಡನ್ : ಹೈನೆಮಾನ್ ಎಜುಕೇಷನಲ್, 1980.

38. ಫ್ರಾಂಕ್, ಎ.ಜಿ., ಲ್ಯಾಟಿನ್ ಅಮೇರಿಕ : ಅಂಡರ್ ಡೆವಲಪ್‌ಮೆಂಟ್ ಆರ್ ರಿವೆಲ್ಯೂಷನ್? ಲಂಡನ್: ಜೆಡ್‌ಬುಕ್ಸ್, 1969.

39. ಬಂದೋಪಾಧ್ಯಾಯ, ಜೆ. ಮತ್ತು ವಂದನಾಶಿವ, "ದಿ ಪೊಲಿಟಿಕಲ್ ಇಕಾನಮಿ ಆಫ್ ಟೆಕ್ನೊಲಾಜಿಕಲ್ ಪೋಲರೈಸೇಶನ್" ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಸಂ.17, ನಂ: 45, 6ನೇ ನವೆಂಬರ್ 1982.

40. ಬಕ್ಸಮೂಸರಮಾಲಾ ಅಂಡ್ ಹೇಮಾ ಸುಬ್ರಮಣಿಯನ್, ಅಸಿಸ್ಟೆನ್ಸ್ ಫಾರ್ ವಿಮೆನ್ಸ್ ಡೆವಲಪ ಮೆಂಟ್ ಫಾರ್ ನ್ಯಾಷನಲ್ ಏಜನ್ಸೀಸ್, ಬಾಂಬೆ : ಪಾಪ್ಯುಲರ್ ಪಬ್ಲಿಷರ್ಸ್, 1992.

41. ಬ್ರೂಕ್‌ಫೀಲ್ಡ್ ಎಚ್, ಇಂಟರ್ ಡಿಪೆಂಡೆಂಟ್ ಡೆವಲಪ್‌ಮೆಂಟ್, ಲಂಡನ್: ಮೆಥ್ಯೂನ್ ಅಂಡ್ ಕಂಪನಿ, 1975.

42. ಬರ್ನೆಲ್ ಪೀಟರ್, ಫಾರಿನ್ ಏಡ್ ಇನ್ ಎ ಚೇಂಜಿಂಗ್ ವರ್ಲ್ಡ್, ಫಿಲಿಡೆಲ್ಫಿಯಾ : ಓಪನ್ ಯೂನಿವರ್ಸಿಟಿ ಪ್ರೆಸ್, 1997.

43. ಬಹುಗುಣ, ವಿ.ಕೆ., "ಡೀಸೆಂಟ್ರಲೈಸ್ಡ್ ಪ್ಲಾನಿಂಗ್ ಇನ್ ಫಾರೆಸ್ಟ್ರಿ ಸೆಕ್ಟರ್ ಫಾರ್ ಪೀಪಲ್ಸ್ ಪಾರ್ಟಿಸಿಪೇಷನ್" ಪೇಪರ್ ಪ್ರಸೆಂಟೆಡ್ ಟು ದಿ ನ್ಯಾಷನಲ್ ಸೆಮಿನಾರ್ ಆನ್ ಫಾರೆಸ್ಟ್ರಿ ಸೆಕ್ಟರ್ ಅಡ್ಮಿನಿಸ್ಟ್ರೇಶನ್ ಡೆವಲಪಮೆಂಟ್, ನ್ಯೂಡೆಲ್ಲಿ: 1992

44. ಬ್ಯಾಂಬರ್ಗರ್ ಎಂ., "ದಿ ರೋಲ್ ಆಫ್ ಕಮ್ಯುನಿಟಿ ಪಾರ್ಟಿಸಿಪೇಷನ್ ಇನ್ ಡೆವಲಪ್‌ಮೆಂಟ್ ಪ್ಲಾನಿಂಗ್ ಅಂಡ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್", ಸೆಮಿನಾರ್ *ರಿಪೋರ್ಟ್ 13,* ವಾಷಿಂಗ್‌ಟನ್: ಇಕನಾಮಿಕ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್‌ಬ್ಯಾಂಕ್, 1988

45. ಬ್ರಾಂಟ್, ಡಬ್ಲ್ಯು, *ಕಾಮನ್ ಕ್ರೈಸಿಸ್ ನಾರ್ತ್-ಸೌತ್ : ಕೋ ಆಪರೇಶನ್ ಫಾರ್ ವರ್ಲ್ಡ್ ರಿಕವರಿ,* ಲಂಡನ್ : ಪ್ಯಾನ್, 1983.

46. ಬೆಲಾಂಡ್, ಜೆ. ಎಂ. ಆಂಡ್ ಪ್ಲೆಟೋವ್ ಜೆ.ಪಿ., *ಹಾಲ್ಟಿಂಗ್ ಡಿಗ್ರಡೇಶನ್ ಆಫ್ ನ್ಯಾಷನಲ್ ರಿಸೋರ್ಸಸ್ : ಈಸ್‌ದೇರ್ ಎ ರೋಲ್ ಫಾರ್ ರೂರಲ್ ಕಮ್ಯೂನಿಟೀಸ್,* ಆಕ್ಸ್‌ಫರ್ಡ್ : ಕ್ಲಾರೆಂಡಾನ್ ಪ್ರೆಸ್, 1996.

47. ಬ್ರೋಮ್ಲಿ ಡಬ್ಲ್ಯುಯು ಡಿ.(ಸಂ),*ಮೇಕಿಂಗ್ ದಿ ಕಾಮನ್ಸ್ ವರ್ಕ್ : ಥಿಯರಿ ಪ್ರಾಕ್ಟೀಸ್ ಅಂಡ್ ಪಾಲಿಸಿ,* ಸಾನ್‌ಫ್ರಾನ್‌ಸಿಸ್ಕೊ : ಐಸಿಎಸ್ ಪ್ರೆಸ್, 1992.

48. ಭಾರತ ಸರ್ಕಾರ , *ರಿಪೋರ್ಟ್ ಆಫ್‌ದಿ ನ್ಯಾಷನಲ್ ಕಮೀಷನ್ ಆನ್ ಅಗ್ರಿಕಲ್ಚರ್ : ಪಾರ್ಟ್ XI,* ಫಾರೆಸ್ಟ್ರಿ, ನ್ಯೂಡೆಲ್ಲಿ: ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರ್ ಅಂಡ್ ಕೋ ಆಪರೇಷನ್, 1976.

49. ಭಾರತ ಸರ್ಕಾರ, *ಡೆವಲಪ್‌ಮೆಂಟ್ ಆಫ್ ಫಾರೆಸ್ಟ್ರಿ ಅಂಡ್ ಫಾರೆಸ್ಟ್ ಪ್ರಾಡಕ್ಟ್ಸ್ :* ಕಂಟ್ರಿಪ್ರೋಫೈಲ್ ಇಂಡಿಯಾ, ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಅಗ್ರಿಕಲ್ಚರ್, ನ್ಯೂಡೆಲ್ಲಿ,1981.

50. ಭಾರತ ಸರ್ಕಾರ, *ನ್ಯಾಷನಲ್ ಫಾರೆಸ್ಟ್‌ಪಾಲಿಸಿ, 1988,* ನ್ಯೂಡೆಲ್ಲಿ : ಮಿನಿಸ್ಟ್ರಿ ಆಫ್ ಎನ್‌ವೈರನ್‌ಮೆಂಟ್ ಅಂಡ್ ಫಾರೆಸ್ಟ್ಸ್, 1988

51. ಭಾರತ ಸರ್ಕಾರ, *ಇನ್‌ವಾಲ್ವ್‌ಮೆಂಟ್ ಆಫ್ ವಿಲೇಜ್ ಕಮ್ಯೂನಿಟೀಸ್ ಅಂಡ್ ವಾಲಂಟರಿ ಏಜೆನ್ಸೀಸ್ ಫಾರ್ ರೀಜನರೇಶನ್ ಆಫ್ ಡಿಗ್ರೇಡೆಡ್ ಫಾರೆಸ್ಟ್ ಲ್ಯಾಂಡ್ಸ್,* ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಎನ್‌ವೈರನ್‌ಮೆಂಟ್ ಅಂಡ್ ಫಾರೆಸ್ಟ್, 1990.

52. ಮಧುಸರೀನ್, *ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್: ದಿ ಹರ್‍ಯಾನ ಎಕ್ಸ್‌ಪೀರಿಯನ್ಸ್,* ಅಹಮದಾಬಾದ್ : ಸೆಂಟರ್ ಫಾರ್ ಎನ್‌ವೈರನ್‌ಮೆಂಟ್ ಎಜುಕೇಷನ್, 1996.

53. ಮಾಂಕರ್ ಓಲ್ಸನ್, ದಿ ಲಾಜಿಕ್ ಆಫ್ ಕಲೆಕ್ಟಿವ್ ಆ್ಯಕ್ಷನ್, ಹಾರ್ವಡ್, ಕೇಂಬ್ರಿಡ್ಜ್ : ಯೂನಿವರ್ಸಿಟಿ ಪ್ರೆಸ್, 1965.

54. ಮಾರ್ಕ್ ಪೋಫೆನ್ ಬರ್ಗರ್, ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಇನ್ ವೆಸ್ಟ್ ಬೆಂಗಾಲ್: ದಿ ಪ್ರೋಸೆಸ್ ಆಫ್ ಏಜೆನ್ಸಿ ಚೇಂಜ್ : ವರ್ಕಿಂಗ್ ಪೇಪರ್ ನಂ.3 ನ್ಯೂಡೆಲ್ಲಿ: ಪೋರ್ಡ್ ಫೌಂಡೇಷನ್, 1996.

55. ಮಾರ್ಕಪೋಫೆನ್ ಬರ್ಗರ್(ಸಂ), ಕೀಪರ್ಸ್ ಆಫ್ ದಿ ಫಾರೆಸ್ಟ್, ವೆಸ್ಟ್ ಹಾರ್ಟ್‌ಪೋರ್ಡ್ : ಕುಮೇರಿಯನ್ ಪ್ರೆಸ್, 1990.

56. ಮಾರ್ಕ್‌ಫೋಫೆನ್ ಬರ್ಗರ್ ಆಂಡ್ ಬೆಟ್ಸಿ ಮ್ಯಾಕ್‌ಗೀನ್(ಸಂ), ವಿಲೇಜ್ ವಾಯ್ಸಸ್, ಫಾರೆಸ್ಟ್ ಚಾಯ್ಸಸ್, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1990

57. ಮಾಧವ ಗಾಡ್ಗೀಳ್ ಮತ್ತು ರಾಮಚಂದ್ರ ಗುಹಾ, ದಿ ಫೀಶೂರ್ಡ್ ಲ್ಯಾಂಡ್ : ಆ್ಯನ್ ಎಕಲಾಜಿಕಲ್ ಹಿಸ್ಟರಿ ಆಫ್ ಇಂಡಿಯಾ, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1992.

58. ಮೂರ್, ಡಬ್ಲ್ಯೂ., ದಿ ಇಂಪಾಕ್ಟ್ ಆಫ್ ಇಂಡಸ್ಟ್ರಿ, ನ್ಯೂಜರ್ಸಿ: ಪ್ರಿಂಟೈಸ್ -ಹಾಲ್, 1965.

59. ಯುಎನ್‌ಡಿಪಿ, ಯುಎನ್‌ಡಿಪಿ ಗೈಡ್ ಬುಕ್ ಆನ್ ಪಾರ್ಟಿಸಿಪೇಷನ್, ನೈರೋಬಿ: ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್, 1992

60. ಯುನೈಟಡ್‌ನೇಷನ್ಸ್ ಕ್ಯಾಪಿಟಲ್ ಡೆವಲಪಮೆಂಟ್ ಫಂಡ್, ನ್ಯೂಯಾರ್ಕ್ : 1993

61. ರವೀಂದ್ರನಾಥ, ಎನ್.ಹೆಚ್. ಮುರುಳಿ ಕೆ. ಎಸ್.,ಮಲ್ಹೋತ್ರ ಕೆ.ಸಿ.(ಸಂ), ಜಾಯಿಂಟ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಅಂಡ್ ಕಮ್ಯುನಿಟಿ ಫಾರೆಸ್ಟ್ರಿ ಇನ್ ಇಂಡಿಯಾ, ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಅಂಡ್ ಐಬಿಎಚ್, 2000

62. ರಾಜು ಜಿ.,(ಸಂ) ಪೀಪಲ್ಸ್ ಇನ್ಸ್‌ಟಿಟ್ಯೂಶನ್ಸ್ ಫಾರ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಅಹಮದಾಬಾದ್ : ಸೆಂಟರ್ ಫಾರ್ ಎನ್‌ವೈರನ್‌ಮೆಂಟ್ ಎಜುಕೇಷನ್, 1994.

63. ರಾಜು ಜಿ., ವಗೇಲಾ, ಆರ್ ಅಂಡ್ ರಾಜು ಎಮ್. ಎಸ್.. ಡೆವಲಪ್‌ಮೆಂಟ್ ಆಫ್ ಪೀಪಲ್ಸ್ ಇನ್ಸಿಟಿಟ್ಯೂಷನ್ ಫಾರ್ ಮ್ಯಾನೇಜ್‌ಮೆಂಟ್ ಆಫ್ ಫಾರೆಸ್ಟ್, ಅಹಮದಾಬಾದ್ : ವಿಕ್‌ಸ್ಯಾಟ್, 1994.

64. ರಾಮಲಿಂಗೇಗೌಡ, ಎಸ್. ಕೆ., "ದಿ ಸ್ಟೇಟಸ್ ಆಫ್ ಜೆ ಎಫ್ ಪಿ ಎಮ್ ಪ್ರೋಗ್ರಾಮ್ ಇನ್ ಕರ್ನಾಟಕ ಅಂಡ್ ರೋಲ್ ಆಫ್ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಇನ್ ಸಸ್ಟೈನಬಲ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಬೈ ಕಮ್ಯೂನಿಟೀಸ್ ಅಂಡ್ ಸ್ಟೇಕ್ ಹೋಲ್ಡರ್ಸ್", ಸ್ಟೇಟಸ್ ಪೇಪರ್ ಆನ್ ಜೆಎಫ್‌ಪಿಎಮ್ ಇನ್ ಕರ್ನಾಟಕ, ಬೆಂಗಳೂರು: ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್, 2002.

65. ರ್‍ಯೂ, ಎ. ದಿ ಸೋಷಿಯಲ್ ಅಂಡ್ ಇನ್‌ಸ್ಟಿಟ್ಯೂಷನಲ್ ಫ್ರೇಂ ವರ್ಕ್ ಇನ್ ವೆಸ್ಟರ್ನ್ ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್, ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಫಾರೆಸ್ಟ್ರಿ ಇನ್‌ಸ್ಟಿಟ್ಯೂಟ್, 1990.

66. ವಂದನಾಶಿವ, ಸ್ಟೇಯಿಂಗ್ ಅಲೈವ್ : ವಿಮೆನ್, ಇಕಾಲಜಿ ಅಂಡ್ ಡೆವಲಪ್‌ಮೆಂಟ್, ಲಂಡನ್ : ಜೆಡ್ ಬುಕ್ಸ್, 1988.

67. ವಂದನಾ ಶಿವ, ಇಕಾಲಜಿ ಅಂಡ್ ದಿ ಪಾಲಿಟಿಕ್ಸ್ ಆಫ್ ಸರ್ವೈವಲ್, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, 1991.

68. ವಾಲ್ಟ್ ರೋಸ್ಟೋವ್, ದಿ ಸ್ಟೇಜಸ್ ಆಫ್ ಇಕನಾಮಿಕ್ ಗ್ರೋಥ್ : ಎ ನಾನ್ ಕಮ್ಯುನಿಸ್ಟ್ ಮ್ಯಾನಿಫೆಸ್ಟೊ, ಲಂಡನ್: ಕೇಂಬ್ರಿಡ್ಜ್, 1961.

69. ವಿಲ್‌ಫ್ರೆಡ್ ಥಾಲ್ ವಿಟ್ಸ್, ಅಡ್ರೆಸ್ ಟು ಡೆವಲಪ್‌ಮೆಂಟ್ ಅಸಿಸ್ಟೆನ್ಸ್ ಕಮಿಟಿ ಆಫ್ ದಿ ಆರ್ಗನೈಸೇಷನ್ ಫಾರ್ ಇಕನಾಮಿಕ್ ಕೋ ಆಪರೇಷನ್ ಅಂಡ್ ಡೆವಲಪ್‌ಮೆಂಟ್, ಪ್ಯಾರಿಸ್: ವರ್ಲ್ಡ್‌ಬ್ಯಾಂಕ್, 1990.

70. ವೇಡ್ ಆರ್., "ಹೌಟು ಮೇಕ್ ಸ್ಟ್ರೀಟ್ ಲೆವೆಲ್ ಬ್ಯೂರಾಕ್ರಸೀಸ್ ವರ್ಕ್‌ಬೆಟರ್" ಐಡಿಸ್‌ಬುಲೆಟಿನ್ ಸಂ.23, ನಂ.9, 1992, ಪು.51-54

71. ವೇಡ್, ಆರ್., ವಿಲೇಜ್ ರಿಪಬ್ಲಿಕ್ಸ್, ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, 1988.

72. ವೈಟ್, ಎಸ್., ನಾಯರ್, ಕೆ. ಅಂಡ್ ಅಸ್ಕಾಫ್ಟ್(ಸಂ), ಪಾರ್ಟಿಸಿಪೇಟರಿ ಕಮ್ಯೂನಿಕೇಶನ್ : ವರ್ಕಿಂಗ್ ಫಾರ್ ಚೇಂಜ್ ಅಂಡ್ ಡೆವಲಪ್‌ಮೆಂಟ್ ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, 1994.

74. ಶಿರ್ಲೆ ಎ. ವೈಟ್, ದಿ ಆರ್ಟ್ ಆಫ್ ಫೆಸಿಲಿಟೇಟಿಂಗ್ ಪಾರ್ಟಿಸಿಪೇಶನ್ ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, 1999.

75. ಶೀಲ್ಸ್, ಡಿ., ರೆಡ್‌ಹೆಡ್, ಜೆ ಮತ್ತು ಶೆಪರ್ಡ್, ಜಿ., ಇವಾಲ್ಯುಯೇಶನ್ ರಿಪೋರ್ಟ್ : ದಿ ಕರ್ನಾಟಕ ಸೋಶಿಯಲ್ ಫಾರೆಸ್ಟ್ರಿ ಪ್ರಾಜೆಕ್ಟ್, ಲಂಡನ್ : ಓವರಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಶನ್, 1992.

76. ಶ್ಯಾನಿನ್ ಟಿ.(ಸಂ),"ಕ್ಯಾಪಿಟಲಿಸಮ್ ಅಂಡ್ ಪೆಸೆಂಟ್ ಪ್ರೊಡಕ್ಷನ್ : ದಿ ಗ್ರೀನ್ ರೆವಲ್ಯೂಷನ್ ಇನ್ ಇಂಡಿಯಾ" ಪೆಸೆಂಟ್ಸ್ ಅಂಡ್ ಪೆಸೆಂಟ್ ಸೊಸೈಟೀಸ್ , ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1987.

77. ಶ್ಯೂಮಾಕರ್, ಇ. ಎಫ್., ಸ್ಮಾಲ್ ಈಸ್ ಬ್ಯೂಟಿಫುಲ್ : ಎ ಸ್ಟಡೀ ಆಫ್ ಇಕನಾಮಿಕ್ಸ್ ಆ್ಯಸ್ ಇಫ್ ಪೀಪಲ್ ಮ್ಯಾಟರ್ಡ್, ಲಂಡನ್ : ಸ್ಫಿಯರ್ ಬುಕ್ಸ್, 1973.

78. ಸಕ್ಸೇನಾ, ಎನ್.ಸಿ., ದಿ ಸಾಗಾ ಆಫ್ ಪಾರ್ಟಿಸಿಪೇಟರಿ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಇನ್ ಇಂಡಿಯಾ, ಇಂಡೋನೇಷ್ಯಾ: ಸಿ.ಐ.ಎಫ್‌ಓಆರ್ ಸ್ಪೆಶಲ್ ಪಬ್ಲಿಕೇಷನ್, 1997.

79. ಸಾಹೂ, ಎಚ್. ಮತ್ತು ಮಿಶ್ರ,ಪಿ., "ಕಾಮನ್ ಪ್ರಾಪರ್ಟಿ ರಿಸೋರ್ಸ್‌ಸ್: ಎ. ಕೇಸ್ ಸ್ಟಡಿ ಆನ್ ಕೋಸ್ಟಲ್ ಒರಿಸ್ಸಾ", ಎನ್‌ವೈರನ್‌ಮೆಂಟಲ್ ಕಾನ್ಸರ್‌ವೇಶನ್, ಸಂ.21, ನಂ.1, ಪು.17-28

80. ಸ್ಯಾಶ್, ಡಬ್ಲ್ಯು, "ಡೆಪಲಪ್‌ಮೆಂಟ್ ಎ ಗೈಡ್ ಟು ರೂಯಿನ್ಸ್", ನ್ಯೂ ಇಂಟರ್‌ನ್ಯಾಷನಲಿಸ್ಟ್, ಸಂ.14, ನಂ.6, ಜೂನ್ 1992, ಪು.62-78.

81. ಸ್ಯಾಶ್(ಸಂ), ಡೆವಲಪ್‌ಮೆಂಟ್ ಡಿಕ್ಷನರಿ, ಡಬ್ಲ್ಯು. ಲಂಡನ್ : ಅಟ್ಲಾಂಟಿಕ್, ಹೈಲ್ಯಾಂಡ್ಸ್. 1992

82. ಸ್ಯಾಶ್, ಡಬ್ಲ್ಯು, ಎ ಗೈಡ್ ಟು ನಾಲೆಡ್ಜ್ ಆ್ಯಸ್ ಪವರ್, ಲಂಡನ್: ಜೆಡ್ ಬುಕ್ಸ್, 1992.

83. ಸಿಂಗ್, ಆರ್. ಪಿ., "ಪೀಪಲ್ಸ್ ಪಾರ್ಟಿಸಿಪೇಶನ್ ಇನ್ ಫಾರೆಸ್ಟ್ ಮ್ಯಾನೇಜ್‌ಮೆಂಟ್", ವೇಸ್ಟ್‌ಲ್ಯಾಂಡ್ ನ್ಯೂಸ್, ಸಂ.8 ನಂ. 4 ಮೇ - ಜುಲೈ, 1993, ಪು.72-84.

84. ಸಿಂಗ್ ಆರ್.ವಿ., "ಆಡ್ಮಿನಿಸ್ಟ್ರೇಟಿವ್ ಚೇಂಜಸ್ ಟು ಮೀಟ್ ಎಮರ್ಜಿಂಗ್ ರಿಕ್ವೈರ್‌ಮೆಂಟ್ಸ್ ಇನ್ ಇಂಡಿಯನ್ ಫಾರೆಸ್ಟ್ರಿ ಸೆಕ್ಟರ್", ಪೇಪರ್ ಪ್ರಸೆಂಟೆಡ್ ಟುದಿ ನ್ಯಾಷನಲ್ ಸೆಮಿನಾರ್ ಆನ್ ಫಾರೆಸ್ಟ್ರಿ ಸೆಕ್ಟರ್ ಅಡ್ಮಿನಿಸ್ಟ್ರೇಶನ್ ಡೆವಲಪ್‌ಮೆಂಟ್, ನ್ಯೂಡೆಲ್ಲಿ: 1992.

85. ಸಿರಿಯಾಸಿ-ವಾನ್ಸ್ರಪ್ ಅಂಡ್ ಬಿಷಪ್ ಆರ್.ಸಿ., "ಕಾಮನ್ ಪ್ರಾಪರ್ಟಿ ಆಸ್ ಎ ಕಾನ್ಸೆಪ್ಟ್ ಇನ್ ನ್ಯಾಚುರಲ್ ರಿಸೋರ್ಸ್‌ಪಾಲಿಸಿ", ನ್ಯಾಚುರಲ್ ರಿಸೋರ್ಸಸ್ ಜರ್ನಲ್, ಸಂ.15, ನಂ.6, 1973 ಪು.713-727

86. ಸೀಬ್ರೆಟ್ ಪಿ., "ಮ್ಯಾನೇಜಿಂಗ್ ಲೋಕಲ್ ಕಾಮನ್ಸ್ : ಥಿಯರಿಟಿಕಲ್ ಇಷ್ಯೂಸ್ ಇನ್ ಇನ್‌ಸೆಂಟಿವ್ ಡಿಸೈನ್", *ಜರ್ನಲ್ ಆಫ್ ಇಕನಾಮಿಕ್ ಪರ್ಸ್ಪೆಕ್ಟಿವ್ಸ್*, ಸಂ.7, ನಂ.4, 1993, ಪು.64-81.

87. ಸ್ಟೀಫೆನ್, ಎಫ್., "ವಿಮೆನ್ಸ್ ಎಂಪವರ್‌ಮೆಂಟ್ : ಎ ಪ್ರೋಸೆಸ್ ಆಫ್ ರೀಸ್ಟ್ರಕ್ಚರಿಂಗ್ ಪವರ್ ರಿಲೇಶನ್ಸ್", *ಸರ್ಚ್‌ಬುಲೆಟಿನ್* ಸಂ.12, ನಂ 3, ಜುಲೈ-ಸೆಪ್ಟೆಂಬರ್, 1997, ಪು.4-11.

88. ಸೆಂಟರ್ ಫಾರ್ ಇಕಲಾಜಿಕಲ್ ಸೈನ್ಸಸ್, *ಮಾನೋಗ್ರಾಫ್ ಆನ್ ಪೀಪಲ್ಸ್ ಪಾರ್ಟಿಸಿಪೇಶನ್ ಇನ್ ದಿ ಮ್ಯಾನೇಜ್‌ಮೆಂಟ್ ಆಫ್ ನ್ಯಾಚುರಲ್ ರಿಸೋರ್ಸಸ್*, ಬೆಂಗಳೂರು : ಸೆಂಟರ್ ಫಾರ್ ಇಕಲಾಜಿಲ್ ಸೈನ್ಸಸ್, 1989.

89. ಸೇಥಿ, ಆರ್., "ದಿ ಎವಲ್ಯೂಷನ್ ಆಫ್ ಸೋಶಿಯಲ್ ನಾರ್ಮ್ಸ್ ಇನ್ ಕಾಮನ್ ಪ್ರಾಪರ್ಟಿ ರಿಸೋರ್ಸಸ್", ಅಮೆರಿಕನ್ ಇಕನಾಮಿಕ್ ರಿವ್ಯೂ, ಸಂ: 86, ನಂ.9, 1996, ಪು.24-39.

90. ಸ್ಟೆಬಿಂಗ್, ಇ.ಪಿ., ದಿ ಫಾರೆಸ್ಟ್ಸ್ ಆಫ್ ಇಂಡಿಯಾ, ಲಂಡನ್: ಜಾನ್ ಲೇನ್, 1926.

91. ಸೋಷಿಯಲ್ ಡೆವಲ್‌ಪ್‌ಮೆಂಟ್ ಡಿಪಾರ್ಟ್‌ಮೆಂಟ್, *ಗೈಡ್‌ಟು ಏಡ್ ಪ್ರೊಸೀಜರ್ಸ್*, ಲಂಡನ್: ಓವರಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಶನ್, 1990.

92. ಹಾಪ್‌ಕಿನ್ಸ್,ಟಿ. ಮತ್ತು ವ್ಯಾಲರ್‌ಸ್ಟೀನ್, *ದಿ ಏಜ್ ಆಫ್ ಟ್ರಾನ್ಸಿಷನ್ :ಟ್ರಾಜೆಕ್ಟರಿ ಆಫ್ ವರ್ಲ್ಡ್ ಸಿಸ್ಟಮ್ಸ್ 1945-2025*, ಲಂಡನ್ : ಜೆಡ್ ಬುಕ್ಸ್, 1996.

93. ಹಾಡ್ಜಿಮೈಕೇಲ್., *ಸಬ್-ಸಹರಾನ್ ಆಫ್ರಿಕಾ : ಗ್ರೋತ್, ಸೇವಿಂಗ್ಸ್ ಅಂಡ್ ಇನ್‌ವೆಸ್ಟ್ ಮೆಂಟ್* ವಾಷಿಂಗ್‌ಟನ್ ಡಿಸಿ : ಇಂಟರ್ ನ್ಯಾಷನಲ್ ಮಾನಿಟರಿಫಂಡ್, 1995.